ಚೆನ್ನ ಶಿಕ್ಷಣಸಿರಿ

(ಪಂ. ಚೆನ್ನಪ್ಪ ಎರೇಸೀಮೆ ಗೌರವ ಗ್ರಂಥ)

ಟಿ. ಆರ್. ಮಹಾದೇವಯ್ಯ
ಸಂಪಾದಕ

ಪಂ. ಚೆನ್ನಪ್ಪ ಎರೇಸೀಮೆ ಅಭಿನಂದನ ಸಮಿತಿ
ಬೆಂಗಳೂರು-೫೬೦ ೦೧೦

ಚೆನ್ನ ಶಿಕ್ಷಣಸಿರಿ

(ಪಂ. ಚೆನ್ನಪ್ಪ ಎರೇಸೀಮೆ ಗೌರವ ಗ್ರಂಥ)

ಟಿ. ಆರ್. ಮಹಾದೇವಯ್ಯ
ಸಂಪಾದಕ

ಪಂ. ಚೆನ್ನಪ್ಪ ಎರೇಸೀಮೆ ಅಭಿನಂದನ ಸಮಿತಿ
ಬೆಂಗಳೂರು-560 010

Channa Sikshana Siri : Felicitation Volume dedicated to Sri Channappa Yaresime, published by Channappa Yaresime Abhinandana Samithi, Siddaganga Choultry, 14, I Main, 8th Cross, Manjunathanagar, Bangalore-10. Pages: xiv + 276; 1999.

Price: **Rs. 70/-**

ಮುದ್ರಣ:
ಅನುಭವ ಪ್ರಿಂಟರ್ಸ್
1213, 5ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂರವಾಣಿ:3401577/2204868

ಚೆನ್ನಪ್ಪ ಎರೇಸೀಮೆ ಅಭಿನಂದನ ಸಮಿತಿ

ಅಧ್ಯಕ್ಷರು

ನ್ಯಾಯಮೂರ್ತಿ ಶ್ರೀ ಡಿ.ಎಂ. ಚಂದ್ರಶೇಖರ್

ಉಪಾಧ್ಯಕ್ಷರು

ಶ್ರೀ ಬಿ.ಎಸ್. ಮುದ್ದಪ್ಪ

ಶ್ರೀ ಬಿ.ಎಸ್. ಶಿವಣ್ಣ

ಕೋಶಾಧ್ಯಕ್ಷರು

ಶ್ರೀ ಎಂ. ಶ್ರೀಕಂಠ ರುದ್ರಾರಾಧ್ಯ

ಪ್ರಧಾನಕಾರ್ಯದರ್ಶಿ

ಶ್ರೀ ಟಿ.ಆರ್. ಮಹಾದೇವಯ್ಯ

'ಚೆನ್ನ ಶಿಕ್ಷಣ ಸಿರಿ' ಅಭಿನಂದನ ಗ್ರಂಥ ಸಂಪಾದಕ ಸಮಿತಿ

ಅಧ್ಯಕ್ಷರು

ಪ್ರೊ. ಎಸ್.ಆರ್. ರೋಹಿಡೇಕರ್

ಸದಸ್ಯರು

ಪ್ರೊ. ಕೆ.ಎಚ್. ಉದ್ದಂಡಪ್ಪ

ಡಾ. ಪಿ.ಎಸ್. ಶಿವಾನಂದ

ಡಾ. ಪಿ. ಶಿವಪ್ಪ

ಪ್ರೊ. ಎನ್.ಆರ್. ಹಿರೇಮಠ

ಡಾ. ಎಸ್. ಶ್ರೀಕಂಠಸ್ವಾಮಿ

ಸಂಚಾಲಕರು

ಶ್ರೀ ಟಿ.ಆರ್. ಮಹಾದೇವಯ್ಯ

ಪ್ರಕಾಶಕರು

ಪಂ. ಚೆನ್ನಪ್ಪ ಎರೇಸೀಮೆ ಅಭಿನಂದನ ಸಮಿತಿ

ಶ್ರೀಸಿದ್ಧಗಂಗಾ ಸಾಮೂಹಿಕ ಭವನ, 14, 1ನೇ ಮುಖ್ಯರಸ್ತೆ

8ನೇ ಅಡ್ಡರಸ್ತೆ, ಮಂಜುನಾಥನಗರ, ಬೆಂಗಳೂರು-10.

ಅಧ್ಯಕ್ಷರ ಮಾತು

ಪಂ. ಚೆನ್ನಪ್ಪ ಎರೇಸೀಮೆಯವರು ನಮ್ಮ ನಾಡಿನ ಘನ ವಿದ್ವಾಂಸರು, ಮೇಲಾಗಿ ಆದರ್ಶ ಶಿಕ್ಷಕರು; ಬಹಳ ಕಷ್ಟಪಟ್ಟು ಓದಿ, ದುಡಿಯುತ್ತಲೇ ಕಲಿಯುವ ಧೈರ್ಯಮಾಡಿ ಮುಂದೆ ಬಂದವರು. ಶಿಕ್ಷಕವೃತ್ತಿಯನ್ನು ಉಪಜೀವನಮಾರ್ಗವೆಂದು ಭಾವಿಸದೆ ಶ್ರದ್ಧಾಸಕ್ತಿಯಿಂದ ಶಿಕ್ಷಣತತ್ವಗಳನ್ವಯ ಬೋಧನೆ ಮಾಡಿದವರು; ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡಿ ಪುಣ್ಯಶಾಲಿಗಳಾದವರು. ಜೊತೆಗೆ ನಾಡುನುಡಿಯ ಸೇವೆ ಮಾಡಿದವರು. ಅವರನ್ನು ವಿದ್ಯಾ ಇಲಾಖೆ 'ಆದರ್ಶ ಶಿಕ್ಷಕ'ರೆಂದು ಗೌರವಿಸಿದ್ದು ಹೆಮ್ಮೆಯ ವಿಷಯ.

ಇಂಥವರಿಗೆ ಸಲ್ಲಿಸುವ ಅಭಿನಂದನ ಗ್ರಂಥವು ಶಿಕ್ಷಣತತ್ವಗಳಿಗೆ ಸಂಬಂಧಿಸಿರಬೇಕೆಂದು ನಿರ್ಧರಿಸಿದ ನಾವು ಶಿಕ್ಷಣತಜ್ಞರಾದ ಪ್ರೊ. ಎಸ್.ಆರ್. ರೋಹಿಡೇಕರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಂಪಾದಕ ಮಂಡಳಿಯನ್ನು ರಚಿಸಿದೆವು. ಅದರಲ್ಲಿ ಆ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿದ ಪ್ರಾಧ್ಯಾಪಕರು ಇದ್ದು ಗ್ರಂಥದ ರೂಪುರೇಷೆಯನ್ನು ನಿರ್ಧರಿಸಿದರು. ಅದರ ಸಂಪಾದಕರಾದ ಶ್ರೀ ಟಿ.ಆರ್. ಮಹಾದೇವಯ್ಯನವರು ತಜ್ಞ ಲೇಖಕರಿಗೆ ಪತ್ರಬರೆದು ಲೇಖನಗಳನ್ನು ಬರೆಸಿ ಇಂಥದೊಂದು ಮೌಲಿಕಕೃತಿ ರೂಪುಗೊಳ್ಳಲು ಕಾರಣರಾಗಿದ್ದಾರೆ. ಇವರೆಲ್ಲರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಅಭಿನಂದನೆಯ ಪ್ರೀತಿಯ ಕೆಲಸಕ್ಕೆ ಕೈಜೋಡಿಸಿದ ಎಲ್ಲ ಸಹೃದಯಿಗಳ ಉಪಕಾರವನ್ನು ಸ್ಮರಿಸುತ್ತೇನೆ.

'ಚೆನ್ನ ಶಿಕ್ಷಣಸಿರಿ'ಯನ್ನು ಇಂದು ಸನ್ಮಾನಿತರಾಗುತ್ತಿರುವ ಪಂ. ಚೆನ್ನಪ್ಪ ಎರೇಸೀಮೆ ಯವರಿಗೆ ಅರ್ಪಿಸುತ್ತಿದ್ದೇವೆ. ಶಿಕ್ಷಣ ತತ್ವಗಳ ಸಾರಾಯವೆನಿಸಿದ ಈ ಕೃತಿ ಶಿಕ್ಷಣಕ್ಷೇತ್ರಕ್ಕೆ ಉಪಯುಕ್ತ ಕೊಡುಗೆ ಎಂದು ನಂಬಿದ್ದೇನೆ.

ಡಿ. ಎಂ. ಚಂದ್ರಶೇಖರ್
ಅಧ್ಯಕ್ಷರು,
ಪಂ. ಚೆನ್ನಪ್ಪ ಎರೇಸೀಮೆ ಅಭಿನಂದನ ಸಮಿತಿ

ಬೆಂಗಳೂರು
25.3.1999

ಪ್ರಸ್ತಾವನೆ

ಪಂಡಿತ ಎರೇಸೀಮೆ ಚೆನ್ನಪ್ಪನವರ ಸನ್ಮಾನ ಸಮಿತಿಯು ಅವರಿಗೊಂದು ಸಂಭಾವನಾ ಗ್ರಂಥವನ್ನು ಪ್ರಕಟಿಸಲು ನಿರ್ಧರಿಸಿತು. ಆ ಗ್ರಂಥದ ಸಂಪಾದಕ ಸಮಿತಿಗೆ ಅಧ್ಯಕ್ಷನಾಗಬೇಕೆಂದು ನನ್ನನ್ನು ಬಿನ್ನವಿಸಿತು. ಚೆನ್ನಪ್ಪನವರ ಪಾಂಡಿತ್ಯ, ಶೈಕ್ಷಣಿಕ ಸೇವೆ, ಸಮಾಜ ಸೇವೆ, ಪಠ್ಯಪುಸ್ತಕ ರಚನಾಸಾಮರ್ಥ್ಯ, ಇವುಗಳಲ್ಲದೆ ಅವರ ಸಮಗ್ರ ವ್ಯಕ್ತಿತ್ವದ ಪರಿಚಯವು ತಕ್ಕಮಟ್ಟಿಗೆ ನನಗಿದ್ದುದರಿಂದ, ಸಂಪಾದಕ ಸಮಿತಿ ಅಧ್ಯಕ್ಷನಾಗಿ ಸಲಹೆ ನೀಡಲು ಸಂತೋಷದಿಂದ ಒಪ್ಪಿಕೊಂಡೆ.

ಸಾಮಾನ್ಯವಾಗಿ 'ಸಂಭಾವನಾ ಗ್ರಂಥ' ವೆಂದರೆ ಸನ್ಮಾನಿತರಾಗುವವರನ್ನು ಕುರಿತು ಅವರ ಶಿಷ್ಯರು, ಅಭಿಮಾನಿಗಳು, ಅವರ ಕಾರ್ಯಕ್ಕೆ ಮೆಚ್ಚಿದವರು, ತಮ್ಮ ತಮ್ಮ ಅನುಭವ ಹಾಗೂ ದೃಷ್ಟಿಕೋನಗಳಿಂದ ಹೇಳಿದ ಒಳ್ಳೆಯ ಮಾತುಗಳ ಸಂಕಲನ. ನಮ್ಮ ಪ್ರಥಮ ಚರ್ಚೆಯಲ್ಲಿ, ಅವರ ಮುಖ್ಯ ಕಾರ್ಯಕ್ಷೇತ್ರಗಳಾಗಿದ್ದ, ಸಾಹಿತ್ಯ, ಮಾಸ್ತರಿಕೆ (ಶಿಕ್ಷಣ) - ಇವುಗಳನ್ನು ಕುರಿತು ಕಾಯಂ ಆಗಿ ಶಿಕ್ಷಕರಿಗೆ, ಶಿಕ್ಷಣಾಸಕ್ತರಿಗೆ ಉಪಯುಕ್ತವಾಗಬಹುದಾದ ಆಕರಗ್ರಂಥ ಸಮರ್ಪಣೆಯ ಸಲಹೆ ಬಂತು. ಕೂಡಲೆ, ಅವರ ಅಭಿಮಾನಿಗಳಾದ ಶ್ರೀ ಟಿ.ಆರ್. ಮಹಾದೇವಯ್ಯನವರು ಉತ್ಸಾಹದಿಂದ ಒಪ್ಪಿ, ಕಾರ್ಯೋನ್ಮುಖ ರಾದರು. ಅವರ ದೀರ್ಘಕಾಲದ ಪರಿಶ್ರಮದ ಫಲವೇ ಈ ಸಂಭಾವನಾ ಗ್ರಂಥ.

ಗ್ರಂಥದ ವಿಷಯವನ್ನು ಸೂಚನೆ ಮಾಡಿದಾಗ ಇದರ ಆಳ-ವಿಸ್ತಾರಗಳ ಸರಿಯಾದ ಕಲ್ಪನೆ ನನಗಿರಲಿಲ್ಲ. ಈಗ ನೋಡಿದರೆ, ಮೂವತ್ತು ಮೌಲಿಕ ಲೇಖನಗಳ ಸುಂದರ ಸಂಕಲನವಾಗಿದೆ ಇದು. ಒಂದೊಂದು ಲೇಖನವೂ ಸ್ವತಂತ್ರಚಿಂತನದ ಪಾಂಡಿತ್ಯಪೂರ್ಣ ನಿಧಿಯೇ ಆಗಿದೆ. ಇದರ ಲೇಖಕರಲ್ಲಿ ಹನ್ನೆರಡು ಜನ ಪಿ.ಎಚ್‌ಡಿ. ಡಿಗ್ರಿ ಪಡೆದವರು. ಎಲ್ಲ ಲೇಖಕರು ಶಿಕ್ಷಣ, ಪ್ರಶಿಕ್ಷಣ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಪರಿಣತರು, ಅಪಾರ ಅನುಭವಿಗಳು. ಒಬ್ಬರ ಜೊತೆ ಇನ್ನೊಬ್ಬರು ಮಾತಾಡಿಕೊಳ್ಳದಿದ್ದರೂ, ಎಲ್ಲಿಯೂ ವಿಚಾರ ಮರುಕಳಿಕೆ ಇಲ್ಲ. ಅವರವರು ಎತ್ತಿಕೊಂಡ ವಿಷಯ ಪಾರ್ಶ್ವಗಳೇ ಬೇರೆ; ಹೇಳುವ ರೀತಿಯು ಬೇರೆ. ವೈವಿಧ್ಯತೆಯ ಜತೆಗೆ ವೈಶಿಷ್ಟ್ಯವೂ ಎದ್ದುಕಾಣುವಂತಿದೆ.

ಮೂವತ್ತು ಲೇಖನಗಳನ್ನು ಸಂಲಗ್ನತೆಗೆ ಅನುಸಾರವಾಗಿ ಮೂರು ಮುಖ್ಯಭಾಗಗಳನ್ನಾಗಿ ಮಾಡಿ ಸಂಕಲಿಸಿದೆ. ಸ್ಥೂಲವಾಗಿ ಅವು ಇಂತಿವೆ: **ಶಿಕ್ಷಣದ ತಾತ್ವಿಕ ನೆಲೆ; ಶಿಕ್ಷಣದ ಅಲೆಗಳು** ಮತ್ತು **ವಿಧಿ-ವಿಧಾನಗಳು.**

ಕೆಲವು ಲೇಖನಗಳು ಆಳ ಚಿಂತನೆಯಿಂದ ಬೆಳಗುತ್ತಿವೆ; ಇನ್ನು ಕೆಲವು ಅಂಕಿಸಂಖ್ಯಾ ಆಧಾರಿತ, ಸಂಶೋಧನಾತ್ಮಕ, ನಿಖರತೆ, ಪ್ರಖರತೆಗಳನ್ನು ಬೀರುತ್ತಿವೆ. ಮತ್ತೆ ಕೆಲವು ಜಾರಿಗೊಳಿಸಬಹುದಾದ ಉಪಯುಕ್ತ ಸಲಹೆಗಳಿಂದ ಕೂಡಿವೆ. ಒಟ್ಟಾರೆ ನೋಡಿದಾಗ, ಶೈಕ್ಷಣಿಕ ಕಾಮನಬಿಲ್ಲಿನಂತೆ ವೈವಿಧ್ಯಮಯ ವರ್ಣಸಂಯೋಜನೆಯ, ಉಪಯುಕ್ತ ಚಿತ್ರವನ್ನು ಬಿತ್ತರಿಸುವ, ಅಪರೂಪ ಸಂಕಲನವಿದಾಗಿದೆ.

ವಿಚಾರ-ವಿಷಯಗಳ ಪ್ರೌಢಿಮೆಯಿಂದ ತುಂಬಿದ್ದರೂ, ಹದವಾದ ಸರಳ ಶೈಲಿಯಲ್ಲಿ ನಿರೂಪಿತವಾಗಿ, ಎಲ್ಲ ಲೇಖನಗಳೂ ಒಂದೊಂದು ತರಹ ವಿಚಾರಪ್ರೇರಕವಾಗಿ, ಅಧಿಕೃತಮಾಹಿತಿಯ ಆಗರವಾಗಿ ಬಹುಕಾಲ ಆಕರಗ್ರಂಥವಾಗಿ ನಿಲ್ಲುವ ಸಾಮರ್ಥ್ಯದ ಸಂಭಾವನಾ ಗ್ರಂಥವಿದು. ಇದು ಶಾಲಾ-ಕಾಲೇಜುಗಳ ಗ್ರಂಥಾಲಯಗಳಿಗೆ ಸೇರಲಿ; ಶಿಕ್ಷಣಾಸಕ್ತರಿಗೆ ತೃಪ್ತಿ ನೀಡಲಿ, ಶಿಕ್ಷಕರಿಗೆ ಬೆಳಕು ನೀಡುವ ದಾರಿದೀಪವಾಗಲಿ.

ಎಸ್. ಆರ್. ರೋಹಿಡೇಕರ
ಅಧ್ಯಕ್ಷ
ಸಂಪಾದಕ ಮಂಡಲಿ

ಬೆಂಗಳೂರು
25-3-1999



ಆದರ್ಶ ಶಿಕ್ಷಕ ಶ್ರೀ ಚೆನ್ನಪ್ಪ ಎರೇಸೀಮೆ ಅವರು

ಸಂಪಾದಕರ ನುಡಿ

ಶ್ರೇಷ್ಠ ವಿದ್ವಾಂಸರಾಗಿ ಸಾಹಿತ್ಯಕ್ಷೇತ್ರಕ್ಕೆ, ಕನ್ನಡ ಭಾಷಾ ಬೋಧಕರಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ಜನಪ್ರಿಯ ಪ್ರವಚನಕಾರರಾಗಿ, ಕಥಾಕಾಲಕ್ಷೇಪ ಕಲಾವಿದರಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಎರೇಸೀಮೆ ಚೆನ್ನಪ್ಪನವರು ಸಲ್ಲಿಸಿರುವ ಅನುಪಮ ಸೇವೆಯನ್ನು ಗುರುತಿಸಿ ಅವರನ್ನು ಯುಕ್ತರೀತಿಯಲ್ಲಿ ಸನ್ಮಾನಿಸಲು ತೀರ್ಮಾನಿಸಲಾಯಿತು.

"ಉತ್ತಮ ಜನಾಂಗವನ್ನು ಕಟ್ಟಬೇಕೆನ್ನುವವರು ರಾಷ್ಟ್ರದ ಮುಂದಿನ ಪ್ರಜೆಗಳಾದ ಮಕ್ಕಳನ್ನು ಕಟ್ಟಬೇಕು. ಹೀಗೆಂದರೆ ಮಕ್ಕಳ ಭಾವಜೀವನದ ಬೆಳವಣಿಗೆಗೆ ಯೋಗ್ಯ ಸಂಸ್ಕಾರ, ಸನ್ನಿವೇಶಗಳನ್ನು ಒದಗಿಸಬೇಕು. ನಾನು ಇದನ್ನು ಅರಿತೇ ನನ್ನ ಜೀವಮಾನದ ಮುಖ್ಯವೃತ್ತಿಯಾದ ಉಪಾಧ್ಯಾಯವೃತ್ತಿಯಲ್ಲಿ ಬಹುಮಟ್ಟಿಗೆ ವಿದ್ಯಾರ್ಥಿಗಳ ಭಾವಜೀವನದ ಬೆಳವಣಿಗೆಗೆ ಏನೆಲ್ಲಾ ಮಾಡಬೇಕೋ ಅದನ್ನು ಪ್ರಾಮಾಣಿಕತೆಯಿಂದ ಮಾಡಿದ್ದೇನೆಂಬ ತೃಪ್ತಿಯಿದೆ. ಈ ವೃತ್ತಿಯಲ್ಲಿ ನನಗೆ ಯಶಸ್ಸು ಸಿಕ್ಕಿದೆಯೆಂಬ ಸಮಾಧಾನವಿದೆ. ಶಿಕ್ಷಣ ಇಲಾಖೆ ನನ್ನನ್ನು ಬಹಳ ಗೌರವಿಸಿದೆ; ಕೊನೆಗೆ ಸನ್ಮಾನ ಮಾಡಿ ಕಳಿಸಿದೆ" ಎಂದು ತಮ್ಮ ಆತ್ಮವೃತ್ತದಲ್ಲಿ ('ನನ್ನ ಕಥೆ') ಹೇಳಿರುವ ಆದರ್ಶ ಶಿಕ್ಷಕರಾದ ಶ್ರೀ ಚೆನ್ನಪ್ಪನವರಿಗೆ ಅರ್ಪಿಸುವ ಗ್ರಂಥವು ಶಿಕ್ಷಣ ತತ್ವಗಳ ವಿವೇಚನೆಯನ್ನು ಒಳಗೊಂಡಿದ್ದು ಅದು ಶಿಕ್ಷಣತತ್ವಾಭ್ಯಾಸಿಗಳಿಗೆ ಸಂದರ್ಭ ಗ್ರಂಥವಾಗಿ ಒದಗಬೇಕೆಂದು ಸಮಿತಿ ಸಂಕಲ್ಪಿಸಿತು. ಖ್ಯಾತ ಶಿಕ್ಷಣತಜ್ಞ ಪ್ರೊ. ಎಸ್. ಆರ್. ರೋಹಿಡೇಕರ್ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಣಕ್ಷೇತ್ರದ ಅಪಾರ ಅನುಭವವುಳ್ಳ ಪ್ರಾಧ್ಯಾಪಕರ ಒಂದು ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಅವರು ಸೇರಿ ಗ್ರಂಥದ ರೂಪುರೇಷೆಯನ್ನು ನಿರ್ಧರಿಸಿ, ಶಿಕ್ಷಣರಂಗದಲ್ಲಿ ಆಡಳಿತಗಾರರಾಗಿ, ವಿಷಯ ಬೋಧಕರಾಗಿ, ಕ್ಷೇತ್ರ ನಿಪುಣರಾಗಿ, ಸಂಶೋಧಕರಾಗಿ ಅನುಭವ ಪಡೆದ ತಜ್ಞರಿಗೆ ಅವರವರ ಅಧ್ಯಯನ ಹಾಗೂ ಬೋಧನೆಯ ಭಾಗವಾದ ವಿಷಯವನ್ನು ಸೂಚಿಸಿ ಲೇಖನ ಬರೆದು ಕಳಿಸಲು ಕೋರಲಾಯಿತು. ಅದರಂತೆ ಮೂವತ್ತು ಶಿಕ್ಷಣವೇತ್ತರು ಬರೆದ ಶಿಕ್ಷಣದ ವಿವಿಧ ಆಯಾಮಗಳನ್ನು ಕುರಿತ ಲೇಖನಗಳನ್ನು ವಿಷಯಾನುಸಾರವಾಗಿ ನಾಲ್ಕು ಭಾಗಗಳನ್ನು ಮಾಡಿ ಇಲ್ಲಿ ಅಳವಡಿಸಲಾಗಿದೆ. ಒಟ್ಟಾರೆ ಈ ಸಂಕಲನ ಚೆನ್ನಾದ ಶಿಕ್ಷಣತತ್ತ್ವಗಳ ಸಂಪದವಾಗಿದೆ; ಚೆನ್ನಪ್ಪನವರಿಗೆ ಅರ್ಪಿಸಿದ ಶಿಕ್ಷಣಸಿರಿಯೂ ಆಗಿದೆ. ಇಲ್ಲಿನ ಲೇಖನಗಳ ಮೌಲ್ಯವನ್ನು ಕುರಿತು ಸಂಪಾದಕ ಸಮಿತಿಯ ಅಧ್ಯಕ್ಷರು ತಮ್ಮ ಮಾತಿನಲ್ಲಿ ಪ್ರಸ್ತಾಪಿಸಿದ್ದಾರೆ.

ಇಂಥದೊಂದು ಮೌಲ್ಯದ ಕೃತಿ ರೂಪು ತಾಳಲು ಕಾರಣರಾದವರನ್ನು ನೆನೆಸುವುದು ನನ್ನ ಕರ್ತವ್ಯವಾಗಿದೆ. 'ಚೆನ್ನ ಶಿಕ್ಷಣ ಸಿರಿ' ನಮ್ಮ ನಾಡಿನ ಹಿರಿಯ ಶಿಕ್ಷಕರೊಬ್ಬರಿಗೆ ಅರ್ಪಿಸುವ ಅಭಿನಂದನ ಗ್ರಂಥವೆಂಬ ಅಭಿಮಾನದಿಂದ, ಕೊಟ್ಟ ವಿಷಯದ ಮೇಲೆ ವಿಚಾರ ಪರಿಪ್ಲುತ ಲೇಖನಗಳನ್ನು ಬರೆದು ಕಳಿಸಿದ ಎಲ್ಲ ಲೇಖಕರಿಗೂ ಧನ್ಯವಾದಗಳು. ಸಂಪಾದಕ ಸಮಿತಿಯ ಅಧ್ಯಕ್ಷರಾದ ಪ್ರೊ. ಎಸ್.ಆರ್. ರೋಹಿಡೇಕರ್ ಅವರನ್ನು ಮತ್ತು ಉಳಿದ ಸದಸ್ಯರನ್ನು,

ವಿಶೇಷವಾಗಿ ಪ್ರೊ. ಕೆ.ಎಚ್. ಉದ್ದಂಡಪ್ಪ ಮತ್ತು ಡಾ. ಡಿ.ಎಸ್. ಶಿವಾನಂದ ಅವರನ್ನು, ಅವರ ಮಾರ್ಗದರ್ಶನ ಹಾಗೂ ಸಲಹೆ-ಸೂಚನೆಗಳಿಗಾಗಿ ತುಂಬುಮನದಿಂದ ನೆನೆಯುತ್ತೇನೆ. ಈ ಗ್ರಂಥದ ಬಗ್ಗೆ ಆಸಕ್ತಿ ತೋರಿಸಿ ಸಹಕರಿಸಿದ ಶ್ರೀ ಬಿ.ಎಸ್. ಪರಮಶಿವಯ್ಯನವರಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕು.

ಈ ಗ್ರಂಥದ ಪ್ರಕಟಣೆಗೆ ಉದಾರ ನೆರವು ನೀಡಿ ಆಶೀರ್ವದಿಸಿರುವ ಶ್ರೀಸಿದ್ಧಗಂಗಾ ಕ್ಷೇತ್ರದ ಪರಮಪೂಜ್ಯ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳಿಗೆ ಪ್ರಣಾಮಗಳು. ಅಭಿನಂದನ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಎಂ. ಚಂದ್ರಶೇಖರ್, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಮುದ್ದಪ್ಪ, ಶ್ರೀ ಬಿ.ಎಸ್. ಶಿವಣ್ಣ, ಕೋಶಾಧ್ಯಕ್ಷರಾದ ಶ್ರೀ ಎಂ. ಶ್ರೀಕಂಠ ರುದ್ರಾರಾಧ್ಯ ಅವರ ಪ್ರೋತ್ಸಾಹ ಹಾಗೂ ಸಹಕಾರವನ್ನು ಹೃತ್ಪೂರ್ವಕವಾಗಿ ಸ್ಮರಿಸುತ್ತೇನೆ.

ಶ್ರೀ ಎರೇಸೀಮೆಯವರ ಮಿತ್ರರು, ಬಂಧುಗಳು ಅವರ ಅಭಿನಂದನೆ ಅರ್ಥಪೂರ್ಣವಾಗಲು ಹಲವಂದದಲ್ಲಿ ನೆರವಾಗಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳು.

ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಅನುಭವಪ್ರಿಂಟರ್ಸ್ ಮಾಲೀಕರಾದ ಶ್ರೀ ಬಸವರಾಜ ಜಿಗಳೂರ ಅವರಿಗೆ ನಮ್ಮ ವಂದನೆಗಳು.

ಹಿರಿಯರಾದ ಶ್ರೀ ಚನ್ನಪ್ಪ ಎರೇಸೀಮೆಯವರಿಗೆ, ಅಭಿನಂದನೆಯ ಸಂದರ್ಭದಲ್ಲಿ, ಅವರ ವ್ಯಕ್ತಿತ್ವಕ್ಕೆ ತಕ್ಕುದಾದ ಸಾರಸ್ವತ ಕೊಡುಗೆಯನ್ನು ನೀಡಬೇಕೆಂಬ ಸಂಕಲ್ಪದಂತೆ ಈ 'ಸಿರಿ'ಯನ್ನು ಅವರಿಗೆ ಅರ್ಪಿಸುತ್ತಿದ್ದೇವೆ. ಇದು ಅವರಿಗೆ ಪ್ರಿಯವಾಗಲಿ. ಶಿಕ್ಷಣ ತತ್ವಜಿಜ್ಞಾಸುಗಳು ಇದನ್ನು ಆದರಿಸಲಿ.

ದಿನಾಂಕ 20.3.1999 **ಟಿ. ಆರ್. ಮಹಾದೇವಯ್ಯ**
ಬೆಂಗಳೂರು *ಸಂಪಾದಕ*

ಪರಿವಿಡಿ

ಪುಟಗಳು

III. ವಿಧಿ - ವಿಧಾನಗಳು

IV. English Section

ಪಂ. ಚೆನ್ನಪ್ಪ ಎರೇಸೀಮೆಯವರು

ನಮ್ಮ ನಾಡಿನ ಶಿಕ್ಷಣಕ್ಷೇತ್ರದಲ್ಲಿ ಹಾಗೂ ಕನ್ನಡ ವಿದ್ವತ್ ವಲಯದಲ್ಲಿ ಪಂ. ಎರೇಸೀಮೆಯವರ ಹೆಸರು ಹಚ್ಚಹಸಿರು. ಎರೇಸೀಮೆಯೆಂಬ ಅಡ್ಡಹೆಸರು ಅವರಿಗೆ ಅನ್ವರ್ಥನಾಮ. ಅವರ ಪಾಠಗಳು, ಪ್ರವಚನಗಳು, ಪಾಂಡಿತ್ಯ-ಪ್ರತಿಭೆಗಳು, ಬರಹಗಳು ಎರೇಭೂಮಿಯಂತೆ ಸತ್ವಪೂರ್ಣ. ಹಳೆಯಕಾಲದ ಪಂಡಿತರಾದರೂ ಆಧುನಿಕಯುಗದ ವೈಚಾರಿಕ ದೃಷ್ಟಿಯನ್ನು ಮೈಗೂಡಿಸಿಕೊಂಡಿರುವ ಅವರು 'ಹಳೆಬೇರು, ಹೊಸಚಿಗುರು ಕೂಡಿರಲು ಮರ ಸೊಗಸು' ಎಂಬ ಕವಿವಾಣಿಗೆ ದೃಷ್ಟಾಂತವಾಗಿದ್ದಾರೆ.

ಜೀವನ-ಸಾಧನೆ:

ಪಂ. ಚೆನ್ನಪ್ಪನವರು ಧಾರವಾಡ ಜಿಲ್ಲೆ, ಹಾನಗಲ್ಲು ತಾಲ್ಲೂಕು ಹರವಿಯಲ್ಲಿ ಮುದುಕಪ್ಪ-ಸಂಗಮ್ಮ ದಂಪತಿಗಳಿಗೆ 1919ರಲ್ಲಿ ಜನಿಸಿದರು. ಕುಗ್ರಾಮದ ಬಡ ರೈತ ಕುಟುಂಬದಲ್ಲಿ ಹುಟ್ಟಿದ ಅವರಿಗೆ ವಿದ್ಯೆ ಕಲಿಯಲು ಅನುಕೂಲಗಳಿರಲಿಲ್ಲ. ಎಷ್ಟೇ ಕಷ್ಟವಾಗಲಿ ತಾನು ಓದಬೇಕು, ಓದಿ ನೌಕರಿ ಹಿಡಿದು ತಮ್ಮ ಕುಟುಂಬವನ್ನು ಬಡತನದ ಬವಣೆಯಿಂದ ಮೇಲೆತ್ತಬೇಕೆಂಬ ಛಲ ಅವರದು. ಆಗಿನ ಮುಂಬಯಿ ಸರಕಾರದ ಮುಲ್ಕಿ ಪರೀಕ್ಷೆಯ ಓದಿಗಾಗಿ ಅವರು ಪಟ್ಟ ಪಾಡು ಅಷ್ಟಿಷ್ಟಲ್ಲ. ಆರನೇ ಕ್ಲಾಸು ಸೇರಲು ಅವರ ಮನೆಯವರಿಗೆ ಎರಡೂವರೆ ಆಣೆ ಕೊಡಲು ಆಗಲಿಲ್ಲ. ಅಂಥ ಕಡುಬಡತನ. ಸ್ವಲ್ಪ ಹೊಲ ಮತ್ತು ಮನೆ ಇದ್ದುದರಿಂದ ಫೀಜು ಮಾಫಿ ಇಲ್ಲ! ರೈತನಾಗಿ ದುಡಿದು ಸಂಪಾದಿಸಿ ಓದು ಮುಂದುವರಿಸಿದ ಚೆನ್ನಪ್ಪನವರು ಹುಟ್ಟು ಸಾತ್ವಿಕ ಹೋರಾಟಗಾರರು. ಅವರು ಸಾಹಸ ಪ್ರವೃತ್ತಿ, ಹಿಂಜಗ್ಗದ ಧೈರ್ಯ, ದಣಿವರಿಯದ ದುಡಿಮೆಗಳಿಂದಲೇ ಮೇಲೇರಿದರು.

ಮುಲ್ಕಿಪರೀಕ್ಷೆ ಪಾಸು ಮಾಡಿದ ನಂತರ ಗಾಂವಠೀ ಶಾಲೆಯಲ್ಲಿ ಉಪಾಧ್ಯಾಯನಾಗಲು ಪ್ರಯತ್ನಿಸಿದರು. ವಯಸ್ಸು ಚಿಕ್ಕದೆಂಬ ಕಾರಣಕ್ಕಾಗಿ ಅವರಿಗೆ ಕೆಲಸ ಸಿಕ್ಕಲಿಲ್ಲ. ಊರಿಗೆ ಬಂದು ರೈತನಾಗಿ ದುಡಿಯಲಾರಂಭಿಸಿದರು. ಅನಂತರ ಹಿರೇಕಾಂಶಿಯಲ್ಲಿ 9ರೂ. ಪಗಾರದ ಗಾಂವಠೀ ಶಾಲಾ ಮಾಸ್ತರರಾದರು. ಉತ್ಸಾಹದಿಂದ ಕೆಲಸಮಾಡಿ ವಿದ್ಯಾರ್ಥಿಗಳ ಮತ್ತು ಊರಿನವರ ಮನಗೆದ್ದರು. ಅವರು ಮಲೆನಾಡಿನ ಆ ಭಾಗದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಹಾಸುಹೊಕ್ಕಾದರು. ನಾಟಕ ಬರೆದು ಆಡಿಸಿ, ಪ್ರವಚನ ಮಾಡಿ, ಕಥಾಕಲಾಕ್ಷೇಪಗಳನ್ನು ನಡೆಸಿ ಅತ್ಯಂತ ಜನಪ್ರಿಯರಾದರು.

ಇಷ್ಟರಿಂದಲೇ ಅವರು ತೃಪ್ತರಾಗಲಿಲ್ಲ. ಮತ್ತೆ ಓದಬೇಕೆನಿಸಿತು. ಶಿವಮೊಗ್ಗದಲ್ಲಿ ವಿಟಿಸಿ (ವರ್ನಾಕ್ಯುಲರ್ ಟೀಚರ್ ಸರ್ಟಿಫಿಕೇಟ್) ಕೋರ್ಸನ್ನು ಮುಗಿಸಿ ಉನ್ನತದರ್ಜೆಯಲ್ಲಿ ಆ ಪರೀಕ್ಷೆ ಪಾಸು ಮಾಡಿದರು. ಆನಂತರ ಮೈಸೂರಿನಲ್ಲಿ ಪಂಡಿತಪರೀಕ್ಷೆಗಾಗಿ ಅಧ್ಯಯನ ಮಾಡಿ ಮಹಾಪ್ರಯತ್ನದಿಂದ ಅದರಲ್ಲೂ ರ್‍ಯಾಂಕ್‌ಗಳಿಸಿದ್ದು ಅವರ ಜ್ಞಾನದಾಹಕ್ಕೆ, ಅಸಮಸಾಹಸಕ್ಕೆ

ಉದಾಹರಣೆಯಾಗಿದೆ. ಉಭಯ ಭಾಷಾ ವಿದ್ವಾಂಸರಾದ ಅವರು ಹೈಸ್ಕೂಲಿನಲ್ಲಿ ಕನ್ನಡ ಬೋಧಕರಾಗಿ, ಆನಂತರ ಶಿಕ್ಷಕ ತರಬೇತಿ ಕಾಲೇಜಿನಲ್ಲಿ ಭಾಷಾಸಾಹಿತ್ಯಗಳ ಶಿಕ್ಷಕರಾಗಿ ಮೂರುದಶಕಗಳಿಗೂ ಮೇಲ್ಪಟ್ಟು ದುಡಿದು 1975ರಲ್ಲಿ ನಿವೃತ್ತರಾದರು.

ಚೆನ್ನಪ್ಪನವರ ಕೌಟುಂಬಿಕ ಜೀವನ ಆನಂದಮಯ. ಅವರಿಗೆ ನಾಲ್ಕು ಹೆಣ್ಣು, ಮೂರು ಗಂಡುಮಕ್ಕಳು, ಎಲ್ಲರೂ ಒಳ್ಳೊಳ್ಳೆಯ ವೃತ್ತಿಯಲ್ಲಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಈ ದೃಷ್ಟಿಯಿಂದ ಅವರು ಸುಖಿ. ಅವರಿಗೀಗ ಎಂಬತ್ತು ವರ್ಷ. ನರಗಳ ದೌರ್ಬಲ್ಯವಿದೆ. ನೆನಪಿನ ಶಕ್ತಿ ಸ್ವಲ್ಪ ಕುಗ್ಗಿದೆ. ಹೆಚ್ಚು ಮಾತನಾಡಲು, ಬರವಣಿಗೆ ಮಾಡಲು ಸಾಧ್ಯವಾಗುತ್ತಿಲ್ಲ. ಇಷ್ಟಾದರೂ ಅವರದು ಅದಮ್ಯ ಚೇತನ. ಅವರ ಜೀವನೋತ್ಸಾಹ ಮಿಗಿಲಾದುದು. ಅವರನ್ನು ಕಾಣಬಂದವರಿಗೆ ಹೊಸ ಅನುಭವಗಳನ್ನು ಕಟ್ಟಿಕೊಡುತ್ತಲೇ ಇದ್ದಾರೆ.

ಶ್ರೇಷ್ಠ ಉಪಾಧ್ಯಾಯ:

ಚೆನ್ನಪ್ಪನವರು ಉಪಾಧ್ಯಾಯವೃತ್ತಿಯನ್ನು ಬಯಸಿ ಬಯಸಿ ಪಡೆದುಕೊಂಡಿದ್ದರು. ಅದು ಅವರಿಗೆ ಉಪಜೀವನದ ಆಧಾರ ಮಾತ್ರವಾಗಿರಲಿಲ್ಲ. ತಾನು ಹೆಚ್ಚುಹೆಚ್ಚು ಕಲಿತರೆ ಮಕ್ಕಳಿಗೆ ಸತ್ವಪೂರ್ಣವಾಗಿ ಬೋಧಿಸಲು ಸಾಧ್ಯವಾಗುತ್ತದೆ ಎಂಬುದನ್ನು ಅವರು ತಿಳಿದಿದ್ದರು. ಕಲಿತುದನ್ನು ಪರಿಣಾಮಕಾರಿಯಾಗಿ ಹೇಳುವ ಕಲೆ ಅವರಿಗೆ ಈಶ್ವರಾನುಗ್ರಹದಿಂದ ದೊರಕೊಂಡಿತ್ತು. ಸಾವಿರಾರು ವಿದ್ಯಾರ್ಥಿಗಳಿಗೆ ತೃಪ್ತಿಯಾಗುವಂತೆ ಪಾಠಮಾಡಿದ ಆನಂದ ಅವರ ಪಾಲಿಗಿದೆ. ಅವರು ತಲೆತುಂಬ ಶಾಲಾ ಸಂವಿಧಾನ, ಮನತುಂಬ ಶಿಕ್ಷಣತತ್ವ, ಕ್ರಿಯೆತುಂಬ ಬೋಧನಾ ವಿಧಾನದ ಚಿಂತೆ ತುಂಬಿಕೊಂಡಿದ್ದವರು. ಅವರೆಂದೂ ಗಡಿಯಾರ ನೋಡಿ ಶಾಲೆಯ ಭವಿಷ್ಯ ನಿರ್ಧರಿಸಿರಲಿಲ್ಲ. ಶಾಲೆಯ ಭವಿಷ್ಯನೋಡಿ ಗಡಿಯಾರದತ್ತ ದೃಷ್ಟಿ ಹರಿಸುತ್ತಿದ್ದರು. ಅವರೇ ತಮ್ಮ ಜೀವನಚರಿತ್ರೆಯಲ್ಲಿ ಹೇಳಿರುವ ಮಾತುಗಳಿವು : "ಕಡಿಮೆ ಸಂಬಳದ ಮಾಸ್ತರಕೆಲಸವೆಂಬ ತಾತ್ಸಾರ ಭಾವನೆಯನ್ನಾಗಲೀ, ಪ್ರತಿಫಲಾಪೇಕ್ಷೆಯ ಭಾವನೆಯನ್ನಾಗಲೀ ಮನಸ್ಸಿಗೆ ತರದೆ ಮುಂದಿದ್ದ ಕೆಲಸವನ್ನು ಪೂರ್ಣ ಮನಸ್ಸಿನಿಂದ ಮುಗಿಸುತ್ತಿದ್ದ ನನ್ನ ಕ್ರಿಯೆ ನನಗೆ ಸಾಕಷ್ಟು ಫಲವನ್ನು ಎಳೆದು ತಂದು ಕೊಡುತ್ತಿದ್ದವು. 'ಕರ್ಮಣ್ಯೇ ವಾಧಿಕಾರಸ್ತೇ............' ಎಂಬ ಶ್ಲೋಕ ನನಗೆ ಗೊತ್ತಿರಲಿಲ್ಲ, ನಿಜ. ಇದರ ಅರ್ಥ ನನ್ನ ವ್ಯವಹಾರದಲ್ಲಿತ್ತು ಎಂದು ಆತ್ಮವಿಶ್ವಾಸದಿಂದ ಹೇಳಬಲ್ಲೆ. ಇದೇ ನನ್ನ ಪರಮಭಾಗ್ಯವೆಂದು ಈಗ ಅಂದುಕೊಳ್ಳುತ್ತಿದ್ದೇನೆ."

ಶ್ರೀ ಚೆನ್ನಪ್ಪನವರು ಆದರ್ಶಶಿಕ್ಷಕರೆಂದು ಸನ್ಮಾನಿತರಾದರು. ವಿದ್ಯಾಇಲಾಖೆ ವ್ಯಾಕರಣ ರಚನೆ, ಪಾಠಪಟ್ಟಿ ನಿಯಾಮಕ ಹಾಗೂ ಪಠ್ಯಪುಸ್ತಕ ತಯಾರಿಕೆಗಳ ಸಮಿತಿಗಳಲ್ಲಿ ಅವರನ್ನು ಆಹ್ವಾನಿಸಿ ಅವರ ಜ್ಞಾನಾನುಭವಗಳನ್ನು ಬಳಸಿಕೊಂಡಿದೆ. ಅವರು ಕೇರಳವೇ ಮೊದಲಾದ ನೆರೆರಾಜ್ಯಗಳ ಕನ್ನಡ ಪಠ್ಯಪುಸ್ತಕ ಸಮಿತಿಯಲ್ಲಿ ತಜ್ಞರಾಗಿ ಸೇವೆಸಲ್ಲಿಸಿದ್ದಾರೆ.

ಇಂದಿನ ಶಿಕ್ಷಣಕ್ಷೇತ್ರದ ವಿದ್ಯಮಾನಗಳಿಂದ ಪಂ. ಚೆನ್ನಪ್ಪನವರು ಬೇಸತ್ತಿದ್ದಾರೆ. ಅವರು

ಪ್ರಾಸಂಗಿಕವಾಗಿ ತಮ್ಮ ಆತ್ಮವೃತ್ತದಲ್ಲಿ ('ನನ್ನ ಕಥೆ') ಹೀಗಂದಿದ್ದಾರೆ:

"ನಾನು ನಿವೃತ್ತನಾದದ್ದು ಒಳ್ಳೆಯದೇ ಆಯಿತು. ಒಳ್ಳೆಯ ಕಾಲದಲ್ಲಿ ನಾನು ಮೇಷ್ಟರಾಗಿದ್ದೆ. ಒಳ್ಳೆಯ ನೆನಪುಗಳು ಉಳಿದಿವೆ. ಈಗ ವಿದ್ಯಾಸಂಸ್ಥೆಗಳು ಕೊಳೆತು ನಾರುತ್ತಿವೆ. ಶಿಸ್ತು ಹಾಳು. ಎಲ್ಲೆಲ್ಲೂ ಗಲಾಟೆ; ಓದುವವರಿಲ್ಲ, ಬರೆಯುವವರಿಲ್ಲ. ಉಪಾಧ್ಯಾಯರಲ್ಲೂ ಶಿಸ್ತು ಇಲ್ಲ. ಶಾಲೆಗಳು ಅವನತಿ ಹಾದಿ ಹಿಡಿಯುತ್ತಿವೆ. ಶಿಸ್ತಿನ ಶಾಲೆಗಳಲ್ಲಿ ಕೆಲಸಮಾಡಿ ನಮ್ಮ ಹಿಂದಿನ ಕೀರ್ತಿಯನ್ನು ಹಾಳುಮಾಡಿಕೊಳ್ಳುವ ಕಾಲದಲ್ಲಿ ನಾನು ಆ ಕ್ಷೇತ್ರದಲ್ಲಿಲ್ಲದುದು ಒಳ್ಳೆಯದಾಯಿತು."

ಪ್ರವಚನಕಾರ, ಕಥಾಕಲಾಕ್ಷೇಪ ಕಲಾವಿದ:

ಸಾರ್ವಜನಿಕ ಸಭೆಗಳಲ್ಲಿ ಉಪನ್ಯಾಸ ಮಾಡುವುದು; ಗ್ರಾಮ, ನಗರಗಳಲ್ಲಿ ಕಥಾಕಲಾಕ್ಷೇಪ ಮಾಡುವುದು ಚೆನ್ನಪ್ಪನವರಿಗೆ ಹವ್ಯಾಸವಾಗಿತ್ತು. ಮನರಂಜನಾ ಸಾಧನಗಳ, ಸಂವಹನಗಳ ಕೊರತೆಯಿದ್ದ ಕಾಲದಲ್ಲಿ ಅವರು ಈ ಕಲೆಗಳ ಮೂಲಕ ಗ್ರಾಮೀಣ ಜನರಿಗೆ ಮನರಂಜನೆ ಒದಗಿಸಿದರು. ಅಷ್ಟೇ ಅಲ್ಲ, ಆ ಮೂಲಕ ಲೋಕ ಶಿಕ್ಷಣ ಕಾರ್ಯವನ್ನು ಬಹಳ ಉತ್ಸಾಹದಿಂದ ಯಶಸ್ವಿಯಾಗಿ ನಡೆಸಿದರು. ಈ ಬಗ್ಗೆ ಅವರು ರೂಢಿಸಿಕೊಂಡ ರೀತಿ ವಿಶಿಷ್ಟವಾದುದು. ಅದು ಅಪ್ಪಟ ಸಾಹಿತ್ಯಾಧಾರಿತವಾದ ಕಥಾ ನಿರೂಪಣೆ. ಅವರು ನಮ್ಮ ಹಳೆಯ ಕಾವ್ಯಗಳನ್ನು ಜನರ ಬಳಿಗೆ ಕೊಂಡೊಯ್ದು ಸವಿಗಾಣಿಸಿದ ರೀತಿ ಅನನ್ಯವಾದುದು. ಜೇನುಹುಳು ಅನೇಕ ರೂಪರಸ ವಾಸನೆಯ ಮಕರಂದವನ್ನು ಕುಡಿದು ತನ್ನ ಹೊಟ್ಟೆಯ ರಸದಲ್ಲಿ ಸೇರಿಸಿ ಜೇನುತುಪ್ಪವನ್ನಾಗಿ ಮಾರ್ಪಡಿಸಿ ಎದೆಯ ಗೂಡಿನಲ್ಲಿಟ್ಟು ಜನರ ಬಾಯನ್ನು ಸವಿಮಾಡುವಂತೆ ಯಾವ ಯಾವುದೋ ಕವಿಗಳ, ದಾರ್ಶನಿಕರ, ವಿಚಾರವಂತರ ಆಲೋಚನೆಗಳನ್ನು, ಅನುಭವಗಳನ್ನು ಸಂಗ್ರಹಿಸಿ ಕೇಳುಗರಿಗೆ ಸವಿಮಾಡಿ ಹೇಳುವ ಕಲೆ ಎರೇಸೀಮೆ ಅವರದು. ಕಾರ್ತೀಕ ಹಾಗೂ ಶ್ರಾವಣಮಾಸಗಳಲ್ಲಿ ತಿಂಗಳುಗಟ್ಟಲೆ ಪ್ರವಚನ ಮಾಡಿ ಅವರು ಭೇಷ್ ಎನಿಸಿಕೊಂಡಿದ್ದಾರೆ. ಪಂಡಿತ ಪಾಮರರನ್ನು ಏಕಕಾಲದಲ್ಲಿ ರಂಜಿಸುವ ಇಂಥ ಕಥಾಕಾಲಕ್ಷೇಪಗಳನ್ನು ಜನರ ಆಗ್ರಹದ ಮೇರೆಗೆ ನಾಡಿನ ನಾನಾ ಕಡೆ ನಡೆಸಿಕೊಟ್ಟು ಜನಾನುರಾಗವನ್ನು ಗಳಿಸಿ ತಾವು ವರ್ಗವಾಗಿ ಹೋದಲ್ಲೆಲ್ಲಾ ಇಂಥ ರಸಪೂರ್ಣ ಸಾಂಸ್ಕೃತಿಕ ವಾತಾವರಣವನ್ನು ಉಂಟುಮಾಡುತ್ತಾ ಬಂದಿದ್ದಾರೆ.

ವಿದ್ವಾಂಸ:

ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಂಡಿತರಾಗಿದ್ದ ಚೆನ್ನಪ್ಪನವರು ಕನ್ನಡ ಸಾಹಿತ್ಯಕ್ಕೆ ಮಿಗಿಲಾದ ಸೇವೆಸಲ್ಲಿಸಿದ್ದಾರೆ. ನಿವೃತ್ತರಾದ ನಂತರ ಅವರಿಂದ ಸಾಕಷ್ಟು ಕೃತಿಗಳು ಹೊರಬಂದಿವೆ. ಬಸವಣ್ಣನ ಪಂಚಪುರುಷ, ಸಿದ್ಧರಾಮನ ಅಖಂಡ ಸಾಕ್ಷಾತ್ಕಾರ ಮೊದಲಾದ ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯದಂಥ ಸುಪ್ರೌಢಕಾವ್ಯಗಳಿಗೆ ಗದ್ಯಾನುವಾದ ಮಾಡಿಕೊಟ್ಟು ಕಾವ್ಯಾಭ್ಯಾಸಿಗಳಿಗೆ ನೆರವಾಗಿದ್ದಾರೆ. ಮಕ್ಕಳ ಸಾಹಿತ್ಯದಲ್ಲೂ ಸಹ

ಅವರು ಕೃಷಿ ಮಾಡಿದ್ದಾರೆ. ವಿಶ್ವವಿದ್ಯಾಲಯದ ಸಾಹಿತ್ಯ ಚರಿತ್ರೆಗಳಿಗೆ ವಿದ್ವತ್ಪೂರ್ಣ ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ಅವರ ಸಂಶೋಧನಾತ್ಮಕ ಹಾಗೂ ಪ್ರೌಢಲೇಖನಗಳು ನಾಡಿನ ನಿಯತಕಾಲಿಕೆಗಳಲ್ಲಿ, ಸಂದರ್ಭಗ್ರಂಥಗಳಲ್ಲಿ ಪ್ರಕಟವಾಗಿವೆ. ಅವರು 'ಉದ್ಧಾನೇಶ್ವರ ಚರಿತೆ' ಎಂಬ ಷಟ್ಪದಿಕಾವ್ಯವನ್ನು ರಚಿಸಿದ್ದಾರೆ. ಅವರ ಕೃತಿಗಳಿಗೆ ಪ್ರಶಸ್ತಿ ಪುರಸ್ಕಾರಗಳು ದೊರಕಿವೆ. ಆಕಾಶವಾಣಿಯ ನೂರಾರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇಂಥ ಅವರ ಸೇವೆಯನ್ನು ಗುರುತಿಸಿ ಮಠಮಾನ್ಯಗಳು, ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ.

ಸಾರ್ಥಕಬದುಕಿನ ರೂವಾರಿ :

ನಮ್ಮಲ್ಲಿ ಪಂ. ಚೆನ್ನಪ್ಪನವರಂಥ ಪಂಡಿತರು ಸಿಕ್ಕಬಹುದು; ಒಳ್ಳೆಯ ಉಪಾಧ್ಯಾಯರೂ ಸಿಕ್ಕಬಹುದು. ಆದರೆ ಅವರ ಹಾಗೆ ಪ್ರತಿಕೂಲಪರಿಸ್ಥಿತಿಗಳಲ್ಲೂ ಆಶಾವಾದಿಯಾಗಿ ಧೈರ್ಯದಿಂದ ಮುನ್ನುಗ್ಗಿ ಬಾಳ ರೂಪಿಸಿಕೊಂಡವರು ಸಿಕ್ಕುವುದು ಅಪೂರ್ವ. ಅವರಂತೆ ಜೀವನೋತ್ಸಾಹ ಹೊಂದಿದವರು ಅತ್ಯಪೂರ್ವ. ಎಡರಡಸಿದ ವೇಳೆಯಲ್ಲಿ ಕಡುಧೈರ್ಯದಿಂದ, ಎಂಥ ದಾರುಣ ಸ್ಥಿತಿಯಲ್ಲೂ ದೇಹಿಯೆನಲ್ಲೊಲ್ಲದ ನಿಲುವಿನಿಂದ ಜೀವನ ನಡೆಸಿ, ಕಾಯಕಷ್ಟದ ಕಾಯಕದಿಂದ ಬಂದ ವಸ್ತುವನ್ನು ಪ್ರಸಾದವಾಗಿಸಿ ಸ್ವೀಕರಿಸಿ ದಟ್ಟದಾರಿದ್ರ್ಯವನ್ನು ಗೆದ್ದು ಮೇಲೇರಿದ ಹಿರಿಯಚೇತನ ಪಂ. ಚೆನ್ನಪ್ಪ ಎರೇಸೀಮೆ ಅವರದು.

ಎರೇಸೀಮೆ ಅವರದು ವರ್ಣಮಯ ಬದುಕಿನಲ್ಲಿ ಅರಳಿದ ಬಹುಮುಖ ವ್ಯಕ್ತಿತ್ವ. ಬದುಕನ್ನು ಸಮಗ್ರದೃಷ್ಟಿಯಿಂದ ಕಂಡವರು ಅವರು. ಸಾಹಿತ್ಯ, ಸಂಗೀತ, ಚಿತ್ರ, ಉಪನ್ಯಾಸ ಮೊದಲಾದ ಕಲೆಗಳಲ್ಲಿ ನಿಷ್ಣಾತರು; ರಸಿಕರು, ಸೌಂದರ್ಯೋಪಾಸಕರು. ಜೀವನ ಸ್ವಾರಸ್ಯವನ್ನು ಕಂಡವರು; ಅದನ್ನು ಸಹೃದಯರಿಗೆ ಮನಗಾಣಿಸಿದವರು. ಇತ್ತೀಚಿನ ದಿನಗಳಲ್ಲಿ ಜನಜೀವನದಲ್ಲಿ ಸ್ವಾರಸ್ಯವೇ ಇಲ್ಲದಿರುವುದನ್ನು ಕಂಡು ಅವರು ಹಳಹಳಿಸುವುದುಂಟು. ತಾನು ಸಂತೋಷಪಡಬೇಕು, ಪಡಿಸಬೇಕು - ಇದು ಅವರ ಜೀವನಾದರ್ಶ. ಚೆನ್ನಪ್ಪನವರು ಮೂಲತಃ ಒಳ್ಳೆಯವರು. ಅವರು ಕೆಟ್ಟವರನ್ನು ದ್ವೇಷಿಸುವುದಿಲ್ಲ. ಅವರನ್ನು ಸರಿದಾರಿಗೆ ತರಲು, ಅದೂ ತಿಳಿಹಾಸ್ಯದ ಮೂಲಕ, ಆರೋಗ್ಯಕರ ರೀತಿಯಲ್ಲಿ, ಪ್ರಾಮಾಣಿಕ ಪ್ರಯತ್ನ ನಡೆಸುವವರು. ಅವರಿಂದು ಬಾಳ ಸಂಧ್ಯೆಯಲ್ಲಿ ತಾವು ಸಾಗಿಬಂದ ಸಾರ್ಥಕವಾದ ಬದುಕಿನ ದಾರಿಯನ್ನು ಹಿಂತಿರುಗಿ ನೋಡುತ್ತಾ ಸಂತೃಪ್ತಿಯ ಆನಂದದಲ್ಲಿದ್ದಾರೆ. ಅವರಿಗೆ ಒಳ್ಳೆ ಆರೋಗ್ಯ, ಪ್ರಸನ್ನತೆ ಒದಗಲೆಂಬುದು ಎಲ್ಲರ ಹಾರೈಕೆ.

○

I. ಶಿಕ್ಷಣದ ತಾತ್ವಿಕ ತಳಹದಿ

ಶಿಕ್ಷಣದ ಉದ್ದೇಶಗಳು, ಸಾಧನೋಪಾಯಗಳು

ಪ್ರೊ. ಎಸ್. ಆರ್. ರೋಹಿಡೇಕರ್

ಮೂಲ ತಿಳಿವಳಿಕೆಯ ಅಗತ್ಯ

"ಭಾರತದ ಭವಿತವ್ಯವು ನಮ್ಮ ಶಾಲಾ-ಕಾಲೇಜುಗಳ ವರ್ಗ-ಕೋಣೆಗಳಲ್ಲಿ ರೂಪಿತವಾಗುತ್ತಿದೆ" ಎಂಬ ಸ್ಫೂರ್ತಿದಾಯಕ ವಾಕ್ಯದಿಂದ ಕೊಠಾರಿ ಕಮಿಶನ್ ವರದಿ ಪ್ರಾರಂಭವಾಗುತ್ತದೆ. ಅವರು ಹೇಳಿದ್ದು 1966ರಲ್ಲಿ. ಕಳೆದ 32 ವರ್ಷಗಳಿಂದ ನಡೆದು ಬಂದ ಶಿಕ್ಷಣ ಎಂತಹ ಭೀಕರ ಭವಿತವ್ಯವನ್ನು ರೂಪಿಸಿದೆ ಎಂದು ತಿಳಿಯಲು ಸಂಶೋಧನೆ ಬೇಕಾಗಿಲ್ಲ. ಸಂಸತ್ತಿನಲ್ಲಿ ನಮ್ಮ ಪ್ರಜಾಸತ್ತಾತ್ಮಕ ಪ್ರತಿನಿಧಿಗಳು ಪ್ರದರ್ಶಿಸಿದ, ದೇಶ ತಲೆತಗ್ಗಿಸಬೇಕಾದ ನಡವಳಿಕೆ, ಅಧಿಕಾರಿಗಳ ದರ್ಪ, ನಿರ್ಲಕ್ಷ್ಯ, ಪೋಲೀಸರ ದೌರ್ಜನ್ಯ, ಬೆತ್ತಲೆ ತಾಂಡವವಾಡುತ್ತಿರುವ ಸರ್ವಾಂತರ್ಯಾಮಿ ಭ್ರಷ್ಟಾಚಾರ, ಹಾಡು ಹಗಲೇ ನಡೆಯುತ್ತಿರುವ ಕೊಲೆ, ಸುಲಿಗೆ, ರೇಪು ರಂಪಾಟಗಳು, ಬ್ರಿಟಿಷರ ಆಳ್ವಿಕೆಯಲ್ಲಿ ಇದ್ದುದಕ್ಕಿಂತಲೂ ಸಹಸ್ರಾರುಪಟ್ಟು ಹೆಚ್ಚಿವೆ. ಎಲ್ಲ ಕ್ಷೇತ್ರಗಳಲ್ಲೂ ಬದುಕಿನ ಮೌಲ್ಯಗಳ ಅಧಃಪತನವಾಗುತ್ತಿದೆ. ಬೃಹದಾಕಾರದ ಜನಸಂಖ್ಯಾ ಬೆಳವಣಿಗೆಯಿಂದ ಉಂಟಾದ ನಿರುದ್ಯೋಗಿಗಳ ಸಂಖ್ಯಾಏರಿಕೆ ಒಂದೆಡೆ. ಸುಶಿಕ್ಷಿತ ಉದ್ಯೋಗಿಗಳಲ್ಲಿ ಸಾರ್ವಕಾಲಿಕ, ಸರ್ವಸ್ಥಾನಿಕ ಮೂಲಭೂತ ಮೌಲ್ಯಗಳ ಪಾತಾಳ ಕುಸಿತ ಇನ್ನೊಂದೆಡೆ.

ಕರೆಕೊಡುವವರು

ಶಿಕ್ಷಣವೆಂದರೆ ದೇಶಕ್ಕೆ ಮಾನವಸಂಪನ್ಮೂಲಗಳನ್ನು ಒದಗಿಸುವ ಕೇಂದ್ರಸಾಧನ. ಆದರೆ ನಮ್ಮ ಶಿಕ್ಷಣಸಂಸ್ಥೆಗಳಿಂದ ಎಂತಹ ಮಾನವಸಂಪತ್ತು ಹೊರಬೀಳುತ್ತದೆ? ವಿದ್ಯಾರ್ಥಿಗಳಲ್ಲಿ ಅಪರಾಧಮಟ್ಟದ, ಭಯಾನಕ ಅಶಿಸ್ತು ಬೆಳೆಯುತ್ತಿದೆ. ಮುಷ್ಕರನಿರತ, ಬೇಡಿಕೆಭರಿತ, ಹೊಣೆರಹಿತ (ಕೆಲವು ಅಪವಾದಗಳನ್ನು ಬಿಟ್ಟರೆ) ಶಿಕ್ಷಕ-ನಾಯಕರ ಸಂಘಟನೆಗಳಿವೆ. ಇನ್ನೊಂದೆಡೆ. ಭಾರತಮಾತೆಯ ಭವಿತವ್ಯ-ನೈತಿಕ ಭವಿತವ್ಯ - ಎತ್ತ ಸಾಗಿದೆ?

ಇಂದಿನ ವಿದ್ಯಾರ್ಥಿ, ವಿದ್ಯಾ+ಅರ್ಥಿಯಲ್ಲ, ವಿತ್ತಾರ್ಥಿ ಮಾತ್ರ. ಅದಕ್ಕೆ ಆಧಾರ ಪರೀಕ್ಷಾರ್ಥಿ; ಏನಕೇನ ಪ್ರಕಾರೇಣ ಆ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಸ ಬಯಸುವ ಅರ್ಥಿ. ಬ್ರಿಟಿಶರು ಸ್ಥಾಪಿಸಿದ ಶಿಕ್ಷಣಕ್ರಮದಿಂದ, ಶಿಕ್ಷಣವ್ಯವಸ್ಥೆಯಿಂದ, ಸಾಕಷ್ಟು ಹಣ ಸಂಪಾದನೆಗೆ ಬೇಕಾದ ನೌಕರಿ ಗಿಟ್ಟಿಸುವುದೊಂದೇ ಶಿಕ್ಷಣದ ಇಂದಿನ ಗುರಿ. ಅದಕ್ಕೆ ಅಗತ್ಯ ಆಧಾರ ಪರೀಕ್ಷಾಂಕಗಳು. ಆದ್ದರಿಂದ ಶಿಕ್ಷಣಕ್ರಮ, ವ್ಯವಸ್ಥೆಗಳು ಪರೀಕ್ಷಾ ನಿಯಂತ್ರಣದಲ್ಲಿವೆ. ಪಾಲಕರಿಗೂ ಮಕ್ಕಳ ಪರೀಕ್ಷಾಂಕ ಸಾಧನೆಯೇ ಗುರಿ. ಆ ಗುರಿ ಸಾಧನೆಯ ಪ್ರಮಾಣವೇ ಯಾವ ಶಾಲೆ, ಯಾವ ಕಾಲೇಜು ಉತ್ತಮ ಎಂದು ಅಳೆಯಲು ಆಧಾರ. ಇದು ವಾಸ್ತವಿಕ ಸತ್ಯ. ಈ ವಸ್ತುಸ್ಥಿತಿಯಲ್ಲಿ ಮೂರು 'E'- Education (ಶಿಕ್ಷಣ), Examination (ಪರೀಕ್ಷೆ), Employment (ನೌಕರಿ)ಗಳಲ್ಲಿ ಅಪವಿತ್ರಸಂಬಂಧ ಎದ್ದು ಕಾಣುತ್ತದೆ.

ಹೀಗಿರುವಾಗ, ನಮ್ಮ ಶಿಕ್ಷಣಕ್ರಮ ಕೇವಲ ಪರೀಕ್ಷೆಗಾಗಿ ತಯಾರು ಮಾಡುವುದೇ ಆಗಿದೆ ಎಂದು ನಾವು ಆಕ್ಷೇಪ ಎತ್ತುವಲ್ಲಿ ಏನರ್ಥವಿದೆ? ಶಿಕ್ಷಣಕ್ರಮದಲ್ಲಿ ನಾವು ಏನನ್ನು ಅಳವಡಿಸಿದರೂ (ಉದಾ. ಶಾರೀರಿಕ ಶ್ರಮದ ಉತ್ಪಾದಕ ಕಾರ್ಯಾನುಭವ, ಸಮಾಜಸೇವೆ, ನೀತಿಶಿಕ್ಷಣ, ಕಲಾಶಿಕ್ಷಣ, ಯೋಗಶಿಕ್ಷಣ ಇತ್ಯಾದಿ) ಅವು ಪರೀಕ್ಷಾ ವಿಷಯಗಳಲ್ಲದ್ದರಿಂದ ಅವೆಲ್ಲ ಅಲಕ್ಷ್ಯಕ್ಕೊಳಗಾಗಿವೆ. ಈ ಮೂರು 'E'ಗಳ ಅಪವಿತ್ರ ಸಂಬಂಧವನ್ನು ಕಡಿದು ಹಾಕಲೇಬೇಕು (Degrees must be delinked from jobs) ಎಂದು ಎಲ್ಲ ಸಮಿತಿಗಳು ಹೇಳುತ್ತ ಬಂದಿವೆ. ಆದರೆ ಅದನ್ನು ಜಾರಿಗೆ ತರಲಾಗಿಲ್ಲ. ಅಂತೆಯೆ ಶಿಕ್ಷಣವು ಅಜ್ಞ ರಾಜಕಾರಣಿಗಳ ಹಾಗೂ ಅಹಂಕಾರಿ ಅಧಿಕಾರಿಗಳ ಕೈಯಲ್ಲಿ 'ಕೈದಿ'ಯಾಗಿದೆ. ಸ್ವಾತಂತ್ರ್ಯದ ಸುವರ್ಣ ವರ್ಷದಲ್ಲಿ ಕೊಲೆಗೆಡುಕರಿಗೆ ಜೈಲಿನಿಂದ ಬಿಡುಗಡೆಯಾದರೂ, ಶಿಕ್ಷಣವೆಂಬ ಕೈದಿಗೆ ಬಿಡುಗಡೆ ಇಲ್ಲ. ಇದಕ್ಕೆ ಪರಿಹಾರವಿಲ್ಲವೇ? ಅದು ತಿಳಿಯಬೇಕಾದ ಮೂಲಭೂತ ಪದಗಳ ಅರಿವು ಅಗತ್ಯ; ಶಿಕ್ಷಣ, ಶಿಕ್ಷಕ, ಶಿಕ್ಷಣಕ್ರಮ, ಗುರಿ-ಸಾಧನ ಸಂಬಂಧ ಇತ್ಯಾದಿ ಅಂಶಗಳು ಮುಖ್ಯವಾದುವು. ಇವುಗಳ ಸಂಶೋಧನಾತ್ಮಕ, ವೈಜ್ಞಾನಿಕ ಅರಿವೇ ಶಿಕ್ಷಣದ ತಂತ್ರಜ್ಞಾನ. ಚುನಾವಣೆಯಲ್ಲಿ ಆರಿಸಿಬಂದ ರಾಜಕಾರಣಿಗಳಿಗೆ ಮತ್ತು ಇಲಾಖೆಗಳಿಂದ ಇಲಾಖೆಗಳಿಗೆ ಮೇಲಿಂದ ಮೇಲೆ ಹಾರಾಡುವ ಹಕ್ಕಿಯಂತಿರುವ ಅಧಿಕಾರಿಶಾಹಿ ತಜ್ಞರಿಗೆ ಶಿಕ್ಷಣದ ತಾಂತ್ರಿಕಜ್ಞಾನದ ಸ್ವರೂಪದ ಅರಿವೇ ಇಲ್ಲ. ಆ ಅರಿವನ್ನು ಪಡೆಯುವ ಅಗತ್ಯವೇ ಅವರಿಗೆ ಕಂಡುಬಂದಿಲ್ಲ. ಆದರೆ ಶಿಕ್ಷಣಕೈದಿಯ ಜೇಲರು ಅವರೇ. ಇದು ಇಂದಿನ ಜಟಿಲ ವಾಸ್ತವ ಸತ್ಯ.

'ಶಿಕ್ಷಣ' ಎಂದರೇನು?

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ವಿವಿಧ ಅಂಶಗಳ ಅರ್ಥವನ್ನು ಆಸಕ್ತಿಯುಳ್ಳವರು ತಿಳಿಯಬೇಕು. ಇಂಗ್ಲೀಷ್‌ನಲ್ಲಿ School ಎಂಬ ಪದ 'Schola' ಎಂಬ ಗ್ರೀಕ್ ಪದದಿಂದ ಬಂದದ್ದು. 'Schola' ಎಂದರೆ 'Leisure' ಎಂದರೆ 'ವಿರಾಮ-ಆರಾಮ ಕಾಲ'. ಗ್ರೀಸ್ ದೇಶದಲ್ಲಿ - ಅಥೆನ್ಸಿನಲ್ಲಿ - ಆಗ ಜನಸಂಖ್ಯೆಯ ಶೇಕಡಾ 10 ರಷ್ಟು ಸರದಾರರು. ಶೇಕಡಾ 90 ರಷ್ಟು 'Serfs' ಎಂದರೆ ಜೀತದಾಳುಗಳು. ಆ ಆಳುಗಳ ಮಕ್ಕಳು ತಮ್ಮ ತಂದೆಯರ ಜೊತೆಯಲ್ಲಿ ಚಿಕ್ಕವಯಸ್ಸಿನಲ್ಲಿಯೇ ಜೀತದಾಳು (ಮರಿ) ಆಗಿ, ದುಡಿಯುವವರು. ಆದರೆ ಸರದಾರರ ಮಕ್ಕಳು ಏನು ಮಾಡಬೇಕು? ಅವರನ್ನು ಶಾರೀರಿಕ ಶ್ರಮದ ಕೆಲಸಕ್ಕೆ ಹಚ್ಚುವಂತಿಲ್ಲ. ಅನೇಕ ಗಂಟೆಗಳ ವಿರಾಮ ಕಾಲವನ್ನು ಕಳೆಯುವುದು ಹೇಗೆ? ಅದಕ್ಕೊಂದು ಯೋಜನೆ: ಶಾರೀರಿಕ ಸಂಪತ್ತನ್ನು ಸಂಪಾದಿಸಲು ಒಂದು 'gymnasium' ಎಂದರೆ 'ವ್ಯಾಯಾಮ ಶಾಲೆ'. ಆದರೆ ಎಷ್ಟುಹೊತ್ತು ವ್ಯಾಯಾಮ ಮಾಡಬಹುದು? ಅವಕ್ಕೆ ಪೂರಕವಾಗಿ ಮನರಂಜನೆಗೆ 'music'. ಸರದಾರರ ಮಕ್ಕಳನ್ನು ಒಟ್ಟಿಗೆ ಗುಂಪುಗಳಲ್ಲಿ ಸೇರಿಸಿ, ಗುಂಪಿಗೊಂದು ಕೇಂದ್ರ ನಿರ್ಮಿಸಿ ವ್ಯಾಯಾಮ, ಸಂಗೀತ ಇವುಗಳ ಏರ್ಪಾಡಾಯಿತು. ವಿರಾಮಕಾಲ ಕಳೆಯಲು ನಿರ್ಮಾಣವಾದ ಈ ಕೇಂದ್ರಗಳಿಗೆ 'ವಿರಾಮಗೃಹ' ಎಂದರೆ 'Schola' ಎಂಬ ನಾಮಕರಣವಾಯಿತು. ಮುಂದೆ ವ್ಯಾಯಾಮಕ್ಕೆ ಹೊಂದಿಸಿ ಶರೀರಶಾಸ್ತ್ರ, ಆಹಾರಶಾಸ್ತ್ರ, ಯುದ್ಧಕವಾಯತು, ಅದಕ್ಕೆ ಬೇಕಾದ ವಿಜ್ಞಾನ, ಗಣಿತ, ರಾತ್ರಿ ಹಗಲುಗಳ ಅಧ್ಯಯನಕ್ಕೆ ಜ್ಯೋತಿಷ್ಯಜ್ಞಾನ ಇತ್ಯಾದಿ ಸೇರಿಕೊಂಡವು. ಹಾಗೇ music


'ಸಂಗೀತ'ಕ್ಕೆ ಹೊಂದಿಸಿ, ಭಾಷೆ, ಉಚ್ಚಾರ, ವ್ಯಾಕರಣ, ಸಾಹಿತ್ಯ, ಕಾವ್ಯ, ಸಮಾಜಜ್ಞಾನ, ರಾಜಕೀಯ ಜ್ಞಾನ-ಇವು ಸೇರಿಕೊಂಡವು. ಮೂಲತಃ ವಿರಾಮವೇ ಅವುಗಳ ಉದ್ದೇಶ. ಇವೇ ಇತಿಹಾಸದ ಗತಿಯಲ್ಲಿ School 'ಶಾಲೆ'ಗಳಾಗಿ ಮಧ್ಯಯುಗದಲ್ಲಿ ವಿದ್ಯಾಲಯಗಳಾಗಿ, ವಿಶ್ವವಿದ್ಯಾಲಯಗಳಾಗಿ ವಿಸ್ತಾರಗೊಂಡವು. ಈ ತಳ ಬದಲಾಗಿಲ್ಲ. ಈ ವಿಷಯಗಳ ಸಂಕರವೇ ಇಂದು ಶಾಲಾಭ್ಯಾಸ, ಕಾಲೇಜಾಭ್ಯಾಸಗಳಾಗಿ ಮುಂದುವರಿದಿದೆ.

ಆದರೆ `ಶಿಕ್ಷಣ'ವೆಂಬ ಪದ ಭಾರತೀಯ ಮೂಲದ್ದು. 'ಶಾಸ್'-ಶಿಸ್ತು - ಇದು ಅದರ ತಳಹದಿ. ಶರೀರ, ಬುದ್ಧಿ, ಮನಸ್ಸು, ಆತ್ಮಗಳನ್ನು ಒಂದು ಶಿಸ್ತಿಗೆ ಒಳಪಡಿಸಿ ಶಿಸ್ತಿನ ಸ್ವಯಂಪೂರ್ಣ ವ್ಯಕ್ತಿ-ನಾಗರಿಕ-ನಿರ್ಮಾಣವೇ ಗುರುಕುಲದ ಗುರಿಯಾಯಿತು. ಅದರ ನಿಯಂತ್ರಣ, ವಿಕಾಸ, ಪರಿವರ್ತನೆ ಎಲ್ಲ ಗುರುಗಳ ಕೈಯಲ್ಲಿ ಗುರುಕುಲವಾಸದಲ್ಲಿ ಗುರು-ಶಿಷ್ಯರು ಕೂಡಿ ಶುಲ್ಕರಹಿತವಾದ ಪರಾ-ಅಪರಾ ವಿದ್ಯೆ ಪಡೆದು, ಶಿಸ್ತಿನ ವ್ಯಕ್ತಿಗಳಾಗಿ, ಹೊರಬೀಳುತ್ತಿರುವ ನಾಗರಿಕರು ಸಮಾಜದ ಸುಖ-ಶಾಂತಿಗಳಿಗೆ ತಮ್ಮನ್ನು ಸಮರ್ಪಿಸಿ ಕೊಳ್ಳುತ್ತಿದ್ದರು.

ಇಂದು ಸರ್ಕಾರ-ಸಮಾಜ-ದೇಶ ವ್ಯವಸ್ಥೆ ಮಾಡಿದ್ದು, ನೌಕರಿಗೆ ಸಂಬಂಧಪಟ್ಟ, ವಿದ್ಯೆ ಕೌಶಲಗಳನ್ನು ನೀಡುವುದಕ್ಕಾಗಿ ಶಾಲಾ ಕಾಲೇಜುಗಳು. ಆದರೆ ಬಯಸುವ ಫಲ ಮಾತ್ರ ಮೌಲ್ಯಬದ್ಧ-ಶಿಸ್ತಿನ ನಾಗರಿಕರನ್ನು ಈ ಗುರಿ-ಸಾಧನಗಳ ವಿಸಂಗತತೆಯಲ್ಲಿ ಇಂದಿನ ದೋಷಗಳ ಮೂಲ ಅಡಗಿದೆ. "You can't grow figs out of thorns" ಎಂಬ ಇಂಗ್ಲೀಷ್ ಗಾದೆಯಿದೆ. ಬಿತ್ತುವದೊಂದು; ಬಯಸುವ ಬೆಳೆ ಬೇರೊಂದು. ಈ ವಿರೋಧವನ್ನು ಜನ ತಿಳಿದುಕೊಳ್ಳಬೇಕು.

ಸಂಪೂರ್ಣ ವ್ಯಕ್ತಿತ್ವ

"All-round development of the child is the aim of education" ಎಂದರೆ ಮಗುವಿನ ಸಂಪೂರ್ಣ ವ್ಯಕ್ತಿತ್ವವಿಕಾಸವೇ ಶಿಕ್ಷಣದ ಗುರಿ ಎಂದು ಎಲ್ಲರೂ ಹೇಳುವವರೆ. ಹಾಗೆಂದರೇನು? ಈ 'all-round'ದಲ್ಲಿ ಅಡಕವಾದ ಅಂಶಗಳು ಯಾವುವು? ಇವುಗಳ ಸ್ಪಷ್ಟಕಲ್ಪನೆ ಬಹುಜನರಿಗೆ ಇದ್ದಂತಿಲ್ಲ. ಸುದೈವದಿಂದ 1986ರ (1992ರಲ್ಲಿ ಸುಧಾರಿಸಿದ್ದು) ಹೊಸ ಶಿಕ್ಷಣನೀತಿಯಲ್ಲಿ, ಅದನ್ನು ವಿವರಿಸುವ ಶಾಲಾಭ್ಯಾಸಕ್ರಮ ನಿರೂಪಣೆಯ ಪುಸ್ತಿಕೆಯಲ್ಲಿ (Curriculum Framework) ಚಿತ್ರಮುಖೇನ ಸ್ಪಷ್ಟೀಕರಿಸ ಲಾಗಿದೆ.



1. ಭಾಷೆಗಳು (Languages)
2. ಸಮಾಜಜ್ಞಾನ (Social studies)
3. ಗಣಿತ (Mathematics)
4. ವಿಜ್ಞಾನ (Science)
5. ಆರೋಗ್ಯಶಿಕ್ಷಣ (ಶಾರೀರಿಕ ಶಿಕ್ಷಣ ಸಹಿತ)
6. ಉತ್ಪಾದಕ ಕಾರ್ಯಕೌಶಲ-ಸಮಾಜಸೇವೆ
7. ನೈತಿಕ ಶಿಕ್ಷಣ (ಆಧ್ಯಾತ್ಮಿಕ ಸಹಿತ)
8. ಕಲಾ ಶಿಕ್ಷಣ (ಸಂಗೀತ, ನೃತ್ಯ, ನಾಟಕ, ಚಿತ್ರಕಲೆಗಳನ್ನು ಒಳಗೊಂಡು)

'C' ಎಂದರೆ 'Child-'ಮಗು.

ಸಮಗ್ರ ವ್ಯಕ್ತಿತ್ವದಲ್ಲಿ: ಮಹತ್ವದ ತೂಕದ ಶೇಕಡಾ ಪ್ರಮಾಣ:

1+2+3+4 = ಶೇಕಡಾ 40 ಮಾತ್ರ

5+6+7+8 = ಶೇಕಡಾ 60.


ಈಗಿನ ವಿಷಯಜ್ಞಾನ ವಿಷಯಗಳಿಗೆ ಶೇಕಡಾ 50ಕ್ಕಿಂತ ಕಡಿಮೆ. ವ್ಯಕ್ತಿತ್ವ ವಿಕಾಸದ ಉಳಿದ ಅಂಶಗಳಿಗೆ ಶೇಕಡಾ 60. ಇವೆಲ್ಲ ಪ್ರಥಮ ಆವೃತ್ತಿಯಲ್ಲಿ ಇದ್ದವು. ಮುಂದೆ, academic ವಿಷಯಗಳಿಗೆ ಹೆಚ್ಚು ಒತ್ತುಕೊಟ್ಟು, ಬದಲಾವಣೆ ಮಾಡಿಕೊಳ್ಳಲಾಗಿದೆ.

ಈ ಸದುದ್ದೇಶಿತ, ತುಂಬ ಉಪಯುಕ್ತವಾದ ಯೋಜನೆ ಕೇವಲ ತತ್ವವಾಗೇ ಉಳಿದು, ನೌಕರಿ ಗುರಿಯ ಮುಂಚಿನ ಯೋಜನೆಯೇ ಜಾರಿಯಲ್ಲಿ ಮುಂದುವರೆಯುತ್ತಿರುವುದು ಭಾರತದ ದುರ್ದೈವ.

ವ್ಯಾಖ್ಯೆಗಳು:

ಶಿಕ್ಷಣದ ಅರ್ಥ ಮತ್ತು ಗುರಿಗಳನ್ನು ಅರ್ಥಗರ್ಭಿತ ವ್ಯಾಖ್ಯೆಗಳಲ್ಲಿ ಹೇಳುವುದುಂಟು. ಅಂತಹ ಕೆಲವು ವ್ಯಾಖ್ಯೆಗಳನ್ನು ನೋಡುವ. ಪಾಶ್ಚಾತ್ಯ ಶಿಕ್ಷಣ ತತ್ವಜ್ಞಾನಿಯೊಬ್ಬ, ಶಿಕ್ಷಣದ ಪರಮೋದ್ದೇಶವನ್ನು ಚುಟುಕಾಗಿ 'a sound mind in a sound body' ಎಂದರೆ ಸ್ವಾಸ್ಥ್ಯ ಶರೀರದಲ್ಲಿ ಸ್ವಾಸ್ಥ್ಯಮನಸ್ಸನ್ನು ವಿಕಸಿಸಿ ಸ್ಥಾಪಿಸುವುದು' ಎಂದಿದ್ದಾರೆ. ಈ ವ್ಯಾಖ್ಯೆಯಲ್ಲಿ ಶರೀರ ಮತ್ತು ಮನಸ್ಸು ಇವೆರಡರ ವಿಕಾಸವನ್ನು ಅಳವಡಿಸಲಾಗಿದೆ. ಸಂಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಇಷ್ಟೇ ಸಾಲದು. 'ಆತ್ಮವಿಕಾಸ'ದ ಅಂಶ ಇದರಲ್ಲಿ ಸೇರಲೇ ಬೇಕು. ಇದು ಅಪ್ಪಟ ಭಾರತೀಯ ದೃಷ್ಟಿಕೋನ. ಎಲ್ಲರಲ್ಲಿಯೂ ಪರಮಾತ್ಮನ ಅಂಶವಿದೆ. ಆ ಅಂಶ ಪರಮಾತ್ಮನಂತೆ ಪರಿಪೂರ್ಣ (perfect) ಆದದ್ದು. ಸುಪ್ತಸ್ಥಿತಿಯಲ್ಲಿ ಇದ್ದುದನ್ನು ವಿಕಸಿಸುವುದು, ಪ್ರಕಟಗೊಳಿಸುವುದು ಶಿಕ್ಷಣದ ಮುಖ್ಯಗುರಿ. "ಹುಟ್ಟಿನಿಂದಲೇ ಮಾನವನಲ್ಲಿ ಹುದುಗಿದ ಪರಿಪೂರ್ಣತೆಯ ಆವಿಷ್ಕಾರವೇ ಶಿಕ್ಷಣ" ಎಂದು ಸಾರಿದವರು ಸ್ವಾಮಿ ವಿವೇಕಾನಂದರು. ಆತ್ಮಜ್ಞಾನವೇ ಋಷಿಗಳ ಕಾಲದ ಗುರುಕುಲಗಳಲ್ಲಿ ಪ್ರಧಾನ ಕೇಂದ್ರವಾಗಿತ್ತು. ಅದನ್ನು ಮತ್ತೆ ಅಳವಡಿಸಿ, ಆಧುನಿಕ ಗುರುಕುಲ, 'ಶಾಂತಿ ನಿಕೇತನ'ವನ್ನು ಗುರುದೇವ ರವೀಂದ್ರನಾಥ ಠಾಕೂರರು ಸ್ಥಾಪಿಸಿ ಬೆಳೆಸಿದರು. ಪಂಚಕೋಶಗಳ ಪರಿಕಲ್ಪನೆಯ ಆಧಾರದ ಮೇಲೆ ಯೋಗಿ ಶ್ರೀ ಅರವಿಂದರು ತಮ್ಮ ವೈಶಿಷ್ಟ್ಯಪೂರ್ಣವಾದ

ಪಂಚಕೋಶ



"ಸಮಗ್ರ ಶಿಕ್ಷಣ" (Integral Education) ಯೋಜನೆಯನ್ನು ಜಾಗತಿಕ ಕೊಡುಗೆಯಾಗಿ ಭವಿಷ್ಯಕ್ಕೆ ನೀಡಿ, ಜಾರಿಗೊಳಿಸಿ ತೋರಿಸಿದರು.

ಹೊರಗಿನ ವಾತಾವರಣದೊಡನೆ ಪಂಚೇಂದ್ರಿಯದ ಅನ್ನಮಯಕೋಶಕ್ಕೆ ಸಂಪರ್ಕವುಂಟಾದಾಗ ಆ ಕೋಶವನ್ನು ಭೇದಿಸಿ, ಪ್ರಾಣಮಯ, ಮನೋಮಯ, ವಿಜ್ಞಾನಮಯ (ಈಗಿನ science ಅರ್ಥದಲ್ಲಿ ಅಲ್ಲ), 'ಪರಾ', 'ಅಪರಾ'ವಿದ್ಯೆಗಳ ವಿಶೇಷಜ್ಞಾನಕೋಶವನ್ನು ಭೇದಿಸಿ, ಆತ್ಮಕ್ಕೆ ಪರಮಾತ್ಮನ ಅನುಸಂಧಾನವಾಗುವಂತೆ ಮಾಡಿದಾಗ ಆನಂದಮಯ (bliss)ಕೋಶದ ಬಾಗಿಲು ತೆರೆದು, ಪ್ರವೇಶ ದೊರೆತು ಸಾಕ್ಷಾತ್ಕಾರದ ಅನುಭವವಾಗುವುದು. ಜೀವಿಗಳಿಗೆ ಈ ಸಾಕ್ಷಾತ್ಕಾರ ದೊರೆಯಲು ಸಾಧನವಾಗುವುದೇ ಶಿಕ್ಷಣ ಎಂಬ ಅದ್ಭುತಯೋಜನೆ ಭಾರತದ ಕೊಡುಗೆ. ಸಾರ್ವತ್ರಿಕವಾಗಿ, ಸದಾಕಾಲವೂ, ಶಾಶ್ವತವಾಗಿ ಉಳಿಯುವ ಶೈಕ್ಷಣಿಕ ಪರಿಕಲ್ಪನೆ-ಯೋಜನೆ ಇದು.

ವಾಸ್ತವಕ್ಕೆ ಹತ್ತಿರವಾಗಿ, ದಿನನಿತ್ಯದ ಅಗತ್ಯಗಳಿಗೆ ಉಪಯುಕ್ತವಾದ ಶಿಕ್ಷಣದ ಇನ್ನೊಂದು ಯೋಜನೆಯನ್ನು ಮಹಾತ್ಮಾಗಾಂಧಿಯವರು ಭಾರತಕ್ಕೆ ನೀಡಿ ಪ್ರಯೋಗಿಸಿ ತೋರಿಸಿದರು. "ಮಗುವಿನಲ್ಲಿ-ಮಾನವನಲ್ಲಿ ಹುದುಗಿದ ಶ್ರೇಷ್ಠವಾದುದನ್ನು - ಶರೀರ, ಮನಸ್ಸು, ಆತ್ಮ - ಈ ಎಲ್ಲದರಲ್ಲೂ ವಿಕಾಸಗೊಳಿಸುವುದೇ ಶಿಕ್ಷಣ" ಎಂದು ವ್ಯಾಖ್ಯಾನಿಸಿದರು. "ಬೇಸಿಕ್ ಎಜ್ಯುಕೇಶನ್ ಎಂದರೆ "ಮೂಲ ಶಿಕ್ಷಣ"ವೆಂಬುದಾಗಿ ಖ್ಯಾತವಾಯಿತು. ಇವುಗಳ ಸಮಕಾಲೀನವಾಗಿ ಕಾಂಗ್ರಿ, ಹರದ್ವಾರ ಮೊದಲಾದವುಗಳಲ್ಲಿ ಪರಂಪರಾಗತ 'ಗುರುಕುಲ'ಗಳು ಸಾಗಿಬಂದವು. ಆದರೆ ಯಾವ ಕಾಂಗ್ರೆಸ್ ಚಳುವಳಿ ಪಾಶ್ಚಾತ್ಯ ಶಿಕ್ಷಣಕ್ರಮವನ್ನು ಸರಕಾರಕ್ಕಾಗಿ 'ನೌಕರ'ರನ್ನು ನಿರ್ಮಾಣಮಾಡುವ, ಭಾರತೀಯ ಸಂಸ್ಕೃತಿ, ಆಶೋತ್ತರಗಳಿಗೆ ಸ್ಪಂದಿಸಿದ ನಿಸ್ಸತ್ವವ್ಯವಸ್ಥೆಯೆಂದು ಟೀಕಿಸಿ, ಸ್ವಾತಂತ್ರ್ಯ ಬಂದರೆ, ವೈಶಿಷ್ಟ್ಯಪೂರ್ಣ ಭಾರತೀಯ ಶಿಕ್ಷಣವನ್ನು ರೂಪಿಸಲು ಪಣ ತೊಟ್ಟಿದ್ದರೊ, ಅದೇ ನಾಯಕರೇ, ಅದೇ ರಾಷ್ಟ್ರೀಯ ಕಾಂಗ್ರೆಸ್ಸೇ ಅಂತಹ ಶಿಕ್ಷಣಕ್ರಮವನ್ನು ರೂಪಿಸದೆ, ಇದ್ದ ಪಾಶ್ಚಾತ್ಯಶಿಕ್ಷಣಪದ್ಧತಿಯನ್ನೇ ಇನ್ನಷ್ಟು ಭದ್ರವಾಗಿ ಬೆಳೆಸಿಕೊಂಡು ಬಂದುದು ಭಾರತದ

ಮಹಾದುರಂತ. ಅದರ ಪರಿಣಾಮವಾಗಿ ಆಂಗ್ಲಮಾಧ್ಯಮದ ಪರೀಕ್ಷಾಂಕ ಸಾಧನೆಯ ಪ್ರೇರಿತ ಹೆಗ್ಗಣಸ್ಪರ್ಧೆ (rat-race) ನಮ್ಮ ಮೇಲೆ ಸಂಪೂರ್ಣ ಒಡೆತ ಸಾಧಿಸಿದೆ. ಈ ಅಧೋಗತಿಗೆ ಕಾರಣರಾದ ಎಲ್ಲ ರಾಜಕೀಯ ಪಕ್ಷಗಳ ರಾಜಕಾರಣಿಗಳೇ, ಮೌಲ್ಯಕುಸಿತ, ಗುಣಮಟ್ಟ ಕುಸಿತಗಳನ್ನು ಖಂಡಿಸಿ, ಶಿಕ್ಷಣವ್ಯವಸ್ಥೆಯನ್ನು ಪರಿವರ್ತಿಸಲು ಸಮಾಜಕ್ಕೆ ಒಂದೇ ಸಮನೆ ಕೂಗಿ ಕರೆ ನೀಡುತ್ತಿರುವುದು ಒಂದು ಅಣಕ, ವಿಡಂಬನೆ.

ಶಿಕ್ಷಣದ ಉದ್ದೇಶಗಳು

ಶಿಕ್ಷಣದ ಪರಮೋದ್ದೇಶವೆಂದರೆ 'ಸ್ವಸ್ಥಸಮಾಜ ನಿರ್ಮಾಣ'. ಇಲ್ಲಿ ಸ್ವಸ್ಥ ಎಂದರೆ ಶಾರೀರಿಕ, ಬೌದ್ಧಿಕ, ಭಾವನಾತ್ಮಕ, ಆಧ್ಯಾತ್ಮಿಕಸ್ವಾಸ್ಥ್ಯಗಳ ಸಮಗ್ರಸ್ವಾಸ್ಥ್ಯ. ಇದಕ್ಕೆ ಪೋಷಕವಾಗುವಂತೆ ಉಪೋದ್ದೇಶಗಳು ಬೇಕು.

(1) ಮಗುವಿನ ಶಾರೀರಿಕ, ಬೌದ್ಧಿಕ, ಭಾವನಾತ್ಮಕ, ಆಧ್ಯಾತ್ಮಿಕ ವಿಕಾಸ - ಇವುಗಳ ಅಂಗವಾಗಿ -

- (ಅ) ಸಂಬಂಧಿತ ವಿಷಯಗಳ ಜ್ಞಾನ.
- (ಆ) ಸ್ವಾವಲಂಬನೆಗೆ ಬೇಕಾದ ಕ್ರಿಯಾಶಕ್ತಿ-ಕೌಶಲಗಳ ವಿಕಾಸ.
- (ಇ) ಸತ್ಯ, ಧರ್ಮಬುದ್ಧಿ, ಪ್ರಾಮಾಣಿಕತೆ, ವಿನಯ, ಸರ್ವಧರ್ಮ ಸಮಭಾವ, ಐಕ್ಯತಾಭಾವ, ತ್ಯಾಗ, ಸಂಕಟದಲ್ಲಿರುವವರಿಗೆ ಅನುಕಂಪ, ಪರಹಿತ ಕಾಳಜಿ ಮುಂತಾದ ಸಮಾಜ ಸ್ವಾಸ್ಥ್ಯಾನುಗುಣವಾದ ಮೌಲ್ಯಗಳ ವಿಕಾಸ.
- (ಈ) ಪ್ರತಿಫಲಾಪೇಕ್ಷೆಯಿಲ್ಲದೆ, ದುಃಖಿತರ ಕಣ್ಣೀರೊರಸಿ ಸಾಂತ್ವನ ನೀಡುವ, ಕ್ರಿಯಾತ್ಮಕ ಸಹಾಯ ನೀಡುವ, ಉದಾರ ಹೃದಯತೆ.
- (ಉ) ವಿಶ್ವಸ್ವರೂಪಿ ಪರಮಾತ್ಮನ ಭಕ್ತಿಯಲ್ಲಿ, ಆನಂದಾನುಭಾವದಲ್ಲಿ ಸದಾಕಾಲವೂ ಇರುವ ತಾದಾತ್ಮ್ಯತೆ.

(2) ಸಾಮಾಜಿಕ ಸೇವಾಸಂಸ್ಥೆಗಳನ್ನು ಕಟ್ಟಲು, ಕಟ್ಟಿಯೂ ಅಧಿಕಾರ ಸ್ಥಾನಗಳಿಂದ ದೂರಿರುವ ಮುಂದಾಳತ್ವ ವಿಕಾಸ.

(3) ಕಲಾತ್ಮಕ ವಿಕಾಸ - ವೈಯಕ್ತಿಕ ಹಾಗೂ ಗುಂಪಿನದು. ಇವಕ್ಕೆ ಅನೇಕ ವಿವರೋದ್ದೇಶಗಳನ್ನು ಜೋಡಿಸಬಹುದು.

ಶಿಕ್ಷಣಾಡಳಿತದ ಗುರಿಗಳು

(1) ದೋಷ-ದೂಷಣೆ-ಅಹಂಕಾರಗಳ ನಿವಾರಣೆಗೆ ಮೊಟ್ಟ ಮೊದಲು ಎಲ್ಲ ಸ್ಪರ್ಧೆಗಳನ್ನು, ಬಹುಮಾನಗಳನ್ನು, ಪರೀಕ್ಷೆಗಳನ್ನು ರದ್ದುಪಡಿಸಬೇಕು. ಅವುಗಳ ಸ್ಥಳದಲ್ಲಿ ಆತ್ಮಾವಲೋಕನ, ಸ್ವ-ಪರೀಕ್ಷೆಯ ವಿವಿಧ ಸಾಧನಗಳನ್ನು ನೀಡಬೇಕು. ಪ್ರತಿಯೊಂದು ಮಗುವಿಗೆ ತನ್ನದೇ ಆದ ಹುದುಗಿದ ಶಕ್ತಿಗಳಿವೆ. ಅವುಗಳನ್ನು ಪ್ರೇರೇಪಿಸಿ, ತನ್ನ ವೈಯಕ್ತಿಕ ಪ್ರಗತಿಯನ್ನು ತಾನೇ ಸಾಧಿಸುತ್ತ, ಪರೀಕ್ಷಿಸಿಕೊಳ್ಳುತ್ತ, ತಿದ್ದಿಕೊಳ್ಳುತ್ತ ಹೋಗುವುದನ್ನು ಸುಗಮಗೊಳಿಸುವುದೇ ಶಿಕ್ಷಣದ ಪ್ರಕ್ರಿಯೆ. ಇಲ್ಲಿ ಒಬ್ಬ ವಿದ್ಯಾರ್ಥಿ ಇನ್ನೊಬ್ಬನೊಡನೆ ತನ್ನನ್ನು ಹೋಲಿಸಿಕೊಂಡು, ಅಸೂಯೆ ಅಸಮಾಧಾನಕ್ಕೆ ಒಳಗಾಗದಂತೆ, ಅದಕ್ಕೆ ಆಸ್ಪದವೇ ಇರದಂತೆ ಸಾಗಬೇಕು.

ಇದು 'utopia' - ಕಾಲ್ಪನಿಕ ಯೋಜನೆಯಲ್ಲ. ಇದಕ್ಕನ್ವಯಿಸುವ ಫೀ. ಡೊನೇಶನ್

ರಹಿತ, ಊಟ ವಸತಿಗಳಿಗೂ ಫೀ ಇಲ್ಲದ ಒಂದು ಪ್ರತ್ಯಕ್ಷ ಪ್ರಯೋಗ ಜಾರಿಗೊಂಡು ನಾಲ್ಕು ವರ್ಷಗಳಾಗಿವೆ. ಇದು ಬೆಂಗಳೂರು ತಾಲೂಕಿನ ರಾಮೋಹಳ್ಳಿ ಹತ್ತಿರದ ಒಂದು ಗುರುಕುಲ - ಆಧುನಿಕಸಮಗ್ರಶಿಕ್ಷಣದ 'ಮೈತ್ರೇಯಿ' ಗುರುಕುಲ - ನಡೆಯುತ್ತಿದೆ. ಆಸಕ್ತಿಯುಳ್ಳವರು ಸಂದರ್ಶಿಸಿ ಖಾತ್ರಿಮಾಡಿಕೊಳ್ಳಬಹುದು. ಸ್ವಾಗತಕಮಾನು ಹಾಗೂ ಸ್ಥಳಕ್ಕೆ 'ಶುಭಂ ಕರೋತಿ' ಎಂಬ ನಾಮಕರಣವಿದೆ.

(2) 6-14 ವಯಸ್ಸಿನ ಮಕ್ಕಳಿಗೆ ಸಾರ್ವತ್ರಿಕ ಕಡ್ಡಾಯದ, ಶುಲ್ಕರಹಿತ ಪ್ರಾಥಮಿಕ ಶಿಕ್ಷಣ ನೀಡಬೇಕು ಎಂದು ನಮ್ಮ ರಾಜ್ಯಘಟನೆಯ ಕಲಮು 45 ಸಾರುತ್ತಿದೆ. ಯಾವ ರಾಜಕೀಯ ಪಕ್ಷಗಳೂ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಆದ್ದರಿಂದ, ಸುಳ್ಳು ಪ್ರಚಾರ, ಅಂಕಿ-ಅಂಶಗಳ ಹಾರಾಟ, ಆತ್ಮಸ್ತುತಿ, ಪರನಿಂದೆ, ಇವೆಲ್ಲಾ ಸರಕಾರದಿಂದ ನಡೆಯುತ್ತಿವೆ. ಶಿಕ್ಷಣಕ್ಕಾಗಿ, ಒಳ್ಳೆಯ ಶಿಕ್ಷಣಕ್ಕಾಗಿ ಪಾಲಕರಿಗಿರುವ ಆಳವಾದ ಆಸೆಯ ದುರ್ಲಾಭ ಪಡೆದು ಅಂಥವರನ್ನು ಡೊನೇಶನ್ ಹಾವಳಿಗೆ ಒಳಗಾಗಿಸಿ, ಶಿಕ್ಷಣವನ್ನು ವ್ಯಾಪಾರೀಕರಿಸಿ, ಕೊಳ್ಳೆಹೊಡೆಯುವ ಕೆಲಸವನ್ನು ಖಾಸಗಿಸಂಸ್ಥೆಗಳು ಮಾಡುತ್ತಿವೆ. ಸರಕಾರ ಹೇಡಿಯಂತೆ ಕೈಚೆಲ್ಲಿ ತೆಪ್ಪಗಿದೆ. ಅವರಿಗೆ ಇದನ್ನು ತಡೆಯುವ ಮಾರ್ಗಗಳ ಸಲಹೆ ಕೊಡುವವರಿಲ್ಲ; ಕೊಡುವ ಯೋಗ್ಯರನ್ನು ಸರಕಾರ ಕೇಳುವುದಿಲ್ಲ. ಶುಲ್ಕರಹಿತ, ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ಸರಕಾರಕ್ಕೆ ನಿಜವಾದ ಕಳಕಳಿ ಇದ್ದರೆ ಈ ಕೆಳಗಿನ ಕ್ರಮ ಕೈಕೊಳ್ಳಬೇಕು:-

(1) 6-14 ವಯಸ್ಸಿನ ಮಕ್ಕಳು ಸೇರಿದರೆ, ಅದಕ್ಕೆ ಎಷ್ಟು ಬೇಕೋ ಅಷ್ಟು ಶಾಲೆಗಳನ್ನು ಸರಕಾರ ಪ್ರಾರಂಭಿಸಬೇಕು.

(2) ಶುಲ್ಕ ಬೇಡುವ, ಡೊನೇಶನ್ ಬೇಡುವ ಶಾಲೆಗಳಿಗೆ ಅನುಸರಿಸಬೇಕಾದ ಕಾನೂನು ಮಾಡಬೇಕು. ಅದರಲ್ಲಿ ಅಂತಹ ಶಾಲೆ ನಡೆಸುವವರನ್ನು 6 ತಿಂಗಳು ಜೇಲಿಗೆ ಹಾಕುವ ಶಿಕ್ಷೆಗೆ ಅವಕಾಶವಿರಬೇಕು.

(3) ಪ್ರಾಥಮಿಕ ಹಂತದ ಶಾಲೆಗಳಿಗೆ(ಖಾಸಗಿ) ಪೂರ್ತಿಯಾಗಿ ಅನುದಾನ ನಿಲ್ಲಿಸಬೇಕು. ಆ ಶಾಲೆಗಳನ್ನು ಸರಕಾರ ಸ್ವಾಧೀನಪಡಿಸಿಕೊಳ್ಳಬೇಕು. ಹೊಸ ಪ್ರಾಥಮಿಕ ಶಾಲೆಗಳನ್ನು (ಅಲ್ಪ ಸಂಖ್ಯಾತರೂ ಸೇರಿದಂತೆ) ತೆರೆಯಲು ಅನುಮತಿಯನ್ನೇ ನೀಡಕೂಡದು. ಇದರಲ್ಲಿ ಪೂರ್ವಪ್ರಾಥಮಿಕ ಹಂತವೂ ಸೇರಿರಬೇಕು.

(4) ಖಾಸಗಿ ಸಂಸ್ಥೆಗಳು ಶುಲ್ಕ, ಡೊನೇಶನ್ ಚಾರ್ಜ್ ಮಾಡಿ, ಪ್ರೌಢಶಾಲೆ, ಕಾಲೇಜುಗಳನ್ನು ನಡೆಸಲು ವಿಧಿಸಿದ ಸ್ಥೂಲ ಚೌಕಟ್ಟಿನಲ್ಲಿ ಮುಕ್ತಾವಕಾಶ ಕೊಡಬೇಕು. ಅಪವಾದವಿಲ್ಲದೆ ಎಲ್ಲವೂ ಅನುದಾನರಹಿತವಾಗಿರಬೇಕು.

(5) ಅಲ್ಪಸಂಖ್ಯಾತರು ರಾಜ್ಯಘಟನೆಯ ಕಲಮು 29 ಮತ್ತು 30ರ ಅಡಿ ತಮ್ಮ ಸಂಸ್ಕೃತಿ ರಕ್ಷಣೆಗೆ, ತಮಗೆ ಬೇಕಾದ ಶಾಲೆ-ಕಾಲೇಜು ತೆಗೆದು ನಡೆಸಿಕೊಂಡು ಹೋಗಲು ವಿಶೇಷಾವಕಾಶವಿದೆ. ಅಲ್ಪಸಂಖ್ಯಾತರೆಂಬ ಆಧಾರದ ಮೇಲೆ ಅವರಿಗೆ ಅನುದಾನ ನಿರಾಕರಿಸಬಾರದೆಂದಿದೆ. ಆದರೆ, ಶುಲ್ಕರಹಿತ, ಸಾರ್ವತ್ರಿಕ, ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾಯ್ದೆ ಮಾಡಿ ಜಾರಿಗೆ ತಂದರೆ ಮತ್ತು ನಾನು ಈ ಮೊದಲೇ ಹೇಳಿದಂತೆ ಯಾರಿಗೂ ಅನುದಾನ ನೀಡದಿದ್ದರೆ, ಅಲ್ಪಸಂಖ್ಯಾತರ ಸಂಸ್ಥೆಗಳೂ ಶುಲ್ಕರಹಿತ ಪ್ರಾಥಮಿಕ ಶಾಲೆ

ನಡೆಸಬಹುದು. ಆದರೆ ಅನುದಾನ ಬೇಡಲಾಗದು. ಈಗ ಸರಕಾರ ಖಾಸಗಿ ಪ್ರಾಥಮಿಕ ಶಿಕ್ಷಣಸಂಸ್ಥೆಗಳಿಗೆ ನೀಡುವ ಅನುದಾನ ಹಣದ ಉಳಿತಾಯವಾಗಿ, ಅದರಿಂದ ಹೆಚ್ಚುಹೆಚ್ಚಾಗಿ ಸರಕಾರಿ ಶಾಲೆಗಳನ್ನು ಪ್ರಾರಂಭಿಸಿ, ನಡೆಸಲು ಉಪಯೋಗವಾಗುವುದು.

(6) ಪ್ರೌಢಶಾಲಾ ಹಂತದ ವಿಚಾರ: ವರ್ಗ I ರಿಂದ Xರವರೆಗೆ ಶುಲ್ಕರಹಿತ ಶಿಕ್ಷಣ ನೀಡುವ ಯೋಜನೆ ನನ್ನ ದೃಷ್ಟಿಯಲ್ಲಿ ಹುಚ್ಚುತನದ್ದು. ಶುಲ್ಕರಹಿತ ಶಿಕ್ಷಣ ಕೇವಲ ಸರಕಾರಿ ಶಾಲೆಗಳಲ್ಲಿ ಮಾತ್ರ ಎಂದುಕೊಂಡರೆ, ಶುಲ್ಕ, ಡೊನೇಶನ್ ಪಡೆದು, ಮೀಸಲಾತಿ ನಿಯಮಕ್ಕೊಳಗಾಗದೆ ಕೇವಲ ಗುಣಮಟ್ಟ, ಶಿಕ್ಷಣಸೇವೆಗೆ ಅರ್ಪಿತರಾದವರನ್ನು ನೇಮಿಸಿಕೊಂಡು, ಅಂಕೆಯಲ್ಲಿಟ್ಟುಕೊಂಡು, ಕಡಿಮೆ ಸಂಬಳದಲ್ಲಿ, ಹೆಚ್ಚಿನ ಗುಣಮಟ್ಟದ ಶಾಲೆಗಳನ್ನು ನಡೆಸುವ ಖಾಸಗಿ ಶಾಲೆಗಳೊಡನೆ ಸರಕಾರಿ ಶಾಲೆಗಳನ್ನು ಹೋಲಿಸಿ, ಶೇಕಡಾ ಕಡಿಮೆ ಪ್ರಮಾಣದ ಫಲಿತಾಂಶ ತರುವ ಶಾಲಾ ಶಿಕ್ಷಕರನ್ನು ಶಿಕ್ಷೆಗೆ ಗುರಿಪಡಿಸುವುದು. ಆ ರೀತಿ ಧಮಕಿ ಕೊಡುವುದು ಕಾನೂನುಬಾಹಿರ ಮತ್ತು ಸಮರ್ಥನೀಯ ವಲ್ಲ. ಇಂತಹ ಹುಚ್ಚು ಸಲಹೆಗಳನ್ನು ಸರಕಾರಕ್ಕೆ ಯಾರು ನೀಡುತ್ತಾರೊ ಗೊತ್ತಿಲ್ಲ. ಶಾಸನಬದ್ಧ ಸಮಗ್ರ ಶಿಕ್ಷಣ ಶಾಸನದ ಅಧ್ಯಾಯ 16ರಲ್ಲಿ ಹೇಳಿದ ಸಲಹಾಸಮಿತಿಗಳಿಲ್ಲದಿರುವುದೇ ಈ ಹುಚ್ಚು ಸಾಹಸಗಳಿಗೆ ಕಾರಣ.

ಎರಡನೆಯದಾಗಿ ಪ್ರೌಢಶಿಕ್ಷಣವೂ ಶುಲ್ಕರಹಿತವಾಗುವುದೆಂಬ ಧೋರಣೆ ಯಿಂದ ಎಲ್ಲ ಖಾಸಗೀ ಶಾಲೆಗಳಿಗೂ ಅನುದಾನ ನೀಡಲೇಬೇಕಾದ ಪೇಚಿಗೆ ಕೋರ್ಟು ಸಿಲುಕಿಸಿರುವುದರಿಂದ ಈ ವರ್ಷ ಯಾವ ಖಾಸಗಿ ಶಾಲೆಗೂ ಅನುಮತಿ ನೀಡದಿರುವ chain-reaction ಗೆ ಸರಕಾರ ಒಳಗಾಗಿದೆ. ಅನುದಾನ ರಹಿತವಾಗಿ, ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆದವರಿಗೂ ಅನುಮತಿ ಇಲ್ಲ. ಇದರಿಂದ ಕನ್ನಡಕ್ಕೆ ಹೊಡೆತ ಬಿದ್ದಿದೆ. ಇವರ ಹೊಣೆಯನ್ನು, ಪಾಪವನ್ನು ಸರಕಾರ ತಪ್ಪಿಸಿಕೊಳ್ಳಲಾಗದು.

ಪರಿಹಾರವೇನು?

(1) ಪ್ರೌಢಶಾಲಾ ಹಂತದಲ್ಲಿ ಶುಲ್ಕರಹಿತ ಶಿಕ್ಷಣ ನೀಡುವ ನೀತಿಯನ್ನು ಕೈಬಿಡಬೇಕು.

(2) ಪ್ರೌಢಶಾಲಾ ಹಂತದ ಬಡವಿದ್ಯಾರ್ಥಿಗಳಿಗೆ ಸಾಕಾಗುವಷ್ಟು, Freeships-ಶುಲ್ಕಮುಕ್ತಿಯನ್ನು ನೀಡಬೇಕು. ಈ freeship ಎಷ್ಟು, ಹಣದ್ದಾಗಬೇಕೆಂಬುದನ್ನು ನಿರ್ಧರಿಸಿ, ಎಲ್ಲ ಖಾಸಗಿ ಶಾಲೆಗಳು ಕಡ್ಡಾಯವಾಗಿ ಮಿತಿಗೊಳಪಡುವಂತೆ ಕಾನೂನು ಮಾಡಬೇಕು. ಇದು ಕಾನೂನು ಬದ್ಧವಾಗುವುದು.

(3) ಶಾಲಾಭ್ಯಾಸದ ಗಣಮಟ್ಟ, ಶಾಲಾಡಳಿತದ ಪರಿಣಾಮಕಾರಿತ್ವ ಈ ಎರಡನ್ನು ಒಳಗೊಂಡ ವಾರ್ಷಿಕ ಶಾಲಾತಪಾಸನೆ, ಮಾರ್ಗದರ್ಶನ ತಪ್ಪದೆ ಸಾಗಬೇಕು.

(4) ತಜ್ಞ ಸಲಹಾ ಮಂಡಳಿ ರಚಿಸಿ, ಅವರ ಸಲಹೆಯನ್ವಯ ಆಡಳಿತ ಸಾಗಬೇಕು.

ಸ್ವಾಮಿ ವಿವೇಕಾನಂದ ಮತ್ತು ಅರವಿಂದರ ಶೈಕ್ಷಣಿಕ ಕೊಡುಗೆಗಳು - ಒಂದು ಚಿಂತನೆ

ಆರ್. ನಾಗರಾಜಯ್ಯ

ಸ್ವಾಮಿ ವಿವೇಕಾನಂದರು ಆಧುನಿಕ ಭಾರತದಲ್ಲಿ ಜನ್ಮತಾಳಿದ ಒಬ್ಬ ಮಹಾಪುರುಷ; ಭಾರತದ ಐತಿಹಾಸಿಕ ಸಾಂಸ್ಕೃತಿಕ ಪರಂಪರೆಯಲ್ಲಿನ ಅಗ್ರಮಾನ್ಯ ಪ್ರಯೋಗಿಕ ಸನ್ಯಾಸಿ. ದೇಶಾಭಿಮಾನಿ, ಮೇಧಾವಿ, ತತ್ವಜ್ಞಾನಿ, ಚಿಂತಕ ಹಾಗೂ ಆಧ್ಯಾತ್ಮಿಕ ಗುರು. ತನ್ನ ಜೀವನವಲ್ಲಿ ಕಂಡಂತಹ ಅಂಶಗಳನ್ನು ಆಚರಣೆಯಲ್ಲಿ ತರಲು ಹಂಬಲಿಸಿದ ಧೀಮಂತ ನಾಯಕ. ಮನುಷ್ಯನ ಅತ್ಯಂತ ಎತ್ತರವಾದ ಗುರಿ ಎಂದರೆ ಸೃಷ್ಟಿಕರ್ತನ ಜೊತೆ ಐಕ್ಯವಾಗುವುದು. ಮನುಷ್ಯನ ಜೀವನ ಅಪರೂಪನಾದದ್ದು, ಅನಂತವಾದದ್ದು, ಆದ್ದರಿಂದ ಸಂಪೂರ್ಣತೆಯ ಕಡೆ ನಮ್ಮನ್ನು ಕೊಂಡೊಯ್ಯಲು ಶಿಕ್ಷಣ ಬೇಕು ಎಂದು ದೇಶ ವಿದೇಶಗಳಲ್ಲಿ ತನ್ನ ಪ್ರಭಾವೀ ಭಾಷಣಗಳಿಂದ ಸಾರಿದ ಮಹಾಜ್ಞಾನಿ.

ಸ್ವಾಮಿ ವಿವೇಕಾನಂದರು ಚಿಕ್ಕವಯಸ್ಸಿನಿಂದ ಬೌದ್ಧಿಕ ಚಿಂತನೆಗೆ ತೊಡಗಿದ್ದ ಒಬ್ಬ ಮಹಾಚಿಂತಕರು. ಹಿಂದೂಧರ್ಮದ ತತ್ವಗಳ ಬಗ್ಗೆ ತಮ್ಮ ತಾಯಿಯಿಂದ ಅನೇಕ ಅಂಶಗಳನ್ನು ತಿಳಿದುಕೊಂಡಿದ್ದರು. ಹದಿನೆಂಟನೆಯ ವಯಸ್ಸಿನಲ್ಲಿ ಆಧ್ಯಾತ್ಮಿಕ ದಾಹದಿಂದ ಅದಕ್ಕೆ ಪರಿಹಾರ ಕಂಡುಕೊಳ್ಳಲೋಸುಗ ತಮ್ಮ ಗುರು ರಾಮಕೃಷ್ಣ ಪರಮಹಂಸರ ಸಾನಿಧ್ಯಕ್ಕೆ ಬಂದು ವೈಚಾರಿಕತೆಯ ಸಂವಾದಕ್ಕಿಳಿಯುತ್ತಾರೆ.

ಕ್ರಿ.ಶ. 1886ರಲ್ಲಿ ರಾಮಕೃಷ್ಣ ಪರಮಹಂಸರ ನಿಧನದ ನಂತರ ಗುರು ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿಯು ಸ್ವಾಮಿ ವಿವೇಕನಂದರ ಪಾಲಿಗೆ ಬರುತ್ತದೆ. ಇಂತಹ ವಿಷಯವನ್ನು ಬಹಳ ಭಕ್ತಿಯಿಂದ, ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಮಾಡಿದ ಕೀರ್ತಿ ವಿವೇಕಾನಂದರಿಗೆ ಸಲ್ಲುತ್ತದೆ. ಕ್ರಿ.ಶ. 1893ರಲ್ಲಿ ಅಮೇರಿಕಾದ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿ ಮಾಡಿದ ಭಾಷಣದಿಂದಲೇ ಭಾರತದ ಕೀರ್ತಿ ಬೇರೆ ರಾಷ್ಟ್ರಗಳಿಗೆ ಹರಡಲು ಕಾರಣವಾಯಿತು. ಇದು ಸ್ವಾಮೀಜಿಯವರ ಜೀವನದಲ್ಲಿ ಸ್ಮರಣೀಯ ಘಟನೆ.

ಸ್ವಾಮಿ ವಿವೇಕನಂದರ ಪ್ರಕಾರ ಶಿಕ್ಷಣ ವ್ಯಕ್ತಿಯಲ್ಲಿ ಅಡಕವಾಗಿರುವ ಪ್ರತಿಭೆ. "Education is the manifestation of devine perfection already in man." ಅಂದರೆ ಯಾವ ಜ್ಞಾನವೂ ಹೊರಗಿನಿಂದ ಬರುವುದಿಲ್ಲ, ವ್ಯಕ್ತಿಯಲ್ಲಿಯೇ ಅಡಕವಾಗಿರುತ್ತದೆ. ಅಂತಹ ಜ್ಞಾನವನ್ನು ಗೋಚರವಾಗುವಂತೆ ವ್ಯಕ್ತಿಗೆ ದೊರಕಿಸಿ ಕೊಡುವುದೇ ಶಿಕ್ಷಣದ ಮುಖ್ಯಕಾರ್ಯ. ಆದರೆ ಜ್ಞಾನ ಸುಮ್ಮನೆ ಕೈಕಟ್ಟಿ ಕುಳಿತರೆ ಬರುವುದಿಲ್ಲ. ವ್ಯಕ್ತಿ ಜ್ಞಾನಕ್ಕಾಗಿ ಹುಡುಕಾಡಬೇಕು. ತನ್ನಲ್ಲಿಅಡಗಿರುವ ಎಲ್ಲಾ ಪ್ರತಿಭೆಗಳು ಹೊರಬರಬೇಕಾದರೆ ವ್ಯಕ್ತಿಗೆ ಆಂತರಿಕ ಜ್ಞಾನದ ಅರಿವುಬೇಕು. ವ್ಯಕ್ತಿಗೆ ಅಂತಹ ಆಂತರಿಕ

ಅವಲೋಕನದ ಪ್ರಯಾಣ ಮಾಡಲು ಬೇಕಾಗುವ ಸ್ಫೂರ್ತಿಯನ್ನು ಹಾಗೂ ದೀಕ್ಷೆಯನ್ನು ಶಿಕ್ಷಣ ಕೊಡಬೇಕು.

ಸ್ವಾಮಿ ವಿವೇಕನಂದರ ಪ್ರಕಾರ ವ್ಯಕ್ತಿಗೆ ತನ್ನ ನಡತೆಯಲ್ಲಿ ಪರಿಪಕ್ವತೆಯನ್ನು ಸಾಧಿಸಲು ಬೇಕಾದ ಶಕ್ತಿಯನ್ನು ಶಿಕ್ಷಣ ಕೊಡಬೇಕು. ಶಿಕ್ಷಣ ವ್ಯಕ್ತಿಯ ಬೌದ್ಧಿಕ ಸಾಮರ್ಥ್ಯ ಮತ್ತು ನೈತಿಕ ತರಬೇತಿಗೆ ಬೇಕಾದ ಅಂಶಗಳನ್ನು ಕೊಡಬೇಕು. ವಿವೇಕಾನಂದರಿಗೆ ಪ್ರಸ್ತುತ ಶಿಕ್ಷಣ ಪದ್ಧತಿಯಲ್ಲಿ ನಂಬಿಕೆ ಇರಲಿಲ್ಲ. ಕಾರಣ ಅದು ವ್ಯಕ್ತಿಯ ಮೆದುಳಿಗೆ ಕೊಡುವ ವ್ಯಾಯಾಮವಾಗುತ್ತದೆ. ಕಲಿತದ್ದು ಜೀರ್ಣವಾಗದೆ, ಅಜೀರ್ಣವಾಗುತ್ತದೆ. ಯಾವ ಜ್ಞಾನ ಮತ್ತು ಕಲಿಕೆ ನಮ್ಮ ದಿನನಿತ್ಯದ ಕೆಲಸ ಕಾರ್ಯಗಳ ಪೂರೈಕೆಗೆ ಸಾಧ್ಯವಿಲ್ಲವೋ ಅವು ಪ್ರಯೋಜನವಿಲ್ಲದವು. ಸ್ವಾಮೀಜಿಯವರ ಮಾತಿನಲ್ಲಿ ಹೇಳುವುದಾದರೆ ನಮ್ಮ ಶಿಕ್ಷಣ ವ್ಯಕ್ತಿಯಲ್ಲಿ ನಡತೆಯನ್ನು ಬೆಳೆಸುವುದು, ಮೆದುಳಿನ ಶಕ್ತಿಯನ್ನು ಹೆಚ್ಚಿಸುವುದು, ಬೌದ್ಧಿಕ ವಿಕಾಸವನ್ನು ಉಂಟುಮಾಡುವುದು, ಜೊತೆಗೆ ವ್ಯಕ್ತಿಯ ಪರಾವಲಂಬಿತನವನ್ನು ತಪ್ಪಿಸುವುದು. ಶಿಕ್ಷಣವು ಬೌದ್ಧಿಕವಾಗಿ ಮಾಡುವ ಹೋರಾಟವಾಗಬಾರದು, ಅದು ವ್ಯಕ್ತಿಯಲ್ಲಿ ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಶಕ್ತಿಯನ್ನು ಬೆಳೆಸುವಂತಾಗಬೇಕು. ಸ್ವಾಮೀಜಿಯವರ ಪ್ರಕಾರ ಬಡವರ ಕಷ್ಟಕ್ಕೆ ದೀನದಲಿತರ ಕ್ಷೇಮಾಭಿವೃದ್ಧಿಗೆ ಯಾರು ಶ್ರಮಸುತ್ತಾರೆಯೋ ಅವರೇ ಮಹಾತ್ಮರು. ಅಂತಹ ಜನರೇ ನಮ್ಮ ದೇವರುಗಳು, ಅವರೇ ನಿಜವಾದ ಸುಶಿಕ್ಷಕರು.

ಸ್ವಾಮಿವಿವೇಕಾನಂದರ ಪ್ರಕಾರ ಶಿಕ್ಷಣದ ಮುಖ್ಯವಾದ ಗುರಿ ಶೀಲವೃದ್ಧಿ ಮಾಡುವುದು, ವೈಯಕ್ತಿಕ ಬೆಳವಣಿಗೆಗಾಗಿ, ಆಧ್ಯಾತ್ಮಿಕ ಬೆಳವಣಿಗೆಗಾಗಿ ಮಾನವ ಜನಾಂಗದ ಸೇವೆಗಾಗಿ, ಸ್ವಯಂಪಾಲನೆಗಾಗಿ ಮತ್ತು ದೈಹಿಕ ಸಾಮರ್ಥ್ಯದ ಬೆಳವಣಿಗೆಗಾಗಿ ಶ್ರಮಿಸುವುದು.

ಸ್ವಾಮೀಜಿಯುವರು ಶಿಕ್ಷಣಕ್ಷೇತ್ರದಲ್ಲಿ ಅತಿ ಹೆಚ್ಚಿನ ಮಹತ್ವ ನೀಡಿರುವುದು, ಗುರು ಮತ್ತು ಶಿಷ್ಯರ ಸಂಬಂಧಕ್ಕೆ. ಗುರು ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿ. ಶಕ್ತಿಯಿಂದ ಶಿಷ್ಯರನ್ನು ಪ್ರೇರೇಪಿಸಬೇಕು; ಹುರಿದುಂಬಿಸಬೇಕು. ಭಾರತೀಯ ಯುವಪೀಳಿಗೆಗೆ ವಿವೇಕಾನಂದರ ವಾಣಿ "ಏಳಿ! ಎದ್ದೇಳಿ! ಗುರಿ ಮುಟ್ಟುವವರೆಗೆ ನಿಲ್ಲಬೇಡಿ". ಶಿಕ್ಷಕರು ಮೇಧಾವಿಗಳಾಗಿರಬೇಕು, ಆಧ್ಯಾತ್ಮಿಕ ಬೆಳಕಾಗಿರಬೇಕು, ನಕ್ಷತ್ರದಂತೆ ಪ್ರಕಾಶಮಾನ ವಾಗಿರಬೇಕು, ಆದರೆ ಸ್ವಾರ್ಥಿಯಾಗಿರಬಾರದು, ಶಿಕ್ಷಕರು ಸ್ವಾರ್ಥಿಯಾಗಿ ಕೆಲಸ ಮಾಡಿದರೆ ಒಂದು ಜನಾಂಗವೇ ನಾಶವಾಗುತ್ತದೆ. ಆದ್ದರಿಂದ ಶಿಕ್ಷಕರು ತ್ಯಾಗ ಮನೋಭಾವನೆಯಿಂದ ಕೆಲಸ ಮಾಡಬೇಕು. ಅದರಲ್ಲಿ ಶಿಷ್ಯನ ಜೀವನದ ಬಗ್ಗೆ ಸ್ವಾಮೀಜಿಯವರು ಸೂಕ್ತವಾಗಿ ಹೇಳಿದ್ದಾರೆ. ಶಿಷ್ಯ ಜ್ಞಾನದಾಹದಿಂದ ಕೂಡಿರಬೇಕು, ಎಲ್ಲಾ ರೀತಿಯ ವ್ಯಾಮೋಹಗಳಿಂದ ಮುಕ್ತನಾಗಿರಬೇಕು, ಸ್ವಯಂ ಶಿಸ್ತಿನಿಂದಿರಬೇಕು, ಅತಿಮುಖ್ಯವಾಗಿ ಅವನಲ್ಲಿ ಏಕಾಗ್ರತೆ ಇರಬೇಕು.

ಸ್ವಾಮಿ ವಿವೇಕಾನಂದರ ಪ್ರಕಾರ ಬೋಧನಾ ಕ್ರಮ ಹೇಗಿರಬೇಕು? ವಿದ್ಯಾರ್ಥಿಗಳಿಗೆ ಸ್ವಯಂ ಶಿಕ್ಷಣ ಅತ್ಯುತ್ತಮವಾದ ಶಿಕ್ಷಣ. ವಿದ್ಯಾರ್ಥಿಗಳು ಅವರಿಗೆ ಅಗತ್ಯವೆನಿಸಿದ್ದನ್ನು ಕಲಿಯುತ್ತಾರೆ. ಪರಿಸರವನ್ನು ಸೃಷ್ಟಿಮಾಡುವುದು ಶಿಕ್ಷಕರ ಕರ್ತವ್ಯ. ಶಿಕ್ಷಕರು ವಿದ್ಯಾರ್ಥಿಗಳಿಗೆ ಯಾವಾಗಲೂ ಸ್ಫೂರ್ತಿದಾಯಕ ಮಾರ್ಗದರ್ಶನ ಕೊಡಬೇಕು. ಏಕಾಗ್ರತೆಯನ್ನು ವೃದ್ಧಿ ಮಾಡಬೇಕು. ಕಲಿಕೆಗೆ ಬೇಕಾದ ಒಳ್ಳೆಯ ಮುಕ್ತವಾದ ವಾತಾವರಣವಲ್ಲಿ ಚರ್ಚೆ, ಸ್ವತಂತ್ರವಾಗಿ ಅಭಿವೃದ್ಧಿ ಮಾಡುವ ಸನ್ನಿವೇಶ ವಿದ್ಯಾರ್ಥಿಗಳಿರಬೇಕು.

ಇವೆಲ್ಲದರ ಜೊತೆಗೆ ಸ್ವಾಮಿ ವಿವೇಕಾನಂದರ ಪ್ರಕಾರ ಜನಸಮೂಹಕ್ಕೆ ಶಿಕ್ಷಣ ದೊರೆಯಬೇಕು. ನಮ್ಮ ರಾಷ್ಟ್ರೀಯ ಪಾಪವೆಂದರೆ ನಾವು ಜನಸಮುದಾಯಕ್ಕೆ ಶಿಕ್ಷಣ ಕೊಡದೇ ಇರುವುದು. ಇದರ ಜೊತೆಗೆ ನಮ್ಮ ರಾಷ್ಟ್ರದಲ್ಲಿ ಸ್ತ್ರೀಯರಿಗೆ ಮೊದಲು ಶಿಕ್ಷಣ ದೊರಕುವಂತಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿರುವ ಈ ಎಲ್ಲಾ ಸಮಸ್ಯೆಗಳಿಗೆ ನಮ್ಮ ಜನರ ಅಂಧಕಾರ, ಅರ್ಥಿಕ ಮತ್ತು ಸಾಮಾಜಿಕ ಸ್ಥಿತಿಯೇ ಕಾರಣ. ನಮ್ಮ ರಾಷ್ಟ್ರದ ಜನರಿಗೆ ಹಸಿವನ್ನು ನೀಗಿಸುವಲ್ಲಿ ಶಿಕ್ಷಣ ವಿಫಲವಾಗಿದೆ. ಶಿಕ್ಷಣಕ್ಕೆ ಸಾರ್ಥಕತೆ ದೊರೆಯಬೇಕಾದರೆ ಜನರ ಅರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಉತ್ತಮಗೊಳ್ಳಬೇಕು. ಆದ್ದರಿಂದ ಸ್ವಾಮೀಜಿಯವರ ದೃಷ್ಟಿಯಲ್ಲಿ ಶಿಕ್ಷಣವು ವ್ಯಕ್ತಿಯನ್ನು ಎಲ್ಲಾ ರೀತಿಯ ಸಂಪೂರ್ಣತೆಯನ್ನು ಸಾಧಿಸಲು ಸಿದ್ಧಮಾಡಬೇಕು.

ಅರವಿಂದರ ವಿಚಾರಗಳು

ಕ್ರಿ.ಶ. 1872 ಆಗಸ್ಟ್ 15 ರಂದು ಕಲಕತ್ತಾ ನಗರದಲ್ಲಿ ಜನಿಸಿದ ಅರವಿಂದರು ಚಿಕ್ಕಂದಿನಿಂದಲೇ ಬಹಳ ಬುದ್ಧಿವಂತರೆನಿಸಿದ್ದರು. ಇಂಗ್ಲೆಂಡ್‌ನಲ್ಲಿ ಪ್ರವಾಸಮಾಡಿ ಆಂಗ್ಲ ಭಾಷೆಯ ಜೊತೆಗೆ ಲ್ಯಾಟಿನ್, ಗ್ರೀಕ್, ಪ್ರೆಂಚ್, ಜರ್ಮನ್ ಮತ್ತು ಇಟಲಿಯನ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದರು. ಅನಂತರ ಯೋಗಾಭ್ಯಾಸವನ್ನು ತಾವೇ ಪ್ರಾರಂಭಿಸಿದರು. ಇದರಿಂದ ಆಧ್ಯಾತ್ಮಿಕ ಅನುಭವಗಳು ದೊರೆತವು.

ಅರವಿಂದರನ್ನು ಪ್ರಪಂಚದಾದ್ಯಂತ ಜನರು ಗುರುತಿಸಿರುವುದು ಆಧ್ಯಾತ್ಮಿಕ ಗುರು ಎಂದು. ಆದರೆ ಅರವಿಂದರು ಚಿಂತಕ, ತತ್ವಜ್ಞಾನಿ, ದಾರ್ಶನಿಕ, ಆಧ್ಯಾತ್ಮಿಕ ಜೀವಿ, ಜೊತೆಗೆ ಶಿಕ್ಷಣತಜ್ಞರು ಕೂಡ. ಆದ್ದರಿಂದ ಇವರನ್ನು ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿ ಎಂದು ಕರೆಯಲಾಗಿದೆ.

ಶೈಕ್ಷಣಿಕ ಚಿಂತಕರಾಗಿ ಅರವಿಂದರು ಕೆಲವು ವಿಶಿಷ್ಟವಾದ ಕೊಡುಗೆಗಳನ್ನು ಕೊಟ್ಟಿದ್ದಾರೆ. ಶಿಕ್ಷಣವು ಮನುಷ್ಯನಿಗೆ ಅವನ ವ್ಯಕ್ತಿ ವಿಶಿಷ್ಟತೆಗೆ, ರಾಷ್ಟ್ರಕ್ಕೆ, ಮಾನವಜನಾಂಗಕ್ಕೆ ಮತ್ತು ವಿಶ್ವಮಾನವತೆಗೆ ಮಹತ್ತರ ಸ್ಥಾನ ಕೊಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಭರತಖಂಡವು ತನ್ನದೇ ಆದ ಮನೋದೃಷ್ಟಿಯನ್ನು ಹಾಗೂ ಮನೋಧರ್ಮವನ್ನು ಹೊಂದಿದೆ. ಶಿಕ್ಷಣವು ಧರ್ಮದ ತಳಹದಿಯ ಮೇಲೆ ರೂಪಿತವಾಗಬೇಕು. ಆಗ ಅದು ರಾಷ್ಟ್ರದ ಧರ್ಮವನ್ನು ಅಳವಡಿಸಿಕೊಂಡು ರಾಷ್ಟ್ರೀಯ ಶಿಕ್ಷಣವೆಂಬ ಅಭಿದಾನಕ್ಕೆ ಪಾತ್ರವಾಗುತ್ತದೆ.

ಮನುಷ್ಯ ಪ್ರಕೃತಿಯು ಅವನ ಪೂರ್ವಜನ್ಮದ ಕರ್ಮಗಳಿಗೆ ಅನುಸಾರವಾಗಿರುವುದರ ಜೊತೆಗೆ ಅವನ ಆನುವಂಶೀಯತೆ ಸುತ್ತಮುತ್ತಣ ಪರಿಸರ, ರಾಷ್ಟ್ರೀಯತೆ, ಭೂಗುಣ, ಸೇವಿಸುವ ಗಾಳಿ, ನೋಡುವ ದೃಶ್ಯಗಳು ಮತ್ತು ಅನುದಿನದ ಅಭ್ಯಾಸಗಳಿಂದ ಸಂಸ್ಕರಣಗೊಳ್ಳುತ್ತದೆ. ಈ ಅಂಶಗಳು ಮನುಷ್ಯನ ಮೇಲೆ ಅಪೂರ್ವ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ಅರಿತೇ ಶಿಕ್ಷಣದ ಸೃಜನತೆಗೆ ಪ್ರಯತ್ನಿಸಬೇಕು.

ಅರವಿಂದರ ಶೈಕ್ಷಣಿಕ ವಾಣಿ ನಮ್ಮ ಶಿಕ್ಷಣ ಮಣ್ಣಿನ ವಾಸನೆಯನ್ನು ಪ್ರತಿಕೃತಿಸಬೇಕೆಂದು ಸಲಹೆ ನೀಡಿದೆ. ಇದರ ಜೊತೆಗೆ ನಮ್ಮ ಪ್ರಾಚೀನ ಶಿಕ್ಷಣದ ತಳಹದಿಯ ಮೇಲೆ ರಾಷ್ಟ್ರೀಯ ಶಿಕ್ಷಣ ನಿರ್ಮಿತವಾಗಬೇಕೆಂದು ಅಭಿಪ್ರಾಯಪಟ್ಟಿದೆ. ರಾಷ್ಟ್ರದ ಜನತೆಯಲ್ಲಿ ನಿರುತ್ಸಾಹವನ್ನು, ನಿರಾಶೆಯನ್ನು ಹರಡುವ ಶಕ್ತಿಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವ ತನಕ ಪ್ರಗತಿ ಕನಸಿನ ಮಾತಾಗುತ್ತದೆ. ಜನರಲ್ಲಿನ ಮೇಲು ಕೀಳೆಂಬ ಪ್ರವೃತ್ತಿ ನಿವೃತ್ತಿಯೊಂದಬೇಕು. ರಾಷ್ಟ್ರಜೀವನದ ಆದರ್ಶಮೌಲ್ಯಗಳನ್ನು

ಪುನರ್ ನಿರ್ಧರಿಸಬೇಕು. ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಧೈರ್ಯೋತ್ಸಾಹಗಳು ಅಗತ್ಯ. ಐಕ್ಯತೆ, ಸಹಕಾರ, ಸಾಮೂಹಿಕ ಪ್ರಯತ್ನಗಳು ಅಗತ್ಯ. ಇವೆಲ್ಲಕ್ಕಿಂತ ಮಿಗಿಲಾಗಿ ಆತ್ಮವಿಶ್ವಾಸಬೇಕು. ಅಂತಹ ಆತ್ಮವಿಶ್ವಾಸವನ್ನು ಬೆಳೆಸುವಲ್ಲಿ ಶಿಕ್ಷಣ ಪ್ರಮುಖ ಸ್ಥಾನ ವಹಿಸಬೇಕು.

ರಾಷ್ಟ್ರೀಯ ಶಿಕ್ಷಣದ ಜೊತೆಗೆ ನೈತಿಕ ತರಬೇತಿಯನ್ನು ಸಲಹೆಗಳ ಮತ್ತು ಮಾರ್ಗದರ್ಶನದ ಮೂಲಕ ಸುಲಭವಾಗಿ ಒದಗಿಸಬಹುದು. ಆದರೆ ಇಂದು ಹದಿವಯಸ್ಸಿನವರು ಹೊಂದಿರುವ ಹಣ ಮತ್ತು ಸ್ವಾತಂತ್ರ್ಯ ಅವರನ್ನು ಸ್ವಚ್ಛಂದವಾಗಿ ವಿಹರಿಸುವಂತೆ ಮಾಡಿದೆ. ಇವರ ನೈತಿಕಪತನಕ್ಕೆ ಪೋಷಕರು ಕಾರಣ. ಆದರೆ ಅದನ್ನು ಅವರು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಅಂತಹ ನೈತಿಕ ಪತನಕ್ಕೆ ಅಧ್ಯಾಪಕರನ್ನು ಹೊಣೆಗಾರರನ್ನಾಗಿಸುತ್ತಾರೆ. ವಿದ್ಯಾರ್ಥಿಗಳಲ್ಲಿ ನೈತಿಕಮೌಲ್ಯಗಳು ಬೆಳೆಯ ಬೇಕಾದರೆ, ಅವುಗಳ ಅರ್ಥ ಸರಿಯಾಗಿ ಗೋಚರವಾಗಬೇಕಾದರೆ ಅವರಿಗೆ ಒಳ್ಳೆಯ ಆದರ್ಶವಾದ ಉದಾಹರಣೆಗಳು ಬೇಕು. ಎಳೆಯರು ಅನುಕರಣೆಯಿಂದ ಕಲಿಯುತ್ತಾರೆ. ಅವರು ಓದಿ ಕಲಿಯುವುದಕ್ಕಿಂತ ನೋಡಿ ಕಲಿಯುವುದೇ ಹೆಚ್ಚು. ಅಂತಹ ಕಲಿಕೆ ಸ್ವಾಭಾವಿಕವಾದದ್ದು ಹಾಗೂ ಶಾಶ್ವತವಾದದ್ದು. ಆದ್ದರಿಂದ ಶಿಕ್ಷಕರು ವಿದ್ಯಾರ್ಥಿಗಳ ಮುಂದೆ ಗಂಭೀರವಾಗಿ ವರ್ತಿಸಬೇಕು. ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಶಿಕ್ಷಕರ ವರ್ತನೆ ವಿದ್ಯಾರ್ಥಿಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತದೆ.

ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಕಲಿಯುವವರ ಸಂಖ್ಯೆ ವಿರಳವಾಗುತ್ತಿದೆ. ಆದರೆ ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿ ಮಹತ್ವಪೂರ್ಣವಾದದ್ದು. ಈ ಶಿಕ್ಷಕರ ಮುಖ್ಯಕರ್ತವ್ಯವೇನೆಂದರೆ ವಿದ್ಯಾರ್ಥಿಗಳ ಆಸಕ್ತಿ ಜ್ಞಾನ ಸಂಸ್ಕಾರಗಳಿಗೆ ಯುಕ್ತ ಮಾರ್ಗದರ್ಶನ ಮಾಡುವುದು. "ಮನುಜಗೆ ಮಗು ತಂದೆ" ಎಂಬುದನ್ನು ಶಿಕ್ಷಕರು ಮರೆಯಬಾರದು. ಇಂತಹ ವಾದಸರಣಿಯಿಂದ ವಿದ್ಯಾರ್ಥಿಗಳ ಸಂಸ್ಕಾರ, ಸ್ವಭಾವ, ಸ್ವಧರ್ಮಗಳಿಗೆ ಶಿಕ್ಷಣ ಕ್ರಮವಾಗಿರಬೇಕು. ಇದು ಸಾಂಪ್ರದಾಯಿಕ ಶಿಕ್ಷಣ ಕ್ರಮವಾಗಿರಬಾರದು. ಅರವಿಂದರ ಶೈಕ್ಷಣಿಕ ಚಿಂತನೆಗಳು ಪ್ರಗತಿಪರ ಶಿಕ್ಷಣಚಳುವಳಿಗೆ ಪ್ರಚೋದಕವಾಗಿವೆ ಎಂದು ಹೇಳಬಹುದು. ಪ್ರಗತಿಪರ ಶಿಕ್ಷಣದ ಪ್ರತಿಪಾದಕರು ಮಂಡಿಸಿರುವಂತಹ ಅಂಶಗಳು ಈ ರೀತಿ ಇವೆ:-

1. ಶಿಕ್ಷಣದಲ್ಲಿ ಆರೋಗ್ಯಕ್ಕೆ ಆದ್ಯತೆಯಿರಬೇಕು.
2. ಕಲಿಕೆ ಕ್ರಿಯಾತ್ಮಕವಾಗಿರಬೇಕು. ಶರೀರದ ಚಟುವಟಿಕೆಯಿಂದಲೂ, ಕೈಗೆಲಸದಿಂದಲೂ ಕೂಡಿ ವಿಷಯ ಸಂಗ್ರಹಣೆಗೆ ಸಹಾಯಕವಾಗಬಹುದು.
3. ತರಗತಿಯ ನಿರ್ವಹಣೆಯಲ್ಲಿ ಸ್ವಯಂ ನಿಬಂಧನೆಗಳಿಗೆ ಆದ್ಯತೆ ಇರಬೇಕು.
4. ವಿದ್ಯಾರ್ಥಿಗಳಲ್ಲಿ ಸಾಮೂಹಿಕ ಮತ್ತು ಸಾಮಾಜಿಕಪ್ರಜ್ಞೆಗಳು ಬೆಳೆಯಲು ಶಿಕ್ಷಣ ನೆರವಾಗಬೇಕು. ಸ್ಪರ್ಧಾ ಭಾವವನ್ನು ಕಡಿಮೆ ಮಾಡಿ ಸಹಕಾರವನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸಬೇಕು.
5. ಅಧ್ಯಯನ ಕಲಾತ್ಮಕವಾಗಿ, ಹಿತಕರವಾಗಿ ಹಾಗೂ ತೃಪ್ತಿಕರವಾಗಿರಬೇಕು.
6. ವಿದ್ಯಾರ್ಥಿಗಳನ್ನು ಪರೀಕ್ಷೆಗಳ ಭಯದಿಂದ ಮುಕ್ತಗೊಳಿಸಬೇಕು. ಅಂಕಗಳ ಗುಲಾಮಗಿರಿಯಿಂದ ಬಿಡುಗಡೆ ಮಾಡಬೇಕು.
7. ಅಧ್ಯಾಪಕ ಮಾರ್ಗದರ್ಶಕನಾಗ ಬೇಕೇ ವಿನಾ ಯಜಮಾನನಾಗಬಾರದು;

ಮುಂದಾಳು ಆಗಬೇಕೇ ಹೊರತು ಅಧಿಕಾರಯಾಗಬಾರದು.

ಶಿಕ್ಷಣಸಂಸ್ಥೆಗಳಲ್ಲಿ ಮಗು ಕೇಂದ್ರವಾಗಿರಬೇಕು. ಜೊತೆಗೆ ಪಠ್ಯವಿಷಯಗಳು ಮಗುವಿನ ಸ್ವಭಾವಕ್ಕೆ ಅನುಗುಣವಾಗಿರಬೇಕು. ಶಿಕ್ಷಕ ತರಗತಿಯಲ್ಲಿ ಗೌಣಸ್ಥಾನ ಹೊಂದಿ ಕೇವಲ ಮಾರ್ಗದರ್ಶಿಯಾಗಿ ಮಕ್ಕಳ ಸ್ವಯಂ ನಿರ್ದೇಶಿತ ಶಿಕ್ಷಣಕ್ಕೆ ಕಾರಣನಾಗಬೇಕೆಂದು ಅರವಿಂದರು ಪ್ರತಿಪಾದಿಸಿದ್ದಾರೆ.

ಅರವಿಂದರ ಪ್ರಕಾರ ಸ್ವಯಂ ನಿರ್ದೇಶಿತ ಶಿಕ್ಷಣದಲ್ಲಿ ಮಕ್ಕಳ ಪ್ರತಿಭೆ, ಸಾಮರ್ಥ್ಯಗಳು ಉಪಯುಕ್ತ ರೀತಿಯಲ್ಲಿ ವಿನಿಯೋಗವಾಗಬೇಕಾದರೆ, ಅವರ ಅಧ್ಯಯನವು ಪ್ರಯತ್ನ ಪೂರ್ವಕವಾಗಿ ತಡೆಯಿಲ್ಲದೆ ಮುಂದುವರೆಯಬೇಕಾದರೆ ನಾವು ಒದಗಿಸುವ ಪಠ್ಯವಿಷಯಗಳು ಅವರ ಆಸಕ್ತಿಗಳಿಗೆ ತಕ್ಕವಾಗಿರಬೇಕು. ಇದು ಸಾಧ್ಯವಾಗುವುದು ಶಿಕ್ಷಕರು ಮತ್ತು ಪೋಷಕರು ಸಿದ್ಧಗೊಳಿಸಿದ ವಿಷಯಗಳನ್ನು ಮಕ್ಕಳ ಮೇಲೆ ಬಲವಂತದಿಂದ ಪ್ರಯೋಗಮಾಡದೆ, ಅವರೇ ಸಿದ್ಧಪಡಿಸಿದ ವಿಷಯ ವಸ್ತುವಿನಿಂದ ವಿಷಯವನ್ನು ಆಯ್ಕೆ ಮಾಡಿಕೊಂಡು ಕಲಿಯುಲು ಸಾಧ್ಯವಾಗುವಂತಹ ವಾತಾವರಣವನ್ನು ಸೃಷ್ಟಿಸಿದಾಗ ಅವರು ಕ್ರಿಯಾತ್ಮಕವಾಗಿ ಕಲಿಕೆಯಲ್ಲಿ ಭಾಗವಹಿಸುತ್ತಾರೆ. ವಿದ್ಯಾರ್ಥಿಗಳನ್ನು ಗಮನಿಸುವುದು ಮಾತ್ರ ಶಿಕ್ಷಕನ ಕರ್ತವ್ಯವಾಗಬೇಕು. ಅಗತ್ಯಬಿದ್ದರೆ ಮಾತ್ರ ಅವರ ಜೀವನವಿಕಾಸಕ್ಕೆ ಮಾರ್ಗದರ್ಶನ ನೀಡಿಬೇಕು. ಇಲ್ಲಿ ಕಲಿಕೆ ಮಾನಸಿಕ ಸಿದ್ಧತೆಯಿಂದ ಬರುತ್ತದೆ.

ಅರವಿಂದ ಶೈಕ್ಷಣಿಕ ವಾಣಿಯನ್ನು ಏಕಾಗ್ರತೆಯಿಂದ ಆಲಿಸಿದಲ್ಲಿ ಸ್ಪಷ್ಟವಾಗುವ ಅಂಶವೆಂದರೆ, ನಮ್ಮ ಶಿಕ್ಷಣ ಯಾವ ದಿಕ್ಕಲ್ಲಿ ಮುಂದುವರೆಯುತ್ತಿದೆ ಎಂದು; ಪಠ್ಯ ವಿಷಯ ಶಿಕ್ಷಣ ಕ್ರಮದಲ್ಲಿ ಕೇಂದ್ರಸ್ಥಾನವನ್ನು ಆಕ್ರಮಿಸಿದೆ. ಈ ಪಠ್ಯವಿಷಯ ನೇರವಾಗಿ ಮಕ್ಕಳ ಅನುಭವಕ್ಕೆ, ಜೀವನಕ್ಕೆ, ಪರಿಸರಕ್ಕೆ, ಸಂಸ್ಕೃತಿಗೆ, ಸಂಸ್ಕಾರಕ್ಕೆ, ಚಟುವಟಿಕೆಗಳಿಗೆ ಮಾನಸಿಕ ಮತ್ತು ಬೌದ್ಧಿಕವಾದ ಅಭಿರುಚಿಗಳಿಗೆ ಸಂಬಂಧಿಸಿರುತ್ತದೆ.

ಅರವಿಂದರ ಪ್ರಕಾರ ಮಾತೃಭಾಷೆಯೇ ಶಿಕ್ಷಣದ ಯುಕ್ತ ಮಾಧ್ಯಮವಾಗಿರಬೇಕು. ಮೊದಲು ಮಕ್ಕಳು ಮಾತೃಭಾಷೆಯ ಪ್ರಭುತ್ವ ಪಡೆಯಲು ಏನೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅರವಿಂದರು ತಮ್ಮ ಒಂದು ಗ್ರಂಥದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಅರವಿಂದರ ವಿಶಿಷ್ಟ ವಿಚಾರಧಾರೆಗಳಿಂದ ನಮಗೆ ತಿಳಿದು ಬರುವ ಅಂಶವೇನೆಂದರೆ ನಮ್ಮ ಶಿಕ್ಷಣ ಪದ್ಧತಿಯನ್ನು ಉತ್ತಮಪಡಿಸಲು, ಬೋಧನಾ ಪದ್ಧತಿಯನ್ನು ಉನ್ನತಗೊಳಿಸಲು ಮಕ್ಕಳ ವಿವೇಚನಾ ಶಕ್ತಿಯನ್ನು ವರ್ಧಿಸಲು, ಸೌಂದರ್ಯೋಪಾಸನೆಯನ್ನು ಬೆಳೆಸಲು, ಸಂಶೋಧನಾ ಶಕ್ತಿಯನ್ನು ಹೆಚ್ಚಿಸಲು, ಭಾಷಾಶಕ್ತಿಯನ್ನು ಹೆಚ್ಚಿಸಲು ಹೀಗೆ ಸರ್ವತೋಮುಖವಾದ ರಾಷ್ಟ್ರೋಪಯೋಗಿಯಾದ ಶಿಕ್ಷಣಕ್ರಮವನ್ನು ಪುನರ್ ಸೃಜಿಸಲು ಪಶ್ಚಿಮಾಭಿಮುಖವಾಗಿದ್ದೇವೆ. ಜಾನ್ ಡ್ಯೂಯಿ, ರೂಸೋ, ಪೆಸ್ಟಾಲಜಿ, ಹರ್ಬರ್ಟ್ ಮೊದಲಾದವರ ಶೈಕ್ಷಣಿಕ ತತ್ವಗಳನ್ನು ಚಿಂತನೆಗಳನ್ನು, ಆಲೋಚನೆಗಳನ್ನು ಎರವಲು ಪಡೆದು ನಮ್ಮ ಹಿರಿಯ ನಾಯಕರು ಭಾರೀ ಪ್ರಯತ್ನ ನಡೆಸಿದ್ದಾರೆ. ಈ ಹಿರಿಯರ ಪ್ರಯತ್ನ ವಿಫಲವಾಗಲು ನಮ್ಮ ದೇಶದಲ್ಲಿನ ಸರ್ಕಾರಗಳ, ನಾಯಕರ ಮನಸ್ಸೇ ಕಾರಣ. ಎಲ್ಲರೂ ಶಿಕ್ಷಣದ ಗುಣಮಟ್ಟ, ಸುಧಾರಣೆಯ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ, ಕೆಲಸಮಾಡಿದರೆ ಪಾಶ್ಚಿಮಾತ್ಯ ದೇಶಗಳಿಗಿಂತ ನಾವು ಮುನ್ನಡೆ ಸಾಧಿಸಬಹುದು. ಅದಕ್ಕೆ ಅನುಭವಿಗಳಾದ ಶಿಕ್ಷಣ ಚಿಂತಕರಲ್ಲಿ ಮತ್ತು ಸರ್ಕಾರದಲ್ಲಿ ನಾಯಕರ ಕೊರತೆ ಇದೆ.

○

ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ

ಎಂ. ರವೀಂದ್ರ

ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ - ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಶಿಕ್ಷಣವು ಪ್ರತಿಯೊಂದು ಮಾನವಸಮಾಜದ ಮೂಲಭೂತ ಚಟುವಟಿಕೆಯಾಗಿದೆ. ಶಿಕ್ಷಣದ ಮೂಲಕ ಸಮಾಜವು ತನ್ನ ಪರಂಪರೆ, ಸಂಸ್ಕೃತಿ ಮುಂತಾದವುಗಳನ್ನು ಹಿರಿಯರಿಂದ ಕಿರಿಯರಿಗೆ ಔಪಚಾರಿಕವಾಗಿ ಮತ್ತು ಅನೌಪಚಾರಿಕವಾಗಿ ಸಾಗಿಸುತ್ತದೆ. ಸಾಮೂಹಿಕ ಜೀವನದ ಪಾಠಗಳು ವ್ಯಕ್ತಿಯು ಸಮಾಜಜೀವಿಯಾಗಿ ಬಾಳಲು ಮಾರ್ಗದರ್ಶನವನ್ನು ನೀಡುತ್ತವೆ. "Education is a process which changes animal being into human being." ಹೀಗೆ ವ್ಯಕ್ತಿಯ ಚಾರಿತ್ರ್ಯ, ವ್ಯಕ್ತಿತ್ವ, ಸಂಸ್ಕೃತಿ, ವಿವೇಚನೆ, ನೈಪುಣ್ಯತೆ ಮೊದಲಾದ ಮಾನವಜೀವನಕ್ಕೆ ಸಂಬಂಧಿಸಿದ ಅಂಶಗಳು ಶಿಕ್ಷಣವನ್ನೇ ಅವಲಂಬಿಸುತ್ತವೆ.

ಹಾಗೆಯೇ ಸಮಾಜದಲ್ಲಿನ ಅನೇಕ ಬದಲಾವಣೆಗಳೂ ಸಹ ಶಿಕ್ಷಣಪದ್ಧತಿಯಲ್ಲಿ ಬದಲಾವಣೆಯನ್ನು ತರುತ್ತವೆ. ಸಾಮಾಜಿಕ ಬದಲಾವಣೆಯನ್ನು ತಿಳಿಯಲು ಶಿಕ್ಷಣ ಪದ್ಧತಿಯಲ್ಲಿ, ವಿಧಾನಗಳಲ್ಲಿ ಹೊಸ ಹೊಸ ಸಂಶೋಧನೆಗಳನ್ನು ಮಾಡಬೇಕಾಗುತ್ತದೆ. ಶಿಕ್ಷಣ ಹಾಗೂ ಸಾಮಾಜಿಕ ಪರಿವರ್ತನೆಯ ನಡುವಿನ ಸಂಬಂಧವನ್ನು ತಿಳಿಯಬೇಕಾದರೆ ಈ ಎರಡೂ ಅಂಶಗಳನ್ನು ಅಧ್ಯಯನ ಮಾಡುವುದು ಸೂಕ್ತ.

ಆಂಗ್ಲಶಬ್ದವಾದ Education ಎಂಬ ಪದ ವಿವಿಧ ರೀತಿಯ ಅರ್ಥಗಳನ್ನು ಹೊಂದಿದೆ. ಕೆಲವರ ಪ್ರಕಾರ ಲ್ಯಾಟಿನ್ ಪದದ Educare ದಿಂದ to rear, to nourish or to bring up, to lead out, to extract - ಅಂದರೆ ಪೋಷಿಸು, ಮೇಲಕೆತ್ತು, ಹೊರದೆಗೆ ಎಂಬ ಅರ್ಥ ಏರ್ಪಟ್ಟಿದೆ. ಮಗುವಿನ ಸುಪ್ತಶಕ್ತಿಗಳನ್ನು ಗುರುತಿಸಿ ಶೋಧಿಸಿ ಅಭಿವೃದ್ಧಿಪಡಿಸು ಎಬ ಅರ್ಥದಲ್ಲಿ ಈ ಪದ ಸೃಷ್ಟಿಯಾಗಿದೆ.

ಪ್ರಾಚೀನ ಭಾರತೀಯ ಶಿಕ್ಷಣ ಪರಂಪರೆಯ ನಮ್ಮ ಪ್ರಾಚೀನರೂ, ಶಬ್ದಶಾಸ್ತ್ರ ಪರಿಣತರೂ, ಪ್ರಕಾಂಡ ಪಂಡಿತರೂ ವಿಷಯವನ್ನು ಸೈದ್ಧಾಂತಿಕವಾಗಿ ಇದಮಿತ್ಥಂ ಎಂದು ಸ್ಪಷ್ಟಪಡಿಸುವ ಶಕ್ತಿಯುಳ್ಳವರೂ ಆಗಿದ್ದರು. ಅವರು ಪಾಶ್ಚಿಮಾತ್ಯ ವಿದ್ವಾಂಸರಿಗಿಂತ ಯಾವುದರಲ್ಲೂ ಕಡಿಮೆಯಾಗಿರಲಿಲ್ಲ. ಸುಪ್ರಸಿದ್ಧ ವೈಯ್ಯಾಕರಣಿ ಪಾಣಿನಿ ತಮ್ಮ ಧಾತು ಪಾಠದಲ್ಲಿ 'ಶಿಕ್ಷಾ-ವಿದ್ಯೋಪಾಸನೆ' ಎಂದಿದ್ದಾರೆ. ವಿದ್ಯೆ ಎಲ್ಲರಿಗೂ ಅನುಭವ ವೇದ್ಯ.

ಅನೇಕ ಶಿಕ್ಷಣತಜ್ಞರು ಶಿಕ್ಷಣದ ಅರ್ಥವನ್ನು ಕೆಳಕಂಡಂತೆ ಅರ್ಥೈಸಿದ್ದಾರೆ:-

★ ವ್ಯಕ್ತಿಯನ್ನು ಸ್ವಾವಲಂಬಿಯನ್ನಾಗಿಯೂ ನಿಸ್ವಾರ್ಥಿಯನ್ನಾಗಿಯೂ ಮಾಡುವುದೇ ಶಿಕ್ಷಣ. - ಋಗ್ವೇದ

★ ಸಾ ವಿದ್ಯಾಯಾ ವಿಮುಕ್ತಯೇ - ಉಪನಿಷತ್ತುಗಳು

★ ಶಿಕ್ಷಣ ಸಚ್ಚಾರಿತ್ರಾಭಿವೃದ್ಧಿಯ, ವ್ಯಕ್ತಿಯ ಉಪಯುಕ್ತತೆಯ ಸಾಧನ - ಯಾಜ್ಞವಲ್ಕ್ಯ

★ ಪ್ರಕೃತಿಯ ಪ್ರಸಾದಗಳ ಪರಿಚಯ ಪಡೆಯುವ ತರಬೇತಿ ಶಿಕ್ಷಣ - ಪಾಣಿನಿ

★ ಆತ್ಮಸಾಕ್ಷಾತ್ಕಾರವೇ ಶಿಕ್ಷಣ - ಶಂಕರಾಚಾರ್ಯ

★ ಸತ್ಯ, ಸೌಂದರ್ಯ, ಸಭ್ಯತೆಗಳ ಪ್ರಭೆಯೇ ಶಿಕ್ಷಣ - ಮಹಾತ್ಮಗಾಂಧೀಜಿ

★ ಮಕ್ಕಳು ಮಾನವರಾಗಿ, ನಾಗರಿಕರಾಗಿ ಇತರರೊಂದಿಗೆ ಗೌರವ ಘನತೆಯಿಂದ ವರ್ತಿಸುವಂತೆ ಮಾಡುವುದೇ ಶಿಕ್ಷಣ - ಡಾ. ರಾಧಾಕೃಷ್ಣನ್

★ ಸದೃಢ ದೇಹದಲ್ಲಿ ಸಬಲ ಮನಸ್ಸನ್ನುಂಟು ಮಾಡುವುದೇ ಶಿಕ್ಷಣ - ಅರಿಸ್ಟಾಟಲ್

★ ಮಾನವ ಸುಪ್ತಶಕ್ತಿಗಳ ಸ್ವಾಭಾವಿಕ ಸಮಗ್ರಅಭಿವೃದ್ಧಿಯೇ ಶಿಕ್ಷಣ - ಪೆಸ್ಟಾಲಜಿ

★ ಆಂತರಿಕವಾಗಿರುವುದನ್ನು ಹೊರಪಡಿಸಿ ಬಾಹ್ಯಜಗತ್ತಿನ ಸಂಬಂಧ ಪಡೆಯುವಂತೆ ಮಾಡುವುದೇ ಶಿಕ್ಷಣ - ಫ್ರೊಬೆಲ್.

ಭಾರತೀಯ ಶಿಕ್ಷಣ ಆಯೋಗವು (1964-66) "ಜನತೆಯ ಜೀವನದ ಅಗತ್ಯತೆ ಹಾಗೂ ಆಕಾಂಕ್ಷೆಗಳಿಗೆ ಅನುಗುಣವಾಗಿ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಯ ಬಲಿಷ್ಠ ಸಾಧನವೇ ಶಿಕ್ಷಣ" ಎಂದು ಹೇಳಿದೆ.

ಶಿಕ್ಷಣವೆಂದರೆ ವಿಷಯ ವಿವರಣೆ, ನಿರ್ದಿಷ್ಟ ಬೋಧನೆ, ಕೆಲವು ಓದುಬರಹ ಲೆಕ್ಕಗಳಿಗೆ ಸೀಮಿತವಾದದ್ದು ಜ್ಞಾನ ಸಂವಹಣೆ ಅಥವಾ ಕೇವಲ ಕೆಲವು ಉಪಯುಕ್ತ ಜೀವನ ಕೌಶಲಗಳ ಗಳಿಕೆಗೆ ಸೀಮಿತವಾದ ವಿದ್ಯೆಯನ್ನು ಪಡೆಯುವುದಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ಪಾಠ ಪ್ರವಚನಗಳಿಂದ, ಪಠ್ಯಕ್ರಮದಿಂದ, ಪುಸ್ತಕದಿಂದ ಪಡೆಯುವ ಜ್ಞಾನವಾಗಿರುತ್ತದೆ. ಆದರೆ ವಿಶಾಲಾರ್ಥದಲ್ಲಿ ಶಿಕ್ಷಣವೆಂದರೆ ಮಗುವಿನ ಬೌದ್ಧಿಕ, ದೈಹಿಕ, ಕಲಾತ್ಮಕ, ನೈತಿಕ, ಆಧ್ಯಾತ್ಮಿಕ, ವೈಜ್ಞಾನಿಕ ಮುಂತಾದ ಸರ್ವಮುಖಿಗಳ ಸರ್ವತೋಮುಖ ಅಭಿವೃದ್ಧಿ.

ಹುಟ್ಟಿದಂದಿನಿಂದ ಸಾಯುವವರೆಗಿನ ಪ್ರತಿಯೊಂದು ಚಟುವಟಿಕೆ ಹಾಗೂ ಅನುಭವವೂ ಶಿಕ್ಷಣವೇ ಆಗಿದೆ. ಆಹಾರ, ನಿದ್ರೆ, ಭಯ,ಕಾಮಪ್ರವೃತ್ತಿಗಳು, ಪ್ರಾಣಿಗಳಿಗೂ ಮಾನವನಿಗೂ ಸಮಾನವಾದದ್ದು. ಆದರೆ ಮಾನವರಲ್ಲಿ 'ಧರ್ಮ' ಎಂಬುದು ಪ್ರಧಾನ ಪಾತ್ರ ವಹಿಸುತ್ತದೆ. ಈ ಧರ್ಮಪ್ರಜ್ಞೆಯ ಫಲವಾಗಿ ಮಾನವರಲ್ಲಿ ಯುಕ್ತಾಯುಕ್ತ ವಿವೇಚನೆ, ಸರಿತಪ್ಪುಗಳ ತಿಳುವಳಿಕೆ ಉಂಟಾಗುತ್ತದೆ. ಈ ಧರ್ಮಪ್ರಜ್ಞೆಗೆ ಪೋಷಕ ಸಾಧನವಾಗಿರುವಂತಹದ್ದೇ ಶಿಕ್ಷಣ.

ಮಾನವನಲ್ಲಿ ಕೆಲವು ಸಾಮರ್ಥ್ಯಗಳು ಇವೆ. ತನ್ನ ಪೂರ್ವಜರ ಅನುಭವ ಪ್ರಸಾದದಿಂದ ಸಂಘಸಂಸ್ಥೆಗಳು, ಗುಡಿಗೋಪುರಗಳು, ಆಚಾರ ವ್ಯವಹಾರಗಳು, ಸಂಸ್ಕೃತಿ ನಾಗರೀಕತೆಗಳು ವಿವಿಧ ರೀತಿಯಲ್ಲಿ ಮಾನವನಿಗೆ ಕರಗತವಾಗಿವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನಾನುಭವಗಳ ಜೊತೆಗೆ ಪೂರ್ವಜರ ಅನುಭವಾಮೃತ ಪ್ರಸಾದವನ್ನು ಪಡೆಯುತ್ತಾನೆ. ಸನ್ನಿವೇಶಕ್ಕೆ ತಕ್ಕಂತೆ ಪರಿವರ್ತಿತನಾಗುತ್ತಾನೆ. ಪರಿವರ್ತಿತ ಅನುಭವಗಳಿಗೆ

ಅನುಗುಣವಾಗಿ ನೂತನಸೃಷ್ಟಿ ಏರ್ಪಡುತ್ತದೆ. ಹೀಗೆ ವ್ಯಕ್ತಿಯು ಸತತ ಸ್ವಪ್ರಯತ್ನದಿಂದ ಸಂಶೋಧಿಸಿ ಶೇಖರಿಸುವ ಏಕಪ್ರಕಾರವಾಗಿ ಹರಿದು ಬಂದಿರುವ ಜೀವನಾನುಭವಗಳ ಅಮರಗಂಗೆಯೇ ಶಿಕ್ಷಣ. ಶಿಕ್ಷಣ ಎಂಬುದು ಎಂದೂ ಅಳಿಯದ ಅಕ್ಷಯಪಾತ್ರೆ. ಒಟ್ಟಿನಲ್ಲಿ ಶಿಕ್ಷಣವೆಂದರೆ ದೃಷ್ಟಿವೈಶಾಲ್ಯತೆಯನ್ನುಂಟು ಮಾಡುವ, ಒಳನೋಟವನ್ನು ಹೆಚ್ಚಿಸುವ, ಜ್ಞಾನದ ಕ್ಷಿತಿಜವನ್ನು ವಿಸ್ತೃತಗೊಳಿಸುವ, ವಿವೇಚನೆಯನ್ನು ಜಾಗೃತಗೊಳಿಸುವ, ಪ್ರಕ್ರಿಯೆಗಳನ್ನು ಪರಿಶುದ್ಧಗೊಳಿಸುವ ವಿಚಾರ ಹಾಗೂ ಭಾವನೆಗಳನ್ನು ಪ್ರಚೋದಿಸುವ ಕ್ರಿಯೆಯಾಗಿದೆ.

ಅದರಂತೆ ಸಮಾಜವು ನಿರಂತರವಾಗಿ ಬದಲಾವಣೆಗೆ ಒಳಗಾಗುವಂತಹ ಆಯಾಮ ವಾಗಿದೆ. ಅದು ನಿಂತ ನೀರಿನಂತೆ ಸ್ತಬ್ಧವಾಗಿರದೆ ಸದಾಕಾಲದಲ್ಲಿಯೂ ಪರಿವರ್ತನೆ ಹೊಂದುತ್ತಿರುವುದು ಅದರ ಲಕ್ಷಣ. ಇಂತಹ ಸಮಾಜದ ಬದಲಾವಣೆಗಳು ನಮ್ಮ ಕಣ್ಣಿಗೆ ಗೋಚರಿಸುವುದು. ಈ ಸಾಮಾಜಿಕ ಬದಲಾವಣೆ - ಸಾಮಾಜಿಕ ಸಂಬಂಧಗಳಲ್ಲಿ ಆಗುವ ಬದಲಾವಣೆ ಎನಿಸಿದ್ದು ಎಲ್ಲಾ ಬದಲಾವಣೆಗಳೂ ಸರ್ವ ವ್ಯಾಪಕವಾಗಿವೆ.

ಸಾಮಾಜಿಕ ಬದಲಾವಣೆಯು ಮಾನವನ ಜೀವನದ ಪರಿಸ್ಥಿತಿಗಳ ಮೇಲೆ ನಿಯಂತ್ರಣವನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುತ್ತಾ ಬಂದಿದ್ದು ಆತನ ನೈಸರ್ಗಿಕ ವಾತಾವರಣ, ಪರಸ್ಪರ ಮನೋಭಾವ, ಬೆಳವಣಿಗೆ, ಸಹಕಾರ, ಸ್ವಾತಂತ್ರ್ಯ ಮುಂತಾದವುಗಳ ಮೇಲೆ ಪ್ರಭಾವ ಬೀರುವುದು.

ಯಾವುದೇ ದೇಶವಾಗಿರಲಿ, ಯಾವುದೇ ಕಾಲವಾಗಿರಲಿ ಅಥವಾ ಯಾವುದೇ ಪ್ರಕಾರದ್ದಾಗಿರಲಿ ಮಾನವಸಮಾಜವು ಬದಲಾವಣೆಗೆ ಸಿಕ್ಕಿಕೊಂಡೇ ಇರುತ್ತದೆ. ಬದಲಾವಣೆಯ ಗತಿಯಲ್ಲಿ ವ್ಯತ್ಯಾಸವಿರಬಹುದು, ಆದರೆ ಬದಲಾವಣೆಯು ನಡೆಯಲೇ ಬೇಕಾದ ಕ್ರಿಯೆ. ಸಮಾಜಜೀವಿಯಾದ ಮಾನವ ತನ್ನ ಹೊಂದಾಣಿಕೆಯ ಸ್ವಭಾವ, ಪರಸ್ಪರಾವಲಂಬನೆಯ ತತ್ವಪಾಲನೆ, ನವನವೀನ ಮೌಲ್ಯ ಮಂಡನೆ, ಅನ್ಯೋನ್ಯ ಕ್ರಿಯೆ, ವೈಜ್ಞಾನಿಕ ಪ್ರಗತಿಯ ಫಲವಾಗಿ ಕಂಡು ಕೇಳಿದ ವಿಷಯಗಳಿಂದ, ಪಡೆದ ಸೌಕರ್ಯಗಳಿಂದ ಪ್ರಭಾವಿತನಾಗಿ ಹಳೆಯದು ಬದಲಾಗಿ ಹೊಸದಕ್ಕೆ ಜಾಗ ಮಾಡಿಕೊಡುತ್ತದೆ ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಸಮಾಜವು ಬದಲಾಗುತ್ತಿದೆ.

ಸಾಮಾಜಿಕ ಬದಲಾವಣೆಯು ಅರ್ಥತಜ್ಞರು ಕಂಡಂತೆ ಹೀಗಿದೆ:-

★ ಜನರ ವಿಚಾರ ಮತ್ತು ಕಾರ್ಯಗಳಲ್ಲಾಗುವ ಪರಿವರ್ತನೆ - ಜಾನ್ಸನ್
★ ಸಾಮಾಜಿಕ ಸಂಬಂಧಗಳಲ್ಲಾಗುವ ಮಾರ್ಪಾಡು - ಮೆಕ್ಕೈವರ್ ಮತ್ತು ಪೇಜ್
★ ಸಾಮಾಜಿಕ ಸಂಘಟನೆ, ರಚನೆ ಮತ್ತು ಕಾರ್ಯಗಳಲ್ಲಾಗುವ ಬದಲಾವಣೆ - ಡೇವಿಸ್
★ ಜೀವನದ ವಿವಿಧ ಹಂತಗಳು, ಹಂತಗಳಲ್ಲಿಯ ವಿವಿಧ ತತ್ವಗಳು ಹಾಗೂ ಮಾನವನ ಜೀವನದ ಮೇಲೆ ಪ್ರಭಾವ ಬೀರುವ ಅಂಶಗಳೇ ಸಾಮಾಜಿಕ ಪರಿವರ್ತನೆ - ಅಗಸ್ಟ್‌ಕಾಮ್ಟೆ
★ ಸಾಂಪ್ರದಾಯಕವಾಗಿ ಬಂದಂತಹ ಮಾನವ ಸಂಬಂಧಗಳಲ್ಲಿ ಹಾಗೂ ರೀತಿ ನೀತಿಗಳ ಮಟ್ಟದಲ್ಲಿ ಉಂಟಾದ ಯಾವುದೇ ಬಗೆಯ ಬದಲಾವಣೆ ಸಾಮಾಜಿಕ ಬದಲಾವಣೆ - ಲುಂಡ್ಸ್‌ಬರ್ಗ್.

ಹೀಗೆ ಸಮಾಜದಲ್ಲಿ ಎದ್ದುತೋರುವ ಆಂತರಿಕ ಬದಲಾವಣೆಯ ಮತ್ತು ಸಾಮಾಜಿಕ ಬಾಂಧವ್ಯ ಹಾಗೂ ಸಾಮಾಜಿಕ ರಚನೆಯಲ್ಲುಂಟಾದ ವ್ಯತ್ಯಾಸಗಳಿಗೆ ಸಾಮಾಜಿಕ ಬದಲಾವಣೆ ಎನ್ನಬಹುದು. ಸಾಮಾಜಿಕ ಬದಲಾವಣೆಯು ಸಮಾಜದ ಸ್ವರೂಪ, ಸಾಮಾಜಿಕ ಸಂಸ್ಥೆಗಳು ಹಾಗೂ ಅವುಗಳ ಕಾರ್ಯದಲ್ಲಾದ ಬದಲಾವಣೆಯಾಗಿದೆ. ಅಲ್ಲದೆ ಸಮಾಜದ ರಚನೆಯಲ್ಲಿ ಜನತೆಯ ಆಲೋಚನೆ, ಸಂಸ್ಕೃತಿ, ಅಭಿರುಚಿ, ಮೌಲ್ಯ, ಹವ್ಯಾಸ, ನೀತಿಗಳು, ಜೀವಿಸುವ ರೀತಿ, ಇತ್ಯಾದಿಗಳ ಹೊಸತನವನ್ನು ತಿಳಿಸುವ ನಿರ್ದಿಷ್ಟ ಕಾಲಾವಧಿಯಲ್ಲಿ ಸಾಮಾಜದ ಕಾರ್ಯಾಚರಣೆಯಲ್ಲಿ ಉಂಟಾಗುವ ಬದಲಾವಣೆಯಾಗಿದೆ. ಸಾಮಾಜಿಕ ಬದಲಾವಣೆಯು ರೇಖಾಮುಖಿ (linear), ಆವರ್ತನಾಶೀಲ (cyclical) ಎನಿಸಿದ್ದು ಸಂಬಂಧಿತ ರಚನೆಯಲ್ಲಿ ಬದಲಾವಣೆ ಬಿತ್ತುವ, ಬೆಳೆಸುವ, ಒಕ್ಕುವ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಪ್ರಕ್ರಿಯೆಯೆನಿಸಿದೆ.

ಈ ಸಾಮಾಜಿಕ ಬದಲಾವಣೆಯನ್ನು ಮುಖ್ಯವಾಗಿ ಕಲೆ, ಭಾಷೆ, ಸಂಸ್ಕೃತಿ, ತಾಂತ್ರಿಕತೆ, ಜನತೆಯ ಆಲೋಚನೆ, ಅಭಿರುಚಿ, ಮೌಲ್ಯ, ಹವ್ಯಾಸ, ನೀತಿ, ಜೀವಿಸುವ ರೀತಿ, ಮುಂತಾದವುಗಳಲ್ಲಿ ಕಾಣಬಹುದಾಗಿದೆ.

ಸಮಾಜ ಮತ್ತು ಶಿಕ್ಷಣ ಎರಡೂ ಸಹ ನಿರಂತರ ಬದಲಾವಣೆಯನ್ನು ಹೊಂದುತ್ತಿರುವ ಅಂಶಗಳು. ಶಿಕ್ಷಣವು ಯುವಜನಾಂಗದ ವರ್ತನೆ ಹಾಗೂ ಆಲೋಚನೆಗಳ ನಮೂನೆಗಳೊಂದಿಗೆ ಸಂಪರ್ಕ ಪಡೆದಿದ್ದು, ಸಾಮಾಜಿಕ ಬದಲಾವಣೆಯು ಸಶಕ್ತಿದಾಯಕ ಸಾಧನವಾಗಿ ಕಾರ್ಯ ನಿರ್ವಹಿಸುತ್ತಿದೆ. ಶಿಕ್ಷಣವು ಹೊಸ ಹೊಸ ವಿಷಯಗಳನ್ನೂ, ಪ್ರಬುದ್ಧ ಪ್ರಜ್ಞೆಯನ್ನೂ, ಉದಾತ್ತ ಆದರ್ಶತತ್ವ ಆಲೋಚನೆಯನ್ನು ಮಕ್ಕಳಲ್ಲಿ ಉಂಟುಮಾಡಿ ಸಾಮಾಜಿಕ ಬದಲಾವಣೆಯಡಿ ನವನವೋನ್ಮೇಶಶಾಲಿ ಪ್ರತಿಭೆಯ ಫಲವಾಗಿ ಪರೋಕ್ಷವಾಗಿ ಮಕ್ಕಳ ಮನೋಭಾವ, ಮೌಲ್ಯ, ಅಭಿರುಚಿಗಳನ್ನು ಬದಲಾಯಿಸುವ ಉಪಯುಕ್ತ ಸಾಧನವಾಗಿದೆ. ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದಂತೆ (ಸಮಾಜದ ಆಚಾರ ವಿಚಾರ, ಸಾಂಸ್ಕೃತಿಕ ರೂಢಿಗಳ ಬದಲಾವಣೆ) - ಶಿಕ್ಷಣದ ಕ್ಷೇತ್ರದಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ಅಲೋಚನಾ ವಿಧಾನಗಳು, ಬದಲಾದ ಮೌಲ್ಯಗಳು, ನೀತಿ ನಿಯಮಗಳು, ಪಡಿಯಚ್ಚುಗಳು, ವಿಷಯಗಳು, ಚರ್ವಿತ ಚರ್ವಣಾಂಶಗಳು, ನಿಷೇಧ ಹಾಗೂ ಪವಿತ್ರ ವಿಷಯಗಳು, ಯುಕ್ತಾಯುಕ್ತವಾದ ವಿವೇಚನೆಗಳು ಅಭಿವೃದ್ಧಿಗೊಳ್ಳುತ್ತವೆ.

- ❑ ಶಾಲಾ ವ್ಯಾಸಂಗ ಕಾಲದಲ್ಲಿ ಅಭಿವೃದ್ಧಿಗೊಂಡ ಅಂಶಗಳು ವಿಶಾಲ ಸಮಾಜದಲ್ಲಿ ಬಲವಾಗಿ ಬೇರೂರುತ್ತಿವೆ.
- ❑ ಶಿಕ್ಷಣವು ಮಕ್ಕಳಲ್ಲಿ ಅಗತ್ಯ ಬೌದ್ಧಿಕ ಶಿಸ್ತು, ಸಾಮಾಜಿಕ ಸೌಶೀಲ್ಯತೆ, ಬೌದ್ಧಿಕತೆ, ವಿಮರ್ಶಾತ್ಮಕವಾದ ಆಲೋಚನೆ, ಅಮೂರ್ತ ಭಾವನೆ, ವಿವೇಚನಾತ್ಮಕ ನ್ಯಾಯವನ್ನು ತಿಳಿಸುವಲ್ಲಿ ಸ್ವಂತಿಕೆ, ಸೃಜನಶೀಲತೆ, ಸ್ಫೂರ್ತಿಗಳನ್ನು ಬೆಳೆಸುವಲ್ಲಿ ಸಾಮಾಜಿಕ ಪರಿವರ್ತನೆಯಡಿ ಪ್ರಧಾನ ಪಾತ್ರವಹಿಸುತ್ತದೆ.
- ❑ ಪ್ರಾಥಮಿಕ, ಪ್ರೌಢ ಹಾಗೂ ತಾಂತ್ರಿಕ ಹಂತದಲ್ಲಿ ಔಪಚಾರಿಕ, ಅನೌಪಚಾರಿಕ, ಶಾಲಾರಹಿತ ಶಿಕ್ಷಣದ ಮೂಲಕ ಅಚ್ಚುಕಟ್ಟನ್ನೂ, ವೃತ್ತಪತ್ರಿಕೆಗಳು, ಪುಸ್ತಕಗಳು,

ಬಾನುಲಿ, ದೂರದರ್ಶನ, ಗಣಕಯಂತ್ರ, ಸಮೂಹ ಮಾಧ್ಯಮಗಳ ಮೂಲಕ ವಿವಿಧ ವರ್ಗಗಳ ವಿವಿಧ ವಯೋಮಿತಿಯ ಲಕ್ಷೋಪಲಕ್ಷ ಜನರಿಗೆ ಜ್ಞಾನ ಪ್ರಸಾರವನ್ನೂ ಮಾಡಿ ಕೌಶಲ್ಯ ಗಳಿಕೆಗೆ ಉತ್ತೇಜನ ನೀಡಿ ಉತ್ತಮ ಜೀವನ ವಿಧಾನಕ್ಕೆ ಪ್ರೋತ್ಸಾಹಿಸಿ ಉತ್ತಮ ಸಾಮಾಜಿಕ ಪರಿವರ್ತನೆಗೆ ಪೋಷಕವಾಗಿದೆ.

- ❑ ಶಿಕ್ಷಣವು ಸಂಪ್ರದಾಯ ಮುಗ್ಧತೆ, ಮೂಢನಂಬಿಕೆ, ಕಂದಾಚಾರ ಕಟ್ಟಳೆಗಳನ್ನೂ, ದುಷ್ಟಪದ್ಧತಿಯನ್ನು ದೂರಮಾಡಿ ಭೌತಿಕ ಹಾಗೂ ಅಭೌತಿಕ ಸಂಪನ್ಮೂಲಗಳನ್ನು ಗುರುತಿಸಲು ಅಳವಡಿಸಿಕೊಳ್ಳಲು ಉತ್ತೇಜಿಸಿ, ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಗೆ ಸಹಾಯಕವಾಗುತ್ತವೆ.
- ❑ ಇತ್ತೀಚಿನ ಶಾಲಾ ಪಠ್ಯಕ್ರಮಗಳು ಸಮಾಜದ ಪ್ರಗತಿಪರ ಒಲವುಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.
- ❑ ಮಕ್ಕಳನ್ನು ಶಾಲಾ ಆಡಳಿತ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ ಅವರಲ್ಲಿ ನಾಯಕತ್ವ ಗುಣಗಳ ಪೋಷಣೆಗೆ ಸಹಾಯಕವಾಗುವಂತೆ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯ ಅಭ್ಯಾಸ ಕ್ರಮಕ್ಕೆ ತರಬೇತಿ ನೀಡಲಾಗುತ್ತಿದೆ.
- ❑ ಸಾರ್ವತ್ರಿಕ ಚುನಾವಣಾ ತತ್ವವನ್ನು ವಿಶೇಷ ಹಕ್ಕನ್ನಾಗಿ ಪಡೆದಿರುವ ಸಮಾಜದಲ್ಲಿ ಸ್ಪರ್ಧಿಸಿರುವ ಮತದಾರರ ಗುಣ ಲಕ್ಷಣಗಳು ಕಾರ್ಯಕ್ಷಮತೆಗಳನ್ನು ಅತ್ಯಂತ ಬುದ್ಧಿವಂತಿಕೆಯಿಂದ ತಿಳಿಸಿಕೊಡುವಲ್ಲಿ ಶಿಕ್ಷಣ ಬಹುಮುಖ್ಯ ಪಾತ್ರ ವಹಿಸುತ್ತದೆ.
- ❑ ಶಿಕ್ಷಣ ಹಾಗೂ ಸಾಮಾಜಿಕ ಬದಲಾವಣೆಗಳು ದ್ವಿಪಥ ಸಂಚಾರಿಗಳಂತಿದ್ದು, ಶಿಕ್ಷಣ ಪರಿಪಕ್ವ ಸಂಸ್ಕೃತಿಯನ್ನು ಸಂರಕ್ಷಿಸಿ, ಸುಧಾರಿಸಿ, ವರ್ಗಾಯಿಸುವ ಸಾಧನ ವೆನಿಸಿದೆ.
- ❑ ಶಾಲೆಯು ಪಠ್ಯವಸ್ತುವನ್ನು ಕೂಡಿಕೊಂಡು ಯೋಜನೆ, ಸಾಮಾಜಿಕ ಮೌಲ್ಯ ಹಾಗೂ ಬದಲಾವಣೆಗಳ ನಮೂನೆಗಳನ್ನು ಪ್ರತಿಬಿಂಬಿಸುತ್ತದೆ.

ಸಮಾಜವು ಬದಲಾದ ಸನ್ನಿವೇಶಗಳಲ್ಲಿ ತನ್ನ ಆಸೆ ಆಕಾಂಕ್ಷೆ, ಅಭಿಪ್ರಾಯ - ಇವುಗಳಿಗೆ ಅನುಗುಣವಾಗಿ ಶಾಲೆಯನ್ನು ಪುರಸ್ಕರಿಸಿ ತನ್ನ ಕೆಲಸವನ್ನು ಯೋಜಿಸಿ ವಿಮರ್ಶಿಸುತ್ತದೆ.

ಒಟ್ಟಿನಲ್ಲಿ ಶಾಲೆಯು ಸಮಾಜದ ಅಗತ್ಯತೆ, ಆಸೆ, ಆಕಾಂಕ್ಷೆ ಇವುಗಳಿಗನುಗುಣವಾಗಿ ಶಿಕ್ಷಣ ನೀಡುತ್ತಿದ್ದು ಸಮಾಜವೂ ಸಹ ಸಾಮಾಜಿಕ ಮೌಲ್ಯ, ನೀತಿ ನಿಯಮ ಹಾಗೂ ಬದಲಾವಣೆಯನ್ನು ಪ್ರತಿಬಿಂಬಿಸಿ, ಸಮಾಜದ ಅವಶ್ಯಕತೆಗೆ ಪೋಷಕವಾಗುವ ರೀತಿಯಲ್ಲಿ ಶಾಲಾ ಶಿಕ್ಷಣದ ಕಾರ್ಯಕ್ರಮಗಳನ್ನು ಸುಧಾರಿಸಲು ಪ್ರಯತ್ನಿಸುತ್ತಿದೆ.

ಇಂದಿನ ಶಿಕ್ಷಣದಲ್ಲಿ ಸಾಮಾಜಿಕ ಬದಲಾವಣೆಯು ತನ್ನದೇ ಆದ ಲಕ್ಷಣಗಳು, ಸ್ವರೂಪಗಳು ಹಾಗೂ ಅಂಶಗಳಿಂದ ಕೂಡಿದೆ.

ಸಾಮಾಜಿಕ ಪರಿವರ್ತನೆಯು ಮಾನವನ ಪರಿವರ್ತನೆಯೆನಿಸಿದ್ದು ಗತಿಶೀಲವಾಗಿದ್ದು, ಎಲ್ಲಾ ಕಾಲಕ್ಕೂ, ಸಮಾಜದಲ್ಲಿ ಜರುಗುತ್ತಿರುವ ಕಾರ್ಯವಾಗಿದೆ. ಇದು ನಿಯೋಜಿತ ಮತ್ತು ಅನಿಯೋಜಿತವೆನಿಸಿದ್ದು ವಸ್ತುನಿಷ್ಠ ಕಲ್ಪನೆಯಾಗಿದೆ.

ಪರಿವರ್ತನೆ ಸಮಾಜದ ಆಂತರಂಗಿಕ ಗುಣ. ಅನೇಕ ರೀತಿಯ ಆಂತರಿಕ ಮತ್ತು ಬಾಹ್ಯ ಒತ್ತಡಗಳು ಹಾಗೂ ಇತರ ಕಾರಣಗಳಿಂದ ಸಮಾಜವು ಪರಿವರ್ತನೆ ಹೊಂದುವುದು.

ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದ ಸ್ವರೂಪಗಳು:-

1) ರಾಜಕೀಯ ಬದಲಾವಣೆ 2) ಆರ್ಥಿಕ ಬದಲಾವಣೆ 3) ಧಾರ್ಮಿಕ ಬದಲಾವಣೆ 4) ನೈತಿಕ ಬದಲಾವಣೆ 5) ವೈಜ್ಞಾನಿಕ ಬದಲಾವಣೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಿಂದ ಇಲ್ಲಿಯವರೆಗೆ ಪ್ರಪಂಚದಲ್ಲಿ ಅನೇಕ ಪರಿವರ್ತನೆಗಳು ಜರುಗಿವೆ. ಭಾರತವು ಸ್ವತಂತ್ರವಾಯಿತು. ಅದರಂತೆಯೇ ಬ್ರಹ್ಮದೇಶ, ಇಂಡೋನೇಶಿಯಾ, ಶ್ರೀಲಂಕಾ, ಫ್ರಾನ್ಸ್ ಹಾಗೂ ಆಫ್ರಿಕಾದ ಕೆಲವು ರಾಷ್ಟ್ರಗಳೂ ಸ್ವತಂತ್ರವಾದವು. ಇತ್ತೀಚೆಗೆ ಸೋವಿಯತ್ ಯೂನಿಯನ್‌ದಿಂದ ಕೆಲವು ಭಾಗಗಳು ಸಿಡಿದುಹೋಗಿ ಸ್ವತಂತ್ರ ರಾಷ್ಟ್ರಗಳಾಗಿ ಬದಲಾಗಿವೆ.

1) ಸಂವಿಧಾನಾತ್ಮಕ ಬದಲಾವಣೆ, 2) ಆಧುನೀಕರಣದ ಬದಲಾವಣೆ, 3) ಕಾನೂನಿನ ಬದಲಾವಣೆ, 4) ಹಿಂದೂ ಮತೀಕರಣದ ಬದಲಾವಣೆ, 5) ಪಾಶ್ಚಾತ್ತೀಕರಣದ ಬದಲಾವಣೆ, 6) ರಾಜಕೀಯಕರಣದ ಬದಲಾವಣೆ, 7) ಕೈಗಾರೀಕರಣದ ಬದಲಾವಣೆ, 8) ನಗರೀಕರಣದ ಬದಲಾವಣೆ.

ಈ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಪರಿವರ್ತನೆಗಳು ಇಂದು ಉಂಟಾಗುತ್ತಿದ್ದು ಈ ಎಲ್ಲಾ ಅಂಶಗಳೂ ಶಿಕ್ಷಣದಲ್ಲಿ ಅಳವಡಿಸಲ್ಪಟ್ಟಿವೆ. ಇಂದಿನ ಮಕ್ಕಳಿಗೆ ನಾಳಿನ ನಾಡಿನ, ನಾಗರಿಕ ಸಮಾಜದ ಪ್ರಜೆಗಳಾದ್ದರಿಂದ ಅವರಿಗೆ ಶಿಕ್ಷಣದ ಮೂಲಕ ಈ ಬದಲಾವಣೆಗಳ ಬಗ್ಗೆ ಹಾಗೂ ಪ್ರತಿಯೊಂದು ಅಂಶವೂ ಯಾವ ರೀತಿ ಪ್ರಭಾವವನ್ನು ಬೀರುತ್ತಿದೆ ಎಂಬುದರ ಬಗ್ಗೆ ಸೂಕ್ಷ್ಮಪರಿಚಯ ಮಾಡಿಕೊಡುವುದೇ ಇಲ್ಲಿಯ ಮುಖ್ಯ ಉದ್ದೇಶವಾಗಿದೆ.

ಹೀಗೆ ಶಿಕ್ಷಣಸಂಸ್ಥೆಗಳು ಸಾಮಾಜಿಕ ನಿಯಂತ್ರಣ ಹಾಗೂ ಸಾಮಾಜಿಕ ಬದಲಾವಣೆಯ ಸಶಕ್ತಿ ಸಾಧನವಾಗಿರುವುದಲ್ಲದೆ ಅವುಗಳ ಉದ್ದೇಶಗಳ ಸಾಧನೆಗಾಗಿ ಅನೇಕ ಮಾಧ್ಯಮಗಳನ್ನು ಹೊಂದಿದೆ. ಅವು ಅಪೇಕ್ಷಿತ ಸಾಮಾಜಿಕ ಮನೋಭಾವವನ್ನು ಎತ್ತಿ ಹಿಡಿದು ಸಾಮಾಜಿಕ ಪೂರ್ವಾಗ್ರಹ ಪೀಡನವನ್ನೂ ಋಣಾತ್ಮಕ ಮೌಲ್ಯಗಳನ್ನೂ ದಮನ ಮಾಡುವಲ್ಲಿ ಶ್ರಮಿಸುತ್ತಿವೆ. ಇಂದಿನ ದಿನಗಳಲ್ಲಿ ಶಾಲೆಯ ಕ್ರಿಯಾತ್ಮಕ ಚಟುವಟಿಕೆ ಹಾಗೂ ಶಿಕ್ಷಣದ ಪಾತ್ರವಿಲ್ಲದೆ ಸಾಮಾಜಿಕ ಬದಲಾವಣೆ ಅಪೂರ್ಣವಾಗುತ್ತದೆ ಎಂದು ಹೇಳುತ್ತಿರುವುದು ತಿಳಿದಿರುವ ವಿಷಯ. ಸಾಮಾಜಿಕ ಬದಲಾವಣೆಯನ್ನು ಚುರುಕುಗೊಳಿಸುತ್ತಿರುವ ಶಿಕ್ಷಣ ಸಂಸ್ಥೆಗಳು ಅಥವಾ ಶಿಕ್ಷಣಕ್ಷೇತ್ರ ಅಗತ್ಯವಾದ ಮಾರ್ಗದರ್ಶನ ನೀಡಿ ಬದಲಾಗುವ ಸಮಾಜದ ಸಂಕೀರ್ಣತೆಗಳನ್ನು ಅರಿತು ಅದರೊಡನೆ ಮಕ್ಕಳು ಹೊಂದಿಕೊಂಡು ಹೋಗಲು ಪ್ರಭಾವ ಬೀರುತ್ತಿವೆ. ಮಕ್ಕಳ ಸೃಜನಾತ್ಮಕ, ವಿಮರ್ಶಾತ್ಮಕ ಆಲೋಚನೆಗೆ ಅವಕಾಶ ಮಾಡಿಕೊಟ್ಟು, ರಾಷ್ಟ್ರಜೀವನವನ್ನು ಸುಪುಷ್ಟಗೊಳಿಸಿ ತಮ್ಮ ಉತ್ತಮ ಕೊಡುಗೆಗಳನ್ನು ನೀಡಲು ಪ್ರಜಾಪ್ರಭುತ್ವ ಆಧುನಿಕ ಸಮಾಜದಲ್ಲಿ ಒದಗುವ ಜವಾಬ್ದಾರಿಗಳನ್ನು ನಿರ್ವಹಿಸುವ ತರಬೇತಿ ನೀಡುತ್ತಿದೆ. ಮಾನವನ ಜೀವನದಲ್ಲಿ ಸಾಮಾಜಿಕ ಸ್ವರೂಪ, ವೈಜ್ಞಾನಿಕ, ತಾಂತ್ರಿಕ ಅಭಿವೃದ್ಧಿಯ ವ್ಯಾಪ್ತಿ ಇತಿಹಾಸಗಳನ್ನೂ ಅತ್ಯಾಧುನಿಕ ಉಪಕರಣಗಳ ಅಳವಡಿಕೆ, ಬೋಧನಾ

ವಿಧಾನದಿಂದ ಮನದಟ್ಟು ಮಾಡಲು ವೈಜ್ಞಾನಿಕ, ತಾಂತ್ರಿಕ, ತಾತ್ವಿಕ ಅಂಶಗಳ ಜ್ಞಾನ ಮೂಡಿಸಲು ಮಕ್ಕಳ ವಿಮರ್ಶಾತ್ಮಕ ಬುದ್ಧಿಯನ್ನು ಕುದುರಿಸಲು ನೂತನ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಮಾಡುತ್ತಿದೆ.

ಸಾಂಸ್ಕೃತಿಕ ತೌಲನಿಕ ಅಧ್ಯಯನಕ್ಕೆ ಅವಕಾಶ, ಪ್ರಚಾರ ಮತ್ತು ನೈಜಜ್ಞಾನಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸುವಿಕೆ, ಸಮಾಜದ ಜವಾಬ್ದಾರಿಯುತ ಸದಸ್ಯನಿಗಿರಬೇಕಾದ ಅರ್ಹತೆಗಳ ಅರಿವು ವೈಯಕ್ತಿಕವಾಗಿ ಮತ್ತು ಸ್ವತಂತ್ರವಾಗಿ ಕೆಲಸಮಾಡುವ ಚತುರತೆ, ಕ್ರಿಯಾತ್ಮಕ ನೀತಿ-ನಿಯಮ ನಿಬಂಧನೆಗಳ ಆಚರಣೆ, ನವನವೀನ ಸಂಶೋಧನೆ, ಸುಧಾರಣೆ, ಸುವ್ಯವಸ್ಥಾ ಕಾರ್ಯಕ್ರಮಗಳ ಅಳವಡಿಕೆ, ಇವೇ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕನುಗುಣವಾಗಿ ಇಂದಿನ ಶಿಕ್ಷಣಪದ್ಧತಿಯು ವಿವಿಧ ಅಂಶಗಳನ್ನು ಮನವರಿಕೆ ಮಾಡಿಕೊಟ್ಟು, ಪೂರಕವಾದ ರೀತಿಯಲ್ಲಿ ಅಪೇಕ್ಷಿತ ಸಾಮಾಜಿಕ ಬದಲಾವಣೆಯನ್ನು ಉಂಟುಮಾಡುವಲ್ಲಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಹೀಗೆ ಇಂದಿನ ಶಿಕ್ಷಣಪದ್ಧತಿಯು ಧನಾತ್ಮಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದೆ.

ಅಷ್ಟೇ ಅಲ್ಲದೆ ಸಮಾಜವೂ ಸಹ ವ್ಯಕ್ತಿಗಳ ಜ್ಞಾನಮಟ್ಟ, ವಿಚಾರಶಕ್ತಿಗಳ ಬೆಳವಣಿಗೆಯೊಂದಿಗೆ ವಿಜ್ಞಾನ, ಕೈಗಾರಿಕೆ ಇವೇ ಮೊದಲಾದ ಪ್ರಮುಖ ಕ್ಷೇತ್ರಗಳಲ್ಲಿ ಬದಲಾವಣೆಯಾಗುತ್ತಿರುವುದನ್ನು ಗಮನಿಸಿ ಈ ಬದಲಾವಣೆಗೆ ತಕ್ಕಂತೆ ಶಿಕ್ಷಣ ಹಾಗೂ ಪಠ್ಯಕ್ರಮಗಳನ್ನು ಬದಲಾಯಿಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಸಮಾಜವು -

(1) ಆಯಾ ದೇಶದ ಆದರ್ಶಗಳು, ತತ್ವಗಳು, ಶಿಕ್ಷಣದ ಗುರಿ, ಬೋಧನಾ ವಿಷಯ, ಬೋಧನಾ ಪದ್ಧತಿಗಳ ಮೇಲೆ ತನ್ನ ಪ್ರಭಾವ ಬೀರಿದೆ.

(2) ಪ್ರತಿಯೊಂದು ರಾಷ್ಟ್ರದ ಆಯಾ ಕಾಲದ ವರ್ಗಗಳ ಮೌಲ್ಯಗಳ ಶಿಕ್ಷಣ ಗುರಿಗಳನ್ನು ಪ್ರತಿಬಿಂಬಿಸುತ್ತದೆ.

(3) ಎಲ್ಲರಿಗೂ ಸರಿಸಮಾನವಾಗಿ ಶಿಕ್ಷಣ ದೊರೆಯುವಂತೆ ಮಾಡಿ, ಜಾತ್ಯಾತೀತ ರಾಷ್ಟ್ರವನ್ನು ನಿರ್ಮಿಸಿ ಶಿಕ್ಷಣದ ಪ್ರಕ್ರಿಯೆಯನ್ನು ನಿರ್ಧರಿಸಿದೆ.

(4) ಅನಕ್ಷರತೆಯನ್ನು ಹೋಗಲಾಡಿಸಿ ಏಕತೆಯನ್ನು ಕಾಪಾಡಿಕೊಂಡು ಬರಲು ಪ್ರಯತ್ನಿಸುತ್ತಿದೆ.

ಇಂದು ಸಮಾಜದಲ್ಲಿ ಎಲ್ಲಾ ವರ್ಗದ ಜನರಿದ್ದಾರೆ; ವಿವಿಧ ವೃತ್ತಿಯವರಿದ್ದಾರೆ. ಸಮಾಜವು ಶಾಲೆ, ಕಾಲೇಜುಗಳನ್ನು ತೆರೆಯುವುದರ ಮೂಲಕ ಎಲ್ಲರಿಗೂ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸುತ್ತಿದೆ. ಜಾತ್ರೆ, ಸಾಂಸ್ಕೃತಿಕ ಮೇಳ ಮುಂತಾದವುಗಳ ಮೂಲಕ ಅರಿವು ಮೂಡಿಸುತ್ತಿದೆ. ಅಲ್ಲದೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಶಕ್ತಿ ಪ್ರದರ್ಶನ, ಸ್ಪರ್ಧಾತ್ಮಕ ಚಟುವಟಿಕೆಗಳನ್ನು ನಡೆಸಿ ಅದರಲ್ಲಿ ಎಲ್ಲರೂ ಭಾಗವಹಿಸುವಂತೆ ಅವಕಾಶ ನೀಡುವುದರ ಮೂಲಕ ವಿವಿಧ ವ್ಯಕ್ತಿಗಳ ವೈಯಕ್ತಿಕ ಸಾಮರ್ಥ್ಯ, ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದೆ. ಹೀಗೆ ಸಮಾಜವು ತನ್ನದೇ ಆದ ರೀತಿಯಲ್ಲಿ ಶಿಕ್ಷಣದ ಮೇಲೆ ಪ್ರಭಾವ ಬೀರಿದೆ.

ಒಟ್ಟಿನಲ್ಲಿ ಶಿಕ್ಷಣವೆಂಬುದು ಹಿಂದಿನಿಂದ ಇಂದಿನವರೆಗೂ ಪೀಳಿಗೆಯಿಂದ ಪೀಳಿಗೆಗೆ

ವರ್ಗಾವಣೆಯಾಗುತ್ತಿರುವ ಅತ್ಯುತ್ತಮ ಆಸ್ತಿ. ಇಂಥ ಶಿಕ್ಷಣವು, ದೇಶ, ಕಾಲ, ಪರಿಸ್ಥಿತಿ ಹಾಗೂ ತತ್ವಜ್ಞಾನಗಳ, ರಾಜಕಾರಣಿಗಳ, ವಿಚಾರವಾದಿಗಳ ಅನುಭವ, ತಿಳಿವಳಿಕೆ, ದೃಷ್ಟಿಕೋನದಿಂದ ಸನ್ನಿವೇಶ ಹಾಗೂ ಪರಿಸರಕ್ಕೆ ಅನುಗುಣವಾಗಿ ಬದಲಾವಣೆಗೆ ಒಳಪಟ್ಟಿರುವುದರಲ್ಲಿ ವಿಶೇಷವೇನೂ ಇಲ್ಲ. ಆದರೆ ಈ ಬದಲಾವಣೆಯಿಂದ ವ್ಯಕ್ತಿಗಳ ದೃಷ್ಟಿಕೋನ, ಯೋಚನಾ ಮಟ್ಟ, ಅರ್ಥೈಸಿಕೊಳ್ಳುವಿಕೆ ಹಾಗೂ ವಿವಿಧ ಕೌಶಲ್ಯಗಳೂ ಸಹ ಬದಲಾವಣೆಗೆ ಒಳಪಟ್ಟಿರುವುದು ಔಚಿತ್ಯಪೂರ್ಣವಾಗಿದೆ.

ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ ಪರಸ್ಪರ ಪೂರಕ ವಿಷಯಗಳೆನಿಸಿದ್ದು, ಸಮಾಜ ಬದಲಾವಣೆಗೆ ಒಳಪಟ್ಟಂತೆ ಶಿಕ್ಷಣದ ಅರ್ಥಸ್ವರೂಪ, ಲಕ್ಷಣಗಳೂ ಬದಲಾಗಿದೆ. ಅದೇ ರೀತಿ ಶಿಕ್ಷಣವನ್ನು ಪಡೆದ ರೀತಿ ನೀತಿ, ಕಲಿಕೆಯ ವಿಧಾನ ಬದಲಾವಣೆಯಾದಂತೆ ಸಮಾಜದ ರೀತಿ, ನೀತಿಗಳು ಇವುಗಳಿಗನುಗುಣವಾಗಿ ಬದಲಾವಣೆಯಾಗಿವೆ. ಆದ್ದರಿಂದ ಶಿಕ್ಷಣ ಹಾಗೂ ಸಾಮಾಜಿಕ ಬದಲಾವಣೆ ಎಂಬ ವಿಷಯಗಳು ದ್ವಿಮುಖ ಪ್ರಕ್ರಿಯೆ ಎಂದು ಹೇಳಿದರೆ ತಪ್ಪಾಗಲಾರದು.

ಸಮಾಜದ ಬದಲಾವಣೆಯ ಜೊತೆಜೊತೆಗೆ ಸಮಾಜದ ಸಾಧನೆ, ವ್ಯಕ್ತಿಗಳ ಪ್ರತಿಭೆ ಮುಖ್ಯವಾಗಿದ್ದು ವ್ಯಕ್ತಿಗಳಿಗೆ ಬೆಳವಣಿಗೆಗೆ ಶಿಕ್ಷಣ ಅತ್ಯವಶ್ಯಕವಾಗಿದ್ದು, ಅದಕ್ಕೆ ಸೂಕ್ತ ಪರಿಸರವನ್ನು ಶಿಕ್ಷಣ ಒದಗಿಸಿಕೊಡಬೇಕು. ಶಿಕ್ಷಣವು ಸಾಮಾಜಿಕ ಬದಲಾವಣೆಯಲ್ಲಿ ಮುಖ್ಯವಾಗಿದ್ದು, ವ್ಯಕ್ತಿಗಳಲ್ಲಿ ಸಮಾಜದಲ್ಲಿ ಅನೇಕ ಶಾಶ್ವತ ಬದಲಾವಣೆಗಳನ್ನು ಉಂಟುಮಾಡುವಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಯತ್ನಿಸಬೇಕಾಗಿದೆ.

ಗಾಂಧೀಜಿಯ ಮೂಲಕ ಶಿಕ್ಷಣವು ಭಾರತದೇಶಕ್ಕೆ ಸಮಂಜಸವೇ ?

ಪ್ರೊ. ಎಸ್. ಆರ್. ಹಿರೇಮಠ

"ಭಾರತ ದೇಶದ ಭವಿಷ್ಯವು ಅದರ ವರ್ಗದ ಕೋಣೆಗಳಲ್ಲಿ ರೂಪಿತವಾಗುತ್ತಲಿದೆ" ಎಂದು ಕೊಠಾರಿ ಶಿಕ್ಷಣ ಆಯೋಗದ ವರದಿಯ (1964-66) ಮೊದಲ ವಾಕ್ಯವಾಗಿದೆ. ಇದು ತ್ರಿಕಾಲಾಬಾಧಿತ ಸತ್ಯ; ಎಲ್ಲ ದೇಶಗಳಿಗೂ ಅನ್ವಯಿಸುವಂತಹದು. ಯಾಕೆಂದರೆ ಶಿಕ್ಷಣವು ಒಂದು ದೇಶದ ಮಾನವಸಂಪತ್ತನ್ನು ಅಭಿವೃದ್ಧಿಪಡಿಸುವ ಪರಮೋಚ್ಚ ಸಾಧನ. ದೇಶದ ಇನ್ನುಳಿದ ಚರಾಚರ ಸಂಪತ್ತುಗಳ ಅಭಿವೃದ್ಧಿಯು ಮಾನವಸಂಪತ್ತಿನ ಗುಣಮಟ್ಟವನ್ನೇ ಆಧರಿಸಿರುತ್ತದೆ. ಹಾಗಾದಲ್ಲಿ ಭಾರತ ದೇಶದಲ್ಲೀಗ ಪ್ರಚಲಿತವಿರುವ ಶಿಕ್ಷಣವು ಅಂತಹ ಕಾರ್ಯ ಮಾಡುವಲ್ಲಿ ಸಫಲವಾಗಿದೆಯೇ ? ಸ್ವಾತಂತ್ರ್ಯಾನಂತರ ಮಹಾತ್ಮಾ ಗಾಂಧೀಜಿ 1937ರಲ್ಲಿ ಪ್ರತಿಪಾದಿಸಿದ, ಪ್ರಯೋಗಿಸಿದ ಮೂಲಶಿಕ್ಷಣ ಯೋಜನೆಯು ಭಾರತದ ಕೋಟ್ಯಂತರ ಮಕ್ಕಳ ಮಾನವಸಂಪತ್ತನ್ನು ಅಭಿವೃದ್ಧಿಪಡಿಸಿ ಸಮೃದ್ಧ, ಸ್ವಾವಲಂಬೀ, ಸ್ವಾಭಿಮಾನೀ ಸ್ವತಂತ್ರ ಭಾರತರಾಷ್ಟ್ರವನ್ನು ರೂಪಿಸಬಲ್ಲದೆಂದು ಆಶಿಸಿ ಅಂಗೀಕರಿಸಲಾಗಿತ್ತು. ಈ ಗೃಹಿಕೆಯ ಸತ್ಯಾಸತ್ಯತೆಯನ್ನು ವಿಮರ್ಶಿಸುವುದೇ ಈ ಲೇಖನದ ಉದ್ದೇಶ.

ಶಿಕ್ಷಣ ನಡೆದು ಬಂದ ದಾರಿ

ಗಾಂಧೀಜಿ ಪ್ರತಿಪಾದಿಸಿದ 'ಬೇಸಿಕ್ ಎಜುಕೇಶನ್' ಅಥವಾ ಮೂಲಶಿಕ್ಷಣವು ಭಾರತದೇಶಕ್ಕೆ ಅತ್ಯಂತ ಸಮಂಜಸವಾದ ಶಿಕ್ಷಣಪ್ರಣಾಲಿಯೆಂದು ಭಾರತದ ಸರ್ವೋಚ್ಚ ಲೋಕಸಭೆಯು ಸ್ವಾತಂತ್ರ್ಯಾನಂತರ ಅಂಗೀಕರಿಸಿತು. ಮೂಲಶಿಕ್ಷಣದಲ್ಲಿ ಸಂಶೋಧನೆ ಮತ್ತು ಪ್ರಶಿಕ್ಷಣ ತರಬೇತಿಗಾಗಿ ರಾಷ್ಟ್ರೀಯ ಮೂಲಶಿಕ್ಷಣ ಸಂಸ್ಥೆಯನ್ನು ಭಾರತ ಸರ್ಕಾರವು ಹುಟ್ಟು ಹಾಕಿತು. ಅಲ್ಲದೆ ರಾಷ್ಟ್ರದಾದ್ಯಂತ ಮೂಲಶಿಕ್ಷಣದ ಪ್ರಚಾರ ಮತ್ತು ಅನುಷ್ಠಾನಕ್ಕಾಗಿ ಒಂದು ಮೂಲಶಿಕ್ಷಣ ಮಹಾಸಮಿತಿಯನ್ನು ನಿಯಮಿಸಿತು.

ಹೊಸದಾಗಿ ನಿರ್ಮಿತವಾದ ಕರ್ನಾಟಕ ಸರಕಾರವು 1958ರಲ್ಲಿ ತನ್ನ ಎಲ್ಲಾ ಪ್ರಾಥಮಿಕ ಶಾಲೆಗಳು ಮೂಲಶಿಕ್ಷಣ ಮಾದರಿಯ ಶಾಲೆಗಳೆಂದೂ, ಕ್ರಮಕ್ರಮವಾಗಿ ಮೂಲಶಿಕ್ಷಣ ತತ್ವಗಳನ್ನು ಅವುಗಳಲ್ಲಿ ಅನುಷ್ಠಾನಕ್ಕೆ ತರಬೇಕೆಂದೂ ಘೋಷಿಸಿತು ಮತ್ತು ಅದಕ್ಕೆ ಅನುಗುಣವಾದ ಅಭ್ಯಾಸ ಪತ್ರಿಕೆಯನ್ನು ಈ ಲೇಖಕನ ಮಾರ್ಗದರ್ಶನದಲ್ಲಿ ರಚಿಸಲಾಯಿತು.

ಮುಂದೆ ಕೊಠಾರಿ ಶಿಕ್ಷಣಆಯೋಗವು ಗಾಂಧೀಜಿಯ ಮೂಲಶಿಕ್ಷಣದ ಪ್ರತಿರೂಪ ವೆಂದು 'ಕಾರ್ಯಾನುಭವ' ಮತ್ತು ಸಮಾಜ ಸೇವೆಗಳನ್ನು ಎಲ್ಲಾ ಹಂತಗಳಲ್ಲಿ ಶಿಕ್ಷಣದ ಅವಿಭಾಜ್ಯ ಅಂಗಗಳಾಗಬೇಕೆಂದು ಶಿಫಾರಸ್ಸು ಮಾಡಿತು.

ಇದನ್ನು ಭಾರತದ ಎಲ್ಲಾ ರಾಜ್ಯಗಳೂ ತಾತ್ತ್ವಿಕವಾಗಿ ಅಂಗೀಕರಿಸಿದವು. ಹೊಸ ಕರ್ನಾಟಕ ಸರ್ಕಾರವು ಕೊಠಾರಿಆಯೋಗದ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಕಾರ್ಯಕೈಗೊಂಡ ಮೊದಲ ರಾಜ್ಯವಾಯಿತು. ಪ್ರೌಢಶಾಲಾ ಮಟ್ಟದಲ್ಲಿ ಅಭ್ಯಾಸ ಪತ್ರಿಕೆಯನ್ನೂ, ಶಿಕ್ಷಕರ ಮಾರ್ಗದರ್ಶಕ ಕೈಪಿಡಿಯನ್ನು ಈ ಲೇಖಕನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪ್ರಚಾರ ಮಾಡಿತು.

ಕೇಂದ್ರ ಸರ್ಕಾರವು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಕೇಂದ್ರದಲ್ಲಿ ಕಾರ್ಯಾನುಭವ ಮತ್ತು ಸಮಾಜಸೇವೆಗಳನ್ನು ರಾಷ್ಟ್ರದಾದ್ಯಂತ ಕಾರ್ಯರೂಪದಲ್ಲಿ ತರಲು ಒಂದು ವಿಭಾಗವನ್ನು ಸ್ಥಾಪಿಸಿ, ಅದರ ಮೂಲಕ ಈ ಶಿಕ್ಷಣದ ಮಾರ್ಗದರ್ಶಿಕೆಗಳನ್ನು ಸಿದ್ಧಪಡಿಸಿ ರಾಷ್ಟ್ರಾದ್ಯಂತ ಶಿಕ್ಷಣಅಧಿಕಾರಗಳಿಗೂ ಲಘುತರಬೇತಿ ಶಿಬಿರಗಳನ್ನು ಏರ್ಪಡಿಸಿತು. ಈಗೀಗ ಕರ್ನಾಟಕರಾಜ್ಯದ ಶಿಕ್ಷಣಮಹಾವಿದ್ಯಾಲಯಗಳಲ್ಲಿ ಕಾರ್ಯಾನುಭವವು ಒಂದು ಕಡ್ಡಾಯದ ಪಠ್ಯವಿಷಯವಾಗಿದೆ. 1977ರಲ್ಲಿ ಕಾರ್ಯಾನುಭವಕ್ಕೆ ಸಮಾಜೋಪಯೋಗಿ ಉತ್ಪಾದಕ ಕಾರ್ಯ ಎಂಬ ಹೊಸ ಹೆಸರನ್ನು ಈಶ್ವರಭಾಯಿ ಪಟೇಲ ಆಯೋಗವು ಕೊಟ್ಟಿತು. ಈಗ ಈ ಹೆಸರೇ ಹೆಚ್ಚು ಪ್ರಚಾರದಲ್ಲಿದೆ.

ಇಷ್ಟೆಲ್ಲಾ ಪ್ರಯತ್ನಗಳು ನಡೆದರೂ 1998ರ ಹೊತ್ತಿಗೆ ಗಾಂಧೀಜಿಯ ಮೂಲಶಿಕ್ಷಣದ ಪ್ರತಿರೂಪವಾದ ಸಮಾಜೋಪಯೋಗಿ ಉತ್ಪಾದಕ ಕಾರ್ಯ (ಸಉಕಾ) ಶೇಕಡಾ 90 ಶಾಲೆಗಳಲ್ಲಿ ಅಲಂಕಾರಕ್ಕಾಗಿ ಮತ್ತು ಕಣ್ಣಲ್ಲಿ ಮಣ್ಣೆರಚುವುದಕ್ಕಾಗಿ ಇದೆ. ಗಾಂಧೀಜಿಯ ಇನ್ನುಳಿದ ತತ್ವಗಳನ್ನು ಭಾರತದ ಸರ್ಕಾರಗಳು ಗಾಳಿಗೆ ತೂರಿಬಿಟ್ಟಂತೆ ಗಾಂಧೀಜಿ ಶಿಕ್ಷಣ ವಿಚಾರಗಳನ್ನು ಅವು ಕಡೆಗಣಿಸಿವೆ. ಭಾರತಕ್ಕೆ ಸ್ವರಾಜ್ಯ ಬಂದು ಐವತ್ತು ವರುಷಗಳನ್ನು ತುಂಬಿ ಸುವರ್ಣ ಮಹೋತ್ಸವವನ್ನು ಆಚರಿಸುವ ಸಮಯದಲ್ಲಿ ಗಾಂಧೀ ಶಿಕ್ಷಣ ವಿಚಾರಗಳು ಅಲಕ್ಷಿಸಲ್ಪಟ್ಟು, ಹೇಳ ಹೆಸರಿಲ್ಲದಂತಾಗಿದೆ. ಇದಕ್ಕೆ ಕಾರಣಗಳೇನು?

1) ಶಿಕ್ಷಣಶಾಸ್ತ್ರದ ಗಂಧವಿಲ್ಲದ, ಮಕ್ಕಳಶಿಕ್ಷಣದ ಅನುಭವವಿಲ್ಲದ ರಾಜಕೀಯ ಸನ್ಯಾಸಿಯೆಂದು ಹೆಸರಾದ ಗಾಂಧೀಜಿ ಪ್ರತಿಪಾದಿಸಿದ ಅವ್ಯವಹಾರಿಕ, ಅಸಂಗತ ಶಿಕ್ಷಣವೆಂದೋ ?

2) ಭಾರತದ ದೇಶದಲ್ಲಿ ಈಗ ಎಲ್ಲೆಲ್ಲೂ ವಿಜೃಂಭಿಸಿರುವ ಪುಸ್ತಕದ ಓದು, ಗಿಳಿಪಾಠ, ಅದರ ಪರೀಕ್ಷೆ, ಪದವಿ ಮತ್ತು ಸುಲಭವಾಗಿ ಹೇರಳ ಹಣ ಸಂಪಾದಿಸುವ ಬೇಜವಾಬ್ದಾರಿ ಚಾಕರಿ ಎಂಬ ವಿಷಚಕ್ರದ ಶಿಕ್ಷಣವ್ಯಾಪಾರದಲ್ಲಿ, ಜೀವನಕೇಂದ್ರ ಗಾಂಧೀಜಿ ಶಿಕ್ಷಣವು ಕಾಲ್ತೊಡಕಿನ ಕಷ್ಟಸಾಧ್ಯ ಶಿಕ್ಷಣವೆಂದೋ?

ಗಾಂಧೀಜಿಗಿದ್ದ ಶಿಕ್ಷಣದ ಅನುಭವ

ಗಾಂಧೀಜಿ ತಮ್ಮ ಶಿಕ್ಷಣ ವಿಚಾರಗಳನ್ನು 1937ರಲ್ಲಿ ತಾವು ಸಂಪಾದಿಸುತ್ತಿದ್ದ ಹರಿಜನ ಪತ್ರಿಕೆಯ ಮೂಲಕ ಭಾರತದ ಜನತೆಯ ಮುಂದಿಟ್ಟರು. ಆಗ ಭಾರತದ 7 ಪ್ರಾಂತಗಳಲ್ಲಿ ಜನದಿಂದ ಆಯ್ಕೆಯಾದ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತಿನಿಧಿಗಳು ರಾಜ್ಯಭಾರ ಮಾಡುತ್ತಿದ್ದರು. ಕಾಂಗ್ರೆಸ್ಸಿನ ತತ್ವಗಳಂತೆ ಪಾನನಿರೋಧವನ್ನು ಈ ಪ್ರಾಂತಗಳಲ್ಲಿ ತರಬೇಕಿತ್ತು. ಆಗಿನ ಮುಂಬಯಿಯಂತಹ ಪ್ರಾಂತಗಳಲ್ಲಿ ಅಬಕಾರಿ ಸುಂಕದಿಂದ ಬಂದ ಹಣದಿಂದಲೇ ಮಕ್ಕಳಶಿಕ್ಷಣ ವೆಚ್ಚ ತುಂಬಬೇಕಾಗಿತ್ತು. ಇದು ರಕ್ತ ಸಿಂಚಿತ ಪಾಪದ

ಹಣವೆಂದು ಗಾಂಧೀಜಿ ಬಗೆದರು. ಮತ್ತು ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಹೊರೆಯಾಗದೇ ಮಕ್ಕಳು ದುಡಿಯುತ್ತ ಉತ್ಪಾದಿಸಿ ತಮ್ಮ ಶಿಕ್ಷಣದ ಅಲ್ಪವೆಚ್ಚ ಭರಿಸುತ್ತ, ಕಲಿಯಬಹುದಾದ ಶಾಲೆಗಳನ್ನು ನಡೆಸಲು ಸಲಹೆ ಕೊಟ್ಟರು. ಈ ಶಾಲಾ ಪದ್ಧತಿಯ ವಿವರಗಳನ್ನು ಸಿದ್ಧಪಡಿಸಲು ಶಿಕ್ಷಣವೇತ್ತರಾಗಿದ್ದ ದಿವಂಗತ ಡಾ.ಝಕೀರ್‌ಹುಸೇನರ ಅಧ್ಯಕ್ಷತೆಯಲ್ಲಿ ನಯಿ ತಾಲೀಮು ಸಮಿತಿಯನ್ನು ಸ್ಥಾಪಿಸಲಾಯಿತು. ಈ ಸಮಿತಿಯ ಈ ಹೊಸ ಶಿಕ್ಷಣದ ರೂಪರೇಷೆಗಳನ್ನು ವಿವರಿಸುವ ಅಭ್ಯಾಸ ಪತ್ರಿಕೆಯನ್ನು ಸಿದ್ಧಪಡಿಸಿತು.

ಈ ಅಭ್ಯಾಸ ಪತ್ರಿಕೆಯನ್ನು, ಆಗಿನ ಮುಂಬಯಿ ಪ್ರಾಂತ್ಯದ ಭಾಗಗಳಾಗಿದ್ದ ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ವಿಭಾಗಗಳಲ್ಲಿ ಮತ್ತು ತಮಿಳುನಾಡು, ಬಿಹಾರ ಮುಂತಾದ ಪ್ರಾಂತ್ಯಗಳಲ್ಲಿ ಪ್ರಾಯೋಗಿಕ ಮೂಲಶಿಕ್ಷಣ ಶಾಲೆಗಳಲ್ಲಿ 1938-47ರವರೆಗೆ ಪ್ರಾಯೋಗಿಸಲಾಯಿತು. ಕಾಲಕಾಲಕ್ಕೆ ಈ ಶಾಲಾ ಮಕ್ಕಳ ಪ್ರಗತಿಯನ್ನು ಪರಿಶೀಲಿಸಲಾಯಿತು. ಈ ಪ್ರಗತಿಯು ತೃಪ್ತಿದಾಯಕವೂ, ಆಶಾದಾಯಕವೂ ಎಂದು ಕಂಡುಬಂದ ನಂತರ ಮೂಲಶಿಕ್ಷಣವು ಭಾರತದ ರಾಷ್ಟ್ರೀಯಶಿಕ್ಷಣದ ಧೋರಣೆಯಾಗ ಬೇಕೆಂದು ಸ್ವತಂತ್ರಭಾರತದ ಲೋಕಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಗಾಂಧೀಜಿ ಅನುಭವ

ಈ ಹೊಸ ಶಿಕ್ಷಣದ ವಿಚಾರಗಳು ಗಾಂಧೀಜಿಗೆ 1937 ರಲ್ಲಿ ತತ್‌ಕ್ಷಣ ಹೊಳೆದ ಅವಸರದ ವಿಚಾರಗಳಾಗಿರಲಿಲ್ಲ. ಈ ಜೀವನ ಶಿಕ್ಷಣ ವಿಧಾನವನ್ನು ಅವರು ತಾವು ದಕ್ಷಿಣ ಅಫ್ರಿಕೆಯಲ್ಲಿ ಸ್ಥಾಪಿಸಿದ ಫೀನಿಕ್ಸ್ ಮತ್ತು ಟಾಲ್ಸಟಾಯ ಫಾರ್ಮ್ ಆಶ್ರಮಗಳಲ್ಲಿಯೂ, ಭಾರತದಲ್ಲಿ ಸ್ಥಾಪಿಸಿದ ಸಾಬರಮತಿ ಮತ್ತು ಚಂಪಾರಣ್ಯ ಆಶ್ರಮಗಳಲ್ಲಿಯೂ 40 ವರ್ಷಗಳ ಕಾಲ ಶಿಕ್ಷಕರಾಗಿ ಮಕ್ಕಳಿಗೆ ಕಲಿಸಿದ ಅನುಭವಗಳ ಮೂಲಕ ಕಂಡುಹಿಡಿದಿದ್ದರು. ಈ ಆಶ್ರಮಗಳು ಸಮಗ್ರ ಭಾರತ ದೇಶವನ್ನು ಪ್ರತಿನಿಧಿಸುವಂತಿದ್ದವು. ಅಲ್ಲಿ ಭಾರತದ ಎಲ್ಲ ಧರ್ಮಗಳ, ಭಾಷೆಗಳ, ಸಂಪ್ರದಾಯಗಳ ಹಿರಿಯರು ಮತ್ತು 6 ರಿಂದ 18 ವರುಷ ಪ್ರಾಯದ ಮಕ್ಕಳು ಇರುತ್ತಿದ್ದರು.

ಶಿಕ್ಷಣದ ಕೇಂದ್ರಬಿಂದುಗಳು

ಈ ಶಾಲೆಗಳಲ್ಲಿ ಆಶ್ರಮಜೀವನವೇ ಶಿಕ್ಷಣದ ಕೇಂದ್ರಬಿಂದುವಾಗಿತ್ತು. ಆಶ್ರಮವು ಸ್ವಾವಲಂಬಿ, ಸ್ವಯಂಪೂರ್ಣ, ಶೋಷಣೆರಹಿತ, ಅಹಿಂಸಾತ್ಮಕ, ಸರ್ವಸಮಾನತೆ ಮತ್ತು ಸಹಕಾರ ತತ್ವಗಳಂತೆ ಕಾರ್ಯಮಾಡುವ ಒಂದು ಆದರ್ಶಸಮಾಜವಾಗಿತ್ತು. ಇಂತಹ ಸಮಾಜದಲ್ಲಿ ಮಕ್ಕಳು ಹಿರಿಯರೊಡನೆ ಸಹಕರಿಸಿ ತಮ್ಮ ಶಕ್ತ್ಯಾನುಸಾರ ಕಾರ್ಯ ಮಾಡಬೇಕಾಗಿತ್ತು.

ಇಲ್ಲಿ ಮಕ್ಕಳು ಆಶ್ರಮದ ಪ್ರಾರ್ಥನೆ, ಸ್ವಚ್ಛತೆ, ಅಲಂಕಾರ, ಅಡಿಗೆ, ಊಟ, ವಿವಿಧ ಉತ್ಪಾದಕ ಕಾರ್ಯಗಳಾದ ತೋಟಗಾರಿಕೆ, ಬಡಗಿತನ, ಮನೆಕಟ್ಟುವುದು, ವಸ್ತ್ರ ಸ್ವಾವಲಂಬನೆಗಾಗಿ ನೂಲುವುದು, ನೇಯ್ಗೆ ಮುಂತಾದ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಶಾಲೆಯಲ್ಲಿ ಸ್ವಯಂ ಆಡಳಿತ ಜಾರಿಯಲ್ಲಿದ್ದು ಮಕ್ಕಳು ಜವಾಬ್ದಾರಿ ನಾಯಕರಾಗಿ ಕಾರ್ಯ ಮಾಡಬೇಕಾಗಿತ್ತು. ಇಲ್ಲಿ ಎಲ್ಲ ಧರ್ಮಗಳ-ಹಿಂದೂ, ಕ್ರೈಸ್ತ, ಮುಸಲ್ಮಾನ, ಫಾರ್ಸಿ - ಹಬ್ಬಗಳನ್ನು ಆಚರಿಸಲಾಗುತ್ತಿತ್ತು. ಅವುಗಳಲ್ಲಿ ಎಲ್ಲ ಮಕ್ಕಳೂ ಪಾಲ್ಗೊಂಡು ಸರ್ವಧರ್ಮ

ಸಮಾನತೆ, ಪರಧರ್ಮ ಪ್ರೀತಿ, ಗೌರವಗಳ ಪಾಠ ಕಲಿಯುತ್ತಿದ್ದರು. ಇದರ ಜೊತೆಗೆ ಲಲಿತಕಲೆ, ಕ್ರೀಡಾ ಮನೋರಂಜನೆಗಳು ಇದ್ದವು.

ಈ ಎಲ್ಲ ಬಗೆಯ ಉತ್ಪಾದಕ, ಸಾಮಾಜಿಕ, ಧಾರ್ಮಿಕ, ಸ್ವಾವಲಂಬನಾ ಕಾರ್ಯಗಳಲ್ಲಿ ಅಡಕವಾದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ವೈಜ್ಞಾನಿಕ ವಿಚಾರಗಳನ್ನು ಗಾಂಧೀಜಿ ಮಕ್ಕಳೊಡನೆ ಚರ್ಚಿಸುತ್ತಿದ್ದರು. ಹೀಗೆ ಪುಸ್ತಕಗಳ ಮೂಲಕ ಶಿಕ್ಷಣ ಸಾಗದೇ ಸ್ವಾವಲಂಬೀ ಜೀವನದ ಚಟುವಟಿಕೆ ಮತ್ತು ಮೌಖಿಕ ಚರ್ಚೆಗಳ ಮೂಲಕವೇ ಸಾಗುತ್ತಿತ್ತು. ಪುಸ್ತಕಗಳ ಓದು ಪೂರಕ ಶಿಕ್ಷಣ ಸಾಧನವಾಗಿತ್ತು. ಆದುದರಿಂದ ಗಾಂಧೀಜಿ ಈ ಶಿಕ್ಷಣವನ್ನು ಜೀವನದ ಮೂಲಕ, ಜೀವನಕ್ಕಾಗಿ ಜೀವನದುದ್ದಕ್ಕೂ ನಡೆಯುವ ಜೀವನ ಶಿಕ್ಷಣವೆಂದು ಕರೆದರು.

ಗಾಂಧೀಜಿ ನಂಬಿಕೆ

ಈ ಎಲ್ಲಾ ನಲವತ್ತು ವರ್ಷಗಳ ಅನುಭವಗಳ ಹಿನ್ನೆಲೆಯಲ್ಲಿ ಗಾಂಧೀಜಿ ತಮ್ಮ ಮೂಲ ಶಿಕ್ಷಣದ ವಿಚಾರಗಳನ್ನು 1937ರಲ್ಲಿ ಭಾರತದ ಜನತೆಯ ಮುಂದಿಟ್ಟಿರುವ ಇದರ ಪ್ರಯೋಗಗಳು ಭಾರತದ ಸಾಮಾನ್ಯ ಶಾಲೆಗಳಲ್ಲಿ (1938-47) ನಡೆದ ಪರೀಕ್ಷೆಗೆ ಒಳಪಟ್ಟು, ತೇರ್ಗಡೆಯಾದ ನಂತರ ಅವರು ಈ ಶಿಕ್ಷಣದ ಸಮಂಜಸತೆ ಮತ್ತು ಮಹತ್ವದ ಬಗೆಗೆ ತಾವು ಹತರಾಗುವ ಕೆಲವೇ ದಿವಸಗಳ ಮುಂದೆ ಡಾ. ಜಿ. ರಾಮಚಂದ್ರನ್ (ಮಧುರೆಯ ವಿ.ವಿ. ಕುಲಪತಿಗಳು) ಅವರಿಗಿತ್ತ ಸಂದರ್ಶನದಲ್ಲಿ (1948) ರಲ್ಲಿ ಹೀಗೆ ಉದ್ಗಾರ ತೆಗೆದಿದ್ದಾರೆ :

"ನನ್ನ ನಾಡಿಗೂ, ಜಗತ್ತಿಗೂ ಮೂಲಶಿಕ್ಷಣ ನನ್ನ ಶ್ರೇಷ್ಠಕೊಡುಗೆ. ನನ್ನ ಈ ಹೇಳಿಕೆಯನ್ನು ಇಂದು ಒಪ್ಪದಿರ್ಬಹುದು. ಆದರೆ ಅದನ್ನು ಶಂಕಿಸದಿರುವ ದಿನ ಬಂದೀತು; ನನಗೆ ವಿಶ್ವಾಸವಿದೆ. ಮೂಲಶಿಕ್ಷಣ ಬದುಕಿರುವವರೆಗೆ ಭಾರತದ ಜನಕೋಟಿಯ ಬುದ್ಧಿ, ಹೃದಯಗಳಲ್ಲಿ ನಾನು ಬದುಕಿರುತ್ತೇನೆ. ಮೂಲಶಿಕ್ಷಣ ಮರೆತು ಹೋದರೆ ನಾನೂ ಮರೆತು ಹೋಗುತ್ತೇನೆ".

ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರ ನೇತೃತ್ವದ ವಿಶ್ವವಿದ್ಯಾಲಯ ಶಿಕ್ಷಣ ಆಯೋಗದ ಗೌರವ ಸದಸ್ಯರೂ ಟೆನೆವಾಲಿಯ ಅಧ್ಯಕ್ಷರಾಗಿ ಎ.ಈ.ಮಾರ್ಗನ್‌ಅವರು ಗಾಂಧೀಜಿಯ ಮೇಲಿನ ಹೇಳಿಕೆಯನ್ನು ಪುಷ್ಟೀಕರಿಸಿದ್ದಾರೆ. "ಅದು ವಿಶ್ವದ ಶಿಕ್ಷಣಪ್ರಪಂಚಕ್ಕೆ ಗಾಂಧೀಜಿ ಕೊಡಮಾಡಿದ ಅತ್ಯಂತ ಶೇಷ್ಠಕೊಡುಗೆ" ಎಂದಿದ್ದಾರೆ. ಅಲ್ಲದೇ ಗಾಂಧೀಜಿ ವಿಚಾರಗಳನ್ನು ಪ್ರತಿಪಾದಿಸುವ "ಗ್ರಾಮೀಣ ಭಾರತದ ಉಚ್ಚಶಿಕ್ಷಣ" ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದಾರೆ.

ಗಾಂಧೀಜಿಗೆ ಉತ್ಪ್ರೇಕ್ಷೆ ಜಂಭಗಳಿರಲಿಲ್ಲವೆಂದು ಈ ಸಂದರ್ಭದಲ್ಲಿ ಅವರ ನಿಕಟವರ್ತಿಗಳೂ, ಆಧ್ಯಾತ್ಮಿಕ ವಾರಸುದಾರರೆನಿಸಿಕೊಂಡವರೂ ಆದ ಸಂತ ವಿನೋಬಾಜಿ ಉಲ್ಲೇಖಿಸಿದ್ದಾರೆ. ಸೇವಾಗ್ರಾಮದ ನಯಿತಾಲೀಮ ಭವನದ ಅಖಿಲಭಾರತ ಶಿಕ್ಷಕರ ತರಬೇತಿ ಕೇಂದ್ರದಲ್ಲಿ 1943-48ರಲ್ಲಿ ನಾನು ಶಿಕ್ಷಕ ವಿದ್ಯಾರ್ಥಿಯಾಗಿದ್ದಾಗ ಮೂಲಶಿಕ್ಷಣದಲ್ಲಿ ಗಾಂಧೀಜಿಗಿದ್ದ ಅಪಾರ ನಂಬಿಕೆ ಮತ್ತು ಆಸಕ್ತಿಗಳ ಅರಿವಾಯಿತು. ಏಕೆಂದರೆ ಅವರು ನಮ್ಮ ಶಿಕ್ಷಣದಲ್ಲಿ ವಿಶೇಷ ಆಸಕ್ತಿವಹಿಸಿ ತಮ್ಮ ಅತ್ಯಂತ ಶ್ರೇಷ್ಠ ಅನುಯಾಯಿಗಳೂ, ಶಿಕ್ಷಣವೇತ್ತರೂ ಆದ ಸಂತ ವಿನೋಬಾಜಿ, ಡಾ. ಝಾಕೀರ್‌ಹುಸೇನ,

ಡಾ.ಜೆ.ಸಿ.ಕುಮಾರಪ್ಪ, ಆಚಾರ್ಯ ಜೆ.ಬಿ.ಕೃಪಲಾನಿ, ಶ್ರೀ ಧೀರೇಂದ್ರ ಮುಜುಮದಾರ, ಡಾ. ಜೆ.ರಾಮಚಂದ್ರನ್, ಡಾ. ಶ್ರೀಮನ್ನಾರಾಯಣ ಅಗರವಾಲ್ ಮುಂತಾದವರನ್ನು ನಮ್ಮ ಶಿಕ್ಷಕರಾಗಿ ಕಳಿಸಿದ್ದರು. ಶಿಕ್ಷಣವೇತ್ತರಾದ ಶ್ರೀ ಈ. ಡಬ್ಲ್ಯೂ.ಆರ್ಯನಾಯಕಂ ಮತ್ತು ಶ್ರೀಮತಿ ಆಶಾದೇವಿ ಆರ್ಯನಾಯಕಂ ದಂಪತಿಗಳು ನಮ್ಮ ಪ್ರಾಚಾರ್ಯರಾಗಿ ಈ ಕೇಂದ್ರವನ್ನು ನಡೆಸಿಕೊಂಡು ಹೋಗುತ್ತಿದ್ದರು. ನಮ್ಮ ತರಬೇತಿ ಕೇಂದ್ರಕ್ಕೆ ಮಹಾತ್ಮ ಗಾಂಧೀಜಿ ಫೆಬ್ರವರಿ 1, 1948ರಲ್ಲಿ ಬಂದು ನಮ್ಮೊಡನೆ ಒಂದು ತಿಂಗಳು ನಮಗೆ ಗುರುಗಳಾಗುವ ಅವಕಾಶವಿತ್ತು. ಆದರೆ ಜನವರಿ 30ರಲ್ಲಿ ಅವರ ಹತ್ಯೆಯಾಗಿ ನಾವು ಅಪರೂಪದ ಸದವಕಾಶದಿಂದ ವಂಚಿತರಾದೆವು.

ಎಡವಿದ್ದೆಲ್ಲಿ ?

ಭಾರತದಲ್ಲಿ ಈಗ ಪ್ರಚಲಿತವಾದ ಶಿಕ್ಷಣದಲ್ಲಿ ಗಾಂಧೀಜಿ ಶಿಕ್ಷಣದಲ್ಲಿಯಂತೆ ಉತ್ಪಾದಕ ಕಾರ್ಯ ಮತ್ತು ಸಂಪನ್ನ ಜೀವನಗಳು ಶಿಕ್ಷಣದ ಕೇಂದ್ರಗಳಾಗಿಲ್ಲ. ಅದಕ್ಕೆ ಬದಲು ಒಂದಿಲ್ಲೊಂದು ಚಾಕರಿಯಾಗಿ, ಅದರಲ್ಲಿಯೂ ಹೇರಳ ಹಣ ಕೊಳ್ಳೆಹೊಡೆಯಲು ನೆರವಾಗುವ ಚಾಕರಿಗಾಗಿಯೇ ಶಿಕ್ಷಣವ್ಯವಸ್ಥೆ ಇದೆ. ಅದರಲ್ಲಿ ಪುಸ್ತಕದ ಸಂಗತಿಗಳ ಗಿಳಿಪಾಠ, ಅದರ ಪರೀಕ್ಷೆ, ಪದವಿ ಚಾಕರಿಗಳೇ ಮುಖ್ಯ. ಇಂತಹ ಶಿಕ್ಷಣವು ಸುಮಾರು ಒಂದೂವರೆ ಶತಮಾನ ಕಾಲ ಸ್ವಾತಂತ್ರ್ಯಪೂರ್ವದಲ್ಲಿ ಭಾರತದಲ್ಲಿತ್ತು. ಸ್ವಾತಂತ್ರ್ಯಾನಂತರ ಈ ಅರ್ಧಶತಮಾನದಲ್ಲಿ ಅದು ಇನ್ನೂ ವಿಕಾರಗೊಂಡು ಬಲಿತಿದೆ; ಅಲ್ಲದೆ ಬೆಂಕಿಗೆ ಎಣ್ಣೆ ಸುರಿದಂತೆ ಆಂಗ್ಲಮಾಧ್ಯಮದ ಹುಚ್ಚು ಹೆಚ್ಚಾಗಿದೆ. ಎಲ್ಲರಿಗೂ ತಿಳಿದಿರುವಂತೆ ಮೆಕಾಲೆಯ 1935ರ ಪರಿಪತ್ರದಂತೆ ಆಂಗ್ಲಶಿಕ್ಷಣ ಭಾರತದಲ್ಲಿ ಕಾಲೂರಿತು. ಅದರ ಉದ್ದೇಶವು ಭಾರತೀಯ ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ ಕೊಡುವುದಾಗಿರಲಿಲ್ಲ. ಭಾರತದ ಮೇಲ್ವರ್ಗದ ಜನರಿಗೆ ಐರೋಪ್ಯ ಸಾಹಿತ್ಯ ಮತ್ತು ವಿಜ್ಞಾನಗಳಲ್ಲಿ ಆಸಕ್ತಿ ಮೂಡಿಸಿ ಐರೋಪ್ಯ ಸಂಸ್ಕೃತಿಯತ್ತ ಅವರನ್ನು ಆಕರ್ಷಿಸಿ, ಹುಟ್ಟಿನಲ್ಲಿ ಭಾರತೀಯರಾದರೂ ನಂತರದಲ್ಲಿ ಆಂಗ್ಲರನ್ನಾಗಿಸುವ ಹುನ್ನಾರ ಮೆಕಾಲೆಯದಾಗಿತ್ತು. ಅದು ಬಹುಮಟ್ಟಿಗೆ ಸಾಧಿತವೂ ಆಯಿತು.

ಚಾಕರಿಯ ಆಮಿಷ

ಮುಂದೆ 1844ರಲ್ಲಿ ಭಾರತದ ವೈಸರಾಯರಾಗಿದ್ದ ಲಾರ್ಡ್‌ಹಾರ್ಡಿಂಜ್ ಆಂಗ್ಲಶಿಕ್ಷಣ ಪಡೆದ ಭಾರತೀಯ ಯುವಕರಿಗೆ ಸರಕಾರದ ಸೇವೆಗಳಲ್ಲಿ ಆದ್ಯತೆ ನೀಡಬೇಕೆಂದು ಆದೇಶ ನೀಡಿದರು. ಇದರಿಂದಾಗಿ ಪ್ರತಿಭಾವಂತ ಮೇಲ್ವರ್ಗದ ಯುವಕರು ಆಂಗ್ಲಶಿಕ್ಷಣಕ್ಕೆ ಮೊರೆಹೋದರು. ಆಗ ಆರೆಂಟುವರುಷ ಆಂಗ್ಲಶಿಕ್ಷಣ ಪಡೆದ ಯುವಕರಿಗೆ ಅಧಿಕಾರ, ಸಾಮಾಜಿಕ ಗೌರವ ಮತ್ತು ಹೇರಳ ಹಣ ದೊರೆಯುವ ಸರ್ಕಾರಿ ನೌಕರಿಗಳು ಸಿಗತೊಡಗಿದವು. ಅದು ಪುಸ್ತಕ ಪ್ರಧಾನ ಆಂಗ್ಲಶಿಕ್ಷಣವಾಗಿ ಭಾರತೀಯ ಸಂಸ್ಕೃತಿ, ಜೀವನ ವಿಧಾನ ಮತ್ತು ಆರ್ಥಿಕ ಸ್ವಾವಲಂಬನೆಗಳಿಗೆ ಪೂರಕವಾಗಿತ್ತು. ಮೊದಮೊದಲು ಅಲ್ಪಸ್ವಲ್ಪ ಆಂಗ್ಲಶಿಕ್ಷಣ ಪಡೆದ ಯುವಕರಿಗೆ ಸುಲಭವಾಗಿ ನೌಕರಿಗಳು ದೊರೆತರೂ, ಆಂಗ್ಲಶಿಕ್ಷಣ ಪಡೆದ ಯುವಕರ ಸಂಖ್ಯೆ ಹೆಚ್ಚಿದಂತೆ ನೌಕರಿಗಳ ಸಂಖ್ಯೆ ಬೆಳೆಯಲಿಲ್ಲ. ಆದುದರಿಂದ ಸುಶಿಕ್ಷಿತರ ನಿರುದ್ಯೋಗ ಸಮಸ್ಯೆ ಉದ್ಭವಿಸಿತು.

ಬದಲಾವಣೆ ಪ್ರಯತ್ನ

ಯುವಕರ ಈ ನಿರುದ್ಯೋಗ ಸಮಸ್ಯೆಯ ಗಂಭೀರತೆಯನ್ನು ಗಮನಿಸಿದ ಆಗಿನ ಆಂಗ್ಲ ಸರಕಾರಗಳೇ ನಿಯಮಿಸಿದ 1854ರ ವುಡ್ಸ್‌ಡಿಸ್ಪ್ಯಾಚ್; 1882 ರ ಹಂಟರ ಕಮಿಷನ್ ಮತ್ತು 1929ರ ಹಾರ್ಟಾಗ್ ಕಮಿಟಿಗಳು, ಶಿಕ್ಷಣದಲ್ಲಿ ಭಾರತೀಯರ ಜೀವನಕ್ಕೆ ಉಪಯುಕ್ತವಾದ ಜ್ಞಾನ, ಕೌಶಲ್ಯಗಳಿರಬೇಕೆಂದು ಸಲಹೆಯಿತ್ತವು. ಮುಂದೆ 1936ರಲ್ಲಿ ಅಬಟ್ ಮತ್ತು ವುಡ್ ಎಂಬ ಆಂಗ್ಲಶಿಕ್ಷಣತಜ್ಞರು ಕೃಷಿ, ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳು ಶಾಲಾ ಅಭ್ಯಾಸದಲ್ಲಿ ಇರಬೇಕೆಂದು ಶಿಫಾರಸು ಮಾಡಿದರು. ಅದರಂತೆ ಈ ವಿಷಯಗಳುಳ್ಳ ಮಾಧ್ಯಮಿಕ (ಪ್ರೌಢ) ಶಾಲೆಗಳೂ ಸ್ಥಾಪಿತವಾದವು. 1943-44ರಲ್ಲಿ ಸರ್ ಜಾನ್ ಸಾರ್ಜಂಟ್ ಅವರು ಪ್ರಾಥಮಿಕ ಶಾಲಾಮಟ್ಟದಲ್ಲಿ ಗಾಂಧೀಜಿ ಪ್ರತಿಪಾದಿಸಿದ ಮೂಲಶಿಕ್ಷಣವಿರಬೇಕೆಂದೂ ಮಾಧ್ಯಮಿಕ ಶಾಲಾಮಟ್ಟದಲ್ಲಿ ಭಾರತದಲ್ಲಿರುವ ವಿವಿಧ ಕಸುಬುಗಳ ಶಿಕ್ಷಣವಿರಬೇಕೆಂದೂ ಸೂಚಿಸಿದರು.

ಸ್ವಾತಂತ್ರ್ಯಾನಂತರ ಸ್ಥಾಪಿತವಾದ ಡಾ. ಮುದಲಿಯಾರ ಸಮಿತಿಯೂ (1952-53) ಇದೇ ಬಗೆಯ ಸಲಹೆ ನೀಡಿ ಮಾಧ್ಯಮಿಕ ಶಾಲಾ ಮಟ್ಟದಲ್ಲಿ ವಿವಿಧೋದ್ದೇಶ ಶಾಲೆಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು. ಅಬೆಟ್ ಮತ್ತು ವುಡ್ ಮತ್ತು ಡಾ. ಮುದಲಿಯಾರ ಅವರು ಪ್ರತಿಪಾದಿಸಿದ ಮಾಧ್ಯಮಿಕ ಶಾಲೆಗಳು ಸ್ಥಾಪಿತವಾದರೂ ಅವು ಬಹುಕಾಲ ಬಾಳಲಿಲ್ಲ. ಇದ್ದಕ್ಕೆಲ್ಲ ಶಿಕ್ಷಣತಜ್ಞರ, ಮಾರ್ಗದರ್ಶಕರ, ಆಡಳಿತಗಾರರ ಮತ್ತು ರಾಜಕೀಯ ಮುತ್ಸದ್ದಿಗಳ ಅದೂರ ದೃಷ್ಟಿ, ನಿರ್ಲಕ್ಷ್ಯ, ಶಿಕ್ಷಕರ ಅಜ್ಞಾನ, ಆಲಸ್ಯ ಮತ್ತು ಅದಕ್ಷತೆಗಳೇ ಕಾರಣ.

ಭಾರತದ ಸ್ವಾತಂತ್ರ್ಯದ ನಂತರ ಇದುವರೆಗೆ ನಿಯಮಿತವಾಗಿರುವ ಡಾ.ಮೊದಲಿಯಾರ ಕಮಿಟಿ (1953), ಡಾ. ಕೊಠಾರಿ ಆಯೋಗ (1964-66), 1986ರ ಹೊಸಶಿಕ್ಷಣ ನೀತಿಗಳು ಗಾಂಧೀಜಿಯ ಮೂಲಜೀವನ ಶಿಕ್ಷಣತತ್ವಗಳು ಶಾಲಾಕ್ರಮದಲ್ಲಿ ಬರಬೇಕೆಂದು ಶಿಫಾರಸ್ಸು ಮಾಡಿವೆ. ಡಾ. ಕೊಠಾರಿ ಸಮಗ್ರ ಶಿಕ್ಷಣ ಕಾರ್ಯಾನುಭವ ಮತ್ತು ಸಮಾಜಸೇವೆಗಳ ರೂಪದಲ್ಲಿರಬೇಕೆಂದಿದೆ. ಶಾಲಾ ಆವರಣದಲ್ಲಿಯೇ ಎಲ್ಲ ಮಕ್ಕಳಿಗೆ ಉತ್ಪಾದಕ ಕಾರ್ಯಗಳನ್ನು ಒದಗಿಸಲು ಆರ್ಥಿಕವಾಗಿ ಕಷ್ಟಸಾಧ್ಯವಾದುದರಿಂದ ಅಂತಹ ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಅವರವರ ಮನೆ, ಶಾಲೆ, ಸಮಾಜದಲ್ಲಿರುವ ಹೊಲ, ತೋಟ, ಗದ್ದೆ, ಕಾರ್ಖಾನೆ ಮುಂತಾದ ಕಡೆಗಳಲ್ಲಿ ಉತ್ಪಾದಕ ಕಾರ್ಯಗಳನ್ನು ಒದಗಿಸಬೇಕೆಂದು ಸೂಚಿಸಿದೆ.

ಆದರೆ ಈ ಯಾವ ರಚನಾತ್ಮಕ ಸಲಹೆಗಳೂ ನಮ್ಮ ಶಿಕ್ಷಣಕ್ರಮದಲ್ಲಿ ಬಾರದೇ ಕೋಣದ ಮುಂದೆ ಕಿನ್ನರಿ ಬಾರಿಸಿದಂತಾಗಿದೆ. ಇದಕ್ಕೆಲ್ಲ ಶಿಕ್ಷಣದ ಮೂಲ ಸ್ವರೂಪದ ಬಗೆಗೆ ಶಿಕ್ಷಣವ್ಯವಸ್ಥೆಗಳ ಅಜ್ಞಾನ, ರಾಷ್ಟ್ರದ ಹಿತಾಸಕ್ತಿಗಳಲ್ಲಿ ರಾಜಕೀಯ ಮುತ್ಸದ್ದಿಗಳ ಅನಾಸಕ್ತಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಸಂಕುಚಿತ ಸ್ವಾರ್ಥಗಳೇ ಕಾರಣವೆಂದು ಮತ್ತೆಮತ್ತೆ ಹೇಳಬೇಕಾಗಿದೆ.

ಶಾಲೆಯ ವ್ಯಾಖ್ಯೆ

"ಸಮಾಜವು ತಾನುಳಿದು ಬೆಳೆಯಲು ಮಾಡಿಕೊಂಡ ಯೋಜನೆಯೇ ಶಾಲೆ" ಎಂದು

ಅದರ ವ್ಯಾಖ್ಯೆಯಿದೆ. ಇದು ತ್ರಿಕಾಲಾಬಾಧಿತ ಸತ್ಯ. ಆದುದರಿಂದಲೇ ಶಾಲೆಯೆಂಬ ವ್ಯವಸ್ಥೆಯು ಒಂದಿಲ್ಲೊಂದು ರೂಪದಲ್ಲಿ ಅನಾದಿಕಾಲದಿಂದಲೂ ಅಸ್ತಿತ್ವದಲ್ಲಿದೆ. ಅದಕೆ ನಿಸರ್ಗದಲ್ಲಿ ಪಶುಪಕ್ಷಿಗಳೂ ಸಹ ಸ್ವತಂತ್ರವಾಗಿ ಜೀವಿಸಲು ತಮ್ಮ ಮರಿಗಳಿಗೆ ಕಲಿಸುತ್ತವೆ. ಬೇಟೆಯಾಡಿ ಬಾಳುತ್ತಿದ್ದ ಕಾಡುಮನುಷ್ಯನಿಂದ ಇಪ್ಪತ್ತನೇ ಶತಮಾನದ ಅಧುನಿಕ ಮಾನವನವರೆಗೆ ಎಲ್ಲರೂ ತಮ್ಮ ಸಂಸ್ಕಾರ ಕೊಡುತ್ತ ಬಂದಿದ್ದಾರೆ.

ಮೊದಮೊದಲು ಮನೆಯೇ ಜನಸಾಮಾನ್ಯರ ಶಾಲೆಯಾಗಿತ್ತು. ಕೃಷಿ, ಕುಶಲ ಕರ್ಮಗಳನ್ನು ಮನೆಯ ಹಿರಿಯರಿಂದ ಕಲಿಯುವ ಸಂಪ್ರದಾಯ ಭಾರತದಲ್ಲಿತ್ತು. ಅನಂತರ ತಜ್ಞ ಕುಶಲಕರ್ಮಿಗಳಲ್ಲಿ ಶಿಷ್ಯವೃತ್ತಿ ಸ್ವೀಕರಿಸಿ ಕಲಿಯುವ ವ್ಯವಸ್ಥೆಯಾಯಿತು. ಅಧುನಿಕ ಸಂಕೀರ್ಣ ಸಮಾಜದಲ್ಲಿ ಶಾಲೆಯೆಂಬ ಪ್ರತ್ಯೇಕ ವ್ಯವಸ್ಥೆಯು ಸಮಾಜದ ಎಲ್ಲಾ ಮಕ್ಕಳಿಗೂ ಬೇಕಾಯಿತು. ಅದರಲ್ಲಿಯೂ ಉದ್ಯಮಕ್ರಾಂತಿಯ ನಂತರ ಶಾಲೆಯ ಅವಶ್ಯಕತೆಯು ತೀವ್ರವಾಯಿತು. ಈ ಕೆಲಸಗಾರರ ಮಕ್ಕಳು ಕಲಿಯಲೂ, ಮಾಡಲೂ ಕೆಲಸಗಳಿಲ್ಲದೆ ಉಡಾಳರಾಗಿ ಬೀದಿಗಳಲ್ಲಿ ಅಲೆದು ಸಮಾಜಕಂಟಕರಾಗಿ ಬೆಳೆಯುವುದನ್ನು ತಪ್ಪಿಸಲು ಓದುಬರಹ, ಇತಿಹಾಸ, ಕ್ರೀಡೆಗಳೇ ಪಠ್ಯವಸ್ತುವಾದ ಶಾಲೆಗಳು ಯೂರೋಪದಲ್ಲಿ ಆರಂಭವಾಗಿ ಮುಂದೆ ಅವುಗಳು ಅಭ್ಯಾಸ ವಿಷಯಗಳೂ ಕ್ರಮೇಣ ವಿಸ್ತಾರಗೊಂಡವು. ಕೆಲಸಗಾರ ತಾಯಂದಿರ ಚಿಕ್ಕಮಕ್ಕಳ ಪಾಲನೆ ಪೋಷಣೆಗಾಗಿ ಉದ್ಯಮ ಕೇಂದ್ರಗಳಲ್ಲಿ ಶಿಶುವಿಹಾರಗಳೂ ಅವಶ್ಯಕವೆನಿಸಿದವು.

ಈ ಎಲ್ಲಾ ಶಿಕ್ಷಣವ್ಯವಸ್ಥೆಗಳ ಮೂಲ ಕಾರಣ ಸಮಾಜದ ಸಂಕೀರ್ಣತೆ ಮತ್ತು ಮನೆಯ ಹೊರಗಡೆ ದುಡಿಯುವ ತಂದೆತಾಯಂದಿರ ಅಸಹಾಯಕತೆ. ಹೀಗಾಗಿ ಸಮಾಜವು ಸಂಪಾದಿಸುತ್ತ ಬಂದ ಜ್ಞಾನ, ಕೌಶಲ, ಕಲೆ, ಸಂಸ್ಕೃತಿ, ಜೀವನವಿಧಾನ, ಆದರ್ಶಗಳನ್ನು ಮುಂದಿನ ತಲೆಮಾರಿಗೆ ಶಾಲೆಯೇ ಸಾಗಿಸಬೇಕಾಯಿತು. ಅದೇ ಕಾಲಕ್ಕೆ ತಮ್ಮ ಕಾಲದಲ್ಲಿ ತಲೆನೋವಾದ ಸಮಾಜಕಂಟಕವಾದ ಆಚರಣೆಗಳನ್ನು ತೊಡೆದುಹಾಕಿ ಸುಭದ್ರ, ಸುಸಂಪನ್ನ, ಪ್ರಗತಿಪರ, ಸುಖೀಸಮಾಜ ನಿರ್ಮಾಣವೂ ಈಗ ಶಿಕ್ಷಣದ ಗುರಿಯಾಗಿದೆ. ಹೀಗೆ ಶಿಕ್ಷಣಕ್ಕೆ ಸ್ಥಿರತೆ ಮತ್ತು ಬದಲಾವಣೆಗಳ ಎರಡು ಮುಖಗಳಿವೆ.

ಜೀವನ ಶಿಕ್ಷಣ

ಗಾಂಧೀಜಿ ಶಿಕ್ಷಣವು ಜೀವನಶಿಕ್ಷಣವೆಂದೂ, ಅದನ್ನು ಜೀವನದ ಮುಖಾಂತರವೇ ಕೊಡಲು ಸಾಧ್ಯವೆಂದೂ ತಿಳಿಯಲಾಗಿದೆ. ಹಾಗಾದಲ್ಲಿ ಜೀವನವೆಂದರೇನು? ಅದು ವೈಯಕ್ತಿಕವೇ, ಸಾಮಾಜಿಕವೇ? ಜೀವನ ಇವೆರಡರ ಸಂಗಮ. ಮೊದಲು ವೈಯಕ್ತಿಕ, ಅನಂತರ ಸಾಮಾಜಿಕ ಅಥವಾ ಸಾಂಘಿಕ. ಮಗು ತನ್ನನ್ನು ತಾನರಿಯುತ್ತ ಸುತ್ತಲಿನ ಪರಿಸರವನ್ನು ಅರಿತು ಸಮಾಜದಲ್ಲಿ ಬಾಳಬೇಕು. ಅಂದರೆ ಮಗುವಿನ ಆಂತರಿಕ ಪರಿಸರ ಅಥವಾ ಪ್ರಪಂಚ ಮತ್ತು ಅದರ ಹೊರಗಿನ ಪ್ರಪಂಚ ಇವುಗಳ ನಡುವೆ ನಡೆಯುವ ಕ್ರಿಯೆ, ಪ್ರತಿಕ್ರಿಯೆ ಅಥವಾ ಕೊಡುಕೊಳ್ಳುವ ವ್ಯವಹಾರವೇ ಜೀವನ.

ಮಗುವಿನ ಆಂತರಿಕ ಪ್ರಪಂಚದಲ್ಲಿ ಅದರ ಜೈವಿಕ ಬೇಡಿಕೆಗಳ, ಆಶೆ, ಅಕಾಂಕ್ಷೆಗಳು ಮತ್ತು ಅವನ್ನು ಸಾಧಿಸಬಲ್ಲ ದೇಹ, ಬುದ್ಧಿ, ಭಾವನೆಗಳ ಅವ್ಯಕ್ತ ಆಂತರಿಕ ಶಕ್ತಿಗಳು ಇವೆ. ಬಾಹ್ಯಪ್ರಪಂಚದಲ್ಲಿ ಚರಾಚರ ವಸ್ತುಗಳಿಂದ ಕೂಡಿದ ನಿಸರ್ಗ, ತನ್ನಂತಹ

ವ್ಯಕ್ತಿಸಮೂಹದಿಂದ ಕೂಡಿದ ಸಮಾಜ. ಇವೆರಡರ ಬಗೆಗೆ ಮಾನವ ಕಂಡುಹಿಡಿದ ಅಪಾರ ಹಾಗೂ ವೈವಿಧ್ಯಮಯ ಜ್ಞಾನ ಮುಂತಾದವುಗಳಿವೆ. ಈ ಆಂತರಿಕ ಹಾಗೂ ಬಾಹ್ಯ ಪ್ರಪಂಚಗಳೊಡನೆ ಸಾಮರಸ್ಯದಿಂದ ಜೀವಿಸಲು ಮಗು ಕಲಿಯಬೇಕು. ವಿರಸವಾದಲ್ಲಿ ಅಸುಖ, ದುಃಖ ಮತ್ತು ಮರಣ. ಕವಿವರ್ಯ ಬೇಂದ್ರೆ ಇದನ್ನೇ ಕವಿವಾಣಿಯಲ್ಲಿ ಹೀಗೆ ಹೇಳಿದ್ದಾರೆ: 'ರಸವೆ ಜನನ, ವಿರಸ ಮರಣ, ಸಮರಸವೇ ಜೀವನ'.

ಗಾಂಧೀಜಿ ಶಿಕ್ಷಣದ ಹಿರಿಮೆ

ಗಾಂಧೀಜಿ ಶಿಕ್ಷಣದ ಹಿರಿಮೆ ಮತ್ತು ವೈಶಿಷ್ಟ್ಯಗಳು ಅದರ ಸಮರಸ ಜೀವನದ ಗುರಿ ಮತ್ತು ಸಾಧಿಸಲು ಸೂಚಿಸಿದ ಪಠ್ಯವಸ್ತು ಮತ್ತು ವಿಧಾನಗಳಲ್ಲಿವೆ. ಮಕ್ಕಳ ಶಿಕ್ಷಣದ ವಸ್ತು ಮತ್ತು ವಿಧಾನಗಳು ಅವರ ದೇಹ, ಬುದ್ಧಿ, ಭಾವನೆಗಳ ಮಟ್ಟದಲ್ಲಿರಬೇಕು. ಅವರಿಗೆ ಅರ್ಥವಾಗುವ ಗುರಿ ವಿಧಾನಗಳಿರಬೇಕು. ಒತ್ತಾಯ ಮತ್ತು ಹಿಂಸೆಗಳಿರ ಕೂಡದು. ಈ ಶಿಕ್ಷಣದಲ್ಲಿ ಜೀವನದ ಬೇಡಿಕೆಗಳಾದ ಸ್ವಚ್ಛತೆ ಮತ್ತು ಆರೋಗ್ಯ, ಆಹಾರ, ವಸ್ತ್ರ, ವಸತಿ, ಕ್ರೀಡೆ, ಮನರಂಜನೆ, ಸಾಮಾಜಿಕ ಕಾರ್ಯ(ಸೇವೆ), ಹಬ್ಬಹುಣ್ಣಿಮೆಗಳು, ಕ್ರೀಡೆ, ಮನರಂಜನೆ ಮತ್ತು ಇವುಗಳಲ್ಲಿ ಬರುವ ಸಮಸ್ಯೆ ಮುಂತಾದವುಗಳೇ ಅಭ್ಯಾಸವಸ್ತುಗಳು. ಇದಕ್ಕಾಗಿ 5 ಬಗೆಯ ಆಚರಣೆ (ಅಭ್ಯಾಸ)ಗಳೇ ಪಠ್ಯವಸ್ತುಗಳು:

1. ಸ್ವಚ್ಛ ಮತ್ತು ಆರೋಗ್ಯ ಜೀವನದ ಅಭ್ಯಾಸ;
2. ಸ್ವಾವಲಂಬನೆಯ ಅಭ್ಯಾಸ;
3. ಉತ್ಪಾದಕ (ಮೂಲ) ಉದ್ಯೋಗಗಳ ಅಭ್ಯಾಸ;
4. ಸಮುದಾಯ ಜೀವನದಲ್ಲಿ ಸ್ವಯಂ ಆಡಳಿತ ಅಭ್ಯಾಸ ಮತ್ತು
5. ಕ್ರೀಡೆ ಮನರಂಜನೆಗಳ ಅಭ್ಯಾಸ.

ಈ ಐದು ಬಗೆಯ ಅಭ್ಯಾಸಗಳ ಮೂಲಕ ಮಕ್ಕಳಲ್ಲಿ ಭಾರತೀಯ ಜೀವನದ ಸಂಸ್ಕಾರಗಳನ್ನು ಬೇರೂರಿಸುವುದಲ್ಲದೆ, ಸದ್ಯದ ಜನಜೀವನವಲ್ಲಿ ಕಂಡುಬರುವ ಕುಂದುಕೊರತೆಗಳ ನಿವಾರಣೆಯ ಅಂಶಗಳೂ ಅಡಕವಾಗಿವೆ.

1. ಸ್ವಚ್ಛ ಮತ್ತು ಆರೋಗ್ಯ ಜೀವನ

ಮೇಲ್ವರ್ಗದ ಭಾರತೀಯರು ವೈಯಕ್ತಿಕ ಸ್ವಚ್ಛತೆಯಲ್ಲಿ ಆಸಕ್ತಿವಹಿಸಿದರೂ, ಸಾಮಾಜಿಕ ಅಥವಾ ಸುತ್ತಲಿನ ಪರಿಸರದ ಸ್ವಚ್ಛತೆ ಮತ್ತು ಆರೋಗ್ಯದ ಬಗೆಗೆ ಎಳ್ಳಷ್ಟೂ ಕಾಳಜಿ ಇಲ್ಲದವರು. ನಮ್ಮ ಪಟ್ಟಣ ಮತ್ತು ನಗರಗಳಲ್ಲಿ ಎಲ್ಲೆಡೆಯೂ ಕಾಣಬರುವ ಕಸ, ಕೊಳಚೆಯೇ ಇದಕ್ಕೆ ಸಾಕ್ಷಿ. ಇದಕ್ಕೆ ಜ್ವಲಂತ ಉದಾಹರಣೆಯೆಂದರೆ ಬೆಂಗಳೂರು ನಗರ. ಹಿಂದೆ ಹೂತೋಟಗಳ ನಗರವಾಗಿದ್ದು ಇಂದು ಕೊಳಚೆಯ ನಗರವಾಗಿದೆ. ಹಳ್ಳಿಗಳಲ್ಲಿಯ ಪರಿಸ್ಥಿತಿಯಂತೂ ವರ್ಣನಾತೀತ. ಎಲ್ಲೆಂದರಲ್ಲಿ ಮಾನವರ ಮಲಮೂತ್ರ, ದನಗಳ ಸಗಣಿ, ಚರಂಡಿ ನೀರು ಮುಂತಾದವುಗಳಿಂದ ತುಂಬಿದ ನರಕಗಳಾಗಿವೆ. ಸ್ವಚ್ಛತೆ ಆರೋಗ್ಯದ ಮೊದಲ ಮೆಟ್ಟಿಲು.

ಸ್ವಚ್ಛತೆಯ ಪ್ರೀತಿ ಮತ್ತು ಅಸ್ವಚ್ಛತೆಯ ಬಗ್ಗೆ ಅಸಮಾಧಾನ, ಜಿಗುಪ್ಸೆ ಇವು ಜೀವನ ವಿಧಾನದ ಅಂಗವಾಗಬೇಕು. ಇದು ಅಭಿರುಚಿಗೆ ಸಂಬಂಧಿಸಿದ್ದು, ಚಿಕ್ಕಂದಿನಿಂದಲೇ ಸ್ವಾಭಾವಿಕ ಗುಣವಾಗಿ ಬೆಳೆದು ಬರಬೇಕು. ಮನೆ ಮತ್ತು ಸಮಾಜಗಳು ಸದ್ಯದ

ಪರಿಸ್ಥಿತಿಯಲ್ಲಿ ಅಂತಹ ಕಾರ್ಯಮಾಡಲು ತಪ್ಪಿವೆ. ಆದುದರಿಂದ ಶಾಲೆಯೇ ಈ ಕಾರ್ಯದ ಹೊಣೆ ಹೊತ್ತು ಮಕ್ಕಳಲ್ಲಿ ಸ್ವಚ್ಛ ಮತ್ತು ಆರೋಗ್ಯಜೀವನದ ಚಟಗಳನ್ನು ಬೇರೂರಿರ ಬೇಕಾಗಿದೆ.

ವೈಯಕ್ತಿಕ ಸ್ವಚ್ಛತೆ, ವರ್ಗದ ಕೋಣೆ, ಶಾಲೆ, ಅದರ ಪರಿಸರದ ಸ್ವಚ್ಛತೆ ಮತ್ತು ಅಲಂಕಾರಗಳು ಶಾಲಾದಿನದ ಪ್ರಥಮ ಕಾರ್ಯವಾಗಬೇಕು. ಶಿಕ್ಷಕರು ಮಾರ್ಗದರ್ಶಕರಾಗಿ ಪಾಲ್ಗೊಳ್ಳಬೇಕು. ಅದರ ವೈಜ್ಞಾನಿಕ ಮತ್ತು ಸಾಮಾಜಿಕ ಆಗುಹೋಗುಗಳನ್ನು ಚರ್ಚಿಸಬೇಕು. ಮನೆಗಳಲ್ಲಿಯೂ ಈ ಆಚರಣೆಗಳು ಮಕ್ಕಳ ಮುಖಾಂತರ ಹರಡುವಂತಾಗಬೇಕು.

ಕಸದಿಂದ ಜೈವಿಕಗೊಬ್ಬರ ತಯಾರಿಕೆ, ಬಚ್ಚಲು ನೀರಿಗಾಗಿ ಇಂಗುಬಚ್ಚಲು, ಸುಲಭ ಶೌಚಾಲಯಗಳು, ಕೊಳಚೆನೀರಿನಲ್ಲಿ ಸಸಿಗಳನ್ನು ಬೆಳೆಯುವುದು, ಆಲಂಕಾರಿಕ ಗಿಡ ನೆಡುವುದು, ಸಾಮಾಜಿಕ ಅರಣ್ಯ ಬೆಳೆಸುವುದು, ಪರಿಸರ ಮಾಲಿನ್ಯ ನಿವಾರಣೆ ಹಾಗೂ ಸೌಂದರ್ಯ ವೃದ್ಧಿಯ ಅಂಗಗಳಾಗಬೇಕು. ಪೌಷ್ಟಿಕ ಸಮತೋಲ ಆಹಾರವಸ್ತುಗಳ ಆಯ್ಕೆ, ಹಣ್ಣು ತರಕಾರಿಗಳ ಉತ್ಪಾದನೆ (ಕೈತೋಟಗಳಲ್ಲಿ), ಶಾಸ್ತ್ರೀಯ ಅಡಿಗೆ, ಊಟ, ವಿಶ್ರಾಂತಿ ಮತ್ತು ವ್ಯಾಯಾಮ ಮುಂತಾದ ಆರೋಗ್ಯಕರ ಅಭ್ಯಾಸಗಳು ಮಕ್ಕಳಲ್ಲಿ ಬೇರೂರಿರುವ ಕಾರ್ಯಶಾಲೆಯಲ್ಲಿ ನಡೆಯಬೇಕು.

ಪೌಷ್ಟಿಕಆಹಾರದ ಅಭಾವದಿಂದ ನರಳುವ ಮಕ್ಕಳ ಬಹುದೊಡ್ಡ ಸಂಖ್ಯೆ ಭಾರತದಲ್ಲಿದೆ. ಇದಕ್ಕೆ ಅಜ್ಞಾನವೇ ಮುಖ್ಯ ಕಾರಣ.

2. ಸ್ವಾವಲಂಬನೆ

ತನ್ನ ಜೀವನಾವಶ್ಯಕ ಕಾರ್ಯಗಳನ್ನು ಇನ್ನೊಬ್ಬರಿಗೆ ಹೊರೆಯಾಗದಂತೆ ತಾನೇ ಮಾಡಿಕೊಳ್ಳುವುದೇ ಸ್ವಾವಲಂಬನೆ. ಇದು ಅಶೋಷಣೆಯ ಮೊದಲ ಹೆಜ್ಜೆ ಮತ್ತು ಪರಪೀಡೆ ಮತ್ತು ಪರಾವಲಂಬನೆಗಳ ನಿವಾರಕ. ಈ ಜೀವನದೃಷ್ಟಿ ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಮೂಡಿಬರಬೇಕು. ಅವರು ತಮ್ಮ ತಾಯಂದಿರಿಗೆ, ಹಿರಿಯರಿಗೆ ಹೊರೆಯಾಗದೆ ತಮಗೆ ಮಾಡಲು ಬರುವ ಕಾರ್ಯಗಳನ್ನು ತಾವೇ ಮಾಡಿಕೊಳ್ಳಬೇಕು. ಉದಾ: ತಮ್ಮ ಬಟ್ಟೆಬರೆ, ಪುಸ್ತಕ ಪಾಟಿ, ವೈಯಕ್ತಿಕ ಸ್ವಚ್ಛತೆ, ಊಟ, ಉಡಿಗೆ, ಮನೆಪಾಠ, ಅಲ್ಲದೇ ತಂದೆ ತಾಯಂದಿರಿಗೆ ತಮಗೆ ಸಾಧ್ಯವಿರುವ ಸಹಾಯಹಸ್ತ ನೀಡುವುದು ಮುಂತಾದವುಗಳನ್ನು ಮೊದಲು ಮಕ್ಕಳಿಗೆ ಕಲಿಸಬೇಕು. ಇದು ಪರೋಪಕಾರದ ಮತ್ತು ಪರಪೀಡೆ ನಿವಾರಣೆಯ ಮೊದಲ ಪಾಠ.

ಶಾಲೆಯಲ್ಲಿ ವರ್ಗದ ಕೋಣೆ, ಶಾಲೆಯ ಆವರಣ, ಅಲಂಕಾರ ಮುಂತಾದ ಕಾರ್ಯಗಳನ್ನು ಸಾಂಘಿಕವಾಗಿ ಮಾಡಿಕೊಳ್ಳುವುದು ಸ್ವಾವಲಂಬನ ಕಾರ್ಯಗಳೇ. ಹೀಗೆಯೇ ಬೌದ್ಧಿಕ ಮತ್ತು ಭಾವನಾತ್ಮಕ ಸ್ವಾವಲಂಬನೆಯ ಕಡೆಗೆ ಸಾಗಬೇಕು. ಸ್ವಂತ ಆಲೋಚನೆ, ನಿರ್ಧಾರ, ಅದರಂತೆ ಆಚರಣೆ, ಅವುಗಳ ಫಲಾಫಲಗಳ ಬಗೆಗೆ ಹೊಣೆಗಾರಿಕೆ, ತಮ್ಮ ಕಹಿ ಭಾವನೆಗಳ ಮೇಲೆ ಹಿಡಿತ ಮುಂತಾದವು ಬೌದ್ಧಿಕ ಮತ್ತು ಭಾವನಾತ್ಮಕ ಸ್ವಾವಲಂಬನೆಯ ಕೆಲವು ಉದಾಹರಣೆಗಳು. ಇದರಿಂದ ಮಕ್ಕಳು ಆಲಸ್ಯ, ಜಡತ್ವಗಳಿಂದ ಬಿಡುಗಡೆ ಹೊಂದಿ ಚೇತನಶೀಲರಾಗುವರು. ಅವರ ಸ್ವಾಭಿಮಾನ, ಆತ್ಮವಿಶ್ವಾಸಗಳೂ ಬೆಳೆಯುವುವು.

3. ಉತ್ಪಾದಕ ಕಾರ್ಯ

ಪ್ರಚಲಿತ ಶಿಕ್ಷಣಕ್ರಮದಲ್ಲಿ ಉತ್ಪಾದಕ ಕಾರ್ಯ ಅನಪೇಕ್ಷಿತ ಅತಿಥಿ. ಪುಸ್ತಕ ಸಂಗತಿಗಳ ಗಿಳಿಪಾಠವೇ ಸಾರ್ವಭೌಮ. ಹೀಗಾಗಿ ಉತ್ಪಾದಕ ಕಾರ್ಯ ಶಾಲಾ ಪಠ್ಯವಸ್ತುವಾಗಬೇಕೆಂದು ಎಷ್ಟೋ ಶಿಫಾರಸ್ಸು ಮತ್ತು ಅನುಷ್ಠಾನ ಕುರಿತು ಪ್ರಯತ್ನಗಳು 1937ರಿಂದೀಚೆಗೆ ನಡೆದರೂ ಅದಕ್ಕೆ ಪ್ರವೇಶ ದೊರೆತಿಲ್ಲ. ಆದರೆ ಭಾರತೀಯ ಪರಂಪರೆ, ಸಂಸ್ಕೃತಿ, ಅರ್ಥವ್ಯವಸ್ಥೆ ಮುಂತಾದವುಗಳನ್ನು ಪರಿಶೀಲಿಸಿದಾಗ ಉತ್ಪಾದಕ ಕಾರ್ಯದ ಶೈಕ್ಷಣಿಕ ಮಹತ್ವದ ಅರಿವಾಗದಿರದು. ಏಕೆಂದರೆ ಅದು ಸ್ವತಂತ್ರಜೀವನದ ಜೀವಾಳ.

ಭಾರತ ಹಳ್ಳಿಗಳ ದೇಶ. ಅದರ ಶೇಕಡಾ 75 ಜನರು ಭಾರತದ ಐದೂವರೆ ಲಕ್ಷ ಹಳ್ಳಿಗಳಲ್ಲಿ ವಾಸಿಸುತ್ತಿದ್ದು, ಬೇಸಾಯ, ಕೈಗಾರಿಕೆ ಮುಂತಾದ ದೈಹಿಕ ಕೌಶಲ್ಯಗಳನ್ನೊಳಗೊಂಡ ಕಾರ್ಯಗಳಿಂದಲೇ ಜೀವಿಸುತ್ತಾರೆ. ಪಟ್ಟಣಿಗರಲ್ಲಿಯೂ ಸಹ ಶೇಕಡಾ ಎಂಬತ್ತು ಜನರು ಸಣ್ಣ ದೊಡ್ಡ ಉದ್ಯಮಗಳಲ್ಲಿ ದೈಹಿಕ ಕೌಶಲ್ಯ ಮತ್ತು ಶ್ರಮಗಳಿಂದ ಕೂಡಿದ ಕಾರ್ಯಗಳಿಂದ ಜೀವಿಸುತ್ತಾರೆ. ಸುಮಾರು ಶೇಕಡಾ 10 ರಿಂದ 15 ಜನರು ಮಾತ್ರ ಭಾರತದಲ್ಲಿ ಬೌದ್ಧಿಕ ಕಾರ್ಯಗಳಲ್ಲಿ ನಿರತರಾಗಿ ಬಾಳುತ್ತಾರೆ. ಆದರೂ ನಮ್ಮ ಸದ್ಯದ ಶಿಕ್ಷಣ ವ್ಯವಸ್ಥೆಯು ಬೌದ್ಧಿಕ ಕೆಲಸಗಾರರ ತರಬೇತಿಗೇ ಸೀಮಿತವಾಗಿದೆ. ಇದರ ದುಷ್ಪರಿಣಾಮಗಳನ್ನು ಗಾಂಧೀಜಿ ಈ ಶತಮಾನದ 20ರ ದಶಕದಲ್ಲಿಯೇ ಕಂಡು ನಮ್ಮನ್ನು ಎಚ್ಚರಿಸಿದ್ದಾರೆ:

"ಇತರ ದೇಶಗಳ ವಿಚಾರ ಏನೇ ಇರಲಿ, ನೂರರಲ್ಲಿ 80 ಜನ ಕೃಷಿಕರೂ, 10ರಷ್ಟು ಕುಶಲಕರ್ಮಿಗಳೂ ಇರುವ ಭಾರತದಲ್ಲಿ ಕೇವಲ ಶಾಬ್ದಿಕ ಶಿಕ್ಷಣ ಕೊಟ್ಟು ನಮ್ಮ ಬಾಲಕ ಬಾಲಕಿಯರನ್ನು ದೈಹಿಕ ಕಾರ್ಯಗಳಿಗೆ ಅಯೋಗ್ಯರನ್ನಾಗಿ ಮಾಡುವುದು ಒಂದು ಶಿಕ್ಷಾರ್ಹ ಅಪರಾಧ" ಎಂದಿದ್ದಾರೆ.

ಆದುದರಿಂದ ಮಗುವಿನ ಶಿಕ್ಷಣವನ್ನು ಒಂದರಲ್ಲೊಂದು ಕೈಕೆಲಸ ಕಲಿಸುತ್ತ ಆರಂಭಿಸಿ ಅದು ದುಡಿಯುತ್ತ ಕಲಿಯುವಂತೆ ಮಾಡಬೇಕೆಂದರು. "ಈ ವಿಚಾರವು ಬಹು ದೂರ ದೃಷ್ಟಿಯ ಸಾಮಾಜಿಕ ಕ್ರಾಂತಿಯೆಂಬ ಭಾಲೆಯ ಮೊನೆಯೆಂದೂ, ಇದರಿಂದ ಹಳ್ಳಿಪಟ್ಟಣಗಳ ನಡುವಿನ ಈಗಿನ ವಿಷಮಯ ಸಂಬಂಧ ಹೋಗಿ ಹಳ್ಳಿಗಳು ಪಟ್ಟಣಗಳ ಕಪಿಮುಷ್ಟಿಯಿಂದ ಪಾರಾಗಿ, ಸ್ವಾವಲಂಬಿಗಳಾಗಿ ಸ್ವತಂತ್ರವಾಗುವುವು ಮತ್ತು ದೈಹಿಕ ಮತ್ತು ಮಾನಸಿಕ ಕೆಲಸಗಾರರ ನಡುವಿನ ಭೇದಭಾವವು ಅಳಿಯುವವು. ಬಡವ ಮತ್ತು ಬಲ್ಲಿದರ ನಡುವಿನ ಕಂದರ ಕಡಿಮೆಯಾಗುವುದು. ಇದು ನಿರುದ್ಯೋಗದ ವಿರುದ್ಧ ವಿಮೆ" ಎಂದರು. ಅಲ್ಲದೆ ಇದು "ಮಗುವಿನ ಸಮಗ್ರ ವ್ಯಕ್ತಿತ್ವ ರೂಪಿಸಬಲ್ಲ ಸಾಕ್ಷರತೆ" ಎಂದೂ ಉದ್ಗರಿಸಿದ್ದಾರೆ.

ಭಾರತ ಸಂವಿಧಾನದ ನಿರ್ದೇಶಕ ತತ್ವಗಳು

ಭಾರತದ ಸಂವಿಧಾನದ ನಿರ್ದೇಶನ ತತ್ವಗಳೂ ಗಾಂಧೀಜಿಯ ಈ ಮೇಲಿನ ಮಾತುಗಳನ್ನು ಪುಷ್ಟೀಕರಿಸುತ್ತವೆ.

ನಿರ್ದೇಶನ ತತ್ವ ಕಲಮು 41 : ದುಡಿಮೆಯ ಮತ್ತು ಶಿಕ್ಷಣದ ಹಕ್ಕು :

ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಬೆಳವಣಿಗೆಗಳ ಅಳವಿನೊಳಗೆ ರಾಷ್ಟ್ರವು ಉದ್ಯೋಗ,

ಶಿಕ್ಷಣ, ನಿರುದ್ಯೋಗ, ವೃದ್ಧಾಪ್ಯ ಮತ್ತು ಅಂಗವಿಕಲತೆ, ಸಮಯಗಳಲ್ಲಿ ಪರಿಣಾಮ ಕಾರಿಯಾದ (ಸರಕಾರಿ) ಸಹಾಯ ಒದಗಿಸತಕ್ಕದ್ದು

ನಿರ್ದೇಶನ ತತ್ವ ಕಲಮು 43 : ಉದ್ಯೋಗ ಮತ್ತು ಕೂಲಿ :

ರಾಷ್ಟ್ರವು ತಕ್ಕ ಶಾಸನ ಅಥವಾ ಆರ್ಥಿಕ ವ್ಯವಸ್ಥೆ ಅಥವಾ ಇನ್ನಾವುದೋ ರೀತಿಯಲ್ಲಿ ಎಲ್ಲ ಉದ್ಯೋಗಿಗಳಿಗೆ - ಕೃಷಿ, ಉದ್ಯಮ ಇನ್ನಿತರ ಉದ್ಯೋಗ, ಕೆಲಸ, ಜೀವಿತ ಕೂಲಿ, ಸಪ್ಪಮಟ್ಟದ ಜೀವನ, ಬಿಡುವಿನ ವೇಳೆಯನ್ನು ಪೂರ್ಣವಾಗಿ ವಿನಿಯೋಗಿಸಲು ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಕಾಶಗಳನ್ನು ಒದಗಿಸಲು ಪ್ರಯತ್ನಿಸಬೇಕು.

ನಿರ್ದೇಶನ ತತ್ವ ಕಲಮು 45 : ಮುಕ್ತ ಮತ್ತು ಕಡ್ಡಾಯ ಶಿಕ್ಷಣ :

ಸಂವಿಧಾನವು ಕಾರ್ಯಗತವಾದ ನಂತರ 10 ವರ್ಷಗಳಲ್ಲಿ ರಾಷ್ಟ್ರವು 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳಿಗೂ ಕಡ್ಡಾಯ ನಿಶ್ಶುಲ್ಕ ಶಿಕ್ಷಣ ಒದಗಿಸಬೇಕು.

ನಿರ್ದೇಶನ ತತ್ವ ಕಲಮು 39 (ಎ) ಜೀವನ ನಿರ್ವಹಣೆ :

ನಾಗರೀಕರಿಗೆ - ಹೆಣ್ಣು ಮತ್ತು ಗಂಡು - ಜೀವನ ನಿರ್ವಹಣೆಯ ಪರಿಣಾಮಕಾರಿ ಸಾಧನಗಳ ಹಕ್ಕಿದೆ.

ಪ್ರಚಲಿತ ಶಿಕ್ಷಣ ಮತ್ತು ನಿರ್ದೇಶನ ತತ್ವಗಳು

1) ಬಡತನದ ಕಾರಣ

ಪ್ರಚಲಿತ ಪುಸ್ತಕೀಯ ಗಿಳಿಪಾಠ ಶಿಕ್ಷಣವು ಈ ನಿರ್ದೇಶನ ತತ್ವಗಳನ್ನು ಉಲ್ಲಂಘಿಸುತ್ತದೆ. ಏಕೆಂದರೆ ಅದು ಶೇಕಡಾ 90 ಜನರ ಉಪಜೀವನ ಮಾರ್ಗ (ಸಾಧನ)ಗಳಾದ ಉತ್ಪಾದಕ ದೈಹಿಕ ಕಾರ್ಯಗಳನ್ನು ಈ ಜನರ ಮಕ್ಕಳಿಂದ ದೂರ ಸರಿಸಿ, ಪುಸ್ತಕೀಯ ಸಂಗತಿ ಗಿಳಿಪಾಠಶಿಕ್ಷಣವನ್ನು ಅದರ ಮೇಲೆ ಒತ್ತಾಯದಿಂದ ಹೇರಿ, ಉತ್ಪಾದಕ ಕಾರ್ಯದ ಜ್ಞಾನ, ತಿಳುವಳಿಕೆ, ಉಚಿತ ಮನೋಭಾವಗಳನ್ನು ಕಲಿಸದೆ ಅವು ಕೀಳೆಂಬ ಭಾವನೆಗಳನ್ನು ಅದರಲ್ಲಿ ಬೇರೂರಿಸಿ ಅವರನ್ನು ಅನಾಸಕ್ತ, ಅಯೋಗ್ಯ, ನಿರುಪಯುಕ್ತ ಕಾರ್ಮಿಕರನ್ನಾಗಿಸುತ್ತದೆ. ಇದರಿಂದ ಅವರ ಉತ್ಪಾದಕ ಸಾಮರ್ಥ್ಯ ಕುಂಠಿತವಾಗಿ, ಆದಾಯ ತಗ್ಗಿ, ಕೊಳ್ಳುವ ಶಕ್ತಿಯೂ ಕುಗ್ಗಿ ಬಡವರಾಗಿಯೇ ಉಳಿಯುವಂತೆ ಮಾಡಿದೆ ಮತ್ತು ಅವರ ಶಿಕ್ಷಣ ಅವರನ್ನು ಅಡ್ಡದಾರಿ ಹಿಡಿಸುತ್ತದೆ.

ಅಲ್ಲದೆ ಹಳ್ಳಿಯ ಕುಟೀರ, ಗೃಹಕೈಗಾರಿಕೆಗಳಾದ ಕಮ್ಮಾರಿಕೆ, ಕುಂಬಾರಿಕೆ, ನೇಯ್ಗೆ, ಚರ್ಮಗಾರಿಕೆ, ಎಣ್ಣೆಗಾಣ ಮುಂತಾದ ಉದ್ಯೋಗಗಳು ಅಲಕ್ಷಿಸಲ್ಪಟ್ಟು, ಹಳ್ಳಿಯಲ್ಲಿ ಮಾಯವಾಗಿವೆ. ಇವು ಈಗ ಪಟ್ಟಣದ ಕಾರ್ಖಾನೆಗಳನ್ನು ಸೇರಿ ಹಳ್ಳಿಗಳಲ್ಲಿ ನಿರುದ್ಯೋಗ, ಅರೆಉದ್ಯೋಗಗಳಿಗೆ ಎಡೆಮಾಡಿಕೊಟ್ಟಿದೆ. ಇದು ನಿರ್ದೇಶನ ತತ್ವ 43ರ ಉಲ್ಲಂಘನೆಯಾಗಿದೆ.

2. ನಿರುದ್ಯೋಗ

ಸದ್ಯದ ಪುಸ್ತಕೀಯ ಶಿಕ್ಷಣದಲ್ಲಿ ಪ್ರಾಥಮಿಕ ಒಂದನೆಯ ವರ್ಗ ಸೇರಬೇಕಾದ 100 ಮಕ್ಕಳಲ್ಲಿ 20 ರಿಂದ 30 ಮಕ್ಕಳ ಶಾಲೆ ಸೇರುವುದಿಲ್ಲ. ಸೇರಿದ ಮಕ್ಕಳಲ್ಲಿ ಶೇಕಡಾ 60 ಮಕ್ಕಳು 4ನೇ ವರ್ಗ ಮುಗಿಯುವ ಮೊದಲೇ ಶಾಲೆ ಬಿಟ್ಟು ನಿರಕ್ಷರಿಗಳಾಗುತ್ತಾರೆ. 5ನೆಯ ವರ್ಗ ಸೇರಿದ ಮಕ್ಕಳಲ್ಲಿ ಅರ್ಧದಷ್ಟು ಮಕ್ಕಳು ಮಾತ್ರ ಪ್ರೌಢಶಾಲೆಗೆ ಹೋಗಿ ಅವರಲ್ಲಿ

ಅರ್ಧದಷ್ಟು ಮಕ್ಕಳು ಎಸ್.ಎಸ್.ಎಲ್.ಸಿ. ಪಾಸಾಗುತ್ತಾರೆ. ಹೀಗೆ ಪಾಸಾದ 8-10 ಜನರಲ್ಲಿ 5 ಜನ ಉಚ್ಚಶಿಕ್ಷಣಕ್ಕೆ ಹೋಗಿ, ಒಬ್ಬಿಬ್ಬರು ಪದವೀಧರರಾಗಿ, ಚಾಕರಿ ಬೇಟೆಗಾಗಿ ಅಲೆಯುತ್ತಾರೆ. ಇಂತಹ ಸುಶಿಕ್ಷಿತ ನಿರುದ್ಯೋಗಿ ಯುವಕರ ಸಂಖ್ಯೆ ಭಾರತದಲ್ಲೀಗ ಸುಮಾರು ಮೂರು ಕೋಟಿಯಿದೆ. ಈ 10-14 ವರ್ಷ ಶಿಕ್ಷಣ ಪಡೆದ ಯುವಕರಿಗೆ ಯಾವ ದೈಹಿಕಕೌಶಲ್ಯಗಳಿರದ್ದರಿಂದ ಹೇರಳವಾಗಿ ದೊರೆಯುವ ದೈಹಿಕ ಕೌಶಲಗಳಲ್ಲಿ ಕಾರ್ಯ ಮಾಡಲಾರರು. ಹೀಗಾಗಿ ನಿರುದ್ಯೋಗಿಗಳಾಗುತ್ತಾರೆ; ಸಮಾಜಕ್ಕೆ ಹೊರೆಯಾಗುತ್ತಾರೆ.

3. ನಿರಕ್ಷರತೆ

ಪ್ರಾಥಮಿಕ ಶಾಲೆಯ ಕನಿಷ್ಠ ನಾಲ್ಕು ವರ್ಗಗಳನ್ನು ಮುಗಿಸದೇ ಓದುಬರಹ ಬಾರದೇ ನಿರಕ್ಷರಿಗಳಾಗುವವರು ದೈಹಿಕ ಕಾರ್ಯಗಳಾದ ಬೇಸಾಯ, ಕುಶಲಕರ್ಮಿಗಳಲ್ಲಿ ಕಾರ್ಯ ಮಾಡುವ ಕಾರ್ಮಿಕರ ಮಕ್ಕಳೇ. ಶಾಲೆಯ ಪುಸ್ತಕೀಯ ಗಿಳಿಪಾಠ ಶಿಕ್ಷಣ ಇವರಿಗೆ ಅಪರಿಚಿತ. ಇವರ ಮನೆಯ ವಾತಾವರಣದಲ್ಲಿ ಅವಿಲ್ಲ. ಅವರದು ದೈಹಿಕ ಕಾರ್ಯ ಸಂಸ್ಕೃತಿ. ಈ ದೈಹಿಕ ಕಾರ್ಯಗಳಲ್ಲಿ ಬಳಸುವ ಸಾಧನಗಳು, ಕಚ್ಚಾವಸ್ತು, ಕಾರ್ಯವಿಧಾನ, ಉತ್ಪಾದಿತ ವಸ್ತುಗಳ ಗುಣಮಟ್ಟ, ಬಳಕೆದಾರರು ಮಾರುಕಟ್ಟೆ ಮುಂತಾದ ಅನೇಕ ಸಂಗತಿಗಳ ಬಗ್ಗೆ ಅವರಲ್ಲಿ ಜ್ಞಾನ, ಕೌಶಲ್ಯಗಳಿರುತ್ತವೆ. ಆದರೆ ಇವೆಲ್ಲ ಸದ್ಯದ ಶಿಕ್ಷಣದಲ್ಲಿ ಕೆಲಸಕ್ಕೆ ಬಾರದವು.

ಒಂದು ವೇಳೆ ಬೇಸಾಯ, ತೋಟಗಾರಿಕೆ, ಕುಂಬಾರಿಕೆ, ಬಡಗಿತನ, ನೂಲುವುದು, ನೇಯುವುದು, ಬಿದರಿನ ಕಾರ್ಯ ಮುಂತಾದ ಉತ್ಪಾದಕ ಕಾರ್ಯಗಳೇ ಶಿಕ್ಷಣ ಕೇಂದ್ರಗಳಾದಲ್ಲಿ ಈ ಮಕ್ಕಳಿಗೆ ಅವು ಪರಿಚಯದ, ಸ್ನೇಹಮಯ ಕಾರ್ಯಗಳಾಗಿ ಅವರನ್ನು ಆಕರ್ಷಿಸುವುವು ಮತ್ತು ಅವರಲ್ಲಿ ಅವರು ಯಶಸ್ವಿಯಾಗುವುದರಿಂದ ಶಾಲೆಯು ಅವರಿಗೆ ಆಕರ್ಷಕ, ಪ್ರೋತ್ಸಾಹದಾಯಕ ಮತ್ತು ಗೆಲವಿನ ತಾಣವಾಗಿ, ಅವರು ಶಾಲೆಯಲ್ಲಿಯೇ ಉಳಿದು, ಶಿಕ್ಷಣ ಮುಂದುವರಿಸುವರು. ಮನೆತನದ ಕುಶಲಕರ್ಮಗಳಲ್ಲಿಯೂ ಭಾಗವಹಿಸಿ ಮನೆಯ ಆರ್ಥಿಕ ಪರಿಸ್ಥಿತಿಯ ಸುಧಾರಣೆಯಲ್ಲಿ ನೆರವಾಗುವುದರಿಂದ ಅವರ ಪಾಲಕರು ಅವರನ್ನು ಶಾಲೆಯಲ್ಲಿಟ್ಟು ಶಿಕ್ಷಣ ಮುಂದುವರಿಸಲು ಪ್ರೋತ್ಸಾಹಿಸುವರು. ಈ ಕುಶಲಕರ್ಮಗಳಲ್ಲಿ ಅಡಕವಾದ ವೈಜ್ಞಾನಿಕ ತತ್ವಗಳು ಹಾಗೂ ಸಮಾಜದಲ್ಲಿ, ವಿಶ್ವದಲ್ಲಿ ಅವುಗಳ ಸ್ಥಾನಮಾನ ಮಹತ್ವಗಳ ಅರಿವಾಗಿ ಅವುಗಳ ಅಭಿವೃದ್ಧಿ, ಹೊಸಹೊಸ ಸಂಶೋಧನೆಗಳಲ್ಲಿ ತೊಡಗಿ ತಮ್ಮ ಉತ್ಪಾದಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವುದು. ಅವುಗಳಲ್ಲಿಯೇ ತಮ್ಮ ಉಪಜೀವನ ಮಾರ್ಗ ಕಂಡುಕೊಂಡು ಸಾರ್ಥಕ ಜೀವನ ಸಾಗಿಸಿಕೊಳ್ಳುವರು. ಸದ್ಯದ ಪುಸ್ತಕ ಪ್ರಧಾನ ಶಿಕ್ಷಣದ ಫಲವಾಗಿ ಕುಶಲಕರ್ಮಿಗಳ ಮಕ್ಕಳು ತಮ್ಮ ಮನೆತನದ ಕಸುಬುಗಳಿಂದ ದೂರ ಸರಿದುದರ ಪರಿಣಾಮವಾಗಿ ಅವು ಹಳ್ಳಿಯಲ್ಲಿ ಮಾಯವಾಗಿವೆ. ಹೀಗಾಗಿ ನಿರ್ದೇಶನ ತತ್ವ 41ರ ಕೈಗಾರಿಕೆಗಳನ್ನು ಪುನರುಜ್ಜೀವನ ಗೊಳಿಸಬೇಕೆಂಬ ಆದೇಶದ ಉಲ್ಲಂಘನೆಯಾಗಿದೆ.

ನಿರಕ್ಷರತೆಯ ಅನಿಷ್ಟಗಳು

ಅ) ನಿರಕ್ಷರತೆಯು ಬಡತನದ ಮೂಲಕಾರಣವೆಂದು ಅಮೆರಿಕೆಯ ಶ್ರೇಷ್ಠ ಅರ್ಥಶಾಸ್ತ್ರಜ್ಞ ಡಾ॥ ಕೆನೆತ್ ಗಾಲಿಬ್ರೈತ್ ಅವರ ಮತ. "ಜಗತ್ತಿನಾದ್ಯಂತ ಸಾಕ್ಷರ

ಸಮಾಜವಾವುದೂ ಬಡವಾಗಿಲ್ಲ ಮತ್ತು ನಿರಕ್ಷರಿ ಸಮಾಜಗಳಿಗೆ ಬಡತನ ಬಿಟ್ಟು ಬೇರೊಂದಿಲ್ಲ" ಎಂದಿದ್ದಾರೆ.

ಆ) "ನಿರಕ್ಷರಪು ವ್ಯಕ್ತಿಯ ಸ್ವಾತಂತ್ರ್ಯಕ್ಕೊಂದು ಆತಂಕ" ಎಂದಿದ್ದಾರೆ 1998ರ ನೊಬೆಲ್ ಪಾರಿತೋಷಕ ಪಡೆದ ಅಮರ್ತ್ಯಸೇನ (ಅರ್ಥಶಾಸ್ತ್ರಜ್ಞ). ಯಾಕೆಂದರೆ ಓದು ಬರಹಗಳ ಮೂಲಕ ಸಂಪರ್ಕ ಸಾಧಿಸಿ ಪಡೆಯಬಹುದಾದ ಎಲ್ಲ ಪರಿಹಾರ ಮಾರ್ಗಗಳಿಂದ ನಿರಕ್ಷರಿಗಳು ವಂಚಿತರಾಗುತ್ತಾರೆ. (Times of India Dt. 16-10-98)

4. ಸಾಮಾಜಿಕ ಸಮಾನತೆ ಮತ್ತು ನ್ಯಾಯ

ಭಾರತದಲ್ಲಿ ಕಾಣಬರುವ ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳಿಗೆ ಜಾತಿಪದ್ಧತಿಯೇ ಬಹುಮಟ್ಟಿಗೆ ಕಾರಣ. ಜಾತಿಗಳ ಉಗಮ ಮತ್ತು ಮೇಲುಕೀಳುಗಳು ಉದ್ಯೋಗಗಳಲ್ಲಿವೆ. ದೈಹಿಕಕಾರ್ಯಗಳಲ್ಲಿ ನಿರತರಾದವು ಕೀಳು; ಮಾನಸಿಕ ಕಾರ್ಯಗಳಲ್ಲಿ ತೊಡಗಿದವು ಮೇಲು. ಬಡಿಗ, ಕುಂಬಾರ, ನೇಕಾರ, ಮೇದಾರ, ರೈತ ಮುಂತಾದವರು ಪೂಜಾರಿ, ಪುರಾಣಿಕ, ಶಿಕ್ಷಕ, ವ್ಯಾಪಾರಿ ಮುಂತಾದ ಮಾನಸಿಕ ಕೆಲಸಗಾರರಿಗಿಂತ ಕಡಿಮೆಯವರು. ಅದರಲ್ಲಿಯೂ ಕಸಗುಡಿಸುವವ, ಚಮ್ಮಾರ, ಮುಂತಾದ ಸ್ವಚ್ಛತೆ ಮತ್ತು ಕೊಳೆ ತೆಗೆಯುವ ಕಾರ್ಯ ಮಾಡುವವರು ಅತ್ಯಂತ ಕೀಳುವರ್ಗದವರು; ಅಸ್ಪೃಶ್ಯರು. ಹೀಗೆ ಶ್ರಮಗೌರವದ ಅಭಾವವೇ ತಲೆತಲಾಂತರಗಳಿಂದ ಬೇರೂರಿ ಬಂದ ಸಾಮಾಜಿಕ ಅಸಮಾನತೆಗೆ ಅನ್ಯಾಯಗಳಿಗೆ ಕಾರಣವಾಗಿದೆ. ಇದನ್ನು ಕೇವಲ ಪ್ರವಚನದಿಂದ, ನೀತಿಪಾಠದಿಂದ ಹೋಗಲಾಡಿಸಲು ಸಾಧ್ಯವಿಲ್ಲ. ಅದರ ಬೇರನ್ನು ಚಿಕ್ಕಂದಿನಿಂದಲೇ ಕಿತ್ತುಹಾಕಬೇಕು.

ಅಂತಹ ಉಪಾಯವೆಂದರೆ ಮಕ್ಕಳನ್ನು ಶಾಲಾಸ್ವಚ್ಛತೆ, ಮೂತ್ರಿಗಳ ಶುಚಿತ್ವ, ಬೇಸಾಯ, ತೋಟಗಾರಿಕೆ, ನೂಲುವುದು, ನೇಯುವುದು, ಬಡಗಿತನ, ಚರ್ಮಗಾರಿಕೆ, ಮುಂತಾದ ದೈಹಿಕಕೌಶಲ್ಯ ಶ್ರಮಗಳನ್ನೊಳಗೊಂಡ ಕಾರ್ಯಗಳಲ್ಲಿ ತೊಡಗಿಸಿ, ಅದರ ಜ್ಞಾನ, ಕೌಶಲ, ಆನಂದ, ಸೇವಾಭಾವಗಳ ಇಂಗಿತಗಳನ್ನು ಮಕ್ಕಳಲ್ಲಿ ಬೇರೂರಿಸಬೇಕು. ಹೀಗೆ ದೈಹಿಕಕಾರ್ಯಗೌರವ ಭಾವನೆ ಮಕ್ಕಳಲ್ಲಿ ಬೇರೂರಬೇಕು. ಸಾಮಾಜಿಕ ಭೇದಭಾವಗಳು ಮಾಯವಾಗಿ ಸಾಮಾಜಿಕ ಸಮಾನತೆ, ನ್ಯಾಯಗಳು ಸ್ಥಾಪಿತವಾಗಬೇಕು.

5. ಜ್ಞಾನವಿಜ್ಞಾನ ತತ್ತ್ವಜ್ಞಾನಗಳ ಹುಟ್ಟು

ಒಂದು ರೀತಿಯಲ್ಲಿ ನೋಡಿದಾಗ ಎಲ್ಲ ಬಗೆಯ ಜ್ಞಾನದ ಉಗಮವನ್ನು ಉತ್ಪಾದಕ ಕಾರ್ಯಗಳಲ್ಲಿ ಕಾಣಬಹುದು. ಬೇಟೆಯಾಡುವ ಮಾನವ ಪ್ರಾಣಿಗಳನ್ನು ಗುದ್ದಿ ಕೊಲ್ಲುವುದಕ್ಕಿಂತ ಭಾಲೆಯಿಂದ ದೂರದಿಂದಲೇ ಕೊಲ್ಲುವ ಜ್ಞಾನ ಕಂಡುಹಿಡಿದ. ಬೇಸಾಯಗಾರ ಮಾನವ ರಂಟೆ, ಕುಂಟೆ, ಮುಂದೆ ಟ್ರಾಕ್ಟರ್ ಮುಂತಾದ ಮಾನವ ಶ್ರಮ ಉಳಿತಾಯ ಮಾಡುವ ಸಾಧನಗಳನ್ನು ಯಂತ್ರತಂತ್ರಗಳನ್ನು ಕಂಡುಹಿಡಿದ. ಚಕ್ರ ಮತ್ತು ಗಾಲಿಗಳನ್ನು ಕಂಡುಹಿಡಿದು ಎತ್ತಿನ ಬಂಡಿ, ರಥ, ನೀರೆತ್ತಲು ಗಡಗಡೆ - ಹೀಗೆ ಮಾನವಶ್ರಮದ ಉಳಿತಾಯ, ಕಾರ್ಯದ ವೇಗವೃದ್ಧಿ ಮತ್ತು ಉತ್ಪಾದಿತ ವಸ್ತುಗಳ ಸೌಂದರ್ಯವೃದ್ಧಿ ಮುಂತಾದವುಗಳಿಗಾಗಿ ಅನೇಕ ತಂತ್ರಗಳನ್ನು ಕಂಡುಹಿಡಿದ. ಹೀಗೆ ವಿಜ್ಞಾನ

ತಂತ್ರಜ್ಞಾನಗಳ ಉಗಮವನ್ನು ವೈಹಿಕಶ್ರಮದ ಉಳಿತಾಯ ಮಾಡುವ ಪ್ರಯತ್ನಗಳಲ್ಲಿ ಕಾಣಬಹುದು.

ದುಡಿಮೆಯ ಶ್ರಮವಿಭಾಗದ ಫಲವಾಗಿ ಕೃಷಿ, ಕುಶಲಕರ್ಮ ಮತ್ತು ಸಮಾಜದ ಸೇವಾಕಾರ್ಯಗಳಲ್ಲಿ ನಿರತರಾದ ಜನರ ಗುಂಪುಗಳಾಗಿ ಉತ್ಪಾದಿತ ವಸ್ತುಗಳ ನ್ಯಾಯಯುತ ವಿತರಣೆಗಾಗಿ ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳು ಹುಟ್ಟಿಕೊಂಡಿವೆ. ಸಮಾಜದಲ್ಲಿ ದೀನ ದುಃಖಿತರಿಗೂ, ನಿರ್ಗತಿಕರ ಬಗೆಗೂ ಸಮಾಜ ಕಾಳಜಿ ವಹಿಸಲು ನೀತಿಧರ್ಮ ಶಾಸ್ತ್ರಗಳು ಕ್ರಮೇಣ ಹುಟ್ಟಿಕೊಂಡು ಬಂದಿವೆ.

ಹೀಗೆ ದೀರ್ಘವಾಗಿ ಆಲೋಚಿಸಿದಾಗ ಜ್ಞಾನ, ವಿಜ್ಞಾನ ಮತ್ತು ತತ್ತ್ವಜ್ಞಾನಗಳ ಉಗಮವನ್ನು ಉತ್ಪಾದಕ ಕಾರ್ಯಗಳಲ್ಲಿ ಕಾಣಬಹುದು.

6. ಶೈಕ್ಷಣಿಕ ಇಂಗಿತ

ಕೃಷಿ, ಕೈಗಾರಿಕೆ ಮತ್ತು ಯಂತ್ರ ಕೇಂದ್ರ ಉದ್ಯೋಗಗಳು ಒಂದಾದರೊಂದರಂತೆ ಹುಟ್ಟಿವೆ. ಆದುದರಿಂದ ಮಕ್ಕಳಶಿಕ್ಷಣವೂ ಇದೇ ಉತ್ಕ್ರಾಂತಿಯ ಮೆಟ್ಟಿಲುಗಳಲ್ಲಿ ಸಾಗಬೇಕು. ಆದುದರಿಂದ ತೋಟಗಾರಿಕೆ, ಬೇಸಾಯ, ನೂಲುವುದು, ನೇಯ್ಗೆ, ಬಡಿಗತನ, ಕುಂಬಾರಿಕೆ, ಬಿದಿರಿನ ಕೆಲಸ, ಚರ್ಮದ ಕೆಲಸ ಮುಂತಾದ ಉತ್ಪಾದಕ ಕಾರ್ಯಗಳು ಶಿಕ್ಷಣದ ಮಾಧ್ಯಮಗಳಾಗಬೇಕು. ಅವುಗಳಲ್ಲಿ ಅಡಕವಾದ ಜ್ಞಾನ, ತಂತ್ರಜ್ಞಾನ, ಸಮಾಜ ವಿಜ್ಞಾನಗಳ ಪರಿಚಯವೂ ಅದಕ್ಕೆ ಸಂಬಂಧಿಸಿದ ಓದುಬರಹ, ಚಿತ್ರಕಲೆ, ಹಬ್ಬಗಳ ಜ್ಞಾನವೂ ಆಗಬೇಕು. ಅಂದಾಗ ಅದು ಪರಿಪೂರ್ಣ ಅನುಭವಜನ್ಯ ಚೇತನಶೀಲ, ಜೀವಂತ ಜ್ಞಾನವಾಗುವುವು. ಈ ಬಗೆಯ ಉತ್ಪಾದಕ ಕಾರ್ಯಗಳಿಗೆ ಸಂಬಂಧಿಸಿದ ಜ್ಞಾನವು ಸ್ವಯಂಪ್ರೇರಿತ, ಅತ್ಯವಶ್ಯಕ, ಅಪೇಕ್ಷಿತ ಜ್ಞಾನ, ಪಂಚೇಂದ್ರಿಯಗಳ ಅನುಭವಗಳ ಮೂಲಕ ಹುಟ್ಟಿಕೊಂಡ ಜೀವನಾವಶ್ಯಕ ಗುಣಹುಟ್ಟಿದ ಜ್ಞಾನ. ಅದು ಮರೆತುಹೋಗದೇ ಮಕ್ಕಳಲ್ಲಿ ಬೇರೂರುತ್ತದೆ. ಕರೆದಾಗಲೆಲ್ಲ ಬಳಕೆಗೆ ಬರುತ್ತದೆ; ಜೀವನ ಹಸನುಗೊಳಿಸುತ್ತದೆ.

ಇದಕ್ಕೆ ವಿರುದ್ಧವಾಗಿ ಪುಸ್ತಕಜ್ಞಾನವು ಪಂಚೇಂದ್ರಿಯಗಳ ಸಂಪರ್ಕವಿಲ್ಲದ, ಮಕ್ಕಳ ಮನಸ್ಸಿನ ವಿರುದ್ಧ ಹೇರಿದ, ನಿರ್ಜೀವ ಹೊರೆ ಮತ್ತು ಮಕ್ಕಳಿಗೆ ತಲೆಭಾರವಾದ ಕಿರುಕುಳ. ಇದರಿಂದಾಗಿಯೇ ಕಾರ್ಮಿಕರ ಮಕ್ಕಳು ನಡುವೆಯೇ ಶಾಲೆ ಬಿಡುವುದು.

7. ಜೀವನಮೌಲ್ಯಗಳ ಶಿಕ್ಷಣ

ಉತ್ಪಾದಕ ಕಾರ್ಯಕೇಂದ್ರ ಶಿಕ್ಷಣ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೇರೂರಿಸುವ ಸುಲಭ, ಸಹಜ ಮತ್ತು ಪ್ರಭಾವಶಾಲೀ ಸಾಧನ. ಕೂಡಿ ಕಾರ್ಯಮಾಡುವಾಗ, ಮಕ್ಕಳು ವಿಚಾರವಿನಿಮಯ ಮಾಡಬೇಕು. ಒಬ್ಬರನ್ನೊಬ್ಬರು ಅರಿಯಬೇಕು, ಆದರಿಸಬೇಕು, ಸಹಕರಿಸಬೇಕು, ಹೊಂದಿಕೊಳ್ಳಬೇಕು, ಸ್ವಪ್ರತಿಷ್ಠೆಯಿರ ಕೂಡದು, ಸಾಮಾನ್ಯ ಉದ್ದೇಶಕ್ಕಾಗಿ, ಒಮ್ಮನಸ್ಸಿನಿಂದ ದುಡಿಯಬೇಕು. ಹಿಡಿದ ಕಾರ್ಯ ಮುಗಿಸುವ ಛಲ ಬೇಕು ಮತ್ತು ಕಾರ್ಯದ ಫಲಗಳನ್ನು ಸಮನಾಗಿ ಹಂಚಬೇಕು. ಹೀಗೆ ಸಾಮಾಜಿಕ ಕಳಕಳಿ, ಸೇವಾಭಾವ, ಪರಸ್ಪರ ಗೌರವ, ಸಹಕಾರ, ಸತತೋದ್ಯೋಗ, ಸಾಮಾಜಿಕ, ಸಮಾನತೆ, ನ್ಯಾಯ ಮುಂತಾದ ಸಾಮಾಜಿಕ ಜೀವನ ಮೌಲ್ಯಗಳ ಪಾಠಗಳನ್ನು ಮಕ್ಕಳು ಚಿಕ್ಕಂದಿನಲ್ಲೇ ಕಲಿಯುವುದು. 'ಮೂರು ವರ್ಷದ ಬುದ್ಧಿ ನೂರು ವರುಷಗಳವರೆಗೆ' ಎಂಬಂತೆ ಈ ಅನುಭವಗಳು

ಮೌಲ್ಯಾಧಾರಿತ, ನೀತಿವಂತ ಸಂಪನ್ನ ಸಾಮಾಜಿಕ ವ್ಯಕ್ತಿಗಳ ನಿರ್ಮಾಣದ ಭದ್ರ ಅಡಿಪಾಯ ಹಾಕುವುವು. ಈ ಬಗೆಯ ಶಿಕ್ಷಣ ಅಭಾವವೇ ಈಗ ಭಾರತದಲ್ಲಿ ಕಂಡುಬರುವ ಭ್ರಷ್ಟಾಚಾರದ ಮತ್ತು ಸಮಾಜದ ಅಧಃಪತನಗಳಿಗೆ ಕಾರಣ.

8) ಸ್ವಯಂ ಆಡಳಿತ

ಹಿಂದೆ ಹೇಳಿದಂತೆ ಶಾಲೆಯನ್ನೇ ಒಂದು ಪುಟ್ಟ ಆದರ್ಶ ಪ್ರಜಾಪ್ರಭುತ್ವ ತತ್ವದ ಸ್ವಯಂಆಡಳಿತ ಸಮಾಜವಾಗಿ ಪರಿವರ್ತಿಸಿ ಶಾಲೆಯ ಎಲ್ಲ ಕಾರ್ಯಗಳ ಹೊಣೆಗಾರಿಕೆಯನ್ನು ಮಕ್ಕಳಿಗೆ ವಹಿಸಬೇಕು. ಮಕ್ಕಳಿಂದ ಆಯ್ಕೆಯಾದ ವಿದ್ಯಾರ್ಥಿಗಳೇ ವರ್ಗದ ಮಂತ್ರಿ ಮಂಡಲದ ಮತ್ತು ಇಡೀ ಶಾಲೆಯ ಮಂತ್ರಿಮಂಡಲದ ಸದಸ್ಯರು. ಶಾಲೆಯ ಪ್ರಾರ್ಥನೆಯಿಂದ ಆರಂಭವಾಗಿ, ವರ್ಗದ ಸ್ವಚ್ಛತೆ, ಅಲಂಕಾರ, ಪಾಠಗಳು ಉತ್ಪಾದಕ ಕಾರ್ಯ, ಪ್ರವಾಸ ಮತ್ತು ಸಂದರ್ಶನ, ಹಬ್ಬ ಮತ್ತು ಸಾಂಸ್ಕೃತಿಕ ಕಾರ್ಯಗಳು, ಕ್ರೀಡೆ, ಮನರಂಜನೆ ಮುಂತಾದ ಎಲ್ಲ ಚಟುವಟಿಕೆಗಳನ್ನು ವಿದ್ಯಾರ್ಥಿ ನಾಯಕರೇ ಯೋಜಿಸಿ ಸಂಘಟನೆ ಕಾರ್ಯಗೊಳಿಸಬೇಕು. ತಿಂಗಳಿಗೊಮ್ಮೆ ಆಯಾ ನಾಯಕರು (ಮಂತ್ರಿಗಳು) ವರ್ಗದ ಸಾಮಾನ್ಯ ಸಭೆಯಲ್ಲಿ ವರದಿ ಒಪ್ಪಿಸಿ, ಎತ್ತಿದ ಪ್ರಶ್ನೆಗಳಿಗೆ ಉತ್ತರಿಸಬೇಕು. ಇತರ ವಿದ್ಯಾರ್ಥಿಗಳು ನಾಯಕರ ಆಜ್ಞಾನುಸಾರ ಸಹಕರಿಸಿ ಕಾರ್ಯಮಾಡಬೇಕು. ಹೀಗೆ ಭಾವೀ ಸಮಾಜ ಸೇವಕರ, ನಾಯಕರ ತರಬೇತಿ ನಡೆಯಬೇಕು.

ಈ ಬಗೆಯ ತರಬೇತಿಯು ಈಗ ಅತ್ಯವಶ್ಯ. ಆಡಳಿತ ವಿಕೇಂದ್ರೀಕರಣವು ಭಾರತ ದೇಶದ ಧೋರಣೆಯಾಗಿ ಪಂಚಾಯತರಾಜ್ಯ ಪದ್ಧತಿಯು ಈಗ ಎಲ್ಲೆಡೆಯಲ್ಲಿಯೂ ಜಾರಿಯಲ್ಲಿದೆ. ಪಂಚಾಯತ್ ರಾಜ್ಯದ ಆಯ್ಕೆಗೊಂಡ ಪ್ರತಿನಿಧಿಗಳು ಪ್ರಾಮಾಣಿಕ, ನಿಸ್ವಾರ್ಥ ಸಮಾಜಸೇವಕರಾಗಿ, ತಮ್ಮ ಹಿತಾಸಕ್ತಿಗಳನ್ನು ಗಮನಿಸದೇ ಕಾರ್ಯ ಮಾಡಬೇಕಾಗಿದೆ. ಪ್ರಾಥಮಿಕ ಶಾಲೆಯಲ್ಲಿಯೇ ಅಂತಹ ತರಬೇತಿ ದೊರೆತಲ್ಲಿ ಪಂಚಾಯತ್ ರಾಜ್ಯಪದ್ಧತಿಯು ಫಲಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಯಾಕೆಂದರೆ ಈಗ ಹಳ್ಳಿಗಳಲ್ಲಿ ಬಹುಜನರಿಗೆ ದೊರೆಯಬಹುದಾದ ಶಿಕ್ಷಣವೆಂದರೆ ಪ್ರಾಥಮಿಕ ಶಿಕ್ಷಣ ಮಾತ್ರ. ಈ ತರಬೇತಿಯು ನಮ್ಮ ವಿಧಾನಸಭೆ ಮತ್ತು ಲೋಕಸಭೆಯ ಕಾರ್ಯಗಳಲ್ಲಿಯೂ ಪ್ರಯೋಜನವಾಗುವ ತಳಪಾಯ ಹಾಕುವುದು.

4. ಕ್ರೀಡೆ ; ಮನರಂಜನೆ

ಗ್ರಾಮೀಣ ಕ್ರೀಡೆಗಳು ಮತ್ತು ಮನರಂಜನೆಯ ಸಾಧನವಾಗಿದ್ದ ಜನಪದ, ಕ್ರೀಡೆ, ಕಲೆ, ಸಾಹಿತ್ಯಗಳ ಪುನರುಜ್ಜೀವನದ ಅವಶ್ಯಕತೆಯಿದೆ. ಶಾಲಾ ಕಾರ್ಯಕ್ರಮದಲ್ಲಿ ಅವು ಸಹ ಪಠ್ಯವಸ್ತುವಾದಲ್ಲಿ ಈ ಕಾರ್ಯ ಸುಲಭವಾಗಿ ಸಾಧ್ಯವಾಗುವುದು. ಗ್ರಾಮೀಣ ಆಟಗಳಾದ ಕಬ್ಬಡಿ, ಲೆಜ್ಜಿ, ಚಿಣಿಪಣಿ, ಕೋಲಾಟ, ಕುಸ್ತಿ ಮುಂತಾದವುಗಳು ನಮ್ಮ ಶಾಲೆಗಳಲ್ಲಿ ಸಹಪಠ್ಯವಸ್ತುಗಳಾಗಬೇಕು. ಅದರಂತೆ ಜನಪದಸಾಹಿತ್ಯ, ನೃತ್ಯ, ನಾಟಕ, ಹಾಡುಗಳ ಪುನರುಜ್ಜೀವನವು ಸಹಾ. ಈಗ ಕ್ರಿಕೆಟ್, ಹಾಕಿ, ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್ ಮುಂತಾದ ಪಾಶ್ಚಾತ್ಯ ಕ್ರೀಡೆಗಳಲ್ಲೇ ಮೇಲುಗೈ ಸಾಧಿಸಿ, ಭಾರತೀಯ ಆಟಗಳು ಮರೆಯಾಗುತ್ತಲಿವೆ. ಆದರೆ ಬಹುಜನ ಭಾರತೀಯರಿಗೆ ಭಾರತೀಯ ಆಟಗಳೇ ಲಭ್ಯ. ಆದುದರಿಂದ ಶಾಲೆಗಳಲ್ಲಿ

ಅವುಗಳಿಗೆ ಸ್ಥಾನವಿರಬೇಕು ಮತ್ತು ಪ್ರೋತ್ಸಾಹವಿರಬೇಕು ಮತ್ತು ಸುಧಾರಣೆಗಳೂ ನಡೆಯಬೇಕು.

21ನೇ ಶತಮಾನದ ಸಮಸ್ಯೆಗಳು

ಬರಲಿರುವ 21ನೇ ಶತಮಾನದಲ್ಲಿ ಕಲ್ಪನಾತೀತವಾದ ಬದಲಾವಣೆಗಳಾಗಲಿವೆ.. ವಿಜ್ಞಾನ ತಂತ್ರಜ್ಞಾನಗಳಲ್ಲಾಗಿರುವ. ಮುಂದೆ ಆಗಲಿರುವ ಪ್ರಗತಿಯಿಂದಾಗಿ ಅದರಲ್ಲಿಯೂ ಸಂಪರ್ಕ ಮಾಧ್ಯಮಗಳ ಬೆಳವಣಿಗೆಗಳಿಂದಾಗಿ, ದೇಶ ದೇಶಗಳ ನಡುವಿನ ದೂರ ತೀರ ಕಡಿಮೆಯಾಗಿ ಜಗತ್ತು ಒಂದು ಹಳ್ಳಿಯಂತಾಗಲಿದೆ. ವಿಶ್ವದ ಒಂದು ಮೂಲೆಯಲ್ಲಾಗುವ ವಿದ್ಯಮಾನಗಳು ಕ್ಷಣಾರ್ಧದಲ್ಲಿ ಎಲ್ಲೆಡೆ ಹರಡಿ ಸ್ಥಾನಿಕ ಸಮಾಜ ಮತ್ತು ಸರಕಾರಗಳ ಮೇಲೆ ಗಂಭೀರ ಪರಿಣಾಮ ಬೀರಲಿವೆ.

i) ಜಾಗತೀಕರಣ ಮತ್ತು ಉದಾರೀಕರಣ

ಜಾಗತೀಕರಣ ಮತ್ತು ಉದಾರೀಕರಣಗಳ ಸದ್ಯದ ಆಂದೋಲನದಿಂದಾಗಿ ಜಗತ್ತು ಶೋಷಿತ ಮತ್ತು ಶೋಷಕ ಎಂಬ ಎರಡು ಗುಂಪುಗಳಲ್ಲಿ ವಿಭಾಗಿಸಲಾಗುತ್ತವೆ. ಬಡತನ ಸರ್ವವ್ಯಾಪಿಯಾಗಲಿದೆ ಮತ್ತು ಅದರ ಸಂಖ್ಯೆಯೂ ಬೆಳೆಯಲಿದೆ.

ಉದಾರೀಕರಣ ಮತ್ತು ಜಾಗತೀಕರಣಗಳಿಂದ ಎಲ್ಲ ದೇಶಗಳೂ ಸರಿಸಮಾನವಾಗಿ ಲಾಭ ಪಡೆಯಲಾರವು. ಮತ್ತು ಆದರ್ಶ ಜಾಗತಿಕ ಹೊಸಸಮಾಜ ನಿರ್ಮಾಣವಾಗದು. ಬಂಡವಾಳವು ಕೂಲಿಗಿಂತ ಪ್ರಬಲಶಕ್ತಿಯಾಗಿರುವುದರಿಂದ ಬಂಡವಾಳದಲ್ಲಿ ಬಲಿಷ್ಠ ದೇಶಗಳು ಮಾನವ ಶ್ರಮದಲ್ಲಿ ಬಲಿಷ್ಠ ದೇಶಗಳನ್ನು ಸುಲಿಯುವುವು. ಆದುದರಿಂದ ಶ್ರೀಮಂತ ದೇಶಗಳು ಬಡದೇಶಗಳ ಉದ್ಧಾರಕ್ಕಾಗಿ ಶ್ರಮಿಸಬೇಕೆಂಬ ಆದರ್ಶತತ್ವವು ಕ್ರಿಯಾ ಶೂನ್ಯವಾಗುವುದು. ಯಾಕೆಂದರೆ ಬಡದೇಶಗಳ ಮಾನವ ಶ್ರಮವನ್ನು ಶೋಷಿಸಿಯೇ ಈ ದೇಶಗಳು ಶ್ರೀಮಂತವಾಗಿರುವುದು.

ii) ಯಂತ್ರ ತಂತ್ರಗಳ ಹಾವಳಿ

ಜಾಗತೀಕರಣದಿಂದಾಗಿ ಬಹುರಾಷ್ಟ್ರೀಯ ಕಂಪನಿಗಳು ಎಲ್ಲ ಉತ್ಪಾದನಾ ಸ್ಥಾವರಗಳನ್ನು ಕೈವಶ ಮಾಡಿಕೊಂಡು, ಯಂತ್ರತಂತ್ರಗಳಿಂದ ಕಲ್ಪನಾತೀತವಾಗಿ ಜೀವನಾವಶ್ಯಕ ಮತ್ತು ವಿಲಾಸೀ ಜೀವನ ಸೌಕರ್ಯಗಳನ್ನು ವಿಪುಲವಾಗಿ ಉತ್ಪಾದಿಸಿ ಮಾರುಕಟ್ಟೆಗಳನ್ನು ಆಕ್ರಮಿಸುವವು. ಇದರಿಂದಾಗಿ ಮಾನವನ ಪರಂಪರಾಗತ ಉದ್ಯೋಗಗಳಾದ ಕೃಷಿ ಮತ್ತು ಕೈಗಾರಿಕೆಗಳು ಯಂತ್ರಗಳ ಸ್ವಾಧೀನವಾಗಿ ಶೇಕಡಾ 80 ಜನರು ನಿರುದ್ಯೋಗಿಗಳಾಗುವುದು ಮತ್ತು ಅವರ ಜೀವನ ಚಿಂತಾಜನಕವಾಗುವುದು. ಒಂದು ಅಂದಾಜಿನಂತೆ ಈಗ ಜಗತ್ತಿನ ದುಡಿಯುವ ಜನರ ಸಂಖ್ಯೆ ಸುಮಾರು 2.6 ಬಿಲಿಯನ್ (260 ಕೋಟಿ), ಅವರಲ್ಲಿ 120 ಮಿಲಿಯನ್ (12 ಕೋಟಿ) ಪೂರ್ಣ ನಿರುದ್ಯೋಗಿಗಳು. 680ಮಿಲಿಯನ್ (68 ಕೋಟಿ) ಜನರು ಎರಡು ಹೊತ್ತಿಗೆ ಊಟ ಕಾಣದ ಅರೆಉದ್ಯೋಗಿಗಳು. ಈಗೀಗ ಹೆಚ್ಚು ಜನರು ಪ್ರೌಢಾವಸ್ಥೆಯನ್ನು ಪ್ರವೇಶಿಸಲಿದ್ದು ನಿರುದ್ಯೋಗಿಗಳಾಗಲಿದ್ದಾರೆ. ಈ ಜನರ ಸಂಖ್ಯೆ ಇನ್ನಷ್ಟು ಬೆಳೆದು ಗಂಭೀರ ಸ್ವರೂಪ ತಾಳಲಿದೆ.

ಆದುದರಿಂದಲೇ ಗಾಂಧೀಜಿ ಉತ್ಪಾದನೆಯಲ್ಲಿ ಮಾನವ ದುಡಿಮೆಯನ್ನು ಆಕ್ರಮಿಸುವ

ಯಂತ್ರಗಳನ್ನು ವಿರೋಧಿಸಿದ್ದು : "ಇವರ (ಯಂತ್ರಗಳ) ಬಗೆಗೆ ನಮ್ಮಲ್ಲಿ ಯಾವ ಹುಚ್ಚು ಕಲ್ಪನೆಯೂ ಇಲ್ಲ. ಸದೃಢ ಕಾಯದ ಪ್ರತಿಯೊಬ್ಬ ಭಾರತೀಯನಿಗೂ ಲಾಭದಾಯಕ ಉದ್ಯೋಗ ದೊರೆಯಬೇಕು. ವಿದ್ಯುತ್‌ಶಕ್ತಿ ಅಲ್ಲದೆ ಅಣುಶಕ್ತಿಯಲ್ಲಿ ಆಗಲಿ ಮಾನವ ದುಡಿಮೆಯನ್ನು ಹೊರಹಾಕದಿದ್ದರೆ ಅದರ ವಿರುದ್ಧ ನನ್ನ ಕಿರುಬೆರಳನ್ನು ಎತ್ತಲಾರೆ" ಎಂದಿದ್ದಾರೆ.

ಶ್ರೀಮಂತ ವರ್ಗದ ವಿಲಾಸೀ ಭೋಗಜೀವನ ಬಡವರನ್ನು ಆಕರ್ಷಿಸುವುದು. ಉಳ್ಳವರ ಈ ವಸ್ತುಗಳನ್ನು ಪಡೆಯಲು ಇಲ್ಲದವರೂ ಹಂಬಲಿಸಿ, ಅವನ್ನು ಕೊಳ್ಳುವ ಶಕ್ತಿ ಇಲ್ಲದಾಗ ಅವರು ಕಳವು, ಮೋಸ, ದರೋಡೆ, ಕೊಲೆ, ಸುಲಿಗೆ ಮುಂತಾದ ದುಃಸ್ಸಾಹಸಕ್ಕಿಳಿದು ಸಮಾಜ ಜೀವನದಲ್ಲಿ ಅಲ್ಲೋಲಕಲ್ಲೋಲ ಉಂಟಾಗುವುದು; ಹಿಂಸೆ ಭಯೋತ್ಪಾದನೆಗಳೂ ಹೆಚ್ಚುವುದು.

ಪರಿಹಾರಮಾರ್ಗಗಳು

ಅ) ಸ್ವಾವಲಂಬನೆ

ಈ ಅಪಾಯಗಳನ್ನು ತಡೆಗಟ್ಟಲು ಹಿಂದುಳಿದ ದೇಶಗಳು ತಮ್ಮ ಏಳಿಗೆಗಾಗಿ ತಾವೇ ಯತ್ನಿಸಬೇಕು. ಅಂದರೆ ಸ್ವಪ್ರಯತ್ನ, ಸ್ವಾವಲಂಬನೆಗಳ ಮೂಲಕ ಅವು ಮೇಲೇರ ಬೇಕು. ಬಡತನ ನಿವಾರಣೆ, ಜನಸಂಖ್ಯಾ ನಿಯಂತ್ರಣ, ಆರೋಗ್ಯ ಮತ್ತು ಪೌಷ್ಟಿಕ ಆಹಾರ, ಶಿಶುಕಲ್ಯಾಣ, ಸಾಕ್ಷರತೆ ಮುಂತಾದ ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕಾಗಿ ಪರ ರಾಷ್ಟ್ರಗಳನ್ನು ಅವಲಂಬಿಸ ಕೂಡದು. ಇದು ಸ್ವಾವಲಂಬನೆ, ಸ್ವದೇಶಿ ಭಾವನೆಗಳ ತಿರುಳು ; ಆರ್ಥಿಕ ಸ್ವಾವಲಂಬನೆಯು ಸ್ವಯಂಉತ್ಪಾದನೆ, ಉತ್ಪಾದನಾ ಸಾಮರ್ಥ್ಯದ ಹೆಚ್ಚಳ, ಸ್ವಂತ ಮಾರುಕಟ್ಟೆ, ಸ್ವಾಭಿಮಾನದ ಆದರ್ಶಗಳನ್ನು ಒಳಗೊಂಡಿದೆ. ಈ ರಾಷ್ಟ್ರೀಯ ವೈಶಿಷ್ಟ್ಯಗಳು ಪ್ರತಿವ್ಯಕ್ತಿಯ ಜೀವನಮೌಲ್ಯಗಳಾಗಬೇಕು. ಅಂತಹ ಅನುಭವಜನ್ಯ ತರಬೇತಿ ಎಳೆ ವಯಸ್ಸಿನಲ್ಲಿ ಶಾಲೆಗಳಲ್ಲಿಯೇ ನಡೆಯಬೇಕು.

ಆ) ಮರಳಿ ಹಳ್ಳಿಗೆ

ಕೇಂದ್ರೀಕೃತ ಉತ್ಪಾದನೆ, ವಿತರಣೆ ಮತ್ತು ಮಾರುಕಟ್ಟೆಗಳಲ್ಲಿ ಶೋಷಣೆಯ ಅಪಾಯಗಳಿವೆ. ಆದುದರಿಂದ ವಿಕೇಂದ್ರೀಕರಣ, ಅಂದರೆ ವ್ಯಕ್ತಿಯನ್ನು ಈ ಕೇಂದ್ರೀಕರಣಗಳಿಂದ ಮುಕ್ತನನ್ನಾಗಿ ಮಾಡುವುದೇ ಮುಖ್ಯ. ಅಂತಹ ಅವಕಾಶಗಳು ತಲೆದೋರುವ ಸಂಭವವಿದೆ. ಜಾಗತೀಕರಣ ಮತ್ತು ಉದಾರೀಕರಣಗಳಿಂದಾಗಿ ಉತ್ಪಾದನಾ ಕೇಂದ್ರಗಳು ನಗರ ಪರಿಸರದಲ್ಲಿ ಹುಟ್ಟಿಕೊಂಡು, ಹಳ್ಳಿಗಳಲ್ಲಿ ನಿರುದ್ಯೋಗ ಬೆಳೆದು ಹಳ್ಳಿಗರು ನಗರಗಳತ್ತ ವಲಸೆ ಬಂದು ನಗರಗಳ ಜನಸಂಖ್ಯೆ ಬೆಳೆದು, ಕೊಳೆಗೇರಿಗಳು ನಿರ್ಮಾಣಗೊಂಡು ನಗರಜೀವನವು ನರಕಜೀವನವಾಗಲಿದೆ. ಜನದಟ್ಟಣೆ, ಸಂಚಾರಸಾಧನಗಳ ಹೆಚ್ಚಳ, ಪರಿಸರ ಮಾಲಿನ್ಯ, ನಿರುದ್ಯೋಗ, ಅಪರಾಧಗಳ ಹೆಚ್ಚಳ, ಪ್ರಾಣ ಮತ್ತು ವಸ್ತುಗಳಿಗೆ ರಕ್ಷಣೆಯ ಅಭಾವ ಮತ್ತು ಜೀವನಾವಶ್ಯಕತೆಗಳ ಅಭಾವ, ಇದಕ್ಕೂ ಹೆಚ್ಚಾಗಿ, ಮಾನವಸಂಪರ್ಕ ಮಾನವೀಯ ಸಹಬಾಳ್ವೆಯ ಅಭಾವದಿಂದ ನಗರವಾಸಿಗಳು ನಿಸರ್ಗದ ಮಡಿಲಲ್ಲಿರುವ ಹಳ್ಳಿಗಳಿಗೆ ತಿರುಗಿ ನಗರವಾಸಿಗಳಿಗೆ ಅವರ ಜೀವನ ಅರ್ಥಶೂನ್ಯವಾಗಿ ಮರಳಲಿವೆ. ನಿಸರ್ಗದ ಸಂಪರ್ಕ, ಮಾನವಸ್ನೇಹ, ಸರಳಜೀವನ, ಸಹಬಾಳ್ವೆ, ಸ್ವಂತದುಡಿಮೆ, ಕಲ್ಮಶತೆ ಮುಂತಾದವುಗಳಿಗಾಗಿ ಹಂಬಲಿಸಿ ಬರುವ ಸಂಭವವಿದೆ. ಯೂರೋಪದ ಕೆಲವು

ದೇಶಗಳಲ್ಲಿ ಈ ಕಾರ್ಯ ಈಗೀಗ ಆರಂಭವಾಗಿದೆ.

ಇ) ಸಮೂಹ ಮಾಧ್ಯಮಗಳ ಪಾತ್ರ

ಸಮೂಹ ಸಂಪರ್ಕ ಮಾಧ್ಯಮಗಳೂ ಈ ಜೀವನ ವಿಧಾನಕ್ಕೆ ಪೋಷಕವಾಗಲಿದೆ. ಕೇಂದ್ರೀಕೃತ ಉದ್ಯೋಗಗಳನ್ನು ಉಪಉದ್ಯೋಗಗಳಾಗಿ ವಿಭಜಿಸಿ ಹಳ್ಳಿಗಳಲ್ಲಿ ಹಂಚಬಹುದಾಗಿದೆ. ನೈಸರ್ಗಿಕ ಇಂಧನ ಮೂಲಗಳಾದ ಸೌರಶಕ್ತಿ, ವಾಯುಶಕ್ತಿ ಮತ್ತು ಜೈವಿಕ ಅನಿಲಗಳಲ್ಲಿ ಸಂಶೋಧನೆಗಳು ನಡೆದು ಮನೆಮನೆಗೂ ಈ ಶಕ್ತಿಗಳು ದೊರೆಯಲಿವೆ. ಹೀಗಾಗಿ ಪ್ರತಿಮನೆಯೂ ಉತ್ಪಾದಕ ಕೇಂದ್ರವಾಗಲಿದೆ. ಸ್ವಯಂ ಉದ್ಯೋಗ, ಸೃಜನಶೀಲತೆ, ಸ್ವಾವಲಂಬನೆ, ಸ್ವಾತಂತ್ರ್ಯ, ಅಶೋಷಣೆ, ಸಮಾನತೆಗಳು ಕೈಗೂಡಲಿವೆ. ಹೀಗೆ ಉದ್ಯೋಗಗಳು ವ್ಯಕ್ತಿಯನ್ನರಸಿ ಹೋಗುವ ಮೂಲಕ ಮತ್ತು ಕೆಲಸಗಾರರ ನಡುವೆ ಈಗ ಕಂಡುಬರುತ್ತಿರುವ ವಿರಸ, ದ್ವೇಷ ಮತ್ತು ಜಗಳಗಳು ಮಾಯವಾಗಿ ಸರ್ವಸಮಾನತೆ, ಸಾಮಾಜಿಕನ್ಯಾಯಗಳ ಸ್ಥಾಪನೆಯಾಗಿ ಸರ್ವೋದಯ ಸಮಾಜ ನಿರ್ಮಾಣವಾಗಲಿದೆ.

ಈ) ಕೃಷಿಯಲ್ಲಿ ವಿಕೇಂದ್ರೀಕರಣ

ಭಾರತದಲ್ಲಿ ಮುಕ್ಕಾಲುಪಾಲು ಭಾರತೀಯರು ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಕೃಷಿ ಅವರ ಉದ್ಯೋಗವಾಗಿದೆ. ಬೇಸಾಯಗಾರರಲ್ಲಿ ಶೇಕಡಾ 80 ಜನರು ಎರಡರಿಂದ ಐದು ಎಕರೆ ಜಮೀನಿರುವ ಸಣ್ಣಹಿಡುವಳಿದಾರರು, ಅದರಲ್ಲಿಯೂ ಮಳೆನೀರನ್ನು ಆಧರಿಸಿರುವ ಜಮೀನು ಮುಕ್ಕಾಲುಪಾಲು, ಈಗಿರುವ ನೀರಾವರಿ ಮತ್ತು ವಿದ್ಯುತ್ ಉತ್ಪಾದನಾ ಸಾಧನಗಳಿಂದ ದೊಡ್ಡ ದೊಡ್ಡ ಜಲಾಶಯಗಳಲ್ಲಿ ಕ್ರಮೇಣ ಹೂಳು ತುಂಬಿ ನಿರುಪಯೋಗವಾಗಲಿವೆ. ಅಲ್ಲದೆ ಮಲೇರಿಯಾ ಮುಂತಾದ ಸಾಂಕ್ರಾಮಿಕ ರೋಗಗಳ ಕೇಂದ್ರಗಳೂ ಆಗಲಿವೆ. ಹೀಗಾಗಿ ಸಣ್ಣ ಸಣ್ಣ ಸ್ಥಾನಿಕ ಜಲಾಶಯಗಳನ್ನು ಆಶ್ರಯಿಸುವ ಸಣ್ಣ ಹಿಡುವಳಿದಾರರೇ ಹಳ್ಳಿಗಳ ಬೆನ್ನೆಲುಬಾಗುವುದು. ಇವರ ಏಳಿಗೆಯೇ ಹಳ್ಳಿಗಳ ಏಳಿಗೆ. ಆಧುನಿಕ ಸುಧಾರಿತ ವೈಜ್ಞಾನಿಕ ಕೃಷಿವಿಧಾನಗಳು ಇವರ ನೆರವಿಗೆ ಬರಲಿವೆ. ಒಣಬೇಸಾಯ, ಸುಧಾರಿತ ಬೀಜಗಳು, ಜೈವಿಕ ಗೊಬ್ಬರ, ಜೈವಿಕಕೀಟನಾಶಕಗಳು, ಸಿಂಪರಣೆಯ ನೀರಾವರಿ, ಅದರಲ್ಲಿಯೂ ಸಹಜ ಕೃಷಿವಿಧಾನ, ಸುಧಾರಿತ ಬೀಜ ಮತ್ತು ಮಿಶ್ರ ಬೇಸಾಯ ಮುಂತಾದ ಕ್ರಮಗಳಿಂದ ಹೈನುಗಾರಿಕೆ, ರೇಷ್ಮೆ, ಕೋಳಿ ಕುರಿ ಸಾಕಣೆ, ನೂಲುವುದು ಮುಂತಾದ ಬಿಡುವಿನ ವೇಳೆಯಲ್ಲಿ ಬೇಸಾಯಗಾರರು ಕೈಕೊಳ್ಳಬಹುದಾದ ಕಾರ್ಯಗಳಿಂದ ಕೃಷಿಕರ ಆದಾಯ ಹೆಚ್ಚಲಿದೆ.

ಉ) ಹಳ್ಳಿಯ ಕೈಗಾರಿಕೆಗಳ ಪುನರುಜ್ಜೀವನ

ಹಳ್ಳಿಗಳಿಂದ ಮಾಯವಾಗಿರುವ ಕುಂಬಾರಿಕೆ, ಕಮ್ಮಾರಿಕೆ, ಎಣ್ಣೆಗಾಣ, ಚರ್ಮದ ಕೆಲಸ, ಬಡಿಗತನ, ನೇಕಾರಿಕೆ, ಹೊಲಿಗೆ, ಮುಂತಾದ ಕುಶಲಕರ್ಮಗಳು ಪುನಃಚೇತನಗೊಳ್ಳುವವು. ಅಲ್ಲದೇ ಹೊಸ ಹೊಸ ಯಂತ್ರಗಳ ದುರಸ್ತಿ, ಆರೋಗ್ಯ, ಜೀವನ, ನಗರಾಡಳಿತ ಶಿಕ್ಷಣ, ಮನರಂಜನೆಯ ಸಾಧನಗಳಾದ ಲಲಿತಕಲೆ, ಕ್ರೀಡೆ ಮುಂತಾದ ಸೌಕರ್ಯಗಳಲ್ಲಿ ಸೇವೆಮಾಡುವ ಜನರು ಮುಂತಾದವರ ಗುಂಪುಗಳು ನಿರ್ಮಾಣವಾಗಿ ಸುಶಿಕ್ಷಿತ ಯುವಕರಿಗೆ ಹೇರಳ ಉದ್ಯೋಗಾವಕಾಶಗಳು ಹಳ್ಳಿಗಳಲ್ಲಿ ನಿರ್ಮಾಣಗೊಳ್ಳುವವು. ಹೀಗಾಗಿ ಹಳ್ಳಿಯ ಶಿಕ್ಷಿತ ಯುವಕರು ನಗರಗಳಿಗೆ ವಲಸೆಹೋಗದೆ ಹಳ್ಳಿಗಳಲ್ಲಿಯೇ ಉಳಿದು ಅವುಗಳ ಸುಧಾರಣೆಗಾಗಿ ಶ್ರಮಿಸುವುದು. ಈ ಜನರಿಂದ ಪಂಚಾಯತಿ ರಾಜ್ಯಗಳು ಹಳ್ಳಿಗಳ

ಏಳಿಗೆಗಾಗಿ ಮಡಿಯುವ ಸಂಸ್ಥೆಗಳಾಗುವವು.

ಹೀಗೆ ಬರಲಿರುವ ಶತಮಾನದಲ್ಲಿ ಹಳ್ಳಿಗಳು ಸ್ವಾವಲಂಬೀ, ಸ್ವಯಂ ಆಡಳಿತದ ಸ್ವತಂತ್ರ ಗಣರಾಜ್ಯಗಳಾಗಿ ಮಹಾತ್ಮಗಾಂಧೀಜೀ ಕನಸಿನ ರಾಮರಾಜ್ಯಗಳಾಗುವವು. ಈ ದಿಶೆಯಲ್ಲಿ ಜೀವನದ ಮುಖಾಂತರ ಜೀವಿಸಲು ಕಲಿಸುವ ಗುರಿಯಳ್ಳ ಗಾಂಧೀಜಿಯ ಜೀವನಶಿಕ್ಷಣವಿಧಾನವು ಎಳೆತನದಲ್ಲಿಯೇ ಮಕ್ಕಳಿಗೆ ಯೋಗ್ಯಶಿಕ್ಷಣ ಕೊಡುವುದು. ಈ ಶಿಕ್ಷಣದಲ್ಲಿ ಪ್ರತಿಪಾದಿಸಿದ ಐದು ಬಗೆಯ ಜೀವನದ ಆಚರಣೆಗಳು, ಅವಶ್ಯಕ ಜ್ಞಾನ ಕೌಶಲ್ಯ, ಮನೋಭಾವ ಮತ್ತು ಜೀವನ ಮೌಲ್ಯಗಳನ್ನು ಬೇರೂರಿಸುವುದು.

ಊ) ಮಧ್ಯಮವರ್ಗದ ಪಾತ್ರ

ಗಾಂಧೀಜಿಯ ಜೀವನಶಿಕ್ಷಣವು ಈಗ ಬೌದ್ಧಿಕ, ಉದ್ಯೋಗಗಳಿಂದಲೇ ಜೀವಿಸುವ ನಗರವಾಗಿ ಮಧ್ಯಮ ವರ್ಗಕ್ಕೆ ಉಪಯುಕ್ತವಾಗಿ ತೋರಬೇಕಾದುದು ಅತಿಮುಖ್ಯ. ಯಾಕೆಂದರೆ ಈ ಜನರೇ ಗಾಂಧೀಜಿ ಶಿಕ್ಷಣ ಜಾರಿಗೊಳಿಸದಂತೆ ತಡೆಯೊಡ್ಡುವರು. ಸಧ್ಯದ ಶಿಕ್ಷಣದ ಉಸ್ತುವಾರಿ ಹೊತ್ತವರು ಇದೇ ಜನ. ತಮಗೆ ಅನುಕೂಲಕರವಾದ ರೀತಿಯಲ್ಲಿಯೇ ಅದನ್ನು ರೂಪಿಸಿದ್ದಾರೆ. ತಮ್ಮ ಮಕ್ಕಳಿಗೆ ಪರಿಚಿತವಾದ ಪುಸ್ತಕದ ಓದು, ಅಂಗ್ಲಭಾಷಾ ಮಾಧ್ಯಮ, ಟಿಪ್ಪಣಿ ಗಿಳಿಪಾಠ, ಅದರ ಪರೀಕ್ಷೆ, ಅಂಕ ರ್‍ಯಾಂಕು, ಪದಕ ಪದವಿ ಮತ್ತು ಚಾಕರಿಗಳಿಗಾಗಿ ಸ್ಪರ್ಧೆ ಮುಂತಾದವುಗಳು ಅದರಲ್ಲಿದೆ. ಈ ವ್ಯವಸ್ಥೆಯಲ್ಲಿ ಇವರ ಮಕ್ಕಳಿಗೆ ಮೇಲುಗೈ ಸಾಧಿಸಲು ಸಾಧ್ಯ. ಈ ಸ್ವಾರ್ಥಸಾಧನೆಗಾಗಿ, ದೈಹಿಕ ದುಡಿಮೆದಾರರ ಹಿಂದುಳಿದ ವರ್ಗದ ಮಕ್ಕಳನ್ನು ಪ್ರಾಥಮಿಕ ಹಂತದಲ್ಲಿಯೇ ಓಡಿಸಿದ್ದಾರೆ. ತಮ್ಮ ಮಕ್ಕಳು ಮುಂದುವರೆಯುವಂತೆ ಮಾಡಿ ಸಾಮಾಜಿಕ, ಸಾರ್ವಜನಿಕ ಅಧಿಕಾರ ಸ್ಥಾನಗಳನ್ನು ಅವರಿಗೇ ಮೀಸಲಾಗಿಡಲು ಶಿಕ್ಷಣವೆಂಬ ಉಪಾಯ ಹೂಡಿದ್ದಾರೆ. ಈ ಬಗೆಯ ಸ್ಪರ್ಧಾತ್ಮಕ ಶಿಕ್ಷಣದಲ್ಲಿ ಪರಸ್ಪರ ಅಸಹಕಾರ, ಅಪನಂಬಿಕೆ, ಅಸೂಯೆ, ದ್ವೇಷ, ಸೋಲಿನ ಭಯ, ಮುಂತಾದವುಗಳು ಸಹಜ. ಉಚ್ಚಸ್ಥಾನ ಪಡೆಯಲು ಕಳವು, ಮೋಸ, ಭ್ರಷ್ಟಾಚಾರಗಳೂ ಅನಿವಾರ್ಯ. ಇದರಲ್ಲಿ ಮಕ್ಕಳು, ಶಿಕ್ಷಕವರ್ಗ, ಶಿಕ್ಷಣಸಂಸ್ಥೆ, ಪರೀಕ್ಷಾ ವ್ಯವಸ್ಥೆ, ಪಾಲಕರೂ ಕೆಲವು ಸಲ ಸಹಭಾಗಿಗಳು. ಹೀಗೆ ಶಿಶುವಿಹಾರದಿಂದ ವಿಶ್ವವಿದ್ಯಾಲಯದ ವರೆಗೂ ನಡೆಯುವ ಸಂಭವಗಳಿವೆ. ಇದು ವಿಕೃತ ಮನೋಭಾವ ಮತ್ತು ವ್ಯಕ್ತಿತ್ವ ನಿರ್ಮಾಣ ಮಾಡಿ ಚರಿತ್ರಹೀನ ವ್ಯಕ್ತಿಗಳ ಮತ್ತು ಭ್ರಷ್ಟಸಮಾಜದ ಜನನಕ್ಕೆ ಕಾರಣವಾಗುತ್ತದೆ.

ಯಾರು ಹೊಣೆಗಾರರು ?

ಈಗ ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ಪರೀಕ್ಷೆಯಲ್ಲಿ ನಕಲು (ಮೋಸ) ಶಿಕ್ಷಾರ್ಹ ಅಪರಾಧವಾಗಿದೆ. ವಿದ್ಯಾರ್ಥಿಗಳೀಗ ಅಪರಾಧೀ ಸ್ಥಾನದಲ್ಲಿದ್ದಾರೆ. ಆದರೆ ಅವರೇಕೆ ಈ ಕಲಂಕಿತ ಸಾಹಸಕ್ಕೆ ಕೈಹಾಕಿದರು ? ಯಾವ ಪ್ರಚೋದನೆ, ಆಮಿಷಗಳು ಅವರನ್ನು ನಕಲು, ಮೋಸ, ಮಾಡಲು ಪ್ರೇರೇಪಿಸಿದವು? ತತ್‌ಕ್ಷಣದ ಪ್ರಚೋದನೆಯೆಂದರೆ ಪರೀಕ್ಷೆಯಲ್ಲಿ ಕೊಟ್ಟ ಪ್ರಶ್ನೆಗಳಿಗೆ ಅವರಲ್ಲಿ ಸಮರ್ಪಕ ಉತ್ತರಗಳಿಲ್ಲ. ಹಾಗಾದರೆ ಬಿಳಿಹಾಳೆ ಕೊಟ್ಟು ಹೋಗಬೇಕಿತ್ತು. ಹಾಗೇಕೆ ಮಾಡಲಿಲ್ಲ? ಇದಕ್ಕೆ ಮುಖ್ಯ ಕಾರಣ ಪರೀಕ್ಷೆಯಲ್ಲಿ ಅವರಿಗೆ ದೊರಕುವ ಅಂಕಗಳಿಗೆ ಸಮಾಜ ಮತ್ತು ಶಿಕ್ಷಣವ್ಯವಸ್ಥೆಗಳು ದಯಪಾಲಿಸಿರುವ ಅವಾಸ್ತವ ಮಹತ್ವ. ಈ ಅಂಕಗಳೇ ವೈದ್ಯಕೀಯ, ತಾಂತ್ರಿಕ ವಿದ್ಯಾಲಯಗಳಿಗೆ ಪ್ರವೇಶದ ರಹದಾರಿ

ಪತ್ರಗಳು. ನಾಲ್ಕೈದು ಅಂಕಗಳ ವ್ಯತ್ಯಾಸದಲ್ಲಿ ಲಕ್ಷಾಂತರ ರೂಪಾಯಿಗಳ ಉಳಿತಾಯ ಸಾಧ್ಯವಿದೆ. ಚಾಕರಿಯ ಬೇಟೆಗೂ ಈ ಅಂಕಗಳು ಬೇಕು. ಈ ಬಗೆಯ ಆರ್ಥಿಕ ಮತ್ತು ಸಾಮಾಜಿಕ ಪ್ರತಿಷ್ಠೆಯ ಪ್ರಶ್ನೆಗಳಿಲ್ಲದಿದ್ದಾಗಲೂ ಪರೀಕ್ಷೆಗಳಲ್ಲಿ ಕಳವು, ಮೋಸ ನಡೆಸುವುದುಂಟು. ಇದಕ್ಕೆ ಪಾಲಕರು ಮತ್ತು ಶಿಕ್ಷಕರ ಒತ್ತಡ. ಪರೀಕ್ಷೆಯಲ್ಲಿ ಮೋಸಕ್ಕೆ ಮೂಲಕಾರಣ ವಿದ್ಯಾರ್ಥಿಗಳಿಗೆ ಪ್ರಶ್ನೆಗಳಿಗೆ ಸಮಂಜಸ ಉತ್ತರಗಳು ತಿಳಿಸದಿರುವುದು. ಹಾಗಾದರೆ ಅವರೇಕೆ ಕಲಿಯಲಿಲ್ಲ ? ಏನು ತೊಂದರೆ ? ಶಿಕ್ಷಣ ಗುರಿ, ಪಠ್ಯವಸ್ತು, ಬೋಧನಾ ವಿಧಾನಗಳ ದೋಷದಿಂದಲೋ? ಅಸಮರ್ಪಕ ಪರೀಕ್ಷಾ ವಿಧಾನದಿಂದಲೋ? ಎಂದು ಶಿಕ್ಷಣವ್ಯವಸ್ಥೆ ಪರೀಕ್ಷಿಸಬೇಕಿತ್ತು. ಆದರೆ ಇದುವರೆಗೂ ಈ ಕಾರ್ಯ ನಡೆದಿಲ್ಲ. ಎಲ್ಲ ದೋಷವನ್ನು ಅಸಹಾಯಕ ಮಕ್ಕಳ ಮೇಲೆ ಹೇರಿ ಶಿಕ್ಷಣವ್ಯವಸ್ಥೆ ತನ್ನ ಹೊಣೆಗಾರಿಕೆಯನ್ನು ಮರೆತಿದೆ. ಇದು ಅಕ್ಷಮ್ಯ ಅಪರಾಧ. ಶಿಕ್ಷಣವು ಇತ್ತೀಚಿತ್ತಲಾಗಿ ಲಾಭದಾಯಕ ವ್ಯಾಪಾರವಾಗಿದೆ. ದಕ್ಷತೆಯು ಶಿಕ್ಷಕರ ಆಯ್ಕೆಯ ತತ್ವವಾಗಿಲ್ಲ. ರಾಜಕೀಯ ಒತ್ತಡ ಕೆಲವೊಮ್ಮೆ ಈ ಹುದ್ದೆಗಳ ಹರಾಜು ಶಿಕ್ಷಣದ ಗುಣಮಟ್ಟ ತಗ್ಗಿಸಿವೆ. ಹೀಗಾಗಿ ಮಕ್ಕಳು ಅನುಕರಿಸಬಹುದಾದ ಆದರ್ಶ ಶಿಕ್ಷಕಗಣ ಈಗ ಅಪರೂಪವಾಗಿದೆ.

ಈ ಬಗೆಯ ಬೇಜವಾಬ್ದಾರಿ ಶಿಕ್ಷಣವ್ಯವಸ್ಥೆಯಿಂದಲೇ ಅದರಿಂದ ಹೊರಬರುವ ಯುವಕರು ಚರಿತ್ರಹೀನ ವ್ಯಕ್ತಿಗಳಾಗುವರು ಮತ್ತು ಅವರು ನಾಯಕತ್ವದ ಹೊಣೆಹೊತ್ತ ರಾಜಕಾರಣ, ವಾಣಿಜ್ಯ, ಉದ್ಯೋಗ ಮತ್ತು ಆಡಳಿತ ಭ್ರಷ್ಟವಾಗಿರುವುದು.

ಇದು ಎಲ್ಲ ಮಧ್ಯಮ ವರ್ಗಕ್ಕೂ ಲಾಭದಾಯಕವೇ?

ಈ ಬಗೆಯ ಶಿಕ್ಷಣವ್ಯವಸ್ಥೆಯಿಂದ ಎಲ್ಲ ಮಧ್ಯಮವರ್ಗದವರಿಗೂ ಸಾಮಾನ್ಯವಾಗಿ ಲಾಭ ಸಿಗದು. ಯಾಕೆಂದರೆ ಅಷ್ಟು ಸಂಖ್ಯೆಯಲ್ಲಿ ಬೌದ್ಧಿಕ ಕಾರ್ಯಗಳಿಲ್ಲ ; ಅಧಿಕಾರ ಸ್ಥಾನಗಳಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರದಲ್ಲಿ ದೊರೆಯಬಹುದಾದ ಚಾಕರಿಗಳ ಸಂಖ್ಯೆ ಸುಮಾರು ಎರಡು ಕೋಟಿ ಮಾತ್ರ. ವ್ಯಾಪಾರ, ಉದ್ಯಮಗಳಂತಹ ಸಂಘಟಿತ ಕ್ಷೇತ್ರಗಳಲ್ಲಿ ಸುಮಾರು ಮೂರು ಕೋಟಿ. ಸರಕಾರದ ಚಾಕರಿಗಳಲ್ಲಿ ಶೇಕಡಾ 50 ರಷ್ಟು ಚಾಕರಿಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಲಾಗಿದೆ. ಹೀಗಾಗಿ ಮಧ್ಯಮ ವರ್ಗಕ್ಕೆ ಕೇವಲ 2-3 ಕೋಟಿ ಚಾಕರಿಗಳು ಲಭ್ಯ. ಆದರೆ ಶೇಕಡಾ 25ರಷ್ಟಿರುವ ಭಾರತದ ಜನಸಂಖ್ಯೆಯಲ್ಲಿ ಸುಮಾರು 24 ಕೋಟಿ ಮಧ್ಯಮ ವರ್ಗದ ಜನರಿದ್ದು ಅವರಲ್ಲಿ ದುಡಿಯಬಹುದಾದವರು ಸುಮಾರು 12 ಕೋಟಿ. ಹೀಗಾಗಿ ಈ ಶಿಕ್ಷಣದಿಂದ ಪ್ರಯೋಜನ ಪಡೆಯದ ಜನ ಕನಿಷ್ಠ ಎಂಟೊಂಭತ್ತು ಕೋಟಿ. ಆದರೆ ಈಗಾಗಲೇ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಭಾರತದಲ್ಲೀಗ ಮೂರು ಕೋಟಿಯಿದೆ.

ಹೀಗಾಗಿ ಸುಮಾರು 9 ಕೋಟಿ ಮಧ್ಯಮವರ್ಗದ ಉದ್ಯೋಗಾರ್ಥಿಗಳಿಗೆ ಈ ಶಿಕ್ಷಣದಿಂದ ನಿರಾಶೆ. ಯಾಕೆಂದರೆ ಅವರಲ್ಲಿ ಪುಸ್ತಕದ ಓದಿನ ಅನುಭವ ಮಾತ್ರ ಇದೆ. ದೈಹಿಕಕಾರ್ಯಗಳ ಜ್ಞಾನ, ಕೌಶಲ್ಯ ಮತ್ತು ಮನೋಭಾವಗಳಿಲ್ಲ. ಸ್ವತಂತ್ರ ಆಲೋಚನಾ ಶಕ್ತಿ, ರಚನಾತ್ಮಕ ಚಿಂತನೆ, ಪರಿಸರ ಶೋಧನೆ, ಸ್ವಯಂ ಉದ್ಯೋಗ ಕಲ್ಪಿಸಿಕೊಂಡು ಲಾಭದಾಯಕವಾಗಿ ಪೂರೈಸುವ ಧೈರ್ಯ, ಆತ್ಮವಿಶ್ವಾಸ ಮುಂತಾದ ಸಾಮರ್ಥ್ಯಗಳಿಲ್ಲ.

ಹೀಗಾಗಿ ಸದ್ಯದ ಶಿಕ್ಷಣ ಎಲ್ಲ ವರ್ಗದ ಜನರಿಗೂ ನಿರುಪಯೋಗಿ ಅಲ್ಲದೇ ಅಪಾಯಕಾರಿಯೂ ಆಗಿದೆ.

ಆಶಾಕಿರಣ

ಮಾನವನಲ್ಲಿ ದೈವ-ದೆವ್ವಗಳೆರಡೂ ಇವೆ. ಈವರೆಗಿನ ದೋಷಪೂರಿತ ಶಿಕ್ಷಣದಿಂದಾಗಿ ಈಗಿನ ನಾಯಕಗಣ ಭ್ರಷ್ಟವಾಗಿದೆ ; ಭ್ರಷ್ಟಜೀವನ ವಿಧಾನವೇ ಯುವಕರಿಗೆ ಅನುಕರಣೀಯ. ಆದರೆ ಈ ಪರಿಸ್ಥಿತಿ ಬಹುಕಾಲ ಮುಂದುವರಿಯದು. ಈ ಭ್ರಷ್ಟಜೀವನದ ಅಪಾಯಕಾರಿ ಪರಿಣಾಮಗಳು ಕಾಣತೊಡಗುವವು. ಈ ಜೀವನದಿಂದ ಲಾಭ ಪಡೆದ ಜನರಲ್ಲಿ ಹಲವರು ತಮ್ಮ ಭ್ರಷ್ಟ, ಹೊಸ ಜೀವನದಿಂದ ಬೇಸರಿಸುವರು. ಅವರ ಸದಸದ್ವಿವೇಕ, ಅವರ ಅಂತರಾತ್ಮಗಳು ಜಾಗ್ರತವಾಗುವವು. ಮಾನಸಿಕ ಶಾಂತಿ ನೆಮ್ಮದಿಗಾಗಿ ಪರಿತಪಿಸಿ ಪರಿಹಾರ ಮಾರ್ಗ ಹುಡುಕುವುದು.

ಶೋಷಿತ ಸಾಮಾನ್ಯ ಜನರೂ ಅನ್ಯಾಯಗಳಿಗೆ ಬೇಸತ್ತು, ಎಚ್ಚೆತ್ತು ಬದಲಾವಣೆಗಾಗಿ ಬಂಡೇಳುವುದು. ಅಧಿಕಾರ ವಿಕೇಂದ್ರೀಕರಣದ ಪರಿಣಾಮವಾಗಿ ಅಸ್ತಿತ್ವದಲ್ಲಿ ಬಂದಿರುವ ಪಂಚಾಯತಿ ರಾಜ್ಯಗಳು ಹಳ್ಳಿಹಳ್ಳಿಗಳಲ್ಲಿ ಜಾಗೃತವಾಗಿ ತಮ್ಮ ಉದ್ಧಾರ ಮಾರ್ಗ ಕಂಡು ಕೊಳ್ಳಲು ಶ್ರಮಿಸುವವು. ಇಂತಹ ಅಲ್ಲೋಲ ಕಲ್ಲೋಲ ಸ್ಥಿತಿಯನ್ನು ಸುಧಾರಿಸಲು, ಲೋಕ ನಾಯಕ ಜಯಪ್ರಕಾಶ ನಾರಾಯಣರಂತಹ ಮಾರ್ಗದರ್ಶಕರು ಹುಟ್ಟಿಕೊಳ್ಳುವರು. ಹೀಗೆ ಭಗವದ್ಗೀತೆಯಲ್ಲಿ ಕೃಷ್ಣಪರಮಾತ್ಮನ ಸಂದೇಶದಂತೆ ದೈವೀಶಕ್ತಿಗಳ ಅವತಾರವಾಗುವದು.

ಎರಡು ಬಗೆಯ ಕಾರ್ಯ

ಗಾಂಧೀಜಿ ಶಿಕ್ಷಣಪ್ರಣಾಲಿಯು ಎರಡು ಬಗೆಯ ಕಾರ್ಯಮಾಡುವುದು. ಒಂದು: ಶೋಷಿತರಲ್ಲಿ ತಮ್ಮನ್ನು ಶೋಷಕರಿಂದ ತಾವೇ ರಕ್ಷಿಸಿಕೊಳ್ಳುವ ಸಾಮರ್ಥ್ಯ ಹುಟ್ಟಿಸುವುದು. ಎರಡು: ಶೋಷಕರಲ್ಲಿ ಶೋಷಕಪ್ರವೃತ್ತಿಯನ್ನು ಹೋಗಲಾಡಿಸುವುದು.

ಶೋಷಿತರು ತಮ್ಮಲ್ಲಿ ಹುದುಗಿರುವ ದೇಹ, ಬುದ್ಧಿ ಮತ್ತು ಭಾವನೆ(ಆತ್ಮ)ಗಳ ಅನಂತಶಕ್ತಿಗಳನ್ನು ಅರಿತು, ಉದ್ದೀಪಿಸಿಕೊಂಡು ತಮ್ಮ ಉದ್ಧಾರದ ಮಾರ್ಗವನ್ನು ತಾವೇ ಕಂಡುಹಿಡಿಯುವ ಸಾಮರ್ಥ್ಯ ಪಡೆಯುವರು.

ಆದರ್ಶಜೀವನವನ್ನು ಶಾಲೆಯಲ್ಲಿ ಜೀವಿಸುವ ಮೂಲಕ ಪರಸ್ಪರ ಪ್ರೇಮ, ಆದರ, ಗೌರವ, ಸಾಮಾಜಿಕ ಕಳಕಳಿ, ಸಮಾನತೆ, ನ್ಯಾಯ, ಅಶೋಷಣೆ, ದೀನದುಃಖಿತರ ಬಗೆಗೆ ಅನುಕಂಪ, ಸಹಾಯಹಸ್ತ ಮುಂತಾದ ಆದರ್ಶ ಜೀವನಮೌಲ್ಯಗಳ ಭದ್ರಬುನಾದಿ ಹಾಕಿ, ಅವರು ಶೋಷಕರಾಗುವ ಪ್ರವೃತ್ತಿಯಿಂದ ವಿಮುಖರಾಗುವಂತೆ ಮಾಡುವುದು. ಸರಳ ಸಹಜೀವನ, ಸ್ವಂತ ದುಡಿಮೆ, ಅಶೋಷಣೆ, ಮಾನವೀಯ ಸಂಬಂಧಗಳಲ್ಲಿ ಸಮಾನತೆ, ನ್ಯಾಯ ಪ್ರೇಮಗಳಿಗಾಗಿ ಹಂಬಲಿಸಿ ಸುಸಂಪನ್ನ ಸಾಮಾಜಿಕರಾಗುವಂತೆ ಮಾಡುವುದು; ಎಲ್ಲೆಡೆಯಲ್ಲಿಯೂ ಶಾಂತಿ ಲಭಿಸುವುದು.

ಇದು ಗಾಂಧೀಜಿ ಜೀವನಶಿಕ್ಷಣದ ಹಿರಿಮೆ. ಆದುದರಿಂದಲೇ ಡಾ. ಪ.ಈ. ಮಾರ್ಗನ್ ಈ ಶಿಕ್ಷಣವು ಶಿಕ್ಷಣಪ್ರಪಂಚಕ್ಕೆ ಗಾಂಧೀಜಿ ಕೊಟ್ಟ ಅತ್ಯಂತ ಶ್ರೇಷ್ಠಕೊಡುಗೆ ಎಂದಿದ್ದಾರೆ.

○

ಪ್ರಾಚೀನ ಶಿಕ್ಷಣಪದ್ಧತಿಯ ಗುಣ, ಮೌಲ್ಯಗಳು

ಪ್ರೊ. ಎ. ಎಸ್. ನಂಜುಂಡ ಸ್ವಾಮಿ

ವಿಶ್ವದ ಸಾಹಿತ್ಯ, ಸಂಸ್ಕೃತಿ, ಕಲೆ, ವಿಜ್ಞಾನ, ತತ್ವಜ್ಞಾನ ಮುಂತಾದವುಗಳಿಗೆ ಅಪಾರ ಕೊಡುಗೆ ನೀಡಿರುವ ಭಾರತವು ಪಾಶ್ಚಾತ್ಯ ದೇಶಗಳಲ್ಲಿ ನಾಗರಿಕತೆಯ ಗಾಳಿ ಬೀಸಲು ಆರಂಭಿಸಿದ ಎಷ್ಟೋ ಶತಮಾನಗಳ ಮುಂಚೆಯೇ ತನ್ನದೇ ಆದ ಶಿಕ್ಷಣಪದ್ಧತಿಯನ್ನು ರೂಪಿಸಿದ್ದಿತು. ಸಮಾಜದ ಎಲ್ಲ ಬೇನೆಗಳಿಗೂ ಶಿಕ್ಷಣವೇ ಸಂಜೀವಿನಿ ಎಂಬ ರಹಸ್ಯವನ್ನು ಅಂದಿನ ಬುದ್ಧಿಜೀವಿಗಳು ಅರಿತಿದ್ದರು. 'ವಿದ್ಯಾವಿಹೀನ ಪಶುಃ' ಎಂಬ ಮಾತು ಅಂದಿನ ನಾಣ್ನುಡಿಯಾಗಿದ್ದಿತು. ಅಂದಿನ ಯುಗದ ಆದರ್ಶಗಳಿಗನುಗುಣವಾಗಿ ಪ್ರಾಚೀನ ಶಿಕ್ಷಣ ಪದ್ಧತಿ ಆಕಾರ ಪಡೆಯಿತು.

ಭಾರತದ ಪ್ರಾಚೀನ ಶಿಕ್ಷಣ ಪದ್ಧತಿಯನ್ನು ಬ್ರಾಹ್ಮಣ ಅಥವಾ ವೈದಿಕ ಶಿಕ್ಷಣ ಪದ್ಧತಿ ಎಂಬುದಾಗಿ ಕರೆಯುವ ವಾಡಿಕೆಯೂ ಉಂಟು. ವೇದ ಪಾರಂಗತರಾಗಿದ್ದ ಬ್ರಾಹ್ಮಣರು ವೇದ, ಉಪನಿಷತ್ತುಗಳ ತತ್ವಗಳ ಬುನಾದಿಯ ಮೇಲೆ ಶಿಕ್ಷಣದ ಸೌಧವನ್ನು ನಿರ್ಮಿಸಿದುದು ಆ ಹೆಸರು ಬರಲು ಕಾರಣವಿರಬಹುದು. ಮುಂದೆ ಕೆಲವು ಕಾಲ ಬೌದ್ಧಮತೀಯರ ಪ್ರಾಬಲ್ಯದ ಪರಿಣಾಮವಾಗಿ, ವೇದ, ಯಜ್ಞಗಳು ಹಿನ್ನೆಲೆಗೆ ಸರಿದು ಬೌದ್ಧವಿಹಾರ ಅಥವಾ ಮಠಗಳು ಶಿಕ್ಷಣಕ್ಕೆ ಕೇಂದ್ರಸ್ಥಾನವೆನಿಸಿದಾಗ್ಯೂ ಬೌದ್ಧಮತೀಯರ ಶಿಕ್ಷಣಪದ್ಧತಿಯನ್ನು ವೈದಿಕಶಿಕ್ಷಣದ ಮತ್ತೊಂದು ಘಟ್ಟವೆಂಬುದಾಗಿ ಪರಿಗಣಿಸಲಾಗಿದೆ. ಒಟ್ಟಾರೆ, ಕ್ರಿ.ಶ. 8ನೇ ಶತಮಾನದಲ್ಲಿ ಮುಸಲ್ಮಾನರ ದಾಳಿ ಪ್ರಾರಂಭವಾಗುವವರೆಗೆ ಅಸ್ತಿತ್ವದಲ್ಲಿದ್ದ ಶಿಕ್ಷಣ ಪದ್ಧತಿಯನ್ನು ಪ್ರಾಚೀನ ಶಿಕ್ಷಣ ಪದ್ಧತಿ ಎನ್ನಬಹುದು.

ಶಿಕ್ಷಣವೆಂಬುದು ನಿಂತ ನೀರಲ್ಲ; ಅದು ಸದಾ ಹರಿಯ ಬೇಕಾದ ಜೀವನದಿ. ಪ್ರತಿಯೊಂದು ಯುಗದ ಆದರ್ಶಗಳು ಮತ್ತು ಅವಶ್ಯಕತೆಗಳನ್ನು ಶಿಕ್ಷಣಪದ್ಧತಿ ಪ್ರತಿಬಿಂಬಿಸಬೇಕು. ಈ ವೈಶಿಷ್ಟ್ಯವನ್ನು ಭಾರತೀಯ ಶಿಕ್ಷಣಪದ್ಧತಿಯ ಇತಿಹಾಸದಲ್ಲೂ ನೋಡಬಹುದಾಗಿದೆ.

ಇಪ್ಪತ್ತನೆಯ ಶತಮಾನದ ಶ್ರೇಷ್ಠ ವೈಚಾರಿಕರಲ್ಲೊಬ್ಬರಾಗಿದ್ದ ಜಿಡ್ಡು ಕೃಷ್ಣಮೂರ್ತಿಯವರು ಆಧುನಿಕ ಶಿಕ್ಷಣ ಪದ್ಧತಿಯ ಬಗ್ಗೆ ಒಮ್ಮೆ ಪ್ರಸ್ತಾಪಿಸಿ, ಅದು ಜೀವಿತದ ಮಹತ್ವದೊಂದಿಗೆ ಸಂಪರ್ಕ ಹೊಂದಿಲ್ಲವೆಂದು ವಿಷಾದಿಸಿದರು. ನಮ್ಮ ಪ್ರಾಚೀನ ಶಿಕ್ಷಣವು ಈ ಆಕ್ಷೇಪಣೆಗೆ ಹೊರತಾಗಿದ್ದಿತು. ಅದರ ಅಧ್ವರ್ಯುಗಳಾಗಿದ್ದ ಋಷಿಪುಂಗವರು ಬ್ರಹ್ಮಜ್ಞಾನಿಗಳಾಗಿದ್ದುದರಿಂದ ಅವರು ಮಾನವನ ಜೀವಿತೋದ್ದೇಶವನ್ನು ಸ್ಪಷ್ಟವಾಗಿ ಗ್ರಹಿಸಿದ್ದರು. ಕೇವಲ ಐಹಿಕ ಭೋಗ-ಭಾಗ್ಯಗಳನ್ನು ಸವಿಯುವುದು ಅವರಿಗೆ ಸರಿಬೀಳಲಿಲ್ಲ. ಇಹಪರಗಳೆರಡರ ಸಾಧನೆ ಅವರ ಹೊಂಗನಸಾಗಿದ್ದಿತು. ಸತ್ಯಾನ್ವೇಷಣೆಯ ಮೂಲಕ ಜೀವನದ ರಹಸ್ಯವನ್ನು ತಿಳಿದುಕೊಳ್ಳುವುದು ಮತ್ತು ಸಾವಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ನಮ್ಮ ಪ್ರಾಚೀನ ಚಿಂತನಶೀಲರ ಜೀವಿತದ ಗುರಿಯಾಗಿದ್ದಿತು.

ಈ ಉದ್ದೇಶವನ್ನು ಈಡೇರಿಸಬೇಕಾದರೆ ಶಿಕ್ಷಣಕ್ಕೆ ಮೊರೆಹೋಗಬೇಕೆಂದು ಅವರು ಭಾವಿಸಿದ್ದರು. ವ್ಯಕ್ತಿಯ ಆತ್ಮೋದ್ಧಾರಕ್ಕೆ ಶಿಕ್ಷಣ ಸಾಧನವಾಯಿತು.

ಗೀತಾಚಾರ್ಯ ಶ್ರೀಕೃಷ್ಣನಂತೂ 'ನಹಿ ಜ್ಞಾನೇನ ಸದೃಶಂ' ಎಂಬುದಾಗಿ ಘೋಷಿಸಿದನು. 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂಬ ಕಿವಿಮಾತನ್ನು ಸಹ ಭಗವಂತನು ಆಡಿದ್ದಾನೆ. ಜ್ಞಾನಪಿಪಾಸುಗೆ ಶ್ರದ್ಧಾಸಕ್ತಿಗಳು ಇರಬೇಕೆಂದು ಆತನು ಸ್ಪಷ್ಟಪಡಿಸಿದ್ದಾನೆ. ಜ್ಞಾನಾಕಾಂಕ್ಷಿಯು 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವೆಯಾ' ಎಂಬಂತೆ ನಮಸ್ಕಾರ, ಪ್ರಶ್ನೆ ಮತ್ತು ಶುಶ್ರೂಷೆಯ ಮೂಲಕ ಗುರುವನ್ನು ಒಲಿಸಿಕೊಳ್ಳಬೇಕೆಂಬ ಉಪಾಯವನ್ನು ಭಗವದ್ಗೀತೆಯಲ್ಲಿ ಸೂಚಿಸಲಾಗಿದೆ. ಅಜ್ಞಾನವೆಂಬ ಅಂಧಕಾರವನ್ನು ತೊಲಗಿಸಿ ಜ್ಞಾನವೆಂಬ ಬೆಳಕನ್ನು ಪಡೆಯುವುದು ಪ್ರಾಚೀನ ಭಾರತೀಯ ಶಿಕ್ಷಣಪದ್ಧತಿಯ ಆದರ್ಶವಾಗಿದ್ದಿತು.

ಆತ್ಮಘಾತುಕವಾದ ಮಾನಸಿಕ ಚಟುವಟಿಕೆಗಳಿಗೆ ಕಡಿವಾಣ ಹಾಕುವುದಕ್ಕಾಗಿ ಯೋಗಾಭ್ಯಾಸಕ್ಕೆ ಆದ್ಯತೆ ಕೊಡಲಾಯಿತು. ಯೋಗವೆಂದರೆ 'ಚಿತ್ತವೃತ್ತಿ ನಿರೋಧ'. ಮಂಗನಂತೆ ವರ್ತಿಸುವ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ಇಂದ್ರಿಯಗಳನ್ನು ನಿಗ್ರಹಿಸಿ, ಜಪತಪಗಳ ಮೂಲಕ ಮೋಕ್ಷಸಾಧನೆ ಮಾಡುವುದು ಜೀವನದ ಅಂತಿಮಗುರಿ ಎಂಬುದಾಗಿ ಪ್ರಾಚೀನ ಭಾರತೀಯರು ದೃಢವಾಗಿ ನಂಬಿದ್ದುದರಿಂದ, ಧಾರ್ಮಿಕ ಪ್ರವೃತ್ತಿಯು ಅಂದಿನ ಶಿಕ್ಷಣಕ್ಷೇತ್ರವನ್ನೂ ಪ್ರವೇಶಿಸಿತು.

ವಿದ್ಯಾರ್ಥಿಗಳ ಚಾರಿತ್ರ್ಯ (ಶೀಲ)ದ ಬೆಳವಣಿಗೆ, ಸಾಂಸ್ಕೃತಿಕ ಪರಂಪರೆ ಮತ್ತು ಗ್ರಂಥ ಸಂಪತ್ತುಗಳ ರಕ್ಷಣೆ - ಇವೆಲ್ಲವೂ ಶಿಕ್ಷಣದ ಧ್ಯೇಯಗಳಾಗಿದ್ದವು.

ಗುರು-ಶಿಷ್ಯರ ನಿಕಟಸಂಪರ್ಕವು ಪ್ರಾಚೀನ ಶಿಕ್ಷಣಪದ್ಧತಿಯ ವೈಶಿಷ್ಟ್ಯಗಳಲ್ಲೊಂದಾಗಿದ್ದಿತು. ಉಪನಿಷತ್ತುಗಳಲ್ಲಿ ಬರುವ ಶಾಂತಿಮಂತ್ರವು - ಸಹನಾವವತು। ಸಹನೌ ಭುನಕ್ತು। ಸಹ ವೀರ್ಯಂಕರವಾವಹೈ। ತೇಜಸ್ವಿನಾ ವಧೀತಮಸ್ತು। ಮಾವಿದ್ವಿಷಾವಹೈ। ಓಂ ಶಾಂತಿಃ ಶಾಂತಿಃ ಶಾಂತಿಃ - ತುಂಬಾ ಅರ್ಥಗರ್ಭಿತವಾಗಿದೆ.

"ಪರಬ್ರಹ್ಮನು (ಗುರುಶಿಷ್ಯರಾದ) ನಮ್ಮಿಬ್ಬರನ್ನು ಜೊತೆಯಲ್ಲಿ ರಕ್ಷಿಸಲಿ; ನಮ್ಮೀರ್ವರನ್ನು ಜೊತೆಯಲ್ಲಿ ಪೋಷಿಸಲಿ. ಈ ಅಧ್ಯಯನದ ಪರಿಣಾಮವಾಗಿ ನಾವಿಬ್ಬರೂ ಒಟ್ಟಿಗೆ ಸಾಮರ್ಥ್ಯವನ್ನು ಪಡೆಯೋಣ. ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ. ನಾವು ಪರಸ್ಪರ ದ್ವೇಷಿಸದಿರೋಣ" - ಇಂತಹ ಉದಾತ್ತಆದರ್ಶವನ್ನು ಗುರುಶಿಷ್ಯರು ಹೊಂದಿದ್ದರು.

ಗುರು ದೇವರ ಸಮಾನನೆಂಬ ಭಾವನೆ ಶಿಷ್ಯನಲ್ಲಿದ್ದಿತೆಂಬುದಕ್ಕೆ ಕೆಳಗಿನ ಶ್ಲೋಕ ನಿದರ್ಶನವಾಗಿದೆ :

ಗುರುಬ್ರಹ್ಮಾ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರಃ ।
ಗುರುಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀಗುರುವೇ ನಮಃ ॥

ಗುರುಶಿಷ್ಯರ ನಡುವೆ ಅನ್ಯೋನ್ಯತೆ ಇದ್ದಿತು; ಸಾಮರಸ್ಯವಿದ್ದಿತು. ಶಿಷ್ಯವಾತ್ಸಲ್ಯವು ಗುರುವಿನ ಹೆಗ್ಗಳಿಕೆಯಾಗಿದ್ದಿತು. ಧನಾರ್ಜನೆಯ ಮೋಹದಿಂದ ಮುಕ್ತರಾಗಿದ್ದ ಅಂದಿನ ಗುರುಕುಲದ ಶಿಕ್ಷಕರು ಬೋಧನಾಪ್ರೇಮಕ್ಕೆ ಮಣಿದಿದ್ದರು.

ವಿದ್ಯಾರ್ಜನೆಗಾಗಿ ಬರುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಮಿತಿಮೀರುತ್ತಿರಲಿಲ್ಲವಾಗಿ, ವೈಯಕ್ತಿಕ ಗಮನಕ್ಕೆ ಸಾಕಷ್ಟು ಅವಕಾಶವಿದ್ದಿತು. ಶಿಷ್ಯರ ಆಲೋಚನಾ ಸ್ವಾತಂತ್ರ್ಯಕ್ಕೆ ಯಾವ

ಅವಕಾಶವೂ ಇರಲಿಲ್ಲ. ಮೊದಲು ಬ್ರಾಹ್ಮಣರಿಗಾಗಿ ಪ್ರಾರಂಭವಾದ ವೈದಿಕಶಿಕ್ಷಣವು ಮುಂದೆ ಕ್ಷತ್ರಿಯ, ವೈಶ್ಯರಿಗೂ ತನ್ನ ಬಾಗಿಲನ್ನು ತೆರೆಯಿತು. ಸಂಧ್ಯಾವಂದನೆ, ಜಪ ಇತ್ಯಾದಿ ಧಾರ್ಮಿಕ ಚಟುವಟಿಕೆಗಳು ಈ ಮೂರು ವರ್ಣದವರಿಗೂ ಸಾಮಾನ್ಯ ವಾಗಿದ್ದುದರಿಂದ ಉಪನಯನವೆಂಬ ಧಾರ್ಮಿಕ ಸಮಾರಂಭದಿಂದ ಗುರುಕುಲದಲ್ಲಿ ಪಡೆಯುವ ಉನ್ನತ ಶಿಕ್ಷಣ ಪ್ರಾರಂಭವಾಗುತ್ತಿದ್ದಿತು.

ವಿದ್ಯಾರ್ಥಿಯು ಶಿಸ್ತು, ಸಂಯಮ ಮತ್ತು ಪಾವಿತ್ರ್ಯಗಳಿಂದ ಕೂಡಿದ್ದ ಬ್ರಹ್ಮಚರ್ಯೆಯನ್ನು ಪಾಲಿಸಬೇಕಾಗಿದ್ದಿತು.

ಪಾಶ್ಚಾತ್ಯ ಶಿಕ್ಷಣತಜ್ಞನಾದ ಫ್ರೊಬೆಲ್ ಪ್ರತಿಪಾದಿಸಿರುವ ಸಂಯಮ, ಸ್ವಯಂ-ಪ್ರೇರಿತ ಚಟುವಟಿಕೆಯಂತಹ ತತ್ವಗಳು ನಮ್ಮ ಪ್ರಾಚೀನ ಶಿಕ್ಷಣ ಪದ್ಧತಿಗೆ ಅಪರಿಚಿತವಾಗಿರಲಿಲ್ಲ. ಹಿರಿಯ ವಿದ್ಯಾರ್ಥಿಗಳಿಂದ ಕಿರಿಯ ವಿದ್ಯಾರ್ಥಿಗಳಿಗೆ ಬೋಧನೆಯನ್ನೇರ್ಪಡಿಸುವ 'ಹಿರಿಯ ಮಣಿಯ ಪದ್ಧತಿ'ಯ ಬಗೆಗೂ ಇದೇ ಮಾತನ್ನು ಹೇಳಬಹುದು.

ಕಾಯಕದ ಮೂಲಕ ಕಲಿಕೆ ಎಂಬ ಆಧುನಿಕ ಪರಿಕಲ್ಪನೆ ಭಾರತದ ಪ್ರಾಚೀನ ಶಿಕ್ಷಣಪದ್ಧತಿಗೆ ಪರಿಚಿತವಾಗಿದ್ದಿತು. ಗೋ ಸೇವೆಯ ಮೂಲಕ ಪಶು-ಸಂಗೋಪನ, ಬೇಸಾಯ, ಕ್ಷೀರ ಕೈಗಾರಿಕೆ ಮೊದಲಾದವುಗಳಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತ ತರಬೇತಿ ಸಿಗುತ್ತಿದ್ದಿತು. ಆಲಸಿಕೆಗೆ ಅವಕಾಶವಿರಲಿಲ್ಲವಾಗಿ ಅಶಿಸ್ತಿನ ಸಮಸ್ಯೆ ಗುರುವನ್ನು ಕಾಡುತ್ತಿರಲಿಲ್ಲ.

ಶಿಷ್ಯರು ಗುರು ಶುಶ್ರೂಷೆ ಮಾಡುತ್ತಿದ್ದುದಲ್ಲದೆ, ಪ್ರಾಯಶಃ ಕೆಲವೆಡೆ, ಕೆಲವೊಮ್ಮೆ ಭಿಕ್ಷಾನ್ನವನ್ನು ಸಂಗ್ರಹಿಸಬೇಕಾಗುತ್ತಿದ್ದಿತು. ಭಿಕ್ಷಾಟನೆಯಿಂದ ಅಹಂಕಾರ ತೊಲಗಿ ವಿನಯ, ತ್ಯಾಗಗಳು ತಲೆದೋರುತ್ತಿದ್ದವು. 'ವಿದ್ಯಾದದಾತಿ ವಿನಯಂ' ಎಂಬ ಉಕ್ತಿಯಂತೆ ವಿದ್ಯಾವಂತನಲ್ಲಿ ವಿನಯವಿರಬೇಕೆಂಬ ತತ್ವಕ್ಕೆ ತುಂಬ ಪುರಸ್ಕಾರವಿದ್ದಿತು.

ಅಂದಿನ ಶಿಕ್ಷಣಪದ್ಧತಿಯಲ್ಲಿ ಶ್ರವಣ, ಮನನ, ನಿಧಿಧ್ಯಾಸನಗಳೆಂಬ ಮೂರು ಹಂತಗಳಿದ್ದುದರಿಂದ ವಿದ್ಯಾರ್ಥಿಗಳು ಪಾಠ, ಪ್ರವಚನಗಳನ್ನು ಬಹಳ ಎಚ್ಚರಿಕೆಯಿಂದ ಕೇಳಿ, ಅವುಗಳ ಅರ್ಥವನ್ನು ಗ್ರಹಿಸಬೇಕಾಗಿದ್ದಿತು. ಸಂದೇಹ ನಿವಾರಣೆಗಾಗಿ ಗುರುಗಳೊಂದಿಗೆ ಚರ್ಚೆಯಲ್ಲಿ ಭಾಗವಹಿಸಬೇಕಾಗಿದ್ದಿತು. ವೇದವನ್ನು ಕಿವಿಯಿಂದ ಕೇಳಿ, ಅರ್ಥಮಾಡಿಕೊಂಡು, ಅನಂತರ ಅದನ್ನು ಕುರಿತು ಧ್ಯಾನಮಾಡಬೇಕಾಗಿದ್ದಿತು.

ವೇದಗಳ ಅರ್ಥಗ್ರಹಣಕ್ಕಾಗಿ ವ್ಯಾಕರಣ ಶಾಸ್ತ್ರವು ಜನ್ಮತಾಳಿತು. ಋಗ್ವೇದ ಶಿಕ್ಷಣಪದ್ಧತಿಯ ಕಾಲದಲ್ಲಿ ಸಂಸ್ಕೃತವು ಸಾಹಿತ್ಯಭಾಷೆಯಾಗಿ ಬೆಳೆಯಿತು. ಕೆಳಜಾತಿಯ ಮಕ್ಕಳಿಗೆ ವೈದಿಕಶಿಕ್ಷಣ ದೊರೆಯದೆ ಹೋದಾಗ್ಯೂ, ಅವರ ಆರ್ಥಿಕ ಜೀವನದ ಅಭಿವೃದ್ಧಿಗಾಗಿ ಸ್ವಲ್ಪಮಟ್ಟಿಗೆ ಲೌಕಿಕಶಿಕ್ಷಣ ದೊರೆಯುತ್ತಿದ್ದಿತು ಎಂಬುದಕ್ಕೆ ಬಡಗಿ(ತಕ್ಷ), ವೈದ್ಯ (ಭಿಷಗ್) ಮೊದಲಾದ ವೃತ್ತಿಬಾಂಧವರ ಬಗ್ಗೆ ಬಂದಿರುವ ಪ್ರಸ್ತಾಪಗಳು ನಿದರ್ಶನವಾಗಿವೆ.

ಅಂದಿನ ಕಾಲದಲ್ಲೂ ಸಂಗೀತಶಾಸ್ತ್ರಕ್ಕೆ ಮನ್ನಣೆ ಇತ್ತೆಂಬುದಕ್ಕೆ ಸಾಮವೇದವು ದೃಷ್ಟಾಂತವಾಗಿದೆ. ಅದನ್ನು ಬಾಯಿಯ ಮೂಲಕವೂ, ವಾದ್ಯದ ಮೂಲಕವೂ

ಬೋಧಿಸುತ್ತಿದ್ದರು. ಅಥರ್ವವೇದದ ಮೂಲಕ ವೈದ್ಯವಿಜ್ಞಾನ, ಮಾಟಮಂತ್ರಗಳನ್ನು ಕಲಿಯಬಹುದಾಗಿದ್ದಿತು. ವೇದಮಂತ್ರಗಳ ಉಚ್ಚಾರಣೆಗೆ ವಿಶೇಷ ಗಮನವನ್ನು ಕೊಟ್ಟಿದ್ದರು.

ಸ್ತ್ರೀಯರು ವೇದಾಧ್ಯಯನ ಮಾಡಲು ಅವಕಾಶವಿದ್ದಿತೆಂಬುದಕ್ಕೆ ಚತುರ್ವೇದಗಳಲ್ಲೂ ಉಲ್ಲೇಖಗಳಿವೆ. ಬ್ರಹ್ಮವಾದಿನಿ, ಋಷಿಕಾ ಮುಂತಾದ ಹೆಸರುಗಳು ವೇದಾಧ್ಯಯನ ಮಾಡಿದ ಮಹಿಳೆಯರಿಗೆ ಅನ್ವಯಿಸುತ್ತಿದ್ದವು. ಮನುಧರ್ಮಶಾಸ್ತ್ರ ಪ್ರಕಟವಾದ ಮೇಲೆ ಈ ಸೌಲಭ್ಯ ನಿಂತುಹೋಯಿತೆನ್ನಬಹುದು.

ಉಪನಿಷತ್ತುಗಳ ಯುಗದಲ್ಲಿ ಭಾರತೀಯ ಶಿಕ್ಷಣಪದ್ಧತಿ ಉನ್ನತಮಟ್ಟವನ್ನು ಮುಟ್ಟಿತು. ಶಾಖೆಗಳು, ಚರಣಗಳು ಮತ್ತು ಪರಿಷತ್ತುಗಳು ಎಂಬ ಮೂರು ಬಗೆಯ ಶಿಕ್ಷಣಸಂಸ್ಥೆಗಳು ಆಗ ಅಸ್ತಿತ್ವಕ್ಕೆ ಬಂದವು.

ವೈದಿಕಶಿಕ್ಷಣ ಶಾಲೆಗಳು ವಿದ್ಯಾದಾನದ ಜೊತೆಗೆ ಧರ್ಮಶಾಸ್ತ್ರದ ಸೂತ್ರಗಳನ್ನು ರೂಪಿಸುವುದರಲ್ಲೂ ನಿರತವಾಗಿದ್ದವು. ಬ್ರಹ್ಮವರ್ಚಸ್ಸನ್ನು ಸಂಪಾದಿಸಲು ಶಿಕ್ಷಣವು ಸಾಧನವೆಂದು ಭಾವಿಸಲಾಗಿದ್ದಿತು. ಪವಿತ್ರಗ್ರಂಥಗಳ ವ್ಯಾಸಂಗ ಅಥವಾ ಸ್ವಾಧ್ಯಾಯಕ್ಕೆ ಆದ್ಯತೆ ಸಿಕ್ಕಿತು.

ಉನ್ನತಶಿಕ್ಷಣದ ಅವಧಿ ಸಾಮಾನ್ಯವಾಗಿ ಹನ್ನೆರಡು ವರ್ಷಗಳಾಗಿದ್ದವು. ವಿದ್ಯಾರ್ಥಿದೆಸೆ ಅಂತ್ಯಗೊಂಡಾಗ ಗುರುವು ಶಿಷ್ಯರಿಗೆ ಕೊಡುತ್ತಿದ್ದ ಹಿತವಚನ ಉಲ್ಲೇಖನಾರ್ಹವಾಗಿದೆ. ತೈತ್ತಿರೀಯೋಪನಿಷತ್‌ನಲ್ಲಿ ಹೀಗಿದೆ: "ಸತ್ಯಂವದ। ಧರ್ಮಂಚರ। ಸ್ವಾಧ್ಯಾಯಾನ್ಮಾ ಪ್ರಮದಃ। ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾವ್ಯವಚ್ಛೇತ್ಸೀಃ। ಸತ್ಯಾನ್ನ ಪ್ರಮದಿತವ್ಯಮ್। ಕುಶಲಾನ್ನಪ್ರಮದಿತವ್ಯಂ। ಭೂತ್ಯೈನ ಪ್ರಮದಿತವ್ಯಮ್। ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್। ದೇವಪಿತೃ ಕಾರ್ಯಾಭ್ಯಾಂ ನ ಪ್ರಮದಿತವ್ಯಮ್। ಮಾತೃ ದೇವೋಭವ। ಪಿತೃ ದೇವೋಭವ। ಆಚಾರ್ಯ ದೇವೋಭವ। ಅತಿಥಿ ದೇವೋಭವ।।

(ಸತ್ಯವನ್ನು ನುಡಿ; ಧರ್ಮವನ್ನು ಆಚರಿಸು; ಅಧ್ಯಯನದಲ್ಲಿ ಪ್ರಮಾದ ಸಲ್ಲದು; ಆಚಾರ್ಯನಿಗೆ ಇಷ್ಟವಾದ ಧನವನ್ನು ತಂದುಕೊಟ್ಟು, ಸಂತತಿಯನ್ನು ವಿಚ್ಛಿನ್ನಗೊಳಿಸದಿರು; ಸತ್ಯದಿಂದಾಗಲೀ ಧರ್ಮದಿಂದಾಗಲೀ ಕುಶಲದಿಂದಾಗಲೀ ಮಂಗಳಯುಕ್ತವಾದ ಕರ್ಮದಿಂದಾಗಲೀ ಸ್ವಾಧ್ಯಾಯ ಪ್ರವಚನಗಳಿಂದಾಗಲೀ ದೇವ ಪಿತೃಗಳ ಕಾರ್ಯದಿಂದಾಗಲೀ ಕದಲಕೂಡದು. ತಾಯಿಯೇ ನಿನಗೆ ದೇವರಾಗಿರಲಿ; ತಂದೆಯೇ ನಿನಗೆ ದೇವರಾಗಿರಲಿ; ಅತಿಥಿಯೇ ನಿನಗೆ ದೇವರಾಗಿರಲಿ).

ಗುರುವಿಗೂ ಕೆಲವು ಕಟ್ಟುಪಾಡುಗಳಿದ್ದವು. ಆತನು ಉಚ್ಚಮಟ್ಟದ ನೈತಿಕ ಮತ್ತು ಆಧ್ಯಾತ್ಮಿಕ ಅರ್ಹತೆಗಳನ್ನು ಹೊಂದಿರಬೇಕಾಗಿದ್ದಿತು. ಯೋಗ್ಯನಾದ ಶಿಷ್ಯನಿಗೆ ತನಗೆ ಗೊತ್ತಿರುವ ಸತ್ಯಸಂಗತಿಯನ್ನು ವಿರೂಪಗೊಳಿಸದೆ ಬೋಧಿಸಬೇಕಾಗಿದ್ದಿತು. ತನಗೆ ಯಾವುದಾದರೂ ವಿಷಯವನ್ನು ಬೋಧಿಸಲು ತಿಳಿಯದಿದ್ದಲ್ಲಿ, ಶಿಷ್ಯನನ್ನು ಯೋಗ್ಯನಾದ ಬೇರೆ ಗುರುವಿನ ಬಳಿಗೆ ಕಳುಹಿಸಿಕೊಡಬೇಕಾಗಿದ್ದಿತು.

ಪ್ರಾಚೀನ ಶಿಕ್ಷಣಪದ್ಧತಿಯಲ್ಲಿ ರೂಢಿಯಲ್ಲಿದ್ದ ಶಿಕ್ಷೆಯ ವಿಧಾನಗಳೆಂದರೆ ಬೆದರಿಕೆ, ಉಪವಾಸ, ತಣ್ಣೀರು ಸ್ನಾನ ಮತ್ತು ಗುರುವಿನ ಸಮ್ಮುಖದಿಂದ ವಿದ್ಯಾರ್ಥಿಯ ಉಚ್ಚಾಟನೆ. ಬೇರೆ ರೀತಿಯ ದೈಹಿಕದಂಡನೆ ಅಪರೂಪವಾಗಿದ್ದಿತು.

ವೈದಿಕಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳು ನೈತಿಕಶಿಸ್ತಿನ ದೃಷ್ಟಿಯಿಂದ ಮಧು, ಮಾಂಸ, ಸುಗಂಧದ್ರವ್ಯ, ಹೂಮಾಲೆ, ಹಗಲುನಿದ್ರೆ, ಕಾಡಿಗೆಯ ಲೇಪನ, ರಾಜಸ ಆಹಾರ ಮೊದಲಾದವುಗಳಿಂದ ದೂರವಿರಬೇಕಾಗಿದ್ದಿತು.

ಉಪನಿಷತ್ತುಗಳ ಕಾಲದಲ್ಲಿ ಬ್ರಾಹ್ಮಣರ ಜೊತೆಗೆ ಕ್ಷತ್ರಿಯ ಮತ್ತು ವೈಶ್ಯರಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವಿದ್ದಿತಾದಾಗ್ಯೂ, ಪಠ್ಯಕ್ರಮದಲ್ಲಿ ವ್ಯತ್ಯಾಸವಿದ್ದಿತು.

ಆಗಿನ ಕಾಲದ ಶೂದ್ರರಿಗೆ ನೃತ್ಯ, ಗಾಯನ, ಸುಗಂಧದ್ರವ್ಯಗಳ ತಯಾರಿಕೆ, ಬಣ್ಣಹಾಕುವುದು, ವಾದ್ಯ ಸಂಗೀತ ಇತ್ಯಾದಿ `ದೇವಜ್ಞ ವಿದ್ಯೆ'ಯನ್ನು ನೀಡಲಾಗುತ್ತಿದ್ದಿತೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

'ಚರಕ' ಎಂಬ ಅಲೆಮಾರಿ ಅಧ್ಯಾಪಕ ವರ್ಗವು ಉಪನಿಷತ್ತುಗಳ ಕಾಲದಲ್ಲಿತ್ತೆಂದು ಸಂಶೋಧನೆಗಳಿಂದ ತಿಳಿದುಬಂದಿದೆ.

ಸೂತ್ರಗಳ ಕಾಲದಲ್ಲಿ ವೈಜ್ಞಾನಿಕ ಅಧ್ಯಯನಕ್ಕೆ ಪ್ರೋತ್ಸಾಹ ಸಿಕ್ಕಿತು. ಯಜ್ಞ ಯಾಗಾದಿಗಳ ನಿಯಮಗಳ ಕಾರಣದಿಂದಾಗಿ ರೇಖಾಗಣಿತ, ಬೀಜಗಣಿತ, ಖಗೋಳಶಾಸ್ತ್ರ ಮತ್ತು ಜ್ಯೋತಿಷ್ಯಶಾಸ್ತ್ರಗಳು ಹುಟ್ಟಿದವು. ಭಾಷಾಶಾಸ್ತ್ರಗಳು ಹಾಗೂ ವಿವಿಧ ಬಗೆಯ ಧರ್ಮ ಶಾಸ್ತ್ರಗಳು ಅಸ್ತಿತ್ವಕ್ಕೆ ಬಂದವು.

ಮೊದಲ ಮೂರು ಜಾತಿಯವರಿಗೆ ಶಿಕ್ಷಣವು ಕಡ್ಡಾಯವಾಯಿತು. 'ವಿದ್ಯಾರಂಭ' ಎಂಬ ಧಾರ್ಮಿಕ ಸಮಾರಂಭದೊಂದಿಗೆ ಅಂದಿನ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಗುತ್ತಿದ್ದಿತು. ಶಾಲಾ ವರ್ಷವು ಉಪಕರ್ಮದಂದು-ಶ್ರಾವಣ ಮಾಸದಲ್ಲಿ- ಆರಂಭವಾಗುತ್ತಿದ್ದಿತು. ಮೌಖಿಕ ಬೋಧನೆಯ ಮೂಲಕ ಸ್ಮರಣಶಕ್ತಿಯ ಅಭಿವೃದ್ಧಿಗೆ ಗಮನ ಕೊಡಲಾಗುತ್ತಿದ್ದಿತು.

ಸೂತ್ರಗಳ ಕಾಲದಲ್ಲಿ ಸಂಭಾವನೆ ಪಡೆದು ಬೋಧಿಸುತ್ತಿದ್ದವರು ಉಪಾಧ್ಯಾಯ ರೆನಿಸಿದರು. ಸಂಭಾವನೆಯನ್ನು ಬದಿಗೊತ್ತಿ ಬೋಧಿಸುತ್ತಿದ್ದವರು ಆಚಾರ್ಯರೆನಿಸಿಕೊಂಡರು. ಆದರೆ ಅಧ್ಯಾಪನವು ಮುಕ್ತಾಯವಾದ ತರುವಾಯ ಅವರು ಗುರುದಕ್ಷಿಣೆಯನ್ನು ತೆಗೆದುಕೊಳ್ಳಬಹುದಾಗಿದ್ದಿತು. ಹನ್ನೆರಡು ವರ್ಷಗಳ ಉನ್ನತ ವಿದ್ಯಾಭ್ಯಾಸವು `ಸಮಾವರ್ತನ' ಎಂಬ ಆಚರಣೆಯೊಂದಿಗೆ ಮುಕ್ತಾಯಗೊಳ್ಳುತ್ತಿದ್ದಿತು.

ಕೌಟಿಲ್ಯನ 'ಅರ್ಥಶಾಸ್ತ್ರ'ದ ಪ್ರಕಾರ ವೇಶ್ಯೆಯರು, ಸ್ತ್ರೀ-ಗುಲಾಮರು ಮತ್ತು ನಟಿಯರಿಗೆ ಲೌಕಿಕವಿದ್ಯೆ ದೊರೆಯುತ್ತಿದ್ದಿತು.

ಕಾವ್ಯಗಳ ಕಾಲದಲ್ಲಿ ಶಿಕ್ಷಣಪದ್ಧತಿಯು ವೃತ್ತಿ ಇಲ್ಲವೆ ವ್ಯವಹಾರದ ಸ್ವರೂಪವನ್ನು ತಾಳಿತು. ಆಯಾ ವರ್ಣದ ವಿದ್ಯಾರ್ಥಿಗಳಿಗೆ ಅಗತ್ಯವಾದ ತರಬೇತಿ ಸಿಗುತ್ತಿದ್ದಿತು. ಆಯುರ್ವೇದ ಶಾಸ್ತ್ರದ ಅಧ್ಯಯನವನ್ನು ಎಲ್ಲಾ ಜಾತಿಯವರೂ ಮಾಡಬಹುದಾಗಿದ್ದಿತು. ಕಾಲಕ್ರಮೇಣ ಅರವತ್ತು ನಾಲ್ಕು ಕಲೆಗಳು ಅಸ್ತಿತ್ವಕ್ಕೆ ಬಂದವು.

ಬ್ರಾಹ್ಮಣ ಅಥವಾ ವೈದಿಕಶಿಕ್ಷಣದ ಪ್ರಮುಖ ಗುಣ-ದೋಷಗಳ ಸಾರಾಂಶವನ್ನು ಹೀಗೆ ತಿಳಿಸಬಹುದು:

ಮಾನವನ ಅಂತಿಮ ಗುರಿಯಾದ ಮೋಕ್ಷಸಾಧನೆಗೆ ಅದು ಮಾರ್ಗದರ್ಶನ ನೀಡುತ್ತಿದ್ದಿತು. ಮಾನವನ ಜೀವಿತವು 'ಸತ್ಯಂ, ಶಿವಂ, ಸುಂದರಂ' ಎಂಬವುಗಳ

ಸಂಕೇತವಾಗಿರಲು ಅದು ನೆರವಾಗುತ್ತಿದ್ದಿತು. ಪ್ರಾಚೀನ ಸಾಹಿತ್ಯದ ಸೃಷ್ಟಿಗೆ ಹಾಗೂ ರಕ್ಷಣೆಗೆ ವೈದಿಕ ಶಿಕ್ಷಣಪದ್ಧತಿ ಸಹಾಯ ಮಾಡಿತು. ಸಮಾಜದ ಐಹಿಕಪ್ರಗತಿಗೂ ಅದು ತನ್ನ ಕೊಡುಗೆಯನ್ನು ನೀಡಿತು.

ಆ ಪದ್ಧತಿಯಲ್ಲೂ ಕೆಲವು ದೋಷಗಳಿದ್ದವು. ಮತಧರ್ಮಕ್ಕೆ ಅದು ಹೆಚ್ಚು ಒತ್ತನ್ನು ಕೊಟ್ಟಿದ್ದುದರಿಂದ ಅನೇಕರು ಭೌತಿಕಪ್ರಗತಿಯನ್ನು ಅಲಕ್ಷಿಸಿದರು. ಪುರಾಣ ಮತ್ತು ಸ್ಮೃತಿಗಳು ಬೀರಿದ ಪ್ರಭಾವದಿಂದಾಗಿ ಅನೇಕರು ತಮ್ಮ ವಿವೇಚನಾ ಶಕ್ತಿಯನ್ನು ಕಳೆದುಕೊಂಡು ನಿರ್ವಿಚಾರವಾದಿಗಳಾದರು. ವೈದಿಕಶಿಕ್ಷಣ ಪಡೆದವರು ಕಲೆ, ಕೈಕಸುಬುಗಳ ಬಗ್ಗೆ ಮಲೆತಾಯಿ-ಧೋರಣೆ ಬೆಳೆಸಿಕೊಂಡರು.

ಶಿಕ್ಷಣದ ವಿವಿಧ ಶಾಖೆಗಳ ನಡುವೆ ಅಷ್ಟೇನೂ ಸಾಮರಸ್ಯವಿರಲಿಲ್ಲ. ವೇದಗಳ ಕಾಲಾನಂತರ ಸ್ತ್ರೀ ಶಿಕ್ಷಣ ಮೂಲೆಗೆ ತಳ್ಳಪಟ್ಟಿತು. ಸಮಾಜದ ಕೆಳವರ್ಗದ ಶಿಕ್ಷಣಕ್ಕೆ ಅದು ಸಹಕಾರಿಯಾಗಿರಲಿಲ್ಲ. ಜನ ಸಾಮಾನ್ಯರ ನಡುವೆ ಇಡೀ ದೇಶಕ್ಕೆ ಒಂದು ಸಂಪರ್ಕ ಭಾಷೆಯನ್ನು ಅದು ರೂಪಿಸಲಿಲ್ಲ.

ಬೌದ್ಧಮತೀಯರ ಶಿಕ್ಷಣಪದ್ಧತಿಯೂ ಭಾರತದ ಪ್ರಾಚೀನ ಶಿಕ್ಷಣಪದ್ಧತಿಯ ಒಂದು ಪಂತವೆಂದು ಪರಿಗಣಿಸಲ್ಪಟ್ಟಿರುವುದರಿಂದ ಅದನ್ನು ಕುರಿತು ನಾಲ್ಕು ಮಾತುಗಳನ್ನು ಈಗ ಆಡಿದರೆ ತಪ್ಪಾಗಲಾರದು.

ಬೌದ್ಧಮತೀಯರ ಶಿಕ್ಷಣಪದ್ಧತಿಯಲ್ಲಿ ಎಲ್ಲಾ ಜಾತಿಯವರಿಗೂ ಅವಕಾಶವಿದ್ದಿತು. ಬೌದ್ಧವಿಹಾರಗಳಲ್ಲಿ ಸ್ತ್ರೀಯರಿಗೂ ಪ್ರವೇಶವಿದ್ದಿತು.

ಎಂಟನೆಯ ವಯಸ್ಸಿನ ತರುವಾಯ ಬೌದ್ಧದೀಕ್ಷೆ ಸ್ವೀಕರಿಸುತ್ತಿದ್ದ ವಿದ್ಯಾರ್ಥಿಗಳು 'ಬುದ್ಧಂ ಶರಣಂ ಗಚ್ಛಾಮಿ', 'ಧರ್ಮಂ ಶರಣಂ ಗಚ್ಛಾಮಿ' ಮತ್ತು 'ಸಂಘಂ ಶರಣಂ ಗಚ್ಛಾಮಿ' ಎಂಬ ಮೂರು ಪ್ರಮಾಣವಚನಗಳನ್ನು ಸ್ವೀಕರಿಸುತ್ತಿದ್ದರು.

ಉಪಾಧ್ಯಾಯ ಮತ್ತು ಆಚಾರ್ಯ ಎಂಬ ಎರಡು ಬಗೆಯ ಶಿಕ್ಷಕರಿದ್ದ ಈ ಪದ್ಧತಿಯಲ್ಲಿ ಉಪಾಧ್ಯಾಯನು ಪವಿತ್ರಗ್ರಂಥಗಳನ್ನು, ತತ್ವಗಳನ್ನು ಬೋಧಿಸುತ್ತಿದ್ದನು. ಆಚಾರ್ಯನು ವಿದ್ಯಾರ್ಥಿಗಳ ನಡವಳಿಕೆಯ ಮೇಲೆ ನಿಗಾ ಇಟ್ಟಿದ್ದನು.

ಬೌದ್ಧಮತೀಯರ ಶಿಕ್ಷಣಪದ್ಧತಿಯಲ್ಲೂ ಸಹ ಶಿಷ್ಯನು ಗುರುವಿನ ಸೇವೆ ಮಾಡಬೇಕಾಗಿದ್ದಿತು. ಶಿಷ್ಯರಿಗೆ ಬೌದ್ಧಿಕ ಮತ್ತು ಆಧ್ಯಾತ್ಮಿಕ ನೆರವು ನೀಡುವ ಹೊಣೆ ಗುರುಗಳದಾಗಿದ್ದಿತು. ಶಿಷ್ಯನು ಅಸ್ವಸ್ಥನಾಗಿದ್ದರೆ, ಅವನ ಶುಶ್ರೂಷೆಯನ್ನು ಗುರುವು ಕೈಗೊಳ್ಳುತ್ತಿದ್ದನು.

ತತ್ತ್ವಶಾಸ್ತ್ರ, ವೈದ್ಯಶಾಸ್ತ್ರ ಮತ್ತು ತರ್ಕಶಾಸ್ತ್ರಗಳು ಬೌದ್ಧರ ಶಾಲೆಯಲ್ಲಿ ಗಣ್ಯಸ್ಥಾನ ಹೊಂದಿದ್ದವು. ಉಪನ್ಯಾಸ ಮತ್ತು ಚರ್ಚೆ ಬೋಧನಾ ವಿಧಾನಗಳಾಗಿದ್ದವು.

ಬೌದ್ಧವಿಹಾರಗಳಲ್ಲಿ ನೂಲುವುದು, ನೇಯುವುದು, ಹೊಲಿಗೆ ಮುಂತಾದ ಕೈಕಸಬುಗಳ ತರಬೇತಿ ಮತ್ತು ಅಭ್ಯಾಸಗಳಿಗೆ ಅವಕಾಶವಿದ್ದಿತು. 'ವಿನಯ' ಎಂಬ ಬೌದ್ಧಗ್ರಂಥದಲ್ಲಿ 'ಲೇಖಮ್', 'ಗಣನ', 'ರೂಪಂ' ಎಂಬ ಪದಗಳಿರುವುದರಿಂದ ಗುಮಾಸ್ತಗಿರಿ, ಲೆಕ್ಕಾಚಾರ, ಮತ್ತು ಚಿತ್ರಕಲೆಗಳ ಬೋಧನೆಗೂ ಅವಕಾಶವಿದ್ದಿತೆಂದು ಊಹಿಸಲಾಗಿದೆ.

ವೈದಿಕ ಶಿಕ್ಷಣಪದ್ಧತಿ ಮತ್ತು ಬೌದ್ಧಮತೀಯರ ಶಿಕ್ಷಣಪದ್ಧತಿಗಳ ಅಂಗವಾಗಿ ಅಸ್ತಿತ್ವಕ್ಕೆ ಬಂದ ವಿದ್ಯಾಕೇಂದ್ರಗಳ ಪೈಕಿ ತಕ್ಷಶಿಲಾ, ಮಿಥಿಲಾ, ವಿಕ್ರಮಶಿಲಾ, ಉಜ್ಜಯಿನಿ, ಜಗದ್ದಳ, ಓದಾಂತಪುರಿ, ನಾದಿಯಾ (ನವದ್ವೀಪ), ಕರ್ನಾಟಕದ ತಾಳಗುಂದ, ಬದಾಮಿ ಮತ್ತು ಬಳ್ಳಿಗಾವೆ, ನಾಲಂದ (ನಳಂದ) ಮತ್ತು ವಲಭಿ ಉಲ್ಲೇಖನಾರ್ಹವಾಗಿವೆ. ನಾಲಂದ ವಿಶ್ವವಿದ್ಯಾನಿಲಯವು ಮಹಾಯಾನ ಪಂಗಡದ ಬೌದ್ಧಧರ್ಮದ ಅಧ್ಯಯನಕ್ಕೂ ವಲಭಿ ವಿಶ್ವವಿದ್ಯಾನಿಲಯವು ಹೀನಯಾನ ಪಂಗಡದ ವ್ಯಾಸಂಗಕ್ಕೂ ಹೆಸರುವಾಸಿಯಾಗಿದ್ದವು. ತಮಿಳುನಾಡಿನ ಕಾಂಚಿಯಲ್ಲಿ ವೈದಿಕ, ಬೌದ್ಧ ಮತ್ತು ಜೈನಮತೀಯರ ಶಿಕ್ಷಣ ಸಂಸ್ಥೆಗಳಿದ್ದವು. ಉದ್ದಾಮಪಂಡಿತರು, ಘನವಿದ್ವಾಂಸರುಗಳಿಂದ ಕೂಡಿದ್ದ ಈ ವಿದ್ಯಾಕೇಂದ್ರಗಳು ಸಾಹಿತ್ಯ, ಕಲೆ, ವಿಜ್ಞಾನ, ಸಂಸ್ಕೃತಿಗಳ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದವು.

ಡಾ|| ರಾಧಾಕುಮುದ್ ಮುಖರ್ಜಿ ಬರೆದಿರುವಂತೆ, "ಈಗಿನ ಕಾಲದವರೆಗೂ ಉಳಿದು ಬಂದಿರುವ ಭಾರತೀಯ ಕಲೆ-ಸಾಹಿತ್ಯಗಳು ಪ್ರಾಚೀನಕಾಲದ ಸಾಂಸ್ಕೃತಿಕ ಸಂಸ್ಥೆಗಳ ಪ್ರಾಮುಖ್ಯವನ್ನು ಸಾರಿ ಹೇಳುತ್ತವೆ. ಆ ಸಂಸ್ಥೆಗಳು ಅನೇಕ ಸಹಸ್ರ ಸಂವತ್ಸರಗಳ ಕಾಲ ಬಾಳಿವೆ. ಅದಕ್ಕೆ ಭಾರತೀಯ ಶಿಕ್ಷಣಪದ್ಧತಿಯು ಅಸಾಧಾರಣ ರೀತಿಯಲ್ಲಿ ಸತ್ವಶಾಲಿಯಾಗಿದ್ದುದೇ ಕಾರಣವೆಂದು ಅನುಮೋದಿಸಲ್ಪಟ್ಟಿದೆ."

ಶಿಕ್ಷಣ ನೀತಿ - ಒಂದು ವಿಶ್ಲೇಷಣೆ

ಸಾ. ಮಂಚಯ್ಯ

ಪ್ರಸ್ತಾವನೆ

"ಶಿಕ್ಷಣ" ಎಂಬುದೊಂದು ಪರಿಕಲ್ಪನೆ ಎಂದು ಭಾವಿಸಿದರೆ ಈ ಪರಿಕಲ್ಪನೆಯ ಅರ್ಥ ಏನೆಂಬುದೇ ನಮಗಿನ್ನೂ ಸ್ಪಷ್ಟವಾಗಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅದರ ಅರ್ಥವನ್ನು ವ್ಯಾಖ್ಯಾನಿಸುವರು. ಅವರವರ ನಿಲವಿನಂತೆ ಅವರವರ ವ್ಯಾಖ್ಯೆ ಪರಿಪೂರ್ಣ. ಆದರೆ ಯಾವುದೂ ಈ ಪರಿಕಲ್ಪನೆಯ ಪ್ರಶ್ನಾತೀತವಾದ ವ್ಯಾಖ್ಯೆಯನ್ನು ಕೊಡಲು ಸಮರ್ಥವಾಗಿಲ್ಲ. ಅಂದರೆ ಶಿಕ್ಷಣ ಅಂದರೇನು, ಅದು ಹೇಗಿರಬೇಕು ಎಂಬ ವಿಷಯಗಳ ಮೇಲೆ ಪೂರ್ಣಬೆಳಕು ಚೆಲ್ಲುವ ವಿಶ್ವದಾದ್ಯಂತ ಒಪ್ಪಿಗೆ ಪಡೆಯಬಹುದಾದ ಅರ್ಥ ವಿವರಣೆ ಇಲ್ಲ. "ಈ ರೀತಿಯ ಅನಿಶ್ಚಿತತೆಯ ಜೊತೆಗೆ ನಮ್ಮ ದೇಶದಲ್ಲಿರುವಂತೆ ಪ್ರಜಾಪ್ರಭುತ್ವಾಕಾಂಕ್ಷೆಯಿಂದ ಎಚ್ಚರಗೊಂಡ ಭಾರತೀಯ ಮನಸ್ಸು ಮತ್ತು ಸಂಸ್ಕೃತಿ ಬಲಪ್ರಯೋಗದ ಮೂಲಕ ಇಂಗ್ಲೀಷರ ಮನಸ್ಸು ಮತ್ತು ಸಂಸ್ಕೃತಿ ಸಂಧಿಸಿದುದು, ಏಷಿಯಾ ಮತ್ತು ಐರೋಪ್ಯರ ಆಕಸ್ಮಿಕ ಅಥವಾ ಪ್ರಜ್ಞಾಪೂರ್ವಕ ಘರ್ಷಣೆಯಷ್ಟೆ ಅಲ್ಲದೆ ರಾಜಕೀಯ ಪಾರತಂತ್ರ್ಯದ ಪರಿಣಾಮವಾಗಿ ಶಿಕ್ಷಣಪದ್ಧತಿಯನ್ನು ರೂಪಿಸುವುದು ಮತ್ತು ಅದರ ನಿಯಂತ್ರಣ ಪರಕೀಯರ ಕೈಯಲ್ಲಿ ಉಳಿದುದು-ರಾಷ್ಟ್ರೀಯ ಶಿಕ್ಷಣಪದ್ಧತಿಯನ್ನು ರೂಪಿಸುವ ಬೇಡಿಕೆಯೂ ಸೇರಿ ನಾವು ಪ್ರವೇಶಮಾಡಬಹುದಾದ ವಿಷಯದ ಬಗ್ಗೆ ಸ್ಪಷ್ಟ ಕಲ್ಪನೆಗಳಿಲ್ಲದುದರಿಂದ ಕ್ಷೋಭೆಗೊಂಡ ಗೊಂದಲಮಯ ವಾತಾವರಣ ಪ್ರವೇಶಿಸಿಂತಾಗದೆ" - 1956ರಷ್ಟು ಹಿಂದೆಯೇ ಅರವಿಂದರು ಹೇಳಿದುದು ಇಂದಿಗೂ ಅನ್ವಯ ಆಗುವುದು. ಸ್ವಾತಂತ್ರ್ಯ ಪಡೆದ ಒಂದು ದಶಕದ ನಂತರ ಅವರು ಅವಲೋಕಿಸಿದ ಭಾರತದಲ್ಲಿನ ಸ್ಥಿತಿಗತಿಗಳು ಇಂದೂ ಅನ್ವಯವಾಗುತ್ತವೆ. ಈ ಎಲ್ಲ ಅಭಿಪ್ರಾಯಗಳೂ ಅವರು ಇಪ್ಪತ್ತನೆಯ ಶತಮಾನದ ಆರ್ಧ ಭಾಗದಲ್ಲಿ ಭಾರತದ ಶಿಕ್ಷಣಪದ್ಧತಿಯನ್ನು ನೋಡಿ ಪ್ರತಿಕ್ರಿಯಿಸಿದುದರ ಫಲ. ರಾಷ್ಟ್ರೀಯ ಶಿಕ್ಷಣಪದ್ಧತಿಯ ಅರ್ಥ ಅವರೇ ಹೇಳುವಂತೆ ರಾಷ್ಟ್ರೀಯ ಶಿಕ್ಷಣಪದ್ಧತಿ ಎಂದರೆ ಭಾಸ್ಕರನ ಕಾಲದ ಖಗೋಳವಿಜ್ಞಾನ ಮತ್ತು ಗಣಿತಶಾಸ್ತ್ರಕ್ಕೆ ಹಿಂದೆ ಸರಿಯುವುದಲ್ಲ ಅಥವಾ ಇಂದಿನ ವೈಜ್ಞಾನಿಕ ಕೊಡುಗೆಗಳನ್ನೆಲ್ಲ ತಿರಸ್ಕರಿಸಿ ಹಳೆಯ ರಥ ಮತ್ತು ಹಳೆಯ ಎತ್ತಿನ ಗಾಡಿಯ ಯುಗಕ್ಕೆ ಹೋಗುವುದಲ್ಲ. ನಮ್ಮ ಮುಂದಿರುವ ಪ್ರಶ್ನೆ ಆಧುನಿಕತೆ ಮತ್ತು ಪ್ರಾಚೀನತೆ ನಡುವಿನದಲ್ಲ; ಅದು ಆಮದಾದ ನಾಗರಿಕತೆ ಮತ್ತು ಹೆಚ್ಚು ಅವಕಾಶವುಳ್ಳ ಭಾರತೀಯ ಮನಸ್ಸು ಮತ್ತು ಪ್ರವೃತ್ತಿಯ ನಡುವಿನ ಪ್ರಶ್ನೆ. ವರ್ತಮಾನ ಮತ್ತು ಭೂತಕಾಲದ ಪ್ರಶ್ನೆ ಅಲ್ಲ; ಆದರೆ ನಮ್ಮ ಮುಂದಿರುವುದು ವರ್ತಮಾನ ಮತ್ತು ಭವಿಷ್ಯತ್ತಿಗೆ ಸಂಬಂಧಿಸಿದ ವಿಷಯ.

ಆ ಪ್ರಶ್ನೆ ಕ್ರಿ.ಪೂ. ಐದನೆ ಶತಮಾನಕ್ಕೆ ಹೋಗುವುದಲ್ಲ; ಮುಂಬರುವ ಹಲವು ಶತಮಾನಗಳಿಗೆ ಅಸ್ತಿಭಾರ ಹಾಕುವ ಪ್ರಾರಂಭಿಕ ಕೆಲಸ, ಹಿಂಜರಿಕೆಯಲ್ಲ; ವರ್ತಮಾನದ

ಕೃತಕ ಪೊಳ್ಳುತನದಿಂದ ಭಾರತದ ಅಂತಃಸ್ಥಲದಲ್ಲಿ ಹುದುಗಿರುವ ಶಕ್ತಿಯ ವಿಕಾಸಕ್ಕೆ ಮುನ್ನಡೆಯುವುದು." ಭಾರತದ ಬೇಡಿಕೆ ಇದೇ!

ಮಹರ್ಷಿ ಅರವಿಂದರು ತಮ್ಮ ಪಾಶ್ಚಾತ್ಯ ಪೌರಾತ್ಯ ಶಿಕ್ಷಣಪದ್ಧತಿಗಳ ಅನುಭವದ ಬೆಳಕಿನಲ್ಲಿ ತಾವು ಕಂಡ ಸತ್ಯವನ್ನು, ನಮ್ಮ ಮುಂದೆ ಇಟ್ಟು ಅದನ್ನು ಅರ್ಥಮಾಡಿಕೊಂಡು ನಮ್ಮ ಇಂದಿನ ಭಾರತಕ್ಕೆ ಅಗತ್ಯವಾದ ಮತ್ತು ಒಂದು ಶಕ್ತಿಶಾಲಿ ಜನಾಂಗವನ್ನು ತಯಾರು ಮಾಡಬಲ್ಲ ರಾಷ್ಟ್ರೀಯಶಿಕ್ಷಣ ಪದ್ಧತಿಯನ್ನು ರೂಪಿಸುವುದು ಅಗತ್ಯ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ಶಿಕ್ಷಣಪದ್ಧತಿಗೆ ಸಂಬಂಧಿಸಿದಂತೆ ವಿಪುಲವಾಗಿ ವಾದ ವಿವಾದಗಳು ಆಗಿವೆ ಮತ್ತು ಆಗುತ್ತಿವೆ. ಇವೆಲ್ಲವೂ ಅಕ್ಯಾಡೆಮಿಕ್ ಸ್ವರೂಪದವು; ಅವು ಈ ರೀತಿಯ ಅಥವಾ ಆ ರೀತಿಯ ಸಾಮಗ್ರಿಗಳನ್ನು ಆರ್ಜಿಸಿಕೊಳ್ಳಬೇಕು ಎಂಬುದರ ಸುತ್ತಲೂ ಆವರಿಸಿಕೊಂಡಿವೆ. ವಿವಿಧ ರೀತಿಯ ವಿಷಯಗಳನ್ನು ಸಂಗ್ರಹಿಸುವುದೇ ಮುಖ್ಯಗುರಿಯಲ್ಲ; ಆದರೆ ಅದರ ಮುಖ್ಯಗುರಿ ಮಾನವನ ಮನಸ್ಸು ಮತ್ತು ಚೇತನವನ್ನು ವಿಕಾಸಪಡಿಸುವುದು; ರೂಪಿಸುವುದು. ಬೇರೆ ರೀತಿಯಲ್ಲಿ ಹೇಳಬಹುದಾದರೆ ಜ್ಞಾನ ಮತ್ತು ಮನಸ್ಸು ಹಾಗೂ, ಆ ಜ್ಞಾನವನ್ನು ವಿನಿಯೋಗಿಸುವ ಶಕ್ತಿ. ಚಾರಿತ್ರ್ಯ ಮತ್ತು ಸಂಸ್ಕೃತಿಗಳು ಹೊರಹೊಮ್ಮುವಂತೆ ಮಾಡುವುದು. ಮತ್ತೇನೂ ಸಾಧ್ಯವಾಗದಿದ್ದರೆ ಇಷ್ಟಾದರೂ ಆಗಲಿ ಎಂಬುದೇ ನಮ್ಮ ಆಸೆ.

ನಾವು ಈಗ ಆದ್ಯತೆಯ ಮೇಲೆ ಮಾಡಬೇಕಾದ ಕೆಲಸ ಎಂದರೆ ಇಂದಿನ ಪೊಳ್ಳು, ಮತ್ತು ಯಾಂತ್ರಿಕ ಸ್ವರೂಪದ ಶಿಕ್ಷಣಪದ್ಧತಿಯ ಸ್ಥಾನದಲ್ಲಿ ಉತ್ತಮವೂ, ಸಜೀವವೂ, ಸೃಜನಾತ್ಮಕವೂ ಆದ ಭವಿಷ್ಯಭಾರತದ ವೀರ್ಯವತ್ತಾದ ಜನಾಂಗ ನಿರ್ಮಾಣಕ್ಕೆ ಸಹಕಾರಿಯಾಗ ಬಲ್ಲ ಶಿಕ್ಷಣಪದ್ಧತಿಯನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು.

ಮೇಲೆ ವಿವರಿಸಿದ ವಿಷಯಗಳ ಬೆಳಕಿನಲ್ಲಿ ಭಾರತದಲ್ಲಿ ಶಿಕ್ಷಣನೀತಿ ನಡೆದುಬಂದ ಮಾರ್ಗವನ್ನು ಪರಿಶೀಲಿಸಿ ಅದರ ಲೋಪದೋಷಗಳನ್ನು ಗುರುತಿಸಿ ಅವುಗಳನ್ನು ನಿವಾರಿಸಿ, ನಮ್ಮ ದೇಶದ ಇಂದಿನ ಪರಿಸ್ಥಿತಿಗೆ ಅಗತ್ಯವೆನಿಸುವ ರಾಷ್ಟ್ರೀಯ ಶಿಕ್ಷಣಪದ್ಧತಿಯನ್ನು ರೂಪಿಸಬೇಕು.

ಪ್ರಾಚೀನ ಭಾರತದಲ್ಲಿ ಶಿಕ್ಷಣ

ಪ್ರಾಚೀನ ಭಾರತದಲ್ಲಿ ಶಿಕ್ಷಣ ಮಹತ್ವದ ಸ್ಥಾನ ಪಡೆದಿತ್ತು. ಅದು ಉನ್ನತ ಸಾಧನೆಯಿಂದಾಗಿ ಎಲ್ಲೆಡೆಯಿಂದಲೂ ಮೆಚ್ಚುಗೆ ಪಡೆದಿತ್ತು. ಅಂದಿನ ಪ್ರಖ್ಯಾತ ಶಿಕ್ಷಣ ಕೇಂದ್ರಗಳಲ್ಲಿ ಹೊರದೇಶದವರೂ ಶಿಕ್ಷಣ ಪಡೆಯುತ್ತಿದ್ದರು. ಭಾರತ ಆಗ ಪೂರ್ವ ಮತ್ತು ಮಧ್ಯಪೂರ್ವ ಏಷ್ಯಾರಾಷ್ಟ್ರಗಳೊಡನೆ ನಿಕಟಸಂಪರ್ಕ ಹೊಂದಿತ್ತು. ಪ್ರಾಚೀನ ಭಾರತದಲ್ಲಿ ವೇದವಿದ್ಯೆ ಮತ್ತು ಲೌಕಿಕವಿದ್ಯೆ ಎರಡಕ್ಕೂ ಅವಕಾಶ ಇತ್ತು. ವೇದವಿದ್ಯೆಯ ಅವಧಿ 12 ವರ್ಷಗಳು; ಲೌಕಿಕ ವಿದ್ಯೆಯ ಅವಧಿ ಕಡಿಮೆ ಇತ್ತು. ಆ ಕಾಲದಲ್ಲಿ ಎಲ್ಲರಿಗೂ ದೊರೆಯಬಹುದಾಗಿದ್ದ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಶಿಕ್ಷಣಕ್ಕೆ ಮತ್ತು ಲೌಕಿಕ ವಿದ್ಯಾಭ್ಯಾಸಕ್ಕೆ ಸೌಲಭ್ಯಗಳು ಇದ್ದುವು. ರಾಷ್ಟ್ರಜೀವನದ ಮುಖ್ಯಕ್ಷೇತ್ರಗಳಾದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಶಿಕ್ಷಣ ಅಗತ್ಯ ಎಂಬುದು ಅವರಿಗೆ ಸ್ಪಷ್ಟವಾಗಿತ್ತು.

ಕಲೆ, ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ಮೊದಲಾದ ಕ್ಷೇತ್ರಗಳಲ್ಲಿ ತರಬೇತು ಅಗತ್ಯ ಎಂಬುದನ್ನು ಮನಗಂಡು ಆ ಕ್ಷೇತ್ರಗಳಲ್ಲಿ ಶಿಕ್ಷಣ ಕೊಡಲು ವ್ಯವಸ್ಥೆ ಮಾಡಿದ್ದರು.

ಶಿಕ್ಷಣದ ಅರ್ಥವೂ ಅವರಿಗೆ ಸ್ಪಷ್ಟವಾಗಿತ್ತು. "ಮೇಲ್ಮೈನ ಕಿರುದರೆಗಳಿಂದ ವಿಚಲಿತರಾಗದೆ ಮನಸ್ಸನ್ನು ಅದರ ಅಂತರಾಳದ ಪದರಗಳಿಗೆ ಅಂದರೆ ಕೆಳಸ್ಥಾನಕ್ಕೆ ಇಳಿಸಿ ಅದನ್ನು ನಿಯಂತ್ರಿಸುವುದೇ ಶಿಕ್ಷಣ ಪ್ರಕ್ರಿಯೆ."

ವ್ಯಕ್ತಿಯೇ ಶಿಕ್ಷಣದ ಮೂಲವಸ್ತುವಾದುದರಿಂದ ಶಿಕ್ಷಣ ವೈಯಕ್ತಿಕವಾಗಿರುವುದು ಅಗತ್ಯ; ಗುರು-ಶಿಷ್ಯರ ನಡುವೆ ನಿಕಟಸಂಪರ್ಕ ಇರಬೇಕು. ಆ ಕಾಲದಲ್ಲಿ ಶಾಲೆ ಎಂದರೆ ಇಂದಿನಂತೆ ಒಂದು ಕೃತಕ ಸಂಸ್ಥೆಯಾಗಿರಲಿಲ್ಲ; ಅದು ಸದ್ದುಗದ್ದಲಗಳಿಂದ ದೂರವಾಗಿ ಮನಸ್ಸು ಚಂಚಲಗೊಳ್ಳದೆ ಏಕಾಗ್ರತೆಯಿಂದ ಅಧ್ಯಯನ ಮಾಡಲು ಸಹಕಾರಿಯಾದ ಪ್ರಶಾಂತ ವಾತಾವರಣದಲ್ಲಿ ವ್ಯವಸ್ಥೆಯಾಗಿದ್ದ ಆಶ್ರಮ. ಅಲ್ಲಿಗೆ ವಿದ್ಯಾರ್ಥಿಗಳು ವಿದ್ಯೆಯನ್ನು ಬೇಡಿ ಹೋಗುತ್ತಿದ್ದರು. ಆಶ್ರಮವಾಸ, ಗುರುಸೇವೆ ಮತ್ತು ಬ್ರಹ್ಮಚರ್ಯೆ ಕಡ್ಡಾಯವಾಗಿದ್ದುವು. ಅಂದಿನ ಶಿಕ್ಷಣಪದ್ಧತಿಯಲ್ಲಿ ಮುಖ್ಯವಾದವುಗಳು: (1) ಶ್ರವಣ (2) ಮನನ (3) ನಿಧಿಧ್ಯಾಸನ.

ಈ ಋಷ್ಯಾಶ್ರಮಗಳೇ ವಿಚಾರ ಲಹರಿಗಳ, ಸಂಸ್ಕೃತಿ ಮತ್ತು ನಾಗರಿಕತೆಯ ಉಗಮ ಸ್ಥಾನಗಳು; ಮಾನಸ ಸರೋವರಗಳು. ಇಲ್ಲಿ ಉಗಮವಾದ ಸಂಸ್ಕೃತಿ, ನಾಗರಿಕತೆಯ ಪ್ರವಾಹಗಳು ಭಾರತದ ಉದ್ದಗಲಗಳಲ್ಲಿ ಪ್ರವಹಿಸಿ ಎಲ್ಲರನ್ನೂ ಪ್ರಭಾವಗೊಳಿಸಿದುವು. ಆದರೆ ಇಂದು! ಇಂದಿನ ಪರಿಸ್ಥಿತಿಯನ್ನು ನೋಡಿ ಶ್ರೀ ರಾಧಾಕುಮುದ ಮುಖರ್ಜಿಯವರು "ಭಾರತ ರಾಷ್ಟ್ರಜೀವನದ ಅನೇಕ ಕ್ಷೇತ್ರಗಳಲ್ಲಿ ಅದರ ಆತ್ಮದ ಲಂಗರುಸ್ಥಾನವಾದ ತನ್ನ ಸಂಪ್ರದಾಯಿಕ ನೆಲೆಯಿಂದ ಕೊಚ್ಚಿಹೋಗಿ ಅಳವರಿಯದ ಮತ್ತು ಸನ್ನದಿಲ್ಲದ ಸಮುದ್ರದಲ್ಲಿ ದಿಕ್ಕುಗಾಣದೆ ಅಲೆಯುತ್ತಿದೆ" ಎಂದು ಹೇಳಿರುವ ಮಾತುಗಳು ಪೂರ್ಣ ಸತ್ಯ.

ಬೌದ್ಧ, ಜೈನ ಶಿಕ್ಷಣಪದ್ಧತಿಗಳೂ ಅನುಷ್ಠಾನದಲ್ಲಿದ್ದುವು. ಅವು ದೀರ್ಘಕಾಲ ಉಳಿಯಲಿಲ್ಲ. ಆನಂತರ ಮಧ್ಯಯುಗದ ಪ್ರಾರಂಭ, ಮಹಮ್ಮದೀಯರ ಆಳ್ವಿಕೆ, ಆಗಾಗ ದೇಶದೊಳಗೆ ತಮ್ಮತಮ್ಮಲ್ಲಿ ನಡೆಯುತ್ತಿದ್ದ ಯುದ್ಧಗಳು ಮತ್ತು ಹೊರಗಿನ ದಾಳಿಕೋರ ರೊಡನೆ ನಡೆಯುತ್ತಿದ್ದ ಯುದ್ಧಗಳಿಂದಾಗಿ ಶಾಂತಿಸ್ಥಾಪನೆ ಕಷ್ಟವಾಗಿತ್ತು. ಆದರೂ ದೇಶದಲ್ಲಿ ಶಿಕ್ಷಣಸೌಲಭ್ಯಗಳು ವ್ಯಾಪಕವಾಗಿದ್ದುವು. ಉನ್ನತಶಿಕ್ಷಣ ಸಂಸ್ಕೃತ, ಅರೇಬಿಕ್ ಮತ್ತು ಪರ್ಷಿಯನ್ ಮುಂತಾದ ಪ್ರಾಚೀನ ಭಾಷೆಗಳ ಮಾಧ್ಯಮದ ಮೂಲಕ ನಡೆಯುತ್ತಿತ್ತು. ಲೌಕಿಕಶಿಕ್ಷಣ ದೇಶಭಾಷೆಗಳ ಮೂಲಕ ನಡೆಯುತ್ತಿತ್ತು. ಆದರೆ ಇದಕ್ಕೆ ಸಂಬಂಧಿಸಿದಂತೆ ಖಚಿತ ಮಾಹಿತಿ ಇಲ್ಲ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿನ ಸ್ಥಿತಿ ಮತ್ತು ದೇಶೀಯ ಶಾಲೆಗಳು

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಾರಂಭದಲ್ಲಿ ದೇಶೀಯ ಶಾಲೆಗಳು ಅಸ್ತಿತ್ವದಲ್ಲಿದ್ದು ಶಿಕ್ಷಣಸೌಲಭ್ಯಗಳು ವ್ಯಾಪಕವಾಗಿದ್ದುವು. ಅಗ್ರಹಾರಗಳಲ್ಲಿ ದೇವಾಲಯ ಗಳಲ್ಲಿ, ಗುರುಮಠಗಳಲ್ಲಿ ಮತ್ತು ಮಸೀದಿಗಳಲ್ಲಿ ಆ ಶಾಲೆಗಳು ನಡೆಯುತ್ತಿದ್ದುವು. ಗ್ರಾಮೀಣ ಪ್ರದೇಶಗಳಲ್ಲಿ ಶ್ರೀಮಂತರು ಮತ್ತು ಜಮೀನ್ದಾರರು ತಮ್ಮ ಮಕ್ಕಳಿಗೆ ಮನೆಯಲ್ಲಿಯೇ ಶಿಕ್ಷಣವ್ಯವಸ್ಥೆ ಮಾಡುತ್ತಿದ್ದರು. ಅವುಗಳಿಗೆ ನಿರ್ದಿಷ್ಟ ಪಠ್ಯವಸ್ತುವಾಗಲಿ, ಪಠ್ಯಪುಸ್ತಕಗಳಾಗಲಿ ಇರಲಿಲ್ಲ. ಓದುವುದು, ಬರೆಯುವುದು ಮತ್ತು ವ್ಯವಹಾರಿಕ ಗಣಿತ ಕಲಿಸುವುದೇ ಮುಖ್ಯಗುರಿಯಾಗಿತ್ತು. ಬೊಂಬಾಯಿ, ಮದರಾಸು, ಬಂಗಾಳ ಮತ್ತು ಅಂದಿನ

ಸಂಯುಕ್ತ ಪ್ರಾಂತ್ಯಗಳಲ್ಲಿ ಅಂದಿನ ಬ್ರಿಟಿಷ್ ಆಡಳಿತ ನಡೆಸಿದ ಸರ್ವೇಕ್ಷಣೆಯಿಂದ ಈ ಅಂಶ ಸ್ಪಷ್ಟವಾಗುವುದು. ಬೊಂಬಾಯಿಯ ಶಿಕ್ಷಣ ಸಮಿತಿಯ (Bombay Education Society) ವರದಿಯಂತೆ ಓದು ಬರಹ ಬಲ್ಲವರು ಮತ್ತು ಲೆಕ್ಕಪತ್ರಗಳನ್ನು ಇಡಬಲ್ಲವರು ಐರೋಪ್ಯ ದೇಶಗಳಲ್ಲಿರುವುದಕ್ಕಿಂತ ಹೆಚ್ಚಿಲ್ಲದಿದ್ದರೂ ಭಾರತದಲ್ಲಿ ಅಷ್ಟೇ ಪ್ರಮಾಣ ದಲ್ಲಿದ್ದರು ಎಂದು ತಿಳಿಯಬರುವುದು.

ಅವುಗಳು ಇಲ್ಲವಾಗಲು ಕಾರಣಗಳು

ಈ ಶಾಲೆಗಳ ಗುಣಮಟ್ಟ ಬಹಳ ಕೆಳಮಟ್ಟದಲ್ಲಿತ್ತು; ಶಿಕ್ಷಕರಿಗೆ ಅಗತ್ಯ ವಿದ್ಯಾರ್ಹತೆ ಇರಲಿಲ್ಲ; ತರಬೇತೂ ಇರಲಿಲ್ಲ; (ತರಬೇತಿನ ಅಗತ್ಯ ಆಗ ತಾನೆ ರೂಪು ತಳೆಯುತ್ತಿತ್ತು) ಅವರ ಬೋಧನೆ ಪರಿಣಾಮಕಾರಿಯಾಗಿರಲಿಲ್ಲ. ಇಂಗ್ಲೇಡ್‌ನಲ್ಲಿ ಇಷ್ಟೇ ಕೆಳಮಟ್ಟದಲ್ಲಿದ್ದ ವಾಲಂಟರಿ ಶಾಲೆಗಳನ್ನು ಸುಧಾರಿಸಿ ಮುಂದುವರಿಸಿಕೊಂಡು ಹೋಗಿ ಆ ದೇಶದಲ್ಲಿ ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸಿದರು. ಅದೇ ನೀತಿಯನ್ನು ದೇಶೀಯ ಶಾಲೆಗಳಿಗೆ ಅನ್ವಯಮಾಡಿ ಭಾರತದಲ್ಲಿ ಶಿಕ್ಷಣಸೌಲಭ್ಯಗಳನ್ನು ವಿಸ್ತರಿಸುವ ಪ್ರಯತ್ನ ಏಕೆ ಮಾಡಲಿಲ್ಲ? ಲಾಭದೃಷ್ಟಿ ಹೊಂದಿದ್ದ ಕಂಪನಿ ಆಡಳಿತ ಈ ಉದ್ದೇಶಕ್ಕಾಗಿ ಹಣ ಒದಗಿಸುವುದು ಕಷ್ಟವಾಗಿತ್ತು. 1857ರ ನಂತರ ಆಡಳಿತ ನೇರವಾಗಿ ಬ್ರಿಟನ್ನಿನ ಆಡಳಿತಕ್ಕೆ ಒಳಗಾದ ಮೇಲಾದರೂ ಆ ಕಾರ್ಯ ಮಾಡಬಹುದಾಗಿತ್ತು. ಪ್ರಾಚೀನ ಭಾಷೆಗಳು ಮತ್ತು ದೇಶಭಾಷೆಗಳು ಯೂರೋಪಿನಲ್ಲಿ ಬೆಳೆದು ನಿಂತ ಜ್ಞಾನ, ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳನ್ನು ಬೋಧಿಸಲು ಅಸಮರ್ಥವಾಗಿವೆ ; ಅವುಗಳನ್ನು ಇಂಗ್ಲಿಷ್ ಭಾಷೆಯ ಮೂಲಕವೇ ಬೋಧಿಸಬೇಕೆಂಬ ಮೆಕಾಲೆಯ ನಿಲುವು ಜಯಪಡೆದುದರ ಫಲವಾಗಿ ಇಂಗ್ಲಿಷ್‌ಪದ್ಧತಿಯ ಆಧುನಿಕ ಶಿಕ್ಷಣಪದ್ಧತಿಯನ್ನು ಭಾರತದಲ್ಲಿ ಪ್ರಾರಂಭಿಸಿದರು. "ನಮ್ಮ ಮತ್ತು ಲಕ್ಷೋಪಲಕ್ಷ ದೇಶೀಯರ ನಡುವೆ ದುಭಾಷಿ ವರ್ಗ - ಅಂದರೆ ಬಣ್ಣದಲ್ಲಿ, ರಕ್ತದಲ್ಲಿ ಮಾತ್ರ ಭಾರತೀಯರಾಗಿದ್ದು ಅಭಿರುಚಿಯಲ್ಲಿ, ಅಭಿಪ್ರಾಯಗಳಲ್ಲಿ, ನೈತಿಕತೆಯಲ್ಲಿ ಮತ್ತು ಬುದ್ಧಿಶಕ್ತಿಯಲ್ಲಿ ಇಂಗ್ಲಿಷರೇ ಆಗಿರುವ ಒಂದು ವರ್ಗವನ್ನು ತಯಾರುಮಾಡಬೇಕು. ಆ ವರ್ಗದವರಿಗೆ ದೇಶಭಾಷೆಗಳನ್ನು ಪರಿಷ್ಕರಿಸುವ, ಪಶ್ಚಿಮದ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ಚಲಾವಣೆಗೆ ತಂದು ಅವುಗಳನ್ನು ಸಂಪದ್ಭರಿತವಾಗಿ ಮಾಡುವ ಜವಾಬ್ದಾರಿ ವಹಿಸಬೇಕು" ಎಂಬುದು ಮೆಕಾಲೆಯ ಉದ್ದೇಶವಾಗಿತ್ತು. ಆತ ತನ್ನ ಮೊದಲನೆಯ ಉದ್ದೇಶದ ಸಾಧನೆಯಲ್ಲಿ ಸಂಪೂರ್ಣವಾಗಿ ವಿಫಲನಾದ ಎಂದು ಹೇಳಲು ಎಲ್ಲರಿಗೂ ಹರ್ಷ.

ಕಂಪೆನಿ ಶಿಕ್ಷಣಕ್ಕೆ ಹಣ ಖರ್ಚುಮಾಡಲು ಪ್ರಾರಂಭಿಸಿತು. 1813ರಲ್ಲಿ ಕಂಪೆನಿಯ ಆಡಳಿತ ಶಿಕ್ಷಣಕ್ಕಾಗಿ ಒಂದು ಲಕ್ಷ ರೂಪಾಯಿ ಧನ ಸಹಾಯ ಒದಗಿಸಿತು. ಆ ಮೊತ್ತ ಬಹುಕಾಲ ಹೆಚ್ಚಾಗಲೇ ಇಲ್ಲ. ಆದರೆ ಇಂಗ್ಲೆಂಡ್‌ನಲ್ಲಿ ಸರ್ಕಾರ ಶಿಕ್ಷಣಕ್ಕಾಗಿ 1830ರಲ್ಲಿ ಕೇವಲ 30 ಸಾವಿರ ಪೌಂಡುಗಳ ಧನಸಹಾಯವನ್ನು ನೀಡಿತು. ನಾಲ್ಕು ದಶಕಗಳಲ್ಲಿ ಬ್ರಿಟಿಷರು ತಮ್ಮ ತಾಯ್ನಾಡಿನಲ್ಲಿ ಶಿಕ್ಷಣಸೌಲಭ್ಯಗಳನ್ನು ವಿಸ್ತರಿಸಲು ಶ್ರಮಿಸಿ 1870ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಶಕ್ತರಾದರು. ಆದರೆ ಭಾರತದಲ್ಲಿ ಇದೇ ರೀತಿಯ ಉದಾರ ನೀತಿ ಅನುಸರಿಸಲಿಲ್ಲ.

ವುಡ್‌ನ ಪರಿಪತ್ರ

1854ರ ಜುಲೈ 19ರಂದು ಕಂಪೆನಿಯ ಸಂಚಾಲಕರುಗಳ ಮಂಡಳಿ ಪ್ರಸಿದ್ಧ ಶಿಕ್ಷಣ ಪತ್ರ ಹೊರಡಿಸಿತು. ಈ ಪರಿಪತ್ರವೇ 'ವುಡ್‌ನ ಪರಿಪತ್ರ'. ಆಗ ನಿಯಂತ್ರಣ ಮಂಡಳಿಯ ಅಧ್ಯಕ್ಷನಾಗಿದ್ದ ಚಾರ್ಲ್ಸ್ ವುಡ್‌ನ ಸಲಹೆಯಂತೆ ಈ ಪರಿಪತ್ರ ಸಿದ್ಧವಾದುದರಿಂದ ಅದಕ್ಕೆ ಆ ಹೆಸರು ಬಂದಿದೆ. ಇದು ಭಾರತದ ಶಿಕ್ಷಣಇತಿಹಾಸದಲ್ಲಿ ಒಂದು ಅತಿಮುಖ್ಯ ಚಾರಿತ್ರಿಕ ದಾಖಲೆಯಾಗಿ ಉಳಿದಿದೆ. ಇದು ನೂರು ಕಂಡಿಕೆಗಳನ್ನೊಳಗೊಂಡ ದೀರ್ಘ ಪರಿಪತ್ರ. ಈ ಪರಿಪತ್ರವೇ ಭಾರತದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಪ್ರಾರಂಭ ಮತ್ತು ಬೆಳವಣಿಗೆಗೆ ತಳಹದಿ. 1857ರ ಬ್ರಿಟಿಷರು 'ಸಿಪಾಯಿ ದಂಗೆ' ಎಂದು ಕರೆಯುವ ಭಾರತದ ಪ್ರಥಮ ಸ್ವಾತಂತ್ರ್ಯ ಸಮರ ವಿಫಲವಾದ ನಂತರ ಇಷ್ಟೊಂದು ವಿಶಾಲ ದೇಶದ ಆಡಳಿತ ನಿರ್ವಹಿಸಲು ಒಂದು ವ್ಯಾಪಾರಿ ಕಂಪೆನಿಗೆ ಸಾಧ್ಯವಿಲ್ಲ ಎಂಬ ನಿಲುವಿಗೆ ಬಂದು 1858ರಲ್ಲಿ ಬ್ರಿಟಿಷ್ ಸರ್ಕಾರ ವಿಕ್ಟೋರಿಯ ರಾಣಿಯ ಪ್ರಸಿದ್ಧ ಪತ್ರಿಕೆಯ ಮೂಲಕ ಭಾರತವನ್ನು ತನ್ನ ನೇರ ಆಡಳಿತಕ್ಕೆ ವಹಿಸಿಕೊಂಡಿತು.

ಬ್ರಿಟಿಷರ ಆಳ್ವಿಕೆಯ ಫಲಾಫಲಗಳು

1757ರಲ್ಲಿ ನಡೆದ ಪ್ಲಾಸಿ ಕದನದಲ್ಲಿ ಬ್ರಿಟಿಷರು ಗಳಿಸಿದ ಜಯ ಭಾರತದಲ್ಲಿ ಅವರ ರಾಜ್ಯಸ್ಥಾಪನೆಯ ಪ್ರಯತ್ನಕ್ಕೆ ತಳಹದಿ ಹಾಕಿತು. ಅಲ್ಲಿಂದ 1857ರವರೆಗೆ ಅನುಸರಿಸಿದ ಸಾಮ್ರಾಜ್ಯ ವಿಸ್ತರಣಾ ನೀತಿ ಮತ್ತಿತರ ಸುಧಾರಣಾ ಕಾರ್ಯಕ್ರಮಗಳು 1857ರ ಭಾರತೀಯರ ಪ್ರಥಮ ಸ್ವಾತಂತ್ರ್ಯ ಹೋರಾಟಕ್ಕೆ ಕಾರಣವಾಗಿ ಅದು ತಣ್ಣಗಾದ ನಂತರ ಬ್ರಿಟಿಷರ ವಸಾಹತು ಭದ್ರವಾಯಿತು. 1757ರಿಂದ ನಾವು ಸ್ವಾತಂತ್ರ್ಯ ಗಳಿಸುವವರೆಗಿನ ಕಾಲ ಅಂದರೆ 1947 ಆಗಸ್ಟ್ 15ರವರೆಗಿನ ಸುಮಾರು ಎರಡು ಶತಮಾನಗಳಷ್ಟು ದೀರ್ಘಕಾಲ ಬ್ರಿಟಿಷರು ಭಾರತದಲ್ಲಿ ಆಳ್ವಿಕೆ ನಡೆಸಿದರು. ಆ ಆಡಳಿತ ಕೆಲವು ಒಳ್ಳೆಯ ಕೆಲಸಗಳನ್ನೂ ಮಾಡಿದೆ; ಹಾಗೆಯೇ ಅನೇಕ ಕಾರ್ಯಕ್ರಮಗಳ ಮೂಲಕ ಹಾನಿಯನ್ನೂ ಉಂಟುಮಾಡಿದೆ. ಅದು ಭಾರತದ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರಯತ್ನಿಸಲಿಲ್ಲ; ಅದು ಒಂದು ವಸಾಹತುವಾಗಿಯೇ ಇರುವಂತೆ ಎಚ್ಚರವಹಿಸಿ ಬ್ರಿಟನ್‌ಗೆ ಕಚ್ಚಾಸಾಮಗ್ರಿಗಳ ಸರಬರಾಜು ಮಾಡುವ ಮತ್ತು ಬ್ರಿಟನ್‌ನ ಉತ್ಪಾದನೆಗಳಿಗೆ ಮಾರುಕಟ್ಟೆಯಾಗಿ ಉಪಯೋಗಿಸಿಕೊಳ್ಳುವ ದೇಶವನ್ನಾಗಿ ಉಳಿಸಿಕೊಳ್ಳಲು ನಿರ್ಧರಿಸಿದರು. ಆ ನೀತಿಯಿಂದಲೇ ಭಾರತ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿಯ ಬೇಕಾಯಿತು.

ಬ್ರಿಟಿಷರು ಅನುಸರಿಸಿದ ಶಿಕ್ಷಣನೀತಿ

"ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಾರಂಭದಿಂದ ಅಂದರೆ 1757ರಿಂದ 1947 ಆಗಸ್ಟ್ 15ರವರೆಗೆ, ಅಂದರೆ ನಾವು ಸ್ವಾತಂತ್ರ್ಯ ಗಳಿಸುವವರೆಗೆ, ಬಹುದೂರ ಪಯಣಿಸಿ ಆಗಸ್ಟ್ 15ರ ವೇದಿಕೆಯ ಮೇಲೆ ನಿಂತು ಹಿನ್ನೋಟ ಹರಿಸಿ ಆ ಎರಡು ಶತಮಾನದ ಅವಧಿಯಲ್ಲಿ ಶಿಕ್ಷಣ ಮತ್ತು ಶಿಕ್ಷಣನೀತಿಗೆ ಸಂಬಂಧಿಸಿದಂತೆ ಬ್ರಿಟಿಷರ ಆಡಳಿತದ ಸಾಧನೆ ಮತ್ತು ವೈಫಲ್ಯಗಳನ್ನು ಗುರುತಿಸಬಹುದು. ಇತಿಹಾಸದ ಅಂತಹ ಒಂದು ಹಿನ್ನೋಟ ಹಿಂದಿಗಿಂತ ಇಂದು ವಸ್ತುನಿಷ್ಠೆಯ ವಿಮರ್ಶೆಯಾಗುವುದು. ಎಲ್ಲಿಯವರೆಗೆ ಬ್ರಿಟಿಷರು ಭಾರತದಲ್ಲಿ ರಾಜಕೀಯ ಶಕ್ತಿಯಾಗಿದ್ದರೋ ಅಲ್ಲಿಯವರೆಗೂ ಶಿಕ್ಷಣಕ್ಕೆ ಸಂಬಂಧಿಸಿದ

ವಿವಾದಗಳು ರಾಜಕೀಯ ಲೇಪನವನ್ನು ಹಚ್ಚಿಕೊಂಡಿದ್ದುವು. ಇಂಗ್ಲಿಷರು ಭಾರತದಲ್ಲಿ ತಮ್ಮ ಆಡಳಿತವನ್ನು ಸಮರ್ಥಿಸಿಕೊಳ್ಳುವ ದೃಷ್ಟಿಯಿಂದ ತಮ್ಮ ಸಾಧನೆಯ ಕೆಲವಂಶಗಳನ್ನು ಬೃಹತ್ತಾಗಿ ಮಾಡಿದರು; ಸಾಧನೆಯಲ್ಲಾದ ಕೊರತೆಗಳು ಮತ್ತು ವೈಫಲ್ಯಗಳನ್ನು ಅವರ ನಿಯಂತ್ರಣಕ್ಕೆ ಸಿಕ್ಕದ ಕಾರಣಗಳಿಂದ ಎಂದು ಸಮರ್ಥಿಸಿಕೊಂಡರು.

ಈ ಪರಿಪತ್ರ ಹೊರಡುವುದಕ್ಕೆ ಮೊದಲು ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ನೀತಿ ಏನೂ ಇರಲಿಲ್ಲ. ಕಂಪೆನಿ ತನ್ನ ಪ್ರಜೆಗಳಿಗೆ ಶಿಕ್ಷಣಸೌಲಭ್ಯಗಳನ್ನು ಒದಗಿಸುವುದು ತನ್ನ ಜವಾಬ್ದಾರಿ ಅಲ್ಲವೆಂದು ನಂಬಿತ್ತು. ಆ ಕಾಲದಲ್ಲಿ ಸ್ಕಾಂಡನೇವಿಯ ಮತ್ತು ಪ್ರಷ್ಯಾ ದೇಶಗಳನ್ನು ಬಿಟ್ಟರೆ ಬೇರಾವ ದೇಶಗಳಲ್ಲಿಯೂ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿರಲಿಲ್ಲ. ದೇಶದ ಪ್ರಜೆಗಳ ಮಕ್ಕಳಿಗೆ ಶಿಕ್ಷಣಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಸರ್ಕಾರದ್ದೆಂಬ ನಿಲುವು ಸಾಮಾನ್ಯವಾಗಿ ಹತ್ತೊಂಬತ್ತನೆ ಶತಮಾನದಲ್ಲಿ ಪ್ರಾರಂಭವಾದುದು.

ಪರಿಪತ್ರದ ವಿವರಗಳು

(1) ಪರಿಪತ್ರದ ಪ್ರಸ್ತಾವನೆಯಲ್ಲಿಯೇ ಕಂಪೆನಿ ತಾವೇಕೆ ಶಿಕ್ಷಣವ್ಯವಸ್ಥೆಯನ್ನು ಕೈಗೆತ್ತಿಕೊಂಡೆವು ಎಂಬುದಕ್ಕೆ ಕಾರಣ ನೀಡುತ್ತದೆ. "ನಮ್ಮ ದೃಷ್ಟಿಯಲ್ಲಿ ಶಿಕ್ಷಣಕ್ಕಿಂತಲೂ ಪ್ರಮುಖವಾದ ವಿಷಯ ಮತ್ತೊಂದಿಲ್ಲ. ಭಾರತೀಯರನ್ನು ಉಪಯುಕ್ತ ಜ್ಞಾನ ಪ್ರಸಾರದಿಂದ ಲಭ್ಯವಾಗುವ ನೈತಿಕ ಮತ್ತು ಭೌತಿಕ ಶ್ರೇಯಸ್ಸನ್ನು ಪಡೆಯುವಂತೆ ಮಾಡುವುದು ನಮ್ಮ ಪವಿತ್ರಕರ್ತವ್ಯ.... ಅದು ಅವರು ಮಾನವಶಕ್ತಿ ಮತ್ತು ಬಂಡವಾಳವನ್ನು ನಮ್ಮಂತೆಯೇ ಉಪಯೋಗಿಸಿಕೊಂಡು ಈ ದೇಶದ ಅಗಾಧ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ ಆ ಮೂಲಕ ಸಂಪತ್ತನ್ನು ಹೆಚ್ಚಿಸಿಕೊಂಡು ವಾಣಿಜ್ಯವನ್ನು ಅಭಿವೃದ್ಧಿಪಡಿಸಿಕೊಂಡು ಅದೇ ಸಮಯದಲ್ಲಿ ನಮ್ಮ ದೇಶದ ಕಾರ್ಖಾನೆಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಒದಗಿಸಿ ನಮಗೂ ಸಹಾಯಮಾಡುವ ಶಕ್ತಿ ನೀಡುವುದು" ಎಂದು ಹೇಳಿದ್ದಾರೆ. ಮೊದಲನೆಯದಕ್ಕೆ ಪ್ರಯತ್ನಪಡಲೇ ಇಲ್ಲ. ಎರಡನೇ ಉದ್ದೇಶವನ್ನು ಸಮರ್ಥವಾಗಿ ಸಾಧಿಸಿಕೊಂಡಿದ್ದಾರೆ.

ಈ ಪರಿಪತ್ರ ವಿವಾದಗಳಿಂದ ಮುಕ್ತವಾಗಿರಲಿಲ್ಲ. ದೇಶಭಾಷೆಗಳಲ್ಲಿ ತೃಪ್ತಿಕರವಾದ ಪಠ್ಯಪುಸ್ತಕಗಳು ಇಲ್ಲದಿರುವುದರಿಂದ ತಾತ್ಕಾಲಿಕವಾಗಿ ಇಂಗ್ಲೀಷ್ ಮಾಧ್ಯಮ ಉಳಿಸಿಕೊಂಡಿದೆ; ದೇಶಭಾಷೆಗಳೂ ಶಿಕ್ಷಣ ಮಾಧ್ಯಮವಾಗಿರುತ್ತವೆ. ಎರಡೂ ರೀತಿ ಶಾಲೆಗಳನ್ನು ವ್ಯವಸ್ಥೆ ಮಾಡುವ ನೀತಿ ಎರಡು ಪ್ರತ್ಯೇಕ ವರ್ಗಗಳ ನಿರ್ಮಾಣಕ್ಕೆ ಕಾರಣವಾಯಿತು. ದೇಶಭಾಷೆಗಳನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವ ನೀತಿ ಕೇವಲ ನೀತಿಯಾಗಿಯೇ ಉಳಿದು ಅನುಷ್ಠಾನಕ್ಕೆ ಬಾರದೆ ಅಲಕ್ಷ್ಯಕ್ಕೊಳಗಾಯಿತು.

(2) ಶಿಕ್ಷಣ ಇಲಾಖೆಯನ್ನು ಅಸ್ತಿತ್ವಕ್ಕೆ ತಂದಿತು. ಇದರಿಂದ ಶಿಕ್ಷಣ ಆಡಳಿತ, ಪರಿವೀಕ್ಷಣೆ ಮತ್ತು ಮಾರ್ಗದರ್ಶನ, ವಿಸ್ತರಣೆ, ಯೋಜನೆಯನ್ನು ರೂಪಿಸುವುದು-ಇವೇ ಮೊದಲಾದವುಗಳು ಒಬ್ಬ ಅಧಿಕಾರಿಯ ಅಂದರೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ನಿಯಂತ್ರಣಕ್ಕೆ ಬಂದುವು.

(3) ಕಲ್ಕತ್ತ, ಬೊಂಬಾಯಿ ಮತ್ತು ಮದರಾಸುಗಳಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆ.

(4) ದೇಶಾದ್ಯಂತ ವರ್ಗೀಕೃತ ಶಾಲೆಗಳ ಜಾಲವನ್ನು ಸ್ಥಾಪಿಸುವುದು. ಒಂದು ಕೊನೆಯಲ್ಲಿ ವಿಶ್ವವಿದ್ಯಾಲಯಗಳು ಮತ್ತು ಮಾನ್ಯತೆ ಪಡೆದ ಕಾಲೇಜುಗಳು, ನಂತರ

ಇಂಗ್ಲೀಷ್ ಮಾಧ್ಯಮದ ಮೂಲಕವೋ, ದೇಶಭಾಷೆಗಳ ಮೂಲಕವೋ ಶಿಕ್ಷಣ ಕೊಡುತ್ತಿದ್ದ ಪ್ರೌಢಶಾಲೆಗಳು, ಎಲ್ಲಕ್ಕಿಂತ ಕೆಳಹಂತದಲ್ಲಿ ದೇಶೀಯ ಪ್ರಾಥಮಿಕ ಶಾಲೆಗಳು ಇರುವುವು. ಈ ಎರಡೂ ರೀತಿಯ ಶಾಲೆಗಳನ್ನು ಅವುಗಳ ಅಂತರ ಹೋಗಲಾಡಿಸಿ ಒಂದೇ ಸಮನಾಗಿ ನೋಡುವುದು ನಮ್ಮ ಗುರಿ ಎಂದು ಪರಿಪತ್ರದಲ್ಲಿ ಹೇಳಿತ್ತು. ಪ್ರಾಥಮಿಕ ಶಾಲೆಗಳಿಗೆ ಅನುದಾನ ಸಲಹೆ ಮೂಡಿತು.

(5) ಉತ್ತಮ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕೊಡುವುದು.

(6) ಶಾಲೆಗಳು ಉತ್ತಮ ಶಿಕ್ಷಕರ ಸೇವೆ ಪಡೆಯಲು ತರಬೇತು ವ್ಯವಸ್ಥೆಗೆ ಸಲಹೆ ಮಾಡಿತು.

(7) ಶಿಕ್ಷಣ ಮತ್ತು ಉದ್ಯೋಗ.

(8) ಶಿಕ್ಷಣಕ್ಕೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆಯೂ ಅಂದರೆ ಮಹಿಳಾಶಿಕ್ಷಣ, ದೇಶಭಾಷೆಗಳಲ್ಲಿ ಪಠ್ಯಪುಸ್ತಕಗಳ ರಚನೆ, ವೃತ್ತಿಶಿಕ್ಷಣ ಕಾಲೇಜುಗಳು ಮತ್ತು ಕೈಗಾರಿಕಾ ತರಬೇತು ಶಾಲೆಗಳನ್ನು ಪ್ರಾರಂಭಿಸುವುದು ಮುಂತಾದವುಗಳ ಬಗ್ಗೆಯೂ ಸಲಹೆ ನೀಡಿತು.

ಪರಿಪತ್ರದ ಪ್ರಾಮುಖ್ಯತೆ

ಈ ಪರಿಪತ್ರವನ್ನು ಭಾರತದ ಶಿಕ್ಷಣನೀತಿ ರೂಪಿಸಲು ಪ್ರಯತ್ನಿಸಿದ "ಮ್ಯಾಗ್ನಾಕಾರ್ಟ" ಎಂದು ಕೆಲವರು ಹೇಳುವುದು ಅತ್ಯುಕ್ತಿಯೇ ಸರಿ. ಇದು ಭಾರತದಲ್ಲಿ ಆಧುನಿಕ ಶಿಕ್ಷಣಪದ್ಧತಿಯ ಪ್ರಾರಂಭಕ್ಕೆ ಬುನಾದಿಯಾಯಿತೇ ವಿನಾ ಈ ದೇಶಕ್ಕೆ ಒಂದು ರಾಷ್ಟ್ರೀಯ ಶಿಕ್ಷಣನೀತಿ ರೂಪಿಸಲು ಸಹಕಾರಿಯಾಗಲಿಲ್ಲ. ಅದರ ಸಲಹೆಗಳಲ್ಲಿ ಕಾಣುವುದು ಇಂಗ್ಲೀಷ್ ಶಿಕ್ಷಣಪದ್ಧತಿಯ ಛಾಯೆಯೇ ವಿನಾ ಅದರಲ್ಲಿ ಭಾರತೀಯ ಛಾಯೆ ಇರಲಿಲ್ಲ. ಪರಿಪತ್ರದ ಸಲಹೆಗಳನ್ನು ಸರ್ಕಾರ ದೃಢಸಂಕಲ್ಪದಿಂದ ಅನುಷ್ಠಾನಕ್ಕೆ ತರಲಿಲ್ಲ. ಅತಿಮುಖ್ಯವಾದ ಸಲಹೆಗಳನ್ನು ದೀರ್ಘಕಾಲ ಅನುಷ್ಠಾನಕ್ಕೆ ತರಲೇ ಇಲ್ಲ; ಮತ್ತೆ ಕೆಲವನ್ನು ವಿಕೃತರೂಪದಲ್ಲಿ ಅನುಷ್ಠಾನಕ್ಕೆ ತಂದರು; ಇನ್ನೂ ಕೆಲವನ್ನು ಅನುಷ್ಠಾನಕ್ಕೆ ತರಲೇ ಇಲ್ಲ. ದೇಶಭಾಷೆಗಳಿಗೆ ಉತ್ತೇಜನ ಕೊಡಬೇಕೆಂಬ ಸಲಹೆ ಬಹುಕಾಲ ಭಾರತೀಯರಿಗೆ ಕೇವಲ ಆಸೆಯಾಗಿಯೇ ಉಳಿಯಿತು. ಖಾಸಗಿ ಶಿಕ್ಷಣಸಂಸ್ಥೆಗಳಿಗೆ ಅನುದಾನ ಕೊಡುವುದರ ಮೂಲಕ ಖಾಸಗಿ ಶಾಲೆಗಳು ಹೆಚ್ಚು ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬರುವಂತೆ ಮಾಡಿ ಸರ್ಕಾರ ಕ್ರಮೇಣ ಶಿಕ್ಷಣ ಚಟುವಟಿಕೆಗಳಲ್ಲಿ ನೇರ ಪಾತ್ರವಹಿಸುವುದರಿಂದ ಹಿಂದೆ ಸರಿಯಬೇಕೆಂಬುದು ಸಲಹೆಯಾಗಿಯೇ ಉಳಿಯಿತು.

ಪ್ರತಿಯೊಬ್ಬ ವ್ಯಕ್ತಿಗೂ ಆತನ ಅಂತಸ್ತಿಗನುಗುಣವಾದ ಶಿಕ್ಷಣವ್ಯವಸ್ಥೆ ಆಗಬೇಕೆಂಬ ಸಲಹೆ ವಿಕ್ಟೋರಿಯಾ ಯುಗದ ಸಾಮಾಜಿಕ ವ್ಯವಸ್ಥೆಯ ಫಲ. ಆದರೆ ಈ ಸಲಹೆ ಸರ್ವರಿಗೂ ಸಮಾನ ಅವಕಾಶಬೇಕೆಂಬ ಕಾಲದ ಕೂಗಿನಲ್ಲಿ ತೇಲಿ ಹೋಗುತ್ತದೆ.

1882ರ ಶಿಕ್ಷಣ ಆಯೋಗ

1882ರ ಶಿಕ್ಷಣಆಯೋಗದ ವ್ಯಾಪ್ತಿಯಿಂದ ವಿಶ್ವವಿದ್ಯಾಲಯ ಶಿಕ್ಷಣ ಮತ್ತು ವೃತ್ತಿಶಿಕ್ಷಣ ಕ್ಷೇತ್ರದ ಅಧ್ಯಯನ ಹೊರಗುಳಿಯಿತು. ಆಯೋಗ ಶಾಲಾ ಶಿಕ್ಷಣ, ಅದರಲ್ಲೂ ಪ್ರಾಥಮಿಕ ಶಿಕ್ಷಣದ ಅಧ್ಯಯನಕ್ಕೆ ಹೆಚ್ಚು ಗಮನ ಕೊಡಬೇಕಾಗಿತ್ತು.

ಆಯೋಗ ಪ್ರೌಢಶಾಲಾ ಶಿಕ್ಷಣ ಕ್ಷೇತ್ರದ ವಿಸ್ತರಣೆಯ ಜವಾಬ್ದಾರಿಯನ್ನು ಖಾಸಗಿ

ಪ್ರಯತ್ನಕ್ಕೆ ವಹಿಸಿ ಸರ್ಕಾರ ಆ ಕ್ಷೇತ್ರದಿಂದ ಹಿಂದೆ ಸರಿಯಬೇಕು; ಪ್ರಾಥಮಿಕ ಶಿಕ್ಷಣ ಪ್ರೌಢಶಾಲಾ ಶಿಕ್ಷಣಕ್ಕಿಂತ ಭಿನ್ನವಾಗಿದ್ದು ಅದು ಸರ್ಕಾರದ ಕರ್ತವ್ಯ; ಆದುದರಿಂದ ಸರ್ಕಾರ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂತೆಗೆಯುವ ಪೋಷಕರ ಮೇಲೆ ಬಲಪ್ರಯೋಗ ಮಾಡಲು ಶಾಸನ ಅಗತ್ಯ ಎಂದು ಅಭಿಪ್ರಾಯಪಟ್ಟಿತು. ಸರ್ಕಾರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅನುಷ್ಠಾನಕ್ಕೆ ತರಬೇಕೆಂಬುದೇ ಈ ಸಲಹೆಯ ಅರ್ಥ. ಈ ಆಯೋಗದ ಸಲಹೆಗಳು ಶಿಕ್ಷಣನೀತಿ, ಶಾಸನ ಮತ್ತು ಆಡಳಿತ, ದೇಶೀಯ ಶಾಲೆಗಳಿಗೆ ಉತ್ತೇಜನ, ಶಾಲಾ ಆಡಳಿತ, ಶಿಕ್ಷಕರ ತರಬೇತು ಮತ್ತು ಹಣಕಾಸು ಒದಗಿಸುವ ವಿಷಯಗಳಿಗೆ ಸಂಬಂಧಿಸಿದ್ದುವು. ಪ್ರಾಥಮಿಕ ಶಿಕ್ಷಣವನ್ನು ಜಿಲ್ಲಾ ಮಂಡಳಿಗಳು ಮತ್ತು ಪುರಸಭೆಗಳ ಜವಾಬ್ದಾರಿಗೆ ವರ್ಗಾಯಿಸಬೇಕು; ದೇಶೀಯ ಶಾಲೆಗಳನ್ನು ಸುಧಾರಿಸಿ ಅವುಗಳನ್ನು ಆಧುನಿಕ ಪದ್ಧತಿಯಲ್ಲಿ ವಿಲೀನಗೊಳಿಸಬೇಕು. ಶಿಕ್ಷಣ ಗುಣಮಟ್ಟವು ಎಲ್ಲಾ ಪ್ರಾಂತ್ಯಗಳಲ್ಲೂ ಒಂದೇ ಆಗಿರಬೇಕು. ಬೋಧನೆ ಪರಿಸರವನ್ನು ಆಧರಿಸಿರಬೇಕು. ವ್ಯವಸ್ಥಾಪಕರು ಪಠ್ಯಪುಸ್ತಕಗಳನ್ನು ಆಯ್ಕೆ ಮಾಡಲು ಸ್ವತಂತ್ರರಿರಬೇಕು. ಶಾಲೆಗಳು ಕೆಲಸ ಮಾಡುವ ಋತುಗಳಲ್ಲಿ ಬದಲಾವಣೆ ಆಗಬೇಕು ಮತ್ತು ಶಿಕ್ಷಣ ಮಾಧ್ಯಮ ಮಾತೃಭಾಷೆ ಆಗಿರಬೇಕು- ಇವು ಮುಖ್ಯ ಸಲಹೆಗಳು.

ಸಲಹೆಗಳ ದೋಷಗಳು

ಆಯೋಗದ ಸಲಹೆಗಳು ಭಾರತಕ್ಕೊಂದು ರಾಷ್ಟ್ರೀಯಶಿಕ್ಷಣನೀತಿಯನ್ನು ರೂಪಿಸಲು ವಿಫಲವಾದವು. ಎಲ್ಲಾ ಹಂತದಲ್ಲೂ ಶಿಕ್ಷಣ ಪುಸ್ತಕಜ್ಞಾನಕ್ಕೆ ಪ್ರಾಧಾನ್ಯತೆ ಕೊಟ್ಟಿತು. ದೇಶದಲ್ಲಿ ಕೃಷಿ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಗೆ ನೆರವಾಗಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ಶಿಕ್ಷಣಪದ್ಧತಿಯನ್ನು ರೂಪಿಸಲು ಪ್ರಯತ್ನಿಸಲಿಲ್ಲ. ಅಗತ್ಯ ಭೂಮಿಕೆಯನ್ನು ಸಿದ್ಧಪಡಿಸದೆ ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿದುದರಿಂದ ಪ್ರಾಥಮಿಕ ಶಿಕ್ಷಣದ ಪ್ರಗತಿ ಕುಂಠಿತವಾಯಿತು.

ವಿಶ್ವವಿದ್ಯಾಲಯ ಆಯೋಗಗಳು

1902 ಮತ್ತು 1917ರ ಆಯೋಗಗಳು ಕೇವಲ ವಿಶ್ವವಿದ್ಯಾಲಯ ಹಂತದ ಶಿಕ್ಷಣ ವ್ಯವಸ್ಥೆಯನ್ನು ಪರಿಶೀಲಿಸಿ ವರದಿ ಕೊಡಬೇಕಾಗಿದ್ದುದರಿಂದ ಭಾರತಕ್ಕೆ ಸರಿಹೊಂದುವಂತಹ ರಾಷ್ಟ್ರೀಯ ಶಿಕ್ಷಣನೀತಿ ರೂಪಿಸಲು ನೆರವಾಗುವಂತಹ ವರದಿ ಕೊಡಲಿಲ್ಲ. ಆದರೆ 1917ರ ಆಯೋಗ ಇಂಟರ್‌ಮಿಡಿಯೇಟ್ ಹಂತದ ಎರಡು ವರ್ಷಗಳ ಶಿಕ್ಷಣ ಪ್ರೌಢಶಾಲೆಯಲ್ಲಿಯೇ ವ್ಯವಸ್ಥೆ ಆಗಬೇಕೆಂದು ಸಲಹೆ ಮಾಡಿತು.

ಹಾರ್ಟಾಗ್ ಸಮಿತಿ

1929ರಲ್ಲಿ ರಚಿಸಿದ ಸರ್. ಫಿಲಿಪ್ ಹಾರ್ಟಾಗ್ ಸಮಿತಿ ವಿಶ್ವವಿದ್ಯಾಲಯ ಶಿಕ್ಷಣದಿಂದ ಪ್ರಯೋಜನ ಪಡೆಯಲು ಸಮರ್ಥರಲ್ಲದವರು ಉನ್ನತ ಶಿಕ್ಷಣಸಂಸ್ಥೆಗಳ ಬಾಗಿಲು ತಟ್ಟುವುದನ್ನು ತಡೆಗಟ್ಟಲು ಮಾಧ್ಯಮಿಕ ಶಾಲಾ ಹಂತದಲ್ಲಿಯೇ ವೃತ್ತಿಶಿಕ್ಷಣದ ಕಡೆಗೆ ಆಕರ್ಷಿಸಲು ಆ ಹಂತದಲ್ಲಿ ವೃತ್ತಿಶಿಕ್ಷಣ ಪ್ರಾರಂಭಿಸಬೇಕು. ಶಾಲಾಹಂತದಲ್ಲಿ ವೈವಿಧ್ಯತೆಯಿಂದ ಕೂಡಿದ ಅಭ್ಯಾಸ ಕ್ರಮ ಇರಬೇಕು (Diversification of courses). ಶಿಕ್ಷಕರ ತರಬೇತಿನ ಅವಧಿ 9 ತಿಂಗಳು ಏನೇನೂ ಸಾಲದು. ಅದನ್ನು ಹೆಚ್ಚಿಸಬೇಕು. ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದ ಸಲಹೆ ಬಿಟ್ಟರೆ ಉಳಿದವು ಮಹತ್ವದವುಗಳೇನಲ್ಲ.

ವುಡ್ ಮತ್ತು ಅಬ್ಬಾಟ್ ಸಮಿತಿ

1936ರ ವುಡ್ ಮತ್ತು ಅಬ್ಬಾಟ್ ಸಮಿತಿಯ ವರದಿಯೂ ಸಮಗ್ರವಾದುದೇನೂ ಆಗಿರಲಿಲ್ಲ. ಅದರ ಮುಖ್ಯ ಸಲಹೆಗಳು:-

1. ಮಾಧ್ಯಮಿಕ ಶಾಲೆಗಳ ಪಠ್ಯವಸ್ತು ಪರಿಸರ ಮತ್ತು ಅದರ ಆವಶ್ಯಕತೆಗಳನ್ನು ಆಧರಿಸಿರ ಬೇಕು.
2. ಮಾತೃಭಾಷೆಯು ಶಿಕ್ಷಣ ಮಾಧ್ಯಮ ಆಗಬೇಕು.
3. ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಸಬೇಕು (ಅದೂ ಪ್ರೌಢಶಾಲೆಗಳಲ್ಲಿ)
4. ಕಲೆ ಮತ್ತು ಕೈಕಸುಬುಗಳನ್ನು ಪ್ರೌಢಶಾಲೆಯ ಪಠ್ಯವಸ್ತುವಿನಲ್ಲಿ ಅಳವಡಿಸಬೇಕು.

ಸಮಿತಿಯ ಅತಿಮುಖ್ಯವಾದ ಸಲಹೆ ಎಂದರೆ ಸಾಮಾನ್ಯ ಶಿಕ್ಷಣಸಂಸ್ಥೆಗಳಿಗೆ ಸಮಾನಾಂತರವಾಗಿ ವೃತ್ತಿಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಬೇಕೆಂಬುದು. ಈ ಸಲಹೆಯ ಫಲವಾಗಿ ಬಹುವೃತ್ತಿವಿದ್ಯಾಶಾಲೆಗಳು (Polytechnic Institutions) ಅಸ್ತಿತ್ವಕ್ಕೆ ಬಂದುವು. ಸತತ ಸಲಹೆಯ ಫಲವಾಗಿ ನಲವತ್ತರ ದಶಕದಲ್ಲಿ ಪ್ರೌಢಶಾಲಾ ಹಂತದಲ್ಲಿ ಮಾತೃಭಾಷೆಯನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡಲು ಪ್ರಯತ್ನ ನಡೆದು ಸಫಲವಾಯಿತು.

ಮಾಧ್ಯಮಿಕ ಶಾಲಾ ಹಂತದಲ್ಲಿ ವೃತ್ತಿಶಿಕ್ಷಣ ಪ್ರಾರಂಭಿಸಿದರೂ ಅವುಗಳನ್ನು ಆಯ್ಕೆಮಾಡಿಕೊಂಡವರಿಗೆ ಅದೇ ಕ್ಷೇತ್ರದಲ್ಲಿ ತರಬೇತನ್ನು ಮುಂದುವರಿಸಲು ಸೌಲಭ್ಯ ಗಳಿಲ್ಲದುದರಿಂದ ಅದು ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಫಲವಾಯಿತು.

ಒಟ್ಟಿನಲ್ಲಿ ಇದುವರೆಗೆ ನೇಮಕಗೊಂಡ ಆಯೋಗಗಳು ಮತ್ತು ಸಮಿತಿಗಳು ಭಾರತದ ಆರ್ಥಿಕ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯ ಬೆಳಕಿನಲ್ಲಿ ಪರಿಸ್ಥಿತಿಯನ್ನು ಸಮಗ್ರವಾಗಿ ಅಧ್ಯಯನ ಮಾಡಿ ರಾಷ್ಟ್ರವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಲು ನೆರವಾಗುವಂತಹ ರಾಷ್ಟ್ರೀಯ ಶಿಕ್ಷಣನೀತಿಯನ್ನು ರೂಪಿಸಲು ಮಾರ್ಗದರ್ಶಕವಾಗ ಬಲ್ಲ ವರದಿಗಳನ್ನು ಕೊಡಲಿಲ್ಲ. ಸರ್ಕಾರವೂ ಕೂಡ ಆ ಬಗ್ಗೆ ಆಸಕ್ತಿಯಿಂದ ಚಿಂತಿಸಲಿಲ್ಲ. ಇವೆಲ್ಲದರ ಫಲವಾಗಿ ಸ್ವಾತಂತ್ರ್ಯ ಬರುವ ವೇಳೆಗೆ ಅನಕ್ಷರತೆ ಬೃಹತ್‌ಸಮಸ್ಯೆಯಾಗಿ ಬೆಳೆಯಿತು; ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಬೆಳೆಯಿತು. ಶಿಕ್ಷಣ ಯುವಕರನ್ನು ನಿರ್ವೀರ್ಯರನ್ನಾಗಿ ಮಾಡಿತು. ದುಡಿಮೆಯ ಬಗ್ಗೆ ಕೀಳರಿಮೆ ಬೆಳೆಸಿತು. ಉನ್ನತಶಿಕ್ಷಣ ಪಡೆದವರು ತಾವು ಹುಟ್ಟಿ ಬೆಳೆದ ಪರಿಸರವನ್ನೇ ಕೀಳಾಗಿ ನೋಡುವ ಮನೋಭಾವ ಬೆಳೆಯಿತು. ಇದು ಬ್ರಿಟಿಷರು ಪ್ರಾರಂಭಿಸಿದ ಶಿಕ್ಷಣಪದ್ಧತಿಯ ಫಲ.

ಎರಡನೆಯ ವಿಶ್ವಮಹಾಯುದ್ಧ ಮುಗಿಯುತ್ತಿದ್ದಂತೆಯೇ ಯುದ್ಧಾನಂತರದ ಶಿಕ್ಷಣದ ಅಭಿವೃದ್ಧಿ ಯೋಜನೆ ಸಿದ್ಧಪಡಿಸಲು ಆಗ ಕೇಂದ್ರಸರ್ಕಾರದಲ್ಲಿ ಶಿಕ್ಷಣಸಲಹೆಗಾರರಾಗಿದ್ದ ಸರ್‌ಜಾನ್ ಸಾರ್ಜೆಂಟ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಒಂದು ಸಮಿತಿ ರಚಿಸಿ ವರದಿ ಕೊಡುವಂತೆ ಆದೇಶಿಸಿತು.

ಭಾರತದಲ್ಲಿ ಮುಂಬರುವ ನಲವತ್ತು ವರ್ಷಗಳಲ್ಲಿ ಇಂಗ್ಲೆಂಡ್‌ನಲ್ಲಿ ಆ ವೇಳೆಗಾಗಲೆ ತಲುಪಿದ್ದ ಶಿಕ್ಷಣಮಟ್ಟಕ್ಕೆ ಸರಿ ಹೋಲುವಂತೆ ಶಿಕ್ಷಣಪ್ರಗತಿ ಸಾಧಿಸುವುದು ಸಮಿತಿ ಮಾಡಿರುವ ಸಲಹೆಗಳ ಉದ್ದೇಶವಾಗಿತ್ತು. ಸಮಿತಿಯ ಸಲಹೆಗಳು:

1. 3 ರಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ಶಿಶುವಿಹಾರ ಶಿಕ್ಷಣ.

2. 6 ರಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೂ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅಥವಾ ಮೂಲಶಿಕ್ಷಣ ವ್ಯವಸ್ಥೆ : ಎರಡು ಹಂತ 6-11 ಮತ್ತು 11-14.
3. 11 ರಿಂದ 17 ವರ್ಷ ವಯೋಮಿತಿಯ ಆಯ್ದ ಮಕ್ಕಳಿಗೆ ಪ್ರೌಢಶಾಲಾ ಶಿಕ್ಷಣ.
4. ಉನ್ನತ ಪ್ರೌಢಶಾಲಾ ನಂತರ ಆಯ್ದ ಕೆಲವರಿಗೆ ವಿಶ್ವವಿದ್ಯಾಲಯ ಶಿಕ್ಷಣ.
5. ಅಗತ್ಯ ಪ್ರಮಾಣದಲ್ಲಿ ಪೂರ್ಣಾವಧಿ ಇಲ್ಲವೆ ಅಂಶಕಾಲಿಕ ತಾಂತ್ರಿಕ, ವಾಣಿಜ್ಯ ಮತ್ತು ಕಲಾಶಿಕ್ಷಣ ವ್ಯವಸ್ಥೆ.
6. 20 ವರ್ಷಗಳಲ್ಲಿ ಅನಕ್ಷರತೆಯ ನಿರ್ಮೂಲನ ಮತ್ತು ಪುಸ್ತಕಭಂಡಾರಗಳ ವ್ಯವಸ್ಥೆ.
7. ಈ ಯೋಜನೆಯ ಅನುಷ್ಠಾನ ಮತ್ತು ಮುಂದುವರಿಕೆಗೆ ಸಹಕಾರಿಯಾಗುವಂತೆ ಶಿಕ್ಷಕರ ತರಬೇತು ವ್ಯವಸ್ಥೆ ಮಾಡುವುದು.
8. ಕಡ್ಡಾಯ ದೈಹಿಕಶಿಕ್ಷಣ, ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆ ಮತ್ತು ಪೌಷ್ಟಿಕ ಆಹಾರದ ಅಗತ್ಯವಿರುವ ಮಕ್ಕಳಿಗೆ ಹಾಲು ಮತ್ತು ಮಧ್ಯಾಹ್ನದ ಊಟದ ವ್ಯವಸ್ಥೆ.
9. ಉದ್ಯೋಗ ಸಂಸ್ಥೆಗಳ ಪ್ರಾರಂಭ (Employment Bureaus)
10. ದೈಹಿಕ ಮತ್ತು ಮಾನಸಿಕ ವಿಕಲತೆಯ ಮಕ್ಕಳ ಶಿಕ್ಷಣ.
11. ಸಾಮಾಜಿಕ ಮತ್ತು ಮನರಂಜನೆಯ ಚಟುವಟಿಕೆಗಳ ಉದಾರ ವ್ಯವಸ್ಥೆ.

ವರದಿಯ ದೋಷಗಳು

ಸಮಿತಿ ಮೂಲಶಿಕ್ಷಣವನ್ನು ರಾಷ್ಟ್ರೀಯ ಶಿಕ್ಷಣಪದ್ಧತಿ ಎಂದು ಒಪ್ಪಿ ಸಲಹೆ ಮಾಡಿದರೂ ಮೂಲತತ್ತ್ವಗಳಲ್ಲಿ ಬದಲಾವಣೆ ಏನಾದರೂ ಆಗಬೇಕೆ; ಅದನ್ನು ಒಮ್ಮೆಗೆ ಅನುಷ್ಠಾನಕ್ಕೆ ತರಬೇಕೇ ಇಲ್ಲವೆ, ಹಂತಹಂತವಾಗಿ ಅನುಷ್ಠಾನಕ್ಕೆ ತರಬೇಕೆ ಎಂಬ ಅಂಶಗಳ ಬಗ್ಗೆ ಆಲೋಚಿಸಲಿಲ್ಲ. ಅಗತ್ಯ ಸಿದ್ಧತೆ ಇಲ್ಲದೆ ಏಕಕಾಲದಲ್ಲಿ ಎಲ್ಲ ಶಾಲೆಗಳನ್ನು ಮೂಲಶಿಕ್ಷಣಶಾಲೆಗಳೆಂದು ಪರಿವರ್ತಿಸಿದುದರಿಂದ ಅದು ಯಶಸ್ಸು ಗಳಿಸಲಿಲ್ಲ.

ಆಯ್ದ ಕೆಲವರಿಗೆ ಮಾತ್ರ ಉನ್ನತ ಪ್ರೌಢಶಾಲಾ ಶಿಕ್ಷಣ ಪಡೆಯಲು ಅವಕಾಶ ಇರಬೇಕೆಂಬ ಸಲಹೆ ಇಂಗ್ಲೆಂಡ್‌ನಲ್ಲಿದ್ದ ವ್ಯವಸ್ಥೆಯ ಪ್ರತಿಧ್ವನಿ. ಆ ದೇಶದಲ್ಲಿ ಪರೀಕ್ಷೆ ನಡೆಸಿ ಅವರಲ್ಲಿ ಪ್ರಥಮ ಶೇಕಡ 15 ಅಥವಾ 20 ಮಂದಿಯನ್ನು ಸಾಮಾನ್ಯಶಿಕ್ಷಣ ಪಡೆಯಲು ಗ್ರಾಮರ್ ಶಾಲೆಗಳಿಗೆ ಆಯ್ಕೆ ಮಾಡುವರು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲದ ಬಹುಮಟ್ಟಿಗೆ ಸಮಾನ ಸೌಲಭ್ಯಗಳನ್ನು ಹೊಂದಿರುವ ಆ ದೇಶದಲ್ಲಿ ಇದು ಸಾಧ್ಯ. ಅಲ್ಲಿಯೂ ಇದು 1944ರ ಶಿಕ್ಷಣಕಾಯಿದೆಯ ಫಲ ಕೆಳವರ್ಗದವರ ಮಕ್ಕಳಿಗೆ ಉನ್ನತಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ಅನುಷ್ಠಾನಕ್ಕೆ ತಂದುದು. ಇದೇ ನಿಯಮವನ್ನು ಭಾರತದಲ್ಲಿ ಅನುಷ್ಠಾನಕ್ಕೆ ತರಲು ಸಲಹೆ ಮಾಡಿದುದು ಭಾರತದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಮಾಡಿದ ನಿರ್ಧಾರ.

ಈ ದೇಶದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕ ಜೀವನಕ್ಕೆ

ಸಂಬಂಧಿಸಿದಂತೆ ಅಸಮಾನತೆ ಇದೆ. ಶಿಕ್ಷಣದ ಸಂಪರ್ಕವೇ ಇಲ್ಲದ ಶತಶತಮಾನಗಳಿಂದ ತುಳಿತಕ್ಕೆ, ಶೋಷಣೆಗೆ ಒಳಗಾದ ಸಮಾಜಗಳಿವೆ. ಅವರಿಗೆ ಈ ನೀತಿ ಹಾನಿ ಉಂಟು ಮಾಡುತ್ತದೆ ಎಂಬುದನ್ನು ಪರಿಶೀಲಿಸಿಲ್ಲ. ಅವರಿಗೂ ಸಮಾನ ಸೌಲಭ್ಯಗಳನ್ನು ಒದಗಿಸಿ ಸಮಾನ ಅವಕಾಶಗಳಿಂದ ಲಾಭ ಪಡೆಯುವಂತೆ ಮಾಡಲು ಏನು ಮಾಡಬೇಕೆಂಬ ಬಗ್ಗೆ ಯೋಚಿಸಲೇ ಇಲ್ಲ. ಆ ವರ್ಗದ ಜನರ ಮಕ್ಕಳಲ್ಲೂ ಬುದ್ಧಿಶಕ್ತಿಯುಳ್ಳವರು ಇದ್ದಾರೆ; ಅಂತಹವರನ್ನು ಗುರುತಿಸಿ ಅವರಿಗೆ ವಿಶೇಷ ವ್ಯವಸ್ಥೆಮಾಡಿ ಅವರ ಬುದ್ಧಿಶಕ್ತಿ ಪೂರ್ಣವಾಗಿ ವಿಕಾಸವಾಗಿ ಸಮಾಜದಲ್ಲಿ ಮೇಲೆ ಬಂದು ದೇಶಕ್ಕೂ ತಮ್ಮ ಕಾಣಿಕೆ ಸಲ್ಲಿಸುವಂತೆ ಮಾಡಲೂ ಯಾವುದೇ ಸಲಹೆ ಮಾಡಲಿಲ್ಲ.

ಇಪ್ಪತ್ತು ವರ್ಷಗಳಲ್ಲಿ ದೇಶದಲ್ಲಿ ಅನಕ್ಷರತೆಯನ್ನು ನಿರ್ಮೂಲನ ಮಾಡಿ ನವ ಸಾಕ್ಷರರು ತಾವು ಗಳಿಸಿದ ಸಾಕ್ಷರತೆಯನ್ನು ಉಳಿಸಿ ಬೆಳೆಸಿಕೊಳ್ಳಲು ಸಹಕಾರಿಯಾಗುವಂತೆ ಪುಸ್ತಕಭಂಡಾರಗಳನ್ನು ವ್ಯವಸ್ಥೆ ಮಾಡಬೇಕೆಂಬ ಸಲಹೆ ಉತ್ತಮವಾದುದಾದರೂ ಅದು ಅನುಷ್ಠಾನಕ್ಕೆ ಬರಲೇ ಇಲ್ಲ.

ಸಮಿತಿಯ ಎಲ್ಲ ಸಲಹೆಗಳನ್ನು ಅನುಷ್ಠಾನಕ್ಕೆ ತಂದಿದ್ದರೂ ನಲವತ್ತು ವರ್ಷಗಳ ನಂತರ ಭಾರತ ಇಂಗ್ಲೆಂಡ್‌ಗಿಂತ ನಲವತ್ತು ವರ್ಷಗಳಷ್ಟು ಹಿಂದುಳಿಯುತ್ತಿತ್ತು. ಈ ಪ್ರಾರಂಭದ ಪ್ರಸ್ತಾವನೆಯೇ ಪ್ರಜ್ಞಾವಂತ ಭಾರತೀಯರನ್ನು ಕೆರಳಿಸಿತು. ಇಂಗ್ಲೆಂಡ್ ಅಥವಾ ಮತ್ತಾವುದೇ ಮುಂದುವರಿದ ರಾಷ್ಟ್ರದ ಅಂದಿನ ಮಟ್ಟಕ್ಕೆ ಭಾರತವನ್ನು ಈ ಯೋಜನೆಯ ಮೂಲಕ ಮುನ್ನಡೆಸಿ ನಲವತ್ತು ವರ್ಷಗಳ ಕಾಲದಲ್ಲಿ ಅಭಿವೃದ್ಧಿಪಡಿಸುವ ಬದಲು ಭಾರತದ ಅಂದಿನ ಆರ್ಥಿಕ, ಸಾಮಾಜಿಕ, ಕೈಗಾರಿಕಾ, ಕೃಷಿ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಪರಿಶೀಲಿಸಿ ಈ ದೇಶದಲ್ಲಿ ಲಭ್ಯವಿರುವ ಮಾನವಶಕ್ತಿ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸಮಿತಿ ನಿಗದಿಮಾಡಿರುವ ಅವಧಿಗಿಂತಲೂ ಕಡಿಮೆ ಅವಧಿಯಲ್ಲಿ ಅಥವಾ ಅಷ್ಟೇ ಅವಧಿಯಲ್ಲಿ ತೀವ್ರಗತಿಯಲ್ಲಿ ಮುಂದೆ ಸಾಗುತ್ತಿರುವ ಮುಂದುವರಿದ ರಾಷ್ಟ್ರಗಳ ಮಟ್ಟಕ್ಕೆ ತರಬಲ್ಲ ಯೋಜನೆ ರೂಪಿಸಿದ್ದರೆ ಸಮಿತಿ ಎಲ್ಲರ ಪ್ರಶಂಸೆಗೂ ಒಳಗಾಗುತ್ತಿತ್ತು. ಸಮಿತಿಯ ನಿಲುವು ಪೂರ್ಣ ಆಶಾದಾಯಕವೂ ಅಲ್ಲದ, ಪೂರ್ಣ ನಿರಾಶಾದಾಯಕವೂ ಅಲ್ಲದ ಒಂದು ರೀತಿಯಲ್ಲಿ ಮಧ್ಯವರ್ತಿಯಾದುದು. ಅಂದರೆ ಈ ಸಲಹೆಗಳನ್ನು ಅನುಷ್ಠಾನಕ್ಕೆ ತಂದರೆ ಇಷ್ಟು ಅಭಿವೃದ್ಧಿ ಮಟ್ಟವನ್ನು ತಲುಪಬಹುದು ಎನ್ನುವುದು ಸಮಂಜಸ ನೀತಿಯೇನಲ್ಲ.

ಈ ಯೋಜನೆಗೆ ಬೇಕಾಗುವ ಹಣವನ್ನು ಲೆಕ್ಕಾಚಾರ ಮಾಡಿದೆ. ಬೇಕಾಗುವ ಒಟ್ಟು ಹಣ 31,260 ಲಕ್ಷ ರೂಪಾಯಿಗಳು. ಅದರಲ್ಲಿ 27,700 ಲಕ್ಷ ರೂಪಾಯಿಗಳು ಸಾರ್ವಜನಿಕ ಹಣ; ಉಳಿದುದು ಎಲ್ಲಿಂದ ಬರಬೇಕು? ನಲವತ್ತು ವರ್ಷಗಳ ಅವಧಿಯಲ್ಲಿ ಬೆಲೆಗಳು ಏರುಪೇರಿಲ್ಲದೆ ಒಂದೇ ಸಮನಾಗಿರುತ್ತವೆ; ರೂಪಾಯಿಕೊಳ್ಳುವ ಮೌಲ್ಯದಲ್ಲಿ ಬದಲಾವಣೆ ಏನೂ ಇರುವುದಿಲ್ಲ ಎಂಬ ನಂಬಿಕೆಯಿಂದ ಇಷ್ಟು ಹಣ ಬೇಕೆಂದು ಲೆಕ್ಕ ಹಾಕಿದೆ. ಈ ಸಲಹೆಗಳನ್ನು ಅನುಷ್ಠಾನಕ್ಕೆ ತರಲು ಈ ಹಣ ಏನೇನೂ ಸಾಲದಾಗಿತ್ತು ಎಂಬ ಅಂಶ ಈಗ ನಮಗೆ ತಿಳಿಯುತ್ತದೆ.

"ಈ ಯೋಜನೆಯ ಪ್ರಾಮುಖ್ಯತೆ ಏನು? ಇದು ರಾಷ್ಟ್ರೀಯ ಶಿಕ್ಷಣದ ಪ್ರಥಮ ಸಮಗ್ರ ಯೋಜನೆ; ಹಿಂದಿನ ಸರ್ಕಾರದ ಯೋಜನೆಗಳಲ್ಲಿ ಧ್ವನಿತವಾಗುವ ರಾಷ್ಟ್ರಗಳ

ಸಮೂಹದಲ್ಲಿ ಭಾರತ ಶೈಕ್ಷಣಿಕವಾಗಿ ಹಿಂದೆ ನಿಲ್ಲುವುದು ಎಂಬ ಭಾವನೆಯಿಂದ ಕೂಡಿಲ್ಲ; ಬೇರೆ ದೇಶಗಳು ಶಿಕ್ಷಣಕ್ಷೇತ್ರದಲ್ಲಿ ಏನು ಸಾಧಿಸಿವೆಯೋ ಅದು ಭಾರತದ ಶಕ್ತಿಗೆ ಸವಾಲೇನಲ್ಲ; ಅಷ್ಟನ್ನು ಸಾಧಿಸಬಹುದು" ಎಂದು ಪ್ರತಿಕ್ರಿಯಿಸಿರುವ ಕೆ.ಜಿ. ಸಯಿದೀನರ ಮಾತುಗಳು ಉತ್ಪ್ರೇಕ್ಷೆಯಿಂದ ಕೂಡಿವೆ. ಸಮಗ್ರ ಶಿಕ್ಷಣ ಯೋಜನೆ ಎಂದು ಒಪ್ಪಿಕೊಂಡರೂ ಅದು ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಲು ವಿಫಲವಾಗಿದೆ.

ಈ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರುವ ಮೊದಲೇ ರಾಷ್ಟ್ರ ಸ್ವತಂತ್ರವಾಯಿತು. ರಾಷ್ಟ್ರೀಯ ಶಿಕ್ಷಣನೀತಿಯ ರೂವಾರಿಗಳಾಗುವ ಅವಕಾಶ ಭಾರತೀಯರಿಗೇ ದೊರಕಿತು. ಈ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಿದ್ದೇವೆ ಎಂಬುದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸುವುದು ಅತಿ ಅಗತ್ಯ.

ಭಾರತ ಸ್ವಾತಂತ್ರ್ಯಗಳಿಸಿತು (15.8.1947)

ಲೋಕ ಮಲಗಿದಂದು ನೀ ನಟ್ಟನಡುರಾತ್ರಿ
ಎಚ್ಚರಾಂತೆ; ಅವಿಶ್ರಾಂತೆಯಾದೆ ಪುನರ್‌ಯಾತ್ರಿ.
ಸರ್ವಕಾಲ, ಸರ್ವದೇಶ, ಸರ್ವಮೋಕ್ಷ ಮಂತ್ರೀ
ಅಸ್ವತಂತ್ರ, ಸುಸ್ವತಂತ್ರೆಯಾದೆ ವಿಶ್ವತಂತ್ರೆ.

ದಿವಂಗತ ರಾಷ್ಟ್ರಕವಿ ಕುವೆಂಪು ಅವರು ಸ್ವಾತಂತ್ರ್ಯ ಬಂದ ಗಳಿಗೆಯಲ್ಲಿ ಎದೆ ತುಂಬಿ ಮೇಲಿನಂತೆ ಹಾಡಿದರು. ಅಂದು ನಾವು ಗುರಿ ಮುಟ್ಟಿದೆವು; ಆದರೆ ಅದೇ ನಮ್ಮ ಗುರಿಯಲ್ಲ. ನಮ್ಮ ಗುರಿ ಮುಟ್ಟಲು ಬಹುದೂರ ಪಯಣಿಸಬೇಕು. "ಭಾರತ ಬಡರಾಷ್ಟ್ರ; ಎಲ್ಲರಿಗೂ ಜೀವನದ ಅಗತ್ಯವಸ್ತುಗಳು ಅಂದರೆ, ಅನ್ನ ಬಟ್ಟೆ, ವಸತಿ, ಶಿಕ್ಷಣ, ನೈರ್ಮಲ್ಯ, ಆರೋಗ್ಯ, ಉದ್ಯೋಗ ಮತ್ತು ಕೆಲಸ ಇರಬೇಕು". ವಿಭಜನೆಯ ಪರಿಣಾಮವಾಗಿ 10 ದಶಲಕ್ಷ ಜನರು ಮನೆಮಾರುಗಳನ್ನು ಕಳೆದುಕೊಂಡು ನಿರ್ಗತಿಕರಾಗಿ ಬಂದವರನ್ನು ನೆಲೆಗೊಳಿಸಬೇಕಾಗಿತ್ತು. ಈ ಎಲ್ಲ ಸಮಸ್ಯೆಗಳನ್ನು ರಾಷ್ಟ್ರ ಎದುರಿಸಿದೆ. ಒಂದರೊಡನೊಂದು ಪೈಪೋಟಿಗೆ ನಿಂತ ಸಮಸ್ಯೆಗಳಲ್ಲಿ ಆದ್ಯತೆ ನಿರ್ಧರಿಸುವುದು ಕಷ್ಟವಾಯಿತು. ಇದರಿಂದಾಗಿ ಶಿಕ್ಷಣಕ್ಷೇತ್ರಕ್ಕೆ ಅಗತ್ಯ ಗಮನ ಕೊಡಲು ಸಾಧ್ಯವಾಗಲಿಲ್ಲ.

ವಿಶ್ವವಿದ್ಯಾಲಯ ಶಿಕ್ಷಣ ಆಯೋಗ

ಸ್ವಾತಂತ್ರ್ಯಾನಂತರ ನಾವು ಮಾಡಬೇಕಾಗಿದ್ದ ಪ್ರಥಮಕರ್ತವ್ಯ ಮಾನವಶಕ್ತಿಯ ತರಬೇತು ಮತ್ತು ವಿನಿಯೋಗ. ಈ ವಿಷಯಕ್ಕೆ ನಾವು ಅಗತ್ಯ ಗಮನ ಕೊಡಲಿಲ್ಲ. ಮೊದಲು ಉನ್ನತ ಶಿಕ್ಷಣದ ಕಡೆ ನಮ್ಮ ಗಮನ ಹರಿದು ದಿವಂಗತ ಡಾ|| ಎಸ್. ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ 1948ರಲ್ಲಿ ಸರ್ಕಾರ ವಿಶ್ವವಿದ್ಯಾಲಯ ಆಯೋಗ ರಚಿಸಿತು. ಆಯೋಗ ತನ್ನ ಪರಿಶೀಲನೆಯನ್ನು ಉನ್ನತಶಿಕ್ಷಣಕ್ಕೆ ಮಾತ್ರ ಸೀಮಿತಗೊಳಿಸಿ 1949ರಲ್ಲಿ ವರದಿ ಸಲ್ಲಿಸಿತು. ಇವು ಆಯೋಗದ ಸಲಹೆಗಳು:

1. ಶಾಲಾ ಶಿಕ್ಷಣದ ಅವಧಿ ಇಂಟರ್‌ಮೀಡಿಯೇಟ್ ಹಂತವೂ ಸೇರಿದಂತೆ 12 ವರ್ಷದ್ದಾಗಿರಬೇಕು; ಆನಂತರ 3 ವರ್ಷ ಅವಧಿಯ ಪದವಿಶಿಕ್ಷಣ.
2. ಆಗ ಅನುಷ್ಠಾನದಲ್ಲಿದ್ದ ಪದವಿ ಮತ್ತು ಇಂಟರ್‌ಮಿಡಿಯೇಟ್ ಹಂತದಲ್ಲಿದ್ದ ವಿಷಯ ಪ್ರಾವೀಣ್ಯತೆಯ ಕ್ರಮವನ್ನು ಸುಧಾರಿಸುವುದಕ್ಕಾಗಿ ಶಾಲಾ ಕಾಲೇಜುಗಳ

ಹಂತದಲ್ಲಿ ಸಾಮಾನ್ಯಶಿಕ್ಷಣ ಪ್ರಾರಂಭಿಸಬೇಕು; ವಿದ್ಯಾರ್ಥಿಗಳ ಸಾಮಾನ್ಯ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸಾಮಾನ್ಯ ಶಿಕ್ಷಣ ಮತ್ತು ವಿಷಯ ಪ್ರಾವೀಣ್ಯತೆಯ ಸಂಬಂಧಗಳನ್ನು ನಿರ್ಧರಿಸಬೇಕು.

3. ಆಯೋಗ ಜ್ಞಾನದ ದಿಗಂತಗಳನ್ನು ವಿಸ್ತರಿಸುವ ಉದ್ದೇಶದಿಂದ ವಿಶ್ವವಿದ್ಯಾಲಯಗಳು ಅನ್ವಯಿಕವಿಜ್ಞಾನ ವಿಷಯವನ್ನು ಕೈಗಾರಿಕೆ ಅಥವಾ ವಿಶ್ವವಿದ್ಯಾಲಯೇತರ ಸಂಸ್ಥೆಗಳಿಗೆ ಬಿಟ್ಟು, ಮೂಲ ಸಂಶೋಧನೆಯಲ್ಲಿ ತೊಡಗಬೇಕು.
4. ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದಂತೆಯೂ ಆಯೋಗ ವಿಶ್ವವಿದ್ಯಾಲಯಗಳ ಪಾತ್ರ ಕುರಿತಂತೆ ಗಮನ ಕೊಟ್ಟಿತು.
5. ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಎತ್ತಿಹಿಡಿಯಿತು.
6. ಒಕ್ಕೂಟದ ಭಾಷೆಗೆ ಸಂಬಂಧಿಸಿದಂತೆ ಪಶ್ಚಿಮಭಾಗದ ಹಿಂದಿ ಒಕ್ಕೂಟದ ಭಾಷೆಯಾಗಬೇಕು; ಭಾರತದ ಅಕಾಡೆಮಿಕ್ ಮತ್ತು ಬೌದ್ಧಿಕ ಜೀವನದಲ್ಲಿ ಆಂಗ್ಲಭಾಷೆಯ ಪ್ರಮುಖಸ್ಥಾನ ಮುಂದುವರೆಯುತ್ತದೆ ಎಂದು ಹೇಳಿ ಮುಂದುವರಿದು,
   (i) ಒಕ್ಕೂಟದ ಭಾಷೆಯನ್ನು ಅಭಿವೃದ್ಧಿಪಡಿಸಬೇಕು.
   (ii) ಅಂತರರಾಷ್ಟ್ರೀಯವಾಗಿರುವ ಪಾರಿಭಾಷಿಕ ಪದಗಳನ್ನೇ ಉಪಯೋಗಿಸಿಕೊಂಡು ಅವುಗಳ ಉಚ್ಚಾರಣೆಯನ್ನು ಭಾರತೀಯ ಭಾಷೆಗಳಿಗೆ ಅಳವಡಿಸಿಕೊಳ್ಳಬೇಕು.
   (iii) ಉನ್ನತಶಿಕ್ಷಣ ಹಂತದಲ್ಲಿ ಇಂಗ್ಲೀಷ್‌ಗೆ ಬದಲಾಗಿ ದೇಶಭಾಷೆಯನ್ನು ಆದಷ್ಟು ಶೀಘ್ರವಾಗಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕು.
   (iv) ತ್ರಿಭಾಷಾ ಸೂತ್ರ ಅನುಸರಿಸಬೇಕು.
   (v) ಇಂಗ್ಲೀಷನ್ನು ಪ್ರೌಢಶಾಲೆ ಮತ್ತು ವಿಶ್ವವಿದ್ಯಾಲಯ ಹಂತದಲ್ಲಿ ಅಭ್ಯಾಸಿಸಬೇಕು.
   (vi) ಗ್ರಾಮೀಣ ವಿಶ್ವವಿದ್ಯಾಲಯಗಳ ಸ್ಥಾಪನೆಯಾಗಬೇಕು ಎಂದು ಸಲಹೆ ಮಾಡಿತು.

ಈ ಆಯೋಗ ಭಾರತದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಪೂರೈಕೆ ಮಾಡಿ ಭಾರತವನ್ನು ಅಭಿವೃದ್ಧಿಪಥದಲ್ಲಿ ಮುನ್ನಡೆಸಲು ಸಮರ್ಥರಾದ ಯುವ ಶಕ್ತಿಯನ್ನು ತಯಾರು ಮಾಡಲು ಸಾಧ್ಯವಾಗುವಂತೆ ಉನ್ನತಶಿಕ್ಷಣ ವ್ಯವಸ್ಥೆ ಮಾಡಲು ಸಲಹೆ ನೀಡಿತು. ಆದರೆ ಆ ಹಂತದಲ್ಲಿ ಭಾರತೀಯ ಭಾಷೆಯೊಂದು ಶಿಕ್ಷಣ ಮಾಧ್ಯಮವಾಗಬೇಕೆಂದು ಸಲಹೆ ಮಾಡುತ್ತ ಆ ಭಾಷೆ ಸಂಸ್ಕೃತವೂ ಆಗಬಹುದು ಎಂದು ಹೇಳಿರುವುದು ಅನುಷ್ಠಾನ ಸಾಧ್ಯವಾದುದಲ್ಲ. ಏಕೆಂದರೆ ಆ ನೀತಿ ರಾಷ್ಟ್ರದ ಬಹುತೇಕ ಜನರು ಉನ್ನತ ಶಿಕ್ಷಣದಿಂದ ವಂಚಿತರಾಗುವಂತೆ ಮಾಡುತ್ತದೆ.

ಪ್ರೌಢಶಾಲಾ ಶಿಕ್ಷಣ ಆಯೋಗ

1952ರಲ್ಲಿ ಡಾ॥ ಎ. ಎಲ್. ಮೊದಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಆಯೋಗ ರಚನೆ ಆಯಿತು. ಅದರ ಕಲಾಪಗಳ ವ್ಯಾಪ್ತಿ ಪ್ರೌಢಶಾಲಾ ಶಿಕ್ಷಣಕ್ಕೆ ಮಾತ್ರ

ಸೀಮಿತವಾಗಿತ್ತು. ಆಯೋಗ 1953ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಈ ವರದಿ ಒಂದು ಅತಿಮುಖ್ಯವಾದ ಶೈಕ್ಷಣಿಕ ದಾಖಲೆ. ಇವು ಆಯೋಗದ ಸಲಹೆಗಳು:-

(1) ಶಾಲಾ ಶಿಕ್ಷಣದ ಅವಧಿಯನ್ನು 12 ರಿಂದ 11 ವರ್ಷಕ್ಕೆ ಇಳಿಸಿ ಆ ವೇಳೆಗೆ 17 ವರ್ಷ ವಯಸ್ಸಾಗಿರುವ ಭಾರತದ ಯುವಕರು ವಿಶ್ವವಿದ್ಯಾಲಯ ಹಂತದ ಶಿಕ್ಷಣ ಪಡೆಯಲು ಸಮರ್ಥರಾಗಿರುವರು. 12 ವರ್ಷಗಳಲ್ಲಿ ಕಲಿಯಬಹುದಾದ ಪಠ್ಯವಸ್ತುವನ್ನು ಪರಿಷ್ಕರಿಸುವುದರ ಮೂಲಕ ಹನ್ನೊಂದು ವರ್ಷದಲ್ಲಿ ಕಲಿಯಬಹುದು. ಪ್ರಾಥಮಿಕ ಶಿಕ್ಷಣದ ಅವಧಿ 7 ಅಥವಾ 8 ವರ್ಷ (ಎರಡು ಹಂತ ಮಾಡಿ 4+3 ಅಥವಾ 5+2 ಅಥವಾ 5+3) ಪ್ರೌಢಶಾಲಾ ಶಿಕ್ಷಣದ ಅವಧಿ 4 ಅಥವಾ 3 ವರ್ಷ.

ಅ) ತ್ರಿಭಾಷಾ ಸೂತ್ರ

ಆ) ಸಮಾಜ ಪಾಠಗಳು, ಸಾಮಾನ್ಯ ವಿಜ್ಞಾನ ಮತ್ತು ಗಣಿತ

ಇ) ಒಂದು ಕೈಕಸುಬು

ಈ) ಮೂರು ಅಡಿಷನಲ್ ವಿಷಯಗಳು (ಮಾನವಿಕ ವಿಷಯಗಳು, ವಿಜ್ಞಾನ, ತಾಂತ್ರಿಕ ವಿಷಯಗಳು, ವಾಣಿಜ್ಯ ವಿಷಯಗಳು, ಕೃಷಿ, ಲಲಿತಕಲೆಗಳು ಮತ್ತು ಗೃಹವಿಜ್ಞಾನ ಇವುಗಳಲ್ಲಿ ಮೂರು).

(2) ವಿವಿಧೋದ್ದೇಶ ಪ್ರೌಢಶಾಲೆಗಳ ಪ್ರಾರಂಭ. ವಿದ್ಯಾರ್ಥಿಗಳ ಅಭಿರುಚಿ ಮತ್ತು ಸಾಮರ್ಥ್ಯಗಳಿಗನುಗುಣವಾಗಿ ಶಿಕ್ಷಣವ್ಯವಸ್ಥೆ ಮಾಡುವ ದೃಷ್ಟಿಯಿಂದ ಪ್ರೌಢಶಾಲೆಗಳ ಪಠ್ಯಕ್ರಮವನ್ನು ವೈವಿಧ್ಯಪೂರ್ಣವಾದುದನ್ನಾಗಿ ಮಾಡಬೇಕೆಂದು ಸಲಹೆ ಮಾಡಿತು.

(3) ಸಮರ್ಥ ಶಿಕ್ಷಕರ ನೇಮಕ

(4) ಶಿಕ್ಷಣ ಮತ್ತು ವೃತ್ತಿಮಾರ್ಗದರ್ಶನ ವ್ಯವಸ್ಥೆ

ಅನೇಕ ರಾಜ್ಯಗಳು ಆಯೋಗದ ಸಲಹೆಗಳನ್ನು ಒಪ್ಪಿ ಅನುಷ್ಠಾನಕ್ಕೆ ತರಲೇ ಇಲ್ಲ. 11 ವರ್ಷಗಳ ಅವಧಿಯಲ್ಲಿ ಅಲ್ಲಿಯವರೆಗೆ 12 ವರ್ಷಗಳಲ್ಲಿ ಕಲಿಯುತ್ತಿದ್ದುದನ್ನು ಕಲಿಯಬೇಕೆಂಬ ಸಲಹೆ ಸಾಧುವಾಗಿರಲಿಲ್ಲ. ವಿವಿಧೋದ್ದೇಶ ಶಾಲೆಗಳಲ್ಲಿ ಕೈಕಸುಬು ಕಲಿತವರು ಮುಂದೇನು ಮಾಡಬೇಕೆಂಬ ಬಗ್ಗೆ ಆಯೋಗ ಯಾವುದೇ ಸಲಹೆ ನೀಡಿರಲಿಲ್ಲ.

ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಪ್ರಾಥಮಿಕಶಿಕ್ಷಣವನ್ನು ಪೂರ್ಣವಾಗಿ ಅಲಕ್ಷಿಸಿದೆವು ಎಂದರೆ ತಪ್ಪಾಗುವುದಿಲ್ಲ. ವಾಸ್ತವವಾಗಿ ಆದುದೂ ಹಾಗೆಯೇ. ಇದು ನಾವು ಮಾಡಿದ ದೊಡ್ಡ ಅಪರಾಧ.

1966ರ ಶಿಕ್ಷಣ ಆಯೋಗ

1966ನೇ ಇಸವಿ ಭಾರತದ ಶಿಕ್ಷಣ ಇತಿಹಾಸದಲ್ಲೊಂದು ಮೈಲಿಗಲ್ಲು. ಆ ವರ್ಷ 1964ರಲ್ಲಿ ನೇಮಕಗೊಂಡ ಶಿಕ್ಷಣ ಆಯೋಗದ ವರದಿ ಪ್ರಕಟವಾಯಿತು. ಆಯೋಗದಲ್ಲಿ ಮುಂದುವರಿದ ಪೌರಾತ್ಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಸದಸ್ಯರೂ ಇದ್ದರು. ಆಯೋಗ ಎಲ್ಲ ಹಂತದ ಮತ್ತು ಎಲ್ಲ ರೀತಿಯ ಶಿಕ್ಷಣ ವ್ಯವಸ್ಥೆಯನ್ನೂ ಪರಿಶೀಲಿಸಿ ಬೃಹತ್ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿತು. ಆಯೋಗದ ಸಲಹೆಗಳು ಉತ್ತಮವೂ ಕಾರ್ಯಸಾಧ್ಯವೂ ಆಗಿದ್ದವು.

ಆಯೋಗ ತನ್ನ ವರದಿಯ ಪ್ರಥಮ ವಾಕ್ಯದಲ್ಲಿಯೇ ವಿಷಯದ ಗಂಭೀರತೆಯನ್ನು

ವ್ಯಕ್ತಪಡಿಸಿದೆ. "ಭಾರತದ ಭವಿಷ್ಯ ಅವರ ತರಗತಿಯ ಕೋಣೆಗಳಲ್ಲಿ ರೂಪುಗೊಳ್ಳುತ್ತದೆ" - ಇದು ವರದಿಯ ಪ್ರಾರಂಭದ ವಾಕ್ಯ. ಇದು ಕೇವಲ ಆಲಂಕಾರಿಕ ವಾಕ್ಯವಲ್ಲ. ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದ ಮೇಲೆ ನಿಂತಿರುವ ಜಗತ್ತಿನಲ್ಲಿ ಶಿಕ್ಷಣ ಜನರ ಭದ್ರತೆ, ಪ್ರಗತಿಯ ಮಟ್ಟ ಮತ್ತು ಕಲ್ಯಾಣಗಳನ್ನು ನಿರ್ಧರಿಸುತ್ತದೆ. ರಾಷ್ಟ್ರದ ಪುನರ್ನಿರ್ಮಾಣ ನಮ್ಮ ಶಾಲಾ ಕಾಲೇಜುಗಳಿಂದ ಹೊರಬರುವ ಯುವಕರನ್ನವಲಂಬಿಸಿದೆ. ಈ ದೃಷ್ಟಿಯಿಂದ ನಾವು ತ್ವರಿತವಾಗಿ ಮಾಡಬೇಕಾಗಿರುವುದು:

- ❑ ರಾಷ್ಟ್ರದ ಪೂರ್ಣ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ಪುನರ್ಪರಿಶೀಲನೆ ಮಾಡಬೇಕು;
- ❑ ಈ ಕಾರ್ಯದಲ್ಲಿ ಶಿಕ್ಷಣ ತನ್ನ ಪಾತ್ರವನ್ನು ಸರಿಯಾಗಿ ನಿರ್ವಹಿಸಲು ಪ್ರಸ್ತುತ ಅಸ್ತಿತ್ವದಲ್ಲಿರುವ ಶಿಕ್ಷಣಪದ್ಧತಿಯಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಗುರುತಿಸಿ ಅವುಗಳ ಆಧಾರದ ಮೇಲೆ ಶಿಕ್ಷಣ ಕಾರ್ಯಕ್ರಮ ರೂಪಿಸಬೇಕು;
- ❑ ಈ ಕಾರ್ಯಕ್ರಮವನ್ನು ದೃಢಮನಸ್ಸಿನಿಂದ ಮತ್ತು ಉತ್ಸಾಹದಿಂದ ಅನುಷ್ಠಾನಕ್ಕೆ ತರಬೇಕು.

ರಾಷ್ಟ್ರದ ಅಭಿವೃದ್ಧಿಯ ವೇಗ ಹೆಚ್ಚಬೇಕಾದರೆ ಸ್ಪಷ್ಟವಾಗಿ ವ್ಯಾಖ್ಯಾನಿಸಿದ ಮತ್ತು ಮುಂದಾಲೋಚನೆ ಮತ್ತು ಧೈರ್ಯದಿಂದ ಕೂಡಿದ ಶಿಕ್ಷಣಪದ್ಧತಿ ಅಗತ್ಯ ಮತ್ತು ಶಿಕ್ಷಣವನ್ನು ಉಜ್ಜೀವನಗೊಳಿಸಿ, ಸುಧಾರಿಸಿ, ವಿಸ್ತರಣೆ ಮಾಡಲು ಬಲವಾದ ಪ್ರಯತ್ನ ಮಾಡಬೇಕು.

ಆಯೋಗ ಮುಂಬರುವ 20 ವರ್ಷಗಳಲ್ಲಿ ದೇಶದಲ್ಲಿನ ಜನಸಂಖ್ಯೆಯ ಬೆಳವಣಿಗೆ, ಆಹಾರ ಪದಾರ್ಥಗಳಲ್ಲಿ ಸ್ವಾವಲಂಬನ, ಆರ್ಥಿಕ ಬೆಳವಣಿಗೆ ಮತ್ತು ಪೂರ್ಣ ಉದ್ಯೋಗ, ಸಾಮಾಜಿಕ ಮತ್ತು ರಾಷ್ಟ್ರೀಯ ಭಾವೈಕ್ಯತೆ, ರಾಜಕೀಯ ಬೆಳವಣಿಗೆ, ಮಾನವ ಶಕ್ತಿಯ ತರಬೇತು, ಸಾಮಾಜಿಕ ಬದಲಾವಣೆಯ ಸಾಧನವಾಗಿ ಶಿಕ್ಷಣ, ಶಿಕ್ಷಣ ಮತ್ತು ಸಂಸ್ಕೃತಿಯ ಮುಖ್ಯ ಅಂಗವಾಗಿ ವಿಜ್ಞಾನ, ಕಾರ್ಯಾನುಭವ ಮತ್ತು ವೃತ್ತಿಶಿಕ್ಷಣ - ಇವೇ ಮುಂತಾದ ಅತಿಮುಖ್ಯ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪೂರ್ವ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯ ಹಂತದವರೆಗೆ ವಿವಿಧ ರೀತಿಯ ವೃತ್ತಿಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣಗಳೂ ಸೇರಿದಂತೆ ಸಮಗ್ರವಾಗಿ ಪರಿಶೀಲಿಸಿ ರಾಷ್ಟ್ರದ ಅಗತ್ಯಗಳನ್ನು ಆಧರಿಸಿ ಉತ್ಕೃಷ್ಟ ಸಲಹೆಗಳನ್ನು ನೀಡಿದೆ.

ಸ್ವಾತಂತ್ರ್ಯಾನಂತರ ನೇಮಕಗೊಂಡ ಈ ಮೂರೂ ಆಯೋಗಗಳ ಅಧ್ಯಕ್ಷರಿಗೆ ಮತ್ತು ಸದಸ್ಯರುಗಳಿಗೆ ಭಾರತದ ಸಂಸ್ಕೃತಿ, ದರ್ಶನ, ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಗಳ ಪ್ರತ್ಯಕ್ಷ ಅನುಭವ ಇದ್ದುದರಿಂದ ಅವುಗಳ ವರದಿಯಲ್ಲಿ, ಅದರಲ್ಲೂ ಮೊದಲೆರಡು ವರದಿಗಳಲ್ಲಿ ಕೆಲವು ಲೋಪದೋಷಗಳಿದ್ದರೂ, ಭಾರತದ ಶಿಕ್ಷಣ ನೀತಿಯಲ್ಲಿ ಭಾರತೀಯತೆಯನ್ನು ಉಂಟುಮಾಡಲು, ಅದು ನಮ್ಮ ರಾಜ್ಯಾಂಗದಲ್ಲಿ ಉಕ್ತವಾಗಿರುವ ಧ್ಯೇಯೋದ್ದೇಶಗಳನ್ನು ಪೂರೈಕೆ ಮಾಡಲು ಹೇಗೆ ವ್ಯವಸ್ಥೆಯಾಗಬೇಕೆಂಬ ಬಗೆಗೆ ಪೂರ್ಣಕಲ್ಪನೆಯಿದ್ದುದರಿಂದ ಅವುಗಳ ಸಲಹೆಗಳನ್ನು ಆಧರಿಸಿ ರಾಷ್ಟ್ರೀಯ ಶಿಕ್ಷಣ ನಿರೂಪಿಸಲು ಪ್ರಯತ್ನಿಸಿದರು. ಆ ಪ್ರಯತ್ನವೇ 1968ರ "ರಾಷ್ಟ್ರೀಯ ಶಿಕ್ಷಣ ನೀತಿ"ಯ ಪ್ರಕಟಣೆ.

ಶಿಕ್ಷಣದ ಸವಾಲು

1985ರಲ್ಲಿ ಪ್ರಕಟಿಸಿದ "ಶಿಕ್ಷಣದ ಸವಾಲು" ಒಂದು ಸರ್ವೇಕ್ಷಣೆಯ ವರದಿ. ಈ ಪ್ರಕಟಣೆ ವಿವಿಧ ಹಂತದ ಶಿಕ್ಷಣಸಂಸ್ಥೆಗಳಲ್ಲಿನ ಸೌಲಭ್ಯಗಳ ಕೊರತೆ, ರಾಷ್ಟ್ರದ ಅಗತ್ಯಗಳನ್ನು ಪೂರೈಕೆಮಾಡಲು ಶಿಕ್ಷಣವ್ಯವಸ್ಥೆ ವಿಫಲವಾದುದು, ಹಣಕಾಸಿನ ಕೊರತೆ, ಆಡಳಿತದ ವೈಫಲ್ಯ ಮುಂತಾದವುಗಳನ್ನು ವಿಶ್ಲೇಷಿಸಿದೆ. ಶಿಕ್ಷಣಪದ್ಧತಿಯಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು 1966 ಆಯೋಗ ಸಲಹೆ ಮಾಡಿದೆ. ಆದರೆ ಮಂದಗತಿಯ ಮತ್ತು ಕ್ರಮಬದ್ಧವಲ್ಲದ ಕಾರ್ಯಯೋಜನೆಯಿಂದ ಪ್ರಗತಿ ಕುಂಠಿತವಾಯಿತು. ಜೊತೆಗೆ ಆರ್ಥಿಕ ಕೊರತೆಯೂ ಇತ್ತು. ಇವುಗಳ ಬೆಳಕಿನಲ್ಲಿ ಪರಿಕಲ್ಪನೆಗಳು, ಉದ್ದೇಶಗಳು ಮತ್ತು ಆದ್ಯತೆಗಳನ್ನು ಸ್ಪಷ್ಟಪಡಿಸುವುದಲ್ಲದೆ ಅಲ್ಪಕಾಲದ ಮತ್ತು ದೀರ್ಘಕಾಲದ ಉದ್ದೇಶಗಳನ್ನು ಸಾಧಿಸಲು ನೆರವಾಗುವಂತೆ ಹಣಕಾಸಿನ ಪೂರೈಕೆ, ಸಾಮಗ್ರಿಗಳ ಸರಬರಾಜು, ಆಡಳಿತ ವ್ಯವಸ್ಥೆ, ಮಾನವ ಶಕ್ತಿಯ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಹೊಸ ಶಿಕ್ಷಣನೀತಿ ಸ್ಪಷ್ಟ ನಿಲುವನ್ನು ಹೊಂದಿರಬೇಕು ಎಂದು ತಿಳಿಸುತ್ತದೆ.

ಸ್ವಾತಂತ್ರ್ಯಾನಂತರದ ಪ್ರಗತಿ

ಸ್ವಾತಂತ್ರ್ಯಾನಂತರದ ಸುಮಾರು 20 ವರ್ಷಗಳ ಅವಧಿಯಲ್ಲಿ ಕಣ್ಣಿಗಾಣುವ ಪ್ರಗತಿ ತೋರಿದೆ. ಅದು ರಾಷ್ಟ್ರಪ್ರಗತಿ, ಸಾಮಾನ್ಯ ಪೌರತ್ವ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಗೊಳಿಸುವುದು ಅದರ ಗುರಿಯಾಗಿತ್ತು. ಅದು ಶಿಕ್ಷಣಪದ್ಧತಿಯ ಮೂಲಸ್ವರೂಪವನ್ನೆ ಪುನರ್‌ರಚಿಸುವುದು, ಎಲ್ಲ ಹಂತದಲ್ಲೂ ಗುಣಮಟ್ಟ ಉತ್ತಮಪಡಿಸುವುದು - ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಕ್ಷೇತ್ರಗಳಿಗೆ ಗಮನ ಕೊಡುವುದು, ಮೌಲ್ಯಗಳನ್ನು ಬೆಳಿಸಿಕೊಳ್ಳುವಂತೆ ಮಾಡುವುದು, ಜನಜೀವನ ಮತ್ತು ಶಿಕ್ಷಣದ ನಡುವೆ ನಿಕಟ ಸಂಬಂಧ ಬೆಳೆಸುವುದು - ಇವು 1968ರ ನೀತಿಯ ಮುಖ್ಯಉದ್ದೇಶಗಳಾಗಿದ್ದುವು.

ಈ ಅವಧಿಯಲ್ಲಿ ಶಿಕ್ಷಣಸೌಲಭ್ಯಗಳ ವಿಸ್ತರಣೆ ಗ್ರಾಮೀಣ ಪ್ರದೇಶಗಳು ಸೇರಿದಂತೆ ಗಣನೀಯ ಪ್ರಮಾಣದಲ್ಲಿ ಆಗಿದೆ. ಅತಿಮುಖ್ಯವಾದ ವಿಷಯ ಎಂದರೆ ದೇಶಾದ್ಯಂತ ಶಿಕ್ಷಣಪದ್ಧತಿಯಲ್ಲಿ 10+2+3ರ ಸಾಮಾನ್ಯ ರಚನೆಯನ್ನು ಒಪ್ಪಿಕೊಂಡದ್ದು ಪದವಿಪೂರ್ವ ಶಿಕ್ಷಣ ಹಂತದಲ್ಲಿ ಪಠ್ಯಕ್ರಮದ ಪರ್ನವ್ಯವಸ್ಥೆ, ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳ ಸ್ಥಾಪನೆಯಿಂದ ನಮ್ಮ ಮಾನವಶಕ್ತಿಯ ಬೇಡಿಕೆಗಳ ಪೂರೈಕೆ ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದರೂ ಸಾಧನೆ ನಿರೀಕ್ಷಿತ ಮಟ್ಟ ತಲುಪಿಲ್ಲ. ಶಿಕ್ಷಣಸೌಲಭ್ಯಗಳು ಎಲ್ಲರಿಗೂ ದೊರೆಯುವಂತೆ ಮಾಡುವುದರಲ್ಲಿ ವೈಫಲ್ಯ, ವಿಸ್ತರಣೆಯ ಕೊರತೆ, ಗುಣಮಟ್ಟ, ಸಂಪನ್ಮೂಲಗಳ ಉಪಯೋಗ ಮುಂತಾದವುಗಳು ಸಂಚಯಗೊಂಡು ಇಂದು ಸವಾಲಾಗಿ ನಿಂತಿವೆ. ಈ ಸವಾಲನ್ನೆದುರಿಸುವುದೇ ಹೊಸನೀತಿಯ ಮುಖ್ಯ ಉದ್ದೇಶವೆಂದು ಹೊಸನೀತಿಯ ಮೊದಲ ಭಾಗದ ಪ್ರಸ್ತಾವನೆಯಲ್ಲಿ ಸ್ಪಷ್ಟಪಡಿಸಿದೆ.

ಇಂದಿನ ಸ್ಥಿತಿ

ಇಂದು ಭಾರತದಲ್ಲಿ ಶಿಕ್ಷಣ ಕವಲುದಾರಿಯಲ್ಲಿ ನಿಂತಿದೆ. ಏಕಮುಖಿ ವಿಸ್ತರಣೆಯಾಗಲಿ, ಇಂದಿನ ವೇಗದ ಪ್ರಗತಿಯಾಗಲಿ ಸುಧಾರಣೆಯ ಸ್ವರೂಪವಾಗಲಿ ಪ್ರಸ್ತುತದ ಅಗತ್ಯಗಳನ್ನು ಪೂರೈಕೆಮಾಡಲಾರವು.

ಭಾರತೀಯರ ಆಲೋಚನೆಯಂತೆ ಮನುಷ್ಯನ ಧನಾತ್ಮಕವಾದ ಆಸ್ತಿ ಮತ್ತು ಅಮೂಲ್ಯವಾದ ಸ್ವಾಭಾವಿಕವಾದ ಸಂಪನ್ಮೂಲ ಇವನ್ನು ಎಚ್ಚರಿಕೆಯಿಂದ ಮತ್ತು ಪ್ರೀತಿಯಿಂದ ಮತ್ತು ಶಕ್ತಿಯುತವಾಗಿ ಕಾಪಾಡಿ ಅಭಿವೃದ್ಧಿ ಪಡಿಸಬೇಕು. ಪ್ರತಿಯೊಂದು ವ್ಯಕ್ತಿಯೂ ಹುಟ್ಟಿದಂದಿನಿಂದ ಮೊದಲಾಗಿ ಮರಣಿಸುವವರೆಗೆ ಪ್ರತಿಹಂತದಲ್ಲೂ ಬೇರೆಬೇರೆ ರೀತಿಯ ಸಮಸ್ಯೆಯ ಶ್ರೇಣಿಗಳನ್ನು ಮತ್ತು ಅಗತ್ಯಗಳನ್ನು ಮುಂದಿಡುತ್ತವೆ. ಈ ಸಂಕೀರ್ಣ ಗುಣದ ಬೆಳವಣಿಗೆಗೆ ಅಗತ್ಯವಾದ ಯೋಜನೆ ರೂಪಿಸಿ ಎಚ್ಚರಿಕೆಯಿಂದ ಕಾರ್ಯರೂಪಕ್ಕೆ ತರಬೇಕು.

ಭಾರತದ ರಾಜಕೀಯ ಮತ್ತು ಸಾಮಾಜಿಕ ಜೀವನ ನಾವು ದೀರ್ಘಕಾಲದಿಂದ ಒಪ್ಪಿ ಪಾಲಿಸಿಕೊಂಡು ಬಂದಿರುವ ಮೌಲ್ಯಗಳು ಮರೆಯಾಗುವ ಅಪಾಯ ಸೂಚಿಸುತ್ತವೆ. ಸೆಕ್ಯೂಲರ್ ನೀತಿ, ಸಮಾಜವಾದ, ಪ್ರಜಾಪ್ರಭುತ್ವ ಮತ್ತು ವೃತ್ತಿನೀತಿ ಒತ್ತಡಕ್ಕೆ ಸಿಲುಕಿವೆ.

ಗ್ರಾಮೀಣ ಜನತೆ ತರಬೇತುಪಡೆದ ವಿದ್ಯಾವಂತ ಯುವಕರ ಸೇವೆಯಿಂದ ವಂಚಿತ ರಾಗಿದ್ದಾರೆ. ಅವರಿಗೆ ಅದು ದೊರೆಯಬೇಕಾದರೆ ಪಟ್ಟಣ ಮತ್ತು ಹಳ್ಳಿಗಳಿಗಿರುವ ವ್ಯತ್ಯಾಸ ಹೋಗಬೇಕು. ಉದ್ಯೋಗಗಳಲ್ಲಿ ಅನೇಕತೆಯನ್ನು ಉಂಟುಮಾಡಿ ಗ್ರಾಮೀಣ ಪ್ರದೇಶಗಳಿಗೆ ಹಂಚಬೇಕು. ಜನಸಂಖ್ಯೆಯ ಬೆಳವಣಿಗೆ ನಿಯಂತ್ರಿಸಬೇಕು.

ಮುಂಬರುವ ದಶಕಗಳು ಹೊಸ ಬಿಕ್ಕಟ್ಟುಗಳನ್ನು ತರುವುದರ ಜೊತೆಗೆ ಹಿಂದೆಂದೂ ಇಲ್ಲದ ಅವಕಾಶಗಳನ್ನೂ ತರುವುವು. ಈ ಹೊಸ ಪರಿಸರದಿಂದ ಪ್ರಯೋಜನ ಪಡೆಯುವ ಸಾಮರ್ಥ್ಯವುಂಟುಮಾಡಲು ಮಾನವಶಕ್ತಿಯ ಅಭಿವೃದ್ಧಿಗೆ ಹೊಸ ಯೋಜನೆಗಳು ಅಗತ್ಯ. ಇದೆಲ್ಲಕ್ಕೂ ಉತ್ತಮ ಶಿಕ್ಷಣವ್ಯವಸ್ಥೆ ಅಗತ್ಯ. ಬಹುವಿಧದ ಸವಾಲುಗಳು ಮತ್ತು ಸಾಮಾಜಿಕ ಅವಶ್ಯಕತೆಗಳು ಸರ್ಕಾರ ಹೊಸ ಶಿಕ್ಷಣನೀತಿ ರೂಪಿಸಿ ದೃಢಸಂಕಲ್ಪದಿಂದ ಅನುಷ್ಠಾನಕ್ಕೆ ತರುವಂತೆ ಒತ್ತಾಯಿಸುವುವು. ಈ ಹಿನ್ನಲೆಯಲ್ಲಿ 1986ರ ರಾಷ್ಟ್ರೀಯ ಶಿಕ್ಷಣನೀತಿ ಎಷ್ಟರಮಟ್ಟಿಗೆ ಭಾರತೀಯ ಲಕ್ಷಣ ಹೊಂದಿದೆ, ಅದರಲ್ಲಿ ನಿರ್ಧರಿಸಿರುವ ಆದ್ಯತೆಗಳೇನು ಎಂಬ ಅಂಶಗಳನ್ನು ಪರಿಶೀಲಿಸುವುದು ಅಗತ್ಯ.

ರಾಷ್ಟ್ರೀಯ ಶಿಕ್ಷಣನೀತಿ

1986ರ ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ 12 ಭಾಗಗಳಿವೆ. ಮೊದಲನೆಯದು ಪ್ರಸ್ತಾವನೆ; ಎರಡನೆಯ ಭಾಗ ಶಿಕ್ಷಣದ ಪ್ರಾಮುಖ್ಯತೆ ತಿಳಿಸುತ್ತದೆ; ಮೂರನೆಯದು ರಾಷ್ಟ್ರೀಯ ಶಿಕ್ಷಣ ನೀತಿಯ ಗುರಿ ಮತ್ತು ಕಾರ್ಯವಿಧಾನ ತಿಳಿಸುತ್ತದೆ. ನಾಲ್ಕನೆಯದು ಗುರಿ ಸಮಾನತೆಗಾಗಿ ಶಿಕ್ಷಣ; ಬೇರೆಬೇರೆ ಹಂತದಲ್ಲಿ ಶಿಕ್ಷಣದ ಪುನರ್‌ವ್ಯವಸ್ಥೆ ಐದನೆಯ ಭಾಗದಲ್ಲಿ ತಿಳಿಸಿದೆ. ಆರನೆ ಭಾಗ ತಾಂತ್ರಿಕ ಮತ್ತು ವ್ಯವಸ್ಥಾಪಕರ ಶಿಕ್ಷಣಕ್ಕೆ ಸಂಬಂಧಿಸಿದುದು. ಈ ಪದ್ಧತಿ ಕೆಲಸಮಾಡುವಂತೆ ಮಾಡುವುದು ಭಾಗ ಏಳರಲ್ಲಿ ವಿವರಿಸಿದೆ. ಶಿಕ್ಷಣದ ವಸ್ತು ಮತ್ತು ಪ್ರಕ್ರಿಯೆಯ ಪುನರನುಷ್ಠಾನ ಎಂಟನೇ ಭಾಗದಲ್ಲಿದೆ; ಒಂಬತ್ತನೆ ಭಾಗ ಶಿಕ್ಷಕರ ವಿಷಯಕ್ಕೆ ಸಂಬಂಧಿಸಿದ್ದು; ಹತ್ತನೆ ಭಾಗ ಶಿಕ್ಷಣ ಆಡಳಿತಕ್ಕೆ ಸಂಬಂಧಿಸಿದ್ದು; ಸಂಪನ್ಮೂಲಗಳ ವಿಷಯ ಹನ್ನೊಂದರಲ್ಲೂ, ಹನ್ನೆರಡನೆ ಭಾಗ ಭವಿಷ್ಯದ ಬಗ್ಗೆಯೂ ತಿಳಿಸುತ್ತದೆ. ಇವಿಷ್ಟು ಅಂಶಗಳೂ ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ ಸೂಚಿತವಾಗಿವೆ.

ನಮ್ಮ ರಾಷ್ಟ್ರೀಯ ಅನುಭವದಲ್ಲಿ ಶಿಕ್ಷಣ ಸರ್ವರಿಗೂ ಅವಶ್ಯಕ. ನಮ್ಮ ಭೌತಿಕ

ಮತ್ತು ಆಧ್ಯಾತ್ಮಿಕ ಪ್ರಗತಿಗೆ ಇದು ಮೂಲವಸ್ತು. ಅದು ಸಂಸ್ಕೃತಿ ಸಂಸ್ಕರಣ ಪಾತ್ರವನ್ನು ನಿರ್ವಹಿಸುತ್ತದೆ. ರಾಷ್ಟ್ರೀಯ ಸಂಬದ್ಧತೆ, ವೈಜ್ಞಾನಿಕ ಮನೋಭಾವಕ್ಕೆ ಮತ್ತು ಚೇತನದ ಸ್ವಾತಂತ್ರ್ಯತೆಗೆ ನೆರವಾಗಬಲ್ಲ, ನಮ್ಮ ಗ್ರಾಹ್ಯತೆ ಮತ್ತು ಜ್ಞಾನಾರ್ಜನೆಯ ಸಾಮರ್ಥ್ಯವನ್ನು ಸಂಸ್ಕರಿಸುವುದು ಮತ್ತು ಆ ಮೂಲಕ ನಮ್ಮ ರಾಜ್ಯಾಂಗದಲ್ಲಿ ಉದ್ಘೋಷಿತವಾಗಿರುವ ಸಮಾಜವಾದ, ಸೆಕ್ಯೂಲರಿಸಂ ಮತ್ತು ಪ್ರಜಾಪ್ರಭುತ್ವದ ಗುರಿ ತಲುಪುವುದಕ್ಕೆ ಸಹಾಯ ಮಾಡುವುದು. ಶಿಕ್ಷಣ ನಮ್ಮ ಆರ್ಥಿಕ ವ್ಯವಸ್ಥೆಯ ವಿವಿಧ ಹಂತದಲ್ಲಿ ಬೇಕಾಗಿರುವ ಮಾನವಶಕ್ತಿಯನ್ನು ಒದಗಿಸುತ್ತದೆ. ರಾಷ್ಟ್ರದ ಸ್ವಾವಲಂಬನೆಯನ್ನು ಭದ್ರಪಡಿಸುವ ಸಂಶೋಧನೆ ಮತ್ತು ಅಭಿವೃದ್ಧಿಗಳು ನಿರಾತಂಕವಾಗಿ ಸಾಗುವುದಕ್ಕೆ ಸಹಕಾರಿಯಾದ ಒಂದು ಸಮತಲ. ಶಿಕ್ಷಣವು ವರ್ತಮಾನ ಮತ್ತು ಭವಿಷ್ಯತ್ತಿನ ಒಂದು ವಿಶಿಷ್ಟವಾದ ಬಂಡವಾಳ. ಇದೇ ರಾಷ್ಟ್ರೀಯ ಶಿಕ್ಷಣನೀತಿಯ ಕೀಲಿಕೈ.

ರಾಜ್ಯಾಂಗದಲ್ಲಿ ಉಕ್ತವಾಗಿರುವ ತತ್ತ್ವಗಳನ್ನು ಆಧರಿಸಿ ರಾಷ್ಟ್ರೀಯ ಶಿಕ್ಷಣನೀತಿ ರೂಪುಗೊಂಡಿದೆ. ಅದರಂತೆ ಒಂದು ನಿಗದಿತ ಹಂತದವರೆಗೆ ದೇಶದ ಎಲ್ಲ ಮಕ್ಕಳೂ ಜಾತಿ, ಮತ, ಸ್ಥಳ ಅಥವಾ ಲಿಂಗಬೇಧವಿಲ್ಲದೆ ಒಂದೇ ಸಮನಾದ ಶಿಕ್ಷಣ ಪಡೆಯಲು ಅವಕಾಶ ಹೊಂದಿರಬೇಕು.

ರಾಷ್ಟ್ರೀಯ ಶಿಕ್ಷಣಪದ್ಧತಿ ರಾಷ್ಟ್ರೀಯ ಮಟ್ಟದಲ್ಲಿ ಪಠ್ಯವಸ್ತುವಿನ ಚೌಕಟ್ಟನ್ನು ಸಿದ್ಧಪಡಿಸುವುದು. ಅದು ವಿಶ್ವದೃಷ್ಟಿ ಮೂಡಿಸಬೇಕು. ಸಮಾನ ಅವಕಾಶಗಳನ್ನು ಉಪಯೋಗಿಸಿಕೊಳ್ಳುವ ಶಕ್ತಿ ಉಂಟುಮಾಡಲು ಸಮಾನ ಸೌಲಭ್ಯಗಳನ್ನು ಒದಗಿಸಬೇಕು. ಉನ್ನತಶಿಕ್ಷಣ ಮತ್ತು ತಾಂತ್ರಿಕಶಿಕ್ಷಣ ಕ್ಷೇತ್ರದಲ್ಲಿ ಅಂತರ ಪ್ರಾದೇಶಿಕ ಪ್ರವೇಶಕ್ಕೆ ಅವಕಾಶ ಮಾಡಿಕೊಡುವುದು. ಜೀವನದುದ್ದಕ್ಕೂ ಶಿಕ್ಷಣ ಎಂಬ ನಿಲುವು ಶಿಕ್ಷಣ ಪ್ರಕ್ರಿಯೆಯದು. ಇದು ಪೂರ್ಣ ಸಾಕ್ಷರತೆ ಮತ್ತು ಆ ಕ್ಷೇತ್ರದಲ್ಲಿ ದುಡಿಮೆಯಲ್ಲಿ ತೊಡಗಿರುವವರಿಗೆ ಮುಂದುವರಿದ ಶಿಕ್ಷಣಸೌಲಭ್ಯಗಳನ್ನು ಒದಗಿಸಬೇಕೆಂಬುದನ್ನು ಪ್ರತಿಪಾದಿಸುತ್ತದೆ.

1976ರ ರಾಜ್ಯಾಂಗದ ತಿದ್ದುಪಡಿಯಂತೆ ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ. ಇದರಂತೆ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳು ಸಹಭಾಗಿಗಳು. ಇಲ್ಲಿ ಇಬ್ಬರೂ ಪರಸ್ಪರ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರಬೇಕು. ನಮಗೆ ಲಭ್ಯವಿರುವ ಸಂಪನ್ಮೂಲಗಳು ಮಿತವಾಗಿವೆ; ಆದರೆ ನಮ್ಮ ಬೇಡಿಕೆ ಅಪಾರ. ಇಂತಹ ಪರಿಸ್ಥಿತಿಯಲ್ಲಿ ಸಂಪನ್ಮೂಲಗಳು ಅಪವ್ಯಯ ಆಗುವುದನ್ನು ತಡೆಗಟ್ಟಿ, ಸದುಪಯೋಗಪಡಿಸಿಕೊಂಡು ನಾವು ಶಿಕ್ಷಣಕ್ಕಾಗಿ ವ್ಯಯ ಮಾಡುವ ಹಣದಿಂದ ಪೂರ್ಣಲಾಭ ಪಡೆಯಲು ಪ್ರಯತ್ನಿಸಬೇಕು.

ರಾಷ್ಟ್ರೀಯ ಶಿಕ್ಷಣನೀತಿಯೇನೊ ನಮಗೆ ಇಂದು ಸವಾಲಾಗಿ ನಿಂತಿರುವ ಅತಿಮುಖ್ಯ ವಿಷಯಗಳನ್ನು ಪಟ್ಟಿಮಾಡಿದೆ. ಆದರೆ ಸಮಸ್ಯೆ ಇರುವುದು ಅವುಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ. ಉದಾಹರಣೆಗೆ ಅನಕ್ಷರತೆಯನ್ನು ದೂರಮಾಡಲು ಈ ಶತಮಾನದ ಅಂತ್ಯದೊಳಗೆ 9 ರಿಂದ 35ವರ್ಷ ವಯೋಮಿತಿಯಲ್ಲಿರುವ ಎಲ್ಲರನ್ನು ಅಕ್ಷರಸ್ಥರನ್ನಾಗಿ ಮಾಡುತ್ತೇವೆಂಬ ನಿರ್ಧಾರ ವಯಸ್ಕರ ಕಾರ್ಯಕ್ರಮದ ರೀತಿಯನ್ನು ನೋಡಿದಾಗ ಗುರಿ ತಲುಪುವುದು ಅಸಾಧ್ಯವೆಂದೇ ತೋರುವುದು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವವರು

ಸಮರ್ಪಣಾ ಮನೋಭಾವದಿಂದ ಇದು ರಾಷ್ಟ್ರಕ್ಕೆ ತಾವು ಸಲ್ಲಿಸುತ್ತಿರುವ ಸೇವೆಯೆಂದು ಭಾವಿಸಿ ಕೆಲಸ ಮಾಡುತ್ತಿಲ್ಲ. ನಾವೆಣಿಸಿದ್ದಂತೆ ಇದು ಜನಾಂದೋಲನ ಆಗಲಿಲ್ಲ; ಕೇವಲ ಪ್ರಚಾರದಲ್ಲಿಯೇ ಮುಖ್ಯವಾಗಿ ಹಣ ಅಪವ್ಯಯ ಆಗುತ್ತಿದೆ.

ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳೂ ಯಾಂತ್ರಿಕವಾಗಿ ಸಾಗುತ್ತಿವೆ. ಇನ್ನೂ ನಾವು ದೇಶದ ಎಲ್ಲ ಮಕ್ಕಳಿಗೂ ಪೂರ್ಣಾವಧಿ ಶಿಕ್ಷಣ ಕೊಡುವ ಭ್ರಮೆಯಲ್ಲಿಯೇ ಇದ್ದೇವೆ. ಈ ಭ್ರಮೆಯಿಂದ ಮುಕ್ತರಾಗಿ ವಾಸ್ತವಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ನಮ್ಮ ಕಾರ್ಯವಿಧಾನವನ್ನು ಬದಲಿಸಬೇಕು. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಆ ಯೋಜನೆಯ ಮೌಲ್ಯಮಾಪನ ಮಾಡಲು ಯಾರೂ ಮನಸ್ಸು ಮಾಡಿಲ್ಲ.

ಶಿಕ್ಷಣ ಸೌಲಭ್ಯಗಳ ವಿಸ್ತರಣೆ ಆಗಿದೆ. ಆದರೆ ಅನಿಯಂತ್ರಿತವಾಗಿ ಆಗಿದ್ದು ಪ್ರಾದೇಶಿಕ ಅಸಮತೋಲನವುಂಟಾಗಿದೆ. ಅಗತ್ಯಕ್ಕಿಂತಲೂ ಹೆಚ್ಚಾಗಿ ಸೌಲಭ್ಯಗಳನ್ನು ಹೊಂದಿರುವ ಪ್ರದೇಶಗಳೂ ಇವೆ; ಸೌಲಭ್ಯಗಳಿಂದ ವಂಚಿತವಾಗಿರುವ ಪ್ರದೇಶಗಳೂ ಇವೆ. ಈ ಅಸಮತೋಲನವನ್ನು ಹೋಗಲಾಡಿಸಬೇಕು.

ಸಮಾನ ಸೌಲಭ್ಯಗಳನ್ನು ಒದಗಿಸಬೇಕೆಂಬುದು ಒಂದು ಸ್ವಾಗತಿಸಬಹುದಾದ ನೀತಿ. ಇದಕ್ಕಾಗಿಯೇ ಜಿಲ್ಲೆಗೊಂದರಂತೆ ನವೋದಯ ಶಾಲೆಗಳನ್ನು ಪ್ರಾರಂಭಿಸಲು ನಿರ್ಧರಿಸಿ ಈಗಾಗಲೇ ಕೆಲವನ್ನು ಪ್ರಾರಂಭಿಸಿದ್ದಾರೆ. ಈ ಶಾಲೆಯಲ್ಲಿ ಆ ಜಿಲ್ಲೆಯ ಕೇವಲ 64 ಮಕ್ಕಳಿಗೆ ಉಳಿದ ಸ್ಥಳಗಳು ಪಟ್ಟಣ ಪ್ರದೇಶದ ಮತ್ತು ಬೇರೆ ರಾಜ್ಯದ ಮಕ್ಕಳಿಗೆ ಮೀಸಲು. ಅಂದರೆ ಆ ಜಿಲ್ಲೆಯ ಶೇಕಡ ಒಂದಕ್ಕಿಂತಲೂ ಕಡಿಮೆ ಮಕ್ಕಳಿಗೆ ಈ ಸೌಲಭ್ಯ. ಉಳಿದವರ ಪಾಡೇನು? ಈ ಸೌಲಭ್ಯಗಳನ್ನು ಹೆಚ್ಚು ಮಕ್ಕಳಿಗೆ ವಿಸ್ತರಿಸಬೇಕು.

ಸಾಮಾನ್ಯ ಶಾಲಾ ಪದ್ಧತಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಈ ನೀತಿಯಲ್ಲಿ ಸ್ಪಷ್ಟಪಡಿಸಿದೆ; ಆದರೆ ಆ ದಿಕ್ಕಿನಲ್ಲಿ ಏನೂ ಕ್ರಮ ಕೈಗೊಂಡಿಲ್ಲ. ಇದನ್ನು ಆದ್ಯತೆಯ ಮೇಲೆ ಮಾಡಬೇಕು.

ಭಾಷಾ ವಿಷಯದಲ್ಲಿ ರಾಷ್ಟ್ರೀಯ ಶಿಕ್ಷಣನೀತಿ ಸ್ಪಷ್ಟವಾಗಿಲ್ಲ. ರಾಜ್ಯಗಳಿಗೆ ಪರಿಶೀಲನೆಗಾಗಿ ಕಳುಹಿಸಿದ್ದ ಕರಡು ನೀತಿಯಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಪ್ರಾದೇಶಿಕ ಭಾಷೆಯನ್ನು ಪ್ರಾಥಮಿಕ ಮೂರನೇ ತರಗತಿಯಿಂದ ಪ್ರಾರಂಭಿಸಿ ಅವರು ಏಳನೇ ತರಗತಿ ಮುಗಿಸಿ ಎಂಟನೆಯ ತರಗತಿಗೆ ಪ್ರವೇಶ ಪಡೆಯುವ ವೇಳೆಗೆ ಅವರು ಪ್ರಾದೇಶಿಕ ಭಾಷಾ ಮಾಧ್ಯಮದ ಮೂಲಕ ಶಿಕ್ಷಣ ಪಡೆಯಲು ಸಮರ್ಥರಾಗಿರಬೇಕು ಎಂಬ ಅಂಶವನ್ನು ಅಳವಡಿಸಿದ್ದರು. ಘೋಷಿತವಾಗಿರುವ ನೀತಿಯಲ್ಲಿ ಭಾಷೆಯ ವಿಷಯವನ್ನೇ ಪ್ರಸ್ತಾಪಿಸಿಲ್ಲ. ಇದೊಂದು ಗುರುತರವಾದ ಲೋಪವೆಂದೇ ಭಾವಿಸಬೇಕು. ಸಾಕಷ್ಟು ಗೊಂದಲ ಎಬ್ಬಿಸಿರುವ ಭಾಷೆಯ ಬಗೆಗೆ ಯಾವುದೇ ಸ್ಪಷ್ಟನೀತಿಯನ್ನು ರೂಪಿಸದಿರುವುದು ರಾಷ್ಟ್ರೀಯ ನೀತಿಯ ವೈಫಲ್ಯವನ್ನು ಎತ್ತಿತೋರಿಸುತ್ತದೆ. ಈಗಲಾದರೂ ಇದಕ್ಕೆ ಅಗತ್ಯ ಗಮನ ಕೊಟ್ಟು ಕಲಿಯಬೇಕಾದ ಭಾಷೆ ಮತ್ತು ಶಿಕ್ಷಣ ಮಾಧ್ಯಮದ ಬಗ್ಗೆ ಖಚಿತ ನೀತಿ ರೂಪಿಸುವುದು ಅಗತ್ಯ.

ಭಾಷೆಗೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ಸ್ಪಷ್ಟಪಡಿಸುವುದು ಅಗತ್ಯ.

ಭಾಷಾವಾರು ಪ್ರಾಂತ್ಯಗಳು ರಚನೆ ಆದಾಗ ಪ್ರತಿಪಾದಿಸಿದವರು ಯಾವುದೇ ರಾಜ್ಯದಲ್ಲಿ ಆ ರಾಜ್ಯದ ಭಾಷೆಯನ್ನು ಆಡುವ ಜನರೇ ಇರುತ್ತಾರೆಂದು ಭಾವಿಸಿರಲಿಲ್ಲ. ಪ್ರತಿ ರಾಜ್ಯದಲ್ಲಿ ಬೇರೆ ಭಾಷೆಯನ್ನು ಮಾತನಾಡುವ ಜನರಿರುತ್ತಾರೆ. ಅಂತಹವರು ತಮ್ಮ ಭಾಷೆಯನ್ನು ಕಲಿಯುವುದರ ಜೊತೆಗೆ ತಾವು ನೆಲಸಿರುವ ಪ್ರದೇಶದ ಭಾಷೆಯನ್ನು ಕಲಿತು ಅಲ್ಲಿನ ಜನಜೀವನದಲ್ಲಿ ಸೇರಿ ಹೋಗಬೇಕು. ಆ ಭಾಷೆಯ ಮೂಲಕ ಶಿಕ್ಷಣ ಪಡೆಯುವುದು ಮತ್ತು ಅದನ್ನು ವ್ಯವಹಾರದಲ್ಲಿ ಉಪಯೋಗಿಸುವುದು ಮುಂತಾದವುಗಳನ್ನು ಪ್ರತಿರೋಧವಿಲ್ಲದೆ ಒಪ್ಪಿಕೊಳ್ಳಬೇಕು. ಕೇಂದ್ರ ಸರ್ಕಾರ ಈ ವಿಷಯವನ್ನು ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಮುಂದಿಟ್ಟು, ಚರ್ಚಿಸಿ ಇದನ್ನು ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ ಸೇರಿಸಿದರೆ ಭಾಷೆಗೆ ಸಂಬಂಧಿಸಿದ ಸಮಸ್ಯೆಗಳು ಬಗೆಹರಿಯುವುವು.

ಸ್ಥೂಲವಾಗಿ ಹೇಳಬಹುದಾದರೆ ಮೇಲೆ ತಿಳಿಸಿರುವ ಕೆಲವು ಲೋಪದೋಷಗಳನ್ನು ಬಿಟ್ಟರೆ ರಾಷ್ಟ್ರೀಯ ಶಿಕ್ಷಣನೀತಿ ನಾವು ಬಹುಕಾಲದಿಂದಲೂ ಬಯಸುತ್ತಿದ್ದ ಅನೇಕ ಅಂಶಗಳನ್ನು ಒಳಗೊಂಡಿದೆ. ಭಾರತೀಯತೆಯ ಛಾಪನ್ನು ಹಾಕಿಕೊಂಡಿದೆ. ಇದೊಂದು ಅನುಷ್ಠಾನಯೋಗ್ಯ ನೀತಿ. ಇದರಿಂದ ಉತ್ತಮ ಫಲ ಪಡೆಯಬೇಕಾದರೆ ಇಚ್ಛಾಶಕ್ತಿ ಮತ್ತು ದೃಢಸಂಕಲ್ಪದಿಂದ ಕಾರ್ಯೋನ್ಮುಖರಾಗಬೇಕು. ಅನುಷ್ಠಾನ ಸಾಧ್ಯವಾದ ಯೋಜನೆಗಳನ್ನು ರೂಪಿಸಿಕೊಂಡು ಕಾಲಮಿತಿಯನ್ನು ನಿರ್ಧರಿಸಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಬೇಕೇ ವಿನಾ ಅಧಿಕಾರ ಬದಲಾದಂತೆಲ್ಲ ವ್ಯಕ್ತಿಗಳ ಅಭಿರುಚಿಗೆ ಅನುಕೂಲವಾಗುವ ಹಾಗೆ ಬದಲಾಯಿಸಲು ಪ್ರಯತ್ನಿಸಬಾರದು. ಈ ಮಾರ್ಗ ಅನುಸರಿಸಿದಾಗ ಮಾತ್ರ ನಾವು ನಿರೀಕ್ಷಿತ ಫಲ ಪಡೆಯಲು ಸಾಧ್ಯ.

ವಚನಗಳಲ್ಲಿ ಶೈಕ್ಷಣಿಕ ಮೌಲ್ಯಗಳು

ಡಾ. ಬಿ.ಸಿ. ವೀರಪ್ಪ

ಶಿವಶರಣರ ವಚನಗಳಲ್ಲಿ ಪ್ರತಿಪಾದಿತವಾಗಿರುವ ಶೈಕ್ಷಣಿಕ ಮೌಲ್ಯಗಳನ್ನು ಕುರಿತು ವಿಚಾರ ಮಾಡುವ ಮೊದಲು 'ಮೌಲ್ಯ' ಎಂದರೇನೆಂದು ತಿಳಿಯುವುದು ಸೂಕ್ತ. ಕನ್ನಡದಲ್ಲಿ ಮೌಲ್ಯ ಎಂದರೆ 'ಬೆಲೆ' ಎಂದರ್ಥ. ಮಾನವರ ಬದುಕು ಸಾರ್ಥಕವಾಗಲು ತಮಗೆ ತಾವೇ ಇಟ್ಟು ಕೊಳ್ಳುವ, ಒಪ್ಪಿಕೊಳ್ಳುವ ಒಂದು ಬಗೆಯ ಬೌದ್ಧಿಕ ಬೆಲೆಯೇ ಮೌಲ್ಯ. ನಮ್ಮ ಬದುಕಿನಲ್ಲಿ ಘಟಿಸಬಹುದಾದ ಅನೇಕ ಸಂಘರ್ಷಗಳ ನಡುವೆ ಈ ಮೌಲ್ಯಗಳು ನಿಜವಾದ ಮೌಲ್ಯವೇನೆಂದು ಒರೆಹಚ್ಚಲ್ಪಡುತ್ತವೆ. ಪರಮಮೌಲ್ಯಗಳು ಕೇವಲ ಬದುಕಲಿಕ್ಕಾಗಿ ಇರುವಂತಹವಲ್ಲ. ಏಕೆಂದರೆ ಸುಸಂಸ್ಕೃತವಾದ ಬದುಕನ್ನು ರೂಪಿಸಿಕೊಳ್ಳಲು ನೆರವಾಗುವಂತಹ ಮೌಲ್ಯಗಳವು. ಹೀಗೆ ಉತ್ತಮ ಜೀವನಶಿಕ್ಷಣವನ್ನು ಕುರಿತು ಬೋಧಿಸಲ್ಪಡುವ ಅನೇಕ ಮೌಲ್ಯಗಳು ವಚನ ಸಾಹಿತ್ಯದಲ್ಲಿ ಸಮೃದ್ಧವಾಗಿವೆ.

ಮನುಕುಲದ ಇತಿಹಾಸವನ್ನು ಅವಲೋಕಿಸಿದರೆ, ಆಯಾ ಕಾಲಮಾನಕ್ಕೆ ಅನುಸಾರವಾಗಿ ವಿಭಿನ್ನಬಗೆಯ ಮೌಲ್ಯಗಳು ರೂಪುಗೊಂಡಿರುವುದು ಸಹಜ. ಇವು ಅಂದಿನ ಕಾಲಘಟ್ಟ, ಪರಿಸ್ಥಿತಿ ಹಾಗೂ ಪರಿಸರಗಳನ್ನು ಅನುಕರಿಸಿ ರೂಪುಗೊಂಡವಾದರೂ ಅನೇಕ ವೇಳೆ ಎಷ್ಟೋ ಮೌಲ್ಯಗಳು ಸಾರ್ವಜನಿಕ ಸತ್ಯಗಳಾಗಿ ಉಳಿದು ಬಿಡುವುದೂ ಉಂಟು. ಇದಕ್ಕೊಂದು ಜ್ವಲಂತ ನಿದರ್ಶನ ನಮ್ಮ ನಾಡಿನ ಶಿವಶರಣರು ನಡೆಸಿದ ಹನ್ನೆರಡನೆಯ ಶತಮಾನದ ವಚನಚಳುವಳಿ. ಭಾರತೀಯ ದಾರ್ಶನಿಕ ಜಗತ್ತಿಗೆ ಕನ್ನಡದ ಶಿವಶರಣರ ವಚನವಾಙ್ಮಯದ ಸೇರ್ಪಡೆಯಾಗಿ, ಅಲ್ಲಿನ ಮೌಲಿಕ ವಿಚಾರ ಶ್ರೀಮಂತಿಕೆಯು ಇಮ್ಮಡಿಯಾಯಿತೆಂದರೆ ಉತ್ಪ್ರೇಕ್ಷೆಯಾಗಲಾರದು.

ಶಿವಶರಣರು ಮೂಲತಃ ಅನುಭಾವಿಗಳು. ಅವರಿಂದ ರೂಪಿತವಾದ ಮೌಲ್ಯಗಳು ಕೇವಲ ಬೌದ್ಧಿಕ ಹಿನ್ನೆಲೆಯಲ್ಲಿ ರೂಪಿತವಾದುವಲ್ಲ. ಅವರ ಆಲೋಚನೆಗಳು ಅವರ ಸಾಧನೆಯ ಫಲಗಳೂ ಆಗಿದ್ದುವೆಂಬುದನ್ನು ನಾವಿಲ್ಲಿ ಮನಗಾಣಬೇಕಾಗಿದೆ. ಹೀಗೆ ಅವರೇ ಸ್ವತಃ ಕಂಡುಗೊಂಡ ಮೌಲ್ಯಗಳಲ್ಲಿ ಅವರ ಪರಮೋನ್ನತ ಜೀವನಸಾರವಿದೆ. "ಮರಕ್ಕೆ ಬೇರು ಬಾಯೆಂದು ತಳಕ್ಕೆ ನೀರನೆರೆದಡೆ ಮೇಲೆ ಪಲ್ಲವಿಸಿತ್ತು ನೋಡಾ. ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ, ಮುಂದೆ ಸಕಳಾರ್ಥವನೀವನು....... ನಮ್ಮ ಕೂಡಲಸಂಗಮದೇವ." ಇಂತಹ ಮೌಲಿಕ ವಿಚಾರಗಳು ಹುಟ್ಟಿಕೊಂಡಿರುವುದೇ ಈ ಹಿನ್ನೆಲೆಯಲ್ಲಿ. ಯಾವುದೇ ವೃಕ್ಷ ಅದರ ಫಲಪುಷ್ಪಗಳಲ್ಲಿ ತನ್ನೆಲ್ಲಾ ಸಾರವನ್ನು ಧಾರೆಯೆರೆದು ಕೊಟ್ಟಂತೆ, ವಚನಕಾರರೂ ತಮ್ಮ ಜೀವನಾನುಭವದ ರಸಗಟ್ಟಿ ಮೌಲ್ಯಗಳನ್ನು ಮನುಕುಲದ ಒಳಿತಿಗಾಗಿ ಧಾರೆ ಎರೆದಿದ್ದಾರೆ. ಇದೇ ರೀತಿ "ಮರಮರ ಮಥನದಿಂದ ಅಗ್ನಿ ಹುಟ್ಟಿ, ಆ ಮರನೆಲ್ಲವ ಸುಡದಿಪ್ಪುದೆ? ಮಹಾನುಭಾವರ ಸಂಘದಿಂದ ಜ್ಞಾನಾಗ್ನಿ ಹುಟ್ಟಿ, ಎನ್ನ ತನುಗುಣವೆಲ್ಲವ ಸುಡದಿಪ್ಪುದೆ ? ಇದು ಕಾರಣ, ಮಹಾನುಭಾವರ ತೋರಿಸು ಕೂಡಲಸಂಗಮದೇವಾ" ಎಂಬ ಈ ವಚನವೂ ಕೂಡ ಅರಿವು, ಜ್ಞಾನ, ತಿಳುವಳಿಕೆ ಇಂತಹ

ಮೌಲ್ಯಗಳ ಕಡೆಗೆ ಹೆಚ್ಚಿಗೆ ಗಮನ ಸೆಳೆಯುತ್ತದೆ. ಹೀಗೆ ಶಿವಶರಣರ ಅನೇಕ ವಚನಗಳಲ್ಲಿ ಇಂತಹ ಜ್ಞಾನ, ಅರಿವು, ವಿಚಾರ, ಗುರು, ಶಿಷ್ಯ, ವಿದ್ಯೆ, ಓದು ಇವೇ ಮೊದಲಾದ ಶೈಕ್ಷಣಿಕ ಮೌಲ್ಯಗಳನ್ನು ಕುರಿತು ಸಾಕಷ್ಟು ವ್ಯಾಪಕವಾದ ವಿಚಾರಮಂಥನ ನಡೆದಿರುವುದನ್ನು ಗುರುತಿಸಬಹುದಾಗಿದೆ.

ಜ್ಞಾನ : ವಚನಕಾರರು ಜ್ಞಾನಕ್ಕೆ ಎಷ್ಟೊಂದು ಮಹತ್ವ ನೀಡಿದ್ದರೆಂದರೆ, ಉಳಿದೆಲ್ಲಾ ವಿಚಾರ ಪಂಕ್ತಿಯ ಮೂಲನೆಲೆ ಜ್ಞಾನ ಎಂಬುದನ್ನು ಬಹಳವಾಗಿ ಸಾರಿ ಹೇಳಿದ್ದಾರೆ. ಈ ಮಾತಿಗೆ ದೃಷ್ಟಾಂತವಾಗಿ ಶಿವಲೆಂಕ ಮಂಚಣ್ಣನ ಈ ವಚನ :

ಜ್ಞಾನವುಳ್ಳನ್ನಕ್ಕ ಅರಿವು ಅರಿವು ಉಳ್ಳನ್ನಕ್ಕ ಆತ್ಮ
ಆತ್ಮ ವುಳ್ಳನ್ನಕ್ಕ ಜೀವ ಜೀವವುಳ್ಳನ್ನಕ್ಕ ಕಾಯ
ಕಾಯವುಳ್ಳನ್ನಕ್ಕ ಸಕಲ ಸುಖ ಭೋಗಂಗಳು
ಅದೆಂತೆವಡೆ ಬೀಜವಳಿದು ಪುನರಪಿ ಬೀಜವಾದಂತೆ..........

ಇಲ್ಲಿ ಸಕಲ ಸುಖಭೋಗಗಳನ್ನು ಅನುಭವಿಸಬೇಕಾದರೆ ಶರೀರ ಅತಿಮುಖ್ಯ. ಇಂತಹ ಶರೀರಕ್ಕೆ ಜೀವದ ಅಗತ್ಯ ಇನ್ನೂ ಮುಖ್ಯ. ಇಂತಹ ಆತ್ಮ ಉಳ್ಳವನಿಗೆ ಉತ್ತಮ ಅರಿವಿರಬೇಕಾದ್ದು ಇದೆಲ್ಲಕ್ಕೂ ಮುಖ್ಯ. ಇಂತಹ ಅರಿವುಳ್ಳಾತನಿಗೆ ಅತ್ಯಂತ ಪ್ರಮುಖವಾಗಿ ಇರಲೇಬೇಕಾದ್ದು ಉತ್ತಮ ಜ್ಞಾನ . ಈ ಸೂತ್ರಾರ್ಥದ ತಿರುಳನ್ನು ಸಂಕ್ಷೇಪಿಸಿ ಹೇಳುವುದಾದರೆ `ಬೀಜವೇ ಮೊಳೆತು ಬೆಳೆದು ವೃಕ್ಷವಾಗಿ ಕೊನೆಗೆ ಅದರ ಫಲದಿಂದಲೇ ಮತ್ತೆ ಬೀಜವಾದಂತೆ. ಇದು ಬರಿಯ ಜ್ಞಾನದ ಸಂದೇಶವಲ್ಲ. ಶರಣರು ಕಂಡುಕೊಂಡ ಆತ್ಮಗತ ಜ್ಞಾನದ ಸಂದೇಶವೂ ಕೂಡ. ಇಂತಹ ಆತ್ಮಜ್ಞಾನದ ಹಿಂದೆ ಶರಣರು ತಾವು ಕಂಡುಂಡ ಜೀವನಾನುಭವದ ಸಾರಸರ್ವಸ್ವವೂ ಅಡಗಿದೆ.

ಮೂಲತಃ ಜ್ಞಾನ ಎಂದರೆ ತಿಳುವಳಿಕೆ, ಅರಿವು ಎಂಬ ಅರ್ಥಗಳೂ ಉಂಟು. ಹಿಂದೂ ದರ್ಶನ ಸಾರದಲ್ಲಿ "ಬುದ್ಧಿಯ ಆಕಾರಕ್ಕೆ, ಪರಿಣಾಮಕ್ಕೆ ಜ್ಞಾನವೆಂದು ಹೆಸರಿಸಿ, ಸೂರ್ಯನಂತೆ ಸ್ವಪ್ರಕಾಶ ಸ್ವರೂಪವಾದ ಪರಬ್ರಹ್ಮ"ವೆಂದಿರುವ ವಿವೇಕ ಚಿಂತಾಮಣಿಯಲ್ಲಿ "ಮನದಲ್ಲಿ ಪ್ರತಿಫಲಿಸಿದ್ದರ ಜೀವಚೈತನ್ಯವೇ ಜ್ಞಾನವೆನಿಸುವುದು" ಎನ್ನಲಾಗಿದೆ. ಭಾರತದರ್ಶನದಲ್ಲಿ "ಜ್ಞಾನ ಶಬ್ದ ವಸ್ತುತಃ ವಾಸ್ತವಿಕವಾಗಿ ಬ್ರಹ್ಮಪದ ವಾಚ್ಯ; ಜ್ಞಾನವೆಂದರೆ ಸಾಕ್ಷಾತ್ ಈಶ್ವರ" ಎಂಬುದಾಗಿಯೆ ಪ್ರತಿಪಾದಿತವಾಗಿದೆ.

ವಚನ ವಾಙ್ಮಯದ ನೇತಾರ ಬಸವಣ್ಣ ಜ್ಞಾನವನ್ನೇ ಪ್ರಧಾನವಾಗಿ ಆಧರಿಸಿದ ತನ್ನೊಂದು ವಚನದಲ್ಲಿ-

'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲ ಸಂಗನ ಶರಣರ ಅನುಭಾವ ಬಲದಿಂದ ಎನ್ನ ಭವದ ಕೇಡು ನೋಡಯ್ಯಾ'

ಎನ್ನುತ್ತಾನೆ. ಇಲ್ಲಿ 'ಪುನರಪಿ ಜನನಂ ಪುನರಪಿ ಮರಣಂ' ಭವಾವಳಿಯನ್ನು ನಿರಾಕರಿಸಿದ ಬಸವಣ್ಣ, ಪರುಷ, ಸತ್ಯ, ಜ್ಯೋತಿ ಇವೆಲ್ಲಾ ಮೌಲಿಕ ವಿಚಾರಗಳಿಗಿಂತ ಸರಿಮಿಗಿಲೆನಿಸಿದ ಜ್ಞಾನದ ಒತ್ತಾಸೆಯನ್ನು ಬಹಳ ಎತ್ತರಕ್ಕೆ ಏರಿಸಿದ್ದಾನೆ.

ಅಲ್ಲಮಪ್ರಭುವಿನ ಪ್ರಕಾರ ಶರಣರು 'ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವನ ಬೆಳೆಸಿದವರು'; 'ತಾಪತ್ರಯದಲ್ಲಿ ಬೆಂದ ಒಡಲನ್ನು ಹಿಡಿದು ತಂದು ಜ್ಞಾನವೆಂಬ ಉರಿಗೆ ಆಹು ಕೊಟ್ಟವರು'; 'ಜ್ಞಾನವೆಂಬ ಕಾಯವನ್ನು ಹಿಡಿದು ತಂದು ನಿಶೂನ್ಯವೆಂಬ ತೇಜದಲ್ಲಿ ಸುಟ್ಟವರು `ಜ್ಞಾನಜ್ಯೋತಿಯ ಉದಯದಿಂದ ಭಾನುಕೋಟಿಯನ್ನೇ ಮೀರಿದವರು.' ಶರಣರ ದೃಷ್ಟಿಯಲ್ಲಿ ಜ್ಞಾನವೆಂತೋ ಅಂತೆಯೇ ಭಕ್ತಿಯೂ ಕೂಡ ಜ್ಞಾನದ ಒಡಲಿನ ಒಳಗೆ ಭಕ್ತಿಯನ್ನು ಅಡಗಿ ನೋಡುವ ಅನುಭಾವದ ಚಿಂತನೆ ಅವರದು. ಭಕ್ತಿ-ಜ್ಞಾನಗಳ ಸಮಾಗಮದಲ್ಲಿ ಅವ ಅನುಭಾವದ ಕಲ್ಪನೆ ಅಡಗಿದೆ. ಈ ಮಾತಿಗೆ ಪೂರಕವಾಗಿ 'ಭಾನುವಿನಂತಿರುವುದು ಜ್ಞಾನ ಭಾನುವಿನ ಕಿರಣದಂತಿರುವುದು ಭಕ್ತಿ, ಭಾನುವನುಳಿದು ಕಿರಣವಿಲ್ಲ, ಕಿರಣವನುಳಿದು ಭಾನುವಿಲ್ಲ ಹಾಗೆಯೇ ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನ ಹೇಗಿರಲು ಸಾಧ್ಯ? ಎಂಬುದು ಮಹಾದೇವಿಯಕ್ಕನ ಪ್ರಶ್ನೆ.

'ಜ್ಞಾನವು ಬರಿಯ ಜ್ಞಾನವಲ್ಲ. ಅದು ಬ್ರಹ್ಮಜ್ಞಾನ. ಮಹಾಪರಂಜ್ಯೋತಿಯ ಪ್ರಕಾಶ ಎನ್ನುತ್ತಾನೆ ಅರಿವಿನ ಮಾರಿತಂದೆ. ಅವನ ಪ್ರಕಾರ ಬ್ರಹ್ಮಜ್ಞಾನಿಯಾದವನು ಸದಾ ಮೌನಿಯಾಗಿರುತ್ತಾನೆ. ಚೆನ್ನಬಸವಣ್ಣನು ಜ್ಞಾನವನ್ನು ಕುರಿತಂತೆ ಷಡ್ವಿಧ ಜ್ಞಾನಗಳನ್ನು ಗುರುತಿಸಿದ್ದಾನೆ. ಅವುಗಳಾವುವೆಂದರೆ 'ಮತಿಜ್ಞಾನ, ಶ್ರುತಿಜ್ಞಾನ, ಖಂಡಜ್ಞಾನ, ಕೇವಲಜ್ಞಾನ ಜ್ಯೋತಿರ್ಜ್ಞಾನ ಹಾಗೂ ಮಹಾಜ್ಯೋತಿರ್ಜ್ಞಾನ. ಇವುಗಳಲ್ಲಿ ಮತಿಜ್ಞಾನವು ತನ್ನಿಂದಲೂ ಶ್ರುತಿಜ್ಞಾನವೂ ಗುರುವಿನಿಂದಲೂ, ಖಂಡಜ್ಞಾನವು ವೇದಾಗಮಗಳಿಂದಲೂ, ಕೇವಲ ಜ್ಞಾನವು ಆಧ್ಯಾತ್ಮದಿಂದಲೂ, ಜ್ಯೋತಿಜ್ಞಾನವು ತತ್ವಸ್ವರೂಪದಿಂದಲೂ ಹಾಗೂ ಮಹಾಜ್ಯೋತಿ ಜ್ಞಾನವು ನಿರಾವಲಂಬದಿಂದಲೂ ಲಭಿಸುವುದಾಗಿ' ವ್ಯಾಖ್ಯಾನಿಸಿದ್ದಾನೆ. ಹೀಗೆ ಜ್ಞಾನದ ಮಹತ್ವವನ್ನು ಕುರಿತಂತೆ ಎಷ್ಟೆಲ್ಲಾ ಮೌಲ್ಯಯುತ ಕಲ್ಪನೆಗಳನ್ನು ಇರಿಸಿಕೊಂಡಿದ್ದ ಈ ವಚನಕಾರರ ದೃಷ್ಟಿಯಲ್ಲಿ 'ಸುಜ್ಞಾನವನ್ನು ಅಜ್ಞಾನವು ಬಂದು ನುಂಗಿದಡೆ, ಭಾನುಗ್ರಹಣಕ್ಕೊಳಗಾದುದಂತಾಗುತ್ತದೆ.'

ಅರಿವು: ವಚನಗಳಲ್ಲಿ ಗುರುತಿಸಬಹುದಾದ ಮತ್ತೊಂದು ಶೈಕ್ಷಣಿಕ ಮೌಲ್ಯ 'ಅರಿವು'. ಅರಿವನ್ನು ಕುರಿತಂತೆ ಅನೇಕ ವಚನಕಾರರು ತಮ್ಮ ನಿಲುವುಗಳನ್ನು ಪ್ರತಿಪಾದಿಸಿದ್ದಾರೆ. ಮೂಲತಃ ಅರಿವು ಎಂದರೆ ತಿಳಿವಳಿಕೆ; ಜ್ಞಾನವೆಂದರ್ಥ.

ವಚನಕಾರರು ಅರಿವಿಗೆ ಎಷ್ಟೊಂದು ಮಹತ್ವ ನೀಡಿದ್ದಾರೆಂದರೆ, ಅವರ ದೃಷ್ಟಿಯಲ್ಲಿ 'ಅರಿವೇ ಗುರು, ನುಡಿ ಜ್ಯೋತಿರ್ಲಿಂಗ, ದಯವೇ ಧರ್ಮದ ಮೂಲ ತರಂಗ'ವಾಗಿದೆ. ಶರಣೆ ಮುಕ್ತಾಯಕ್ಕ ಹೇಳುವಂತೆ `ತನ್ನ ತಾನರಿದವಂಗೆ ಅರಿವೆ ಗುರು'ವಾಗಿದೆ. ಶರಣರ ಕಲ್ಪನೆಯಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಪರಮೋನ್ನತಿಗೆ ಮೂಲ ಕಾರಣವಾದ ಭಕ್ತಿಪಥವು ಮುಕ್ತಿಗೆ ದಾರಿ ದೀವಿಗೆಯಾಗಿದೆ. ಈ 'ಭಕ್ತಿ-ಮುಕ್ತಿ' ಇವೆರಡರ ನಡುವಿನ ಮಾಧ್ಯಮವೆ ಅರಿವು. ಇಂತಹ 'ಅರಿವು ತನ್ನಲ್ಲೆ ಸ್ವಾಯತವಾಗಿರಲು ಅನ್ಯರ ಕೇಳಲುಂಟೆ ಮುಕ್ತಿಪಥವ?' ಎಂಬುದು ಮಹಾದೇವಿಯಕ್ಕನ ಪ್ರಶ್ನೆ. ಇದೇ ಸಂಗತಿಯನ್ನು ಕುರಿತು ಬಸವಣ್ಣ 'ಅರಿತರೆ ಶರಣ ಮರೆತರೆ ಮಾನವ' ಎಂದಿದ್ದಾನೆ. ಇಲ್ಲಿ ಅರಿವು ಮತ್ತು ಮರೆವು ಇವೆರಡೂ ಮುಕ್ತಿ ಮತ್ತು ಭವ ಇವೆರಡರ ಕಾರಣ ಸಂಬಂಧ ಉಳ್ಳವಾಗಿವೆ. ಅರಿವುಳ್ಳವ ಜೀವನದ ಔನ್ನತ್ಯವೆಂಬ ಮುಕ್ತಿಗೆ ಕಾರಣನಾದರೆ; ಅರಿವಿಲ್ಲದಾತ ಭವಸಾಗರದಲ್ಲೆ ತೊಳಲಾಡುತ್ತಾನೆ. ಇಂತಹ ಅರಿವಿನ ಅನುಭವ ಉಳ್ಳಾತನ ಸ್ಥಿತಿ, ಸಾಧನೆ ಹಾಗೂ ಸಿದ್ಧಿಗಳನ್ನು ಕುರಿತು ಅಲ್ಲಮಪ್ರಭುವಿನ ಈ ವಚನ ಸಮಗ್ರ ಚಿತ್ರಣವನ್ನೆ ಕಣ್ಣಿಗೆ ಕಟ್ಟಿಕೊಡುವಂತಿದೆ:

ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯಾ ಭ್ರಾಂತಿಯ ಬೇರ
ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯಾ ಬ್ರಹ್ಮ ಬೀಜವ.
ಅಖಂಡ ಮಂಡಲವೆಂಬ ಬಾವಿ, ಪವನವೆ ರಾಟಾಳ
ಸುಷುಮ್ನನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ.
ಆವಾಗಳೂ ಈ ತೋಂಟದಲ್ಲಿ ಜಾಗರವಿದ್ದು
ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ.

ಅವನ ಪ್ರಕಾರ ತಾವಾಡುವ ಮಾತಿನ ಆಳದ ಅರಿವಿಲ್ಲದವರ ನಡೆ-ನುಡಿ ಹುಸಿಯಾದದ್ದು. ಅಷ್ಟೇ ಅಲ್ಲ, ಇಂತಹ ಬಹುಭಾಷಿಕರು ಯಾವಾಗಲೂ ಸುಭಾಷಿತವರ್ಜಿತರಾಗಿರುತ್ತಾರೆ. ಇವೆಲ್ಲದರ ಯಥಾಸ್ಥಿತಿಯನ್ನು ಕಾಯ್ದಿರಿಸಿಕೊಳ್ಳುವ ಶಕ್ತಿವುಳ್ಳಾತ ಮಾತ್ರ. ಸಮತೆ ಸೈರಣೆಗಳನ್ನು ಹೊಂದಿ ಉತ್ತಮ ಅರಿವುಳ್ಳ ಜ್ಞಾನಿಯಾಗುತ್ತಾನೆ.

ಅರಿವನ್ನು ಕುರಿತಂತೆ ಚೆನ್ನಬಸವಣ್ಣನೂ ಸಾಕಷ್ಟು ವಿಚಾರ ಮಾಡಿದ್ದಾನೆ. ಅವನ ವಚನಗಳ ಇಂಗಿತವನ್ನೇ ಆಧರಿಸಿ ಹೇಳುವುದಾದರೆ ಅರಿವಿಲ್ಲದವರು ಮಾತ್ರ ಈ ಭವಕ್ಕೆ ಬರುತ್ತಾರೆ. ಅರಿವಿಲ್ಲದವರಿಗೆ ಗುರುವೂ ಇಲ್ಲ, ಆಚಾರವೂ ಇಲ್ಲ. ಅರಿವಿನಿಂದ ಅನುಭಾವ. ಅನುಭಾವದಿಂದ ಅರಿವು; ಅರಿವು-ಅನುಭಾವಗಳ ಸಮರಸವಾದುದೆ ಆನಂದ; ಈ ಜೀವನಾನಂದವೆಂಬ ಪರಮಾನಂದಕ್ಕೆ ಅರಿವೆ ಮೂಲ ಸಾಧನವೆಂಬುದು ಆತನ ದೃಢನಿಲುವು. ಇದೇ ವಿಚಾರವನ್ನು ಕುರಿತು ಸಿದ್ಧರಾಮನೂ 'ಅರಿತವನೆ ಚಿರಂಜೀವಿ' ಎನ್ನುತ್ತಾನೆ. ಅರಿವಿನ ಮೂಲವನ್ನು ಕುರಿತು 'ಅರಿವಿಂಗೆ ಆಚರಣೆಯೇ ಮೂಲ; ಆಚರಣೆಗೆ ಗುರುಭಕ್ತಿಯೇ ಮೂಲ; ಗುರುಭಕ್ತಿಗೆ ಕಪಿಲಸಿದ್ಧ ಮಲ್ಲಿಕಾರ್ಜುನನ ಶರಣರೇ ಮೂಲ'ವೆನ್ನುತ್ತಾನೆ. ಅವನ ದೃಷ್ಟಿಯಲ್ಲಿ ಅರಿವು ಜ್ಞಾನದ ಬಲ. ಅರಿವು ಸಜ್ಜನ ಸಹವಾಸದ ಬಲ. ಅರಿವು ಬಾಹ್ಯದಲ್ಲಿ ಇಷ್ಟಲಿಂಗ. ಅರಿವು ಅಂತರಂಗದಲ್ಲಿ ಪ್ರಾಣಲಿಂಗ, ಅರಿವು ಭಾವದಲ್ಲಿ ಆತ್ಮಲಿಂಗ. ಅರಿವಿನಿಂದಲೇ ಈ ಪಿಂಡಾಂಡಧಾರಿ ಜೀವಾತ್ಮ; ಬ್ರಹ್ಮಾಂಡಧಾರಿ ಪರಮಾತ್ಮನಾಗುವ ಪರಮೋನ್ನತಿಯ ಬಗೆ ಎಂಬುದಾಗಿ ಸ್ಥೂಲವಿವರಣೆಯನ್ನೆ ನೀಡಿದ್ದಾನೆ. ಅವನ ಪ್ರಕಾರ 'ಅರುಹು ಬೇಕು ಆಚರಣೆಯಲ್ಲಿ, ಮರಹು (ಅಜ್ಞಾನ) ಬೇಕು ವಿಷಯಂಗಳಲ್ಲಿ'.

ಆದಯ್ಯ ಇದೇ ಅರಿವನ್ನು ಕುರಿತಾಗಿ 'ಯಾವಾತನ ಮನವು ಅಂತರ್ಮುಖವಾಗುವುದೋ. ಅದೇ ಅರಿವು; ಆತನೇ ಅವಿರಳಜ್ಞಾನಿ' ಎನ್ನುತ್ತಾನೆ. ಅವನ ದೃಷ್ಟಿಯಲ್ಲಿ ವೇದ-ಶಾಸ್ತ್ರ-ಪುರಾಣಗಳನರಿದ ಸಂಬಂಧಿಗಳಲ್ಲದವರಿಗೆ ಆಚಾರ-ವಿಚಾರಗಳೆ ಅಳವಡುವುದಿಲ್ಲ. ಅರಿವಿನ ಮಾರಿತಂದೆ ಕೂಡ ತನ್ನ ವಚನಗಳಲ್ಲಿ 'ಜ್ಞಾನಕ್ಕೆ' ಹೆಚ್ಚಿನ ಒತ್ತು ನೀಡಿ. ಅಜ್ಞಾನ-ಸುಜ್ಞಾನಗಳ ನಡುವಿನ ಅಂತರಕ್ಕೆ 'ಅರಿವೆ' ಮೂಲ ಕಾರಣವೆಂಬುದನ್ನು ಖಚಿತಪಡಿಸಿದ್ದಾನೆ. ಜ್ಞಾನಿಗಳಾದವರು ಮರವೆಗೆ (ಅಜ್ಞಾನಕ್ಕೆ) ಮುನಿವರಲ್ಲದೆ ಅರಿವಿಗೆ (ಜ್ಞಾನಕ್ಕೆ) ಮುನಿವರೆ? ಎಂಬ ನಿಶ್ಚಿತ ನಿಲುವು ಅವನದು. "ಕಳೆ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ ಬೆಳೆಗೆ ಮುನಿದವರುಂಟೆ? ಕೊಲ್ಲಿ ಆವಿಂಗೆ ಕಾಲ ಕಟ್ಟುವರಲ್ಲದೆ ಮೊಲೆಯ ಕಟ್ಟಿದವರುಂಟೆ?" ಇಂತಹ ಸಾಮಾನ್ಯ ಅರಿವು ಯಾರಿಗೆ ತಾನೆ ಬೇಡವೆಂಬ ಪ್ರಶ್ನಾತೀತ ತರ್ಕ ಮಾರಯ್ಯಗಳದು. 'ಗುರುವಾದರೂ ಆಗಲಿ. ಲಿಂಗವಾದರೂ

ಆಗಲಿ, ಜಂಗಮವಾದರೂ ಆಗಲಿ, ಅರಿವಿಂಗೆ ಶರಣು ಮರವಿಂಗೆ ಮಥನವ ಮಾಡಿದಲ್ಲದೆ ಸಲ್ಲದು. ಇದು ನೀವು ಕೊಟ್ಟ ಅರಿವಿನ ಮಾರನ ಇರವು' ಎಂಬ ಅಂತಿಮ ಸಂದೇಶ ಅವನದು.

ಶರಣರು ಕಂಡುಕೊಂಡಿದ್ದ ಅರಿವು ಅವರ ಜೀವನದ ಅನುಭವ ಹಾಗೂ ಅನುಭಾವ ಇವೆರಡರ ಪರಿಪಕ್ವ ಫಲಶೃತಿಯೇ ಆಗಿತ್ತು ಎಂಬ ವಿಚಾರವನ್ನು ಇಲ್ಲಿ ಮನಗಾಣಬೇಕಾಗಿದೆ. ಏಕೆಂದರೆ ಅವರ ಪ್ರಾಪಂಚಿಕ ಅನುಭವವೆಲ್ಲಾ ಅನುಭಾವದ ಮೂಸೆಯಲ್ಲಿ ಪರಮಾರ್ಥದ ಪ್ರಕ್ರಿಯೆಗಳಾಗಿ ರೂಪುಗೊಂಡ ಪರಿಕಲ್ಪನೆ ಸರ್ವಜನಾದರಣೀಯ. ಈ ಹಿನ್ನೆಲೆಯಲ್ಲಿ ಅರಿವನ್ನು ಕುರಿತು ಇನ್ನೂ ಬಹಳಷ್ಟು ವಚನಕಾರರ ಅಭಿಪ್ರಾಯಗಳ ಸಂಗ್ರಹರೂಪವಾಗಿರುವ "ಅರುಹ ಅರಿಯಲೆಂದು ಕುರುಹ ಕೈಯಲಿ ಕೊಟ್ಟ! ಅರುಹನೆ ಮರೆದು ಕುರುಹನೆ ಹರಿದ! ಈ ಕುರುಂಬರಿಗಿನ್ನೆತ್ತಣ ಮುಕ್ತಿಯೊ?" ಎಂಬ ಜೇಡರ ದಾಸಿಮಯ್ಯನ ವಚನದೊಂದಿಗೆ ಅಂತಿಮಗೊಳಿಸಲಾಗಿದೆ.

ಆಚಾರ-ವಿಚಾರ

'ವಿಚಾರದಲ್ಲಿ ಕಡಿಮೆಯಾದರೂ ಆಚಾರದಲ್ಲಿ ಕಡಿಮೆ ಇಲ್ಲ' ಎಂಬ ಗಾದೆ ಮಾತೊಂದಿದೆ. ಯಾವುದೇ ಜಾತಿ-ಜನಾಂಗವಾದರೂ ಅವರವರದೇ ಆದ ಆಚಾರ-ವಿಚಾರಗಳು ಇದ್ದೇ ತೀರುತ್ತವೆ. ಇಲ್ಲಿ 'ವಿಚಾರ'ವೆಂಬುದು ಬೌದ್ಧಿಕ ಹಿನ್ನೆಲೆಯುಳ್ಳ 'ವಿವೇಚನೆಗೆ' ಸಂಬಂಧಿಸಿದ ಅಂಶವಾದರೆ: 'ಆಚಾರ'ವೆಂಬುದು ಬೌದ್ಧಿಕ ಹಾಗೂ ದೈಹಿಕ ಇವೆರಡು ಹಿನ್ನೆಲೆಯುಳ್ಳ 'ಆಚರಣೆಗೆ' ಸಂಬಂಧಿಸಿದ ಅಂಶವಾಗಿದೆ. ಹೀಗಾಗಿ ಆಚಾರ-ವಿಚಾರ ಇವೆರಡೂ ಅಂಶಗಳು ನೈತಿಕ ಹಿನ್ನೆಲೆಯ ತಳಹದಿಯುಳ್ಳವೇ ಆಗಿದ್ದು, 'ಕಲಿಕೆ' ಮತ್ತು 'ಗ್ರಹಿಕೆ'ಗಳನ್ನು ಆಧರಿಸಿದ ಅಂಶಗಳೆ ಆಗಿವೆ.

`ಆಚಾರ'ವೆಂದರೆ ಕಟ್ಟುಪಾಡು, ನಿಯಮ, ಸಂಪ್ರದಾಯ ಇವೇ ಮೊದಲಾದ ಅರ್ಥಗಳಿವೆ. ಸಾಮಾನ್ಯವಾಗಿ ಆಚಾರವು ವ್ಯಕ್ತಿಯ ಧಾರ್ಮಿಕ ಅನುಸರಣೆಗಳಿಗೆ ಹೆಚ್ಚಿನ ಸಂಬಂಧ ಉಳ್ಳದ್ದಾಗಿದೆ. `ವಿಚಾರ'ವೆಂದರೆ ವಿವೇಚನೆ; ಪರಾಮರ್ಶೆ; ವಿವೇಕ; ತೀರ್ಮಾನ ಇವೇ ಮೊದಲಾದ ಅರ್ಥಗಳುಂಟು. ಇತ್ತೀಚೆಗೆ ಇವೆಲ್ಲಾ ಪದಗಳಿಗೂ ಪರ್ಯಾಯವಾಗಿ `ವೈಚಾರಿಕತೆ' ಎಂಬ ಪದವು ವಿಶೇಷವಾಗಿ ಬಳಕೆಯಾಗುತ್ತಿದೆ. ಈ ಮೊದಲೆ ಪ್ರಸ್ತಾಪಿಸಿರುವ ಜ್ಞಾನ ಮತ್ತು ಅರಿವು ಇವೆರಡರ ಸಂಬಂಧವಾಗಿ ಹುಟ್ಟಿಕೊಳ್ಳಬಹುದಾದ ಒಂದು ಬಗೆಯ ಮಾನಸಿಕ ಹಾಗೂ ದೈಹಿಕ ಪ್ರಕ್ರಿಯೆಗಳೆ ಈ ಆಚಾರ-ವಿಚಾರಗಳು. ಇಂದಿನ ಪ್ರಚಲಿತ ಶಿಕ್ಷಣದ ಮೂಲ ಉದ್ದೇಶವೂ ಕೂಡ ವ್ಯಕ್ತಿಯನ್ನು ಒಳ್ಳೆಯ ಆಚಾರ-ವಿಚಾರವಂತನನ್ನಾಗಿ ಪ್ರಚೋದಿಸುವುದೆ ಆಗಿದೆ. ಹೀಗೆ ಸರ್ವಕಾಲಕ್ಕೂ ಶೈಕ್ಷಣಿಕ ಮೌಲ್ಯಗಳೆನಿಸಿದವುಗಳನ್ನು ಕುರಿತು ವಚನಕಾರರು ಪ್ರತಿಪಾದಿಸಿರುವ ವಿಚಾರಗಳ ಬಗ್ಗೆ ಸಂಕ್ಷಿಪ್ತ ಪರಿಚಯವಿಲ್ಲಿದೆ.

ಮೊದಲಿಗೆ ಈ ಆಚಾರ-ವಿಚಾರಗಳೆರಡನ್ನೂ ಮೇಳವಿಸಿಕೊಂಡಂತೆ ರೂಪಿತವಾದ ಬಸವಣ್ಣನ ವಚನವೊಂದನ್ನು ನೋಡೋಣ: "ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೆ ಮರ್ತ್ಯಲೋಕ; ಆಚಾರವೇ ಸ್ವರ್ಗ; ಅನಾಚಾರವೇ ನರಕ,...." ಇಲ್ಲಿ ಬರುವ ಆಚಾರ-ಅನಾಚಾರ, ಸತ್ಯ-ಮಿಥ್ಯ ಇವೆಲ್ಲಾ ಮೌಲಿಕ ವಿಚಾರಗಳೂ ಎಲ್ಲಾ ಕಾಲದ ಬದುಕಿನ ಆಚಾರ-ವಿಚಾರಗಳೆ ಆಗಿವೆ. ಹೀಗಾಗಿ ಬಸವಾದಿ ಪ್ರಮುಖರು ಕಂಡರಿಸಿದ ಇಂತಹ ಅಮೋಘ ಕಲ್ಪನೆಗಳು ಎಂದೆಂದಿಗೂ ಅನುಕರಣೀಯವಾದ ಮೌಲ್ಯಗಳೆ ಸರಿ.

ಮೇಲ್ಕಂಡಂತೆ ಆಚಾರವು ಅಂದಿಗೆ ಸಂಬಂಧಪಟ್ಟ ವಿಚಾರ; ಆಚಾರಕ್ಕೆ ಅರಿವೇ ಆಧಾರ.

ಇದೇ ರೀತಿ ವಿಚಾರವು ಜ್ಞಾನಕ್ಕೆ ಸಂಬಂಧಪಟ್ಟ, ವಿಚಾರ; ವಿಚಾರಕ್ಕೆ ಜ್ಞಾನವೇ ಆಧಾರ. ಈ ಆಚಾರ-ವಿಚಾರಗಳೆರಡೂ ಮನುಷ್ಯನ ಅಂತರಂಗ-ಬಹಿರಂಗಗಳ ಶುದ್ಧಿಗೆ ಕಾರಣವಾದ ಅಂಶಗಳೇ ಆಗಿವೆ. ಚೆನ್ನಬಸವಣ್ಣ ಹೇಳುವಂತೆ 'ಆಚಾರವೆ ಜಂಗಮ, ವಿಚಾರವೆ ಭಕ್ತ; ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ ನಾರಿ, ಸಮತೆ ಎಂಬ ತಿರುವ ಮೆಟ್ಟಿ ಜೇವೊಡೆಗೆಯ್ದು, ಶಿಷ್ಯನೆಂಬ ಬಾಣವ ತೊಡಚಿ, ಗುರುವೆಂಬ ವ್ಯಾಧನು ಲಿಂಗವೆಂಬ ಬಯಲ ಗುರಿಯನೆಚ್ಚಡೆ, ಗರಿ ತೋರದಂತೆ ಮುಳುಗಿ ಅಡಗಿತ್ತು. ಆ ಗುರಿಯ ಬಾಣವನು ಅರಸಲುಂಟೆ....." ಎನ್ನುತ್ತಾನೆ. ಇಲ್ಲಿ ಆಧ್ಯಾತ್ಮದ ಅನುಭವವನ್ನೇ ಮೂಲಗುರಿಯನ್ನಾಗಿ ಇರಿಸಿಕೊಂಡಿದ್ದರೂ; ಆಚಾರ-ವಿಚಾರಗಳ ಸಲುವಾಗಿಯೆ ಏರ್ಪಟ್ಟ, ಗುರು-ಶಿಷ್ಯರ ಬಾಂಧವ್ಯದಲ್ಲಿನ ಔನ್ನತ್ಯದ ದಿಕ್ಕನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಇದೇ ವಿಚಾರಗಳಿಗೆ ಸಂಬಂಧಪಟ್ಟಂತೆ 'ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ' ಎಂಬುವವರನ್ನು ಚೆನ್ನಬಸವಣ್ಣ ಅನಾಚಾರಿಗಳೆಂದೇ ಕರೆದಿದ್ದಾನೆ. ಇದೇ ಮಾತಿಗೆ ಪೂರಕನಾಗಿ 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರು ಒಂದೇ ಎಂದು ಕೊಟ್ಟು, ಕೊಂಬುಮ ಸದಾಚಾರ, ಉಳಿದುದೆಲ್ಲಾ ಅನಾಚಾರ'ವೆಂದು ಬಸವಣ್ಣ ನಿರ್ಧರಿಸಿದ್ದಾನೆ.

ವಚನಕಾರರ ದೃಷ್ಟಿಯಲ್ಲಿ ಆಚಾರವು ಲಿಂಗಸ್ವರೂಪವಾದದ್ದು. ವಿಚಾರವು ಅಂಗಸ್ವರೂಪವಾದದ್ದು. ಅಲ್ಲಮ ಪ್ರಭುವು ಹೇಳಿರುವಂತೆ - ಲಿಂಗದಲ್ಲಿ ಅಳವಟ್ಟಿಪ್ಪ ಆಚಾರವೇ ಅಂಗ; ಅಂಗದಲ್ಲಿ ಆಳವಟ್ಟಿಪ್ಪ ವಿಚಾರವೇ ಲಿಂಗ. ಇಂತಿವೆರಡರ ಅರಿವಿಲ್ಲದ ಶರಣರಿಗೆ ಲಿಂಗವೂ ಇಲ್ಲ, ಅಂಗವೂ ಸಲ್ಲದು. ಅವನ ಪ್ರಕಾರ ಆಚಾರ ಕ್ರಮದಲ್ಲಿ ವಿಚಾರವ ಕಾಣಬಲ್ಲಡೆ ಆ ಕಾಯವು ಲಿಂಗಮಯವಾಗಿ ಬಿಡುತ್ತದೆ. ಪ್ರಸ್ತುತ ಹಿನ್ನೆಲೆಯಲ್ಲಿ ವ್ಯಕ್ತಿಯ ಅಂತರಂಗದ ಅರಿವಿಗೆ ಆಚಾರವು ಸಾಧನವಾದರೆ, ಆತನ ಬಹಿರಂಗದ ಅರಿವಿಗೆ ವಿಚಾರವೇ ಬುನಾದಿಯಾಗಿದೆ. ಹೀಗೆ ವ್ಯಕ್ತಿ ತನ್ನ ಅಂತರಂಗ-ಬಹಿರಂಗಗಳ ಪರಿಶುದ್ಧಿಯ ಮೂಲಕ ತನ್ನೊಳಗೆ ಅಡಗಿರುವ ಮಹಾಚೈತನ್ಯವನ್ನು ಕಾಣಬಹುದಾಗಿದೆ ಎಂಬುದೆ ಮೇಲ್ಕಂಡ ಮಾತುಗಳ ಇಂಗಿತ. ಆತ್ಮ-ಪರಮಾತ್ಮ ಇವೆರಡೂ ಒಂದಾಗಿರಲು, ಅಂತರಾತ್ಮವು ವಿಚಾರಕ್ಕೆ ಇಳಿದಾಗ ಅಭ್ಯಾಸವ ಅಗತ್ಯವೇಕೆ? ಎಂಬುದು ಅಲ್ಲಮನ ಪ್ರಶ್ನೆ.

ವಿಚಾರ ಶ್ರೀಮಂತಿಕೆಯಲ್ಲಿ ವಚನಕಾರರು ಎಷ್ಟೊಂದು ಉನ್ನತಿಯನ್ನು ಸಾಧಿಸಿದ್ದರೆಂಬುದಕ್ಕೆ ಉರಿಲಿಂಗಪೆದ್ದಿಯ ಈ ವಚನ ಉತ್ತಮ ದೃಷ್ಟಾಂತವಾದೀತು:

ವೇದವಾಕ್ಯ ವಿಚಾರಕ್ಕೆ ಬೀಜ
ಶಾಸ್ತ್ರವಾಕ್ಯ ಜ್ಞಾನಕ್ಕೆ ಬೀಜ
ಪುರಾಣವಾಕ್ಯ ಪುಣ್ಯಕ್ಕೆ ಬೀಜ
ಆಗಮವಾಕ್ಯ ಅರಿವಿಂಗೆ ಬೀಜ
ಭಕ್ತಿಯ ಫಲ ಸಿದ್ಧಿ ಭವಕ್ಕೆ ಬೀಜ
ಏಕನಿಷ್ಠೆ ಸಮ್ಯಗ್ಜ್ಞಾನಕ್ಕೆ ಬೀಜ
ಸಮ್ಯಗ್ಜ್ಞಾನ ಅದ್ವೈತಕ್ಕೆ ಬೀಜ
ಸುಜ್ಞಾನ ಭಾವ ಮಹವನುಭಾವಕ್ಕೆ ಬೀಜ
ಅರಿವನಾರಡಿಗೊಂಡು ಹುರುಹಿಲ್ಲದ ಲಿಂಗದಲ್ಲಿ
ತೆರಹಿಲ್ಲವಿಪ್ಪ್ರವನರಿಯಾ......"

ಇದೀ ವಚನ ಜ್ಞಾನದಿಂದ ಆವೃತ್ತವಾದ ಅದ್ಭುತ ವಿಚಾರಮಂಥನಕ್ಕೆ ಸಂಬಂಧಪಟ್ಟಿದ್ದು, ಅನುಭವಗ್ರಾಹ್ಯವಾದ ನುಡಿಗಟ್ಟುಗಳನ್ನೆ ಒಳಗೊಂಡಿದೆ. ಇಲ್ಲಿ ಮೊದಲಿನ ನಾಲ್ಕು ಸಾಲುಗಳು ಅಧ್ಯಯನಕ್ಕೆ ಸಂಬಂಧಪಟ್ಟವಾದರೆ; ನಂತರದ ನಾಲ್ಕು ಸಾಲುಗಳು ಅನುಭಾವದ ಸಿದ್ಧಿಯನ್ನು ಕುರಿತು ಹೇಳುತ್ತವೆ. ಕೊನೆಯ ಎರಡು ಸಾಲುಗಳಲ್ಲಿ ಸಂಪೂರ್ಣ ಜ್ಞಾನ ಹಾಗೂ ಸಮಗ್ರ ತಿಳುವಳಿಕೆಯನ್ನು ಅರಿವಿನಿಂದಾವೃತ್ತವಾದ ಕುರುಹಿಲ್ಲದ ಲಿಂಗದಲ್ಲಿ ಹೇಗೆ ಪಡೆಯಬಹುದೆಂಬ ಅನುಸಂಧಾನದ ಬಗೆಯನ್ನು ಮಧುವನ್ನು ಹೀರುವ ದುಂಬಿಯಷ್ಟೆ ಸರಳವೆಂದು ವ್ಯಾಖ್ಯಾನಿಸಲಾಗಿದೆ. ಮೇಲ್ಕಂಡಂತೆ ಅಧ್ಯಯನ, ಅನುಭಾವ ಹಾಗೂ ಅನುಸಂಧಾನ ಇವೆಲ್ಲಾ ಮಾರ್ಗಗಳಿಗೂ ವಿಚಾರವಂತಿಕೆಯ ಮೂಲಪ್ರೇರಣೆ ಎಂಬ ಸರಳ ವಿಚಾರವಿಲ್ಲಿದೆ.

ಕೊನೆಯದಾಗಿ ಜೇಡರ ದಾಸಿಮಯ್ಯನ ಒಂದು ವಚನವನ್ನು ಅವಲೋಕಿಸಿ ಹೇಳುವುದಾದರೆ, ಆತ `ಆಚಾರ ಸಹಿತವಿದ್ದಡೆ ಮಾತ್ರ ಗುರುವೆಂಬೆ ಲಿಂಗವೆಂಬೆ ಜಂಗಮವೆಂಬೆ ಎಂದು ಹೇಳಿ; ಸದಾಚಾರ ಸಹಿತವಿರದೆ ಅನ್ಯವಿಚಾರಗಳಿಗೆ ಎಳಸುವ ಭವಿಗಳೊಡನೆ ಮಾಟಕೂಟವ ಮಾಡಲಾಗವೆಂದು ಒತ್ತಿ ಹೇಳಿದ್ದಾನೆ. ಅಂದರೆ ಶರಣರು ಯಾವತ್ತು ಸಾಮಾಜಿಕವಾಗಿ ಉತ್ತಮ ಶೈಕ್ಷಣಿಕ ಮೌಲ್ಯಗಳೆನಿಸಿದ್ದ ಆಚಾರ-ವಿಚಾರಗಳನ್ನು ಕುರಿತಂತೆ, ಅಪಾರವಾದ ಶ್ರದ್ಧಾಭಕ್ತಿಯುಳ್ಳವರಾಗಿದ್ದರು ಎಂಬುದಕ್ಕೆ ಇಂತಹ ಅನೇಕ ದೃಷ್ಟಾಂತಗಳನ್ನು ನಾವು ಗುರುತಿಸಬಹುದಾಗಿದೆ.

ಗುರು - ಶಿಷ್ಯ : ಭಾರತೀಯ ಶೈಕ್ಷಣಿಕ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠವಾದ ಹಾಗೂ ಮಹತ್ವದ ಸ್ಥಾನವಿದೆ. ಪ್ರಪಂಚದ ಎಲ್ಲಾ ಸನಾತನ ಧರ್ಮಗಳೂ ಕೂಡ ಗುರುವಿಗೆ ಅತ್ಯುನ್ನತವಾದ ಸ್ಥಾನಮಾನಗಳನ್ನೆ ನೀಡಿವೆ. ವೇದಆಗಮಗಳೂ ಸಹ ಗುರುವನ್ನು ತ್ರಿಮೂರ್ತಿಗಳಿಗೆ ಸಮವೆಂದು ಹಾಡಿ ಹೊಗಳಿವೆ :

ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಸದಾಶಿವಃ
ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರವೇ ನಮಃ ||
ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈಶ್ರೀ ಗುರವೇ ನಮಃ ||

ಸರ್ವಜನಾದರಣೀಯವಾದ ಈ ಆರ್ಯೋಕ್ತಿಗಳು ಶ್ರೀ ಗುರುವಿನ ಪಾವಿತ್ರತೆಯನ್ನು ಎತ್ತಿ ತೋರುತ್ತವೆ.

ಯಾವುದೇ ಜ್ಞಾನದ ಮೂಲಬಿಂದುವು ಆರಂಭವಾಗುವುದೇ ಗುರುವಿನಿಂದ. ಗುರುವಿಲ್ಲದೆ ವಿದ್ಯೆ ಇಲ್ಲ. ಸಕಲ ವಿದ್ಯೆಗಳಿಗೂ ಗುರುವಿನ ಮಾರ್ಗದರ್ಶನ ಇರಲೇ ಬೇಕು. ಪ್ರಮಥ ವಚನಕಾರ ಬಸವಣ್ಣ ಹೇಳುವಂತೆ -

ಮಡಕೆಯ ಮಾಡುವೊಡೆ ಮಣ್ಣೇ ಮೊದಲು,
ತೊಡಗೆಯ ಮಾಡುವಡೆ ಹೊನ್ನೇ ಮೊದಲು,
ಶಿವಪಥವನರಿವೊಡೆ ಗುರುಪಥವೇ ಮೊದಲು.........

ಮೂಲತಃ ಗುರುವೆಂಬ ಪದವನ್ನು ನಾನಾ ರೀತಿಗಳಲ್ಲಿ ಅರ್ಥೈಸಿರುವುದು ಉಂಟು. ವಿದ್ಯೆಯನ್ನು ಹೇಳಿಕೊಡುವವನು, ಉಪಾಧ್ಯಾಯ; ಮಾರ್ಗದರ್ಶಿ, ಅವನೆ ಗುರು. ಸೋಮೇಶ್ವರ ಶತಕದಲ್ಲಿ "ಕಲಿಸಿದಾತಂ ವರ್ಣಮಾತ್ರಂ ಗುರು"ವೆಂದು ಕರೆಯಲಾಗಿದೆ. ಧಾರ್ಮಿಕ ಹಿನ್ನೆಲೆಯಲ್ಲಿ

ಮಂತ್ರೋಪದೇಶ ಮಾಡುವವನು; ದೀಕ್ಷೆಯನ್ನು ಕೊಡುವವನು; ಧರ್ಮವನ್ನು ಬೋಧಿಸುವವನು; ಆಧ್ಯಾತ್ಮವಿದ್ಯೆಯನ್ನು ಉಪದೇಶ ಮಾಡುವವನು ಗುರುವೆನಿಸಿಕೊಳ್ಳುತ್ತಾನೆ. ನಾಚಿರಾಜನ ನಾಚಿರಾಜೀಯದಲ್ಲಿ "ಗರ್ಭದಾನಾದಿ ಆದಿಶಬ್ದದಿಂದ........... ಉಪನಯನದ ಸಮಾವರ್ತನ ವಿವಾಹ ಸನ್ಯಾಸ ಎಂಬಿವನು ಮಾಡುವಾತನು ಗುರು" ಎಂದಿದೆ. ಇದೇ ಗುರುವಿಗೆ ಪೂಜ್ಯ, ಹಿರಿಯ, ಮಠಾಧಿಪತಿ, ಸ್ವಾಮಿ, ಅಯ್ಯ ಎಂಬ ಇವೇ ಮೊದಲಾದ ಅರ್ಥಗಳೂ ಉಂಟು. 'ಗುರುವಿಲ್ಲದ್ದು ಮಠವಲ್ಲ; ಹಿರಿಯರಿಲ್ಲದ್ದು ಮನೆಯಲ್ಲ' ವೆಂಬ ಈ ಜನವಾಣಿ ಕೂಡ ಮೇಲಿನ ಅರ್ಥಗಳಿಗೆ ಪೋಷಕವಾಗಿಯೆ ಇದೆ. ಹೀಗೆ ನಮ್ಮ ಪ್ರಾಚೀನ ವಾಙ್ಮಯದಲ್ಲಿ ಗುರುವನ್ನು ಕುರಿತು ಅರ್ಥೈಸಲಾಗಿದೆ.

ವಚನಕಾರರಲ್ಲಿ ಗುರುವನ್ನು ಕುರಿತ ಅರ್ಥ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಅಂತಹ ವಿಭಿನ್ನತೆಗಳೇನೂ ಎದ್ದು ಕಾಣುವುದಿಲ್ಲವಾದರೂ, ಗುರುವನ್ನೇ ಆಧರಿಸಿ ಅವರು ರಚಿಸಿರುವ ವಚನ ವ್ಯಾಖ್ಯಾನಗಳಂತು ಅದ್ಭುತವಾಗಿವೆ. ವಚನಕಾರರಲ್ಲಿ ಬಹಳ ಮಹತ್ವದ ಮಾನ್ಯತೆಯನ್ನು ಪಡೆದಿರುವಾತ ಗುರುವೆ ಆಗಿದ್ದಾನೆ. ಚೆನ್ನಬಸವಣ್ಣ-

ಗುರುವೆ ಪರಮಗುರುವೆ ನೀನೆ ಗತಿಯಯ್ಯ
ಆದಿಪುಳಕ್ಕೆ ಮೂಲಿಗನಾಗಿ ಸುಳುಹುದೋರಿ
ಜಗವ ಪಾವನವ ಮಾಡಬಂದೆಯಯ್ಯಾ
ಬಹುಮುಖ ದೇವರಿಗೆ ಬಹುಮುಖ ಪ್ರಸಾದವ
ತೋರಿದೆಯಯ್ಯಾ ಭುವನವ ಸಲಹಲೆಂದು ಅವತರಿಸಿದೆಯಯ್ಯಾ.....

ಎಂದು ಹೇಳಿ ಗುರುವಿನ ಪರಮೋನ್ನತ ಪ್ರಾಮುಖ್ಯತೆಯನ್ನು ವಿಸ್ತರಿಸಿದ್ದಾನೆ. ಅಕ್ಕಮಹಾದೇವಿಯೂ ಇಂತಹುದೇ ವ್ಯಾಖ್ಯಾನಗಳನ್ನು ಮುಂದುವರೆಸಿ,

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ ನಮೋ
ಭವಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ ನಮೋ
ಭವಿ ಎಂಬುದ ತೊಡೆದು ಭಕ್ತೆಯೆನಿಸಿದ ಗುರುವೆ ನಮೋ
ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ ನಮೋ ನಮೋ.....

ಎಂದು ಹೇಳಿ ಇಹ-ಪರಗಳೆರಡರ ಸಮಾಗಮದೊಂದಿಗೆ ಪರಮಪದವಿಯನ್ನು ಪಡೆಯುವ ಪಥ ಗುರುಪಥವೇ ಸರಿ. ಇಂತಹ ಸತ್ಪಥವನ್ನು ಕರುಣಿಸಿದ ಕಾರುಣ್ಯಮೂರುತಿ ಶ್ರೀ ಗುರುವಿಗೆ ನಮೋ ನಮೋ ಎಂದು ಬಹು ವಂದನೆಗಳನ್ನು ಸಲ್ಲಿಸಿರುವ ಅಕ್ಕನ ಈ ಮಾತುಗಳು ಎಲ್ಲಾ ಕಾಲಕ್ಕೂ ಒಪ್ಪತಕ್ಕವೆ ಆಗಿವೆ.

ಗುರುಕಾರುಣ್ಯವನ್ನು ಕುರಿತು ಅಲ್ಲಮಪ್ರಭುವು ರಾಜಸಭೆ ದೇವಸಭೆಯೊಳಗೆ ದೇವರಾಜ ಪೂಜಕರೆಲ್ಲಾ ಮುಖ್ಯರಿಗೆ ಗುರುಕರುಣವೇ ಮುಖ್ಯವೆಂದು ಒತ್ತಿ ಹೇಳಿದ್ದಾನೆ. ಅವನ ಪ್ರಕಾರ ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ ಕಾಣದುದನ್ನು ಕಾಣಬಹುದು. ಗುರುವಾದವನು ಪಂಚಬ್ರಹ್ಮ (ಸತ್ಯ)ಗಳನ್ನು ಅರಿತವನಾಗಿರಬೇಕು. "ಶಿವನ ಗುರುವೆಂದು ಬಲ್ಲಾತನೆ ಗುರು, ಶಿವ ಲಿಂಗವೆಂದು ಬಲ್ಲಾತನೆ ಗುರು, ಶಿವ ಜಂಗಮವೆಂದು ಬಲ್ಲಾತನೆ ಗುರು, ಶಿವ ಆಚಾರವೆಂದು ಬಲ್ಲಾತನೆ ಗುರು, ಶಿವ ವಿಚಾರವೆಂದು ಬಲ್ಲಾತನೆ ಗುರು. ಇಂತೀ ಪಂಚವಿಧವೆ ಪಂಚಬ್ರಹ್ಮವೆಂದು ಅದು ಮಹಾಮಹಿಮ ಸಂಗಮ ಬಸವಣ್ಣ ಎನಗೆಯೂ ಗುರು, ನಿಮಗೆಯೂ

ಗುರು, ಎಲ್ಲರಿಗೂ ಗುರು..." ಎಂದು ಹೇಳಿ ಬಸವಣ್ಣನಲ್ಲಿ ಮಹಾಗುರುತ್ವವನ್ನು ಕಂಡಿದ್ದಾರೆ. ಇಂತಹ 'ಮಹಾಗುರು ಚರಣದ ಮೇಲೆ ತನುತ್ರ್ಯಣವ ತಂದಿರಿಸಿದರೆ, ಆತನ ಸರ್ವಾಂಗವೆಲ್ಲಾ ಲಿಂಗ ಕಾಣಾ' ಎಂಬುದಾಗಿ ಜೇಡರ ದಾಸಿಮಯ್ಯ ಹೇಳುತ್ತಾನೆ. ಸಿದ್ಧರಾಮನಂತೂ ಗುರುವನ್ನು "ಜ್ಞಾನದ ಜಂಗಮ"ನೆಂದೇ ಕರೆದಿದ್ದಾನೆ. ಇಂತಹ ಜ್ಞಾನದ ಜಂಗಮನ ಅಸ್ತಿತ್ವವನ್ನು ಕುರಿತಂತೆ, ಬಸವಣ್ಣನ "ಎಡದ ಕೈಯಲು ಹಾಲುಬಟ್ಟಲು, ಬಲದ ಕೈಯಲು ಓಜುಗಟ್ಟಿಗೆ, ಆವಾಗ ಬಂದಾನೋ ನಮ್ಮಯ್ಯ ಬಡಿದು ಹಾಲು ಕುಡಿಸುವ ತಂದೆ....," ಎಂಬ ಈ ಅದ್ಭುತ ಕಲ್ಪನೆ ಕಣ್ಣಿಗೆ ಕಟ್ಟಿಕೊಡುವಂತಿದೆ.

ಗುರುವಾದವನಿಗೆ ಅವನದೇ ಆದ ಆಚಾರ-ವಿಚಾರ, ಘನತೆ-ಗೌರವಗಳು ಇರಬೇಕಾದದ್ದು ಅನಿವಾರ್ಯ. ಈ ಹಿನ್ನೆಲೆಯಲ್ಲಿ ವಚನಕಾರರು ಗುರುವಿನ ವೈಲಕ್ಷಣ್ಯಗಳನ್ನು ಕುರಿತು ಸಾಕಷ್ಟು ವಿಚಾರ ಮಾಡಿದ್ದಾರೆ. `ಗುರುವಾದವನು ಜಡೆ, ಮುಡಿ, ಬೋಳು ಹೇಗಾದರೂ ಇರಲಿ, ಅವನಲ್ಲಿ ನಡೆ-ನುಡಿ ಸಿದ್ಧಾಂತವಾದರೆ ಸಾಕು, ಆತ ಪರಂಜ್ಯೋತಿ ಗುರುವಾಗುತ್ತಾನೆ ಎಂಬ ಸ್ಪಷ್ಟ ಅಭಿಮತ ಕೋಲಶಾಂತಯ್ಯನದು. ಇವನಿಗಿಂತ ಒಂದು ಹೆಜ್ಜೆ ಮುಂದಿಡುವ ಮಡಿವಾಳ ಮಾಚಯ್ಯ "ಗಡ್ಡ, ಜಡೆ, ಮುಡಿಗಳು ಬಿಟ್ಟುಕೊಂಡು, ಲಾಂಛನವ ಹೊದ್ದುಕೊಂಡು, ಕಾಂಚನಕ್ಕೆ ಕೈಯೊಡ್ಡುವ ಕಂಚುಗಾರನಂತೆ ಬೊಗಳುವ ಪಾತಕರಿಗೆ ಕಿರಾತರು ಮೆಚ್ಚುವರಲ್ಲದೆ ಪುರಾತನರು ಮೆಚ್ಚುವರೆ?" ಎಂದು ಪ್ರಶ್ನೆಮಾಡುವುದರ ಮೂಲಕ, ಪರೋಕ್ಷವಾಗಿ ಗುರುವಾದವನ ಅಂತಸ್ಸತ್ವಗಳ ಕಡೆಗೆ ಒತ್ತುನೀಡಿದ್ದಾನೆ. ಏಕೆಂದರೆ ಶರಣರ ದೃಷ್ಟಿಯಲ್ಲಿ ಗುರುವಿನ ವ್ಯಕ್ತಿತ್ವ ಪಾರದರ್ಶಿಯಾದದ್ದು. ಅದು ಅರಿವನ್ನು ಅರಸಿ ಬರುವವನ ಸ್ವರೂಪವನ್ನು ಪರಿಪೂರ್ಣಗೊಳಿಸುವಂಥದ್ದು. ಅದಕ್ಕೆ ಜಾತಿ, ಮತ, ಕುಲ, ಭೇದಗಳೆಂಬ ಕಟ್ಟುಕಟ್ಟಳೆಗಳಿಲ್ಲ. ಚಂದಿಮರಸ ಹೇಳುವಂತೆ `ತನ್ನವಾದಡೇನೋ ಕನ್ನಡಿ, ಅನ್ಯರದಾದಡೇನೋ ಕನ್ನಡಿ, ತನ್ನ ರೂಪ ಕಂಡಡೆ ಸಾಲದೆ? ಸದ್ಗುರು ಆವನಾದಡೇನೋ ತನ್ನನರುಹಿದಡೆ ಸಾಲದೆ?' ಎಂಬಂತಿರುತ್ತದೆ.

ಸದ್ಗುರುವಾದವನು 'ಕೋಲೊಂದರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲಿಸುವಂತಹ' ನಿಯಂತ್ರಣ ಸಾಮರ್ಥ್ಯ ಉಳ್ಳವನಾಗಿರುತ್ತಾನೆ. ಶಿಷ್ಯನಾದವನ ಸರ್ವಪ್ರಪಂಚವ ನಿವೃತ್ತಿಮಾಡಿ, ಉತ್ತಮ ಉಪದೇಶವ ನೀಡಿ, ನಿಜದ ಆದಿಯನ್ನು ತೋರಿಸುವ ಸನ್ಮಾರ್ಗದರ್ಶಕ ನೀತ. ಇಂತಹ ಶ್ರೀಗುರುವಿನ ಸಂಸರ್ಗಕ್ಕೆ ಬಂದ ಶಿಷ್ಯನ ಪರಿಣಾಮವೇ ಭಿನ್ನವಾದದ್ದು. "ಶ್ರೀಗುರು ಸೋಂಕಿದ ಶಿಷ್ಯ ಜ್ಯೋತಿಯಿಂದಾದ ಜ್ಯೋತಿಯಂತೆ, ಭ್ರಮರನಿಂದಾದ ಕೀಟ ಭ್ರಮರವಾದಂತೆ, ಗುರು ವಿಭೇದನಾಗಿರನು. ಇಂತಪ್ಪ ಶಿಷ್ಯನು ಸದ್ಗುರುವಿನ ಮೂರ್ತಿಯನ್ನು ಧ್ಯಾನಿಸಿ, ಪಾದಗಳನ್ನು ಪೂಜಿಸಿ, ಗುರುವಾಕ್ಯವೇ ಮಂತ್ರವೆಂದು ನಂಬಿ, ಗುರುವಿನ ಕೃಪೆಯೇ ಮುಕ್ತಿಯೆಂದು ತಿಳಿಯುವಾತನೇ ನಿಜವಾದ ಶಿಷ್ಯ"ನೆಂದು ಸೌರಾಷ್ಟ್ರ ಸೋಮೇಶ್ವರನ ಭಕ್ತ ಆದಯ್ಯ ಹೇಳಿದ್ದಾನೆ. ಶ್ರೀಗುರುವಿನ ಕಾರುಣ್ಯ ಶಿಷ್ಯನಾದವನಿಗೆ ಎಷ್ಟೆಲ್ಲಾ ಮಹೋನ್ನತವಾದದ್ದು ಎಂಬುದನ್ನು ಕುರಿತ ಅಕ್ಕಮಹಾದೇವಿಯ ಮಾತುಗಳು ಹೀಗಿವೆ: 'ಸದ್ಗುರು ಸ್ವಾಮಿ ಶಿಷ್ಯರಿಗೆ ಅನುಗ್ರಹವ ಮಾಡುವಲ್ಲಿ, ತಚ್ಛಿಷ್ಯನ ಮಸ್ತಕದ ಮೇಲೆ ತನ್ನ ಶ್ರೀಹಸ್ತವನಿರಿಸಿದಡೆ ಲೋಹದ ಮೇಲೆ ಪರುಷ ಬಿದ್ದಂತೆ' ಆಗುತ್ತದೆ.

ಇನ್ನು ಈ ಗುರು-ಶಿಷ್ಯರಿಬ್ಬರ ನಡುವಿನ ಸಂಬಂಧವಂತೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಅಭೇದವಾದದ್ದು. ಆದಯ್ಯನ ಪ್ರಕಾರ 'ಗುರುವಿನ ಅಂತರಂಗದ ಒಳಗೆ ಶಿಷ್ಯ,

ಶಿಷ್ಯನ ಅಂತರಂಗದ ಒಳಗೆ ಗುರು. ಈ ಗುರುಶಿಷ್ಯ ಸಂಬಂಧ ಶರೀರ ಪ್ರಾಣದಂತೆ ಭಿನ್ನವಾಗದೆ ಇರುವಂತಹುದು'. ಇದೇ ಸಂಬಂಧವನ್ನು ಕುರಿತು ಚೆನ್ನಬಸವಣ್ಣ 'ಜ್ಯೋತಿಯಲೊದಗಿದ ಜ್ಯೋತಿ, ದರ್ಪಣದೊಳಡಗಿದ ಪ್ರತಿಬಿಂಬ, ಸ್ಫಟಿಕದ ಘಟದೊಳಗಿರಿಸಿದ ರತ್ನ'ವೆಂದು ಬಣ್ಣಿಸಿದ್ದಾರೆ. ಇಷ್ಟೆಲ್ಲಾ ಪವಿತ್ರವಾದ, ಉನ್ನತವಾದ ಅವಿನಾಭಾವ ಸಂಬಂಧವುಳ್ಳ ಈ ಗುರು-ಶಿಷ್ಯರಿಬ್ಬರೂ ಕೆಲವೊಂದು ಇತಿಮಿತಿಗೆ ಒಳಪಟ್ಟವರೇ ಆಗಿರುತ್ತಾರೆ. ಒಂದು ವೇಳೆ ಇಂತಹ ಇತಿಮಿತಿಗಳನ್ನು ಅರಿಯದ ಗುರು-ಶಿಷ್ಯರ ಸಂಬಂಧ ಹೇಗಿರುತ್ತದೆಂದರೆ - 'ಅಂಧಕನ ಕೈಯ ಅಂಧಕನೇ ಹಿಡಿದಂತಾಗಿ, ಮುಂದುಗಾಣದ ಮರುಳುಗಳಂತೆ' ಆಗುವುದಾಗಿ ಚಂದಿಮರಸ ಹೇಳಿದ್ದಾನೆ.

ಗುರು-ಶಿಷ್ಯರ ಸಂಬಂಧ ಕಾಲಾತೀತವಾದದ್ದು. ಇಂದು ಮೌಲಿಕವಾಗಿ ಯುಗಮಾನಕ್ಕೆ ಅನುಗುಣವಾಗಿ ವ್ಯತ್ಯಾಸವಾಗತೊಡಗಿದೆ. ಹೀಗೆ ವಿಭಿನ್ನ ಕಾಲಘಟ್ಟಗಳಲ್ಲಿ ಅಧ್ಯಯನ ಹಾಗೂ ಅಧ್ಯಾಪನಗಳಲ್ಲಿ ಉಂಟಾಗಿರುವ ವೈಪರೀತ್ಯಗಳ ಮೇಲೆ ಅಲ್ಲಮ ಪ್ರಭುವಿನ ಈ ವಚನ ವಿಶೇಷವಾದ ಬೆಳಕು ಚೆಲ್ಲುತ್ತದೆ :

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಹೇಳಿದರೆ,
ಆಗಲಿ ಮಹಾಪ್ರಸಾದವೆಂದನಯ್ಯಾ;
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಯ್ದು ಬುದ್ಧಿಯ ಹೇಳಿದರೆ,
ಆಗಲಿ ಮಹಾಪ್ರಸಾದವೆಂದನಯ್ಯಾ;
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಹೇಳಿದರೆ,
ಆಗಲಿ ಮಹಾಪ್ರಸಾದವೆಂದನಯ್ಯಾ;
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಹೇಳಿದರೆ,
ಆಗಲಿ ಮಹಾಪ್ರಸಾದವೆಂದನಯ್ಯಾ;
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾನು ಬೆರಗಾದೆನು.

ಇಂತಹುದೆ ಬಹಳಷ್ಟು ವಚನಗಳಲ್ಲಿ ಕಂಡುಬರುವ ವಾಸ್ತವಾಂಶಗಳು, ಈ ಹೊತ್ತಿನ ದಿನಮಾನಗಳಲ್ಲಿ ಮೌಲಿಕ ವಿಚಾರಗಳಲ್ಲಿನ ಬೇಜವಾಬ್ದಾರಿತನಕ್ಕೆ ಹಿಡಿದ ಕನ್ನಡಿಯಂತಿವೆ. ಮೇಲ್ಕಂಡ ವಚನವಂತೂ ಇಂದಿನ ಶೈಕ್ಷಣಿಕ ದುರವಸ್ಥೆಗೆ ಉತ್ತಮ ನಿದರ್ಶನವಾಗಿದೆ. ಈ ವ್ಯಾಖ್ಯಾನಗಳ ಹಿಂದಿನ ಮನೋಧರ್ಮ ಎಲ್ಲಾ ಕಾಲಕ್ಕೂ ಒಪ್ಪಿತವಾಗುವ ಸಂಗತ ವಿಚಾರಗಳೇ ಆಗಿವೆ.

ಓದು - ವಿದ್ಯೆ : ಓದು, ವಿದ್ಯೆಯಂತಹ ಶೈಕ್ಷಣಿಕ ಪರಿಕಲ್ಪನೆಗಳನ್ನು ಕುರಿತು ವಚನಕಾರರು ಸಾಕಷ್ಟು ವಿಚಾರ ಮಾಡಿದ್ದಾರೆ. ಹನ್ನೆರಡನೆಯ ಶತಮಾನದ ವೇಳೆಗಾಗಲೆ ಈ ವಿಚಾರಗಳ ಬಗ್ಗೆ ವಚನಕಾರರು ಎಷ್ಟೊಂದು ಖಚಿತ ನಿಲುವುಳ್ಳವರಾಗಿದ್ದರು ಎಂದರೆ 'ಓದುವುದು ಸದ್ಗುಣಕ್ಕಲ್ಲದೆ ಕಿವಿಯನೂದುವುದಕ್ಕೇನೋ ಅಯ್ಯಾ! ಮಾಡುವ ಭಕ್ತಿ ಮೋಕ್ಷಕ್ಕಲ್ಲದೆ ಡಂಬಾಚಾರಕ್ಕೇನೋ ಅಯ್ಯಾ! ಆಡುವ ವೇಷ ದ್ರವ್ಯಕ್ಕಲ್ಲದೆ ಜನರಾಡಂಬರಕ್ಕೇನೋ ಅಯ್ಯಾ" ಎಂಬ ಸಿದ್ಧರಾಮನ ಈ ಪ್ರಶ್ನೆಗಳು ಉತ್ತಮ ನಿದರ್ಶನವಾಗಿವೆ.

'ಓದು ಎಂದರೆ ಪಠನಮಾಡು; ಉಚ್ಚರಿಸು; ಅಭ್ಯಾಸಮಾಡು, ವ್ಯಾಸಂಗಮಾಡು, ಕಲಿ ಇವೇ ಮೊದಲಾದ ಅರ್ಥಗಳಿವೆ. ಮೊದಲೆ ಕಂಡಂತೆ ವಚನಕಾರರ ದೃಷ್ಟಿಯಲ್ಲಿ ಓದುವುದು

ಸದ್ಗುಣವಂತರಾಗಲಿಕ್ಕಾಗಿ. ಹಾಗಾದರೆ ಈ ಸದ್ಗುಣವಂತರಾಗುವ ಬಗೆ ಹೇಗೆ? ಈ ಪ್ರಶ್ನೆಗೆ ಬಸವಣ್ಣನ ಒಂದು ವಚನ ಹೀಗೆ ಉತ್ತರಿಸುತ್ತದೆ:- 'ಓದಿದಡೇನು, ಕೇಳಿದಡೇನು, ಶಿವಪಥವನರಿಯದನ್ನಕ್ಕ? ಓದಿತ್ತು ಕಾಣಿರೋ ಶುಕನು, ಶಿವಜ್ಞಾನವರಿಯದನ್ನಕ್ಕ, ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು...' ಎನ್ನುತ್ತಾನೆ. ಇಲ್ಲಿ ಓದಿದ ಓದು ಶಿವಪಥವೆಂಬ ಸದ್ಗುಣಮಾರ್ಗವನ್ನು ತಿಳಿಸುವಂಥದ್ದು ಆಗಿದ್ದರೆ ಮಾತ್ರ ಸದ್ಗುಣಯುತರಾಗಲು ಸಾಧ್ಯ. ಇಂತಹ ಶಿವಪಥವನ್ನು ಅರಿತಿದ್ದ ಮಾದಾರಚೆನ್ನಯ್ಯ ಸದ್ಗುಣ ಪ್ರಸೂತನಾದ ದೃಷ್ಟಾಂತ ಇಲ್ಲಿದೆ.

ಓದಿನ ಪರಿಣಾಮವನ್ನು ಕುರಿತು ಬಸವಣ್ಣ ಹೀಗೆ ವಿಚಾರ ಮಾಡಿದ್ದಾನೆ. 'ನೂರನೋದಿ ನೂರ ಕೇಳಿದಡೇನು? ಆಸೆಯರಿಯದು, ರೋಷ ಬಿಡದು, ಮಜ್ಜನಕ್ಕೆರೆದು ಫಲವೇನು? ಮಾತಿನಂತೆ ಮನವಿಲ್ಲದ ಜಾತಿಡೊಂಬರ ನೋಡಿ ನಗುವ ನಮ್ಮ ಕೂಡಲ ಸಂಗಮದೇವಾ'. ಇಲ್ಲಿ ಓದಿದ ಪರಿಣಾಮ ಹೇಗಿರಬೇಕೆಂಬ ಸ್ಪಷ್ಟ ನಿರ್ದೇಶನವಿದೆ. ಮಾತು ಮನ ಒಂದಾಗದ; ಆಸೆ, ಆಮಿಷ ರೋಷಗಳಿಂದ ಹೊರತಾಗದ; ಇಂತಹ ನಿಜವಾದ ಅರಿವನ್ನು ನೀಡದ ಓದು ಓದಲ್ಲ. ವ್ಯಕ್ತಿಯ ಅಂತರಂಗ ಬಹಿರಂಗಗಳನ್ನು ಒಂದುಮಾಡಿ, ಆತನ ಬದುಕಿನಲ್ಲಿ ಪಾರದರ್ಶಿ ವ್ಯಕ್ತಿತ್ವವನ್ನು ನಿರ್ಮಾಣಮಾಡುವಂತಹ ಓದು ಮಾತ್ರ ಸಾರ್ಥಕ. ಇನ್ನು ಓದಿನ ಪರಿಣಾಮವನ್ನು ಕರಗತ ಮಾಡಿಕೊಂಡವನ ನಡೆ-ನುಡಿಯೇ ಭಿನ್ನವಾಗಿರುತ್ತದೆ. ಆತನ ನುಡಿ - 'ನುಡಿದರೆ ಮುತ್ತಿನ ಹಾರದಂತೆ, ನುಡಿದರೆ ಮಾಣಿಕ್ಯದ ದೀಪ್ತಿಯಂತೆ, ನುಡಿದರೆ ಸ್ಫಟಿಕದ ಶಲಾಕೆಯಂತೆ, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನುವಂತೆ' ಇರುವುದಾಗಿ ಬಸವಣ್ಣ ಪ್ರತಿಪಾದಿಸಿದ್ದಾನೆ.

ಕೊನೆಯದಾಗಿ ಓದನ್ನು ಕುರಿತಾದ ಎಲ್ಲಾ ಚರ್ಚೆಗಳಿಗೂ ಪೂರಕವಾಗಿರುವ ಈ ವಚನವನ್ನು ನೋಡಿ:

ವೇದನಾಲ್ಕನು ಓದಿದಡೇನು?
ಶಾಸ್ತ್ರವ ನೆರೆ ಕೇಳಿದಡೇನು?
ಶಿವಜ್ಞಾನಹೀನರು ಬಲ್ಲರೆ ಭಕ್ತಿಯ ಪಥವ....
ಕ್ಷೀರದೊಳಗಣ ಸಕ್ಕರೆಗ ಸವಿಸ್ವಾದುಗಳ ಬಲ್ಲುದೆ ?
ಓದಿದ ನಿರ್ಣಯವ ನಮ್ಮ ಮಾದಾರ ಚೆನ್ನಯ್ಯ, ಮಡಿವಾಳಯ್ಯ
ಡೋಹಾರ ಕಕ್ಕಯ್ಯನವರು ಬಲ್ಲರು........

ಎಂಬ ಸಂಗಮೇಶ ಅಪ್ಪಣ್ಣನ ಈ ಮಾತುಗಳ ಪ್ರಕಾರ - ಅಂದಿನ ಕೆಳವರ್ಗದ ದಲಿತ ಶರಣರೂ ಕೂಡ ಓದಿದ ಮರ್ಮವನ್ನು ಅರಿತು; ದಿಟ್ಟಬದುಕಿನ, ಧೀರ ನಡೆ-ನುಡಿಯ, ಪರಿಶುದ್ಧ ಜೀವನದ ರೀತಿ-ನೀತಿಗಳನ್ನು ಕಲಿತು, ಸಜ್ಜನರಾಗಿ ಬಾಳಿ ಬೆಳಗಿ ಆತ್ಮೋದ್ಧಾರ ಹೊಂದಿದ ನೇರ ದೃಷ್ಟಾಂತಗಳಿಲ್ಲಿವೆ. ಕೇವಲ ಮೇಲುವರ್ಗದವರಲ್ಲದೆ ಪಾಮರರೂ ಕೂಡ ಓದಿದ್ದರ ಪರಿಣಾಮವಾಗಿ ತಮ್ಮ ಬದುಕನ್ನು ಹೇಗೆ ಉದಾತ್ತವಾಗಿಸಿಕೊಳ್ಳಲು ಸಾಧ್ಯವಾಯಿತೆಂಬ ಸತ್ಯಕಥೆ ಇಲ್ಲಿದೆ.

'ವಿದ್ಯೆ'ಯು ಅರಿವು, ಜ್ಞಾನ, ತಿಳುವಳಿಕೆ ಇವೇ ಮೊದಲಾದ ಅರ್ಥಗಳನ್ನು ಒಳಗೊಂಡಿದೆ. ಇದೂ ಕೂಡ ಓದು, ಕಲಿಕೆ, ಶಿಕ್ಷಣ ಇತ್ಯಾದಿ ಪದಗಳಿಗೆ ತೀರಾ ನಿಕಟವಾದ ಸಂಬಂಧವುಳ್ಳ ಪದವೇ ಆಗಿದೆ. ಬಸವಣ್ಣ ಹೇಳುವಂತೆ 'ವಿದ್ಯೆ - ಗುಣ, ಜ್ಞಾನ, ಧರ್ಮ, ಆಚಾರ, ಶೀಲಂಗಳ ನಮ್ಮ ಕೂಡಲ ಸಂಗನ ಶರಣರು ಸಾಧಿಸಿದ ಸಾಧನೆಯನ್ನೇ ಸಾಧಿಸುವುದು' ಆಗಿರುತ್ತದೆ.

ವಚನಕಾರರ ದೃಷ್ಟಿಯಲ್ಲಿ ಕೇವಲ ಭಾರತ - ರಾಮಾಯಣಗಳ ಪಾರಾಯಣವು ಮಾತ್ರ ವಿದ್ಯೆಯಾಗುವುದಿಲ್ಲ. ಎಲ್ಲಾ ವಿದ್ಯೆಗಳನ್ನು ಬಲ್ಲೆವೆಂಬುವವರು ಇಲ್ಲಿ ಸಲ್ಲದೆ ಹೋಗುತ್ತಾರೆ. ಅಲ್ಲಮ ಪ್ರಭುವು ಹೇಳಿರುವಂತೆ 'ಕತ್ತಲೆಯಲ್ಲಿ ಗತಿ ಕಾಣದೆ ದುಮ್ಮಾನವು ನೆಲೆಗೊಂಡ ಬದುಕಿಗೆ; ಸುಮ್ಮಾನವ ನೀಡಿ ಸಕಲ ಕಲಾವಂತಿಕೆಯನ್ನು ನೀಡುವಂಥದ್ದು' ಈ ವಿದ್ಯೆ. ಅವನ ಪ್ರಕಾರ ಇದೊಂದು ಕಲೆ. ಪಂಚಕಲೆಗಳಲ್ಲಿ ಒಂದು 'ಶಾಂತ್ಯಾತೀತ, ಶಾಂತಿ , ವಿದ್ಯಾ, ಪ್ರತಿಷ್ಠಾ ಮತ್ತು ನಿವೃತ್ತಿ'- ಈ ಪಂಚಕಲೆಗಳಲ್ಲಿ ಒಂದಾದ ವಿದ್ಯಾಕಲೆಯು ವ್ಯಕ್ತಿಯಲ್ಲಿ ಇಚ್ಛಾಶಕ್ತಿಯನ್ನು ಉದಯಿಸುವಂತೆ ಮಾಡುತ್ತದೆ. ವಿದ್ಯಾಕಲೆಯನ್ನು ಹೊಂದಿದವನಲ್ಲಿ ಶ್ರೋತ್ರಾದಿ ಜ್ಞಾನೇಂದ್ರಿಯಗಳು ಮೂರ್ತಿಸಾದಾಕ್ಯವನ್ನು ಕೂಡಿ, ತೇಜತತ್ವವು ಬಯಲಾಗುವುದು ಎನ್ನುತ್ತಾನೆ. ಮನದ ಬೀಸರವೆಂಬ ಗಾಡಾಂಧಕಾರವನ್ನು ನೀಗಲು ವಿದ್ಯಾ ಮೂಲದ ಜ್ಯೋತಿ ಅತ್ಯಾವಶ್ಯಕ.

ವಿದ್ಯೆಯು ಮೂಲತಃ ಅಕ್ಷರಜ್ಞಾನವನ್ನು ಆಧರಿಸಿದ್ದು, ಬಸವಣ್ಣ ಹೇಳುವಂತೆ ಅನ್ನವ ಭೋಗಿಸಿ ಚೈತನ್ಯವ ಕೊಂಡಂತೆ, ಹಳಿವಿಡಿದು ಘೃತವ ಕಾಣುವಂತೆ, ಅಕ್ಷರವಿಡಿದು ವಿದ್ಯೆಯನ್ನು ಅರಿಯುತ್ತೇವೆ. ವಿದ್ಯೆ ನಮ್ಮ ಬದುಕಿನಲ್ಲಿ ಎಷ್ಟೊಂದು ಸೂಕ್ಷ್ಮವೋ, ಅಷ್ಟೇ ಸ್ಥೂಲವೂ ವ್ಯಾಪಕವೂ ಆದ ಗಾಢ ಸಂಬಂಧವುಳ್ಳ ಅದ್ಭುತ ಕಲೆ. ಇಂತಹ ವಿದ್ಯಾಕಲೆಯನ್ನು ಕುರಿತು ವಚನಕಾರರು ಚಿಂತನೆ ನಡೆಸಿದ್ದಾರೆ. ಸಿದ್ಧರಾಮ - 'ವಿದ್ಯೆಯನರಿಯದವ ಗುದ್ದಾಟ ಕ್ಕೊಳಗಾದ, ಅವಿದ್ಯೆಯನರಿಯದವ ಪ್ರಪಂಚವ ಒದ್ದು ಬಿಟ್ಟ, ನೋಡಾ' ಎನ್ನುತ್ತಾನೆ. ಅವನ ಪ್ರಕಾರ 'ವಚಿಸಿ ವಚಿಸಿ ಅನುಭಾವಿಯಾಗದವ ಪಿಶಾಚಿಯಾಗುತ್ತಾನೆ, ವಚಿಸಿ ಅನುಭಾವಿಯಾದವ ಪಂಡಿತನಾಗುತ್ತಾನೆ. ವಿದ್ಯೆ ಎಂಬುದು ಅಭ್ಯಾಸಿಕನ ಕೈವಶ, ಅವಿದ್ಯೆ ಎಂಬುದು ಸರ್ವರಲ್ಲಿಯೂ ಇರುವಂಥದ್ದು' ಹೀಗೆ ವಿದ್ಯಾವಿದ್ಯೆಗಳನ್ನು ಅರಿತು ಯಾರು ಜಗದ್ವೇದ್ಯನಾಗಬಲ್ಲನೋ ಅವನೇ ಘನ ವಿದ್ಯಾವಂತ, ಮಹಾಪಂಡಿತ ಕೂಡ.

ವಚನ ಚಳುವಳಿಯ ಮೂಲಭೂತ ಕಲ್ಪನೆಗಳೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗೆ ಸಂಬಂಧಪಟ್ಟವು. ಈ ಚಳುವಳಿಯು ರೂಪುಗೊಂಡದ್ದೆ ಶಿಕ್ಷಣ ಮತ್ತು ಧರ್ಮಗಳ ತಳಹದಿಯ ಮೇಲೆ. ಇಲ್ಲಿಗೆ ಎಂಟುನೂರು ಐವತ್ತು ವರ್ಷಗಳ ಹಿಂದೆ ಗಾಢಾಂಧಕಾರದಲ್ಲಿ ಮುಳುಗಿದ್ದ ಜನಸಾಮಾನ್ಯರನ್ನು ಸಾಧ್ಯವಾದ ಮಟ್ಟಿಗೆ ಶೈಕ್ಷಣಿಕವಾಗಿ ಮೇಲೆತ್ತುವ ಜೊತೆಗೆ; ಸಾಮಾಜಿಕ ಸ್ವಾಸ್ಥ್ಯವನ್ನೂ ಕಾಪಾಡಿ, ಮುಕ್ತವಾದ ಧಾರ್ಮಿಕ ಜನಜಾಗೃತಿಯನ್ನು ಉಂಟು ಮಾಡುವಲ್ಲಿ ವಚನಕಾರರು ಸಾಕಷ್ಟು ಯಶಸ್ವಿಯಾಗಿದ್ದಾರೆ. ಇವರ ಒಂದೊಂದು ವಚನವೂ ವಿಚಾರ ಪ್ರಚೋದಕವಾಗಿದ್ದು, ಸತ್ಯ ಮತ್ತು ಸರಳತೆಯ ಪ್ರತೀಕವಾಗಿವೆ. ಈ ಹಿನ್ನೆಲೆಯಲ್ಲಿ ವಚನಗಳು ಜನಸಾಮಾನ್ಯರನ್ನು ಸುಶಿಕ್ಷಿತರನ್ನಾಗಿಸುವುದರ ಜೊತೆಗೆ ಧಾರ್ಮಿಕ ಶ್ರದ್ಧೆಯುಳ್ಳವರನ್ನಾಗಿಯೂ ಮಾಡುತ್ತಾ ಜೀವನ ಶಿಕ್ಷಣವನ್ನು ನೀಡತೊಡಗಿದ್ದವು. ಹೀಗೆ ಸಮಗ್ರ ವಚನ ಸಾಹಿತ್ಯವು ಬಹುತೇಕ ವಿಭಿನ್ನ ಬಗೆಯ ಶೈಕ್ಷಣಿಕ ಮೌಲ್ಯಗಳನ್ನೆ ತನ್ನ ತಳಹದಿಯನ್ನಾಗಿ ಆಧರಿಸಿದೆ ಎಂಬುದು ಸ್ವಯಂವೇದ್ಯ. ಒಟ್ಟಾರೆ ವಚನಗಳಲ್ಲಿ ಪ್ರತಿಪಾದಿತವಾಗಿರುವ ಶೈಕ್ಷಣಿಕ ಮೌಲ್ಯಗಳು ಕನ್ನಡ ಸಾಹಿತ್ಯದ ಸಾಂಸ್ಕೃತಿಕ ಪರಂಪರೆಯಲ್ಲಿ ಯಾವತ್ತು ಚಿರಸ್ಥಾಯಿಯಾಗಿ ನಿಲ್ಲುವಂಥವಾಗಿವೆ.

ಂ

ಶಿಕ್ಷಣ ಮೌಲ್ಯಗಳು ಮತ್ತು ಶಾಸನಗಳಲ್ಲಿ ಅವುಗಳ ಅನ್ವಯಿಕೆಗಳು

ಎಂ. ಜಿ. ನಾಗರಾಜ್

'ಮೌಲ್ಯ' ಎಂಬ ಶಬ್ದ 'ಇಚ್ಛಾ' ಮೂಲದಿಂದ ಹೊರಟು 'ಆದರ್ಶ' ಎಂಬ ಅರ್ಥದವರೆಗೆ ವಿಕಸನಗೊಳ್ಳುತ್ತದೆ; ವ್ಯಾಪಕವಾಗುತ್ತದೆ. ಅದು ಅಂದಂದಿನ ಬದುಕಿನ ಅಗತ್ಯಗಳಿಗೂ ಸ್ಪಂದಿಸಬಲ್ಲ ಸಾಂಸ್ಕೃತಿಕ ಮಾದರಿಯೂ ಆಗಿದೆ. ಅದು ಶಿಕ್ಷಣದ ಉದ್ದೇಶಗಳಿಗೆ ಅನುಗುಣವಾಗಿಯೇ ಇದೆ. ಮೌಲ್ಯಗಳು ಬದುಕನ್ನು ನಿರ್ದೇಶಿಸಬಲ್ಲವು; ಚಿತ್ರಿಸಬಲ್ಲವು. ಮೂಲಭೂತವಾಗಿ ಅವು ಭಾವನೆಗಳಿಂದ ಚಿಗುರಿದ ಸಸಿಗಳು. ನಮ್ಮ ಬದುಕಿನ ಮೌಲ್ಯವೆಂದರೆ ಯಾವುದೇ ಒಂದು ಸಂದರ್ಭದಲ್ಲಿ ನಾವು ಹೇಗೆ ಬದುಕಬಲ್ಲೆವು, ಬದುಕುತ್ತೇವೆ ಎಂಬುದರಿಂದ ತಿಳಿಯಬಹುದಾದುದು. ಆ ಮೌಲ್ಯಗಳ ನಡೆ, ಸಂಸ್ಕೃತೀಕರಣದ (ಸಂಸ್ಕೃತಾನುಕರಣ ಅಲ್ಲ) ಒಂದು ಪ್ರಕ್ರಿಯೆಯೂ ಹೌದು, ಗತಿಯೂ ಹೌದು. ಜೊತೆಗೆ ಸಾಮಾನ್ಯೀಕರಿಸಬಹುದಾದ ಸಾಂಸ್ಕೃತಿಕ ಮಾದರಿಗಳೂ ಅವಾಗಬಲ್ಲವು. ಎಲ್ಲ ಮೌಲ್ಯಗಳು ನಿರಂತರ ಕಟ್ಟೋಣಗಳೇ ಆಗಿರುತ್ತವೆ. ಸಾಮಾನ್ಯವಾಗಿ ವ್ಯಕ್ತಿಗಳ ವರ್ತನೆಗಳು ಅವರೊಳಗಿನ ಧನಾತ್ಮಕ, ಋಣಾತ್ಮಕ, ತಟಸ್ಥ (neutral)ಮೌಲ್ಯ ಸೂಚಕಗಳಾಗಿರುತ್ತವೆ. ಇವುಗಳಲ್ಲಿ ಯಾವುದು, ಯಾವ ಸಂದರ್ಭಕ್ಕೆ ಅಪೇಕ್ಷಣೀಯ ಎಂಬಲ್ಲಿ ವಿವೇಕ ಜಾಗೃತವಾಗಿರಬೇಕು.

ಶಿಕ್ಷಣದ ಉದ್ದೇಶವಾದರೂ ಕಲಿಯುವವನ ವರ್ತನೆಗಳನ್ನು ಸುಮುಖ ದಿಸೆಯಲ್ಲಿ ಬದಲಾಯಿಸುವುದಾಗಿದೆ. ಇದರಲ್ಲಿ i) ಅಪೇಕ್ಷಣೀಯ (desirable), ii) ಅಪೇಕ್ಷಿತ (desired) ಎಂಬ ಎರಡು ಮಾದರಿಯ ಮೌಲ್ಯ ನಿರ್ಧಾರಕಗಳಿವೆ. 'ಅಪೇಕ್ಷಣೀಯ' ಎಂಬಲ್ಲಿ ಮೌಲ್ಯಗಳು ಪರಂಪರೆಯಿಂದ ನಿಗದಿಗೊಂಡಂತಹವು; ಸ್ವಾತ್ಮಾವಲೋಕನದಿಂದ ಅರಿವು ಪಡೆಯುವುದು ಹಾಗೂ ಪ್ರೇರಣಾತ್ಮಕಗೊಳಿಸುವುದು - ಈ ಘಟಕದಲ್ಲಿ ಕಾಣಬರುವುದು ಶಿಕ್ಷಣದ ಗುರಿ ಎನಿಸುತ್ತದೆ. 'ಅಪೇಕ್ಷಿತ' ಎಂಬಲ್ಲಿ ಜಂಗಮತ್ವ ಅಂದರೆ ಚಲನಶೀಲತೆ ಇರುತ್ತದೆ. ಇಲ್ಲಿ ಮೌಲ್ಯಗಳು ಕ್ರಿಯಾಶೀಲ. ಶಿಕ್ಷಣತತ್ವಜ್ಞಾನಿ ಜಾನ್‌ಡ್ಯೂಯಿಯ ರೀತ್ಯಾ ಈ ಘಟಕದಲ್ಲಿ 'ಬದುಕೇ ಶಿಕ್ಷಣ - ಶಿಕ್ಷಣವೇ ಬದುಕು'(Life is Education; Education is life) ಎನ್ನುವ ತತ್ವವಿದೆ. ಶಿಕ್ಷಣಮೌಲ್ಯವೆಂದರೆ ಬದುಕೇ; ಬದುಕುವುದು; ಸಮಾಜದ ಬದುಕಾಗಿಸುವುದು. ಸಮಾಜ ತನ್ನಷ್ಟಕ್ಕೆಯೆ ಮೌಲಿಕವಾದುದು ಕೂಡ. ಈ ದೃಷ್ಟಿಯಿಂದ ಶಾಲೆ ಒಂದು ಸಣ್ಣಸಮಾಜವೆನಿಸುತ್ತದೆ. ಅರ್ಥಾತ್ ಅದು ಸಮುದಾಯದ ಅವಿಭಾಜ್ಯ ಅಂಗವೆನಿಸಿದೆ. ಶಿಕ್ಷಣ ತನ್ನ ಜೀವಂತಿಕೆಯನ್ನು, ಅಸ್ತಿತ್ವವನ್ನು ಅಲ್ಲಿ ಕಂಡುಕೊಳ್ಳಬೇಕು. ಸಮಾಜ ಅರ್ಥಾತ್ ವ್ಯಕ್ತಿ ಸಮುದಾಯ

ಮನ್ನಿಸಿದಾಗ ಅದಕ್ಕೆ ಮೌಲ್ಯ. ಅಂತಾಗಿ ಶಿಕ್ಷಣಮೌಲ್ಯವು ಸಾಮಾಜಿಕ ಮೌಲ್ಯದ ಸಹಯೋಗಿ, ಸಮಭಾಗಿ.

ನಮ್ಮ ಶೈಕ್ಷಣಿಕ ತತ್ವ ಪರಂಪರೆಯನ್ನು ಗಮನಿಸುವಾಗ ಆದರ್ಶನೆಲೆ (Idealistic) ವಾಸ್ತವಿಕ ನೆಲೆ (Realistic) ಹಾಗು ಅನ್ವಯಿಕ ನೆಲೆ (Pragmatic)ಗಳು ಪರಿಶೀಲನೆಗೆ ಮುಖ್ಯವಾಗಿ ಒದಗುತ್ತವೆ. ಆನಂತರದ ವಿಕಾಸಗಳು ಸತತವಾಗಿ ವ್ಯಾಪಕಗೊಂಡಿರುವುದೂ ಉಂಟು. ಇರಲಿ. ಶೈಕ್ಷಣಿಕ ಮೌಲ್ಯಗಳು ಚಾಲ್ತಿಗೊಳ್ಳುವಲ್ಲಿ, ಒಂದನೇ ನೆಲೆಯು, ಶಿಕ್ಷಣದ ಗುರಿಯೆ ಆತ್ಮಸಾಕ್ಷಾತ್ಕಾರ; ಶ್ರೇಷ್ಠ ನಡತೆಗಳೇ ಆದರ್ಶ. ವಿದ್ಯಾರ್ಥಿ ಶಿಸ್ತಿಗೊಳಪಟ್ಟು ಸತ್ಯ, ಶಿವ, ಸೌಂದರ್ಯಗುಣಗಳಿಗೆ ತರಪೇತುಗೊಳ್ಳುವ ವ್ಯಕ್ತಿ; ಗುರು ಅಥವಾ ಗ್ರಂಥಗಳು ಸ್ಫೂರ್ತಿಕಾರಣರು. ಪರಿಪೂರ್ಣತೆಯ ಸಾಧನೆಗೆ ವಿದ್ಯಾರ್ಥಿ ಒಬ್ಬ ಅಭ್ಯರ್ಥಿ. ಗುರುವಿಗೆ ಅವನು ಸವಾಲೇ ಇಡಲಾರ ಎಂದೆಲ್ಲ ವಿಶದೀಕರಿಸುತ್ತದೆ. ಈ ನೆಲೆ ಒಂದು ರೀತಿಯಲ್ಲಿ 'ಅಹಂ' ಕೇಂದ್ರವಾದ ಅಧಿಕಾರವಾಣಿಯದೆಂಬ ಟೀಕೆ ಇದೆ. ಎರಡನೇ ನೆಲೆಯಲ್ಲಿ ಶಿಕ್ಷಣದ ವಿವಿಧ ಉದ್ದೇಶಗಳು ಮಂಡಿತವಾಗಿ, ಕಲಿಯುವ ತನ್ನ ಪರಿಸರದ ಅನುಭವಕ್ಕೆ ಒಳಗಾಗಬೇಕೆನ್ನುವುದಿದೆ. ಕಲಿಯುವವ ಒಬ್ಬ ಜೈವಿಕಜಂತು ಹಾಗೂ ಅಗತ್ಯಗಳನ್ನು ಪೂರೈಸಿಕೊಳ್ಳಬಯಸುವ ನಿಸರ್ಗದ ಅರಿವಿಗೆಳಸುವ ವ್ಯಕ್ತಿ. ಇಲ್ಲಿ ಗುರು ಸ್ಫೂರ್ತಿಕಾರಣನಲ್ಲ, ಅನ್ವೇಷಕ. ಆದರೆ ಈ ನಿಲುವು ಶಿಕ್ಷಣದ ಮೌಲಿಕ ಗುರಿ ಸಾಧಿತವಾಗದೆ ವ್ಯಕ್ತಿಯನ್ನು ಸಮಗ್ರಮುಖಿಯನ್ನಾಗಿ ಮಾಡದು ಎಂಬ ಟೀಕೆ ಇದೆ.

ಮೂರನೇ ನೆಲೆಯಲ್ಲಿ ಶಿಕ್ಷಣದ ಗುರಿ, ವಿವೇಚನೆಯ ಬೆಳಕಿನಲ್ಲಿ (ಅನುಭವಗಳನ್ನು ವಿಮರ್ಶಿಸಿಕೊಳ್ಳುತ್ತ!) ಅನುಭವಗಳನ್ನು ಸತತ ಪುನಾರಚಿಸಿಕೊಳ್ಳುತ್ತ ಹೋಗುವುದಾಗಿದೆ. ಅಂದರೆ ಅನುಭವದ ಬೆಳಸು ಇಲ್ಲಿನದು ಮತ್ತು ಅದು ಸತತ ಪ್ರಕ್ರಿಯೆ. ಕಲಿಯುವವ ವಾಸ್ತವಿಕ ಹಾಗೂ ಸಾಮಾಜಿಕ ಆಸಕ್ತಿಯುಳ್ಳವ. ಅವನಿಗೆ ಪರಂಪರೆ ಒಂದು ಸಲಹಾತ್ಮಕ ಬಿಂದು. ಅದಕ್ಕೆ ಮೌಲ್ಯವುಂಟು. ಆದರೆ ಆದರ್ಶದ ನೆಲೆಯಂತಲ್ಲ. ವಿದ್ಯಾರ್ಥಿ ಇಲ್ಲಿ ಸದಾ ಕ್ರಿಯಾಶಾಲಿ. ಗುರುವಿನೊಡನೆ ಸಂವಾದ ಬಯಸಿ, ಗುರುವು ತನ್ನ ಕಲಿಕಾ ಪರಿಸರದ ಭಾಗವೆಂದು ಭಾವಿಸುತ್ತಾನೆ. ಗುರುವಾದರೋ ಇಲ್ಲಿ ಶಿಷ್ಯನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನೆರವಿಗನಷ್ಟೆ. ಅವನು ಕಲಿಕೆಯ ವಸ್ತುವಿಗಿಂತ, ಕಲಿಸುವ ವಿಧಾನಕ್ಕೆ ಗಮನಕೊಡುತ್ತಾನೆ. ಡ್ಯೂಯಿಯ ಪ್ರಕಾರ ಶಿಷ್ಯ, ಮುಂದಿನದಕ್ಕಾಗಿ, ಭವಿಷ್ಯತ್ತಿಗಾಗಿ ಕಲಿಯುತ್ತಾನೆ, ಬದುಕುತ್ತಾನೆ. ಬದುಕು ಮತ್ತು ಪರಿಸರಗಳ ಮೊತ್ತವೆ ಕಲಿಕೆ ಎನ್ನುವ ಈ ನೆಲೆಯಲ್ಲಿ ಗುರು ಮತ್ತು ಶಿಷ್ಯರನ್ನು ಸಂವಾದ-ಸಂಪವನ ಪ್ರಕ್ರಿಯೆಯ ಸಮಾನ ವೇದಿಕೆಯಲ್ಲಿ ಪರಿಗಣಿಸಲಾಗುತ್ತದೆ. ಅಂತೇ ಅವರಿಬ್ಬರೂ ಕಲಿತಿದ್ದಾರೆ, ಕಲಿಯುತ್ತಿದ್ದಾರೆ ಎನ್ನುವ ಅವಸ್ಥೆ ಇಲ್ಲಿನದು.

ಶಿಕ್ಷಣದಲ್ಲಿ ಹೀಗೆ ತಾತ್ವಿಕಮೌಲ್ಯಗಳಲ್ಲಿ ಬದಲಾವಣೆಗಳು ಸಂಘಟಿಸುವುದಕ್ಕೆ ಸಂಸ್ಕೃತಿಯಲ್ಲಿ ಅವಕಾಶವಿದೆ. ಶಿಕ್ಷಣದಲ್ಲಿ ಮೌಲ್ಯಗಳ ಅಳವಡಿಕೆ ಎನ್ನುವಾಗ ಅದು ವ್ಯಕ್ತಿ ಹಾಗೂ ಸಾಮಾಜಿಕ ವರ್ತನೆಗಳಿಗೆ ಅನ್ವಯವೆ. ಈ ವರ್ತನೆಗಳು ನಮ್ಮ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಸಂಭವನೀಯವಾದವು. ಈ ವರ್ತನೆಗಳಲ್ಲಿನ ಮಾರ್ಪಾಟುಗಳನ್ನು ನಮ್ಮ ಸಮಾಜ ಸಂಸ್ಕೃತಿಯ ಒಂದು ನಿಗದಿತ ಮಿತಿಯಲ್ಲಿ ಸಮ್ಮತಿಸುತ್ತದೆ. ಈ ಮಿತಿಬಿಂದುವನ್ನೆ ನಿರ್ಧಾರಕ ಬಿಂದು, ಕ್ರಾಂತಿ ಬಿಂದು, ಅವಧಿಕ ಬಿಂದು (critical point) ಎಂದೆಲ್ಲ

ಗುರುತಿಸುವುದುಂಟು. ಈ ಮಿತಿಬಿಂದುವನ್ನು ಮೀರಿದಾಗ ಸಮಾಜ, ಬದಲಾವಣೆಯನ್ನು ತಿರಸ್ಕರಿಸುತ್ತದೆ. ಇಲ್ಲಿಯೇ ನಮ್ಮ ಶೈಕ್ಷಣಿಕ ಪ್ರಯತ್ನಗಳು, ವಿದ್ಯಾರ್ಥಿಯ ವರ್ತನೆಯಲ್ಲಿ ಮೌಲಿಕ ಬದಲಾವಣೆಯನ್ನು ತರುವ ಕೆಲಸದಲ್ಲಿ ವಹಿಸಬೇಕಾದ ಎಚ್ಚರದ ಅಗತ್ಯ ಕಾಣುವುದು. ಇದು ಸಾಮಾಜಿಕ ಪರಿವರ್ತನೆಗೂ ನಾಂದಿಯೆ. ಈ ದೃಷ್ಟಿಯಿಂದ ಸಂಸ್ಕೃತಿಯನ್ನು ಒಟ್ಟಾರೆ ಮುಖವಾಗಿಯೂ ಅರ್ಥೈಸಿಕೊಳ್ಳಬೇಕು.

ಸಂಸ್ಕೃತಿಯು ಭೌಗೋಳಿಕ, ಐತಿಹಾಸಿಕ ಹಾಗೂ ಶಾರೀರಿಕ ಗಡಿಗಳಿಂದ ಆವರಣಗೊಂಡಿರುತ್ತದೆ. ಅದರಲ್ಲಿ ಧರ್ಮ, ಮೌಲ್ಯ, ಅಭಿಮತ, ಸಾಮಾಜಿಕ ಸಂಸ್ಥೆ, ಸಾಧನ ಹಾಗೂ ಚಾಲನ ಕೌಶಲ್ಯಗಳು ಸಮ್ಮಿಲಿತವಾಗಿರುತ್ತವೆ. ಆದರೆ ಈ ಸಾಂಸ್ಕೃತಿಕ ಆವರಣಕ್ಕೆ ಕೆಲವು ಮೂಲಭೂತ ಮಿತಿಗಳೂ ಉಂಟು. ಅವು ಸ್ವಸಂಸ್ಕೃತಿಯಿಂದಲೇ ಪ್ರಭಾವಿತವಾಗುತ್ತ ಕಲಿಯುತ್ತ ಹೋಗುವುದು. ಒಂದು ರೀತಿ ಸಂಮರ್ದನಕ್ಕೆ ಒಳಗಾಗಿ ಬದುಕುತ್ತ ಸಾಗುವುದು - ಸ್ವಸಂಸ್ಕೃತಿಯಿಂದ ಕಲಿಯುವ ಒಂದು ವಿಧಾನವದು (enculturation); ಇದು learning by living in the own culture - ಸ್ವಂತ ಸಂಸ್ಕೃತಿಯಲ್ಲಿ ಬದುಕುತ್ತ ಕಲಿಯುತ್ತ ಸಾಗುವುದು; ಇನ್ನೊಂದು ಪ್ರಕ್ರಿಯೆ ಎಂದರೆ Learning from other culture - ಇನ್ನೊಂದು ಸಂಸ್ಕೃತಿಯ ಸಂಪರ್ಕದಿಂದ ಕಲಿಯುವುದು (acculturation). ಆದರೆ ಅದರ ಒಳಿತುಗಳನ್ನಷ್ಟೆ ಗ್ರಹಿಸಿದೆ. ಆ ಸಂಸ್ಕೃತಿಯಲ್ಲಿಯೆ ಬದುಕುತ್ತ ಕಲಿಯುವಿಕೆ. ಆದರೆ ಅಲ್ಲಿ ಸ್ವಂತ ಸಂಸ್ಕೃತಿಯ ವಿಸ್ಮೃತಿಯಾಗುತ್ತದೆ, ತನ್ನತನ ಸಮಾಧಿಗೊಳ್ಳುತ್ತದೆ. ಇರಲಿ. ಭಾರತದಲ್ಲಿ ವಿಜ್ಞಾನದ ಕಲಿಕೆಯು 'ಸ್ವಸಂಸ್ಕೃತಿ'ಯಾಗುವ ಮಟ್ಟಕ್ಕೆ ಬೆಳೆದಿಲ್ಲವಾದ ಕಾರಣ, ಅದು acculturation ಎಂಬಂತೆ ಶಾಲಾಮಟ್ಟದಲ್ಲಿಯೆ ಕಲಿಕೆಯಾಗಿ ಉಳಿದುಕೊಂಡು, ಜೀವನದ ಕಲಿಕೆಯಾಗಿ ಅಂತರ್ಗತಗೊಂಡಿಲ್ಲ. ಸಾಮಾನ್ಯ ಬದುಕುಗಳಲ್ಲಿ, ಹಾಗೆ ನೋಡಿದರೆ ಮೇಲುವರ್ಗದ ಬದುಕಿನ ವಿಧಾನಗಳನ್ನು ಅಳವಡಿಸಿಕೊಂಡು, ಕೆಳವರ್ಗದವರು ತಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಳ್ಳುವುದು 'ಸಂಸ್ಕೃತೀಕರಣ' (sanskritisation) ಎಂಬರ್ಥದಲ್ಲಿ ಒಂದು ವರ್ಗವು ಬಳಸುತ್ತಿದೆ. ಆದರೆ 'ಸಂಸ್ಕೃತೀಕರಣ' (culturisation or culturation) ಬೇರೆ, 'ಸಂಸ್ಕೃತಾನುಕರಣ' (sanskritisation) ಬೇರೆ. ಸಂಸ್ಕೃತಾನುಕರಣದಲ್ಲಿ ಮೇಲ್ವರ್ಗದ ನಡಾವಳಿಗಳ ಅನುಕರಣೆ, ಪ್ರತಿಬಿಂಬ ಆಗುವುದಿದೆ. ಅಲ್ಲಿ ಸ್ವಂತಿಕೆಯ ವಿಸ್ಮೃತಿಯಾಗುತ್ತದೆ. ಭೇದಗಳ ಮೇಲಾಟವಿರುತ್ತದೆ. ಅದೇ 'ಸಂಸ್ಕೃತೀಕರಣ'ದಲ್ಲಿ ಪರಸ್ಪರ ವಿನಿಮಯ ಪ್ರಭಾವವಿರುತ್ತದೆ. ಪರಸ್ಪರ ಅಪ್ಪಿ ಸಮವಾಗುವ ಸ್ನೇಹನ್ನಿನ ಪ್ರಕ್ರಿಯೆ ಇರುತ್ತದೆ. ಪರಸ್ಪರ ಒಳಗಾಗುವ ಕ್ರಿಯೆ ಸತತವಾಗಿರುತ್ತದೆ. ಇಂದು ನಮ್ಮಲ್ಲಿ ಆಗಿರುವುದು ಸಾಮಾನ್ಯ ಜನತೆಯಲ್ಲಿ 'ಸಂಸ್ಕೃತೀಕರಣ'. ತಾನು ತೆಗೆದುಕೊಂಡಂತೆ ಉಳಿದವರಿಗೂ ತನ್ನನ್ನು ಅನುಸರಿಸುವಂತೆ ಮಾಡಿದೆ. ಇದು ಶೈಕ್ಷಣಿಕ ಮೌಲ್ಯದ ನಡೆಯಲ್ಲಿ ಸಾಧಿತವಾಗಬೇಕಾದ ಅಂಶ.

ಈಗಾಗಲೇ ಹೇಳಿದಂತೆ ಸಂಸ್ಕೃತಿಯ ಮಾದರಿಗಳು ಬದುಕಿನ ಮೊತ್ತಕ್ಕೆ ಸಂಬಂಧಗೊಂಡವಾಗಿವೆ; ಸಂಯುಕ್ತಗೊಂಡಿವೆ. ಅಂದರೆ ಈ ಬದುಕಿನ ಒಂದು ಘಟಕ ಬದಲಾವಣೆಗೊಂಡರೆ, ಪರಿಣಾಮವಾಗಿ ಇನ್ನೊಂದಾವುದೋ ಬದಲಾವಣೆಗೊಂಡು, ಬದುಕಿನ ಸಮತೋಲನವನ್ನು ಕಾಪಾಡುತ್ತದೆ. ಹಾಗಾದರೆ ಶಿಕ್ಷಣದ ಪಾತ್ರ ಇಲ್ಲಿ ಹೇಗೆ?

i) ನಮ್ಮಲ್ಲಿ ಪಾರಂಪರಿಕ ಸಮಾಜ, ii) ತರಾತುರಿ ಸಮಾಜ (emergent society) ಎಂಬುದುಂಟು.

ಪಾರಂಪರಿಕ ಸಂಸ್ಕೃತಿಯ ಸಮಾಜದಲ್ಲಿ ಸಂಸ್ಕೃತಿಯ ಬದಲಾವಣೆಯ ವೇಗ ಕಡಿಮೆ ತರದ್ದು. ಇಲ್ಲಿ ಶಿಕ್ಷಣದ ಪಾತ್ರ ಮುಖ್ಯವಾಗಿ ಪರಂಪರಾಗತ ಸಂಸ್ಕೃತಿಯ ಮುಂದುವರಿಕೆ ಯಾಗಿರುತ್ತದೆ. ಅಂತಾಗಿ ಪ್ರತಿಯೊಂದು ತಲೆಮಾರು ತನ್ನ ಹಿಂದಿನ ತಲೆಮಾರಿನ ಕಲಿಕೆಯನ್ನೇ, ಜ್ಞಾನಾನುಭವವನ್ನೇ ಪುನರಾವರ್ತಿಸುತ್ತದೆ ಅಥವಾ ಮುಂದುವರಿಸುತ್ತದೆ; ಅದೇ ತರಾತುರಿ ಸಮಾಜವು ಬಹುಶಃ ಹೊಸ ಯೋಜನೆಗಳನ್ನು ರೂಪಿಸಿಕೊಂಡ ಕಾರಣ, ಸಂಸ್ಕೃತಿಯ ರೂಪಾಂತರವನ್ನು ಬಹುವೇಗದಿಂದ ಪಡೆದುಕೊಂಡು ಸಾಗುತ್ತದೆ. ಶಿಕ್ಷಣಮೌಲ್ಯದ ಪಾತ್ರ ಇಲ್ಲಿ ಪ್ರಾಮುಖ್ಯವಾಗುತ್ತದೆ. ಅದು ಅಂದಂದಿನ ಸಾಮಾಜಿಕ ಬದುಕಿನ ವಿಧಾನಗಳಿಗನುಗುಣವಾಗಿ, ಹೊಸತುಗಳನ್ನು ಹೊಂದಿಸುವ ಪಾತ್ರ ವಹಿಸುತ್ತದೆ. ಇದಕ್ಕೆ ವಿದ್ಯಾರ್ಥಿ ಮುಖಿಗೊಂಡಾಗ ತನ್ನ ತಲೆಮಾರಿನ ಸಾಮಾಜಿಕ, ಸಾಂಸ್ಕೃತಿಕ ಹೊಸತುಗಳನ್ನು ನೀಡಿ ಪ್ರಗತಿಗೆ ಕಾರಣನಾಗುತ್ತಾನೆ.

ನಮ್ಮ ಸಂಸ್ಕೃತಿಯಲ್ಲಿ ಶಿಕ್ಷಣದ ಮೌಲ್ಯಗಳು ಬೇರುಗೊಂಡಿರುವ ಬಗೆಯನ್ನು ಈ ಶತಮಾನದ ನಾಯಕರು ಅರ್ಥೈಸಿರುವುದನ್ನು ತುಸು ತಿಳಿಯುವುದೊಳಿತು. ಗಾಂಧೀಜಿಯವರು ನೈತಿಕಶಿಕ್ಷಣ ಮೌಲ್ಯದ ಬಗ್ಗೆ ಒತ್ತುಕೊಟ್ಟರು. 1937ರಲ್ಲಿ ಗ್ರಾಮೀಣ ಕರಕುಶಲ ಕಾರ್ಯರೂಪಿ ರಾಷ್ಟ್ರೀಯ ಶಿಕ್ಷಣವೆಂದು ಪ್ರಸ್ತಾಪಿಸಿದರು. ಅದು ಮುಂದೆ ಮೂಲಶಿಕ್ಷಣ ಎಂದು ಹೆಸರುವಾಸಿ ಆಯಿತು. ಇದು ಗ್ರಾಮೀಣ ಉದ್ಯೋಗಾವಲಂಬಿ ಉತ್ಪಾದನೆಯ ಮೂಲಕ ಸ್ವಾವಲಂಬಿ ಹಾಗು ಸ್ವಯಂಪೂರ್ಣ ಶಿಕ್ಷಣವಾಗಿತ್ತು.[1] ಮೂಲ ಶಿಕ್ಷಣಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳು ಉದ್ಯೋಗಾವಲಂಬಿ ಚಟುವಟಿಕೆಗಳಲ್ಲಿ ತೊಡಗಿರುವ ಮನೋಭಾವದಿಂದಾಗಿ ಹೆಚ್ಚು ಚುರುಕಾಗಿದ್ದರೆಂದು ಕೆಲವು ಸಂಶೋಧನೆಗಳೂ ತೋರಿದುವೆನ್ನಲಾಗಿದೆ. ಅದೇಕೋ ಕಾಲಾನಂತರ ಈ ವಿಧಾನವಲ್ಲಿ ಆಸಕ್ತಿ ಕಡಿಮೆಯಾಯಿತು.

ಟಾಗೋರ್‌ರದು ಕಲಾಮೀಮಾಂಸೆಯ ದೃಷ್ಟಿಯ ಶಿಕ್ಷಣದ್ದಾಗಿ, ಕಲಾಮೌಲ್ಯವನ್ನು ಬೆಳೆಸುವುದಾಗಿತ್ತು. ಅದು ಪ್ರಾಚೀನ ಆಂಗ್ಲಶಿಕ್ಷಣಪದ್ಧತಿಯಿಂದ ಪ್ರೇರಿತಗೊಂಡು, ಸಾಮಾನ್ಯ ಶಿಕ್ಷಣಸೂತ್ರಗಳೊಡನೆ ಸಮ್ಮಿಳನಗೊಂಡುದುದಾಗಿತ್ತು. ಶಾಂತಿನಿಕೇತನದ ಹಳೆಯ ಕಟ್ಟಡಗಳು ಅಂದು ಅವರು ಮೂಡಿಸಿದ್ದ ಚೈತನ್ಯವನ್ನು ಇಂದು ಕಳೆದುಕೊಂಡು ಎಂದಿನಂತಹ ಒಂದು ವಿಶ್ವವಿದ್ಯಾಲಯವೆನಿಸಿದೆ.

1952ರ ಡಾ|| ಲಕ್ಷಣಸ್ವಾಮಿ ಮೊದಲಿಯಾರರ ಶಿಕ್ಷಣ ಆಯೋಗ, 1977ರ ಈಶ್ವರಭಾಯಿ ಪಟೇಲಸಮಿತಿ, ಕೊಠಾರಿ ಶಿಕ್ಷಣ ಆಯೋಗ ಶೈಕ್ಷಣಿಕ ಮೌಲ್ಯಗಳನ್ನು ನಮ್ಮ ಹಿನ್ನೆಲೆ ಹಾಗು ಆಧುನಿಕ ಅಗತ್ಯಗಳಿಗನುಗುಣವಾಗಿ, ಶಿಕ್ಷಣಪದ್ಧತಿಯಲ್ಲಿ ಅಳವಡಿಸುವ ಪ್ರಯತ್ನ ಮಾಡಿದುವು. 1986-87ರಲ್ಲಿ ರೂಪುಗೊಂಡ, ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ, ರಾಷ್ಟ್ರೀಯ ಪಠ್ಯಕ್ರಮ, ಕನಿಷ್ಠ ಕಲಿಕೆಯ ಮಟ್ಟದ ನಿರ್ವಹಣೆ (ಶಿಕ್ಷಣದ ಪ್ರತಿ ಹಂತದಲ್ಲಿ),

---

1. ಎಸ್.ಆರ್. ಹಿರೇಮಠ : ಸಮಾಜೋಪಯೋಗಿ ಉತ್ಪಾದಕ ಕಾರ್ಯ, ತತ್ವಗಳು ಮತ್ತು ಆಚರಣೆ, ರೇವಣಸಿದ್ಧ ಪ್ರಕಾಶನ, ಬೆಂಗಳೂರು-40, 1986. ಪು.2

ಸಮಾನತೆಗಾಗಿ ಶಿಕ್ಷಣ ಅಂದರೆ, ಸ್ತ್ರೀವರ್ಗ, ಪರಿಶಿಷ್ಟ ಜಾತಿ-ವರ್ಗ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಅಂಗವಿಕಲ ವರ್ಗ-ಇತ್ಯಾದಿ ವರ್ಗಗಳಿಗೆ ಭೇದವಿಲ್ಲದೆ ಶಿಕ್ಷಣಾವಕಾಶ, ಎಲ್ಲರಿಗೂ ಪ್ರಾಥಮಿಕ ಶಿಕ್ಷಣದ ಲಭ್ಯತೆ, ಏಕರೂಪ ಶಿಕ್ಷಣ ಸಾಂಸ್ಥಿಕ ವ್ಯವಸ್ಥೆ, ಮಗು ಕೇಂದ್ರೀಕೃತ ಶಿಕ್ಷಣ (ಕಲಿಕೆಯ ಕೇಂದ್ರೀಕೃತ), ಮೌಲ್ಯಶಿಕ್ಷಣ, ಶಿಕ್ಷಣಪದ್ಧತಿಯ ಮೌಲ್ಯೀಕರಣ, ಪರೀಕ್ಷಾಸುಧಾರಣೆ, ಶಿಕ್ಷಕ ತರಬೇತಿ-ಪುನರ್ಮನನ ಶಿಬಿರ, ಸಮಾಜಭಾಗಿತ್ವ ಇತ್ಯಾದಿಗಳನ್ನು ಅಳವಡಿಸಿ ದೇಶಾದ್ಯಂತ ಆ ಸಮಯದಲ್ಲಿ ಶಿಕ್ಷಕರಿಗೆ ಹೊಸ ರಾಷ್ಟ್ರೀಯ ಶಿಕ್ಷಣಪದ್ಧತಿಯ ಅನ್ವಯದ ಬಗ್ಗೆ ತಿಂಗಳಾನುಕಾಲ ತರಬೇತಿ ನೀಡಲಾಯಿತು. ಇಂದು 'ಕನಿಷ್ಠ ಕಲಿಕೆಯ ಮಟ್ಟ'ವು ಸರಿಯಾದ ತಳಹದಿಯನ್ನು ಹೊಂದಿಲ್ಲದಿದ್ದುದರಿಂದ ಪ್ರಾಥಮಿಕ ಶಿಕ್ಷಣವನ್ನು ಸರಿದಾರಿಯಿಂದ ದೂರ ಎಳೆಯಲಾಗಿದೆ ಎಂಬ ಆರೋಪವು ತಜ್ಞರಿಂದ[2] ಬಂದಿದೆ; ಈ ಇಡೀ ದೃಷ್ಟಿಕೋನ ಮಗುವಿನ ಕಲಿಕೆಯ ಲಕ್ಷಣವನ್ನೇ ಗಮನಕ್ಕೆ ತೆಗೆದುಕೊಂಡಿಲ್ಲವೆಂದಿದೆ. ಯಶಪಾಲ್ ಸಮಿತಿಯ ವರದಿಯನ್ನು ಪ್ರಸ್ತಾಪಿಸಿ, ಪಠ್ಯವಸ್ತುವಿನ ಗಾತ್ರ ಹಾಗೂ ಅದನ್ನು ಕಲಿಸಬೇಕಾದ ಸನ್ನಿವೇಶಗಳ ನಡುವೆ ಹೊಂದಾಣಿಕೆ ಕಾಣಬರದು. ಅಂತಾಗಿ ಬೇರೆಯ ಪಠ್ಯಕ್ರಮದ ಅವಶ್ಯಕತೆಯನ್ನು ಹೇಳುತ್ತ, ಚಟುವಟಿಕೆ ಹಾಗೂ ಕಲಿಕಾಸಂತೋಷ ನೀಡುವ ಬೋಧನೆ, ಮಗು ಆಧಾರಿತ ಬೋಧನೆಯಾಗಿ, ಮಗು ವಿವಿಧ ಸಂದರ್ಭಗಳಲ್ಲಿ ವಿವಿಧ ಚಾತುರ್ಯವನ್ನು ಬಳಸಲು ಕಲಿಕೆ ನೆರವಾಗಬೇಕೆಂಬ ಸಲಹೆಯನ್ನು ಆ ತಜ್ಞರ ತಂಡ ಮಂಡಿಸಿದೆ. ಅಂದರೆ ಶಿಕ್ಷಣದ ಮೌಲ್ಯಗಳು ಹೇಗೆ ಬದಲಾವಣೆಗಳನ್ನು ಅನ್ವಯಿಕವಾಗಿ ಮಾಡಿಕೊಳ್ಳಬೇಕೆಂಬುದಕ್ಕೆ ಈ ರೀತಿಯ ಶೋಧಗಳು ಅಗತ್ಯವಾಗುತ್ತವೆ. ಕಾರಣ ಶಿಕ್ಷಣವು ನಮ್ಮ ಸಾಂಸ್ಕೃತಿಕ ಪರಂಪರೆಯ ಆಸ್ತಿಯ ಸಂಗ್ರಹಕ್ಕೆ ಅನುಗುಣವಾಗಿ ನಮ್ಮ ಶಿಕ್ಷಣಪದ್ಧತಿಯು ತನ್ನ ಗುರಿಯಲ್ಲಿ ಪಠ್ಯಕ್ರಮ, ಬೋಧನ ವಿಧಾನಗಳಲ್ಲಿ, ಸಾಂಸ್ಕೃತಿಕ ಮೌಲ್ಯಗಳ ಅವಿಭಾಜ್ಯ ಅಂಗವಾಗಿರಬೇಕು. ಅದಕ್ಕಿಂತ ಹೆಚ್ಚಾಗಿ ಶಿಕ್ಷಣದ ಮೂಲಕವೆ ಸಮಾಜವು ತನ್ನ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಿಡುವುದಕ್ಕೆ ಹಾಗೂ ಅಭಿವೃದ್ಧಿಗೊಳಿಸುವುದಕ್ಕೆ ನಿರಂತರ ಪ್ರಯತ್ನಿಸುತ್ತದೆ.

ಇಂದಿನ ಯುಗಧರ್ಮಕ್ಕೆ ಅನುಗುಣವಾದ ಶಿಕ್ಷಣಮೌಲ್ಯಗಳಾದ, ನಮ್ಮ ಸಾರ್ವತ್ರಿಕ ಸಾಂಸ್ಕೃತಿಕ ಪರಂಪರೆಯ ರಕ್ಷಣೆ, ಸರ್ವಧರ್ಮಸಾಮರಸ್ಯ, ಪ್ರಜಾಪ್ರಭುತ್ವ, ಸಮಾನತೆ ಸ್ತ್ರೀ-ಪುರುಷ ನಿರ್ಭೇದ (ಲಿಂಗ ನಿರ್ಭೇದ), ಪರಿಸರ ಸಂರಕ್ಷಣೆ, ಸಾಮಾಜಿಕ ಅನಗತ್ಯ ನಿರ್ಬಂಧಗಳ ನಿರ್ಮೂಲನ, ಸಣ್ಣ ಕುಟುಂಬ ಪದ್ಧತಿಯನುಸರಣೆ ಮತ್ತು ವೈಜ್ಞಾನಿಕ ಮನೋಭಾವ, ಶಾಂತಿ ಹಾಗೂ ಅಂತರಾಷ್ಟ್ರೀಯ ಅರಿವು, ಇತ್ಯಾದಿಗಳನ್ನು ಕಲಿಕೆಯಲ್ಲಿ ಜಾರಿಗೊಳಿಸುವುದೇ ನಮ್ಮ ಶಿಕ್ಷಣಪದ್ಧತಿ ನಮ್ಮ ಸಮಾಜಕ್ಕೆ ಸಲ್ಲಿಸುವ ಋಣವಾಗಿದೆ. ಇದು ರಾಷ್ಟ್ರೀಯ ಶಿಕ್ಷಣನೀತಿಯ ದೃಷ್ಟಿಯೂ ಹೌದು.

ಶಿಕ್ಷಣ ಹಾಗೂ ಶಿಕ್ಷಣಮೌಲ್ಯಗಳ ಕುರಿತು ಆಧುನಿಕ ಸಿದ್ಧಾಂತಗಳು ಮೂಡಿ ಬಂದಿವೆ ದಿಟ. ಆದರೆ ನಮ್ಮ ಸಾಂಸ್ಕೃತಿಕ ಜಾಯಮಾನಕ್ಕೆ ಒಗ್ಗುವಂತಹ ಅಥವಾ ಒಗ್ಗಿಸಿಕೊಳ್ಳಲು ಸಾಧ್ಯವಾಗುವಂತಹ ಸಿದ್ಧಾಂತಗಳು ಅನ್ವಯವಾದರೆ ಜನತೆ ಸಮಾಜ ವಿದ್ಯಾರ್ಥಿ

---

2. ಕನ್ನಡ ಪ್ರಭ, 4.11.1998, ಪು. 8

ಸ್ವೀಕರಿಸಬಲ್ಲರು; ಒಳಗು ಮಾಡಿಕೊಳ್ಳಬಲ್ಲರು. ಬದಲು ಸಂಘರ್ಷ ಬೆಳೆಸುವಂತಾದರೆ ಅದು ಸಂಸ್ಕೃತಿಯ ಮೇಲೆ ಹೇರಿದ ಆಘಾತವಾಗುತ್ತದೆ. ಇಂದಿಗೂ ಗ್ರಾಮೀಣ ಭಾರತದ ರೈತ ಪೂರ್ಣ ಸಾಕ್ಷರನಾಗದಿರಲು ಕಾರಣ ಅವನ ಬದುಕಿಗೆ ಸಂದಾಯವಾಗದ ಶಿಕ್ಷಣದ ಸಿದ್ಧಾಂತವಾಗಿ ಪ್ರಗತಿಯ ಹೆಸರಿನಲ್ಲಿ ಅವನ ಮೇಲಾಗುವ ಆಧುನಿಕ ದಬ್ಬಾಳಿಕೆಯೆನಿಸಿದೆ. ಅದಕ್ಕಾಗಿಯೆ ಶಿಕ್ಷಣದ ಮೌಲ್ಯವಿವೇಚನೆ ಈ ನೆಲದ ಮಣ್ಣಿನ ವಾಸನೆಯನ್ನು ಗ್ರಹಿಸುವಂತಾಗಬೇಕು. ನಗರವಷ್ಟೇ ಪ್ರಗತಿಯ ಭಾರತವಾಗದು. ಹಳ್ಳಿಗಳ ನಾಡಾಗಿ ಧರ್ಮದ ಅಂಗಳದಲ್ಲಿ ಆಧ್ಯಾತ್ಮಿಕತೆಯನ್ನು ಬೇರಾಗಿ ಹೊಂದಿರುವ ನಮ್ಮ ಜನತೆಯನ್ನು ಪ್ರಗತಿಪಥದಲ್ಲಿ ಒಯ್ಯಲೆಳಸುವಲ್ಲಿ ಪಶ್ಚಿಮೀಕರಣ ಹಾಗೂ ಸಂಸ್ಕೃತಾನುಕರಣ ದೃಷ್ಟಿಯನ್ನೇ ಬಳಸುತ್ತಾ ಸಾಗುವಂತಿಲ್ಲ.

ಈ ಹಿನ್ನೆಲೆಯಲ್ಲಿ ನಮ್ಮ ಯುಗದ ಮಹರ್ಷಿ ಅರವಿಂದರಂಥ ಮಹಾಮಾನವ ನಮ್ಮ ಶಿಕ್ಷಣ ಮೌಲ್ಯ-ಪದ್ಧತಿಗಳ ಬಗ್ಗೆ ಪರಿಭಾವಿಸಿರುವ ಬಗೆ ಬಹಳ ಗಮನಾರ್ಹವಾಗಿದೆ. ಅರವಿಂದರ ವಿಚಾರಧಾರೆ ನಮ್ಮ ಶಿಕ್ಷಣಪದ್ಧತಿ, ಶಿಕ್ಷಣಮೌಲ್ಯಗಳು ಹಾಗೂ ಅನ್ವಯಿಕ ಬಗೆಗಳನ್ನು ವಿಶ್ಲೇಷಿಸಿ ಹೇಳಿದೆ.[3] ಇಲ್ಲಿ ನಮ್ಮ ಭಾರತೀಯತೆ ಹಾಗೂ ಅಂತರಾಷ್ಟ್ರೀಯ ಕನಸುಗಳಿಗೂ ನೆಲೆ ನೀಡಿ, ತನ್ನತನವನ್ನು ಕಾಪಿಟ್ಟುಕೊಳ್ಳುವಲ್ಲಿ, ನೀಡುವ ಶಿಕ್ಷಣ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅರಳಿಸಿ ಸತ್ಪ್ರಜೆಯನ್ನಾಗಿಸುವುದಷ್ಟೇ ಅಲ್ಲ. ಜಗತ್ತಿನ ಆಗುಹೋಗುಗಳಲ್ಲಿಯೂ ಸಕ್ರಿಯ ಆಸಕ್ತಿ ತಳೆದು ತನ್ನ ಪಾಲಿನ ಹೊಣೆಯನ್ನು ನೈತಿಕ, ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ ಮೌಲ್ಯಗಳ ಹದವನ್ನು ಬೆಳೆಸಿಕೊಳ್ಳುವಂತೆ ನೋಡಿಕೊಳ್ಳಬೇಕಾಗಿದೆ ಎಂಬುದು ಸ್ಪಷ್ಟಗೊಳ್ಳುತ್ತದೆ.

ಸತ್ಯ, ಅಹಿಂಸೆ, ದಯೆ, ಶಾಂತಿ, ಕ್ಷಮೆ, ನಿಷ್ಠೆ, ಸರಳತೆ, ಜ್ಞಾನಪಿಪಾಸೆ ಹಾಗೂ ಜ್ಞಾನಪ್ರಸಾರ, ಸಹಕಾರ ಇತ್ಯಾದಿ ಮೌಲ್ಯಗಳು ಪ್ರಾಚೀನದಿಂದ ನಮ್ಮಲ್ಲಿ ಒಪ್ಪಿತವಾಗಿ, ಆಚರಣೆಗೊಂಡು ಬಂದಂತಹವು. ನಮ್ಮಲ್ಲೂ ಜಗತ್ತಿನ ಇತರೆಡೆಯಲ್ಲಿಯಂತೆ ಪಾರಂಪರಿಕ ಮೌಲ್ಯಗಳು ಶಿಥಿಲಗೊಂಡದ್ದೂ ದಿಟ. Religion ಕೂಡ ಈ ಲೋಪವನ್ನು ಸರಿಪಡಿಸಲು ಸಫಲವಾಗಿಲ್ಲ. ಅದಾಗಿ ಶಿಕ್ಷಣದ ಮಹತ್ವ ಮತ್ತು ಮೌಲ್ಯ ಇಂದಿನ ಅಗತ್ಯವಾಗಿ, ವಯೋವಾರು, ಶಿಕ್ಷಣವಾರು ಶಿಕ್ಷಣಮೌಲ್ಯವನ್ನು ಬೆಳೆಸಬೇಕಾಗಿದೆ.[4] ನೈತಿಕಶಿಕ್ಷಣ ಈ ದಿಸೆಯಲ್ಲಿ ಉದ್ಯುಕ್ತವಾಗಬೇಕು. ಆದರೆ ಅದು ನೈತಿಕತೆ ಕುರಿತು ವಿದ್ಯಾರ್ಥಿಯು ಮಾತನಾಡುವಷ್ಟಕ್ಕೇ ಸೀಮಿತವಾಗಬಾರದು; ವಿದ್ಯಾರ್ಥಿಯ ಬದುಕಿನಲ್ಲಿಯೆ ನೈತಿಕ ನಿಷ್ಠೆಯಿಂದ ಶಿಕ್ಷಣಮೌಲ್ಯಗಳು ಚಾಲನೆ ಎಂದರೆ 'ಪ್ರಾಮಾಣಿಕತೆಯ ಶಿಕ್ಷಣ ಕಾರ್ಯಾಗಾರ' ಎಂಬಂತೆ ತರಬೇತಿ ಶಾಲೆಯ ಚಟುವಟಿಕೆಯಷ್ಟೇ ಆಗದೆ, ಬದುಕಿನ ಅಂತರ್ಗತ ನಿತ್ಯ ಸಂಗಾತಿಯಂತೆ ಅದು ನಡೆಯುವಂತಾಗಬೇಕು. ಈ ಹಿನ್ನೆಲೆಗಳಲ್ಲಿ ನಮ್ಮ ನಾಡಿನ

---

3. Sunil Behari Mohanty: Theory and Practice of Integral Education, Sri Aurobindo Ashram, Pondicherry, 1985, pp.2 and 22

4. National Policy on Education - Resource material (general) NCERT, New Delhi, 1987, pp.116, 119

ಶಾಸನಗಳು, ತಮ್ಮ ಸಾಂಸ್ಕೃತಿಕ ಅಂತರಾಳದಲ್ಲಿ ಶಿಕ್ಷಣಮೌಲ್ಯಗಳನ್ನು ದಾಖಲುಮಾಡಿರು ಬಗೆಯನ್ನು ಗಮನಿಸಬಹುದು. ಸೈಂಧವಸಂಸ್ಕೃತಿಯ ಮುದ್ರಿಕಾ ಲಿಪಿ ಬರಹಗಳು ಈ ದಿಸೆಯಲ್ಲಿ ಮೊದಲ ಶಾಸನ ಬರಹಗಳೆನ್ನಬಹುದು. ಅಲ್ಲಿ ಶಿಕ್ಷಣ ಸಂಬಂಧಿ ಮೌಲ್ಯಗ ಹುಡುಕಾಟ ಒಂದು ಸಂಸ್ಕೃತಿ ಶೋಧವೆನಿಸಬಹುದು.

ಸಾಂಸ್ಕೃತಿಕ ಅಂತರಾಳಗಳಲ್ಲಿ

ಗುರುಮೌಲ್ಯ ಭಾರತದ ಪರಂಪರೆಯಲ್ಲಿ ತುಂಬ ಪ್ರಾಚೀನತಮ. 'ಆಚಾರ್ಯ ದೇವೋಭವ'-ಗುರುವೇ ದೇವರು ಎಂಬ ಭಾವನೆಯಲ್ಲಿ ಬೆಳೆದ ಸಂಸ್ಕೃತಿಯ ಅಚ್ಚಿನಲ್ಲಿ ತಾಯಿಯನ್ನು, ಸಹಜಗುರು, ಮೊದಲ ಶಿಕ್ಷಕಿ ಎಂದುದುಂಟು. ಸೈಂಧವ ಸಂಸ್ಕೃತಿಯ ಮುದ್ರಿಕೆಗಳಲ್ಲಿನ ಚಿತ್ರ ಹಾಗೂ ಬರಹಗಳನ್ನು ಗಮನಿಸಿದರೆ, ರುದ್ರಪಶುಪತಿಯ ಉಭಯ ಪಾರ್ಶ್ವಗಳಲ್ಲಿ ನಾಗರು (ನಾಗಬುಡಕಟ್ಟಿನ ಜನ) ಇದ್ದು ಭೂಮಿಯ ಮೇ ಮೊಳಕಾಲನ್ನೂರಿ, ಊರ್ಧ್ವಬಾಹುಗಳಿಂದ ಸ್ತುತಿಸುತ್ತಿರುವ ಚಿತ್ರ ಕಾಣುತ್ತದೆ.[5] ಬರಹವು ಕಾಣುತ್ತದೆ. ಆದಿತ್ಯಪುರಾಣದ ರೀತ್ಯಾ ಸ್ಕಂದನು ಶಿವದೀಕ್ಷೆ ಪಡೆದುದು ಶ್ರೀರುದ್ರ ಗುರುವಿನಿಂದ:

ರುದ್ರೇಣ ದೀಕ್ಷಿತೋ ಭೂತ್ವಾ ಸ್ಕಂದಃ ಶಿವ ಸಮೋಽ ಭವತ್
ಶಿವಾಚಾರ ರಹಸ್ಯಸ್ಯ ಪಾತ್ರತಾಂ ಪ್ರಥಮಗತಃ ||

ಹೀಗೆ ಶಿವಾಚಾರ ರಹಸ್ಯವನ್ನು ರುದ್ರನಿಂದ ಪ್ರಥಮದಲ್ಲಿ ಪಡೆದವನು ಸ್ಕಂದನೆ. ಅಂದರೆ ಶಾಸನೋಕ್ತನಾದ ಮೊದಲ ಗುರು ಶಿವಾಚಾರದ ಶಿಕ್ಷಣ ನೀಡಿದ. ಅವನೇ ರುದ್ರ ಮಂಗಳಕರವಾದ (ಶಿವ=ಮಂಗಳ) ವಿದ್ಯೆ ಕಲಿಸಲು ಕಾರಣನಾದ. ಅವನನ್ನು ಊರ್ಧ್ವ ಬಾಹುಗಳಿಂದ ತನ್ಮಯರಾಗಿ ಸ್ತುತಿಸುತ್ತಿದ್ದವರು ಅವನ ಶಿಷ್ಯರೆ ಆಗಬೇಕು. ಸೈಂಧವ ಸಂಸ್ಕೃತಿಯ ಮುದ್ರಿಕಾಚಿತ್ರಲಿಪಿ ಬರಹಗಳಲ್ಲಿ ಸೂಚಿತವಾಗಿರುವ ಮೌಲ್ಯಗಳು ಸಂಸ್ಕೃತಿಯ ಮಾದರಿಗಳೆನಿಸುವುದರಿಂದ, ನಮ್ಮ ಸಂಸ್ಕೃತಿಯ ಚಹರೆಗಳನ್ನು ಕಂಡುಕೊಳ್ಳಬಹುದು.

ಭಾಷೆಗೇನೋ ಸರಸ್ವತಿ ದೇವತೆ, ಲಿಪಿಗೆ ಯಾರು? ಋಗ್ವೇದದಲ್ಲಿ ಅಕ್ಷರ ವಿಷಯವಾಗಿ ಆಧ್ಯಾತ್ಮಿಕ ತತ್ವಗಳು ಉಕ್ತವಾಗಿವೆ. ಅಕ್ಷರಗಳಿಗೆ 'ಮಾತೃಕಾ' ಎಂಬ ಹೆಸರಿದೆ. ಬ್ರಾಹ್ಮಿ ಅಥವಾ ಸರಸ್ವತಿಯ ಅಂಗರೂಪಗಳಾಗಿ ಅಕ್ಷರಗಳಿವೆ ಎಂಬುದು ಶಂಕರರ ಅಭಿಮತ ಹರಪ್ಪ (ಸೈಂಧವ)ಲಿಪಿಯೂ ತಾಂತ್ರಿಕವೆಂದು ಒಂದು ಅಭಿಪ್ರಾಯವಿದೆ.[7] ಜೈನಗ್ರಂಥಗಳಲ್ಲಿ ಆದಿತೀರ್ಥಂಕರ ವೃಷಭದೇವನು ತನ್ನ ಹಿರಿಯ ಮಗಳು ಬ್ರಾಹ್ಮಿಗೆ 64 ಅಕ್ಷರಗಳನ್ನು ಬೋಧಿಸಿದ ಚಿಕ್ಕಮಗಳು ಸುಂದರಿಗೆ ಅಂಕಗಳನ್ನು ಬೋಧಿಸಿದ ಎಂದಿದೆ. ವೈದಿಕಯುಗದ ಜನರ ಭಾಷೆ 'ಭಾರತಿ' ಎಂದು ಹೆಸರಾಗಿತ್ತು. ಗುಪ್ತಯುಗದ ನಿಘಂಟುಕಾರ ಅಮರಸಿಂಹನು 'ಬ್ರಾಹ್ಮಿ ತು ಭಾರತಿ ಭಾಷಾ' ಎಂದಿದ್ದಾನೆ. ಭಗವತಿಸೂಕ್ತದ ಮೇಲಿನ ವ್ಯಾಖ್ಯಾನವು

---

5. ಸಿ.ಬಿ. ಸೀತಾರಾಂ: 'ಸೈಂಧವ ಸಂಸ್ಕೃತಿಯ ಕೆಲವು ಪ್ರತೀಕಗಳು, ಪ್ರಬುದ್ಧಕರ್ನಾಟಕ. ಪು.17
6. ಡಾ|| ಶ್ರೀ ಜಚನಿ: ರುದ್ರ-ಭದ್ರ-ರೇಣುಕ. ಶ್ರೀ ಮಾಮಿಡಿ ಪ್ರಕಾಶನ, ಬೆಂಗಳೂರು-4. 1985, ಪು.2
7. ಡಾ|| ಎಸ್. ಶ್ರೀಕಂಠ ಶಾಸ್ತ್ರೀ: ಪುರಾತತ್ವಶೋಧನೆ, ಮೈಸೂರು ವಿಶ್ವವಿದ್ಯಾಲಯ, 1960, ಪು. 215

'ಬ್ರಾಹ್ಮಿ' ಎಂಬ ಹೆಸರು ಭಾಷೆ ಮತ್ತು ಲಿಪಿಗೆ ಅನ್ವಯವಾಗಿತ್ತೆಂದಿದೆ ಹಾಗೂ ಭರತನ ಸೋದರಿ ಬ್ರಾಹ್ಮಿ ಎಂದಿದೆ.[8] ಈಚೆಗಿನ ಶೋಧನೆಯಲ್ಲಿ ಡಾ|| ನಟವರ ಝಾ ಅವರು ಸೈಂಧವ ಲಿಪಿಯನ್ನು 'ಹಳೆಯ ಬ್ರಾಹ್ಮಿ' ಎಂದು ಕರೆದಿದ್ದಾರೆ. ಸುಮಾರು 2 ಸಾವಿರ ಮುದ್ರಿಕೆಗಳಲ್ಲಿರುವ ಲಿಪಿ ಹಾಗೂ ಚಿತ್ರಗಳನ್ನು ಅನುಲಕ್ಷಿಸಿ, ಸಾಮ್ಯಗಳ ಕಾರಣ ಅಶೋಕನ 2ನೇ ಶತಮಾನದ ಬ್ರಾಹ್ಮಿಗೆ ಹೋಲಿಸಿ ಹಾಗೆ ಕರೆದಿದ್ದಾರೆ. ಅಂದಿನ ಸಾಂಸ್ಕೃತಿಕ ಬದುಕನ್ನು ಆ ಮುದ್ರಿಕೆಗಳಿಂದ ಗ್ರಹಿಸಿ, ಶೈವಾಗಮದ ಚಿಂತನೆಯ ಹೊಳಹುಗಳನ್ನು ಕ್ರಿಯಾಯೋಗದ ಮುದ್ರೆಯನ್ನು ಕಂಡಿದ್ದಾರೆ.[9] ಸಿಂಧೂ ಮುದ್ರಿಕೆಯ 'ಓಂ' ಅಕ್ಷರರೂಪವನ್ನು ದೇವನಾಗರಿ ಲಿಪಿಯು ಲಂಬ ನೇರದಲ್ಲಿ ರೂಪಾಂತರ ಮಾಡಿಕೊಂಡಿದೆ; ಕನ್ನಡವು ಆ ಅಕ್ಷರದ ಮೂಲರೂಪವನ್ನು ಹಾಗೆಯೆ ಉಳಿಸಿಕೊಂಡಿದೆ ಎಂದು ಶ್ರೀ ನವರತ್ನ ರಾಜಾರಾಂ ತಮ್ಮ ಶೋಧನೆಯಲ್ಲಿ ಮಂಡಿಸಿದ್ದಾರೆ. ಸಿಂಧೂಲಿಪಿ ಭಾಷಾಸೂಚಕ ಅಲ್ಲ; ಅಂಕಸೂಚಕ ಚಿಹ್ನೆಗಳು. ಆ ಸಂಸ್ಕೃತಿಯ ಜನಜೀವನ ಅತ್ಯಂತ ಅಭಿವೃದ್ಧಿ ಹೊಂದಿದುದಾಗಿತ್ತು. ಸಿಂಧೂಸಂಸ್ಕೃತಿಯ ಮುದ್ರಿಕೆಗಳು ಹೆಚ್ಚಿನವು ವಾಣಿಜ್ಯೋದ್ದೇಶಗಳಿಗೆ ಹಾಗೂ ಕೆಲವೊಮ್ಮೆ ತಾಯಿತಗಳಿಗೆ ಬಳಕೆಗೊಂಡಿದ್ದುವು. ವಾಣಿಜ್ಯ ಚಟುವಟಿಕೆಯ ಕಾರಣ ಲೆಕ್ಕಶಾಸ್ತ್ರ, ತೂಕ, ಅಳತೆ ಕುರಿತು ಆ ಸಂಸ್ಕೃತಿಯ ಜನ ಬಲ್ಲವರಾಗಿದ್ದರು ಎಂದೆಲ್ಲ ಶ್ರೀ ಬಿ.ವಿ. ಸುಬ್ಬರಾಯಪ್ಪನವರ ಮತವಾಗಿದೆ.[10] 'ಅಲ್ಫ ಬೆತ್' ಎಂಬ ಶಬ್ದದಲ್ಲಿ 'ಅಲ್ಫ' ಎಂದರೆ ಗೂಳಿ (ವೃಷಭ), 'ಬೆತ್' ಎಂದರೆ ಬಂಬು (ಬಿದಿರು) ಎಂದು ಧ್ವನಿಶಾಸ್ತ್ರದ ಹಿನ್ನೆಲೆಯಲ್ಲಿ ಹೇಳುವುದಿದೆ.[11] ಸಿಂಧೂನಾಗರೀಕತೆಯಲ್ಲಿ ಸಂಯೋಜಿತ ನಗರಗಳು, ಇಟ್ಟಿಗೆಯ ಸೌಧಗಳು, ಸ್ನಾನಘಟ್ಟಗಳು, ನೈರ್ಮಲ್ಯ ಸಾಧಕ ಚರಂಡಿಗಳು, ಪ್ರಾಣಿಪೂಜೆಯ, ಲಿಂಗಾರ್ಚನೆಯ, ಸುಕುಮಾರ ಶಿಲ್ಪಗಳು ಅಂದಿನ ಸಮಕಾಲೀನ ಜಗತ್ತಿನ ಮಾದರಿಗಳೆನಿಸಿದ್ದುವು.[12] ಸೈಂಧವಸಂಸ್ಕೃತಿ ಪ್ರದೇಶದಲ್ಲಿ ಅಚ್ಚುಕಟ್ಟಾದ ಕೋಟೆಕೊತ್ತಲಗಳಿದ್ದುವು. ಅವು ಧಾರ್ಮಿಕ ಹಾಗೂ ಸರ್ಕಾರದ ಉದ್ದೇಶಗಳಿಗೆ ಬಳಕೆ ಆಗುತ್ತಿದ್ದುವು. ಅಲ್ಲಿನ ತೂಕ, ಅಳತೆ ಮಾನ, ರಸ್ತೆ ನಿರ್ಮಾಣ ಯೋಜನೆ, ಇಟ್ಟಿಗೆಗಳ ಸ್ವರೂಪ, ದೊಡ್ಡಪಟ್ಟಣಗಳ ರಚನಾವಿನ್ಯಾಸ ಇವೆಲ್ಲ ಸ್ವತಂತ್ರ ಸಮುದಾಯ ತಂಡಗಳದೆನ್ನುವ ಬದಲು, ಏಕಬಂಧ ಕೇಂದ್ರೀಯ ವ್ಯವಸ್ಥೆಯ ರಾಜ್ಯ (single centralised state) ಸೂಚಕಗಳೆಂದು ತಿಳಿಯುತ್ತದೆ. ಮುಖ್ಯವಾಗಿ ಆ ಸಂಸ್ಕೃತಿಯ ಲಕ್ಷಣವೆಂದರೆ ಸಂರಕ್ಷಣಾತ್ಮಕ ಅಥವಾ ಬದಲಾವಣೆ ಬಯಸದ ಸಮಾಜವಾಗಿತ್ತು. ಆ ಸಂಸ್ಕೃತಿಯ ಸಂಕ್ಷಿಪ್ತ ಶಾಸನಗಳಲ್ಲಿ ಎಂದೂ ಗರಿಷ್ಠ 20

---

8. Journal of Epigraphical Society of India, Vol. 13, 1936, P.7 - Presidential speech by V.S. Pathak. :
9. 'ಸಿಂಧೂಲಿಪಿಯ ಒಗಟಿನ ಉತ್ತರ'. ಸುಧಾ. ವಾರಪತ್ರಿಕೆ. ಬೆಂಗಳೂರು 1.6.1997
10. 'ಸಿಂಧೂ ಲಿಪಿ-ಭಾಷೆಯಲ್ಲ. ಅಂಕಶಾಸ್ತ್ರ', ಸುಧಾ ವಾರಪತ್ರಿಕೆ. 1.12.1991
11. Reasons why Indians did not invent the alphabet', Deccan Herald, 6.9.1993
12. ಭಗವತಿ ಶರಣ ಉಪಾಧ್ಯಾಯ: ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ. ನವಕರ್ನಾಟಕ ಪ್ರಕಾಶನ. ಬೆಂಗಳೂರು. 1986 (ಅನು: ಪ್ರಧಾನ್ ಗುರುದತ್ತ), ಪು. 95

ಚಿಹ್ನೆಗಳನ್ನು ಮೀರದಂತೆ ಗಮನಾರ್ಹ ಲಿಪಿಗಳಿರುತ್ತಿದ್ದುವು. ಸಾಹಿತ್ಯ ಧಾರ್ಮಿಕ ಕಾವ್ಯ (epic)ವಾಗಿ, ಕಲಾತ್ಮಕ ದೃಷ್ಟಿ ಅವರಲ್ಲಿ ಅಷ್ಟಾಗಿ ಇರಲಿಲ್ಲ[13] ಎಂದೆಲ್ಲ ಎ.ಎಲ್.ಭಾಷಂ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಜನಸಾಮಾನ್ಯರ ದೇವತೆ ಮಾತೃದೇವತೆ. ಉಳ್ಳವರ (upper class) ದೇವತೆ ಗಂಡುದೇವರಾಗಿದ್ದ ಎಂದಿದ್ದಾರೆ. ಅದೇ ಡಾ|| ಎಸ್.ಆರ್. ರಾವ್ ಅವರ ರೀತ್ಯಾ, ಸೈಂಧವಸಂಸ್ಕೃತಿಯ ಜನ (ಹರಪ್ಪನ್ನರು) ಬಹಳವಾಗಿ ಸಾಕ್ಷರರಾಗಿದ್ದರು ಎಂದಿದೆ.[14] ಮಾತೃದೇವತಾಪೂಜೆ ಈ ಸಂಸ್ಕೃತಿಯಲ್ಲಿ ಬಹಳ ಪ್ರಾಚುರ್ಯದಲ್ಲಿತ್ತಾದ ಕಾರಣ ಸಿಂಧೂಲಿಪಿಯ ಅಕ್ಷರಗಳಿಗೆ 'ಮಾತೃಕಾ' ಎಂಬ ಹೆಸರಿತ್ತು ಎಂದು ಶ್ಯಾಮಾಶಾಸ್ತ್ರಿಗಳ ನುಡಿ.

ಇಷ್ಟೆಲ್ಲ ದೀರ್ಘ ಪ್ರಸ್ತಾವನೆಯ ಕಾರಣವೆಂದರೆ, ನಮ್ಮಲ್ಲಿನ ಶಿಕ್ಷಣಪದ್ಧತಿ ಹೇಗೆ ಸಾಂಸ್ಕೃತಿಕ ಮಜಲುಗಳನ್ನು ಬದುಕಿನಲ್ಲಿ ಅಡಕಗೊಳಿಸಿಕೊಂಡಿತ್ತು, ಅಂದಿನ ಶಾಸನಗಳೆನಿಸಿದ ಮುದ್ರಿಕಾ ಬರಹ (ಲಿಪಿ) ಹಾಗೂ ಚಿತ್ರಗಳು ಎಷ್ಟು ಮೌಲಿಕವಾಗಿ ಅವುಗಳನ್ನು ಬಿಂಬಿಸುತ್ತಿದ್ದುವೆಂಬುದನ್ನು ತೋರಿಸುವುದಾಗಿದೆ. ಅಂತಾಗಿ ಹೆಕ್ಕಬಹುದಾದ ಅಂಶಗಳಿವು: ಸಾಕ್ಷರತೆ ಬಹಳವಿದ್ದ ಕಾರಣ, ಜನಸಾಮಾನ್ಯರಿಗೆ ಭೇದವಿಲ್ಲದಂತೆ ಅಗತ್ಯವರಿತ ಶಿಕ್ಷಣ ನೀಡಿಕೆ ಇತ್ತು; ಲಿಪಿದೇವತೆ, ಭಾಷಾದೇವತೆ, ಸಾಂಸ್ಕೃತಿಕ ದೇವತೆ ಬಹುಶಃ `ಮಾತೃದೇವತೆ'ಯೆ ಆಗಿತ್ತು. 'ಬ್ರಾಹ್ಮಿ', 'ಭಾರತಿ' ಎಂಬ ಸ್ತ್ರೀವಾಚಕ ಶಬ್ದ ಗಮನಿಸಿದರೆ ಸ್ತ್ರೀಗಿದ್ದ ಮೌಲ್ಯದ ಅರಿವಾಗುತ್ತದೆ. ರುದ್ರಪಶುಪತಿಯ ಮುದ್ರಿಕೆಯಲ್ಲಿ ಏಳುಜನ ಕನ್ನಿಕೆಯರ ಚಿತ್ರವೂ ಇರುವುದು ಸ್ತ್ರೀಗಿದ್ದ ಮಾನ್ಯತೆಯ ಲಕ್ಷಣವೇ ಆಗಿದೆ. ವ್ಯಾಪಾರ ವಾಣಿಜ್ಯ ಚಟುವಟಿಕೆಗಳು ಮುದ್ರಿಕೆಗಳ ಮೂಲಕ ತಿಳಿಯುವ ಕಾರಣ, ಅನುಗುಣ ಶೈಕ್ಷಣಿಕ ತರಬೇತಿ ವ್ಯವಸ್ಥೆ, ಗಣಿತಶಾಸ್ತ್ರದ ಪ್ರಾವೀಣ್ಯತೆ ಪಡೆದವರಿದ್ದರು. ಊರಿನ ರಚನಾ ವ್ಯವಸ್ಥೆಯನ್ನು ಗಮನಿಸಿದರೆ ಅವರಲ್ಲಿ ತಾಂತ್ರಿಕ ಬೋಧನಾ ವ್ಯವಸ್ಥೆ ಇದ್ದಿರಬೇಕೆನಿಸುತ್ತದೆ. ಆಧ್ಯಾತ್ಮಿಕವಾಗಿ ಶಿವಪರ ಚಿಂತನೆ ಶಿಕ್ಷಣವಿದ್ದಿರಬೇಕು. ಇಲ್ಲಿ 'ಶಿವ' ಎಂದರೆ ಮಂಗಳಕರ ಎಂಬ ಭಾವನೆಯ ಕಾರಣ, ಧಾರ್ಮಿಕ ಮೌಲ್ಯ, ಮತೀಯವೆನಿಸದೆ ಆಧ್ಯಾತ್ಮಿಕದ್ದಾಗಿತ್ತೆನ್ನಬೇಕು. ಸಂರಕ್ಷಣ, ವ್ಯವಸ್ಥಾತ್ಮಕ ಅಥವಾ ಬದಲಾವಣೆ ಬಯಸದ ಸಮಾಜ, ಏಕಕೇಂದ್ರೀಯ ವ್ಯವಸ್ಥಾಬದ್ಧ ಆಡಳಿತ ಅಂದಿನ ಅಗತ್ಯವಾಗಿತ್ತು; ಅನುಗುಣ ಶಿಕ್ಷಣಮೌಲ್ಯವನ್ನು ರೂಪಿಸಿರುವುದೂ ಸಹಜವೆನಿಸುತ್ತದೆ. ಧಾಳಿಯ ಕುರುಹುಗಳು ಸೈಂಧವಸಂಸ್ಕೃತಿಯಲ್ಲಿ ಆಗಿರುವುದು ಗೋಚರವಿದೆ. ಶ್ರೀ ಜ.ಚ.ನಿ. ಅವರು ವೀರಭದ್ರನನ್ನು ಆರ್ಯದ್ರಾವಿಡ ಸಮನ್ವಯಾಚಾರ್ಯ ಎಂದಿರುವ ಹಿನ್ನೆಲೆಯಲ್ಲಿ, ದಕ್ಷಯಜ್ಞ ಹಾಗು ವೀರಭದ್ರನಿಂದ ಅದರ ನಾಶ-ಇವುಗಳು ಎರಡು ಸಂಸ್ಕೃತಿಗಳ ನಡುವಣ ಸಂಘರ್ಷ ನಡೆದು, ನಂತರ ಹೊಂದಾಣಿಕೆ ಆಗಿರುವುದು ಈವರೆಗೂ ನಡೆದು ಬಂದಿರುವ, ಆ ಸಂಬಂಧದ ಜಾಯಮಾನದಿಂದ ವೀರಭದ್ರ, ದಕ್ಷನ ಶಿಲ್ಪಗಳಲ್ಲಿಯೂ ಕಂಡುಬರುವಲ್ಲಿ ತಿಳಿಯುತ್ತದೆ. ಅಂದರೆ ನಮ್ಮ ಸಂಸ್ಕೃತಿಯ ಮೌಲ್ಯ

---

13. A.L. Basham: The Wonder that was India, p. 16 & 20
14. Dr. S.R. Rao: The Indus people invent the alphabet, J. Epigraphical Society of India, 5th Annual Congress souvenir, Bangalore, 1979, p.25

ಹೊಂದಾಣಿಕೆ, ನಿತ್ಯಬದುಕಿಗೆ ಸ್ಪಂದನ. ಇದನ್ನು ನಮ್ಮ ಶಿಕ್ಷಣಧಾರೆಯಲ್ಲಿ ಕಾಣಬಹುದು. ಸೈಂಧವಸಂಸ್ಕೃತಿಯಲ್ಲಿನ ವ್ಯವಹಾರಗಳನ್ನು ಗಮನಿಸಿದರೆ ವ್ಯವಹಾರ ಕೇವಲ ಬದುಕಲಿಕ್ಕಲ್ಲ. ಬದುಕನ್ನು ಸಾಧಿಸುವುದಕ್ಕಾಗಿ ಎಂದಿದೆ. ಹಾಗಿದ್ದರೆ ಮುದ್ರಿಕೆಗಳಲ್ಲಿ ಮೂಡಿಬಂದ ಈ ವಿಷಯಗಳು ಅಂದಿನ ಕಲಿಕೆಯಲ್ಲಿ ಗುರುವು ಮುಖ್ಯನೆನಿಸಿದ್ದರೂ ಕಲಿಯುವವನ ಬದುಕಿಗೂ ಒತ್ತುಕೊಟ್ಟಿದ್ದಂತೆ ಕಾಣುತ್ತದೆ. ಇದಷ್ಟೆ ಅಲ್ಲ, ತೈತ್ತರೀಯ ಉಪನಿಷತ್ತಿನಲ್ಲಿರುವಂತೆ. ಗುರುವು ತನ್ನ ಶಿಷ್ಯರನ್ನು ಗುರುಕುಲದಿಂದ ಬೀಳ್ಕೊಡುವಲ್ಲಿ ಹೇಳುತ್ತಿದ್ದ ಬುದ್ಧಿವಾದವೆಂದರೆ ಸತ್ಯಂವದ ಧರ್ಮಂಚರ, ಮಾತೃದೇವೋಭವ. ಪಿತೃದೇವೋಭವ, ಆಚಾರ್ಯದೇವೋಭವ, ಅತಿಥಿ ದೇವೋಭವ ಎನ್ನುವ ಮಾತು. ಇದರಲ್ಲಿ ಹೇರುವ ಆದರ್ಶವೆನಿಸದೆ, ಬದುಕಿನ ಸೂಕ್ತ ನಿರ್ವಹಣೆಯ ಸಾಂಸ್ಕೃತಿಕ ಆಶಯ ಕಾಣುತ್ತದೆ. ಈ ಬಗೆ ನಮ್ಮ ಶಿಕ್ಷಣದ ಪ್ರಾಚೀನ ಮೌಲ್ಯ. ಅಂದಿನ ಸಾಂಸ್ಕೃತಿಕ ಅವಶ್ಯಕ ಮೌಲ್ಯ, ಇಂದಿನ ಗತಿಯಲ್ಲಿ ಕೊರತೆಯಾಗಿರುವ ಸೊಲ್ಲು.

ಶಾಸನಗಳಲ್ಲಿ ಆನ್ವಯಿಕ ಶಿಕ್ಷಣಮೌಲ್ಯಗಳು

ಶಾಸನವೆಂದರೆ ಕಲ್ಲು, ಲೋಹ, ಮರ ಇತ್ಯಾದಿ ಘಟ್ಟಿಯಾದ ಘನವಸ್ತುಗಳ ಮೇಲೆ ಕಂಡರಿಸಿದ ಬರಹ ಎಂಬುದು ಸಾಮಾನ್ಯಾರ್ಥ. ಈ ಶಾಸನಗಳು ನಮ್ಮ ಇತಿಹಾಸ, ಸಂಸ್ಕೃತಿ ರಾಜಕೀಯ ಇತ್ಯಾದಿ ವಿಷಯಗಳನ್ನು ಒಳಗೊಂಡು ಭಾರತದ ಪ್ರಾಚೀನ ಇತಿಹಾಸ ಸಂಸ್ಕೃತಿ ತಿಳಿಯಲು ಏಕಮಾತ್ರ ಮೂಲಭೂತ ಆಕರ ಎಂಬುದು ವಿದ್ವಾಂಸರ ಮತ. ಶಿಕ್ಷಣಪದ್ಧತಿಯ ವ್ಯವಸ್ಥೆ ಇಂದಿನಂತೆ ಸಾರ್ವತ್ರಿಕವಾಗಿದ್ದ ಬಗ್ಗೆ ಶಾಸನಗಳು ಪೂರ್ಣಪುರಾವೆ ನೀಡುವುದಿಲ್ಲವಾದರೂ, ಅಡಕವಿದ್ದ ಮೌಲ್ಯಗಳನ್ನು ಸೂಚಿಸಬಲ್ಲವು. ಆ ದೃಷ್ಟಿಯಿಂದ ಸೈಂಧವ ಸಂಸ್ಕೃತಿಯ ಮುದ್ರಿಕಾ ಲೇಖನಗಳ ಬಗ್ಗೆ ಈಗಾಗಲೇ ಪ್ರಸ್ತಾಪಿಸಿದೆ. ಅಶೋಕಪೂರ್ವದಲ್ಲಿ ಬ್ರಾಹ್ಮಿಲಿಪಿಯ ಬರಹಗಳು, ಲಭ್ಯವಿದ್ದರೂ ನಮ್ಮ ಶಿಕ್ಷಣದ ಕುರಿತ ಪ್ರಸ್ತಾಪಗಳನ್ನು ಹೆಚ್ಚುವಷ್ಟು ಸಮೃದ್ಧಿ ಹಾಗೂ ವ್ಯಾಪಕತೆಯನ್ನು ಅವು ಹೊಂದಿಲ್ಲ.

ಅಶೋಕನ ಬ್ರಾಹ್ಮಿ, ಅರಮೇಯಿಕ್, ಖರೋಷ್ಠಿ ,ಶಾಸನಗಳಿಂದ ಶಿಕ್ಷಣಮೌಲ್ಯಗಳ ಸೂಚನಾಂಶಗಳು ಲಭ್ಯ. ಅಲ್ಲದೆ ಶಿಕ್ಷಣದ ಸ್ವರೂಪ ಮೂಲಭೂತವಾಗಿ ನೈತಿಕ ಮೌಲ್ಯ ಆಧಾರಿತವಾಗಿದ್ದುದು ಕಾಣಬರುತ್ತದೆ. ಈ ಕಾರಣವೆ ಅವನ ಶಾಸನಗಳನ್ನು ಧರ್ಮಶಾಸನಗಳೆಂದು ಕರೆಯುವುದು. ಅವನ ಗಿರ್ನಾರನ್‌ನ ಮೂರನೆಯ ಬಂಡೆಗಲ್ ಶಾಸನದಲ್ಲಿ.[15]

ಸರ್ವತ ವಿಜಿತೇ ಮಮ ಯುತಾ ಚ ರಾಜೂಕೇ ಚ ಪ್ರಾವೇಸಿಕೇ ಚ ಪಂಚಸು
ಪಂಚಸು ವಾಸೇಸು ಅನು ಸಂ
ಯಾನಂ ನಿಯಾತು ಏತಾಯೇವ ಅಥಾಯ ಇಮಾಯ ಧಂಮಾನುಸಸ್ಟಿಯ
ಯಥಾ ಅಞ್ಞಾ
ಯ ಪಿ ಕಂಮಾಯ

---

15. i. R.K. Mukerji: Asoka (3rd Edn.) Delhi, 1972, P. 223, ii. D.C. Sircar: Inscriptions of Asoka, (3rd Edn.,) New Delhi, 1975, p.23

ಪ್ರಾಕೃತ ಭಾಷೆಯ ಬ್ರಾಹ್ಮೀಲಿಪಿಯ ಈ ಶಾಸನದ ಸಾಲುಗಳ ಅರ್ಥವೆಂದರೆ, ಅಶೋಕ ಹೇಳುವಂತೆ ನಾನು ಗೆದ್ದ ರಾಜ್ಯಗಳಲ್ಲೆಲ್ಲ ಯುಕ್ತರು, ರಾಜುಕರು, ಪ್ರಾದೇಶಿಕರು (ಇತ್ಯಾದಿ ಪ್ರಾಂತೀಯ ಗೌರ್ನರ್‌ಗಳು!) ಐದು ವರ್ಷಗಳಿಗೊಂದು ಬಾರಿ ಧರ್ಮಾನುಶಾಸ್ತಿ ಅರ್ಥಾತ್ ಧರ್ಮರಕ್ಷಣ, ಧರ್ಮೋಪದೇಶಕ್ಕಾಗಿ ಹಾಗೂ ಇತರ ಕಾರ್ಯಗಳಿಗಾಗಿ ಸಂಚಾರ ಮಾಡತಕ್ಕದ್ದು ಎಂದಾಗಿದೆ. ಇಲ್ಲಿನದು ರಾಜನಾಗಿ ಅಧಿಕಾರವಾಣಿಯೆ. ಅಂತಾಗಿ ಇದು ಪ್ರಜೆಗಳಲ್ಲಿ ಪ್ರಚಾರವಾಗಬೇಕು. ಅಂದರೆ ಈ ಬಗೆಯ ಶಿಕ್ಷಣಮೌಲ್ಯಗಳೂ ಜಾರಿಗೊಂಡಿದ್ದುವೆಂದೇ ಅರ್ಥ. ಅವುಗಳಾದರೂ, ಮಾತಾಪಿತೃ ಶುಶ್ರೂಷೆ, ಸ್ನೇಹಿತರು, ಪರಿಚಿತರು, ಬ್ರಾಹ್ಮಣ, ಶ್ರಮಣರಿಗೆ ದಾನ, ಪ್ರಾಣಿ ನಿರ್‌ಹತ್ಯ, ಮಿತವಾಗಿ ಖರ್ಚು, ಮಿತವಾದ ಹಣ ಸಂಗ್ರಹ ಸಾಧುವಾದುದು ಎಂದೂ ಶಾಸನದ ಮಾತುಗಳಾಗಿ ಅವುಗಳ ಬೋಧನಾ ವ್ಯವಸ್ಥೆಯನ್ನು ಅವನ ಆ ಮೂವರು ಅಧಿಕಾರಿಗಳು ನಿರ್ವಹಿಸಬೇಕಾಗಿತ್ತು. ಇಲ್ಲಿ ಧರ್ಮ ಎಂದರೆ ಅಶೋಕ ಸ್ವೀಕರಿಸಿದ ಬೌದ್ಧಧರ್ಮವದ್ದು ಎಂಬರ್ಥವಿದ್ದರೂ, ಅದರ ಈ ಬೋಧನೆಗಳು ಸಾರ್ವಜನಿಕವೆನಿಸುತ್ತದೆ. ತೈತ್ತರೀಯ ಉಪನಿಷತ್ತಿನಲ್ಲಿ ಉಕ್ತವಾದ ಗುರುಶಿಷ್ಯನಿಗೆ ನೀಡುವ ಹಿತನುಡಿಗಳು, ಅಶೋಕನ ಬ್ರಹ್ಮಗಿರಿಶಾಸನದಲ್ಲಿ ಪ್ರತಿಧ್ವನಿಗೊಂಡಿವೆ:

ಗುರುಸು ಪ್ರಾಣೇಸು ದ್ರೃಯಿತವ್ಯಂ ಸಚಂ ವತವಿಯಂ ಸೇ ಇಮೇ ಧಂಮಗುಣಾ... ಏಸಾ ಪೋರಾಣಾ ಪಕತೀ ದೀಘಾವುಸೆ....

ಗುರುಹಿರಿಯರಿಗೆ ಗೌರವ, ಪ್ರಾಣಿಗಳಲ್ಲಿ ದಯೆ, ಸತ್ಯದ ನುಡಿ, ಧರ್ಮದ ಗುಣ ಇತ್ಯಾದಿ ಪುರಾತನ ನಿಯಮಗಳ ಪಾಲನೆ ದೀರ್ಘಾಯುಷ್ಯ ಲಭ್ಯ ಎಂಬ ಅರ್ಥ ಇಲ್ಲಿನದು. ಇಲ್ಲಿ ಬರುವ ಪೋರಾಣ=ಪುರಾಣ ಶಬ್ದ ತೈತ್ತಿರೀಯ ಉಪನಿಷತ್ತಿನ ಗುರುವಾಕ್ಯ ಎಂಬುದರ ಸೂಚನೆ ಎಂದು ಆರ್.ಕೆ. ಮುಖರ್ಜಿಯವರ ಮಾತು. ಇಲ್ಲಿ ಗುರು ಹೇಳುತ್ತಾನೆ, ಶಿಷ್ಯ ಕೇಳಬೇಕು ಎಂಬ ಆದರ್ಶೀಕೃತ ಅಧಿಕಾರದಂತಹ ಶಿಕ್ಷಣ ಮೌಲ್ಯ ಅಶೋಕನ ಕಾಲದಲ್ಲಿತ್ತು ಎಂದು ಪ್ರತಿಪಾದಿಸುವುದು ಸಹಜ. ಆದರೆ ಹೇಳಿರುವ ಮಾತಿನ ಮೌಲ್ಯ ಯಾರಿಗೂ ಸಲ್ಲುವಂತಹುದೇ. ಅಶೋಕ ತನ್ನ ಶಾಸನಗಳು ಧರ್ಮಲಿಪಿ ಎಂದು ಕರೆದುಕೊಂಡರೂ ಬೌದ್ಧಧರ್ಮವು ರಾಜಧರ್ಮವೆನಿಸಿದ್ದರೂ, ರಾಜ್ಯಧರ್ಮ ಎಂಬ ಮತೀಯ ನಿಲುವಿಗೇ ಅಂಟದೆ ಧರ್ಮಸಮನ್ವಯಿಕ ಸಂಗತಿಗಳೂ ಪ್ರಚಲಿತವಾಗಿದ್ದವು. ಅದಾಗಿ ಅವನ ಶಾಸನಗಳು ಬರೀ ಆಜ್ಞೆಗಳಾಗಿರದೆ, ಜೀವನಧರ್ಮಬೋಧೆಯನ್ನು ಸಕಲ ಜೀವಿಗಳಿಗೆ ಲೇಸು ಬಯಸುವ ಕ್ರಿಯೆಯನ್ನು ಜನತೆಗೆ ಮುಟ್ಟಿಸುವ ಧರ್ಮ ಲೇಖಗಳಾಗಿದ್ದುವು. ಇದು ಅಂದಿನ ಶಿಕ್ಷಣಪದ್ಧತಿಯಲ್ಲಿ ಅಡಕವೇ ಆಗಿದ್ದ ಮೌಲ್ಯವೇ. ಬೌದ್ಧ ಮತ್ತು ಜೈನಧರ್ಮಾನುಯಾಯಿ ಜನತೆ ಪುಸ್ತಕಗಳನ್ನು (ಹಸ್ತಪ್ರತಿಗಳನ್ನು ಬರೆಸಿ) ದೇಗುಲ ಹಾಗೂ ಇತರ (ವಿದ್ಯಾ!) ಸಂಸ್ಥೆಗಳಿಗೆ ದಾನ ಮಾಡುವ ಪದ್ಧತಿ ಇತ್ತು.[16] ಈ ಹಸ್ತಪ್ರತಿಗಳು ಯಾವುದೇ ಪ್ರಕಾರದ್ದಿರಲಿ, ದೇಗುಲ ಸಂಸ್ಥೆಗಳಲ್ಲಿ ವಿದ್ಯಾದಾನವಿದ್ದ ಬಗೆಗೆ ಹಾಗು ಶಿಕ್ಷಣ ಸಂಬಂಧವಲ್ಲಿ ಸಮಾಜವನ್ನು ತೊಡಗಿಸಲಾಗಿತ್ತು ಎಂಬ ಅಂಶವನ್ನು ವಿದಿತಗೊಳಿಸುತ್ತವೆ.

16. D.C. Sircar; Indian Epigraphy, Cha.IV, P.102.

ಇಂದಿನ ಶೈಕ್ಷಣಿಕ ಅಪೇಕ್ಷೆಯಾದ ಸಮುದಾಯ ಅನುರಕ್ತಿಯ (community involvement) ಅಂದಿನ ರೂಪವದು. ವಿದ್ಯೆ ಕೇವಲ ಕೆಲವೇ ವರ್ಗದ, ಶ್ರೀಮಂತರದೆನಿಸದೆ ಸಾಮಾನ್ಯರಿಗೂ ಸಲ್ಲುವ ಹಕ್ಕು ಎಂಬುದಕ್ಕೆ ಅಶೋಕನ ಬಂಡೆಗಲ್ಲು, ಸ್ತಂಭ ಶಾಸನಗಳ ಮೇಲಿನ ಜೀವನಮೌಲ್ಯ ಸಂಬಂಧೀ ಬರೆಹಗಳೇ ಸಾಕ್ಷಿ ಎನಿಸುತ್ತವೆ. ಆವರಣದಲ್ಲಿ ಹೇಳಿಕೊಡಲಿ, ಬಿಡಲಿ, ಬಯಲಿನ ನೆಲೆಗಳಲ್ಲಿ ಶಿಕ್ಷಣ ಮೂಡಿಸುವ ಮೌಲ್ಯಗಳು ಪ್ರಸಾರಗೊಂಡ ಬಗೆ ಅದಾಗಿತ್ತು. ಇದೆಲ್ಲ ಕ್ರಿ.ಪೂ. 3ನೇ ಶತಮಾನದಿಂದ ಬಂದ ನಡೆ ಆಗಿತ್ತು. ಕುಶಾನ, ಶಕರಲ್ಲೂ, ಭಾರಶಿವರ ಕಾಲದಲ್ಲೂ ಧಾರ್ಮಿಕ ಮೂಲದ ಭಾವನೆಗಳೂ ರಾಜನಿಂದ. ಬಂದಂತೆ ಸೂಚಿತವಾಗಿರುವ ಆಲೇಖ್ಯಗಳು (ನಾಣ್ಯ ಶಾಸನ), ಹಾಗೂ ಶಾಸನಗಳು ಸೂಚಿಸುವ ಕಾರಣ ಶೈಕ್ಷಣಿಕ ಮೌಲ್ಯಗಳು ಪರಂಪರೆಯನ್ನು ಎತ್ತಿ ಹಿಡಿಯುವಂತಹುವಾಗಿದ್ದುವು... ಕ್ರಿ.ಪೂ. 2ನೇ ಶತಮಾನದ ಒರಿಸ್ಸಾದ ಖಾರವೇಲನ ಹಾದಿಗುಂಫಾ ಶಾಸನ ಈ ದೃಷ್ಟಿಯಿಂದ ಗಮನಾರ್ಹವೆ. ಇದು ಪ್ರಾಕೃತ ಭಾಷೆಯ ಬ್ರಾಹ್ಮೀಲಿಪಿ ಶಾಸನ.

ಖಾರವೇಲನು ಬದುಕಿನ ಆರಂಭದಲ್ಲಿ ಒಂಭತ್ತು ವರ್ಷಗಳ ಕಾಲ ರಾಜಕಾರ್ಯ ಸಂಬಂಧದ ಪತ್ರವ್ಯವಹಾರ (ಲೇಖ), ನಾಣ್ಯ ಚಲಾವಣೆ ವ್ಯವಹಾರ (ರೂಪ), ಆಡಳಿತ ಲೆಕ್ಕಪತ್ರ ವ್ಯವಹಾರ (ಗಣನೆ), ಕಾರ್ಯನಿರ್ವಹಣಾ ವಿಧಿವಿಧಾನ (ವ್ಯವಹಾರ) ಇವುಗಳ ಶಿಕ್ಷಣ ಪಡೆದನೆಂದು ಶಾಸನದಲ್ಲಿ -

'ತತೋ ಲೇಖ ರೂಪಗಣನಾ ವವಹಾರ ವಿಧಿ ವಿಸಾರದೇನ ಸವವಿಜಾವದಾತೇನ ನವವಸಾನಿ'

ಎಂಬ ಮಾತುಗಳಿಂದ ಸ್ಪಷ್ಟಪಡುತ್ತದೆ. ಇದು ರಾಜನ ದಕ್ಷಆಡಳಿತಕ್ಕೆ ಅಗತ್ಯವಿದ್ದ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರ ಪ್ರಣೀತ ನೀತಿಯಂತೆ ಇಲ್ಲಿ ಶಿಕ್ಷಣವಿದ್ದ ಸೂಚನೆ ದೊರೆಯುತ್ತದೆ. ಖಾರವೇಲನು ಜೈನಧರ್ಮಿ. ಅಶೋಕನ ಕಾಲಕ್ಕೆ ಬೌದ್ಧಧರ್ಮ, ರಾಷ್ಟ್ರೀಯ ಧರ್ಮವಾಗಿದ್ದಂತೆ, ಖಾರವೇಲ ತನ್ನ ಕಲಿಂಗರಾಜ್ಯದಲ್ಲಿ ರಾಷ್ಟ್ರೀಯ ಧರ್ಮವಾಗಿ ಜೈನಧರ್ಮ ವನ್ನು ಪರಿಪಾಲಿಸಿದ್ದನು. ಆದರೆ ಇಬ್ಬರೂ ಪರಧರ್ಮಸಹಿಷ್ಣುಗಳೆ. ಖಾರವೇಲನನ್ನು ಕುರಿತು ಶಾಸನವು 'ಸವ ಪಾಸಂಡ ಪೂಜಕೋ', 'ಸವ ದೇವಾಯತನ ಸಂಕಾರಕಾರಕೋ' - ಎಲ್ಲ ಮತಧರ್ಮಗಳನ್ನು ಹಾಗೂ ಆ ಧರ್ಮಗಳ ದೇಗುಲಗಳನ್ನು ರಕ್ಷಿಸಿದವ ಎಂಬ ಧ್ವನಿಯಲ್ಲಿ ಹೇಳಿದೆ. ಪರಧರ್ಮಸಹಿಷ್ಣುತೆ ಒಂದು ಮೌಲ್ಯವಾಗಿ ಪರಿಗಣಿಸಿದ ಈ ದೊರೆಗಳು, ಸಹಜವಾಗಿ ಅನುಗುಣ ಶೈಕ್ಷಣಿಕ ಪರಿಸರವನ್ನು ನಿರ್ಮಿಸಿರಬೇಕು. ಖಾರವೇಲನು ಜೈನಧರ್ಮಕ್ಕೆ ಒಲ್ಲದ್ದಾಗಿದ್ದರೂ, ನೃತ್ಯಗೀತಾದಿ ಉತ್ಸವ, ಸಮಾಜೋತ್ಸವ, ಸಾಮೂಹಿಕ ರಂಜನೆ ನಡೆಸಿದವನಾಗಿದ್ದ. ಅಂದರೆ ಬದುಕಿನ ಸಂತೋಷಗಳು ವ್ಯಕ್ತಿಗೆ ಒದಗಬೇಕೆನ್ನುವ ಇಚ್ಛೆ. ಅರ್ಥಾತ್ ಬದುಕೇ ಒಂದು ಉಲ್ಲಾಸಕರ ಶಿಕ್ಷಣ ಎಂಬ ಪ್ರವೃತ್ತಿ ಇಲ್ಲಿ ಕಾಣಬರುತ್ತದೆ. ಅದು ಜನತೆಗೆ ನೀಡುತ್ತಿದ್ದ ಶಿಕ್ಷಣದಲ್ಲಿ ಅಡಕವಾಗಿರಲು ಸಾಕು. ಇಂದಿನ ಅನೇಕ ರಾಷ್ಟ್ರಗಳ ಧಾರ್ಮಿಕ ಭೂಮಿಕೆಗೂ, ಅಶೋಕ, ಖಾರವೇಲರ ಧಾರ್ಮಿಕ ಭೂಮಿಕೆಯ ನಡುವೆಯು ಸರ್ವಧರ್ಮ ಮಾನ್ಯತಾ ದೃಷ್ಟಿಗೂ ಏಸೊಂದು ವ್ಯತ್ಯಾಸ! ಇದು ಭಾರತದ ಶೈಕ್ಷಣಿಕ ಸಂಸ್ಕೃತಿಯ ಮೌಲ್ಯ. ಅದು ಶೈಥಿಲ್ಯಗೊಂಡ ಕಾರಣಗಳು ಬೇರೆ.

ಕ್ರಿ.ಶ. 350ರ ಸಂಸ್ಕೃತ ಭಾಷೆಯ ಬ್ರಾಹ್ಮೀಲಿಪಿಯ ಸಮುದ್ರಗುಪ್ತನ ಅಲಹಾಬಾದ್ ಶಾಸನದಲ್ಲಿ, ಸಮುದ್ರಗುಪ್ತನನ್ನು ಕುರಿತು ಇಂತಿದೆ:

ಯಸ್ಯ ಪ್ರಜ್ಞಾನು ಷಜ್ಗೋಚಿತ ಸುಖ ಮನಸಃ ಶಾಸ್ತ್ರತತ್ತ್ವಾರ್ಥ ಭರ್ತ್ತುಃ

. . . .

ಸತ್ಕಾವ್ಯ ಶ್ರೀ ವಿರೋಧಾನ್ಬುಧ ಗುಣಿತ ಗುಣಾಜ್ಞಾಹತಾನೇವ ಕೃತ್ವಾ

ವಿದ್ವಲ್ಲೋಕೇ ವಿನಾಶಿ ಸ್ಫುಟ ಬಹು ಕವಿತಾ ಕೀರ್ತ್ತಿರಾಜ್ಯಂ ಭುನಕ್ತಿ ||

ಅಂದರೆ ವಿದ್ವಜ್ಜನರ ಸಂಗದಲ್ಲಿ ಸುಖವಾಗಿರುತ್ತಿದ್ದ ಶಾಸ್ತ್ರಗಳನ್ನೂ, ಪರಮಸತ್ಯಗಳನ್ನು ಬಲ್ಲವನಾಗಿದ್ದ. ಸತ್ಕಾವ್ಯ ಸಂಪತ್ತುಗಳಲ್ಲಿ ಸಮೀಕರಣ ಸಾಧಿಸಿದ್ದ. ಕವಿ ಆಶ್ರಿತನಾಗಿ, ಕಾವ್ಯದೋಷ ನಿವಾರಿಸಿ ಸತ್ಕಾವ್ಯದ ಗುಣ ತಿಳಿದು ವಿದ್ವಾಂಸರಲ್ಲಿ ಸಂತಸದಿಂದಿದ್ದ. ಇದಲ್ಲದೆ ದೀನರನ್ನು, ನೊಂದವರನ್ನು ಉದ್ಧರಿಸುತ್ತಿದ್ದ, ಲೋಕಾನುಗ್ರಹಶೀಲನಾಗಿದ್ದ, ಲೋಕಧರ್ಮಕ್ಕೆ ಅನುಗುಣವಾದ ವರ್ತನೆಗಳನ್ನು ಆಚರಿಸುತ್ತಿದ್ದ ಎಂದೂ ಶಾಸನವು ಹೇಳಿದೆ. ಶಾಸನದ ಶೈಲಿಯೂ ಸುಂದರವಾಗಿದೆ.

ಇಲ್ಲಿ ರಾಜನ ಗುಣಗಳನ್ನು ಗಮನಿಸುವಲ್ಲಿ ಮೇಲ್ವರ್ಗಕ್ಕೆ ದೊರೆಯುತ್ತಿದ್ದ ಶಿಕ್ಷಣದ ಮಟ್ಟ, ಹೊಂದಿದ್ದ ಶಿಕ್ಷಣಮೌಲ್ಯದ ಪರೋಕ್ಷ ಚಿತ್ರಣ ದೊರಕುತ್ತದೆ. ಜೊತೆಗೆ ಸಮಾಜಪರ ದೃಷ್ಟಿ, ರಾಜನಿಗಿರಬೇಕಾದ ಅಗತ್ಯವೂ ಇಲ್ಲಿ ಸೂಚಿತವಾಗಿದೆ. ಇಷ್ಟರಿಂದ ಸಾಮಾನ್ಯ ಜನರು ಶಿಕ್ಷಣಮೌಲ್ಯಗಳಿಂದ ವಂಚಿತರಾಗಿದ್ದರೆನ್ನುವಂತಿಲ್ಲ. ರಾಜನಿಗೆ ಇಂತಹ ಗುಣಗಳಿದ್ದವು ಎಂದರೆ ಇರಬೇಕು ಎಂಬುದರ ಆಶಯವೆ. ಜನತೆ ಅದರ ನಿರೀಕ್ಷಣೆಯಲ್ಲಿರಬೇಕಾದರೆ ಅಂತಹ ಮನೋಧರ್ಮದ ಶಿಕ್ಷಣಮೌಲ್ಯಗಳು ಸ್ಥಾಪಿತಗೊಂಡಿದ್ದವೆಂಬುದೇ ಆಗಿದೆ. ಸಾಮಾನ್ಯ ಶಿಕ್ಷಣದ ಜೊತೆಗೆ ಪ್ರೌಢಶಿಕ್ಷಣದ ವ್ಯವಸ್ಥೆಯೂ ಇತ್ತು ಎಂದಾಗುತ್ತದೆ. ಶಾಸನದ ಕಾವ್ಯಮೌಲ್ಯವನ್ನು ಗಮನಿಸಿದರೆ, ಶಿಕ್ಷಣದಲ್ಲಿ ಸಂಸ್ಕೃತ ಭಾಷೆಗೆ ಇದ್ದ ಒತ್ತು ಹಾಗೂ ಆಸ್ಥಾನದ ಆಕರ್ಷಣೆಯ ಬಲ, ವರ್ಗೀಯ ಪ್ರಭಾವಗಳ ಚಿತ್ರ ನೀಡುತ್ತದೆ.

ಕನ್ನಡನಾಡಿನ ಕ್ರಿ.ಶ. 5ನೇ ಶತಮಾನದ ತಾಳಗುಂದ ಶಾಸನದಲ್ಲಿ ಕನ್ನಡದ ಮೊದಲ ರಾಜವಂಶ ಕದಂಬರ ಕಾಲದಲ್ಲಿ ವೈದಿಕರು ಚತುರ್ವೇದ ಪಾರಂಗತರಾಗಿ, ಶಿಕ್ಷಾದಿ ಷಡಂಗ ಪೂರ್ವಕ ವೇದಾಧ್ಯಯನ ನಿರತರಾಗಿದ್ದರೆಂದಿದೆ. ಸ್ವಶಾಖೆಯ ಅಧ್ಯಯನ ಮುಗಿಸಿ ಸ್ನಾತಕರಾಗುತ್ತಿದ್ದ ವಿಷಯವಲ್ಲಿದೆ. ಕದಂಬರ ಮೊದಲ ದೊರೆ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಪಲ್ಲವರ ರಾಜಧಾನಿ ಕಂಚಿಗೆ ಹೋದ ವಿಷಯವಿದೆ. ಪಲ್ಲವರಲ್ಲಿ ಘಟಿಕಾಸ್ಥಾನವು ಪ್ರೌಢವಿದ್ಯಾಭ್ಯಾಸ ಕೇಂದ್ರವಾಗಿತ್ತು. ಹಲವಾರು ಘಟಿಕಾಸ್ಥಾನಗಳು ಅವರ ರಾಜ್ಯದಲ್ಲಿದ್ದುವು. ಅಂದರೆ ಆ ಕಾಲಕ್ಕೇ ತಮಿಳುನಾಡು ವೈದಿಕವಿದ್ಯೆಗೆ ಉಚ್ಚತಮ ಕೇಂದ್ರವಾಗಿತ್ತೆಂಬ ವಿಷಯ ಮನದಟ್ಟಾಗುತ್ತದೆ. ತಾಳಗುಂದದ ಪ್ರಣವೇಶ್ವರ ದೇಗುಲವು ಜನರ ಬದುಕಿನಲ್ಲಿ ಪ್ರಧಾನ ಪಾತ್ರ ವಹಿಸಿತ್ತು. ದೇಗುಲಕ್ಕೆ ಸೇರಿದಂತೆ ಮಠಗಳಿದ್ದು ಅವುಗಳು ವಿದ್ಯಾಕೇಂದ್ರವಾಗಿದ್ದವು. ಕದಂಬರು ಧರ್ಮಸಹಿಷ್ಣುಗಳಾಗಿದ್ದು ಜೈನರನ್ನು, ಶೈವರನ್ನು ಸಮಾನದೃಷ್ಟಿಯಿಂದ ನೋಡುತ್ತಿದ್ದರು. ಹಾಗಾಗಿ ಶಿಕ್ಷಣದಲ್ಲಿ ಧರ್ಮಸಮನ್ವಯ ದೃಷ್ಟಿ ಬೆಳೆದಿತ್ತೆನ್ನಬಹುದು.

ಅಗ್ರಹಾರ, ಬ್ರಹ್ಮಪುರಿ, ದೇವಸ್ಥಾನ, ಮಠ ಮತ್ತು ಘಟಿಕಾಸ್ಥಾನಗಳು ವಿದ್ಯಾಕೇಂದ್ರಗಳಾಗಿದ್ದುದರ ಕಾರಣ, ಪಾರಂಪರಿಕ ಶಿಕ್ಷಣಮೌಲ್ಯಗಳ ಬಗ್ಗೆ ಒತ್ತು ಸಿಗುತ್ತಿತ್ತೆನ್ನಬೇಕು.

ಆದರೆ ವರ್ಣವ್ಯವಸ್ಥೆಯ ಬಾಹುಳ್ಯದಲ್ಲಿ ಈ ವಿದ್ಯೆ ಸರ್ವರಿಗೂ ತೆರೆದ ಅವಕಾಶವಾಗಿತ್ತೇ ಎಂಬುದು ಸ್ಪಷ್ಟವಾಗಿ ಶಾಸನದಿಂದ ತಿಳಿಯುವುದಿಲ್ಲ. ದೂರದಿಂದ ಬರುತ್ತಿದ್ದ ವಿದ್ಯಾರ್ಥಿಗಳಿಗೆ ಜ್ಞಾನದಾನವಾಗುತ್ತಿತ್ತು. ಅಗ್ರಹಾರದವರು ಅಧ್ಯಯನ, ಅಭ್ಯಾಸದಲ್ಲಿ ತೊಡಗುತ್ತಿದ್ದರು ಸರಿ. ಆದರೆ ಎಲ್ಲಾ ವರ್ಣಗಳವರಿಗೆ ವಿದ್ಯೆಯ ಅವಕಾಶವಿದ್ದ ಬಗ್ಗೆ ಖಚಿತವಾಗಿ ತಿಳಿದುಬರುವುದಿಲ್ಲ. ಕ್ಷತ್ರಿಯರಿಗಂತು ಭವಿಷ್ಯತ್ತಿನ ಆಡಳಿತಕ್ಕೆ ಅನುಗುಣವಾದ ಶಿಕ್ಷಣಮೌಲ್ಯಗಳು ಕಲಿಕೆಯಲ್ಲಿ ಒದಗುತ್ತಿದ್ದುದಂತು ಸರಿಯೆ. ಆದರೆ ಘಟಿಕಾಸ್ಥಾನದಲ್ಲಿ ಮಯೂರಶರ್ಮನಿಗೆ, ಪಲ್ಲವರ 'ಅಶ್ವಸಂಸ್ಥೆ'ಯೊಂದರೊಡನೆ ಕಲಹವು, ಕುದುರೆ ಸವಾರನೊಬ್ಬ, ಘಟಿಕಾಸ್ಥಾನದ ಸ್ನಾತಕನೊಬ್ಬನನ್ನು ಅವಮಾನಿಸಿದ ಪ್ರಸಂಗವೆಂದರೆ, ಹಾಗೂ ಮಯೂರ ಶರ್ಮ, ಮಯೂರವರ್ಮನಾಗಲು ಕಾರಣವಾಯಿತೆಂದರೆ, ಶಕ್ತಿ ಪ್ರಾಬಲ್ಯದ ಕ್ಷತ್ರಿಯೋಜಿತ ಶಿಕ್ಷಣಮೌಲ್ಯಕ್ಕೆ ಪಲ್ಲವರಾಜ್ಯದಲ್ಲಿ ಇದ್ದ ಪ್ರಾಮುಖ್ಯತೆ ಅರಿವಿಗೆ ಬರುತ್ತದೆ. ಜೊತೆಗೆ ಪ್ರಾದೇಶಿಕ ಶಕ್ತಿಯ ಉಪೇಕ್ಷೆ ಅಥವಾ ನೆರೆನಾಡಿಗರ ಶಕ್ತಿಯ ಉಪೇಕ್ಷೆ ಎಂದು ಪರಿಭಾವಿಸಿದರೆ, ಸಾಮರಸ್ಯದ ಬದಲು ಗರ್ವದ ಮೌಲ್ಯಗಳನ್ನು ಪೋಷಿಸುತ್ತಿದ್ದ ಶಿಕ್ಷಣ ವ್ಯವಸ್ಥೆಯು ಅಂತರ್ಗತವಾಗಿ ಪಲ್ಲವರಲ್ಲಿದ್ದ ಕುರುಹು ಇದಾಗುವಂತಿದೆ. ಆದರ್ಶನೆಲೆಯ ಶಿಕ್ಷಣದ ವಿರೂಪಗೊಂಡ ಮೌಲ್ಯಗಳೂ ಇದ್ದುವೆನ್ನಬೇಕು. ಕನ್ನಡನಾಡಿನಲ್ಲಿ ಸಂಸ್ಕೃತ ಪುರಾಣೇತಿಹಾಸ ಕಾವ್ಯಗಳು ಜನಜೀವನದಲ್ಲಿ ಆಳವಾಗಿತ್ತು. ಅದಾಗಿ ಶೌರ್ಯ, ದುಷ್ಟಶಿಕ್ಷೆ, ಶಿಷ್ಟರಕ್ಷಣೆ, ಆರ್ಥಿಕ ಶಿಸ್ತುಪಾಲನೆ, ಇತ್ಯಾದಿ ರಾಜ್ಯ ಸಂರಕ್ಷಣಾ ಪ್ರವೃತ್ತಿಯನ್ನು ಬೆಳೆಸುವ ಶಿಕ್ಷಣಪದ್ಧತಿ ಇತ್ತು. ಆದರೆ ವರ್ಣವ್ಯವಸ್ಥೆಯ ಒಂದು ವರ್ಗ ಪ್ರಭಾವವೊ, ವರ್ಗ ಹಿಡಿತವೋ ಎಂಬಂತೆ ಸದಾ ಪುರಸ್ಕೃತಗೊಳ್ಳುವಂತಹ ಆ ಶಿಕ್ಷಣಮೌಲ್ಯಗಳು ಸ್ಥಾಪಿತಗೊಂಡಿದ್ದುದಕ್ಕೂ ಅವೇ ಕಾರಣವಾಗಿದ್ದುವು. ಈ ಶಾಸನದ ವಿಷಯ ಭಾಷಾ ಪ್ರಾಮುಖ್ಯ, ಶಬ್ದಬಳಕೆ ಇತ್ಯಾದಿಗಳು ಈ ಅಂಶಗಳಿಗೆ ಪೋಷಣೆ ಒದಗಿಸುತ್ತವೆ.

ಕ್ರಿ.ಶ. 475ರ ಸುಮಾರಿನ ಗಂಗ ಮಾಧವನ ಪೆನುಕೊಂಡ ತಾಮ್ರಶಾಸನದಲ್ಲಿ ಕೊಂಗಣಿವರ್ಮ ಮಹಾಧಿರಾಜ, ಅವನ ಮಗ ಮಾಧವ ಮಹಾಧಿರಾಜ ಆರ್ಯವರ್ಮ ಮುಂತಾದವರ ಗುಣಗಳನ್ನು ವರ್ಣಿಸುವಲ್ಲಿ, ಅವರ ಶಾಸ್ತ್ರ ನೈಪುಣ್ಯ, ಇತಿಹಾಸ ಪುರಾಣಗಳ ಜ್ಞಾನ ಹಾಗೂ ಅವರು ಯಜನ, ಯಾಜನ, ಅಧ್ಯಯನ, ಅಧ್ಯಾಪನ ಕರ್ತರುಗಳಿಗೆ ನೀಡಿದ ದಾನದ ರೀತಿಯನ್ನು ಗಮನಿಸಿದರೆ, ಶಿಕ್ಷಣದಲ್ಲಿ ಪಾರಂಪರಿಕ ಮೌಲ್ಯಗಳ ಚಾಲನೆ ಇದ್ದುದು ಎದ್ದು ಕಾಣುತ್ತದೆ.

ಕ್ರಿ.ಶ. ಸು. 500 ರ ತಮಟಕಲ್ಲು ಶಾಸನದಲ್ಲಿ ಗುಣಮಧುರನನ್ನು ಕುರಿತ ವರ್ಣನೆ, ಕ್ರಿ.ಶ. 634ರ ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನದಲ್ಲಿ ಕ್ಷತ್ರಿಯ ಶೌರ್ಯಗಳ ಕಾವ್ಯೋಜ್ವಲ ವರ್ಣನೆ, ಬಳಸಿರುವ ಭಾಷೆಯ ಬಗೆ, ಇವೆಲ್ಲ, ಅಂದಿನ ಶಿಕ್ಷಣ ಪದ್ಧತಿಯಲ್ಲಿದ್ದ ಪ್ರಭುಕೇಂದ್ರಿಕೃತ ಮೌಲ್ಯಗಳಿಗಿದ್ದ ಮಾನ್ಯತೆ, ಆರಾಧನಾ ಪ್ರವೃತ್ತಿಗಳ ಸೂಚನೆಯಾಗಿ ಕಾಣಬರುತ್ತವೆ. ಒಂದು ರೀತಿಯಲ್ಲಿ ರಾಜಕೀಯ ಮೌಲ್ಯದ ಪ್ರಸಾರವೂ ಇದ್ದು ಅಧಿಕಾರ ಅಥವಾ ಅಂಕೆಗೆ ಒಳಪಡಿಸುವ ಪ್ರವೃತ್ತಿ ಇತ್ತೆನ್ನಬೇಕು. ಸಾಮಾನ್ಯ ಶಿಕ್ಷಣದ ಮೇಲಿನ ಮೌಲ್ಯಗಳ ಆಡುಂಬೊಲವಾಗಿತ್ತೆನಿಸಿದರೂ ಶೌರ್ಯದ ಮೌಲ್ಯವನ್ನು ಸಾಮಾನ್ಯ ಬದುಕಿಗೂ ವಿಸ್ತರಿಸಿತ್ತೆನ್ನಬೇಕು. ಬಹುಶಃ ಈ ಹಿನ್ನೆಲೆ ಕ್ರಿ.ಶ. 700ರ ಸುಮಾರಿಗೆ ಬಳ್ಳಿಗಾವೆ

ಹಾಗೂ ಕನ್ನಡಕ್ಕೆ ಮೊದಲಿಗೆ ತ್ರಿಪದಿ ಸಾಹಿತ್ಯ ಕೊಟ್ಟ, ಕಪ್ಪೆ ಅರಭಟ್ಟನ ಶಾಸನಗಳನ್ನು ಗಮನಿಸುವಲ್ಲಿ ಜನಸಾಮಾನ್ಯರತ್ತ ಗಮನ ಸಾಗಿರುವುದು. ಅವರ ಕುರಿತ ಉಲ್ಲೇಖಗಳು ಕಾಣಿಸುತ್ತವೆ. ಅವರು ಪ್ರಭುಕೇಂದ್ರಿತ ಶಿಕ್ಷಣ ಪಡೆದವರೆಂಬುದನ್ನು ಬಿಟ್ಟರೆ ಅವರ ಅಸ್ತಿತ್ವವನ್ನು ಗಮನಿಸುವಷ್ಟು ಯುಗಧರ್ಮ ತಿರುವು ತೆಗೆದುಕೊಂಡುದುದರ ಸೂಚನೆಯಾಗಿ ಅವು ತೋರುತ್ತವೆ. ಅದೇ ಕಾಲದ ಶ್ರವಣಬೆಳಗೊಳದ ನಿಷಧಿಶಾಸನಗಳು ಸಹಜವಾಗಿ ಧಾರ್ಮಿಕ ಶಿಕ್ಷಣಕ್ಕಿದ್ದ ಮೌಲ್ಯವನ್ನು ಎತ್ತಿತೋರುತ್ತವೆ. ಅದಕ್ಕೆ ಸಾಹಿತ್ಯಪ್ರಕಾರಗಳು ಬಳಕೆಯಾಗಿರುವ ಬಗೆಯನ್ನು ನಿದರ್ಶಿಸುತ್ತವೆ. ಕ್ರಿ.ಶ. 740ರ ಪಟ್ಟದಕಲ್ಲು ಶಾಸನ, ಕ್ರಿ.ಶ. 750ರ ಸುರಗೂರ ತಾಮ್ರ ಶಾಸನಗಳು, ರಾಣಿ ಹಾಗೂ ಸಾಮಂತರ ಕಾರ್ಯಗಳನ್ನು ಹೇಳುವಲ್ಲಿ ಆ ಹೊತ್ತಿಗೆ ರಾಜ್ಯಾಧಿಕಾರ ಸ್ತ್ರೀಪ್ರಾಧಾನ್ಯ, ಅಧೀನ ಸಾಮಂತರನ್ನು ಶಾಸನ ಸ್ಥಗೊಳಿಸುವ ಒಲವನ್ನು ತೋರಿರುವುದು. ಅಂದಿನ ವಿದ್ಯೆಯ ನೀಡಿಕೆಯಲ್ಲಿ ಅದು ಪ್ರತಿಫಲನಗೊಂಡಿರಲು ಸಾಧ್ಯ.

ಕ್ರಿ.ಶ. 800ರ ಮಾವಳಿ ಶಾಸನದಲ್ಲಿ ಬರುವ ವೀರರ ವರ್ಣನೆ, ಗ್ರಾಮೀಣ ಸಂಘರ್ಷ ಹಾಗೂ ಬದುಕಿನ, ಸಾಮಾನ್ಯರಲ್ಲಿನ ಅಸಾಮಾನ್ಯವೀರನ ಶೌರ್ಯದ ವರ್ಣನೆ, ಊರಗೌಡರುಗಳಿಗಿದ್ದ ಪ್ರಾಮುಖ್ಯ ಹಾಗೂ ಸಾಮಾನ್ಯ ಬದುಕಿನ ಸಂಗತಿಗಳನ್ನು ಕಾವ್ಯರೂಪಕಗಳನ್ನಾಗಿ ವರ್ಣಿಸಿರುವ ಬಗೆ ಅಂದಿಗೆ ಸಾಮಾನ್ಯರಿಗೆ ಕಲಿಕೆಯಲ್ಲಿ ನೀಡುತ್ತಿದ್ದ ಆದರ್ಶಗಳ ಮೌಲ್ಯದ ಪ್ರಾತಿನಿಧಿಕ ಎನಿಸುತ್ತದೆ. ಶ್ರೀಸಾಮಾನ್ಯರತ್ತ ಸ್ಪಷ್ಟವಾಗಿ ಗಮನ ಹರಿಸಿ ಸಮುದಾಯದ ಬೆಲೆಯನ್ನು ಅಧಿಕಾರವು ಅರಿತುದರ ಸಂಕೇತ ಕಾಣುತ್ತದೆ. ಕ್ರಿ.ಶ. 866ರ ಶಿರೂರ ಶಾಸನ, ಕ್ರಿ.ಶ. 930ರ ಕಳಸಶಾಸನ ಇದೇ ಬಗೆಯನ್ನು ಸ್ಥೂಲವಾಗಿ ನಿದರ್ಶಿಸಿವೆ. ಆದರೆ ಮೇಲ್ವರ್ಗಕ್ಕೆ ಮಣೆಹಾಕಿರುವುದನ್ನು ತೋರುತ್ತವೆ. ಅದರಲ್ಲೂ ರಾಷ್ಟ್ರಕೂಟರ ಕಾಲದ ಕ್ರಿ.ಶ. 918ರ ನರಗುಂದ ತಾ. ದಂಡಾಪುರ ಶಾಸನದಲ್ಲಿ ಬರುವ ಸಾಲುಗಳು:

ವಿಪ್ರರ ವಿವಾಹಮುಮಾಗಪ್ಪನಿತಜೊಳೆಲ್ಲ ಮೊಸಗೆ ದ್ರಮ್ಮ ಮೂಱಂ ತಪ್ಪಾದೆ
ಮಾಣೆಯೊಳೆರಡಂ ಕೆಪ್ಪಿವರೀ ಶೂದ್ರಗಣದ ಮದುವೆಯೊಳೊನ್ದಂ... ಮೂರೊಳ್ದ
ಪಿರಣ್ಯಾಯದ ಪಣಮುಂ ಪೆರ್ಗ್ಗೆಱೆಗಾಯಮಿದೆನ್ದೊಸೆದು ಕೊಟ್ಟೊರೀ ದ್ವಿಜಮುಖ್ಯರ್ ||

ಬ್ರಾಹ್ಮಣರ ಮದುವೆ, ಉಪನಯನ ಹಾಗೂ ಶೂದ್ರಗಣದ ಮದುವೆ ಇತ್ಯಾದಿ ಸಂದರ್ಭಗಳಿಂದ ಒದಗಿದ ಆದಾಯವನ್ನು ಕೆರೆ ಸಂಬಂಧದ ನಿರ್ವಹಣೆಗೆ ದ್ವಿಜಮುಖ್ಯರು ನೀಡಿದ ಸಂಗತಿಯನ್ನು ಹೇಳುತ್ತವೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಹೊಣೆಯನ್ನು ಸಮುದಾಯಕ್ಕೆ ಕಲಿಸುವ ಪದ್ಧತಿ ತೋರುವುದರ ಜೊತೆಗೆ, ವರ್ಣವಿಂಗಡನೆಯನ್ನು ಸ್ಪಷ್ಟವಾಗಿ ಮಂಡಿಸಿದೆ. ಈ ಸಾಮಾಜಿಕ ನಿಯಮ, ಅಂದಿನ ಕಲಿಕಾಪದ್ಧತಿಯಲ್ಲಿ ಅಡಕವಾಗಿದ್ದ ಕಾರಣ ಸಮುದಾಯ ಸಮ್ಮತಿಯೂ ಅನಿವಾರ್ಯದಿಂದ ಒದಗಿರಬೇಕು. ಅದೇ ಕ್ರಿ.ಶ. 950ರ ಆತಕೂರು ಶಾಸನದಲ್ಲಿ ಪ್ರಾಣಿಗಳಿಗೆ ವ್ಯಕ್ತಿತ್ವ ಆರೋಪಿಸಿರುವ ಬಗ್ಗೆ ಅಂಕಕಾರ ಮನಾಲರನ ಶೌರ್ಯ, ಅರಸ ಬೂತುಗನ ಚಾಕಚಕ್ಯತೆಯನ್ನು ವರ್ಣಿಸಿರುವ ರೀತಿ, ಅಂದಿನ ಜೀವನದ ಮೌಲ್ಯಗಳಾಗಿದ್ದವೆಂದರೆ, ಕಲಿಕೆಯಲ್ಲಿ ಅಡಕವಿದ್ದ ಅಂಶಗಳೆ ಆಗಿದ್ದಿರಬೇಕು.

ಕ್ರಿ.ಶ. 888ರ ಗಂಗರ ರಾಚಮಲ್ಲನ (ಕೊಡಗು ಜಿಲ್ಲೆ) ಬಿಳಿಯೂರು ಶಾಸನ, ಕ್ರಿ.ಶ.

978ರ ಪೆಗ್ಗೂರಿನ ರಕ್ಕಸಗಂಗನ ಶಾಸನಗಳಲ್ಲಿ ಜಿನಧರ್ಮದ ಪ್ರಭಾವ ಕಂಡುಬಂದರೂ ಗ್ರಾಮೀಣ ಒಕ್ಕಲುಗಳನ್ನು, ಬುಡಕಟ್ಟು ಜನಾಂಗವಾದ ಮಲೆಸಾಸಿರ್ವ್ವರು, ಅಯ್ವಾಮರಿಗರು ಇವರನ್ನು ದಾನದ ಸಾಕ್ಷಿಗಳಾಗಿ, ರಕ್ಷಕರನ್ನಾಗಿ ಪರಿಗಣಿಸಿದೆ. ದಾನವನ್ನು ಕೆಡಿಸಿದರೆ ಗೋಹತ್ಯೆ ಹಾಗೂ ಸಾವಿರ ದ್ವಿಜರನ್ನು ಕಾಶಿಯಲ್ಲಿ ಕೊಂದ ಪಾಪ ಬರುವುದೆಂಬ ಫಲಶ್ರುತಿಯನ್ನು (ಶಾಪಾಶಯ) ದಾಖಲಿಸಿದೆ. ಅಂದರೆ ಸಾಮಾನ್ಯಜನತೆಗೆ ಇದ್ದ ಪ್ರಾಮುಖ್ಯದ ಮಾದರಿ ಗೋವು ಹಾಗೂ ಪಾರ್ವರಿಗೆ ಇದ್ದ ಸಾಂಸ್ಕೃತಿಕ ಮೌಲ್ಯವನ್ನು ತೋರುವಲ್ಲಿ ಕಲಿಕೆಯ ಹಂತಗಳಲ್ಲಿ ಈ ಮೌಲ್ಯಗಳನ್ನು ನಿರ್ವಹಿಸಿರಬೇಕು. ಇದನ್ನು 'ಶಾಲೆ'ಯಂತಹ ಆವರಣದಲ್ಲಿ ನಡೆಸಿದರೆನ್ನುವಂತಿಲ್ಲ. ಆಜ್ಞೆಯ ಮೂಲಕವೋ, ನಡೆನುಡಿಗಳಲ್ಲಿಯೋ ಕಲಿಸುತ್ತ ಬಂದಿರಲು ಸಾಧ್ಯ. ಅನೌಪಚಾರಿಕ ಕಲಿಕೆಯ ಮೂಲಕ ಜಾರಿಗೊಳಿಸಿರಬಹುದು. ಇದೆಲ್ಲ ಸಾಮಾನ್ಯ ನಡೆ. ಜಿನಭಕ್ತರಾದರೂ, ಶಾಪಾಶಯದ ಸಂಗತಿ ಗಮನಿಸಿದರೆ, ಅರಸರ ಧರ್ಮಸಮನ್ವಯ ದೃಷ್ಟಿ ಕಾಣಬರುವಲ್ಲಿ ಕಲಿಕೆಯ ಹಂತದಲ್ಲಿ ಅದನ್ನು ನವೀಕರಿಸಿರಬೇಕು.

ಕ್ರಿ.ಶ. 947ರ ಜೂರ ಶಾಸನದಲ್ಲಿ ರಾಷ್ಟ್ರಕೂಟ 3ನೇ ಕೃಷ್ಣನ ಪರದಾರ ಸೋದರತ್ವ ಹಾಗೂ ಕಾರ್ಯದ ವರ್ಣನೆಯನ್ನು ಎತ್ತಿ ಹೇಳುವಲ್ಲಿ ಆ ಕಾಲದ ಸಮುದಾಯ ನಂಬಿದ ಜೀವನಮೌಲ್ಯ, ಶೌರ್ಯಗುಣಕ್ಕೆ ಇತ್ತಿದ್ದ ಮಹತ್ವ ಅಂದಿನ ಕಲಿಕೆಯಲ್ಲಿದ್ದ ಗಮನಾರ್ಹ ಅಂಶಗಳೇ ಆಗುತ್ತವೆ.

ಪಂಪನ ತಮ್ಮ ಜಿನವಲ್ಲಭನ ಕ್ರಿ.ಶ. 950ರ ಕುರಿಕ್ಯಾಲ (ಆಂಧ್ರ) ಶಾಸನದಲ್ಲಿ ಜಿನಮೂರ್ತಿ, ಜಿನಪೂಜಾವೈಭವ ಹೇಳುವ ನೆವದಲ್ಲಿ, ಸಿದ್ಧಶಿಲೆಯಲ್ಲಿ ಟಂಕೋತ್ಕೀರ್ಣ ಮಾಡಿದ ಗುಣಾವಳಿಯನ್ನು ಬರೆದ ತಾಮ್ರಶಾಸನದಂತೆ 'ವೃಷಭಾಚಳೋನ್ನತ ಶಿಳಾತಳದೊಳ್ಪೊರೆದಕ್ಕರಂಗಳಂ' 'ಪೋಗಿ ನೋಡ ನೀಮ್ಮರುಳೆ' ಎಂದೆಲ್ಲ ದಾಖಲಿಸಿರುವಲ್ಲಿ, ಅಂದಿನ ಸಾಕ್ಷರತೆಯ ಸೂಚನೆ ನೀಡುತ್ತದೆ. ಜನಸಾಮಾನ್ಯರ ಪ್ರಶ್ನಿಸುವ ಗುಣಾಂತರ್ಗತವನ್ನು ತೋರುತ್ತದೆ. ಅಂದರೆ ಕಲಿಕೆಯ ಒಂದು ಬೌದ್ಧಿಕಮೌಲ್ಯದ ವೈಚಾರಿಕ ಮೌಲ್ಯದ ಸೂಚನೆಯನ್ನು ಇದು ನೀಡುತ್ತದೆ.

11ನೆಯ ಶತಮಾನ ಕಲ್ಯಾಣಿಚಾಲುಕ್ಯರ ವೀರಯುಗವೆನ್ನಬೇಕು. ವೀರಗಲ್ಲುಗಳ ಪ್ರಮಾಣವೂ ಆಗ ಹೆಚ್ಚು. ಅದಾಗಿ ಪಂಪನ ಸಾಹಿತ್ಯದ ವೀರಮೌಲ್ಯಗಳು ಈ ಕಾಲಕ್ಕೂ ಹರಿದುಬಂದುವು.

ಕ್ರಿ.ಶ. 1007ರ ಅತ್ತಿಮಬ್ಬೆ ಶಾಸನದಲ್ಲಿ ಸೂಚಿತವಾದ ಜನಭಕ್ತಿಯ ವೈವಿಧ್ಯಪೂರ್ಣ ಆಚರಣೆ, ಪವಾಡಗಳ ನಡುವೆಯೂ ಅವಳ ಗುಣಗಳನ್ನು ವರ್ಣಿಸುವ ಬಗೆ:

'...ಭೈಷಜ್ಯ ಶಾಸ್ತ್ರಾಭಿಧಾನ.... ಗುಣದಂಕಕಾತ್ತಿರ್ಯುಂ... ಕವಿ ಕಥಕ ಗಾಯಕ ವಾದಕ ನಗ್ನ ಭಗ್ನ ನಟ ಭಟ ಮಾಗಧಾನಾಥ ಶಿಷ್ಟೇಷ್ಟಸಮಭಿಲಷಿತಾರ್ತ್ಥದಾನವಿನೋದೆ....

ಹೀಗಿರುವಲ್ಲಿ, ವೈದ್ಯಶಾಸ್ತ್ರ, ಕಾವ್ಯ, ಕಥನ, ಸಂಗೀತ, ವಾದ್ಯ, ಅಭಿನಯ, ಇತ್ಯಾದಿಗಳಲ್ಲಿ ಆಕೆ ನೀಡಿದ ಉತ್ತೇಜನವೆಂದರೆ, ಅಂದಿನ ಕಲಿಕೆಯ ಮುಖಗಳ ಕುರಿತ ಕಲ್ಪನೆ ಒದಗುತ್ತದೆ. ಶಾಂತಿಪುರಾಣದ ಹಸ್ತಪ್ರತಿಗಳನ್ನು ಮಾಡಿಸಿ ಹಂಚಿದ ಆಕೆಯ ನಡೆಯೂ ಅಂದಿನ ಧಾರ್ಮಿಕ ಶಿಕ್ಷಣದ ದಿಕ್ಕುದೆಸೆಯನ್ನು ಸೂಚಿಸುತ್ತದೆ. ಹೀಗೆಯೆ ಕ್ರಿ.ಶ. 1053ರ ಮುಳುಗುಂದದ ಜೈನಬಸದಿ ಶಾಸನದಲ್ಲಿ ಕಲ್ಯಾಣಿ ಚಾಲುಕ್ಯರ ತ್ರೈಲೋಕ್ಯಮಲ್ಲನ ಮಗ ಮಹಾ

ಮಾಂಡಲೇಶ್ವರ 2ನೆಯ ಸೋಮೇಶ್ವರನ ಸಂಧಿವಿಗ್ರಹಾಧಿಕಾರಿ ಬೆಳ್ದೇವನ ಜೈನಗುರು ನಯಸೇನ ಸೂರಿಯ ಪರಿಚಯ ಬರುತ್ತದೆ. ಜೈನಗುರುಪರಂಪರೆ ಬರುತ್ತದೆ. ಆ ಕಾಲದ ಸಂಸ್ಕೃತ ವ್ಯಾಕರಣ ಗ್ರಂಥಗಳನ್ನು, ಕರ್ತೃಗಳನ್ನು ತಿಳಿಸುತ್ತದೆ. ನಯಸೇನ ಸೂರಿ ವೈಯಾಕರಣಿಯಾಗಿದ್ದುದನ್ನು ತಿಳಿಸುತ್ತದೆ. ಈ ಜೈನಮುನಿಗಳು ಚಾಂದ್ರ, ಕಾತಂತ್ರ, ಜೈನೇಂದ್ರ, ಶಬ್ದಾನುಶಾಸನ, ಪಾಣಿನಿ, ಇಂದ್ರ ಇತ್ಯಾದಿ ವ್ಯಾಕರಣಗಳು ಪ್ರಭುತ್ವ ಹೊಂದಿದ್ದ ಬಗ್ಗೆ ತಿಳಿಸುತ್ತದೆ. ಶಬ್ದಶಾಸ್ತ್ರ ಪಾರಂಗತರ ಬಗ್ಗೆ ತಿಳಿಸುತ್ತದೆ. ಪಂಚಮಹಾಶಬ್ದ (ಕೊಂಬು, ತಮ್ಮಟೆ, ಶಂಖ, ಭೇರಿ, ಜಯಗಂಟೆ) 'ನಗರೇಶ್ವರ ಗಡಿಗಂಬದ ಕೋಲು' ಎಂಬ ಭೂಪ್ರಮಾಣದ ಕೋಲು, ಮತ್ತರ ಎಂಬ ಭೂಮಿ ಅಳತೆಯ ಪ್ರಮಾಣವನ್ನು ಉಕ್ತಮಾಡಿದೆ. ಈ ಅಂಶಗಳಿಂದ ಧಾರ್ಮಿಕ ಸಂಸ್ಥೆಗಳಲ್ಲಿನ ಅರಿವನ್ನು ನೀಡುತ್ತದೆ. ಕೃಷಿಸಂಬಂಧದ ಪರಿಮಾಣಗಳು ಅವುಗಳ ಬಳಕೆಯ ಬಗ್ಗೆಯೂ ಕಲಿಕೆಯಲ್ಲಿ ಅಳವಟ್ಟಿದ್ದುದು ತಿಳಿಯುತ್ತದೆ. ಸಾಮಾನ್ಯರಿಗೂ ಈ ಕುರಿತ ಸ್ಥೂಲಶಿಕ್ಷಣ ನೀಡಿರುವ ಸಾಧ್ಯತೆಯು ಸೂಚನೆಯಾಗುತ್ತದೆ. ಸಮುದಾಯದ ಬದುಕು ಕಲಿಕೆಯ ಭಾಗವಾಗಿ ಬಂದಿರುವಂತೆ ತೋರುತ್ತದೆ. ಶಾಸ್ತ್ರಗಳ ಕಲಿಕೆಯು ಅಪೇಕ್ಷಿತರಿಗೆ, ವಿಶೇಷತಃ ಅಧಿಕಾರಿವರ್ಗಕ್ಕೆ ದಕ್ಕುತ್ತಿದ್ದುದು ಕಾಣುವಂತಿದೆ. ಕ್ರಿ.ಶ. 1176ರ ಕುರುಗೋಡದ ಶೈವಪರವಾದ ಶಾಸನದಲ್ಲಿ ಹಾಗೂ ಕ್ರಿ.ಶ. 1186ರ ಶಿರಸಂಗಿಯ ಹಚ್ಚೆಯ ನಾಯಕ ಶೈವ-ವೈಷ್ಣವ ಸ್ತುತಿ ಸಹಿತವಾದ ಶಾಸನದಲ್ಲಿ ವರ್ತಕರ ಬಗೆಗಳಾದ ಬೈಸಣಿಗೆ, ಮುಂಮರಿ ದಂಡಗಳು, ನಕರರು, ತಂಬುಲಿಗ ಸಾಸಿರ್ವರನ್ನು ಹೆಸರಿಸಿ, ಅವರ ಕಸುಬಿನಲ್ಲಿಯ ಅಳತೆಯ ಪರಿಮಾಣಗಳನ್ನು, ಭೂಅಳತೆಯ ಪರಿಣಾಮಗಳನ್ನು, ಸುಂಕದ ಬಗೆಗಳನ್ನು, ಪೂಜೋತ್ಸವಗಳನ್ನು ಉಕ್ತಮಾಡಲಾಗಿದೆ. ಇವೆಲ್ಲ ಅಂದಿನ ಕಲಿಕೆ ವೃತ್ತಿಪರ ಮೌಲ್ಯವನ್ನು ನಿದರ್ಶಿಸುವ ಜೊತೆಗೆ, ಸಾಂಸ್ಕೃತಿಕಮೌಲ್ಯಗಳನ್ನು ಸಮುದಾಯದಲ್ಲಿ ಊರ್ಜಿತಗೊಳಿಸಿದ್ದ ರೀತಿಯನ್ನು ಸೂಚಿಸುತ್ತವೆ.

ಕ್ರಿ.ಶ. 1058ರ ಕಲ್ಯಾಣಿಚಾಲುಕ್ಯ 1ನೇ ಸೋಮೇಶ್ವರ ಕಾಲದ ಗುಲಬರ್ಗಾ ಜಿಲ್ಲೆಯ ನಾಗಾಯಿ ಶಾಸನದಲ್ಲಿ '*...ಚತುರ್ವ್ವೇದ ಪಾರಾವಾರ ಪಾರಗಮರೆನಿಸಿದ ನಾಲ್ಕೂವ್ವರ್ವ್ವಿರ್ ಪ್ರೋತ್ತಮರ್ಗೆ... ಮೂನೂರರ್ಕ್ಕೆ ತಿಳಕಮಪ್ಪನ್ತಿರ್ದ ಮಹಾಗ್ರಹಾರಂ ನಾಗಾವಾವಿ ಯೋಳನೇಕ.. ಕಟಕ ಕಮಳಾರ್ಕ್ಕನೆಸರ ತ್ರೈಪುರುಷದೇವರ ಶಾಲೆಯುಮಂ ನಿಜಾಭಿದಾನಾಭಿರಂ ಜಿತಮಪ್ಪ ಮಧುಸೂದನಾಳಯಮುಮಂ ರಾಮತೀರ್ತ್ಥಾಭಿರಾಮಮಪ್ಪ ರಾಮೇಶ್ವರಾಲಯ ಮುಮಂ... ನಿಜಧರ್ಮ್ಮ ಕಾರಿತಾಧಿಕಾರ ಪದವೀ ವಿರಾಜಿತನಪ್ಪ ಶಾಳೆಯ ಕೈಂಕರ್ಯ್ಯನಮಂ ಮಾಡಿಸಿ ಘಟಿಕಾಸ್ಥಾನಮೆನಿಪ ಶಾಲೆಗೆ ಸ್ವಸ್ತಿ||*

...ಶಾಲೆಯಲೋದುವ ವೇದಾಧ್ಯಾಯಿಗಳಿನ್ನೂರ್ವರ್ಗ್ಗಂ ಶಾಸ್ತ್ರಾಧ್ಯಾಯಿಗಳಯ್ದು ದಿಂಬಗ್ಗಂ ತಮುಪಾಧ್ಯಾಯಿಗಳು 3 ಭಟ್ಟದರ್ಶನ ನ್ಯಾಸ ಪ್ರಭಾಕರ ವ್ಯಾಖ್ಯಾತೃ ಗಳ್ಮೂವರ್ಗ್ಗಂ ವೇದಮನೋದಿಸುವುಪಾಧ್ಯಾಯಮ್ಮೂವರ್ಗ್ಗಂ ಶಾಲೆಯ ಸರಸ್ವತೀ ಭಣ್ಡಾರಿಗರಾರ್ವ್ವರ್ಗ್ಗಮನ್ತು 257 ಮಾನಸರ ಅಶನಾಚ್ಛಾದನಕ್ಕಂ ಜೀರ್ಣೋದ್ಧಾರ ಖಣ್ಡ ಸ್ಫುಟಿತ ನವಸುಧಾಕರ್ಮಕ್ಕಂ ಗಂಧಾಕ್ಷತ ಪುಷ್ಪ ಧೂಪ ದೀಪ ನಿವೇದ್ಯಕ್ಕಂ ತ್ರೈಪುರುಷದೇವರ ಶಾಲೆಯ ಪರಿಷಮಾಣೆಯುಗ್ಗೆ ಸರ್ವನಮಸ್ಯವಾಗಿ ಕೊಟ್ಟ.... ಬದಗ ಮತ್ತರು 1000 ಆ ಪೊಲಂ ನಾಗವಾವಿಯ.... ಭಾಟ್ಟದರ್ಶನ ವ್ಯಾಖ್ಯಾತೃಗೆ ಮತ್ತರು 35

ನ್ಯಾಸ ವ್ಯಾಖ್ಯಾತೃಗೆ ಮತ್ತರು 30 ಪ್ರಭಾಕರ ವ್ಯಾಖ್ಯಾತೃಗೆ ಮತ್ತರು 45 ಸರಸ್ವತೀ ಭಣ್ಡಾರಿಗೆ ಮತ್ತ 30 ಘಟಿಕಾ ಪ್ರಹಾರಿಗೆ ಮತ್ತರ್ 30 ಪಂಚಿಕೇಶ್ವರಕ್ಕೆ ಮತ್ತರ್ 45... ಮಾನ್ಯಂ....|| ಸ್ವದತ್ತಂ ಪರದತ್ತಂ ವಾ ಯೋ ಹರೇತ ವಸುಂಧರಾಂ ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ||

ಎಂದಿರುವ ಸಾಲುಗಳಲ್ಲಿ ದೇಗುಲಕ್ಕೆ ಅಂಟಿದಂತೆ ಘಟಿಕಾಸ್ಥಾನವೊಂದಿದ್ದುದರ ಹಾಗೂ ಕಲಿಕೆಯ ವಸ್ತು, ಶಾಲೆಯ ಬೋಧಕ, ಗ್ರಂಥಭಂಡಾರ ಹಾಗೂ ಗಂಟೆ ಹೊಡೆಯುವವನ ಕುರಿತ ವಿವರಗಳನ್ನು ನೀಡಿರುವುದಾಗಿದೆ. ಘಟಿಕಾಸ್ಥಾನವೊಂದು ಇಂದಿನ ಸ್ನಾತಕೋತ್ತರ ಕೇಂದ್ರದ ಸ್ಥಾನಮಾನ ಹೊಂದಿದ್ದ ಶಾಲೆ ಆಗಿತ್ತೆನಿಸುತ್ತದೆ. 11ನೇ ಶತಮಾನದ ಶಾಲಾವ್ಯವಸ್ಥೆ, ಶಿಕ್ಷಣವ್ಯವಸ್ಥೆಯಲ್ಲಿ ಕಲಿಕೆ - ಕಲಿಸುವವ - ಕಲಿಯುವವರ ಕುರಿತು ಹೇಳಿರುವುದು ಗಮನಾರ್ಹ ಎನಿಸುತ್ತದೆ. ಶಾಲೆಯಲ್ಲಿ 200 ಜನ ವೇದಾಧ್ಯಾಯಿಗಳು, ಶಾಸ್ತ್ರಗಳನ್ನು ಓದುವವರು 50 ವಿದ್ಯಾರ್ಥಿಗಳು, ಅವರಿಗೆ ಶಿಕ್ಷಕರಾಗಿ 3 ಜನ ಉಪಾಧ್ಯಾಯಿಗಳು, ಭಟ್ಟ, ದರ್ಶನ, ನ್ಯಾಸ, ಪ್ರಭಾಕರ ಇತ್ಯಾದಿ ತಾತ್ವಿಕ ಶಕ್ತಿಗಳ ವ್ಯಾಖ್ಯಾನಕಾರರು 3 ಜನ, ವೇದವನ್ನು ಓದಿಸುವವರು 3 ಜನ, ಗ್ರಂಥಭಂಡಾರಿಗಳು 6 ಜನ, 257 ಮಂದಿಗೆ ಭೋಜನಕ್ಕೆ, ತ್ರೈಪುರುಷದೇವರ ಶಾಲೆಯ ವಿದ್ಯಾರ್ಥಿ ಸಮುದಾಯದ ನಿರ್ವಹಣೆಗೆ, ದೇಗುಲ ಸೇವಾದಿ ಜೀರ್ಣೋದ್ಧಾರಕ್ಕೆ, ಗಂಟೆ ಹೊಡೆಯುವನಿಗೆ ಹಾಗೂ ಆಗಮ ಪೂಜಾವಿಧಿ ವಿಧಾನ, ತಂತ್ರಗಳ ತಾಡವೋಲೆ ಹಸ್ತಪ್ರತಿ ನಿರ್ವಹಣೆಕಾರನಿಗೆ (ಇದು ಪೂಜಾ ವಿಧಾನ ಅಥವಾ ವ್ಯವಸಾಯ ಸಂಬಂಧೀ ದೇವರ ಆರಾಧನೆ ಎಂಬ ಅಭಿಪ್ರಾಯವೂ ಇದೆ.[17] ಆದರೆ ಕಾಲಾಂತರದಲ್ಲಿ ಬದಲಾದ ಆಚರಣೆಯ ಕಾರಣ ಆರೋಪಿತಗೊಂಡ ಅರ್ಥ) ನೀಡಿದ ಅಶನಮಾರ್ಗಕ್ಕಾದ ಸಂಭಾವನಾ ದಾನ ಮತ್ತರು ಪ್ರಮಾಣವಾಗಿತ್ತು. ಈ ದಾನವನ್ನು ಕೆಡಿಸಿದರೆ, ಅಂದರೆ ತಾನಿತ್ತುದಾಗಲಿ ಅಥವಾ ಪರರಿತ್ತುದಾಗಲಿ, ಹಾನಿಮಾಡಿದರೆ 60 ಸಾವಿರ ವರ್ಷ ಕ್ರಿಮಿಯಾಗಿ ಹುಟ್ಟಬೇಕಾದೀತು ಎಂಬ ಶಾಪಾಶಯವನ್ನು ಹೇಳಿದೆ. ಇದೊಂದು ರೀತಿ ಉಚಿತ ಊಟ ವಸತಿ ವಿದ್ಯಾಕೇಂದ್ರ (Free Residential Institution) ಅಷ್ಟೇ ಅಲ್ಲ, ಜೀವನ ನಿರ್ವಹಣಾ ವಿದ್ಯಾಕೇಂದ್ರವೂ ಆಗಿತ್ತೆನ್ನಬೇಕು. ಪಾರಂಪರಿಕವಾಗಿ ವಿಕಸನಗೊಂಡ ದರ್ಶನ, ಶಾಸ್ತ್ರಗಳ ಅಧ್ಯಯನ, ಅಧ್ಯಾಪನ, ಶ್ರವಣ, ವಾಚನ, ಚಿಂತನ ಹಾಗೂ ಗೋಷ್ಠಿ, ವ್ಯಾಖ್ಯಾನ ಇದ್ದ ಸೂಚನೆ ಒದಗುತ್ತದೆ. ಅಂದರೆ ಪ್ರೌಢವಿದ್ಯಾಭ್ಯಾಸದ ಲಕ್ಷಣವನ್ನು ಶಾಸನವು ಹೇಳುತ್ತದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳು ಅಧ್ಯಯನದ ಅಂಗವಾಗಿ ಕಾಣಬರುತ್ತವೆ. ಹಸ್ತಪ್ರತಿಗಳನ್ನು ಬರೆಯಬೇಕಾದದ್ದು ವಿದ್ಯಾರ್ಥಿಗೆ ಒಂದು ಜೀವನ ಗಳಿಕೆಯ ತಯಾರಿಯ ಅವಧಿಯದಾಗಿ (House surgeon or house medicalship period! ರೀತಿ) 'ಪಂಚಕೇಶ್ವರವಿತ್ತೆಂದು ತೋರುತ್ತದೆ. ಅಂದರೆ learning by earning ಅವಧಿಯನ್ನು ವಿದ್ಯಾರ್ಥಿಗೆ ಒದಗಿಸಲಾಗುತ್ತಿತ್ತೆನ್ನಬೇಕು. ಆದರೆ ಇದು ಸಾರ್ವತ್ರಿಕವಾಗಿತ್ತೇ ಎಂಬುದು ಮಾತ್ರ

---

17. ಆರ್. ವೆಂಕಟೇಶ ಮೂರ್ತಿ. 'ಪಂಚಿಕೇಶ್ವರ - ಒಂದು ಅರ್ಥಗ್ರಹಿಕೆ; ಇತಿಹಾಸ ದರ್ಶನ. ಸಂ. 12/ 1997. ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು. ಪು. 152.

ಸ್ಪಷ್ಟವಿಲ್ಲ. ವ್ಯವಸಾಯ ಸಂಬಂಧಿ ಆಚರಣೆ ಪಂಚಕೇಶ್ವರಕ್ಕೆ ಅನ್ವಯವಾಗುವ ವೇಳೆಗೆ ಅದು ಕೃಷಿಕರಿಗೆ ಗೊತ್ತುಪಡಿಸಿದ ತರಬೇತಿಯಾಯಿತು ಎನ್ನುವುದಾದರೆ, ಕಾಯಕ ವರ್ಗವ್ಯವಸ್ಥೆಗೆ ಅದು ಅಣಿಮಾಡಿತೆನ್ನಬೇಕು. ಶಾಪಾಶಯದಲ್ಲಿ ಧಾರ್ಮಿಕ ಮೂಲದ ಪಾಪಪ್ರಜ್ಞೆಯನ್ನು ಜಾಗೃತಗೊಳಿಸಿರುವ ಬಗೆ ಇದೆ.

ಕ್ರಿ.ಶ. 1162ರ ಶಿವಮೊಗ್ಗ ಜಿಲ್ಲೆ ಬಳ್ಳಿಗಾವೆಯ ಕಳಚೂರ್ಯರ ಕಾಲದ ಕೋಡಿಮಠದ ಕೇದಾರೇಶ್ವರ ದೇಗುಲ ಶಾಸನದಲ್ಲಿ ರಾಜಗುರು ವಾಮಶಕ್ತಿದೇವರಿಗೆ ನೀಡಿದ ಗ್ರಾಮಗಳ ದಾನದ ಉದ್ದೇಶವನ್ನು ಹೇಳಿದೆ. ಇಲ್ಲಿದ್ದ ಮಠವು ವಿದ್ಯಾಕೇಂದ್ರವಾಗಿದ್ದ ಬಗ್ಗೆ ಹಾಗೂ ಹೊಂದಿಕೊಂಡಿದ್ದ ದೇಗುಲದ ಕುರಿತು ಇದೆ. ದಕ್ಷಿಣ ಕೇದಾರಸ್ಥಾನವೆಂದು ಕರೆಸಿಕೊಂಡಿದ್ದ ಈ ವಿದ್ಯಾಕೇಂದ್ರವು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಾಧ್ಯಯನಕ್ಕೆ ಕೌಮಾರ, ಪಾಣಿನೀಯ, ಶಾಕಟಾಯನ, ಶಬ್ದಾನುಶಾಸನಾದಿ ವ್ಯಾಕರಣಗಳ ವ್ಯಾಖ್ಯಾನಕ್ಕೆ ಸ್ಥಾನವಾಗಿತ್ತು; ನ್ಯಾಯ, ವೈಶೇಷಿಕ, ಮೀಮಾಂಸೆ, ಸಾಂಖ್ಯ, ಬೌದ್ಧ ಇತ್ಯಾದಿ ಆರು ದರ್ಶನಗಳ ವ್ಯಾಖ್ಯಾನ ನೆಲೆ ಆಗಿತ್ತು. ಲಾಕುಳಸಿದ್ಧಾಂತ ಪಾತಂಜಲಾದಿ ಯೋಗಶಾಸ್ತ್ರ ವ್ಯಾಖ್ಯಾನ ಸ್ಥಾನವಾಗಿತ್ತು. ಅಷ್ಟೇ ಅಲ್ಲ,

'ಅಷ್ಟಾದಶ ಪುರಾಣ ಧರ್ಮಶಾಸ್ತ್ರ ಸುಕವಿ ಕಾವ್ಯ ನಾಟಕಾದಿ
ವಿವಿಧ ವಿದ್ಯಾಸ್ಥಾನಮುಂ ದೀನಾನಾಥ ಪಂಗ್ವಂಧ ಬಧಿರ ಕಥಕ ಗಾಯಕ
ವಾದಕ ವಾಂಶಕ ನರ್ತ್ತಕ ವೈತಾಳಿಕ ನಗ್ನ ಭಗ್ನ ಕ್ಷಪಣ ಕೈಕ ದಂಡಿ
ತ್ರಿದಂಡಿ ಹಂಸ ಪರಮಹಂಸಾದಿ ನಾನಾದೇಶ ಭಿಕ್ಷುಕ ಜನಾನಿವಾರ್ಯ್ಯಾನ್ನ
ದಾನ ಸ್ಥಾನಮುಂ ನಾನಾನಾಥರೋಗಿಜನ ರೋಗ ಭೈಷಜ್ಯ ಸ್ಥಾನಮುಂ
ಸಕಲ ಭೂತಾಭಯಪ್ರದಾನ ಸ್ಥಾನಮುಮಾಗಿ ಕೋಡಿಯಮಠವಿಪ್ಪ್ರವಾ ಸ್ಥಾನ
ದೊಳೇನಾನುಮೊಂದು ಧರ್ಮಮಂ ಮಾಡಿ ನಮ್ಮ ವ್ರಿತ್ತಮುಮಂ ವಿತ್ತಮುಮಂ
ತ್ರಿಸಪ್ತ ಕುಲಮುಮಂ ಪವಿತ್ರಮಾಪ್ಪ್ರಮೆಂಬ ಬಗೆಯಿಂ ಬಗೆವುತಿಪ್ಪ್ರ...
ಬಿಜ್ಜಲ ಮಹಾರಾಜಂ ಬಿಜಯಂಗೆಯ್ದು ಬಳ್ಳಿಗಾವೆಯೊಳು ಬೀಡಂ ಬಿಟ್ಟು.....'

ಇದೇ ಸಮಯದಲ್ಲಿ ಕಸಪಯ್ಯನಾಯಕನ ಕೋರಿಕೆಯಂತೆ ಬಿಜ್ಜಳನು 'ದಕ್ಷಿಣಕೇದಾರೇಶ್ವರ ದೇವರಂಗಭೋಗಕ್ಕಂ, ತಪೋಧನರಾಹಾರಧಾನಕ್ಕಂ, ವಿದ್ಯಾದಾನಕ್ಕಂ, ಖಂಡಸ್ಫುಟಿತ ಜೀರ್ಣ್ಣೋಧಾರಕ್ಕಂ ಶಿಷ್ಟೇಷ್ಟಸಂತರ್ಪಣಕ್ಕಮೆಂದು ನೂಱುಂಬಾಡದೊಳಗಣ ಕಿಱುಗೇರಿಯಂ, ಪಾಂಡ್ಯರಾಜ್ಯದ ಬಳಿ ಚಿಟ್ಟೂರುಮಂ, ಗುತ್ತೊಳಲ ಕಂಪಣದೊಳು ಆಯಿರೆಣಿಯುಮಂ, ಕಾಲಡಿ ತೊಂಬತ್ತಱೊಳು ಕೋಣೆಯನೇಱೊಲಿಗೆಮುಮಂ... ತ್ರಿಭೋಗಾಭ್ಯಂತರ ಸಹಿತವಾಗಿ ಶ್ರೀಮದ್ರಾಜಗುರು ವಾಮಶಕ್ತಿದೇವರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿಕೊಟ್ಟ' ಬಗ್ಗೆ ಹೇಳಿದೆ. ಹೀಗೆಯೆ ಸೋಯಿದೇವ, ಲಕುಮಿದೇವ ದಂಡನಾಯಕರ ಕೋರಿಕೆಗನುಗುಣವಾಗಿ 'ಅಬ್ಬಲೂರು ಬ್ರಹ್ಮೇಶ್ವರ ದೇವರಂಗಭೋಗಕ್ಕೆ' 'ಸೋಮನಾಥ ದೇವರಂಗಭೋಗಕ್ಕೆ' 'ದಕ್ಷಿಣ ಕೇದಾರೇಶ್ವರ ದೇವರ ಅಂಗಭೋಗಕ್ಕೆ' ಹೀಗೆಯೆ ಗ್ರಾಮದಾನವನ್ನು ನೀಡಲಾಯಿತು.

ಈ ಮಠದ ವಿದ್ಯಾಕೇಂದ್ರದ ಚಟುವಟಿಕೆ ಹೆಚ್ಚು ವ್ಯಾಪಕವಾದದ್ದು ಎಂಬುದು ಸ್ಪಷ್ಟ. ಇಲ್ಲಿ ಮುಖ್ಯಗುರು ರಾಜಗುರುವೆನಿಸಿ ಇಡೀ ವ್ಯವಸ್ಥೆಯ ಕುಲಪತಿ ಎನಿಸಿದ್ದಂತೆ

ತೋರುತ್ತದೆ. ಇದು ಒಂದು ವಿಶ್ವವಿದ್ಯಾಲಯದಂತೆ ಸ್ವಾಯತ್ತಸಂಸ್ಥೆಯಾಗಿತ್ತು; ಆದರೆ ತನ್ನ ಸಂಕೀರ್ಣವ್ಯೂಹದಿಂದಾಗಿ ಮತ್ತೂ ವ್ಯಾಪಕತೆ ಹೊಂದಿತ್ತು. ರಾಜನ ಆಡಳಿತವು ಶಿಕ್ಷಣ ವ್ಯವಸ್ಥೆಯನ್ನು ಮಠ, ಘಟಿಕಾಸ್ಥಾನಗಳ ಹೊಣೆಗೆ ವಹಿಸಿದ್ದುದು ಕಾಣಬರುತ್ತದೆ.

ಈ ಮಠದಲ್ಲಿ, ವಿವಿಧ ಶಿಸ್ತುಗಳ ಅಧ್ಯಯನ ನೆಲೆ ಇತ್ತು. ವೇದ, ವ್ಯಾಕರಣ, ದರ್ಶನ, ಸಿದ್ಧಾಂತ, ಶಾಸ್ತ್ರ, ಪುರಾಣ, ಧರ್ಮಶಾಸ್ತ್ರಗಳು ಅಧ್ಯಯನದ ಶಿಸ್ತುಗಳಾಗಿದ್ದುವು. ಇಲ್ಲಿ ಧಾರ್ಮಿಕ ಸಾಮರಸ್ಯ, ಮುಕ್ತಚಿಂತನೆಯ ಸಂದರ್ಭಗಳು ಕಾಣಬರುತ್ತವೆ. ಈ ಮಠವು ಸಕಲ ಕಾವ್ಯ, ನಾಟಕ, ನಾಟ್ಯಕಲೆಗಳ ಅಧ್ಯಾಪನ, ಅಧ್ಯಯನ ಇಲ್ಲಿ ನಡೆಯುತ್ತಿತ್ತು. ದೀನರು, ಅನಾಥರು, ಕುರುಡರು, ಕಿವುಡರು, ಹೆಳವರಿಗೆ, ಹಾಡುತ್ತ ಹರಿಕಥೆ ಹೇಳುತ್ತ, ವಾದ್ಯ ಬಾರಿಸುತ್ತ, ಕುಣಿಯುತ್ತ ಜನ ರಂಜಿಸುತ್ತಿದ್ದವರಿಗೆ, ಬಟ್ಟೆ ಇಲ್ಲದೆ ಬರುತ್ತಿದ್ದವರಿಗೆ, ಸಂನ್ಯಾಸಿಗಳಿಗೆ, ವಿವಿಧ ದೇಶದ ಭಿಕ್ಷುಕರಿಗೆ ದಾನ ನೀಡುವ ನೆಲೆ ಆಗಿತ್ತು. ವಿವಿಧ ಅನಾಥ, ರೋಗಿ ಜನಗಳಿಗೆ ಔಷಧೋಪಚಾರದ ನೆಲೆಯಾಗಿತ್ತು. ಸಕಲ ಜೀವಿಗಳಿಗೂ ಅಭಯ ನೀಡುವ ಸ್ಥಾನವಾಗಿತ್ತು. ಹೀಗೆ, ವಿದ್ಯೆ, ಕಲೆ, ಪ್ರೌಢಚಿಂತನೆ, ಸಾಹಿತ್ಯಗಳಿಗೆ ಆಸರೆಯಾಗಿದ್ದಂತೆ, ದೀನದಲಿತರ, ರೋಗಿಗಳ ಅಭಯಸ್ಥಾನವಾಗಿದ್ದುದರ ಚಿತ್ರಣ ಕಾಣುತ್ತದೆ. ಉಚಿತ ವಿದ್ಯಾದಾನ, ಉಚಿತ ರೋಗೋಪಚಾರ, ದಾಸೋಹ, ನೆಮ್ಮದಿಯ ನೆಲೆಯಾಗಿದ್ದ ಈ ನೆಲೆಯ ನಿರ್ವಹಣೆಗೆ ರಾಜನಲ್ಲದೆ ರಾಜನ ಅಧಿಕಾರಿಗಳು ದಾನದ ಉದ್ದೇಶವನ್ನು ಹೇಳಿ ದಾನದತ್ತಿಗಳನ್ನು ಪೂರ್ಣ ಕರಮುಕ್ತವಾಗಿ ನೀಡಿದ ಸಂಗತಿ ಇಲ್ಲಿದೆ. ಮಠಕ್ಕೆ ಅಂಟಿದ ದೇಗುಲಗಳಿಗೂ ಈ ದಾನವನ್ನು ನೀಡಲಾಗುತ್ತಿತ್ತು. ಇದೇ ಬಗೆಯ ವಿದ್ಯಾಸಂಸ್ಥೆಯೊಂದನ್ನು ಡಾ|| ಜಚನಿ ಅವರು ಸಾಲೊಟಗಿಯಲ್ಲಿ ಗುರುತಿಸುತ್ತಾ, 'ಶಿವಯೋಗಿ ಶಿವಾಚಾರ್ಯನು 8ನೆಯ ಶತಮಾನದಲ್ಲಿ ಸಾಲೊಟಗಿಯ ವಿಶ್ವವಿದ್ಯಾಲಯದ ವಿದ್ವಾಂಸರಿಗೆಲ್ಲ ವರಿಷ್ಠನಾಗಿದ್ದ' ಎಂದು ಅಭಿಪ್ರಾಯಪಟ್ಟಿದ್ದಾರೆ.[18] ರಾಷ್ಟ್ರಕೂಟರ ಕಾಲದಲ್ಲಿ ಸಾಲೊಟಗಿ ಮುಖ್ಯ ವಿದ್ಯಾಕೇಂದ್ರವಾಗಿ ತ್ರೈಪುರುಷ ಶಾಲೆ ಆಗಿತ್ತೆಂಬುದು ಶಾಸನೋಕ್ತ.

ನಮ್ಮ ಸಾಂಸ್ಕೃತಿಕ ಪರಂಪರೆಗನುಗುಣವಾಗಿ ಓದಿನ ವಲಯವಾದರೂ, ಕೇವಲ ಆದರ್ಶೀಕೃತ, ಅನ್ವೇಷೀಕೃತ, ಅನ್ವಯಿಕ ಶೈಕ್ಷಣಿಕ ತತ್ವ ಎಂಬ ವರ್ಗೀಕರಣವೆನಿಸದೆ ಇವುಗಳೆಲ್ಲದರ ಸಂಯುಕ್ತ ರೂಪವೆಂದು ಈ ಮಠದ ಶಿಕ್ಷಣ ಸ್ವರೂಪ ಶಾಸನಾಧಾರದಿಂದ ಕಾಣುತ್ತದೆ. ದಯಾಪರತೆ, ಸರ್ವಧರ್ಮ ಸಮನ್ವಯ, ಸಾಮಾಜಿಕ ಆಶಯಗಳ ಚಾಲನೆ ಜೀವನದ ಅಗತ್ಯಗಳ ಕುರಿತ ಕಾಳಜಿಗಳನ್ನು ಮೈಗೂಡಿಸಿಕೊಂಡ ಶಿಕ್ಷಣಮೌಲ್ಯಗಳು ಇಲ್ಲಿ ಅಂತರ್ಗತವಾಗಿರುವುದು ಕಾಣುತ್ತದೆ. ಅಂತಾಗಿ ರಾಜನ ಆಡಳಿತ ಇಂತಹ ವಿಕೇಂದ್ರೀಕೃತ ವಿದ್ಯಾವ್ಯವಸ್ಥೆಗಳು ಹಾದಿ ತಪ್ಪಿದಾಗ ಆ ಬಗ್ಗೆ ಕ್ರಮಕ್ಕೆಗೊಂಡಿರುವುದು ಕರ್ನಾಟಕ, ಕೇರಳ, ತಮಿಳುನಾಡಿನ ಮಠ ಸಂಬಂಧಿ ವ್ಯವಸ್ಥೆಯಲ್ಲಿ ಕಾಣಬರುತ್ತದೆ. ಅಂತಹ ಮಠದ ಈ ವ್ಯವಸ್ಥೆಯು ಅದರ ಪ್ರಭಾವವನ್ನು ವ್ಯಾಪಕಗೊಳಿಸಿತ್ತು. ವ್ಯವಸ್ಥೆಯು ಹದತಪ್ಪುತ್ತ ಬಂದಾಗ ಅದರ ವಿಕೃತರೂಪಗಳೂ ಕಂಡುಬಂದು, ಅದರ ಶೈಕ್ಷಣಿಕ ಮೌಲ್ಯಗಳು ಸ್ಥಗಿತಗೊಳ್ಳುತ್ತ ಜಡವಾದುವು.

---

18. ಡಾ|| ಜಚನಿ, ಶ್ರೀ ಪಟ್ಟಸ್ಥಲೋದ್ಧನ್ನಣಿ, ಮುಬ್ಬಳ್ಳಿ, 1990, ಪು.2

ಹೊಯ್ಸಳರಲ್ಲಿ ರಾಣಿಯರೆಲ್ಲರೂ ಉಚ್ಚ ವಿದ್ಯಾಭ್ಯಾಸ ಪಡೆದವರಾಗಿದ್ದ ಬಗ್ಗೆ ಹೊಯ್ಸಳ ವಿಷ್ಣುವರ್ಧನನ ಪತ್ನಿ, ಶಾಂತಲೆ ನೃತ್ಯಕಲೆಯಲ್ಲಿ ನಿಷ್ಣಾತಳಿದ್ದ ಬಗ್ಗೆ ಕ್ರಿ.ಶ 1169ರ ಅಮೃತಾಪುರ ಶಾಸನವು ತಿಳಿಸುತ್ತದೆ. ಹೊಯ್ಸಳ ವೀರಬಲ್ಲಾಳನ ದಂಡಾಧೀಶ ಕುವರಲಕ್ಷ್ಮನ ಕುರಿತು ಕ್ರಿ.ಶ. 1220ರ ಕುವರಲಕ್ಷ್ಮನ ಶಾಸನವು 'ಕುವರಲಕ್ಷ್ಮಿಯನಾಡಿದ ಮಾತು ಕಲ್ಲೊಳಿಟ್ಟಕ್ಕರದಂತೆ ಸತ್ಯ ಪರಿಪಾಳಣಸೀಳಮನುಳ್ಳಪಾವಕಾರ್ಯ್ಯಕ್ರಮನರ್ಥಕಂ ಎಂದಿರುವುದು. 'ಇಲ್ಲದ ಸಲ್ಲದ ಭಾಷೆಗೆ ಕಲ್ಲ ನಿಜಿಸುವರನುಜಿದೆ ನಗುವವೊಲಿರ್ಕ್ಕುಂ ಎಂದಿರುವುದು ಶಾಸನಾಕ್ಷರಗಳ ಮಹತ್ವವನ್ನು ಹೇಳುವಂತೆ ಅವನು ಕಲಿತ ವಿದ್ಯೆಯಿಂದಾಗಿ ಆಡಿದ ಮಾತು ತಪ್ಪುವಂತಹುದಲ್ಲ ಎಂದು ಮಾತಿನ ಮೌಲ್ಯಕ್ಕೆ ಮೆರಗು ನೀಡಿದಂತಾಗಿದೆ 'ಸಲ್ಲದ ಭಾಷೆ ಶಾಸನವೆನಿಸುವುದಿಲ್ಲ. ಅಂತಹ ಸುಳ್ಳನ್ನು ಶಾಸನ ದಾಖಲಿಸದು; ಜನತೆ ಮಾನಿಸದು' ಎಂಬ ನೈತಿಕಮೌಲ್ಯವನ್ನು ಪ್ರಸ್ತುತ ಶಾಸನ ಎತ್ತಿ ಹಿಡಿದಿದೆ. ಕಲಿತ ಭಾಷೆ ವಿದ್ಯೆ ನೈತಿಕ ಬಾಹುಳ್ಯ ಹೊಂದಿತ್ತೆಂಬುದರ ಸೂಚನೆ ಇದು.

ಕ್ರಿ.ಶ. 1411ರ ಲಕ್ಷ್ಮೀಧರನ ಶಾಸನ (ಹಂಪೆಯ ಶಾಸನ) ವಿಜಯನಗರದರಸ ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರ ಅಮಾತ್ಯನಿಗೆ ಸಂಬಂಧಿಸಿದೆ. ಅವನು ಬಾಲಕನಿದ್ದಾಗ ಅವನ ತಾಯಿ ಹೇಳಿದ ಮಾತು, ಅವನು ಕಲಿತ ಮೊದಲ ವಿದ್ಯೆಯಾಯಿತು. ಆ ಕಾಲದ ಶಿಕ್ಷಣಮೌಲ್ಯವೂ ಆಗಿತ್ತು. ಶಾಸನದಲ್ಲಿ ಆ ಪದ್ಯದ ಸಾಲುಗಳು :

ಕೆಱೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ ||
ರ್ಗ್ಗೆಱೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂತೆ ತಾಂ
ಯೆಱೆದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ||

ಬದುಕಿ ಬಾಳುವಲ್ಲಿ, ಅಧಿಕಾರಸ್ಥನಾದರೆ, ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇಗುಲವನ್ನು ನಿರ್ಮಿಸು, ಸೆರೆಸಿಕ್ಕಿದ ಅನಾಥರನ್ನು ಬಿಡಿಸು, ಮಿತ್ರರಿಗೆ ನೆರವಾಗು, ನಂಬಿದವರಿಗೆ ಆಸರೆಯಾಗು, ಶಿಷ್ಟರನ್ನು ಪೊರೆ ಎಂದೆಲ್ಲ ಬಾಯಿಗೆ ಹಾಲೆರೆಯುವಲ್ಲಿ ಕಿವಿಗೆ ಎರೆದ ಆ ತಾಯಿಯ ಮಾತುಗಳು ನಮ್ಮ ವಿದ್ಯಾಪರಂಪರೆಯ ಸಾಂಸ್ಕೃತಿಕ ಔನ್ನತ್ಯವೆ. ಇದು ಆ ಕಾಲದ ಸಮಾಜ ಬಯಸುತ್ತಿದ್ದ ಸಂಸ್ಕೃತಿ ಎನ್ನುವಾಗ, ಶೈಕ್ಷಣಿಕ ಹದುಳವನ್ನು ಪ್ರಸ್ತಾಪಿಸಿದಂತಾಗುತ್ತದೆ. ಅದು ಅಂದಿನ ಕಲಿಕೆಯಲ್ಲಿ ಪ್ರತಿಧ್ವನಿಸುತ್ತಿದ್ದ ಮೌಲ್ಯವೆ. ಇದಕ್ಕೆ ಮೊದಲು ಕ್ರಿ.ಶ. 1368ರ ವಿಜಯನಗರದರಸ ಬುಕ್ಕರಾಯನ ಶ್ರವಣಬೆಳಗೊಳ (ಹಾಗೂ ಕಲ್ಯ) ಶಾಸನಗಳಲ್ಲಿ ಜೈನರು ಹಾಗೂ ಭಕ್ತರ (ಶ್ರೀವೈಷ್ಣವ) ನಡುವೆ ಮತೀಯ ಕಲಹವಾದಾಗ ವೀರಶೈವ ಬುಕ್ಕರಾಯನು ಬಗೆಹರಿಸಿದ ರೀತಿ ಧರ್ಮ ಸಮನ್ವಯದ ಮೌಲಿಕ ಸಾಕ್ಷಿ ಎನ್ನಲು ಈ ಸಾಲುಗಳಿವೆ:

'.....ಹದಿನೆಂಟುನಾಡ ಶ್ರೀ ವೈಷ್ಣವರ ಕೈಯ್ಯಲು, ಮಹಾರಾಯನು ವೈಷ್ಣವ ದರ್ಶನಕ್ಕೆಊ, ಜೈನದರ್ಶನಕ್ಕೆಊ ಭೇದವಿಲ್ಲವೆಂದು ರಾಯನು ವೈಷ್ಣವರ ಕೈಯ್ಯಲು, ಜೈನರ ಕೈವಿಡಿದು ಕೊಟ್ಟು ಯೀ ಜೈನದರ್ಶನಕ್ಕೆ ಪೂರ್ವ್ವಮರಿಯಾದೆಯಲು ಪಂಚಮಹಾ ವಾದ್ಯಂಗಳೂ ಕಳಶಉ ಸಲುವುದು ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು ಯೀ ಮರ್ಯ್ಯಾದೆಯಲು ಯೆಲ್ಲಾ

ರಾಜ್ಯದೊಳಗುಳ್ಳ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವ ನಟ್ಟು ಪಾಲಿಸುವರು, ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವರು ಜೈನದರ್ಶನವ ರಕ್ಷಿಸಿಕೊಂಡು ಬಹೆಉ ವೈಷ್ಣವರೂ, ಜೈನರೂ ವೊಂದು ಭೇದವಾಗಿ ಕಾಣಲಾಗದು....'

ಇಲ್ಲಿ ಜೈನರ, ವೈಷ್ಣವರ ನಡುವೆ ಸಾಮರಸ್ಯವನ್ನು ಸಹಕಾರದಿಂದ ಕಾಪಾಡಲು ಮಾಡಿದ ಪ್ರಯತ್ನವಿರುವಲ್ಲಿ ಸಮಾಜದಲ್ಲಿ ಕಲಿಕೆಯ ಬಗ್ಗೆಯೂ ಇಂತಹದೇ ಮೌಲ್ಯವನ್ನು ಹೊಂದಿದ್ದಿರಬೇಕು. ಆಡಳಿತ ಅದರ ಚಾಲ್ತಿಗೆ ಅನುಗುಣ ಪರಿಸರ ನಿರ್ಮಿಸಿತ್ತೆನ್ನಬೇಕು.

ಕೊಡಗಿನಲ್ಲಿ ಮಠಗಳು ಹಾಲೇರಿ ಅರಸರ ಕಾಲದಲ್ಲಿ ವಿದ್ಯಾಕೇಂದ್ರಗಳಾಗಿ 'ಅಯ್ಯನ ಮನೆ' ಎನಿಸಿದ್ದುವು. ಹಾಗಾಗಿ 63 ಮಠಗಳನ್ನು ಸ್ಥಾಪಿಸಿ ಜೀರ್ಣೋದ್ಧಾರ ಮಾಡಿದ ಅರಸರಲ್ಲಿ ಮಠಗಳಿಗೆ ದಾನ ನೀಡಿದ ಸಂಗತಿಗಳು ಕ್ರಿ.ಶ. 1728ರಿಂದಲೇ ಶಾಸನಗಳಲ್ಲಿ ಉಕ್ತವಾಗಿವೆ. ವಿಶೇಷತಃ ಅಬ್ಬಿಮಠ, ಮಾದಾಪುರ ಮಠಗಳು ಸಾಹಿತ್ಯಕೃತಿಗಳ ಓಲೆಗರಿಪ್ರತಿಗಳ ಸಂಗ್ರಹಾಗಾರವಾಗಿದ್ದು ವಿದ್ಯಾದಾನಕ್ಕೂ ಹೆಸರಾಗಿದ್ದುದು ಕಾಣಬರುತ್ತದೆ. ಹೀಗೆಯೆ ಕೆಳದಿ, ಮೈಸೂರು ಹಾಗೂ ಕನ್ನಡನಾಡಿನ ರಾಜವಂಶಗಳ ಶಾಸನಗಳು ವಿದ್ಯಾದಾನವನ್ನು ಮಠಗಳ ಮಾಡಿಸಿದರೂ ಧಾರ್ಮಿಕ ಸಾಮರಸ್ಯ ಕಾಪಾಡಿಕೊಂಡು ಬಂದದ್ದು ನಿದರ್ಶನಪೂರ್ವಕವಾಗಿವೆ.

ಈ ಮೇಲೆ ಹೇಳಿದ ಶಾಸನಗಳಿಂದ ಹೆಕ್ಕಿದ ಶಿಕ್ಷಣವ್ಯವಸ್ಥೆಯಲ್ಲಿ ಅಡಕವಾಗಿರುವ ಮೌಲ್ಯಗಳು ಇಂದಿನ ಪದ್ಧತಿಗೂ ಸಾಂಸ್ಕೃತಿಕ ಆದರ್ಶವೆನಿಸಿದರೂ, ಮುಕ್ತಚಿಂತನೆಗೂ ಅದು ತೆರೆದುಕೊಂಡಿದ್ದುದನ್ನು ಈ ಶಾಸನಗಳು[19] ಹೆಂಜೇರು, ಕಡಲೆವಾಡ, ತೇರದಾಳ, ಎಲೆವಾಳ, ಬಳ್ಳಿಗಾವೆ, ಮೋರಿಗೇರಿ, ಹೂಲಿ, ಮಲಘಾಣ, ಹೂವಿನಹಿಪ್ಪರಗೆ, ಹೊಟ್ಟೂರು ಮುಂತಾದ ಮಹಾಘಟಿಕಾಸ್ಥಾನಗಳಿದ್ದು, ಪ್ರಮುಖ ವಿದ್ಯಾಕೇಂದ್ರಗಳಾಗಿದ್ದ ಬಗ್ಗೆ 12ನೆಯ ಶತಮಾನದ ಶಾಸನಗಳು ತಿಳಿಸುತ್ತವೆ: ಕನ್ನಡಕ್ಕರ ಓದುವ ವಿದ್ಯಾರ್ಥಿ ಮಾಣೆಗಳಿಗಂ', 'ಕನ್ನಡಕ್ಷರ ಶಿಕ್ಷೆ', 'ಕಂನಡಮುಪಾಧ್ಯ', 'ಬಾಲಸಿಕ್ಷೆಯ ಶಾಸ್ತ್ರದವರು', 'ಕರ್ಣ್ನಾಟ ಬಾಲಸಿಕ್ಷೆಯಂ' ಮುಂತಾದ ಶಬ್ದಗಳು ಶಿಕಾರಿಪುರ, ಅರಸೀಕೆರೆಯ 12ನೆಯ ಶತಮಾನದ ಶಾಸನಗಳಲ್ಲಿ ಕಂಡುಬರುವುದರಿಂದ[20] ನಮ್ಮಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ವ್ಯವಸ್ಥೆ ಹಾಗೂ ಪ್ರೌಢ ಶಿಕ್ಷಣದ ವ್ಯವಸ್ಥೆಯ ಬಗ್ಗೆಯೂ ಕಲ್ಪನೆ ಒದಗುತ್ತದೆ. ಶಿಕ್ಷಕ ಕೇಂದ್ರೀಕೃತ ವ್ಯವಸ್ಥೆ ಪ್ರಾಥಮಿಕ ಹಂತದಲ್ಲಿತ್ತೆಂಬ ಸೂಚನೆ 'ಸಿಕ್ಷೆ' 'ಉಪಾಧ್ಯ' 'ಶಾಸ್ತ್ರದವರು' ಎಂಬ ಶಬ್ದಗಳಿಂದಲೇ ವಿದಿತವೆನಿಸುತ್ತದೆ. ಜೊತೆಗೆ ನಾಡ ಜನಭಾಷೆಗಿದ್ದ ಮಹತ್ವ ಪ್ರಾಥಮಿಕ ಹಂತದಿಂದಲೇ ಮೌಲಿಕವಾಗಿತ್ತೆನಿಸುತ್ತದೆ.

---

19. i. ಎ.ಕ. I (ಹೊಸದು) ಕೊಡಗು ಜಿಲ್ಲೆ, ಮೈಸೂರು, ವಿ.ವಿ. 1972.
    ii. ಶಾಸನ ಸಂಗ್ರಹ: (ಸಂ.) ಎ.ಎಂ. ಅಣ್ಣಿಗೇರಿ, ಆರ್. ಶೇಷಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು 1975.
    iii. ಕನ್ನಡ ಶಾಸನ ಸಂಪದ: (ಸಂ.) ಆರ್. ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ, ಕರ್ನಾಟಕ ವಿಶ್ವವಿದ್ಯಾಲಯ, 1987.

20. ಡಾ|| ಎಚ್. ಎಸ್. ಗೋಪಾಲರಾವ್, "ಕರ್ನಾಟಕದ ಪ್ರಾಚೀನ ವಿದ್ಯಾಕೇಂದ್ರಗಳು ಮತ್ತು ಕಾಳಾಮುಖರು" ಸಂಶೋಧನ (ಸಂ.) ಲಕ್ಷ್ಮಣ್‌ತೆಲಗಾವಿ, ಡಾ|| ಎಂ. ಚಿದಾನಂದ ಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು, 1991, ಪು.612

ಯಾವುದೇ ಶಿಕ್ಷಣವ್ಯವಸ್ಥೆಯಲ್ಲಿ, ಆಯಾ ಸಾಮಾಜಿಕ ವ್ಯವಸ್ಥೆ ಹಾಗೂ ಅಂದಂದಿ ಅಗತ್ಯಗಳಿಗೆ ಅನುಗುಣವಾದ ಶಿಕ್ಷಣಮೌಲ್ಯಗಳು ಅಡಕಗೊಂಡಿರುತ್ತವೆ. ಆಡಳಿತ ವ್ಯವಸ್ಥೆ ಸಾಮಾಜಿಕ ಬದಲಾವಣೆ, ಸ್ವಸಂಸ್ಕೃತಿ ಅಥವಾ ಅನ್ಯಸಂಸ್ಕೃತಿಯ ಸಾಮಾಜಿ ಬದಲಾವಣೆಗಳು, ರಾಜಕೀಯ ಸ್ಥಿತ್ಯಂತರಗಳು ನಮ್ಮ ಶೈಕ್ಷಣಿಕ ವಲಯದಲ್ಲಿ ವಿವಿ ಛಾಪುಗಳನ್ನು ಮೂಡಿಸಬಹುದು. ಆದರೆ ಕೆಲವು ಸಾರ್ವಕಾಲಿಕ ಮೌಲ್ಯಗಳು ಪರಂಪರೆಯಿಂದ ಜತನಗೊಂಡು ಬಂದಿರುವಲ್ಲಿ, ಸಾಂಪ್ರದಾಯಿಕ ಎಂದು ತಳ್ಳಿಹಾಕಿದ ನಷ್ಟ ನಮ್ಮದೆ. ಅನ್ಯಪ್ರಭಾವಕ್ಕೆ ಒಳಗಾಗಿ ಸ್ವೀಕೃತ ಮೌಲ್ಯಗಳನ್ನು ಚಾಲ್ತಿಗೊಳಿಸಿದರು ನಮ್ಮತನ ಉಳಿಸಿಕೊಳ್ಳದಿದ್ದರೆ, ಅನಾಥಪ್ರಜ್ಞೆಯ ಬೇರುಗಳು ದುಂಬಾಲು ಬೀಳುತ್ತವ ಇಂತಹ ಸನ್ನಿವೇಶದಲ್ಲಿ ನಮ್ಮ ಸಂಸ್ಕೃತಿಯ ಮೌಲ್ಯಗಳಲ್ಲಿ ಶಿಕ್ಷಣ ಪರಂಪರೆಯಲ್ಲಿ ಸಾಧುವಾಗಿ ಬಂದವುಗಳನ್ನು ಆಸ್ತಿಯನ್ನಾಗಿ ಮಾಡಿಕೊಳ್ಳಬೇಕು; ಹೊಸತಿಗೆ ಅಳವಡಿಸಬೇಕು ಪಾಶ್ಚಿಮಾತ್ಯೀಕರಣದ ಮೌಲ್ಯಗಳೇ ಪ್ರಗತಿಪರ ಎಂದರೆ ನಮ್ಮ ಮನೋಧರ್ಮವ ಪ್ರಗತಿವಿಮುಖಿ ಎಂದಾಗುತ್ತದೆ. ನಮ್ಮ ರಾಷ್ಟ್ರೀಯ ಶೈಕ್ಷಣಿಕ ಮೌಲ್ಯಗಳ ತಲೆಮಾರುಗಳ ಪ್ರಗತಿಗಮ್ಯವಾಗಿ ಬಂದಿವೆ. ನಡೆವ ಹಾದಿ ಅಂತೇ ಎಚ್ಚರದ ಹಾದಿಯಾಗಬೇಕು ಅನ್ಯ ಹೊಸತು ನಮ್ಮ ಅಸ್ತಿತ್ವಕ್ಕೆ ಎರವಾಗದೆ ಸಹಯೋಗವಾಗಿ ಬರಲಿ. ಅದೇ ನಮ್ಮ ಹೊಸತಿ ಮೇಲೆ ಸವಾರಿ ಮಾಡವಂತಾಗಬಾರದು.

ಕಲಿಕೆಯ ಸಂತೋಷ-ಕಲಿಕೆಯಲ್ಲಿ ಸಂತೋಷ ನೀಡಲು ಗುರು ಬಾಧ್ಯಸ್ಥ; ಕಲಿಸು ಸಂತೋಷ-ಕಲಿಸುವಲ್ಲಿ ಸಂತೋಷ ಒದಗಿಸಲು ಶಿಷ್ಯ ಬಾಧ್ಯಸ್ಥ. ಇದು ಇಂದಿನ ಅಗತ ಎಂದು ನನ್ನ ಶಿಕ್ಷಣ-ಸ್ನಾತಕೋತ್ತರದಲ್ಲಿ ಪೂಜ್ಯಗುರುಗಳಾಗಿದ್ದ ಡಾ|| ಎನ್.ವಿ. ತೀರ್ಥ ಅವರು ಹೇಳುತ್ತಿದ್ದ ಮಾತು ಇಂದಿಗೂ ನನ್ನ ಮಾನಸದಲ್ಲಿ ಅನುರಣನವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣಮೌಲ್ಯಗಳು ಪ್ರಾಚೀನದ ಸೂಕ್ತನೆಲೆಯನ್ನು ಆಧುನಿಕ ನೆಲೆಯನ್ನು ಸಮೀಕರಿಸಿ ತಮ್ಮ ಪರಿತೋದರ್ಶನವನ್ನು ಮುಂದಿಟ್ಟಾಗ ನಮ್ಮ ಶಿಕ್ಷಣಪದ್ಧತಿ ಅಂತರ್ರಾಷ್ಟ್ರೀಯ ಕನಸುಗಳನ್ನು ದಾಟಿ ನನಸಿನ ಧಾಟಿ ಆಗುತ್ತದೆ.

ಭಾರತದ ಶಿಕ್ಷಣ ಯೋಜನೆ ಮತ್ತು ಅರ್ಥ ವ್ಯವಸ್ಥೆ

ಪ್ರೊ. ಎ.ಜಿ. ಮಾರೀಹಾಳ

"....If at all one is to calculate unit expenditure functions for the part, then factors like student - teacher ratio, density of population, salaries etc., should be included as explanatory variables in the estimation of the expenditure function."

-DPEP. Colling - Feb. 1997

ಪೀಠಿಕೆ : ಭಾರತಕ್ಕೆ ಸ್ವಾತಂತ್ರ್ಯ ಬಂದ 50ನೆಯ ವರ್ಷವನ್ನು ನಾವು ಈ ವರ್ಷ (1998) ಆಚರಿಸುತ್ತಿದ್ದೇವೆ. ಬ್ರಿಟಿಷರ ದಾಸ್ಯದ ನೊಗವನ್ನು ನೂರಾರು ವರ್ಷ ಹೊತ್ತ ನಾವು ಈ ನೊಗವನ್ನು ಕೊಡಹಿ ಮುಕ್ತರಾದೆವು. ರಾಜಕೀಯ ಸ್ವಾತಂತ್ರ್ಯ ಬಂತು; ಪ್ರಜಾಪ್ರಭುತ್ವ ಬಂತು; ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಬಂತು. ಆದರೆ, ಆರ್ಥಿಕ ಸ್ವಾತಂತ್ರ್ಯವಿಲ್ಲದ ಈ ಬಡದೇಶಕ್ಕೆ, ರಾಜಕೀಯ ಸ್ವಾತಂತ್ರ್ಯ ಯಾವ ಬೆಲೆ? ಬ್ರಿಟಿಷರು ತಮ್ಮ ಆಳ್ವಿಕೆಯಲ್ಲಿ ಕೇವಲ ಭಾರತವನ್ನು ಕಚ್ಚಾಸರಕಿನ ಉಗಮಕ್ಕಾಗಿ ಬೆಳೆಸಿದರು. ತಾವು ತಮ್ಮ ಕೈಗಾರಿಕೆಗಳಿಂದ ಉತ್ಪಾದಿಸಿದ ಪಕ್ಕಾಸರಕನ್ನು ಇಲ್ಲಿ ತುರುಕಿದರು. ಒಕ್ಕಲುತನ ಪ್ರಾಧಾನ್ಯದ ಈ ದೇಶದಲ್ಲಿ ಆಗ ಕೈಗಾರಿಕೆಗಳು ಬೆರಳೆಣಿಕೆಯಲ್ಲಿ ಇದ್ದವು. 8 ಲಕ್ಷ ಹಳ್ಳಿಗಳಲ್ಲಿ ಆಗ ಭಾರತವು ಉಸಿರಾಡುತ್ತಿತ್ತು.

ಅಂದಿನ ನಮ್ಮ ಹಿರಿಯರು ವಿಚಾರಿಸಿದ ಅನೇಕ ಮಹತ್ವದ ಚಿಂತನೆಗಳಲ್ಲಿ ದೇಶಾಭಿವೃದ್ಧಿ ಗುರಿಯೂ ನಿಂತುಕೊಂಡಿತು. ದೇಶದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ಅಂದಿನ ನಮ್ಮವರು ಚಿಂತಿಸಿದರು. ಪರದೇಶಗಳಲ್ಲಿ ರಷ್ಯಾ, ಅಮೇರಿಕೆಗಳು ಬಲಾಢ್ಯವಾಗಿ ಬೆಳೆದು ಬಂದ ಕುಬಿ ನಮಗೆ ಬೇಕಾಯಿತು. ಅದರ ಫಲಶ್ರುತಿಯಂತೆ 1950ರಲ್ಲಿ ನಮ್ಮ ಯೋಜನೆಗಳು ಪ್ರಾರಂಭವಾದವು. ಈಗ ನಾವು 9ನೆಯ ಯೋಜನೆಯ ಅಡಿಪಾಯದಲ್ಲಿದ್ದೇವೆ.

ಚೀನೀಯ ಒಂದು ಗಾದೆಯಂತೆ ಯೋಜನೆ, ಶಿಕ್ಷಣದ ಯೋಜನೆಗಳು ಮಹತ್ವದವಾಗಿವೆ.[1]

---

1. Don Adams - Educational Planning; Centre for Development Education, All University School of Education Syramse University, 1968.

"If you plan for one year, plant seeds;
If you plan for ten years, plant trees;
If you plan for 100 years, plant men."

ದೇಶದ ಅಭಿವೃದ್ಧಿಯಲ್ಲಿ, ಶಿಕ್ಷಣದ ಅಭಿವೃದ್ಧಿಯೂ ಕೂಡಿಕೊಂಡದ್ದು ಒಂದು ಮಹತ್ವದ ಭಾರತೀಯ ಬೆಳವಣಿಗೆಯಾಗಿದೆ. ಹಿಂದೆ 1950ರಲ್ಲಿ ನಮ್ಮ ಯೋಜನಾ ಆಯೋಗವು ನಿರ್ಮಾಣಹೊಂದಿ, ಡಾ. ಮಹಾಲನೋಬೀಸ್‌ರಂತಹ ವಿದ್ವಾಂಸರು ಅವರ ಅಧ್ಯಕ್ಷರಾಗಿದ್ದರು. ಚೋದ್ಯವೆಂದರೆ ಈ ಮೊದಲನೆಯ ಯೋಜನೆ ಏನೆಲ್ಲ ಅಭಿವೃದ್ಧಿಗಳ ಬಗ್ಗೆ ಪ್ರಸ್ತಾವನೆ ಮಾಡಿದರೂ, ಶಿಕ್ಷಣದ ಬಗ್ಗೆ 'ಚ'ಕಾರವೂ ಅಲ್ಲಿರಲಿಲ್ಲ. ಅಂದಿನ ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಗಳಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಅಝಾದರು ಈ ಅಲಕ್ಷ್ಯಕ್ಕೆ ಪ್ರಧಾನಿ ಜವಾಹರಲಾಲರೆದುರು ದೂರಿದರು. ಎಚ್ಚತ್ತ ಅಂದಿನ ಯೋಜಕರು ಪ್ರಪ್ರಥಮವಾಗಿ ಶಿಕ್ಷಣಕ್ಕೆ ಒಟ್ಟು 2400 ಕೋಟಿ ಯೋಜನಾ ಹಣದಲ್ಲಿ, 154 ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕೆ ಮುಡಿಪಾಗಿರಿಸಿದರಂತೆ!

ಪಟ್ಟಿ: 1 ನಮ್ಮ ಯೋಜನೆಗಳಲ್ಲಿ ಶಿಕ್ಷಣದ ಹಣ[2]

	ಯೋಜನೆ	ಹಣ	ಶೇಕಡ ಶಿಕ್ಷಣದ ಹಣ	GNP
1951-55	ಮೊದಲನೆಯ ಯೋಜನೆ	2400 ಕೋಟಿ	7.8% (153)	1.2%
56-61	ಎರಡನೆಯ ಯೋಜನೆ	4690 "	5.8% (273)	N.A.
61-66	ಮೂರನೆಯ ಯೋಜನೆ	8572 "	6.9% (58.9)	2.7%
70-74	ನಾಲ್ಕನೆಯ ಯೋಜನೆ	15724 "	5.9% (788)	3.7%
74-79	ಐದನೆಯ ಯೋಜನೆ	38471 "	5.0% (1308)	4.5%
80-85	ಆರನೆಯ ಯೋಜನೆ	67500 "	3.4% (2625)	4.5%
85-90	ಏಳನೆಯ ಯೋಜನೆ	218729 "	2.55 (6382)	4.6%
91-96	ಎಂಟನೆಯ ಯೋಜನೆ	798000 "	3.65 (37905)	4.75%
.... .	ಒಂಬತ್ತನೆಯ ಯೋಜನೆ	880,000 "	4.45 (48400)	5.5%

ಮೊದಲನೆಯ ಯೋಜನೆಯಲ್ಲಿ 7.8% ಇದ್ದ ಶಿಕ್ಷಣದ ಹಣವು ಕ್ರಮೇಣ ಕಡಿಮೆಯಾಗಿದೆ. ಅದಕ್ಕೆ ಕಾರಣಗಳನ್ನು ಹುಡುಕುವ ಅಗತ್ಯವಿಲ್ಲ. ಈ ದೇಶದಲ್ಲಿ ಶಿಕ್ಷಣವು ಬಂಡವಾಳ ಹೂಡಿಕೆಯಾಗದೆ, ಕೇವಲ ಒಂದು ಸಾಮಾಜಿಕ ಜವಾಬ್ದಾರಿಯಾಯಿತು. ಯುದ್ಧಕಾಲದಲ್ಲಿ ಶಿಕ್ಷಣವು ಮೊದಲನೆಯ ಆಹುತಿ; ಶಾಂತಿ ಕಾಲದಲ್ಲಿ ಅದು ಕೊನೆಯ ಭಿಕ್ಷುಕ! ಒಂದು ದೇಶದ ಶೈಕ್ಷಣಿಕ ಹಣ ಆ ದೇಶದ ಭಾಂಡವಲು ಹೂಡಿಕೆ ಎಂಬ ಅಖ್ಯಾಯಿಕೆ ಬರುವಲ್ಲಿ ನಮಗೆ ಅಮೆರಿಕೆಯಿಂದ ಡಾ| ಷುಲ್ಟ್ ಬರಬೇಕಾಯಿತು. ಮೊದಲು ಅರ್ಥಶಾಸ್ತ್ರಜ್ಞರಾಗಿದ್ದ ಷುಲ್ಟ್‌ರು ನಂತರ ಶಿಕ್ಷಣದ ಅರ್ಥಶಾಸ್ತ್ರಜ್ಞರಾದರು. ಬಹುತೇಕ ಜಾಗತಿಕವಾಗಿ ಅವರು ಶಿಕ್ಷಣವನ್ನು ದೇಶದ ಭಾಂಡವಲು ಹೂಡಿಕೆಯಂತೆ


2. ಪಿ.ಜಿ. ಮಾರೀಹಾಳ- ಶಿಕ್ಷಣ; ರಾಜಹಂಸ ಪಬ್ಲಿಕೇಷನ್ಸ್, ಚನ್ನಮ್ಮನ ಕಿತ್ತೂರ 1983 p.p. 82

ಕಂಡರು. ಅವರ ಅಭಿಪ್ರಾಯದಲ್ಲಿ -

- ಶಿಕ್ಷಣವು ಒಂದು ಭಾಂಡವಲು ಹೂಡಿಕೆ (investment)
- ಅದು ಮಾನವನು ತನ್ನ ಮೇಲೆ ತಾನೇ ಹೂಡಿದ ಭಾಂಡವಲು
- ಈ ಭಾಂಡವಲಿನ ಪ್ರತಿಫಲಗಳನ್ನು ಅಳತೆ ಮಾಡಲು ಸಾಧ್ಯ.

ಶಿಕ್ಷಣ - ದೇಶಾಭಿವೃದ್ಧಿ

1950ರಿಂದೀಚೆಗೆ ಜಗತ್ತು ಕಂಡುಕೊಂಡ ಸತ್ಯಗಳಲ್ಲಿ `ಶಿಕ್ಷಣ'ದ ಪಾರಮ್ಯವು ಮಹತ್ವದ್ದಾಗಿದೆ. ಶಿಕ್ಷಣವೂ ಕೂಡ ಒಂದು ಭಾಂಡವಲು ಹೂಡಿಕೆ ಎಂಬ ಗ್ರಹಿಕೆ ಆಗ ಜನಜನಿತವಾದದ್ದು-ಈಗಂತೂ, ಜಾಗತಿಕ ಮನ್ವಂತರವಾಗಿ ಬೆಳೆಯಿತು. ಶಿಕ್ಷಣಕ್ಕೂ ಒಂದು ಗುಣಾಕಾರವಿದೆ.[3]



ಶಿಕ್ಷಣವು ದೇಶದ ಅಭಿವೃದ್ಧಿಗೆ ಹರಿಕಾರನಾಗಬೇಕು. ದೇಶದ ಒಕ್ಕಲುತನ, ಕೈಗಾರಿಕೆ, ಸೇವಾಕ್ಷೇತ್ರಗಳಿಗೆ ಬೇಕಾಗುವ ಮಾನವ ಸಂಪನ್ಮೂಲಗಳ ಒದಗಣೆ ಶಿಕ್ಷಣದ ಹೊಣೆ. ದೇಶಕ್ಕೆ ಅಗತ್ಯದ ಶಿಕ್ಷಿತಜನ ನಮಗೆ ಬೇಕು. ಅವರು ದೇಶದಲ್ಲಿ ಸೃಜನಶೀಲರಾಗಿ ದುಡಿದು, ದೇಶದ ಬೆಳವಣಿಗೆಗೆ ಕಾರಣರಾಗಬೇಕು. ಒಂದು ಚಿಂತನೆಯ ಪ್ರಕಾರ ಬೆಳವಣಿಗೆ ಎಂದರೇನು?

ಬೆಳವಣಿಗೆ = ಅಭಿವೃದ್ಧಿ + ಬದಲಾವಣೆ

(development) = (growth) + (change)

ಭಾರತದಂತಹ ಪುರಾತನ ದೇಶಕ್ಕೆ ಹತ್ತುಸಾವಿರ ವರ್ಷಗಳ ಲಿಖಿತ ಇತಿಹಾಸವಿದೆ. ಈ ಪರಂಪರೆಯ ಬೇರುಗಳನ್ನು ರಕ್ಷಿಸಿಕೊಂಡು, ಹೊಸಚಿಗುರನ್ನು ನಾವು ಪಡೆಯಬೇಕು.

3. Marihal's Multiplier Theory of Education

ಈ ಕಾರ್ಯಕ್ಕಾಗಿ ನಮಗೆ ಒಕ್ಕಲುತನಕ್ಕಾಗಿ ಒಕ್ಕಲುತನದ ಶಿಕ್ಷಣಬೇಕು; ಕೈಗಾರಿಕೆಗಳಿಗಾಗಿ ಕೈಗಾರಿಕಾಶಿಕ್ಷಣ ಬೇಕು ; ಸೇವಾಕ್ಷೇತ್ರಗಳಿಗಾಗಿ, ತರಬೇತಿಶಿಕ್ಷಣ ಬೇಕು. ಇವೆಲ್ಲ ಯೋಜನಾಬದ್ಧವಾಗಿ ಬೆಳೆಯಬೇಕು.[4]

	ಅಮೆರಿಕಾ (ಜನಸಂಖ್ಯೆ)	ಭಾರತ (ಜನಸಂಖ್ಯೆ)
ಒಕ್ಕಲುತನ	16%	74%
ಕೈಗಾರಿಕೆಗಳು	44%	20%
ಸೇವಾಕ್ಷೇತ್ರ	40%	6%

ಈ ಪಂಚಿಕೆಯಲ್ಲಿ ಅಮೇರಿಕೆಗೆ ನಿರುದ್ಯೋಗದ ಸಮಸ್ಯೆಯಿಲ್ಲ. ಭಾರತಕ್ಕೆ ಈ ಸಮಸ್ಯೆ ದೊಡ್ಡದಾಗುತ್ತದೆ. ಕೋಟಿಗಟ್ಟಳೆ ಯುವಕರು ಶಿಕ್ಷಣಹೊಂದಿ ನಿರುದ್ಯೋಗಿಗಳಾದ ಚಿತ್ರ ನಮ್ಮೆದುರಿಗಿದೆ (Educated unemployment). ಅದಕ್ಕೆ ಕಾರಣವೆಂದರೆ, ನಮ್ಮ ಯುವಕರ ಶಿಕ್ಷಣ ನಿರುದ್ಯೋಗಿಗಳನ್ನು ನಿರ್ಮಿಸಲಿಲ್ಲವೇ? ಈ ಮಾತನ್ನು ಡಾ। ಕೂಂಬ್ಸ್ ಬಹಳ ಚೆನ್ನಾಗಿ ಹೇಳಿದ್ದಾರೆ. ಅವರ ಅಭಿಪ್ರಾಯದಲ್ಲಿ ಭಾರತವು ಪಾಶ್ಚಾತ್ಯದೇಶಗಳ ಅಂಧಾನುಕರಣೆ ಮಾಡಬಾರದು. ಅವರ ಸಮಸ್ಯೆಗಳೇ ಬೇರೆ; ನಮ್ಮ ಸಮಸ್ಯೆಗಳೇ ಬೇರೆ. ಅವುಗಳ ಪರಿಹಾರಗಳೂ ಬೇರೆ-ಬೇರೆ.

ಇನ್ನೊಂದು ಸಂದರ್ಭ ಕೂಂಬ್ಸ್ ಬರೆದರು: 'A developing country can land in deep trouble by slavishly adhering to the educational forms and rituals of industrial countries, in a context where they simply do not fit....'

ಬೇರೆ ದೇಶಗಳ ಅನುಭವಗಳು ನಿಮಗೆ ಹೊಂದಬೇಕೆಂಬ ಕಡ್ಡಾಯವೇನಿಲ್ಲ. ಅನೇಕ ಸಂದರ್ಭಗಳಲ್ಲಿ ಅವು ನಮ್ಮನ್ನು ಪೇಚಿನಲ್ಲಿ ಸಿಲುಕಿಸಿವೆ. ತಾಂತ್ರಿಕಶಿಕ್ಷಣ ಬೇಕೆಂದು ಅದನ್ನು ಸಿಕ್ಕಾಪಟ್ಟೆ ವಿಸ್ತರಿಸಿ ನಾವು ಅನುಭವಿಸಿದ ಅನಾಹುತ 1969-74ರವರೆಗೆ ನಮ್ಮೊಡನಿತ್ತಲ್ಲವೇ?

ಅದಕ್ಕಾಗಿ ಷುಲ್ಟ್ಜರ ಮಾತು ಈಗ ನಮಗೆ ಪಥ್ಯವಾಗಬೇಕು: 'The failure to treat human resources explicitly as a form of capital as a produced means of production, or a product of investment has fostered the retention of the classical notion of labour as a capacity to do manual work requiring the knowledge and still, a capacity with which according to this notion, labourers are endowed about equality; the notion of labour was wrong in the classical period, and is potentially wrong now.[5]

ದೇಶದ ಅಭಿವೃದ್ಧಿಯಲ್ಲಿ, ಬಡದೇಶಗಳಲ್ಲಿ ವಿಸ್ತರಿಸಿಕೊಳ್ಳುತ್ತಿರುವ ಶಿಕ್ಷಣಕ್ಷೇತ್ರದಲ್ಲಿ,

---

4. P.H. Coombs - The World Educational Crisis; W.H. Wheeler & Co. Alahabad
5. T.W. Scholtz., Investment in Human Capital. The American Economic Review, Vol. 51, No. 1, March 1961; p.p. 3)

ಪ್ರಾಥಮಿಕ - ಮಾಧ್ಯಮಿಕ ಶಿಕ್ಷಣದಿಂದಾಗಿ, ಆ ದೇಶಗಳಲ್ಲಿ ಗಣನೀಯ ಅಭಿವೃದ್ಧಿ ಬಂದುದನ್ನು ಹಲವಾರು ಸಂಶೋಧನೆಗಳು ನಮಗೆ ಹೇಳುತ್ತಿವೆ.

ಈ ದಿಸೆಯಲ್ಲಿ ಭಾರತವು ಶಿಕ್ಷಣಕ್ಕಾಗಿ ಖರ್ಚಿಸಿದ್ದೆಷ್ಟು?

ಪಟ್ಟಿ 2 : ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚ (ಜಾಗತಿಕವಾಗಿ)

ರಶಿಯಾ	:	7.3%	(ಜಿ.ಎನ್.ಪಿ)
ಅಮೆರಿಕಾ	:	6.3%	"
ಡೆನ್ಮಾರ್ಕ	:	6.5%	"
ಕಾಸ್ಟಾರಿಕಾ	:	6.4%	"
ನಾರ್ವೆ	:	6.3%	"
ಭಾರತ	:	4.75%	"

ಈಗೇನೋ ಭಾರತವು ತನ್ನ ಜಿ.ಡಿ.ಪಿ. 6% ಶಿಕ್ಷಣಕ್ಕೆ ಖರ್ಚು ಮಾಡುವ ಬಗ್ಗೆ ಊಹಾಪೋಹಗಳನ್ನು ತಂದಿದೆ. 1998 (ಮೇ) ಕೇಂದ್ರ ಸರಕಾರದ ಬಜೆಟ್ 1998ರ ಶಿಕ್ಷಣಕ್ಷೇತ್ರದವರಿಗೆಲ್ಲ ಮಹತ್ವದ ಘಟನೆಯಾಗಿತ್ತು. ಭಾರತದ 50 ವರ್ಷಗಳ ಇತಿಹಾಸದಲ್ಲಿ ಮೊದಲು ಸಾರೆ ಶಿಕ್ಷಣಕ್ಕೆ ಬಜೆಟ್ಟಿನಲ್ಲಿ 50% ಶೇಕಡ ಹಣ ಹೆಚ್ಚು ಮಾಡಲಾಗಿದೆ. 6% ಜಿ.ಡಿ.ಪಿ. ಹಣವನ್ನು ಶಿಕ್ಷಣಕ್ಕೆ ವ್ಯಯಿಸುವ ಸಂಕಲ್ಪ ಮಾಡಲಾಗಿದೆ. ಆ ಜಾಡಿನಲ್ಲಿ ವಿಚಾರಿಸುವಾಗ ನಮ್ಮ ವಿತ್ತಮಂತ್ರಿಗಳು ಹೇಳಿದ್ದಂತೆ '........ sustained increase in social sector.......' ಈ ಮಾತು ಸುದೀರ್ಘವಾಗಿ ಪ್ರತಿಕ್ರಿಯಿಸುವಂತಿದೆ. ಆದರೆ, ಅಮೇರಿಕೆಯ ದಿಗ್ಬಂಧನದಿಂದ ಏನಾದೀತು? ಈ ಹೆಚ್ಚಳವು ಶಿಕ್ಷಣಕ್ಷೇತ್ರದ 'ಪಗಾರಿಗ'ರಿಗಾಗಿ 90% ಖರ್ಚಾಗುತ್ತದೆ. ಅಂತೆಯೇ 'capital expenditure'ಗಳೂ ಕಾರಣವಾಗದಿಲ್ಲ.

ಈ ಹಿಂದೆ 4716 ಕೋಟಿ ಇದ್ದ ಹಣ ಈಗ 7047 ಕೋಟಿಗೆ ವಿಸ್ತರಿಸಲಾಗಿದೆ. ಅದರಲ್ಲಿ ಕಡ್ಡಾಯದ ಪ್ರಾಥಮಿಕ ಶಿಕ್ಷಣವು ಕೂಡಿಕೊಂಡಿದೆ. ನಮ್ಮ ಯೋಜನೆಗಾಗಿ 3351 ಕೋಟಿ ಇದ್ದ ಹಣ ಈಗ 4245 ಕೋಟಿಗೆ ವಿಸ್ತರಿಸಿದ್ದು ವಿಚಾರಣೀಯ ಸಂದರ್ಭ. ದೇಶದ ಸೈನ್ಯಕ್ಕೆ ನಾವು 30% ಹಣ ವಿನಿಯೋಗಿಸುತ್ತೇವೆ. ಅದರ ನಂತರದಲ್ಲಿ ಶಿಕ್ಷಣದ ಹಣವು ಮುಖ್ಯವಾಗಿದೆ.

ಶಿಕ್ಷಣದಲ್ಲಿ ಅರ್ಥಶಾಸ್ತ್ರ ಪ್ರವೇಶ

1950 ರಿಂದೀಚೆಗೆ ಜಾಗತಿಕವಾಗಿ ಶಿಕ್ಷಣವನ್ನು ಅರ್ಥಶಾಸ್ತ್ರಕ್ಕೆ ಲಗ್ನ ಮಾಡಲಾಗಿದೆ. ಶಿಕ್ಷಣದ ಖರ್ಚು 'ಖರ್ಚು' ಆಗದೆ ಅದು ಭಾಂಡವಾಲು ಹೂಡಿಕೆಯಾಯಿತು. ಜಾಗತಿಕವಾಗಿ 6 ರೀತಿಯ ಶೈಕ್ಷಣಿಕ ಯೋಜನೆಗಳು ಬಂದಿವೆ:[6]

- Cost benefit approach (ಕ್ರಯ - ಲಾಭಗಳ ದಾರಿ)
- Man-power approach (ಮಾನವಶಕ್ತಿ ದಾರಿ)
- Human Resources development approach (ಮಾನವ

6. Sateshwari Saxena - Educational Planning in India.

ಸಂಪನ್ಮೂಲಗಳ ಅಭಿವೃದ್ಧಿ)

- Social - Demand Approach (ಸಾಮಾಜಿಕ ಬೇಡಿಕೆ)
- Rate of Returns approach (ಮರು ತಿರುಗಿಸುವ ದಾರಿ)
- Integrated Approach (ಸಮನ್ವಯ ದಾರಿ)

ಇವೆಲ್ಲವುಗಳಲ್ಲಿ 'cost benefit model'[7] ಮತ್ತು 'cost-effectiveness model'ಗಳು ಶಿಕ್ಷಣದ ಅರ್ಥವ್ಯವಸ್ಥೆಯಲ್ಲಿ ಗಣನೀಯ ಪಾತ್ರವನ್ನು ನೀಡುತ್ತವೆ. ಅರ್ಥಶಾಸ್ತ್ರದ ಅನೇಕ 'ಮಾಡೆಲ್' (model)ಗಳನ್ನು ಶಿಕ್ಷಣಕ್ಕೆ 'ಲಾಗೂ' ಮಾಡುವ ಪ್ರಯತ್ನ ಈಗಿನದಾಗಿದೆ.

- Investment - Consumption (ಭಾಂಡವಲು ಹೂಡಿಕೆ - ಉಪಭೋಗ)
- Law of diminishing returns (ಮರು ತಿರುಗಿಸುವಲ್ಲಿ ಕ್ರಮೇಣ ಕಡಿಮೆಮಾಡು)
- Costs (ಕ್ರಯಗಳು)
- Income - Expenditure (ಆದಾಯ-ಖರ್ಚು)
- Rate of Returns (ಪ್ರತಿಫಲದ ಅನುಕ್ರಮಣಿಕೆ)
- Consumption (ಉಪಭೋಗ)
- Demand - Supply (ಬೇಡಿಕೆ - ಒದಗಣೆ)
- Capital-Output-ratio (ಭಾಂಡವಲು-ಉತ್ಪಾದನಾ ಪ್ರಮಾಣ)
- Capital formation (ಭಾಂಡವಲಿನ ಉತ್ಪಾದನೆ)
- National Income concept (ರಾಷ್ಟ್ರೀಯ ಆದಾಯ ಪರಿಕಲ್ಪನೆ)
- Opportunity cost (ಸಾಂದರ್ಭಿಕ ಕ್ರಯ)
- Income foregone (ಆದಾಯ ಕಡೆಗಣಿಕೆ)
- Factors of Production (ಉತ್ಪಾದನಾ ಲವಾಜಮೆಗಳು)
- Profit-Loss (ಲಾಭ-ಹಾನಿ)
- Price market - (ಕ್ರಯದ ಮಾರುಕಟ್ಟೆ)
- Human Resource development (ಮಾನವ ಸಂಪನ್ಮೂಲಗಳ ಅಭಿವೃದ್ಧಿ)

ಜಾರ್ಜ್ ಹೇಳುವಂತೆ 'Human capital is basically formed by education, training and renders its productive activities mainly through labour market' (ಮಾನವ ಭಾಂಡವಲು ಶಿಕ್ಷಣದಿಂದ ನಿರ್ಮಾಣವಾಗುತ್ತದೆ; ತರಬೇತಿಗಳಿಂದಲೂ ನಿರ್ಮಾಣವಾಗುತ್ತದೆ. ಅಂತೆಯೇ, ಕಾರ್ಮಿಕ ಪೇಟೆಯ ಮುಖಾಂತರ ತನ್ನ ಉತ್ಪಾದನಾಶೀಲ ಚಟುವಟಿಕೆಗಳನ್ನು ನೀಡುತ್ತದೆ).

ಇತ್ತೀಚೆಗಂತೂ, ಶಿಕ್ಷಣ-ಅರ್ಥಶಾಸ್ತ್ರಗಳ ಬಾಂಧವ್ಯದ ಹೇರಳ ಸಂಶೋಧನೆಗಳು ನಡೆದಿವೆ:

- ❑ ದೇಶದ ಆರ್ಥಿಕ ಬೆಳವಣಿಗೆಗೆ ಶಿಕ್ಷಣದ ಕೊಡುಗೆ

---

7. George Psacharopoulas - Economics of Education.

- ಶಿಕ್ಷಣದಲ್ಲಿ ಭಾಂಡವಲು ಹೂಡಿಕೆಯಿಂದ ಬರುವ ಲಾಭ
- ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಿತ ಮಾನವಶಕ್ತಿಯ ಪಾತ್ರ
- ಶಿಕ್ಷಣದ ಖರ್ಚು
- ಶಿಕ್ಷಣದ ಅರ್ಥವ್ಯವಸ್ಥೆ
- ಶಿಕ್ಷಣದಿಂದ ಆಗುವ ಉತ್ಪಾದನೆ - ವಿನಿಮಯಗಳ ಪರಿಣಾಮಗಳು
- ಮಾನವ ಭಾಂಡವಲು
- ಶಿಕ್ಷಣದಲ್ಲಿ ಕ್ರಯದ ಪಾತ್ರ
- ಭವಿಷ್ಯತ್ತಿನ ಮಾನವಶಕ್ತಿಯ ಉತ್ಪಾದನಾ ಊಹೆ
- ಶಿಕ್ಷಣ ಮತ್ತು ಸಂಪತ್ತಿನ ವಿತರಣೆ.

ಈ ದೇಶದ ಪ್ರಾಥಮಿಕ ಶಿಕ್ಷಣದ ಅರ್ಥವ್ಯವಸ್ಥೆ

1950ರಲ್ಲಿ ನಮ್ಮ ಸಂವಿಧಾನವು ನಿರ್ಮಿಸಲ್ಪಟ್ಟಿದೆ. ಅದರ 45ನೆಯ ಮಾರ್ಗಸೂಚಿ ಪಟ್ಟಿಯು ಹೇಳುತ್ತದೆ[9]: The STATE shall endeavour to provide free-compulsory-universal primary education for all, to the age group of 6-14, within a period of 10 years after the adoption of the constitution.' ಈ ಮಾತು ಹೇಳಿ 50 ವರ್ಷಗಳಾದವು. ನಮ್ಮ ಸಾಕ್ಷರರ ಸಂಖ್ಯೆ ಈಗ್ಗೂ (1991) ಶೇಕಡ 52%ಕ್ಕೆ ನಿಲುಕಿದೆ.

ವರ್ಷಕ್ಕೆರಡು ಆಸ್ಟ್ರೇಲಿಯಾ ದೇಶವನ್ನು ನಾವು ಜನಸಂಖ್ಯೆಯಲ್ಲಿ ನಿರ್ಮಿಸುತ್ತಿದ್ದೇವೆ (2 1/2 ಕೋಟಿ). ಒಂದು ಅಂದಾಜಿನ ಪ್ರಕಾರ 2010ಕ್ಕೆ ಭಾರತದ ಜನಸಂಖ್ಯೆ 125 ಕೋಟಿ ಆಗುತ್ತದೆ. ಇದೇ ವೇಗದಲ್ಲಿ ನಾವು ಪ್ರಾಥಮಿಕ ಶಿಕ್ಷಣವನ್ನು ತರದಿದ್ದರೆ. ದೇಶದ ಅರ್ಧಸಂಖ್ಯೆ ನಿರಕ್ಷರಿಗಳಾಗಿ ಉಳಿಯುತ್ತಾರಲ್ಲವೇ? ಈ ನಿರಕ್ಷರಿಗಳ ಬಳ್ಳಿಗುರುಡರನ್ನು ಕಟ್ಟಿಕೊಂಡು ನಾವು ಹಳ್ಳಕ್ಕೆ ಬೀಳುತ್ತೇವೆ!

ಈ ಮಾತಿಗೆ ಪೂರಕವೆಂಬಂತೆ, ಭಾರತದ ಪ್ರಾಥಮಿಕ ಶಿಕ್ಷಣಕ್ಕೆ ಗಣನೀಯ ಪ್ರಮಾಣದ ಹಣತೊಡಗಿಸುವಿಕೆ ಬೇಕು. ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಧೋರಣೆಯ ಕರಡಿನ ಒಂದು ಮಾತು ನಾವು ಪರಾಂಬರಿಸಬೇಕು[10]: If spending on Education is costly, then not spending on it would be costlier...'

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಈಗ ನಿಜವಾಗಿಯೇ ಕಡ್ಡಾಯವಾಗುವುದು. ಅದಕ್ಕಾಗಿ ಸಾರ್ವಜನಿಕ ಪ್ರಕ್ರಿಯೆಗಳು ನಡೆಯಬೇಕು. ಅದಕ್ಕಾಗಿ ಹಣದ ಒದಗಣೆ ನಿರಂತರ ನಿಲ್ಲಬಾರದು. ಅದಕ್ಕಾಗಿ ಸಮಾಜೋ-ರಾಜ್ಯಕೀಯ ಬದಲಾವಣೆಗಳು ಬರಬೇಕು. 1991ರ ಖಾನೇಸುಮಾರಿಯ ಪ್ರಕಾರ-

- 321 ಮಿಲಿಯ ನಿರಕ್ಷರಿಗಳು
- ಅವರಲ್ಲಿ 125 ಮಿಲಿಯ ಗಂಡಸರು; 196 ಮಿಲಿಯ ಹೆಂಗಸರು.

ಈ ಸಂಖ್ಯೆ ಬಹುತೇಕ ಯಾವ ದೇಶದಲ್ಲಿಯೂ ಇದ್ದಂತಿಲ್ಲ. 1951ರಲ್ಲಿ

9. Govt. of India - The Constitution of India, Government of India, 1950.
10. National Policy on Education, 1985-86, Government of India, New Delhi.

ಭಾರತದಲ್ಲಿದ್ದ ಜನಸಂಖ್ಯೆಯಷ್ಟು ಜನ ಈಗ ಈ ದೇಶದಲ್ಲಿ ನಿರಕ್ಷರಕುಕ್ಷಿಗಳು! ಇವರಲ್ಲಿ ಸ್ತ್ರೀಯರು ಹೆಚ್ಚಿನವರು.

- 20% ರಾಜಸ್ಥಾನದಲ್ಲಿ ಸ್ತ್ರೀಯರು ಶಿಕ್ಷಿತರು; ಪರಿಶಿಷ್ಟರಲ್ಲಿ 4.4% ಮಾತ್ರ ಸ್ತ್ರೀಯರು ಶಿಕ್ಷಿತರು
- 52% ಬಿಹಾರದ ಗಂಡಸರು ಶಿಕ್ಷಿತರು
- ದಲಿತರಲ್ಲಿ 46% ಗಂಡಸರು, 19% ಹೆಂಗಸರು ಶಿಕ್ಷಿತರು

ಕೇರಳರಾಜ್ಯವೊಂದು ಮಾತ್ರ ಈ ದಿಸೆಯಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧಿಸಿದೆ. ಅದು ಒಂದು ರೀತಿಯಲ್ಲಿ ಅಪವಾದ. 1995ರ ಒಂದು ಸಮೀಕ್ಷೆಯ ಪ್ರಕಾರ ದೇಶದ 36 ಮಿಲಿಯ ಹುಡುಗರು, 42 ಮಿಲಿಯ ಹುಡುಗಿಯರು ಶಾಲೆಯ ಹೊರಗೆ ಎಲ್ಲಿಯೋ ಇದ್ದಾರಲ್ಲವೇ?

ಪ್ರಾಥಮಿಕ ಶಿಕ್ಷಣದ ದುರ್ದೆಸೆ ಇಲ್ಲಿಗೇನೇ ನಿಂತಿಲ್ಲ:

- 45% ಶಾಲೆಗಳು ಏಕೋಪಾಧ್ಯಾಯ ಶಾಲೆಗಳು
- 32% ಶಾಲೆಗಳು ಇಬ್ಬರು ಶಿಕ್ಷಕರ ಶಾಲೆಗಳು
- 40% ಶಾಲೆಗಳಿಗೆ ಪಕ್ಕಾ ಕಟ್ಟಡಗಳಿಲ್ಲ
- 9% ಶಾಲೆಗಳು ಕಟ್ಟಡಗಳೇ ಇಲ್ಲದೆ ಗಿಡದ ಬುಡದಲ್ಲಿ
- 40% ಶಾಲೆಗಳಿಗೆ ಕಪ್ಪುಹಲಗೆಗಳಿಲ್ಲ
- 70% ಶಾಲೆಗಳಿಗೆ ಗ್ರಂಥಾಲಯಗಳಿಲ್ಲ
- 60% ಶಾಲೆಗಳಿಗೆ ಕುಡಿಯುವ ನೀರಿನ ಅನುಕೂಲಗಳಿಲ್ಲ
- 89% ಶಾಲೆಗಳಿಗೆ ಕಕ್ಕಸುಗಳಿಲ್ಲ
- 44 ಮಿಲಿಯ ಹುಡುಗರು ಶಾಲೆಯ ಹೊರಗೆ ಆಳುಗಳಾಗಿ ಕಾರ್ಯಮಾಡುತ್ತಾರೆ.

ಪಟ್ಟಿ 3: ಶಾಲೆಗೆ ಹಾಜರಾತಿಯ ಮಕ್ಕಳ ಸಮೀಕ್ಷೆ

5-9 ವಯಸ್ಕ (ಹಾಜರಿದ್ದ)	10-14 ವಯಸ್ಕ (ಹಾಜರಿದ್ದ)	5-14 ವಯಸ್ಕ (ಹಾಜರಿದ್ದ)	6-11 ವಯಸ್ಕ (ಹಾಜರಿಲ್ಲದ)
38.85	62.38	50.14	78191413

ಇತ್ತೀಚಿನ 'World Bank Review', ಶಿಕ್ಷಣದ ಬಗೆಗಿನದು, ಹೇಳುವಂತೆ, 'Evidence of reductions in public expenditures during adjustments is perversive'.[11] ಈ ಮಾತು ಎಷ್ಟು ಸತ್ಯವಾದದ್ದು!

ಈ ಹೊಂದಾಣಿಕೆಗಳು ಶಿಕ್ಷಣದ ಎಲ್ಲ ಸೂಚಕಗಳೊಂದಿಗೆ ಶಿಕ್ಷಣದ ಅವನತಿಯನ್ನು ಹೇಳುತ್ತವಲ್ಲವೇ?

- ಶಿಕ್ಷಣದ ಖರ್ಚಿನ ಬಗ್ಗೆ
- ಹಾಜರಾತಿಯ ಬಗ್ಗೆ
- ಶಿಕ್ಷಕ-ವಿದ್ಯಾರ್ಥಿ ಪ್ರಮಾಣದಲ್ಲಿ (Ratio)

---

11. A World Bank Review (No. 85-1991)

○ ಶಿಕ್ಷಕರ ಸಿದ್ಧತೆಗಳ ಬಗ್ಗೆ

ಭಾರತವಲ್ಲಿ ಗಣನೀಯ ರೀತಿಯಲ್ಲಿ ಕೆಲವು ಶಿಕ್ಷಣದ ಖರ್ಚಿನ ಆಖ್ಯಾಯಿಕೆಗಳಿವೆ:

- ▼ ಶಿಕ್ಷಣವು ಈಗ ಉಭಯಸೂಚಿ ಪಟ್ಟಿಯಲ್ಲಿದೆಯಾದರೂ. ಕೇಂದ್ರದ ಖರ್ಚು ರಾಜ್ಯಗಳಿಗಿಂತ ಕಡಿಮೆಯಿದೆ. ಅದು ಕೇವಲ 11% ಮಾತ್ರ.
- ▼ ಶಿಕ್ಷಣದ ಖರ್ಚು ಹೆಚ್ಚು ವ್ಯಯಕ್ಕಾಗಿದ್ದು ಕೇವಲ 1% ಮಾತ್ರ ಭಾಂಡವಲು ಹೂಡಿಕೆಯಾಗಿದೆ.
- ▼ ಶಿಕ್ಷಣದ ಒಟ್ಟುಮೊತ್ತವು ಹೆಚ್ಚು ಯೋಜನೇತರ ಖರ್ಚಿನಲ್ಲಿ ನಮ್ಮದಾಗುತ್ತದೆ. ಕೇವಲ 12% ಮಾತ್ರ ಯೋಜನೆಯ ಖರ್ಚಾಗುತ್ತದೆ.

ಶಿಕ್ಷಣದ ಸಾರ್ವಜನಿಕ ಖರ್ಚು. ಈ ದೇಶದಲ್ಲಿ ಕ್ರಮೇಣ ಹೆಚ್ಚಾಗುತ್ತಲೇ ಇದೆ. (ಈ ಹಿಂದಿನ 50 ವರ್ಷಗಳಲ್ಲಿ) 1950-1990ರವರೆಗೆ ಪ್ರತಿವರ್ಷ. ಪ್ರತಿ ವಿದ್ಯಾರ್ಥಿಗೆ 1.9% 116 ದೇಶಗಳಲ್ಲಿ ಖರ್ಚಾಗುತ್ತಿದೆ. ಭಾರತವು ಶಿಕ್ಷಣದ ಖರ್ಚಿನ ಮಾಲಿಕೆಯಲ್ಲಿ 82ನೇ ದೇಶವಾಗಿದೆ. ಭಾರತದಲ್ಲಿ ಹೆಚ್ಚಿನ ಖರ್ಚು ರಾಜ್ಯಗಳ ಸ್ವತ್ತಾಗಿದೆ:

ಪಟ್ಟಿ 4: ಕೇಂದ್ರ ಸರಕಾರದ ಯೋಜನಾ ಕಕ್ಷೆಯಲ್ಲಿ ಶಿಕ್ಷಣದ ಖರ್ಚು

1989-90	6485	(ಮಿಲಿಯನ್)	ಸೂಚಕ (Index) 100
1990-91	6772	"	94.2
1991-92	7454	"	91.5
1992-93	8412	"	93.4
1993-94	11069	"	115.1
1994-95	13176	"	121.3

ಪ್ರಾಥಮಿಕ ಶಿಕ್ಷಣಕ್ಕಾಗಿ ನಮ್ಮ ಭಾಂಡವಲು ಹೂಡಿಕೆ ಎಸ್.ಡಿ.ಪಿ. ರೀತ್ಯಾ ಶೇ. 4%ಗಿಂತ ಕಡಿಮೆಯಾಗಿರುವುದು ದಿಲ್ಲಿ. ಪಂಜಾಬ್. ಕೇರಳ. ಮಹಾರಾಷ್ಟ್ರಗಳಲ್ಲಿ ಕಂಡುಬರುತ್ತಿದೆ. ಈ ಮಾಲಿಕೆಯಲ್ಲಿ ಇನ್ನೂ ಅನೇಕ ‘ರಾಜ್ಯಗಳು ಸೇರಿಕೊಳ್ಳುತ್ತದೆ. ಅಂತೆಯೇ ಕಾಶ್ಮೀರ. ಓರಿಸ್ಸಾ, ರಾಜಸ್ಥಾನ. ಉತ್ತರಪ್ರದೇಶಗಳು ಪ್ರಾಥಮಿಕ ಶಿಕ್ಷಣದಲ್ಲಿ ಇನ್ನು ಹೆಚ್ಚಿನ ಭಾಂಡವಲು ಹೂಡಿಕೆಯನ್ನು ಬರಲಿರುವ 9ನೆಯ ಯೋಜನೆಯಲ್ಲಿ ಕಂಡುಕೊಳ್ಳದಿದ್ದರೆ. ಅವು ನಿರಂತರ ಹಿಂದುಳಿಯುತ್ತವಲ್ಲವೇ? ಸಮಗ್ರ ಭಾರತಕ್ಕೆ ಕೇವಲ 1.2% ಜಿಡಿಪಿ ನಾವು ವ್ಯಯಿಸಿದ್ದು ಅದು ಹೆಚ್ಚಾಗುವುದು ಅಗತ್ಯವಿದೆ. ಒಂದು ನಿಯತಕಾಲಿಕದಲ್ಲಿ ಮೂಡಿದ ಮಾತಿನಂತೆ.[12] '........If at all one is to calculate unit expenditure functions for the past, then factors like student - teacher ratio, density of population, salaries etc., should be included as explanatory variables, in the estimation of the expenditure function.' ಭಾರತದ ಇಂದಿನ ಸ್ಥಿತಿಯಲ್ಲಿ ನಮ್ಮ ರಾಜಕೀಯವು ತನ್ನ ಶೈಕ್ಷಣಿಕ ನಿಲುಮೆಯನ್ನು ಬದಲಿಸಿಕೊಳ್ಳಬೇಕು. ಕೇಂದ್ರದಲ್ಲಿಯಾಗಲೀ. ರಾಜ್ಯಗಳಲ್ಲಿಯಾಗಲಿ. ಯಾವ

12. Govt. of India, Expenditure budget of different years.

ಪಕ್ಷಗಳ ಸರಕಾರಗಳೇ ಇರಲಿ. ಅವೆಲ್ಲ ಈಗ ದೇಶದ ಶೀಘ್ರ ಅಭಿವೃದ್ಧಿಯ ಚಿಂತನೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಹೆಣಗಬೇಕು. ಈ ದೇಶದ ಅಭಿವೃದ್ಧಿ ಮಾರ್ಗದಲ್ಲಿ ಪ್ರಾಥಮಿಕಶಿಕ್ಷಣವು ಅಸಾಧಾರಣ ಕಾರ್ಯ ಮಾಡುವ ಧಾರ್ಷ್ಟ್ಯವನ್ನು ಹೊಂದಿದೆಯೆಂ ಸಿಲ್ಲು ನಮ್ಮವರಿಗೆ ಬೇಗ ತಿಳಿಯಬೇಕು. ಭಾರತವು ಅಣುಬಾಂಬಿನಿಂ ಗಟ್ಟಿಯಾಗುವುದಕ್ಕಿಂತ. ಅಭಿವೃದ್ಧಿಯಿಂದ ಗಟ್ಟಿಗೊಳ್ಳುವಲ್ಲಿ ಶಿಕ್ಷಣದ ಪಾತ್ರ ಹಿರಿದಾದುದಾಗಿದೆ.

ಪಟ್ಟಿ 5 : ರಾಷ್ಟ್ರೀಯ ಆದಾಯ ಮತ್ತು ಶಿಕ್ಷಣದ ಖರ್ಚು 1996[13]

ದೇಶ	ದೇಶದ ಆದಾಯದ ತಲಾ ಆದಾಯ $ (ಡಾಲರ್‌ಗಳಲ್ಲಿ)	ಶಿಕ್ಷಣದ ಸಾರ್ವಜನಿಕ ಖರ್ಚು (%)	ದೇಶದ ಆದಾಯ ಶೈಕ್ಷಣಿಕ ಶೇಕಡಾ ಖರ್ಚು (%)
ಅಮೆರಿಕ	2192	97.0	4.6
ಫ್ರಾನ್ಸ್	960	32.5	3.0
ಟರ್ಕಿ	460	10.0	2.2
ಜಪಾನು	250	14.6	5.7
ಟ್ಯುನೀಸಿಯಾ	159	6.7	3.4
ಗ್ವಾಟೆಮಾಲಾ	155	3.5	2.4
ಪೇರೂ	124	4.0	5.9
ಈಜಿಪ್ಟ್	114	4.9	2.0
ಥಾಯಲ್ಯಾಂಡ್	102	2.9	1.7
ನೈಜೀರಿಯಾ	70	1.3	1.9
ಭಾರತ	66	1.3	3.7
ಬಾಂಗ್ಲದೇಶ	56	1.7	1.0
ಪಾಕಿಸ್ತಾನ	51	0.6	3.2
ಬರ್ಮಾ	42	1.6	2.6

ಪಟ್ಟಿ 6: ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಶೈಕ್ಷಣಿಕ ಖರ್ಚು[14]

ಯೋಜನೆ	ಯೋಜನೆಯ ವೆಚ್ಚ	ಶಿಕ್ಷಣ ಯೋಜನಾ ಪಟ್ಟಿ	ಸಮಗ್ರ ಯೋಜನೆಯಲ್ಲಿ ಶಿಕ್ಷಣದ ಶೇಕಡ
I	2400	153	7.8%
II	4800	277	6.4%

13. ಅಂತರರಾಷ್ಟ್ರೀಯ ವರದಿಯೊಂದರ ಅಂಕಿ-ಸಂಖ್ಯೆಗಳ ಪ್ರಕಾರ.

14. ಡಾ। ಅಧ್ಯಾಪಕರವರ ಒಂದು ಭೇಟಿಯಲ್ಲಿ ಹೇಳಿದ್ದಂತೆ.

III	8209	560	7.3%
IV	24882	822	3.5%
V	53441	1285	3.3%
VI	172210	2524	1.5%
VII	180000	5733	N.A.
VIII	1798000	7980	N.A.
IX	-	-	-

ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಅಂದಿನ ಒಟ್ಟು ಯೋಜನೆಯ 7.8% ಹಣ ಶಿಕ್ಷಣಕ್ಕೆ ಸಂದಾಯವಾಯಿತು. ಚೋದ್ಯವೆಂದರೆ, ಈ ಶೇಕಡಾವಾರು ಹಣ ಪ್ರತಿ ಯೋಜನೆ ಬರುವಲ್ಲಿ ಕಡಿಮೆಯಾಗುತ್ತಲೇ ಬರುವುದು! ಇದಕ್ಕಾಗಿ ಕೇಂದ್ರ ಯೋಜನಾ ಸಮಿತಿಯಲ್ಲಿ ಕಾರ್ಯ ಮಾಡುತ್ತಿದ್ದವರನ್ನು ಕೇಳಿದರೆ, ಶಿಕ್ಷಣದ ಹಣ ಮೊತ್ತದಲ್ಲಿ ಹೆಚ್ಚಾಗಿದೆ - ಶೇಕಡಾ ಕಡಿಮೆಯಾಗದೆ ಎಂದು ಹೇಳುತ್ತಾರೆ.[15] ಇವೆಲ್ಲ ಸಮಂಜಸ ಉತ್ತರಗಳೇ? ಉಳಿದ ಬಾಬುಗಳಿಗೆ ಈ ಶೇಕಡಾಗಳು ಕಡಿಮೆಯಾಗಿರುವವೇ? ಇದರ ತಾತ್ಪರ್ಯವೆಂದರೆ, ಇಂದಿಗೂ ನಾವು ಶಿಕ್ಷಣದ ವೆಚ್ಚವನ್ನು ಭಾಂಡವಲು ಹೂಡಿಕೆಯಾಗಿ ಪರಿಗ್ರಹಿಸಿಲ್ಲವಲ್ಲವೇ? ಈಗೇನೋ ಮುಂದಿನ ಯೋಜನೆಯಲ್ಲಿ ಶೇಕಡ 7% ಜಿ.ಎನ್.ಪಿ. ಶಿಕ್ಷಣಕ್ಕೆ ಮುಡಿಪೆಂದಿದ್ದರು; ಈ ವರ್ಷ ಅದು ಶೇಕಡ 6% ಎಂದು ನಮ್ಮ ಬಜೆಟ್ಟಿಗರು ಹೇಳುತ್ತಾರೆ. ಹೌದು, ಇತ್ತ ಚೀನಾ, ಅತ್ತ ಪಾಕಿಸ್ತಾನ, ಈ ಕಡೆಗೆ ಸಿಲೋನಿನ ಎಲ್.ಟಿ.ಟಿ.ಇ.ಗಳು ಗದ್ದಲ ಮಾಡಿದರೆ ನಮ್ಮ ಶಿಕ್ಷಣದ ಹಣ ದಿಢೀರನೇ ಕಡಿಮೆಯಾಗುವುದನ್ನು ನಾವು ನಿರೀಕ್ಷಿಸಬೇಕೆ?

ಪಟ್ಟಿ 7: ಶೈಕ್ಷಣಿಕ ಖರ್ಚುಗಳಲ್ಲಿ ಕೇಂದ್ರರಾಜ್ಯಗಳ ಸಂಬಂಧ[16]

ಯೋಜನೆ	ರಾಜ್ಯಗಳು	ಕೇಂದ್ರ	
I	25	75	100 (153)
II	25	75	100 (273)
III	26	74	100 (599)
IV	33	67	100 (786)
V	30	70	100 (920)
VI	30	70	100 (2943)
VII	37	63	100 (5733)

ಇತ್ತೀಚಿನ ಮನ್ವಂತರಗಳಲ್ಲಿ ಶಿಕ್ಷಣ ಒಮ್ಮೆ ಸಂವಿಧಾನದ ರೀತ್ಯ ರಾಜ್ಯಗಳ ಸ್ವತ್ತಾಗಿತ್ತು. 1976ರ 42ನೆಯ ಸಂವಿಧಾನಿಕ ತಿದ್ದುಪಡಿಯಂತೆ, ಶಿಕ್ಷಣ ಈಗ

15. B.R. Sinha - Country Studies in Educational Development

16. J.C. Aggarwal - Development and Planning of Modern Education.

ಉಭಯಸೂಚಿ ಪಟ್ಟಿಯಲ್ಲಿದೆ. ಆದರೂ, ಕೇಂದ್ರದ ಹೊಣೆ ದೊಡ್ಡದಾಗುತ್ತಲೇ ನಡೆದಿದೆ. ಶೈಕ್ಷಣಿಕ ಆಯೋಗಗಳ ನೇಮಣೂತಿ, ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಶಿಕ್ಷಣದ ಯೋಜನೆ, ವಿವಿಧ ಆಯೋಗಗಳ ಮುಖಾಂತರ ಹಣದ ವಿತರಣೆ ಆ ದಿಸೆಯಲ್ಲಿ ಕೇಂದ್ರವು 5 ಕಾರ್ಯ ಮಾಡುತ್ತಿದೆ:

1. ಯೋಜನೆ-ನೀತಿ ಧೋರಣೆ (Panning - policy making)
2. ಹಣದ ಒದಗಣೆ (Financing)
3. ಕ್ರೋಢೀಕರಣ (Organizing)
4. ಮೌಲ್ಯಮಾಪನ - ಹತೋಟಿ (Appraisal - control)
5. ಪ್ರಗತಿ ಸಂಗ್ರಹ-ವರದಿ ತಯಾರಿಕೆ-ಪ್ರಕಟಣೆ (Reporting)

ಏನೇ ಇದ್ದರೂ, ಕೇಂದ್ರದ ಕಾರ್ಯ ಸಮನ್ವಯೀಕರಣವಾದರೂ, ನೈಜವಾಗಿ ಕಾರ್ಯಾಚರಣೆ ರಾಜ್ಯಗಳ ಪಾಲಿಗಿದೆ. ಅಂತಹ ಸಂದರ್ಭ ಈಗ ರಾಜ್ಯಗಳಲ್ಲಿ ಕೇಂದ್ರದಲ್ಲಿ ವಿವಿಧ ಪಕ್ಷಗಳ ಸರಕಾರಗಳು ಬಂದಿವೆ. ಅವರವರಲ್ಲಿ ರಾಜಕೀಯ ತತ್ತ್ವಪ್ರಣಾಳಿ ವಿಭಿನ್ನವಾಗಿರುವುದು ಸಹಜ. ಇಂತಹ ಜಟಿಲಪ್ರಶ್ನೆಗಳನ್ನು ನಿವಾರಿಸುವಲ್ಲಿ ಸ್ವಯಂಚಾಲಿತ ಸಂಘಟನೆಗಳು ಬರಬೇಕು. ಉದಾಹರಣೆಗೆ - ಎನ್‌ಸಿಇಆರ್‌ಟಿ, ಯುಜಿಸಿ, ಇತ್ಯಾದಿ ಸಂಘಟನೆಗಳು. ಈ ದಿಸೆಯಲ್ಲಿ ಫ್ರೆಂಚ್ ಆಡಳಿತ ವ್ಯವಸ್ಥೆ ನಮಗೆ ಮಾರ್ಗದರ್ಶಿಯಾಗಿದೆ. ಗಣರಾಜ್ಯದ ಪ್ರಜಾಪ್ರಭುತ್ವದಲ್ಲಿ ಈ ಕೇಂದ್ರ-ರಾಜ್ಯಗಳ ಸಂಬಂಧ, ಶಿಕ್ಷಣಕ್ಕಾಗಿ ಭದ್ರವಾಗಿ ಬೆಳೆಯಬೇಕು. ಎತ್ತು ಏರಿಗೆ ಎಳೆದರೆ, ಕೋಣ ಕೆರೆಗೆ ಎಳೆಯಬಹುದು. 1958ರಲ್ಲಿ ಕೇರಳದಲ್ಲಿ ಮೊದಲಿಗೆ ಕಮ್ಯುನಿಸ್ಟ್ ಸರಕಾರ ಬಂತು. ಅಂದಿನ ಸಂವಿಧಾನದ ರೀತ್ಯಾ ಶಿಕ್ಷಣವು ರಾಜ್ಯಗಳ ಸ್ವತ್ತಾಗಿದ್ದು ಕೇರಳದಲ್ಲಿ ಕಮ್ಯೂನಿಸ್ಟ್ ಶಿಕ್ಷಣ ಯೋಜನೆ ಜಾರಿಯಲ್ಲಿ ಬಂತು. ಆಗ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರದ ಕರ್ಣಧಾರರಾಗಿ ಪಂಡಿತ ಜವಹರಲಾಲರಿದ್ದರು. ಅಂದಿನ ಬಲಾಢ್ಯ ಕಾಂಗ್ರೆಸ್‌ಪಕ್ಷಕ್ಕೆ ಶ್ರೀಮತಿ ಇಂದಿರಾಗಾಂಧಿ ಅಧ್ಯಕ್ಷೆ. ಕೇಂದ್ರ ಸಂಸತ್ತಿನಲ್ಲಿ ವಿರೋಧಪಕ್ಷದ ಧುರೀಣ ಫಿರೋಜಗಾಂಧಿ! ನೆಹರೂರವರ ಅಳಿಯ! ಬೆಳಗಿನ 'ಜಹಾ' ಸಂದರ್ಭ: ಅಪ್ಪ-ಮಗಳು-ಅಳಿಯ ಚರ್ಚೆಗೆ ಕುಳಿತರು. ಅಳಿಯನ ವಾದ ನಡೆಯಲಿಲ್ಲ. ಮಗಳ ವಾದ ಗೆದ್ದು ಕೇರಳದ ಕಮ್ಯೂನಿಸ್ಟ್ ಸರಕಾರ ಹೋಯಿತು!

ಈ ದಿಸೆಯಲ್ಲಿ ಭಾರತಕ್ಕೆ ಸಮಗ್ರವಾದ ಒಂದು ಶಿಕ್ಷಣನೀತಿ ಬೇಕೆಂಬ ಕೂಗು 1958ರಷ್ಟು ಹಳೆಯದು. ಅಂದಿನ ಪಾರ್ಲಿಮೆಂಟ್ 28 ಜನ ಸದಸ್ಯರ `ದೇಶಕ್ಕೆ ಒಂದು ಶಿಕ್ಷಣನೀತಿ ಬೇಕೆಂಬ' ವರದಿಯನ್ನು ನಾವು ಕಾಣುತ್ತೇವೆ. ಈ ಪ್ರಯತ್ನ ನಡೆದೇ ಇದ್ದು, 1985-86 ರಂದು, ಮೊದಲು ಬಾರಿಗೆ 'The National Policy on Education' ಬಂದಿದೆ. ಅದರ ಅಭ್ಯಾಸಕ್ಕೆ ಇನ್ನೊಂದು ವರದಿ ಬಂದಿದೆ..... ಕೇಂದ್ರದಲ್ಲಿ ಬರುವ ಸರಕಾರಗಳು ಈ ಶೈಕ್ಷಣಿಕ ನೀತಿಗಳನ್ನು ಬದಲಿಸುತ್ತಲೇ ಹೋದರೆ, ನಮ್ಮ ಶಿಕ್ಷಣದ ಗತಿಯೇನು? ಅಂತೆಯೇ, ಶಿಕ್ಷಣಕ್ಕೆ ಒದಗಿಸುವ ಹಣದ ಮೊತ್ತವೂ ಕೂಡ ಸಂದರ್ಭಾನುಸಾರ ಹೊಯ್ದಾಡುತ್ತದೆ ಯಾಕೆ? ಹಿಂದೆ ಎರಡನೆಯ ಮಹಾಯುದ್ಧದ ಕಾಲದಲ್ಲಿ ಹಿಟ್ಲರ್ ಇಂಗ್ಲೆಂಡಿನ ಮೇಲೆ ಬಾಂಬ್‌ದಾಳಿ ಮಾಡುವಾಗಲೂ ಅಲ್ಲಿನ

ಶಿಕ್ಷಣದ ಹಣ ಕಡಿಮೆಯಾಗಲಿಲ್ಲ; ಜರ್ಮನಿಯ ಹಿಟ್ಲರ್ ಆಗ ಶಿಕ್ಷಣಕ್ಕಾಗಿ ಎರಡುಪಟ್ಟು ಹಣ ಒದಗಿಸಿ ಶಿಕ್ಷಣಕ್ಷೇತ್ರದ ಪ್ರಗತಿಗೆ ಕಾರಣನಾದ. ಅದೇ ವೇಳೆ ರಷ್ಯಾದಲ್ಲಿ ಶಿಕ್ಷಣವು ಪ್ರಗತಿದಾಯಕವಾಗಿ ಬೆಳೆದು ಅನೇಕ ಹೊಸ-ಹೊಸ ಸಂಶೋಧನೆಗಳು ಆಗ ಬಂದಿರುವುದು ನಮ್ಮ ಕಣ್ತೆರೆಯಿಸಬೇಕು.

21ನೆಯ ಶತಮಾನಕ್ಕಾಗಿ ಶಿಕ್ಷಣ

ಇನ್ನೇನು, ಕೆಲವೇ ಕೆಲವು ತಿಂಗಳುಗಳಲ್ಲಿ ಒಂದು ಅದ್ಭುತಯುಗ - 21ನೆಯ ಶತಮಾನದ ಹೆಸರಿನಲ್ಲಿ ಬರುತ್ತದೆ.[17] ಆಗಿನ ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ಶಹರೀಕರಣ, ಕನ್ಸ್ಯೂಮರಿಸಂ (consumerism) ರಭಸದಿಂದ ಬರುವ ಸೂಚನೆಗಳು ಈಗ ನಮ್ಮೆದುರಿಗಿವೆ. ಈ ಆವೇಗಗಳಿಗೆ ಸಮದಂಡಿಯಾದ ಶಿಕ್ಷಣವ್ಯವಸ್ಥೆ ನಮ್ಮದಾಗಬೇಕು. ಈ ದೇಶದ ಗುರಿಗಳಿಗೆ ಪ್ರತಿಸ್ಪಂದಿಸುವ ಶಿಕ್ಷಣ ನಮ್ಮದಾಗಬೇಕು. ದೇಶದ ಗುರಿ ಶಿಕ್ಷಣದ ಗುರಿಯಾಗಬೇಕು; ವರ್ಗಶಿಕ್ಷಣದ ಗುರಿಯಾಗಬೇಕು; ಪಾಠ್ಯಕ್ರಮ, ಅಭ್ಯಾಸಪತ್ರಿಕೆ - ಪಠ್ಯಪುಸ್ತಕಗಳ ಗುರಿಯಾಗಬೇಕು. ಶೈಕ್ಷಣಿಕ ಆಡಳಿತದ ಗುರಿಯಾಗಬೇಕು; ಮೌಲ್ಯಮಾಪನದ ಗುರಿಯಾಗಬೇಕು.

ಭಾರತಕ್ಕೆ ಆರ್ಥಿಕವಾದ ಅಭಿವೃದ್ಧಿ ಬರಬೇಕೆಂಬ ಜಂಗಮಸ್ಥಿತಿ ಈಗ ಪಡಿಲೊಪೆದಿದ್ದು ಕ್ಷೇಮಕರ. ಅದಕ್ಕೆ ಪೂರಕವಾದ ಸಾಮಾಜಿಕ ಅಭಿವೃದ್ಧಿ ಬರಬೇಕು; ರಾಜಕೀಯ ಸಮಾನತೆ ಬರಬೇಕು; ಸಾಂಸ್ಕೃತಿಕವಾದ ಅಭ್ಯುತ್ಥಾನ ಬರಬೇಕು; ನೈತಿಕ-ಆಧ್ಯಾತ್ಮಿಕ ಅವಗುಂಠನವೂ ಬರಬೇಕು. ಬಡವರ ದೇಶಗಳಲ್ಲಿ 11ನೆಯ ಸ್ಥಾನದಲ್ಲಿರುವ ಭಾರತದ ಅರ್ಥವ್ಯವಸ್ಥೆ ಅಷ್ಟೊಂದು ಶ್ರೀಮಂತಿಕೆಯದಲ್ಲ. ನಮ್ಮ ಬಿಡಿಗಾಸೂ ಕೂಡ ಶಿಕ್ಷಣದಲ್ಲಿ ವ್ಯವಸ್ಥಿತವಾಗಿ ಖರ್ಚಿಸಲ್ಪಡಬೇಕು. ಶೇಕಡ 40% ಕಡುಬಡವರ ದೇಶ ಈ ಭಾರತ. ತಮ್ಮ ಕುಟುಂಬಗಳಲ್ಲಿ ಮೊದಲ ಸಾರಿ ಶಿಕ್ಷಣಕ್ಕೆ ಬಂದವರೇ ಬಹಳಜನ. 1950ರಷ್ಟು ಹಿಂದೆ ಭಾರತದ ಅಂದಿನ ಅರ್ಥಶಾಸ್ತ್ರಜ್ಞ[18] ತಮ್ಮ ಗ್ರಂಥ 'Indian Economics'ದಲ್ಲಿ ಬರೆದಂತೆ, 'The ship of progress in India is shipwrecked to the cliff of illiterary' ಎಂಬ ಮಾತು ಇಂದಿಗೂ ಸತ್ಯವಾಗಿದೆ.

ಉಪಸಂಹಾರ

ಜಗತ್ತು ಏನೇ ತಿಳಿಯಲಿ, ಭಾರತವು ಬರಲಿರುವ ಯುಗಕ್ಕೆ ಹಿರಿಯಣ್ಣ ಆಗುವುದು 'ಸತ್ಯಯುಗ'ದ ಮಾತು. ಈಗಾಗಲೇ ಅದರ ಸೂಚನೆಯಂತೆ, ಆಫ್ರಿಕೆಯ ದೇಶಗಳು, ಮಧ್ಯಪೂರ್ವದ ದೇಶಗಳು, ಮಧ್ಯಏಶಿಯಾದ ದೇಶಗಳು, ಆಗ್ನೇಯ ಏಶಿಯಾದ ದೇಶದಗಳು ಭಾರತದ ಬದುಕಿನೊಂದಿಗೆ ಸ್ಪಂದಿಸುತ್ತಿವೆ. ಈ ದೇಶಗಳಿಗೆ ನಮ್ಮ ಮಾನವ ಸಂಪನ್ಮೂಲ ಬೇಕು. ನಮ್ಮ ಸೋವಿಯಾದ ಉತ್ಪಾದನೆಗಳು ಬೇಕು; ನಮ್ಮ ಮಾರುಕಟ್ಟೆ,

---

17. ವಿ.ಜಿ. ಮಾರೀಹಾಳ - 'ಜಾಗತೀಕರಣ ಮತ್ತು ಶಿಕ್ಷಣ'; The Journal of the college of Education, Karnataka University, Dharwar 1998.

18. Dr. Merchant - Indian Economics, 1950

ಬೇಕು. ನಮ್ಮ ದೇಶದ ಶಿಕ್ಷಣ ವ್ಯವಸ್ಥೆಬೇಕು; ನಮ್ಮಲ್ಲಿ ಭಾಂಡವಾಲು ಹೂಡಿಕೆ ಬೇಕು ಇದನ್ನನುಸರಿಸಿ ದೇಶದ ಅಭಿವೃದ್ಧಿಯಲ್ಲಿ ನಮ್ಮ ಶಿಕ್ಷಣವ್ಯವಸ್ಥೆ ಮುಂದುವರಿಯಬೇಕು ಸಿಲೋನ ವಿಶ್ವವಿದ್ಯಾಲಯದ ಕುಲಪತಿ ಹಿಂದೆ ಹೇಳಿದ್ದಂತೆ, ನಮ್ಮ ಪ್ರಾಥಮಿಕಶಿಕ್ಷಣ ಗುಡಿಸಲಿನಲ್ಲಿದೆ, ನಮ್ಮ ಮಾಧ್ಯಮಿಕ ಶಿಕ್ಷಣವನ್ನು ಈ ಗುಡಿಸಲಿನ ತಾಟಿನಲ್ಲಿ ಹೆಂಚ ರಾಡಿಗಳಿಂದ ಕಟ್ಟಿದ್ದೇವೆ; ಅದರ ತಲೆಯ ಮೇಲೆ ನಾವು ಸುಪರ್ ಕಾಂಕ್ರೀಟಿನಿಂದ ವಿಶ್ವವಿದ್ಯಾಲಯದ ಶಿಕ್ಷಣ ಕಟ್ಟಿದ್ದೇವೆ!

ನಮ್ಮ ವಿರಳ ಹಣವು ಈಗ ಉತ್ಪಾದನಾಶೀಲ ಮಾನವಸಂಪನ್ಮೂಲಕ್ಕಾಗಿ ಬಳಕೆಯಾಗಬೇಕು. ಈ ಉತ್ಪಾದಿತ ಮಾನವ ಸಂಪನ್ಮೂಲವು ದೇಶದ ಅಭಿವೃದ್ಧಿಗೆ ಕಾರಣವಾಗಬೇಕು. ಇಲ್ಲಿ ಪಾಶ್ಚಾತ್ಯ-ಪೌರ್ವಾತ್ಯ ಅಂಧಾನುಕರಣೆ ಸಲ್ಲ. ಬಹಳ ಹಿಂದೆ ಸ್ಪ್ಯಾಡ್ಲರ್ ಹೇಳಿದ್ದರು. 'The German Education System should be born with the German seed, German soil and German atmosphere.....[19]

19. I.L. Kandel - New Era in Education

ಶಿಕ್ಷಣ ಕ್ಷೇತ್ರದಲ್ಲಿನ ಕೆಲವು ನವೀನ ಒಲವುಗಳು - ಒಂದು ವಿವೇಚನೆ

ಪ್ರೊ. ಕೆ. ಆರ್. ಹಂದೆ

ಒಂದು ದೇಶದ ಸಮೃದ್ಧಿ, ಸಂಪತ್ತು, ಜನಪದದ ಜೀವನ ಗುಣಮಟ್ಟ - ಎಲ್ಲವೂ ಅಲ್ಲಿನ ಪ್ರಚಲಿತ ಶಿಕ್ಷಣ ಪದ್ಧತಿ - ವ್ಯಾಪ್ತಿಯನ್ನು ಅವಲಂಬಿಸಿದೆ. ಸತ್ವಯುತವಾದ ಶಿಕ್ಷಣ ಪದ್ಧತಿಯನ್ನು ಅನುಸರಿಸುವ ದೇಶದ ಸಮೃದ್ಧಿಯ ಹಾದಿಯನ್ನು ಹಿಡಿದರೆ, ದೋಷಪೂರಿತ ನಿಸ್ಸಾರ ಸಾಂಪ್ರದಾಯಿಕ ಶಿಕ್ಷಣಕ್ರಮಗಳಿಂದ ದೇಶ ಹಿಂದೆ ಸರಿಯುವುದು ಸಹಜವಾಗಿದೆ. "ಸಾಮಾನ್ಯವಾಗಿ ಶಿಕ್ಷಣ ಮತ್ತು ರಾಷ್ಟ್ರೀಯ ಅಭಿವೃದ್ಧಿ" (Education and National development) ಒಂದಕ್ಕೊಂದು ಪೂರಕವಾಗಿ ಪರಸ್ಪರ ಪೋಷಣೆಯಿಂದ ಮುಂದುವರಿಯುತ್ತವೆ. ಹಿಂದೆ ರೂಢಿಯಾಗಿ ಒಂದು ದೇಶದ ಪ್ರಗತಿ-ಸಾಧನೆಯನ್ನು ಅಲ್ಲಿನ ಒಟ್ಟು ರಾಷ್ಟ್ರೀಯ ಉತ್ಪನ್ನ(G.N.P)ದ ಲೆಕ್ಕ ಮಾಡಿ ಸೂಚಿಸುತ್ತಿದ್ದರು. ಯಾವುದೇ ದೇಶದ ರಾಷ್ಟ್ರೀಯ ಉತ್ಪನ್ನ ಹೆಚ್ಚಿದರೂ, ಅದು ಸಮನಾಗಿ ಜನಪದಕ್ಕೆ ಹಂಚಿಕೆಯಾಗಿದೆ ಎಂದರ್ಥವಲ್ಲ. ಅದಕ್ಕಾಗಿ ರಾಷ್ಟ್ರದ ಅಭಿವೃದ್ಧಿ ಜನರ ಯೋಗಕ್ಷೇಮಗಳನ್ನು ಸೂಚಿಸುವ ಇತರ ಮಾಪನಗಳನ್ನು ಈಗ ಗುರುತಿಸಿದ್ದಾರೆ-ಅವುಗಳೇ ಜನರ ಆರೋಗ್ಯ, ಶಿಕ್ಷಣದ ಗುಣಮಟ್ಟ-ವ್ಯಾಪ್ತಿ, ಕುಟುಂಬ ಕ್ಷೇಮ, ಜನರ ಕಲಾಭಿರುಚಿ, ಮನೋರಂಜನಾವಕಾಶ, ಇತ್ಯಾದಿ. ಇವುಗಳು ಜನಪದದ ಸುಖಸಂತೋಷ-ನಲಿವನ್ನು ಅರ್ಥವಿಸುವ ಮಾನವಮಾಪನ ವಿಧಾನಗಳಾಗಿವೆ. ಒಟ್ಟಿನಲ್ಲಿ ಒಂದು ರಾಷ್ಟ್ರದ ನಿಜವಾದ ಅಭಿವೃದ್ಧಿ ಮಾನವ ಸಂಪನ್ಮೂಲ (Human Resources)ಗಳ ಅಭಿವೃದ್ಧಿಯೇ ಆಗಿದೆ; ಮಾನವ ಸಂಪನ್ಮೂಲಗಳ ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ. ಆದುದರಿಂದಲೇ ಬಹುಶಃ ಶಿಕ್ಷಣಖಾತೆಯನ್ನು ಕೇಂದ್ರದಲ್ಲಿ "ಮಾನವ ಸಂಪನ್ಮೂಲ ಅಭಿವೃದ್ಧಿ" ಸಚಿವ ಖಾತೆಯಾಗಿ ಹೆಸರಿಸಲಾಗಿದೆ. ಒಂದು ದೇಶದ ಅಭಿವೃದ್ಧಿಗೆ ಎರಡು ರೀತಿಯ ಸಂಪನ್ಮೂಲಗಳು ಅವಶ್ಯಕ; ಭೌತಿಕ ಸಂಪನ್ಮೂಲ, ಮಾನವ ಸಂಪನ್ಮೂಲ. ಶಿಕ್ಷಣದ ಮಹತ್ವವನ್ನು ಮನಗಂಡಾಗ ದೇಶದ ಸಂಪತ್ತು-ಸಮೃದ್ಧಿಯ ಮೂಲ ಅಲ್ಲಿನ ಭೌತಿಕ-ನೈಸರ್ಗಿಕ ಸಂಪನ್ಮೂಲಗಳಿಗಿಂತ ಒಳ್ಳೆಯ ಶಿಕ್ಷಣದಿಂದ ಲಭಿಸಿದ, ಅಲ್ಲಿನ ಜನರ ಜ್ಞಾನ-ಕೌಶಲ್ಯ-ಪ್ರೇರಣೆಗಳೇ ಎಂದು ನಾವು ತಿಳಿಯಬೇಕು.

ಇತ್ತೀಚೆಗಿನ ದಶಕಗಳಲ್ಲಿ ಶಿಕ್ಷಣದ ಕಲ್ಪನೆ-ಸ್ವರೂಪ ವಿಶಿಷ್ಟವಾಗಿ ಬದಲಾದುದನ್ನು ನಾವು ಕಾಣಬಹುದು. ಅವುಗಳಲ್ಲಿ ಪ್ರಮುಖವಾದವುಗಳು ಯಾವುವೆಂದರೆ:

- ❑ ಶಿಕ್ಷಣದಲ್ಲಿ ಅಧ್ಯಾಪನಕ್ಕಿಂತ ಕಲಿಕೆಗೇ ಹೆಚ್ಚು ಪ್ರಾಧಾನ್ಯತೆ ಬಂದಿದ್ದು, ವಿಷಯಜ್ಞಾನ ನೀಡುವುದಕ್ಕಿಂತ ವಿದ್ಯಾರ್ಥಿಗಳೇ ಸ್ವಂತ ಓದಿ-ಮಾಡಿ ಕಲಿಯುವುದಕ್ಕೆ ಹೆಚ್ಚಿನ ಮಹತ್ವ ಬಂದಿದೆ.
- ❑ ಇಂದು ಸಾಂಪ್ರದಾಯಿಕ ಶಿಕ್ಷಣ ನೀಡುವ ಪ್ರಗತಿಪರ ಶಾಲೆ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರದೆ, ಶಾಲೆ - ಸಮಾಜಕ್ಕೆ ಪರಸ್ಪರ ಸೇವೆ - ಪ್ರಯೋಜನ

ಪಡೆಯುವ ಸಮುದಾಯ ಕೇಂದ್ರ (Community centre).ವಾಗಿದೆ.

- ಒಟ್ಟಿನಲ್ಲಿ ಇಂದು ಶಿಕ್ಷಣಧಾರೆ ನಿಂತ ನೀರಾಗಿರದೆ ನಿರಂತರ ಪರಿಯುವ ತೊರೆಯಾಗಿ ಸಂಕೀರ್ಣ ಸಮಾಜದ ನಾನಾ ಅವಶ್ಯಕತೆಗಳನ್ನು ಪೂರೈಸಬೇಕಾಗಿದೆ. ಅದಕ್ಕೋಸ್ಕರ ಶಿಕ್ಷಣದ ಅವಧಿ, ವಸ್ತು, ಮಾರ್ಗ ಮಾಧ್ಯಮಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ.
- ಶಾಲಾ-ಕಾಲೇಜುಗಳಲ್ಲಿ ಲಭಿಸುವುದೇ ಶಿಕ್ಷಣವೆಂಬ . ಸಂಕುಚಿತ ಅರ್ಥ ಮಾಯವಾಗಿದೆ. ಅದರ ಬದಲು ಮನುಷ್ಯಜೀವನ ಸಾರ್ಥಕಗೊಂಡು ಹಸನಾಗಲು ಆಜೀವ ಪರ್ಯಂತ ಶಿಕ್ಷಣ (Life long Education)ದ ಕಲ್ಪನೆಯನ್ನು ಕಾರ್ಯಗತಗೊಳಿಸಲು ಸತತ ಪ್ರಯತ್ನ ನಡೆದಿದೆ.

ಈ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣನೀತಿ (NPE-1986) ನಿರ್ದೇಶಿತ ಗುರಿಗಳು ಹೀಗಿವೆ:-

- ನಮ್ಮ ರಾಷ್ಟ್ರೀಯ ದೃಷ್ಟಿಕೋನದಲ್ಲಿ ಶಿಕ್ಷಣವು ಎಲ್ಲರಿಗೆ ಸಾರ್ವತ್ರಿಕವಾಗ ಬೇಕಾಗಿದೆ.
- ಶಿಕ್ಷಣದಿಂದ ಸಂಸ್ಕೃತಿಯ ಸಂವಹನವಾಗಬೇಕಾಗಿದೆ.
- ವಿವಿಧ ಆರ್ಥಿಕರಂಗಕ್ಕೆ ಬೇಕಾದ ಮಾನವ ಸಂಪನ್ಮೂಲವನ್ನು ಶಿಕ್ಷಣ ಒದಗಿಸಬೇಕಾಗಿದೆ.
- ಒಟ್ಟಿನಲ್ಲಿ ಶಿಕ್ಷಣ ವರ್ತಮಾನ ಮತ್ತು ಭವಿಷ್ಯದಲ್ಲಿ ಇಡಬಹುದಾದ ವಿಶಿಷ್ಟ ಠೇವಣಿ.

ಈ ಹಿನ್ನೆಲೆಯಲ್ಲಿ ಶಿಕ್ಷಣಕ್ಷೇತ್ರಕ್ಕೆ ಕಾಲಿರಿಸಿದ ಕೆಲವು ನವೀನ ಒಲವು (ಪ್ರವಣತೆ)ಗಳನ್ನು ವಿವೇಚಿಸುವುದು ಸೂಕ್ತವಾಗಿದೆ. ಪ್ರಥಮವಾಗಿ 'ಪಠ್ಯವಸ್ತುವಿನ ನವೀಕರಣ' ಶಿಕ್ಷಣಲೋಕದಲ್ಲಿ ಆಗಾಗ ನಡೆಯುವುದನ್ನು ನಾವು ಕಾಣುತ್ತೇವೆ. ಇದು ಏಕೆ? ಜಗತ್ತಿನಲ್ಲಿ ಎಲ್ಲ ವಿಷಯಗಳಲ್ಲಿ ಜ್ಞಾನದ ಸ್ಫೋಟವಾಗಿ 10-15 ವರ್ಷಗಳಲ್ಲಿ ಇಮ್ಮಡಿಯಾಗುವುದನ್ನು ಕಾಣಬಹುದು. ಇದಕ್ಕೆ ಹೊಂದಿಕೊಂಡು ಶಿಕ್ಷಣದ ವಿವಿಧ ಹಂತದಲ್ಲಿ ಪಠ್ಯವಸ್ತುವಿನ ಬದಲಾವಣೆಯಾಗುವುದು ಅನಿವಾರ್ಯ. ಕೇವಲ ಪುಸ್ತಕಜ್ಞಾನ ಪರಿಮಿತಿಯಲ್ಲಿರುವ ಪಠ್ಯವಸ್ತು - ಏಕಕೇಂದ್ರೀಯ ಹಾಗೂ ಏಕಮುಖವಾದ (ಪ್ರಾಥಮಿಕ, ಹೈಸ್ಕೂಲು, ಕಾಲೇಜು) ವಿಸ್ತರಣದ ಪಠ್ಯವಸ್ತುವಿನಿಂದ ವ್ಯಕ್ತಿಗಾಗಲೀ, ಸಮಾಜಕ್ಕಾಗಲೀ ಪ್ರಯೋಜನ ಸಿಗಲಾರದು. ಶಿಕ್ಷಣದ ಪ್ರತಿಯೊಂದು ಹಂತದಲ್ಲಿಯೂ ಕಲಿಸುವ ವಿಷಯದಿಂದ ವ್ಯಕ್ತಿಗೇನು ಪ್ರಯೋಜನ, ಸಮಾಜಕ್ಕೇನು ಲಾಭ - ಎಂಬ ಪ್ರಶ್ನೆಯನ್ನು ಕೇಳಿ ಉತ್ತರ ಪಡೆಯಬೇಕಾಗುತ್ತದೆ. ಪಠ್ಯವಸ್ತುವಿನ ವಿಷಯ (ಭಾಷೆ, ಗಣಿತ, ವಿಜ್ಞಾನ, ಚರಿತ್ರೆ, ಇತ್ಯಾದಿ) ಸುತ್ತಲಿನ ಸಮುದಾಯದ ಆಶೋತ್ತರಕ್ಕೆ ಹೊಂದಿಕೊಂಡಿರದೆ, ಪ್ರಾಯೋಗಿಕವಾಗಿ ಕೂಡಿರದಿದ್ದರೆ ಅಂತಹ ತಿಳುವಳಿಕೆಯಿಂದ ಏನೂ ಪ್ರಯೋಜನವಿಲ್ಲ. ಈ ದೋಷವನ್ನು ನಿವಾರಿಸಲು ನಾವು ಆಗಾಗ ಪಠ್ಯವಸ್ತುವನ್ನು ಹೆಚ್ಚೆಚ್ಚು ಪರಿಸರ ಪ್ರೇರಿತವಾಗಿ, ಅನುಭವ ಶೀಲವಾಗಿ ಭವಿಷ್ಯತ್ ಸಂವಾದಿಯಾಗಿ ಮಾರ್ಪಡಿಸುತ್ತೇವೆ. ಇದು ನಾಲ್ಕೈದು ವರ್ಷಕ್ಕೆ ನಡೆಯುವ ಪ್ರಕ್ರಿಯೆ.

ಕೇವಲ ಪಠ್ಯವಸ್ತುವಿನ ನವೀಕರಣವಾದರೆ ಸಾಲದು. ಕಲಿತ ಜ್ಞಾನ ವ್ಯಕ್ತಿಗತವಾಗಿ ಬಾಳಿನಲ್ಲಿ ಮೂಡಿಬರಬೇಕಾದರೆ ಶಿಕ್ಷಣದ ಮಾರ್ಗ-ಮಾಧ್ಯಮಗಳು ಬದಲಾಗಬೇಕು. ಈ

ವಿಸೆಯಲ್ಲಿ ಇತ್ತೀಚೆಗೆ 'ಶಿಕ್ಷಣದಲ್ಲಿ ವಿವಿಧತೆ' (Diversity in Education) ರೂಪುಗೊಂಡುದನ್ನು ಕಾಣಬಹುದು. ಎಲ್ಲರಿಗೂ ಏಕರೂಪದ ಶಿಕ್ಷಣಕ್ರಮವನ್ನು ಬಿಟ್ಟು, ಹಲವರ ಅಭಿರುಚಿ-ಆಸಕ್ತಿ-ಯೋಗ್ಯತೆಗಳಿಗನುಸಾರವಾಗಿ ವಿವಿಧ ವ್ಯಾಸಂಗ ವಿಷಯಗಳನ್ನು ಅಳವಡಿಸುತ್ತೇವೆ. ಸಮಾಜದ ನಾನಾ ಕೆಲಸಕಾರ್ಯಗಳಿಗೆ-ಉತ್ಕರ್ಷಕ್ಕೆ-ಸಮಸ್ಯೆಗಳ ಬಿತ್ತರಣಕ್ಕೆ -ವಿವಿಧ ರೀತಿಯ ಕುಶಲಿಗಳು, ಪ್ರವೀಣರು ನಮಗೆ ಅಗತ್ಯವಾಗಿ ಬೇಕು. ಇವರೆಲ್ಲಾ ಶಿಕ್ಷಣಕ್ಷೇತ್ರದಲ್ಲೇ ತಯಾರಾಗಬೇಕಾಗಿದೆ. ಅಂದರೆ ಶಿಕ್ಷಣದ ಒಂದು ಹಂತದಲ್ಲಿ ವ್ಯಕ್ತಿಯು ತನ್ನ ಆಸಕ್ತಿ-ಶಕ್ತಿಗನುಸರಿಸಿ ವೃತ್ತಿಪರ ತರಬೇತಿ ಪಡೆದು ಕ್ರಮೇಣ ವೃತ್ತಿಜೀವನವನ್ನು ಹಿಡಿಯಬೇಕಾಗುತ್ತದೆ. ಯಾವ ವ್ಯಕ್ತಿ ಯಾವ ಹಂತದಲ್ಲಿ ವೃತ್ತಿಶಿಕ್ಷಣ ಪಡೆಯಬೇಕು - ಎಂಬುದು ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದ ಒಂದು ದೊಡ್ಡ ಸಮಸ್ಯೆ. ಶಾಲೆ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ವಿವಿಧ ಕಸಬುಗಳಿಗೆ ಆರಿಸುವುದು ಕಠಿಣ ಕೆಲಸವಾಗಿದೆ. ಅಲ್ಲದೆ ಸಮಾಜದಲ್ಲಿ ಯಾವ ವೃತ್ತಿಗೆ ಎಷ್ಟು ಮಂದಿ ಬೇಕೆಂಬುದು ನಿಗದಿ ಇಲ್ಲದೆ ಇರುವಾಗ, ವೃತ್ತಿಪರ ತರಬೇತಿಯ ಅಪವ್ಯಯವಾಗುವ ಸಂಭವವೂ ಇದೆ. ಆದುದರಿಂದ ಸಾಮಾನ್ಯ ಶಿಕ್ಷಣವಿರಲಿ, ವೃತ್ತಿಪರ ಶಿಕ್ಷಣವಿರಲಿ, ಶಿಕ್ಷಣದ ವಸ್ತುವಿಧಾನಗಳಲ್ಲಿ (ಪ್ರೈಮರಿಯಿಂದ ಪದವಿಯವರೆಗೆ) ಶ್ರಮದಾನ, ಕೈಗೆಲಸ, ಪ್ರಾಯೋಗಿಕ ಕೆಲಸ, ವೃತ್ತಿಪರ ತರಬೇತಿ ಶಿಕ್ಷಣ ಮಾಧ್ಯಮವಾಗುವುದು ಇಂದಿನ ಒಲವು. ಅಂತಹ ಶಿಕ್ಷಣದಿಂದ ವ್ಯಕ್ತಿಯು ತನ್ನನ್ನು ತಾನು ತಿಳಿದು ಸ್ವಾವಲಂಬಿಯಾಗಿ ಮುಂದಕ್ಕೆ ಸ್ವತಂತ್ರ ಉದ್ಯೋಗಿಯಾಗಿ ಜೀವನ ನಿರ್ವಹಿಸಲು ಸಮರ್ಥನಾಗುತ್ತಾನೆ.

ಈ ಶೈಕ್ಷಣಿಕ ಪ್ರವಣತೆಯ ಫಲವಾಗಿಯೇ ಇಂದು ನಾವು ಶಾಲಾ ಪಾಠಪಟ್ಟಿಯಲ್ಲಿ ಕೈಗೆಲಸ (craft work), ಕಾರ್ಯಾನುಭವ (work experience) ಅಥವಾ ಸಾಮಾಜಿಕ ಉತ್ಪಾದನಾ ಕಾರ್ಯ(supw)ವನ್ನು ಸೇರಿಸಿದುದಾಗಿದೆ. ಇವುಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ದುಡಿಮೆಯ ಬಗ್ಗೆ ಪೂಜನೀಯ ಬುದ್ಧಿ ಹುಟ್ಟುವುದು ಸಹಜವಾಗಿದೆ.

ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಇನ್ನೊಂದು ವಿಶಿಷ್ಟ ಪ್ರವಣತೆ, ಚಟುವಟಿಕೆ ಆಧಾರಿತ ಪಠ್ಯವಸ್ತು ಪ್ರವಚನ ಕ್ರಮವಾಗಿದೆ. (Activity oriented & teaching curriculum). ಇದಕ್ಕೆ ನಾವು ಆಧುನಿಕ, ಪ್ರಗತಿಪರ ಪ್ರೈಮರಿ ಶಾಲೆಯೊಂದನ್ನು ಸಂದರ್ಶಿಸಬೇಕು. ಅಲ್ಲಿ ಮಕ್ಕಳು ಭಾಗವಹಿಸುವ ನಾನಾ ರೀತಿಯ ಚಟುವಟಿಕೆಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಅಲ್ಲಿನ ಮಕ್ಕಳ ಶಾಲಾ ದಿನಚರಿ ಹಲವಾರು ಯೋಜಿತ ಚಟುವಟಿಕೆಗಳಿಂದ ಕೂಡಿದ್ದು, 'ಕೆಲಸ - ಕಲಿಕೆಗೂ - ಆಟಕ್ಕೂ' ಅಂತರ ಕಡಿಮೆಯಿರುತ್ತದೆ. ಕಾರಣ ಆಟದ ಸ್ಫೂರ್ತಿ, ಕೆಲಸದ ತತ್ಪರತೆ ಎಲ್ಲಾ ಚಟುವಟಿಕೆಗಳಲ್ಲಿ ಮೂಡಿಬಂದು ವಿದ್ಯಾರ್ಥಿಗಳು ಸಂತೋಷದಿಂದ ಕುಣಿದು ಕೂಡಿ ಕಲಿಯುತ್ತಾರೆ. ಅಂತಹ ಸನ್ನಿವೇಶದಲ್ಲಿ ಅಧ್ಯಾಪಕರು ಹಿನ್ನೆಲೆಯಲ್ಲಿ ನಿಂತ ಸೂತ್ರಧಾರರಾಗುತ್ತಾರೆ. ಮಕ್ಕಳು ಮೇಲಿನ ಕ್ಲಾಸುಗಳಿಗೆ ಹೋದ ಹಾಗೆ, ಕಲಿಕೆ ಯೋಜನೆ (project) ರೂಪ ತಾಳುವುದು ಸಹಜ.

ಮಕ್ಕಳ ಪಾಠಪಟ್ಟಿಯಲ್ಲಿರುವ ಪ್ರಮುಖ ವಿಷಯಗಳಾದ ಗಣಿತ - ವಿಜ್ಞಾನ ಬೋಧನೆಗೆ ಕುರಿತಾದ ಪ್ರವಣತೆಯನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಶಿಕ್ಷಣದ ಗುರಿ ಮಕ್ಕಳ ವರ್ತನೆಯಲ್ಲಿ ಬದಲಾವಣೆಯನ್ನು ತರುವುದಾಗಿದೆ. ವಿಜ್ಞಾನ ಶಿಕ್ಷಣದ ಉದ್ದೇಶ

ಇದೇ ಆಗಿದ್ದು, ಮಕ್ಕಳು ವೈಜ್ಞಾನಿಕವಾಗಿ ಆಲೋಚಿಸಲು, ಭಾವಿಸಲು, ಕ್ರಿಯಾಶೀಲರಾಗಲು ಪ್ರೇರೇಪಿಸುವುದಾಗಿದೆ. ಇದನ್ನು ಸಾಧಿಸಲು ವಿಜ್ಞಾನವನ್ನು ಹೇಳಿಕೊಡುವ ಹಾದಿ ಫಲಿತಾಂಶ ದೃಷ್ಟಿ (Product approach)ಯಿಂದ ಪ್ರೇರಿತವಾಗಿದ್ದು ಬಾಯಿಪಾಠವೆ ಪ್ರಮುಖ ಕಲಿಕೆಯ ವಿಧಾನವಾಯಿತು. ಈ ಮಾರ್ಗದಲ್ಲಿ ವಿಜ್ಞಾನದಿಂದ ಪಡೆದ ಫಲಿತಾಂಶ ಮುಖ್ಯವೆ ಹೊರತು, ವಿಜ್ಞಾನ-ಗಣಿತ ನಡೆದು ಬಂದ ದಾರಿ-ಪ್ರಯೋಗ ಮುಖ್ಯವಲ್ಲ. ವೈಜ್ಞಾನಿಕ ಸಂಗತಿ, ಸಂಖ್ಯೆ, ಸೂತ್ರ, ನಿಯಮ ಪ್ರಧಾನವೇ ಹೊರತು, ಅವು ಹೇಗೆ ಬಂದುವು, ಏಕೆ ಬಂದುವು ಎಂಬುದು ಮುಖ್ಯವಲ್ಲ. ಇದರ ಪರಿಣಾಮ ನೀರಸ ವಿಜ್ಞಾನ ಶಿಕ್ಷಣ ಎಂದು ಬೇರೆ ಹೇಳಬೇಕಾಗಿಲ್ಲ. ಇದಕ್ಕೆ ವ್ಯತಿರಿಕ್ತವಾದ ಇತ್ತೀಚೆಗಿನ ಒಲವು - ಮಾರ್ಗ ವೈಜ್ಞಾನಿಕ 'ಪ್ರಕ್ರಿಯೆಯ ದೃಷ್ಟಿ' (Process approach). ಈ ಮಾರ್ಗ ವಿಜ್ಞಾನಿಗಳು ಅನುಸರಿಸುವ ಮಾರ್ಗ. ಈ ದಾರಿ ಮನೋವೈಜ್ಞಾನಿಕವಾಗಿದ್ದು, ವಿಜ್ಞಾನ ಬೋಧನೆಗೆ ಉತ್ಕೃಷ್ಟವಾಗಿದೆ. ಇದನ್ನು ವೈಜ್ಞಾನಿಕ ಪದ್ಧತಿ ಎಂದೂ ಕರೆಯುವರು. ಈ ಮಾರ್ಗದಲ್ಲಿ ಕಲಿಯುವ ವ್ಯಕ್ತಿ ಮಟ್ಟಿ, ವಿಜ್ಞಾನಿಯಾಗಿ - ಹೇಗೆ ವಿಷಯವನ್ನು ಸಂಗ್ರಹಿಸಲಿ, ಹೇಗೆ ಪರಿಶೀಲನೆ ಮಾಡಲಿ, ಹೇಗೆ ಪ್ರಯೋಗ ಮಾಡಲಿ, ಯಾವುದು ಸರಿ-ತಪ್ಪು, ಯಾವುದು ನೇರ ಅನ್ವೇಷಣೆಯ ಹಾದಿ, ಹೇಗೆ ಸಂಗ್ರಹಿಸಿದ ಮಾಹಿತಿಯನ್ನು ವರದಿ ಮಾಡಲಿ - ಎಂದು ಮುಂದುವರಿಯುತ್ತಾನೆ. ಈ ರೀತಿಯ ಜ್ಞಾನಸಂಗ್ರಹ ಸ್ವತಃ ಶೋಧನ ಪದ್ಧತಿ (Discovery approach)ಯಿಂದ ವಿದ್ಯಾರ್ಥಿಗೆ ಲಭಿಸುತ್ತದೆ.

ಶಾಲಾಶಿಕ್ಷಣವನ್ನು ಮಕ್ಕಳಿಗೆ ಆಕರ್ಷಕವಾಗಿ ಮಾಡಲು ಕೈಕೊಂಡ ಇನ್ನೊಂದು ಪ್ರಯತ್ನವೇ "ಗುಂಪು ಅಧ್ಯಾಪನ" (Team teaching). ಒಂದು ಶಾಲೆಯಲ್ಲಿರುವ ಮಾನವ ಮತ್ತು ಭೌತಿಕ ಸಂಪನ್ಮೂಲಗಳ ಅತಿ ಹೆಚ್ಚಿನ ಸದುಪಯೋಗ ಈ ಮಾರ್ಗದಿಂದ ಸಾಧ್ಯವಿದೆ. ಶಿಕ್ಷಣದಲ್ಲಿ ಪರಂಪರೆಯ ವಿಧಾನ ಒಂದು ಕ್ಲಾಸ್ - ಒಂದು ವಿಷಯ- ಒಬ್ಬ ಅಧ್ಯಾಪಕರ ಈ ವ್ಯವಸ್ಥೆಯ ಚೌಕಟ್ಟನ್ನು ಮೀರಲು ಗುಂಪು ಅಧ್ಯಾಪನದಿಂದ ಸಾಧ್ಯವಿದೆ. ಈ ನೂತನ ವಿಧಾನವಲ್ಲಿ ಒಂದು ಪಾಠಪ್ರವಚನ (ಉದಾ: 'ಚಂದ್ರಗ್ರಹಕ್ಕೆ ಪ್ರಯಾಣ' ವೆಂಬ ಭಾಷಾ ಪಾಠ) ಕಾರ್ಯದಲ್ಲಿ ಭಾಷೆ, ವಿಜ್ಞಾನ, ಗಣಿತದ ಅಧ್ಯಾಪಕರು ಭಾಗವಹಿಸಿ, ವಿಷಯದ ವಿಸ್ತಾರ - ಅಗಾಧತೆಯನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡುತ್ತಾರೆ. ಹೀಗೆ ಗುಂಪು ಅಧ್ಯಾಪನದಲ್ಲಿ ವೇಳಾಪಟ್ಟಿಯ ಆತಂಕವಿಲ್ಲದೆ ಅಧ್ಯಾಪಕರ ಆಸಕ್ತಿ - ಪರಿಣತಿಯನ್ನು ಅನುಸರಿಸಿ ಪಾಠಪ್ರವಚನ ನಡೆಯುತ್ತದೆ. ಹಾಗೆಯೇ ವಿದ್ಯಾರ್ಥಿಗಳು ತಮ್ಮ ಅಗತ್ಯ-ಅಭಿರುಚಿಗನುಸರಿಸಿ ಕಲಿಕೆಯಲ್ಲಿ ಭಾಗವಹಿಸುತ್ತಾರೆ. ಅಧ್ಯಾಪಕರಿಗೆ ಸೂಕ್ತ ತರಬೇತಿ ನೀಡಿದಲ್ಲಿ "ಗುಂಪು ಅಧ್ಯಾಪನ" ಹೆಚ್ಚಿನ ಖರ್ಚಿಲ್ಲದೆ ಶಿಕ್ಷಣದ ಗುಣಮಟ್ಟವನ್ನು ಎತ್ತರಿಸಲು ಒಂದು ಸಹಕಾರಿ ಮಾರ್ಗವಾಗಿದೆ.

ಈಚೆಗೆ ಶಿಕ್ಷಣಕ್ಷೇತ್ರಕ್ಕೆ ಕಾಲಿರಿಸಿದ ಒಂದು ನವೀನ ಆವಿಷ್ಕಾರ "ಜನಸಂಖ್ಯಾ ಶಿಕ್ಷಣ". ಜನಸಂಖ್ಯಾ ಒತ್ತಡ - ಸಮಸ್ಯೆ ಇಂದು ಮಾನವಕುಲ ಎದುರಿಸುವ ಒಂದು ಗಂಭೀರ ಸಮಸ್ಯೆಯಾಗಿದೆ. ಇದನ್ನು ಪರಿಹರಿಸಲು ವೈದ್ಯಕೀಯ ಮಾರ್ಗ ಮಾತ್ರ ಸಾಲದು; ಅದು ಶಿಕ್ಷಣಕ್ಕೂ ಸಂಬಂಧಿಸಿದ ಸವಾಲಾಗಿದೆ. ಕಾರಣ ಇಂದಿನ ವಿದ್ಯಾರ್ಥಿಗಳು ನಾಳೆಯ ತಂದೆ ತಾಯಿಗಳು. ಅವರು ವಿದ್ಯಾರ್ಜನೆ ಪಡೆಯುವಾಗಲೇ ಜನಸಂಖ್ಯೆಯ ಸ್ವರೂಪ, ಒತ್ತಡ, ಕಾರಣ - ಪರಿಣಾಮಗಳ ಕುರಿತು ತಿಳಿಯಬೇಕಾದುದು ಅಗತ್ಯ. ವಿದ್ಯಾರ್ಥಿಗಳು ಶಾಲೆ -

ಕಾಲೇಜುಗಳಲ್ಲಿ ಕಲಿಯುವ ವಿಷಯಗಳ ಮೂಲಕವೇ ಅವರಲ್ಲಿ ಜನಸಂಖ್ಯಾ ಪ್ರಜ್ಞೆಯನ್ನು ನಾವು ಮೂಡಿಸಬಲ್ಲವಾದರೆ, ಮುಂದಕ್ಕೆ ಅವರು ಜವಾಬ್ದಾರಿಯುತರಾಗಿ ಮಿತ ಕುಟುಂಬವನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ಜನಸಂಖ್ಯೆಗೆ ಸಂಬಂಧಿಸಿದ ಪ್ರಸ್ತಾಪಗಳು ಪಠ್ಯವಸ್ತುವಿನಲ್ಲಿ ಅಲ್ಲಲ್ಲಿ ಸೇರಿಕೊಂಡಿವೆ. ಅವುಗಳನ್ನು ಸಮನ್ವಯ (Integration) ಪದ್ಧತಿಯಲ್ಲಿ ಒತ್ತುಕೊಟ್ಟು ಹೇಳುವುದರಿಂದ ವಿದ್ಯಾರ್ಥಿಗಳಲ್ಲಿ ಜನಸಂಖ್ಯಾ ಪ್ರಜ್ಞೆಯನ್ನು ಮುಟ್ಟಿಸಬಹುದು. ಈ ರೀತಿಯ ಅಧ್ಯಾಪನ - ಕಲಿಕೆ, ಶಿಕ್ಷಣವನ್ನು ಅನುಭವ ಹಾಗೂ ಪರಿಸರ ಪ್ರೇರಿತವಾಗುವುದರ ಮೂಲಕ ಅರ್ಥಪೂರ್ಣವಾಗಿ ಮಾಡಿದೆ.

ಸ್ವಂತ ಕಲಿಕೆಯ ಸಾಧನಗಳು, ಅಧ್ಯಾಪನ ಯಂತ್ರಗಳು (Auto Instructional devices & Teaching machines) ಇಂದು ವ್ಯಕ್ತಿಯ ಕಲಿಕೆಯಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಕ್ರಾಂತಿಯನ್ನುಂಟು ಮಾಡಿವೆ. ಈ ದಿಸೆಯಲ್ಲಿ ಸಂಚಿತ ಕಲಿಕೆಯ ಸರಣಿ (Programme Instruction material), ಶಿಕ್ಷಣದ ಗಣಕೀಕರಣ (Computerised Instruction)ವನ್ನು ಉದಾಹರಿಸಬಹುದು. ಶೈಕ್ಷಣಿಕ ತಂತ್ರಜ್ಞಾನ (Educational Technology) ಇಂದು ಕ್ಲಾಸ್ ಕೊಠಡಿಯ ಸ್ವರೂಪವನ್ನೇ ಕ್ರಾಂತಿಕಾರವಾಗಿ ಬದಲಾಯಿಸಿದೆ - ಎಂಬುದು ಗಮನಾರ್ಹ. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ವೇಗದಲ್ಲಿ ಕಲಿಯಬಲ್ಲ; ಆಗ ಸ್ವಂತ ಕಲಿಕೆಯ ಸಾಧನಗಳು ತುಂಬಾ ಉಪಕಾರಿಯಾಗುತ್ತವೆ. ಕಲಿತ ವಿಷಯ ಹೆಚ್ಚು ಮನದಟ್ಟಾಗಲು, ಸ್ವಂತ ಓದನ್ನು ಮುಂದುವರಿಸುವವರು ಅಧ್ಯಾಪಕರ ನೆರವಿಲ್ಲದೆ ಇಂತಹ ಸೌಕರ್ಯಗಳಿಂದ ಶಿಕ್ಷಣಾವಕಾಶ ಪಡೆಯಲು ಇಂದು ಸಾಧ್ಯವಿದೆ. ಅಲ್ಲದೆ ಈ ಬೆಳವಣಿಗೆಯಿಂದ ಇಂತಹ ತಂತ್ರಜ್ಞಾನ ಹಾಗೂ ಸ್ವಂತ ಕಲಿಕೆಯ ಸಾಧನಗಳ ಮೂಲಕ ಪರಿಣತ ಮೇಧಾವಿ ಶಿಕ್ಷಕರ ಅಧ್ಯಾಪನ ವ್ಯಾಪಕ ವಿದ್ಯಾರ್ಥಿವೃಂದಕ್ಕೆ ಲಭ್ಯವಾದಂತಾಯಿತು.

ಇನ್ನೊಂದು ಮುಖ್ಯ ಶೈಕ್ಷಣಿಕ ಒಲವು: ಈಗ ಶಾಲೆ, ಕಾಲೇಜುಗಳಿಂದಲೇ ಶಿಕ್ಷಣ ಪಡೆಯಬೇಕಾಗಿಲ್ಲ. ಇಂತಹ ಔಪಚಾರಿಕ ಶಿಕ್ಷಣಕ್ರಮಕ್ಕೆ ಸಮನಾಗಿ `ಅನೌಪಚಾರಿಕ ಶಿಕ್ಷಣ' ಹೆಚ್ಚೆಚ್ಚು ಪ್ರಚಾರಕ್ಕೆ ಬಂದುದು ಇತ್ತೀಚಿನ ದಾಖಲೆಯಾಗಿದೆ. ಔಪಚಾರಿಕ ಶಿಕ್ಷಣದಿಂದ ವಂಚಿತರಾದವರಿಗೆ, ಬಯಲು ವಿಶ್ವವಿದ್ಯಾನಿಲಯ, ಸಂಜೆ ತರಗತಿಗಳು, `ಕೆಲಸಗಾರ-ಶಿಕ್ಷಣ-ತರಗತಿಗಳು', (Workers, Education classes) ಬಯಲು ಶಾಲಾ ಶಿಕ್ಷಣ ವ್ಯವಸ್ಥೆ (Open School system) ಇತ್ಯಾದಿ ಶಿಕ್ಷಣ ಮುಂದುವರಿಸಲು ಯೋಗ್ಯ ಅವಕಾಶವನ್ನುಂಟು ಮಾಡಿದೆ. ಯಾವನೇ ಒಬ್ಬ ವ್ಯಕ್ತಿ, ಯಾವ ಪ್ರಾಯದಲ್ಲಿಯೇ ಆಗಲಿ ಶಿಕ್ಷಣದ ಅಗತ್ಯ ಮತ್ತು ಅದರ ಬಗ್ಗೆ ಕಾತರ ಇದ್ದಲ್ಲಿ ಬೇಕಾದ ಶಿಕ್ಷಣ ಪಡೆಯುವ ಅವಕಾಶ "ಬಯಲು ಶಿಕ್ಷಣ ವ್ಯವಸ್ಥೆ"ಯಲ್ಲಿದೆ. ಇಂತಹ ದೂರ ಶಿಕ್ಷಣದ ವ್ಯಾಪ್ತಿ ಮತ್ತು ಗುಣಮಟ್ಟವನ್ನು ವಿಸ್ತರಿಸಲು ಆಕಾಶವಾಣಿ ಮತ್ತು ದೂರದರ್ಶನದ ಕೊಡುಗೆ ಅಪಾರವಾದುದು. ಭವಿಷ್ಯದಲ್ಲಿ ಅನೌಪಚಾರಿಕ ಶಿಕ್ಷಣಮಾರ್ಗ ಇನ್ನೂ ವಿಸ್ತಾರಗೊಂಡು, ಔಪಚಾರಿಕ ಕ್ಷೇತ್ರಕ್ಕೆ ಪೂರಕವಾಗಿ, ಸಮಸ್ತ ಜನಪದವನ್ನು ಪ್ರಭಾವಿತಗೊಳಿಸುವ ಚಿಹ್ನೆಯನ್ನು ನಾವು ಕಾಣುತ್ತಲಿದ್ದೇವೆ. ಯಾವುದೇ ಒಬ್ಬ ವ್ಯಕ್ತಿಗೆ ಅಥವಾ ಗುಂಪಿಗೆ ಅಗತ್ಯವಾದ ಶಿಕ್ಷಣವನ್ನು ಒದಗಿಸಬಲ್ಲ ಬಹುರೂಪಿ ಶಿಕ್ಷಣ ಮಾಧ್ಯಮ ಸಂಚಿಕೆ (Multi media package) ಈಗ ಲಭ್ಯವಿದೆ; ಇದು ಬರಲಿರುವ ಸಾರ್ವತ್ರಿಕ ಶಿಕ್ಷಣದ ಮುನ್ಸೂಚನೆಯಾಗಿದೆ. ಶಿಕ್ಷಣಶಾಸ್ತ್ರದಲ್ಲಿ ದೂರಶಿಕ್ಷಣ (Distance Education), ಶಿಕ್ಷಣ

ತಂತ್ರ ವಿಜ್ಞಾನ ದೇಶದ ನಾನಾ ಮೂಲೆಗಳನ್ನು ಮುಟ್ಟುವಷ್ಟು ಮುಂದುವರಿದಿದೆ ಮತ್ತು ಮುಂದುವರಿಯುತ್ತಲೇ ಇದೆ.

ಇಲ್ಲಿ ಒಂದು ಪ್ರಶ್ನೆ - ಶಿಕ್ಷಣತಂತ್ರವಿಜ್ಞಾನದಿಂದ ಶಿಕ್ಷಕ ತರಗತಿಯ ಕೊಠಡಿಯಿಂದ ಕಣ್ಮರೆಯಾಗುವನೆ? ಇಲ್ಲ. ಅವರ ಬದಲು ಶಿಕ್ಷಕನ ಸ್ಥಾನಮಾನ-ವ್ಯಕ್ತಿತ್ವ-ವರ್ಚಸ್ಸು ಹೆಚ್ಚಾಗಿ ಅವನ ತರಬೇತಿ ವಿಶಿಷ್ಟವಾಗಿ ಮಾರ್ಪಡುತ್ತದೆ. ಕ್ಲಾಸ್ ಸನ್ನಿವೇಶದಲ್ಲಿ ಅಧ್ಯಾಪನ-ಕಲಿಕೆ ಮಾನವ ಸಂಪರ್ಕದಿಂದ ಹೆಚ್ಚಿನ ಪ್ರೇರಣೆ - ಸ್ಫೂರ್ತಿಯನ್ನು ಪಡೆಯುವಂತಾಗುತ್ತದೆ. ಯಾವ ಯಂತ್ರವೂ - ತಂತ್ರವೂ ಶಿಕ್ಷಣ ವ್ಯಾಪಾರದಲ್ಲಿ ಮಾನವ ಸ್ಪರ್ಶ(Human touch)ವನ್ನು ನೀಡಲಾರದು. ಆದುದರಿಂದಲೇ ಶ್ರೇಷ್ಠ ಅಧ್ಯಾಪಕರ ಪ್ರಭಾವ, ಸ್ಫೂರ್ತಿ ಚಿರಂತನವಾಗಿದ್ದು ಅವರ ಹೆಜ್ಜೆಯ ಗುರುತುಗಳನ್ನು ಕಾಲದ ಕಿನಾರೆಯಲ್ಲಿ ನಾವು ಇಂದಿಗೂ ಗುರುತಿಸಬಲ್ಲೆವು.

ಇಷ್ಟರವರೆಗೆ ನಾನು ಶಿಕ್ಷಣಕ್ಷೇತ್ರವನ್ನು ಪ್ರಭಾವಿತಗೊಳಿಸಿದ ಕೆಲವು ಪ್ರಸ್ತಾಪ-ಪ್ರವಣತೆಗಳ ಕುರಿತು ಹೇಳಿದ್ದೇನೆ. ಇವುಗಳ ಒಟ್ಟುಗುರಿ - ಅಧ್ಯಯನ ಶೀಲ ಸಮಾಜ (Learning Society)ವನ್ನು ನಿರ್ಮಾಣ ಮಾಡುವುದಾಗಿದೆ. ಈ ಉದ್ದೇಶ ಸಾಧನೆಯಲ್ಲಿ ಶಿಕ್ಷಣಾಸಕ್ತರ ಕಾರ್ಯ-ಧೋರಣೆ-ಆಚರಣೆ ಹೀಗೆ ಸಾಗಲಿ:-

- ❑ ಶಿಕ್ಷಣ ಮಕ್ಕಳಿಗೆ, ತರುಣರಿಗೆ ಮಾತ್ರವಲ್ಲ, ವಯಸ್ಕರಿಗೂ ಸಿಗುವಂತಾಗಲಿ. ಅದು ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕು.
- ❑ ಶಿಕ್ಷಣ ಮತ್ತು ಕೆಲಸ (ವೃತ್ತಿ) ಪರಸ್ಪರ ಪೂರಕವಾಗಿದ್ದು ವ್ಯಕ್ತಿಯ ಜೀವನ ಪರ್ಯಂತ ಪಸರಿಸಲಿ.
- ❑ ಶಿಕ್ಷಣ ವ್ಯವಸ್ಥೆಯಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಕ್ರಮಗಳಿಗೆ ಸಮಾನವಾದ ಸ್ಥಾನ, ಮಾನ, ಅವಕಾಶಗಳು ಸಿಗುವಂತಾಗಲಿ.
- ❑ ಶಿಕ್ಷಣ ಶಾಲೆಯ ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಪ್ರಕ್ರಿಯೆಯಾಗಿರದೆ, ಅದರ ವ್ಯಾಪ್ತಿ ಶಾಲೆಯ ಒಳಗೆ - ಹೊರಗೆ - ಸಮಾಜದಲ್ಲಿ ವ್ಯಕ್ತಿಯು ಗಳಿಸುವ ಎಲ್ಲಾ ಕಲಿಕೆಯ ಅನುಭವಗಳಿಗೆ ವಿಸ್ತರಿಸಲಿ.
- ❑ ವಿವಿಧ ಶಿಕ್ಷಣ, ವೃತ್ತಿಪರ ಶಿಕ್ಷಣ, ಗುಣಮಟ್ಟದ ಶಿಕ್ಷಣ - ಎಲ್ಲರಿಗೂ ಅವರವರ ಆಸಕ್ತಿ, ಅಭಿರುಚಿ, ಶಕ್ತಿಗನುಸರಿಸಿ ಸಿಗುವಂತಾಗಲಿ.
- ❑ ಶಿಕ್ಷಣ ಒಂದು ಪ್ರಮುಖ ಸಾಮಾಜಿಕ ಜವಾಬ್ದಾರಿಯಾಗಿ ಅದರಲ್ಲಿ ಎಲ್ಲರೂ (ಆಡಳಿತದಾರ, ವಿದ್ಯಾರ್ಥಿ ಇಲ್ಲವೇ ಶಿಕ್ಷಕರಾಗಿ) ಪಾಲುಗೊಳ್ಳುವಂತಾಗಲಿ.

ಹೀಗೆ ನಮ್ಮ ರಾಷ್ಟ್ರೀಯ ಶಿಕ್ಷಣವ್ಯವಸ್ಥೆ ನವೀನ ಒಲವುಗಳನ್ನು ಒಳಗೊಂಡು ರೂಪುಗೊಂಡರೆ ಸಮಾಜ ಮತ್ತು ಶಿಕ್ಷಣ ಪರಸ್ಪರ ಪೋಷಣೆ, ಪ್ರಯೋಜನ, ಸ್ಫೂರ್ತಿಯನ್ನು ಪಡೆದು, ಪ್ರಗತಿಯ ಹಾದಿ ಹಿಡಿಯುತ್ತದೆ; ಪರಿಣಾಮ -. ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ.

ಇಲ್ಲಿ ಚೀನಾದ ಒಂದು ಪುರಾತನ ಗಾದೆಯನ್ನು ಸ್ಮರಿಸಬಹುದಾಗಿದೆ:

"ನೀವು ಒಂದು ವರ್ಷಕ್ಕೆ ಯೋಜಿಸುವುದಾದರೆ ಒಂದು ಗಿಡವನ್ನು ನೆಡಿರಿ. ಹತ್ತು ವರ್ಷಕ್ಕೆ ಯೋಜಿಸುವುದಾರೆ ಒಂದು ಮರವನ್ನು ನೆಡಿರಿ. ಒಂದು ನೂರು ವರ್ಷಕ್ಕೆ ಯೋಜಿಸುವುದಾದಲ್ಲಿ ಮನುಷ್ಯನಿಗೆ ಶಿಕ್ಷಣ ನೀಡಿರಿ."

○

ಶಿಕ್ಷಣದ ಆವಿಷ್ಕಾರಗಳು

ಡಾ. ಸಿ. ಮಧುಕರ್

ಆವಿಷ್ಕಾರ ಎಂದರೆ ಒಂದು ಹೊಸ ದೃಷ್ಟಿ, ಚಿಂತನೆ ಅಥವಾ ಪ್ರಯತ್ನ ಎಂದಾಗುತ್ತದೆ. ಇದು ಯಾವ ಕ್ಷೇತ್ರಕ್ಕಾದರೂ ಅನ್ವಯವಾಗಬಹುದು. ನಿತ್ಯಜೀವನದಲ್ಲಿ ನಾವು ಇದನ್ನು ಜಾಹೀರಾತುಗಳಲ್ಲಿ, ಹೊಸ ಉಪಕರಣಗಳ ಬಳಕೆಯಲ್ಲಿ, ಪೋಷಾಕುಗಳ ವಿನ್ಯಾಸದಲ್ಲಿ, ಅಡುಗೆಗಳಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಕಾಣುತ್ತೇವೆ.

ಆದರೆ ವೈಜ್ಞಾನಿಕವಾಗಿ ನೋಡುವುದಾದರೆ ಆವಿಷ್ಕಾರ (Innovation)ಎನ್ನುವುದಕ್ಕೆ ಇನ್ನೂ ಸ್ಪಷ್ಟರೀತಿಯ ಅರ್ಥವಿದೆ. ಅಮೆರಿಕದೇಶದ ಶಿಕ್ಷಣತಜ್ಞ ಬಾರ್‌ನೆಟ್ 'ಯಾವುದೇ ಚಿಂತನೆ, ವಿಚಾರ, ಕಲ್ಪನೆ ಅಥವಾ ವಸ್ತು ಈಗಿರುವುದಕ್ಕಿಂತ ಗುಣಮಟ್ಟದಲ್ಲಿ ವ್ಯತ್ಯಾಸಹೊಂದಿದರೆ ಅದು ಆವಿಷ್ಕಾರವಾಗುತ್ತದೆ' ಎಂದು ಹೇಳಿದ್ದಾನೆ.

ಮೈಲ್ಸ್ ಎಂಬಾತ 'ಆವಿಷ್ಕಾರವೆಂದರೆ ಬರೀ ಬದಲಾವಣೆಯಲ್ಲ. ಅದನ್ನು ವ್ಯವಸ್ಥಿತವಾಗಿ ಯೋಜಿಸಲಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾನೆ.

ಐವರ್ ಮಾರಿಷ್ ಎನ್ನುವವನು 'ಆವಿಷ್ಕಾರ ಶಿಕ್ಷಣದಲ್ಲಿ ಒಂದು ಧನಾತ್ಮಕ ಚಿಂತನೆ, ಒಂದು ಪ್ರಯೋಗ' ಎಂದು ಹೇಳಿ 'ಇದಕ್ಕೆ ಒಂದು ಕ್ರಿಯಾತ್ಮಕ ಉದ್ದೇಶ, ಸತ್ವಪೂರ್ಣ ಪ್ರಯತ್ನ ಇರುತ್ತದೆ' ಎಂದು ಹೇಳಿದ್ದಾನೆ.

ಇದರಿಂದ ಬದಲಾವಣೆ ತರುವುದು ಆವಿಷ್ಕಾರವಲ್ಲ. ಆವಿಷ್ಕಾರಗಳಿಗೆ ತಮ್ಮದೇ ಆದ ಕೆಲವು ಲಕ್ಷಣಗಳಿವೆ. ಅವುಗಳಲ್ಲಿ ಕೆಲವು ಮುಖ್ಯವಾದುವನ್ನು ಇಲ್ಲಿ ಉದಾಹರಿಸಬಹುದು:

1. ಆವಿಷ್ಕಾರ ಈಗಿರುವ ಪ್ರಯತ್ನ, ಚಿಂತನೆ ಅಥವಾ ಪ್ರಯೋಗಕ್ಕಿಂತ ಬೇರೆಯಾದುದು.
2. ಇದರಿಂದ ಉಂಟಾಗಬಹುದಾದ ಅನುಕೂಲಗಳ ಅಥವಾ ಫಲಗಳ ಪೂರ್ವ ಕಲ್ಪನೆ ಇರುತ್ತದೆ.
3. ಇದಕ್ಕೆ ಒಂದು ಸಣ್ಣಪ್ರಮಾಣದ ಪ್ರಯತ್ನದ ತಳಹದಿ ಇರುತ್ತದೆ.
4. ಇದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಳಸುವ ಅರ್ಹತೆ ಇದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಅಧ್ಯಾಪಕರ ತರಬೇತಿ ಶಿಕ್ಷಣದಲ್ಲಿ ಏನಾದರೂ ಆವಿಷ್ಕಾರಗಳು ಚಾಲನೆಯಲ್ಲಿವೆಯೆ ಎಂದು ತಿಳಿಯಲು ಒಂದು ಚಿಕ್ಕಸಂಶೋಧನೆಯನ್ನು ನಡೆಸಲಾಯಿತು. (1978). ಇದರ ಫಲಿತಾಂಶ ಅಷ್ಟೇನೂ ನಿರಾಶಾದಾಯಕವಾಗಿರಲಿಲ್ಲ. ಆಗ 23 ಅಧ್ಯಾಪಕರ ಕಾಲೇಜುಗಳಲ್ಲಿ ಬಳಸಲಾಗುತ್ತಿದ್ದ ಪ್ರಯತ್ನಗಳಲ್ಲಿ ಐವನ್ನು ಆವಿಷ್ಕಾರಗಳೆಂದು ಅವುಗಳ ಲಕ್ಷಣಗಳ ಆಧಾರದ ಮೇಲೆ ಪರಿಗಣಿಸಲಾಯಿತು. ಇವು

ಯಾವುವೆಂದರೆ-

1. ಆಭ್ಯಾಸ ಬೋಧನೆಯಲ್ಲಿ ಮೌಲ್ಯಮಾಪನ ಪದ್ಧತಿಯ ಬಳಕೆ.
2. ಉಪನ್ಯಾಸಕರ ಬೋಧನೆಯಲ್ಲಿ ನವೀನತೆ. (ಸೆಮಿನಾರ್ ಪದ್ಧತಿ, ಚರ್ಚೆ, ಗುಂಪುಕೆಲಸ, ದೃಷ್ಟಿ ಶ್ರವಣ ಸಾಧನಗಳ ಬಳಕೆ)
3. ಗ್ರಂಥಾಲಯಗಳ ಬಳಕೆ (ವಿದ್ಯಾರ್ಥಿಗಳು ಕಡ್ಡಾಯವಾಗಿ ಗ್ರಂಥಾಲಯಕ್ಕೆ ಹೋಗುತ್ತಾರೆ. ಅಲ್ಲಿ ಅಭ್ಯಾಸ ಮಾಡುತ್ತಾರೆ. ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುತ್ತಾರೆ)
4. ಅಭ್ಯಾಸಗಳಲ್ಲಿ ವೈವಿಧ್ಯತೆ (ಘಟಕ ಪರೀಕ್ಷೆಗಳ ತಯಾರಿಕೆ ಮತ್ತು ಬಳಕೆ, ಪಾಠೋಪಕರಣಗಳ ಬಳಕೆ ಮತ್ತು ಚರ್ಚೆ, ಅಣು ಸಂಶೋಧನೆ)


ಇವುಗಳಲ್ಲಿ ತರಬೇತಿವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿಯಿಂದ ಪಾಲ್ಗೊಳ್ಳುತ್ತಿರುವುದು ಕಂಡುಬಂದಿತು. ಪ್ರಯೋಗಕ್ಕೆ ತೆಗೆದುಕೊಂಡ 18 ಕಾಲೇಜುಗಳ ಪೈಕಿ, 11 ಕಾಲೇಜುಗಳಲ್ಲಿ (61%) ಈ ರೀತಿಯ ಆವಿಷ್ಕಾರಗಳು ಬೇರೆ ಬೇರೆ ಪ್ರಮಾಣದಲ್ಲಿ ಬಳಸಲಾಗುತ್ತಿರುವುದು ಕಂಡುಬಂದಿತು. ಬಹಳ ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತಿದ್ದುದು ಮೊದಲನೆಯದು, ನಂತರ 4, 3, 2.

ಅಧ್ಯಾಪಕರ ಕಾಲೇಜುಗಳಲ್ಲಿ ಕಲಿತ ಈ ಹೊಸವಿಚಾರಗಳನ್ನು ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ, ಯಾವ ಮಟ್ಟದಲ್ಲಿ ಮುಂದೆ ತಮ್ಮ ವೃತ್ತಿಯಲ್ಲಿ (ಶಾಲೆಗಳಲ್ಲಿ) ಉಪಯೋಗಿಸುತ್ತಾರೆ ಎಂಬುದು ಸಹಜಪ್ರಶ್ನೆಯಾಯಿತು. ಇದನ್ನು ಕಂಡುಹಿಡಿಯುವುದೇ ಸಂಶೋಧನೆಯ ಎರಡನೆಯ ಭಾಗವಾಯಿತು. ಇದಕ್ಕಾಗಿ ಒಂದು ಸಾಧನವನ್ನು ಬಳಸಲಾಯಿತು. ಅಮೆರಿಕಾದ ಟೆಕ್ಸಾಸ್ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದಲ್ಲಿ ಬಳಸಲಾಗುತ್ತಿದ್ದ ಈ ಸಾಧನವನ್ನು ತರಿಸಿಕೊಂಡು ಅದನ್ನು ಇಲ್ಲಿನ ಪರಿಸರಕ್ಕೆ ಅನುಗುಣವಾಗಿ ಪರಿಷ್ಕರಿಸಲಾಯಿತು. ಅದರ ಸಂಕ್ಷಿಪ್ತ ಪರಿಚಯ ಇಲ್ಲಿದೆ:

ಒಬ್ಬ ಅಧ್ಯಾಪಕ ತಾನು ಕಲಿತ ವಿಷಯವನ್ನು ಈ ಕೆಳಗಿನ ಐದು ಹಂತಗಳಲ್ಲಿ ಬಳಸುತ್ತಿರಬಹುದು:-

0	ಹಂತ	ಅದನ್ನು ಬಳಸದೆ ಇರುವುದು.
1	ಹಂತ	ಅದರ ಅರಿವಿದೆ. ಯಾವುದೋ ತಾರೀಖಿನಿಂದ ಬಳಸುವ ವಿಚಾರ. ಆದರೆ ಬಳಸುವುದಿಲ್ಲ.
2	ಹಂತ	ಅದನ್ನು ಯಾಂತ್ರಿಕವಾಗಿ, ತರಬೇತಿ ಕಾಲೇಜಿನಲ್ಲಿ ಹೇಗೆ ಹೇಳಿಕೊಟ್ಟಿದ್ದಾರೋ ಹಾಗೆ ಚಾಚೂ ತಪ್ಪದೆ ಬಳಸುವುದು.
3	ಹಂತ	ತನ್ನ ಪರಿಸರಕ್ಕೆ ತಕ್ಕಂತೆ ಕೆಲವು ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡು ಬಳಸುವುದು.
4.	ಹಂತ	ತನ್ನ ಅನುಭವದಿಂದ, ಜಾಣ್ಮೆಯಿಂದ ಹೊಸತೊಂದು ವಿಧಾನವನ್ನೆ ನಿರ್ಮಿಸಿ ಬಳಸುವುದು.

ಇದು ಒಂದು ಶ್ರೇಣಿಸಿದ ಸಾಧನ. ಅದರ ಕಲ್ಪನೆಯನ್ನು ಈ ನಕ್ಷೆಯಲ್ಲಿ ಕಾಣಬಹುದು.



ಅಧ್ಯಾಪಕ ಯಾವ ಮಟ್ಟದಲ್ಲಿ ಇರುತ್ತಾನೆ ಎಂದು ಕಂಡುಹಿಡಿಯಲು ಎರಡು ವಿಧಾನಗಳನ್ನು ಬಳಸಲಾಯಿತು. ಇದಕ್ಕಾಗಿ ಪರಿಷ್ಕೃತ ಸರಳಸಾಧನಗಳನ್ನು ಬಳಸಲಾಯಿತು.

(1) ತಾವೇ ಉತ್ತರಿಸಬೇಕಾದ ಪ್ರಶ್ನಾವಳಿ

(2) ಒಂದು ವ್ಯವಸ್ಥಿತ ಸಂದರ್ಶನ

ಪ್ರಯತ್ನದಿಂದ ಕೆಲವು ಸ್ವಾರಸ್ಯಕರವಾದ ಫಲಿತಾಂಶಗಳು ಹೊರಬಂದವು. ಪರಿಗಣಿಸಲಾದ 74 ಅಧ್ಯಾಪಕರಲ್ಲಿ 59 ಮಂದಿ (80.5%) 2.1ನೇ ಹಂತದಲ್ಲಿರುವುದು ಕಂಡು ಬಂದಿತು. ಎಲ್ಲಾ ಅಭ್ಯಾಸಗಳನ್ನೂ ಒಟ್ಟಿಗೆ ತೆಗೆದುಕೊಂಡಾಗ ಬಂದ ಸೂಚಿ ಇದು. ಅಂದರೆ ಅವರು ಯಾಂತ್ರಿಕ ಉಪಯೋಗಕ್ಕಿಂತ ಸ್ವಲ್ಪ ಮೇಲಿದ್ದಾರೆ ಎಂದಾಯ್ತು. ಪ್ರಪಂಚದ ಇತರ ದೇಶಗಳನ್ನು ಪರಿಗಣಿಸದರೆ ಅಲ್ಲಿನ ಅಧ್ಯಾಪಕರ ಮಟ್ಟವೂ ಇಷ್ಟೇ ಇದೆ ಎಂದು ತಿಳಿಯುತ್ತದೆ. ಆದುದರಿಂದ ಇದು ಸಮಾಧಾನಕರ ಪರಿಸ್ಥಿತಿ ಎಂದೇ ಹೇಳಬೇಕು. ಹಂತ 3ರಲ್ಲಿ 11.5% ಅಧ್ಯಾಪಕರೂ. ಹಂತ 4ರಲ್ಲಿ 1.2% ಅಧ್ಯಾಪಕರೂ ಇದ್ದಾರೆ. ಯಾಂತ್ರಿಕ ಮಟ್ಟಗಳಿಗೆ ಬರುವ ಸಾಧ್ಯತೆ ಇದೆ. ಇದಕ್ಕಾಗಿ ಅಧ್ಯಾಪಕರ ಕಾಲೇಜಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸತತವಾಗಿ ಪ್ರಯತ್ನಿಸುತ್ತಿರಬೇಕು.

1986ರ ರಾಷ್ಟ್ರೀಯ ಶಿಕ್ಷಣನೀತಿಯು ಅನೇಕ ಬದಲಾವಣೆಗಳನ್ನು ಸೂಚಿಸಿತು. ಇದನ್ನು ಆವಿಷ್ಕಾರಗಳೆಂದೇ ಹೇಳಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ :-

1. ಎಲ್ಲ ಮಕ್ಕಳಿಗೂ ಶಿಕ್ಷಣ ಲಭಿಸುವಂತೆ ಮಾಡುವುದು ಶಿಕ್ಷಣದ ಸಾರ್ವತ್ರೀಕರಣ.
2. ದೇಶದ ಎಲ್ಲಾ ರಾಜ್ಯಗಳಲ್ಲಿ 10+2+3 ಚೌಕಟ್ಟಿನಲ್ಲಿ ವಿದ್ಯಾಭ್ಯಾಸ ನೀಡುವುದು.
3. ರಾಷ್ಟ್ರೀಯ ಚೌಕಟ್ಟಿನಲ್ಲಿ ಪಠ್ಯವಸ್ತು ನಿರ್ಮಾಣ. ಒಂದು ಸಾಮಾನ್ಯ ತಿರುಳು ಇರುವಂತೆ ಮಾಡುವುದು.
4. 'ಮಾಡಿ ಕಲಿ' ಈ ಸೂತ್ರಕ್ಕೆ ಆದ್ಯತೆ ಕೊಡುವುದು.
5. 'ಕಲಿವಿನ ಸಾಮರ್ಥ್ಯ' ಮಕ್ಕಳಲ್ಲಿ ಮೂಡುವಂತೆ ಮಾಡುವುದು.

6. ಜೀವನ ಪರ್ಯಂತ ಶಿಕ್ಷಣಸೌಲಭ್ಯಗಳು ದೊರಕುವಂತೆ ಮಾಡುವುದು.
7. ಕನಿಷ್ಠ ಕಲಿಕಾಮಟ್ಟಗಳನ್ನು ರೂಪಿಸಿಕೊಂಡು ಅವನ್ನು ಸಾಧಿಸುವುದು.
8. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಅಳವಡಿಕೆ.

ಈ ಎಲ್ಲ ವಿಚಾರಗಳು ಸಾಧಿತವಾಗಬೇಕಾದರೆ ಸರ್ಕಾರ, ಶಿಕ್ಷಣ ಇಲಾಖೆ, ಅಧ್ಯಾಪಕರ ಕಾಲೇಜುಗಳು; ಶಿಕ್ಷಣತಜ್ಞರು ಒಟ್ಟುಗೂಡಿ ಕಷ್ಟಪಟ್ಟು ಕೆಲಸಮಾಡಬೇಕು. ಇದಕ್ಕಾಗಿ ಸಂಸ್ಥೆಗಳು ಈಗಾಗಲೇ ಸ್ಥಾಪಿತವಾಗಿವೆ.

ಇವುಗಳನ್ನು ಎಲ್ಲಾ ರಾಜ್ಯಗಳಲ್ಲಿಯೂ ಪ್ರತಿ ಜಿಲ್ಲೆಯಲ್ಲೂ ಸ್ಥಾಪಿತವಾಗಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿಸಂಸ್ಥೆಗಳು (DIETS), ಕೆಲವು ಅಧ್ಯಾಪಕರ ಕಾಲೇಜುಗಳಲ್ಲಿ ಸ್ಥಾಪಿತವಾಗಿರುವ ವಿಸ್ತರಣಾ ಶಾಖೆಗಳು (CTE) ಮತ್ತು ಶಿಕ್ಷಣ ಅಧಿಕಾರಿಗಳಿಗೆ, ಉಪನ್ಯಾಸಕರುಗಳಿಗೆ ತರಬೇತಿ ನೀಡಲು ಸ್ಥಾಪಿತವಾಗಿರುವ ಶಿಕ್ಷಣ ಉನ್ನತ ಅಧ್ಯಯನ ಸಂಸ್ಥೆಗಳು (IASE) ಇವು ಮುಖ್ಯವಾದವು. ಇವಲ್ಲದೆ ಸರ್ಕಾರವೇ ತೆಗೆದುಕೊಂಡಿರುವ ಪ್ರಾಥಮಿಕ ಶಿಕ್ಷಣ ಸುಧಾರಣಾ ಯೋಜನೆಗಳು (DPEP) ಮತ್ತು ಸಾಕ್ಷರತಾ ಕಾರ್ಯಕ್ರಮಗಳು - ಇವು ಗಮನಾರ್ಹ ಸೇವೆ ಸಲ್ಲಿಸುತ್ತಿವೆ.

ಒಟ್ಟಿನಲ್ಲಿ ಶಿಕ್ಷಣದಲ್ಲಿ ಆವಿಷ್ಕಾರಗಳ ಅವಶ್ಯಕತೆ ಇದೆ. ಅವು ಬೇಕು. ಒಟ್ಟಿನಲ್ಲಿ ವಿವಿಧ ಹಂತಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರು ಮನಸ್ಸು ಮಾಡಬೇಕು. ಅವರು ತಮ್ಮ ಬೋಧನೆಯನ್ನು ಚುರುಕುಗೊಳಿಸಿ, ಅದರಲ್ಲಿ ಒಂದು ಹೊಸತನವನ್ನು ತರಬೇಕು. ನಮ್ಮ ಶೈಕ್ಷಣಿಕ ಸಂಸ್ಥೆಗಳೆಲ್ಲವೂ ಆವಿಷ್ಕರಣ ಕೇಂದ್ರಗಳಾಗಬೇಕು. ಆಗ ಖಂಡಿತ ನಮ್ಮ ದೇಶದ ಶೈಕ್ಷಣಿಕ ಪ್ರಗತಿ ಚೆನ್ನಾಗುವುದರಲ್ಲಿ ಸಂಶಯವಿಲ್ಲ.

○

ಸಮಾಜಕಾರ್ಯ - ಶಿಕ್ಷಣಾಭಿವೃದ್ಧಿ

ಡಾ. ಎಚ್. ಎಂ. ಮರುಳಸಿದ್ಧಯ್ಯ

ಈ ಲೇಖನದಲ್ಲಿ ಎರಡು ವೃತ್ತಿಗಳ ಅನ್ಯೋನ್ಯ ಮತ್ತು ಅತ್ಯಗತ್ಯ ಸಂಬಂಧಗಳನ್ನು ಪ್ರಸ್ತಾಪಿಸಲಾಗುವುದು. ಲೇಖನದ ಶೀರ್ಷಿಕೆಯು ಸಮಾಜಕಾರ್ಯಕ್ಕೇ ಹೆಚ್ಚು ಒತ್ತು ಕೊಟ್ಟಿರುವುದು. ಅದರಲ್ಲೂ ಸಮಾಜಕಾರ್ಯ ಶಿಕ್ಷಣವು ಅಭಿವೃದ್ಧಿಯಾಗುವ ಅಗತ್ಯಕ್ಕೇ ಹೆಚ್ಚು ಒತ್ತುಕೊಟ್ಟಿರುವುದು ಕಾಣುತ್ತದೆ. ಆದರೆ, ಒಳಹೊಕ್ಕು ನೋಡಿದರೆ ಸಮಾಜಕಾರ್ಯದ ಅಭಿವೃದ್ಧಿಗೂ, ಶಿಕ್ಷಣದ ಅಭಿವೃದ್ಧಿಗೂ ಸಮಾನವಾದ ಒತ್ತನ್ನು ಕೊಟ್ಟಿರುವುದನ್ನು ಅರಿಯಬಹುದು. **ಸಮಾಜಕಾರ್ಯ** ಮತ್ತು **ಶಿಕ್ಷಣ** ಎರಡೂ ಮನುಷ್ಯನ ಜೀವನದ ಸಮಸ್ಯೆಗಳನ್ನು ಪರಿಹರಿಸುವ ಮತ್ತು ಅದನ್ನು ಸಮೃದ್ಧಗೊಳಿಸುವ ಪ್ರಕ್ರಿಯೆಗಳು. ಕಾಲಮಾನದ ದೃಷ್ಟಿಯಿಂದ ವೃತ್ತಿಯಾಗಿ ಶಿಕ್ಷಣವು ಸಮಾಜಕಾರ್ಯಕ್ಕಿಂತ ಹಳೆಯದು ಮತ್ತು ಭಿನ್ನವಾಗಿ ಎದ್ದು ಕಾಣತಕ್ಕಂಥ ಸಂಗತಿ. ಸಮಾಜಕಾರ್ಯವಾದರೂ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಒಂದು ವೃತ್ತಿಯಾಗಿ ರೂಪುಗೊಂಡ ಸಂಗತಿ. ಆದರೆ, ಇವೆರಡೂ ಮನುಷ್ಯಜೀವನವನ್ನು ತಿದ್ದಿತೀಡುವ, ಅವನು ಮಾನವನಾಗಿ ಬಾಳುವಂಥ ಹಾಗೂ ಉನ್ನತಸ್ಥಿತಿಗೆ ಏರುವಂಥ ಅನುಕೂಲವನ್ನು ಕಲ್ಪಿಸುವ ಮಹತ್ವದ ಉಪಕರಣಗಳಾಗಿವೆ. ತಾತ್ತ್ವಿಕವಾಗಿ ಮತ್ತು ಪರಿಕಲ್ಪನೆಯ ನಿಟ್ಟಿನಲ್ಲಿ ಇವುಗಳನ್ನು ತಿಳಿದುಕೊಂಡರೆ ಇವು ಪ್ರತ್ಯಪ್ರತ್ಯೇಕವಾದ ಘಟಕಗಳಾಗಿ ತೋರುತ್ತವೆ. ಆದರೆ, ವಾಸ್ತವಿಕವಾಗಿ ಈ ಎರಡೂ ಮಾನವ ಜೀವನದ ಭಿನ್ನವಲ್ಲದ ಅವಿಭಾಜ್ಯ ಅಂಶಗಳಾಗಿವೆ. ಶಿಕ್ಷಣವು ಅನೌಪಚಾರಿಕ ನೆಲೆಯಲ್ಲಿ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವ, ಮಾನವರೊಳಗಿನ ಸಂಬಂಧಗಳನ್ನು ಸೃಷ್ಟಿಸುವ, ಅವರ ನಡವಳಿಕೆಗಳನ್ನು ರೂಪಿಸುವ, ಉನ್ನತ ಮೌಲ್ಯಗಳನ್ನು ಆಂತರಿಕಗೊಳಿಸುವ, ಶಿಷ್ಟದೃಷ್ಟಿಯನ್ನು ಗಟ್ಟಿಗೊಳಿಸುವ ಪ್ರಕ್ರಿಯೆಯಾಗಿದೆ. ಮನುಷ್ಯನು ಬೆಳೆಯುತ್ತಿರುವಂತೆಯೇ ತನ್ನ ಸಮಾಜೀಕರಣದ ಪ್ರಕ್ರಿಯೆಯಲ್ಲಿ ಮತ್ತು ಸಂಬಂಧಗಳ ಜಾಲದಲ್ಲಿ ಉಂಟಾಗುವ ಸಮಸ್ಯೆಗಳನ್ನು ವಿಶ್ಲೇಷಿಸಿ, ಪರಿಹಾರವನ್ನು ಕಂಡುಹಿಡಿಯುವ ಪ್ರಕ್ರಿಯೆಯಾಗಿದೆ. ಶಿಕ್ಷಣವನ್ನು ಕರಗತಮಾಡಿಕೊಂಡು ಅದರಲ್ಲಿಯೇ ಪರಿಣತಿ ಪಡೆಯಲು ಆಸಕ್ತರಿಗೆ ಪ್ರಶಿಕ್ಷಣ ಬೇಕಾಗುತ್ತದೆ. ಅಂತೆಯೇ ಸಮಾಜಕಾರ್ಯದಲ್ಲಿ ಪರಿಣತಿಯನ್ನು ಪಡೆಯಲೂ ಪ್ರಶಿಕ್ಷಣ ಬೇಕಾಗುತ್ತದೆ. ಶಿಕ್ಷಣಕ್ಷೇತ್ರದಲ್ಲಿ ಬಂದೊದಗುವ ವಿವಿಧ ಸಮಸ್ಯೆಗಳಿಗೆ ಸಮಾಜಕಾರ್ಯದ ಪರಿಹಾರ ಸೂತ್ರಗಳ ನೆರವು ಬೇಕಾಗುತ್ತದೆ. ಅಂತೆಯೇ ಸಮಾಜಕಾರ್ಯದ ಪರಿಣಾಮಕರವಾದ ಅನುಷ್ಠಾನದಲ್ಲಿ ಶೈಕ್ಷಣಿಕ ಸೂತ್ರಗಳ ನೆರವೂ ಬೇಕಾಗುತ್ತದೆ.

ಸಂವೈಧಾನಿಕ ಅಂಶಗಳು

ಸಮಾಜಕಾರ್ಯ ಮತ್ತು ಶಿಕ್ಷಣಗಳು ವೃತ್ತಿಗಳಾಗಿರುವುದರಿಂದ, ಎರಡರ ಉದ್ದೇಶವೂ ವ್ಯಕ್ತಿಯ ಮತ್ತು ಇಡೀ ಸಮಾಜದ ಒಳಿತೇ ಆಗಿರುವುದರಿಂದ ಇವೆರಡೂ ತಾತ್ತ್ವಿಕ

ನೆಲೆಗಟ್ಟನ್ನು ಹೊಂದಿವೆ; ವೈಜ್ಞಾನಿಕ ಮಾರ್ಗವನ್ನು ಅನುಸರಿಸುತ್ತವೆ; ಆತ್ಮೀಯ ವಾತಾವರಣವನ್ನು ಸೃಷ್ಟಿಮಾಡಿಕೊಂಡು ಅದರಲ್ಲಿಯೇ ವ್ಯವಹರಿಸಬೇಕಾದ ಅಗತ್ಯವನ್ನು ಕಂಡುಕೊಂಡಿವೆ; ತಮ್ಮ ತಮ್ಮ ಉದ್ದೇಶಗಳು ಪೂರ್ಣಗೊಂಡವೊ ಹೇಗೆಂದು ಮೌಲ್ಯಮಾಪನಕ್ಕೆ ತೆರೆದುಕೊಂಡಿರುತ್ತವೆ. ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ತೀವ್ರವಾಗಿ ಗಮನದಲ್ಲಿ ಇರಿಸಿಕೊಂಡು ತಮ್ಮ ಮಾರ್ಗೋಪಾಯಗಳನ್ನು ಕಂಡರಿಸುತ್ತವೆ; ತಮ್ಮ ಒಳ-ಹೊರಗೆರಡೂ ಪಾರದರ್ಶಕವಾಗಿರುವಂತೆ ನೋಡಿಕೊಳ್ಳುತ್ತವೆ; ಸಂಶೋಧನೆ, ಶೋಧಗಳ ವಿನಿಮಯ, ಪ್ರಯೋಗಗಳ ಅಳವಡಿಕೆ, ಅನುಭವ ಸಂಗ್ರಹ ಮತ್ತು ಅದರ ಸಂಪೋಷಣೆ, ಮುಂತಾದವುಗಳೆಲ್ಲವೂ ಇವುಗಳ ರಾಚನಿಕ ವಿನ್ಯಾಸದಲ್ಲಿ ಸೂಕ್ತಸ್ಥಾನವನ್ನು ಪಡೆದಿರುತ್ತವೆ.

ಶಿಕ್ಷಣ ಮತ್ತು ಸಮಾಜಕಾರ್ಯಗಳು ವೃತ್ತಿಗಳೆಂದು ಪರಿಗಣಿತವಾಗಿರುವುದು ಇವುಗಳೆ ಪರಿಣತಿಯನ್ನು ಪಡೆದಿರುವವರಿಗೆ ಮತ್ತು ಇವು ವೃತ್ತಿಗಳಾಗಿ ಅನುಷ್ಠಾನಗೊಂಡರೆ ಮನುಷ್ ಜೀವನವು ಸೊಗಸಿನದಾಗುತ್ತದೆ ಎಂದು ಅರಿತಿರುವವರಿಗೆ ಮಾತ್ರ. ಇತರರಿಗೆ ಇವು ಮನುಷ್ಯನ ನಿರಪೇಕ್ಷೆ ಮತ್ತು ಫಲದ ನಿರೀಕ್ಷೆ ಇಲ್ಲದೆ ಮನಃಪೂರ್ವಕ ಸಲ್ಲಿಸುವ ಸೇವೆ ಅಥವಾ ನೀಡುವ ನೆರವು ಎಂದೇ ಅರ್ಥವಾಗಿರುವುದು. ಇವು ವೃತ್ತಿಗಳಾಗಿ ಕಾರ್ಯನಿರತವಾಗಿರುವುದರ ಅಗತ್ಯವನ್ನು ಕಂಡುಕೊಂಡವರು ಇವುಗಳಿಗೆ ನಿರ್ದಿಷ್ಟವಾದ ತಾತ್ವಿಕ ಬುನಾದಿ ಇರುತ್ತದೆ; ತತ್ತ್ವಾದರ್ಶವೊಂದನ್ನು ಅಂಗೀಕರಿಸಲಾಗಿರುತ್ತದೆ, ಖಚಿತವಾದ ಕಾರ್ಯಕ್ಷೇತ್ರಗಳಿರುತ್ತವೆ; ಗಟ್ಟಿಗೊಳಿಸಿಕೊಂಡ ಸೂತ್ರ ಮತ್ತು ಮೌಲ್ಯಗಳ ಬೆಳಕಿನಲ್ಲಿ ಸಿದ್ಧಗೊಳಿಸಿದ ವಿಧಾನ ತಂತ್ರಗಳನ್ನು ಕಾರ್ಯಾಚರಣೆಯಲ್ಲಿ ಬಳಸಲಾಗುತ್ತದೆ; ಸಂಶೋಧನೆ ಮತ್ತು ದಾಖಲೀಕರಣವು ಅನಿವಾರ್ಯ ಕ್ರಿಯೆಯಾಗಿರುತ್ತವೆ; ಸಹ-ವೃತ್ತಿಕಾರರೊಡನೆ ಸತತವಾದ ವಿಚಾರವಿನಿಮಯವು ನಡೆಯುತ್ತಿರುತ್ತದೆ; ಅನುಭವ ಮತ್ತು ಆವಿಷ್ಕಾರಗಳ ಸಂವಹನ ಕ್ರಿಯೆಯು ವೃತ್ತಿಯ ಅಭಿವೃದ್ಧಿಗೆ, ಮತ್ತು ಹಬ್ಬುವಿಕೆಗೆ ನೆರವಾಗುತ್ತದೆ; ವೃತ್ತಿಶೀಲವನ್ನು ಕಾಪಾಡಿಕೊಂಡು ಹೋಗುವುದಕ್ಕಾಗಿ ಸತತವಾದ ಶುದ್ಧೀಕರಣವು ನಡೆಯುತ್ತಿರುತ್ತದೆ. ಈ ಅಂಶಗಳನ್ನು ಗಮನವಲ್ಲಿರಿಸಿಕೊಂಡು ಶಿಕ್ಷಣ ಮತ್ತು ಸಮಾಜಕಾರ್ಯಗಳನ್ನು ವೃತ್ತಿಗಳಾಗಿ ಪರಿಗಣಿಸಲಾಗಿದೆ. ಈ ವೃತ್ತಿಗಳಲ್ಲಿ ತೊಡಗಿದವರು ವೈಜ್ಞಾನಿಕ ಜ್ಞಾನವನ್ನು ಗಳಿಸಿಕೊಂಡು, ವಿಧಾನ-ತಂತ್ರಗಳನ್ನು ಕರಗತಮಾಡಿಕೊಂಡು ಅಂಗೀಕರಿಸಿದ ಮೌಲ್ಯ-ಶೀಲಗಳನ್ನು ಮೀರದಂತೆ ವ್ರತನಿಷ್ಠೆಯಿಂದ ಕಾರ್ಯನಿರತವಾಗಿರಬೇಕೆಂದು ನಿರೀಕ್ಷಿಸಲಾಗಿದೆ.

ಕಣ್ಣೆರಡು-ದೃಷ್ಟಿಯೊಂದು

ಇದೇ ಸಂದರ್ಭದಲ್ಲಿ ನಾವು ಗುರುತಿಸಲೇಬೇಕಾದ ಅಂಶವೆಂದರೆ, ಈ ಎರಡೂ ವೃತ್ತಿಗಳು ಮನುಷ್ಯನ ಜೀವನವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ತೆಗೆದುಕೊಂಡಿರುವುದು. ಇವು ಭಿನ್ನವಾಗಿ ತೋರುತ್ತಿರುವುದು ಇವು ಅಂಗೀಕರಿಸಿರುವ ವಿಶಿಷ್ಟ ಮಾರ್ಗ ದೃಷ್ಟಿಗಳಿಂದ. ಕಾಲಾಂತರದಲ್ಲಿ ಶಿಕ್ಷಣವು ಔಪಚಾರಿಕ ಕವಚವನ್ನು ತೊಟ್ಟುಕೊಂಡು, ಅಕ್ಷರವನ್ನು ತಳಹದಿಯಾಗಿ ಮಾಡಿಕೊಂಡು ಕಾರ್ಯನಿರತವಾಗಿರುವುದರಿಂದ ನಾಲ್ಕು ಗೋಡೆಗಳ ಮಧ್ಯೆ ಅದು ವಿಜೃಂಭಿಸತೊಡಗಿತು. ಆದರೆ, ಸಾಕ್ಷರತೆಯು ಸರ್ವರ ಶೈಕ್ಷಣಿಕ ಜೀವನದ ಭಾಗವಾಗಬೇಕು, ವೈಚಾರಿಕತೆಗೆ ಚಾಲನೆಯು ದೊರೆಯಬೇಕು ಎಂಬುದನ್ನು

ಗಮನದಲ್ಲಿರಿಸಿಕೊಂಡು ಶಿಕ್ಷಣವು ನಾಲ್ಕು ಗೋಡೆಗಳನ್ನು ದಾಟಿ ಸಮುದಾಯಕ್ಕೆ ಕಾಲಿರಿಸಿತು. ಶಾಲೆಯ ಕೋಣೆಯೊಳಗಿನ ಮಕ್ಕಳನ್ನು, ಯುವಕರನ್ನು ಸಂಭಾಳಿಸುತ್ತಿದ್ದ ಶಿಕ್ಷಣವು ವಯಸ್ಕರನ್ನು ಸೆಳೆದುಕೊಳ್ಳಲು ಕೋಣೆಯಾಚೆಗಿನ ಬಯಲಿಗೆ ಹೋಯಿತು. ವ್ಯಕ್ತಿಗತವಾದ ಶಿಕ್ಷಣಕ್ಕಿಂತಲೂ ವೃಂದಗತವಾದ ಶಿಕ್ಷಣವೆ ಪ್ರಮುಖ ಸ್ಥಾನವನ್ನು ಗಳಿಸಿತು. ಸಮುದಾಯ ಶಿಕ್ಷಣವು ಕ್ರಮೇಣ ರೂಪುಗೊಂಡಿತು. ಆದರೆ, ಸಮಾಜಕಾರ್ಯವು ವ್ಯಕ್ತಿಯನ್ನು ಪ್ರಥಮ ಮತ್ತು ಬಹುಮುಖ್ಯ ಅರ್ಥಿಯನ್ನಾಗಿ ಸ್ವೀಕರಿಸಿ, ಅವನ ಸಮಸ್ಯೆಗಳನ್ನು ಪರಿಹರಿಸಲು ಅವನಲ್ಲಿರುವ ಸಂಪನ್ಮೂಲಗಳನ್ನೇ ಕ್ರೋಡೀಕರಿಸಿ ಉಪಯೋಗಿಸತೊಡಗಿತು. ಗುಂಪಿನ ಮೂಲಕವೇ ವ್ಯಕ್ತಿಯ ಸಮಸ್ಯೆಗಳು ಪರಿಹಾರಗೊಳ್ಳುವ ಸಾಧ್ಯತೆಯು ಕಂಡುಬಂದರೆ, ಗುಂಪನ್ನು ಒಂದು ಉಪಕರಣವನ್ನಾಗಿ ಮಾರ್ಪಡಿಸಿ, ಅದನ್ನೇ ವ್ಯಕ್ತಿಯ ಒಳಿತಿಗಾಗಿ ಉಪಯೋಗಿಸತೊಡಗಿತು. ಆದರೆ, ಸಮುದಾಯದ ಬೆಂಬಲವಿಲ್ಲದೆ ವೃಂದಗಳು ನೆಲೆಯನ್ನು ಪಡೆಯುವುದಿಲ್ಲ, ವೃಂದಗಳ ಹಿನ್ನೆಲೆಯಿಲ್ಲದೆ ವ್ಯಕ್ತಿಗಳಿಗೆ ಅಸ್ತಿತ್ವವೇ ಇರುವುದಿಲ್ಲ. ಹೀಗಾಗಿ ವ್ಯಕ್ತಿಗಳು ಸಮುದಾಯದ ಮೊರೆ ಹೋಗಬೇಕಾಗುತ್ತದೆ. ಸಮುದಾಯವಾದರೂ ವೃಂದಗಳ ಸಂಯೋಗದ ವಿನ್ಯಾಸವಾಗಿದೆ. ಅಂದರೆ, ವೃಂದಗಳ ಹೆಗಲ ಮೇಲೆಯೇ ಸಮುದಾಯವು ತನ್ನ ಸಂಸಾರವನ್ನು ಸಾಗಿಸುತ್ತಿರುವುದು. ಕೊಟ್ಟಕೊನೆಗೆ ವ್ಯಕ್ತಿಯೊಳಗಿನ ಸತ್ವವೇ ಗುಂಪಿನ ಸಾಂಗ್ರಾಹಿಕ ಸತ್ವವಾಗಿರುತ್ತದೆ; ಈ ಸತ್ವವೇ ಸಮುದಾಯದ ಸತ್ವವಾಗಿ ವಿಸ್ತೃತಗೊಂಡಿರುತ್ತದೆ. ಹೀಗಾಗಿ ವ್ಯಕ್ತಿ-ಸಮೂಹ-ಸಮುದಾಯಗಳು ಪರಸ್ಪರ ಅವಲಂಬನೆಗೊಂಡ ಅಂಶಗಳಾಗಿವೆ. ಆದುದರಿಂದಲೇ ವ್ಯಕ್ತಿಗಳ ಸಮಸ್ಯೆ-ಸಂಪನ್ಮೂಲಗಳು ತಮ್ಮ ವಿಸ್ತೃತ ರೂಪಗಳಾಗಿ ವೃಂದಗಳಲ್ಲಿ ಮತ್ತು ಸಮುದಾಯದಲ್ಲಿ ಪ್ರಕಟಗೊಳ್ಳುತ್ತವೆ. ಸಮಸ್ಯೆಗಳು ಸೃಷ್ಟಿಯಾಗುವುದು ಸಂಪನ್ಮೂಲದ ಕೊರತೆಯಿಂದ, ಇಲ್ಲವೆ ಅವುಗಳ ಅನುಪಯೋಗ/ದುರುಪಯೋಗದಿಂದ. ಈ ಅಂಶವನ್ನು ಎರಡು ವೃತ್ತಿಗಳೂ ಗುರುತಿಸುತ್ತವೆ ಮತ್ತು ತಮ್ಮ ತಮ್ಮ ಕಾರ್ಯಾಚರಣೆಯ ಕ್ಷೇತ್ರಗಳಲ್ಲಿ ಅವಿರಳವಾಗಿ ಇದನ್ನು ಪ್ರಧಾನವಾಗಿ ದೃಷ್ಟಿಯಲ್ಲಿರಿಸಿಕೊಂಡಿರುತ್ತವೆ.

ಆಲಯದಿಂದ ಬಯಲಿಗೆ

ಶಿಕ್ಷಣವು ಸಾಮಾನ್ಯವಾಗಿ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಹೆಚ್ಚಿನ ಒತ್ತನ್ನು ಕೊಡುತ್ತದೆ. ಇದು ಹಿಂದಿನ ಕಾಲದಿಂದಲೂ ಪಾಲಿಸಿಕೊಂಡು ಬಂದಿರುವ ಕ್ರಿಯೆಯಾಗಿದೆ. ಜೊತೆಗೆ ಪ್ರಪಂಚದ ಎಲ್ಲ ಕಡೆಯೂ ಇದೇ ಕ್ರಿಯೆಯು ಅಂಗೀಕೃತವಾಗಿದೆ. ಸಮಾಜಕಾರ್ಯವು ವೃತ್ತಿಯಾಗಿ ರೂಪುಗೊಂಡಾಗ ವ್ಯಕ್ತಿಗೆ ಮಾನ್ಯತೆಯನ್ನು ನೀಡಿ ಅವನ ಆಂತರಿಕ ಸತ್ವವನ್ನು ಸಂಪನ್ಮೂಲವೆಂದು ಪರಿಭಾವಿಸಿ, ಅದನ್ನು ಉಪಯೋಗಿಸಿಕೊಂಡು ಅವನು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರದಲ್ಲಿ ನೆರವಾಗುತ್ತಿತ್ತು. ಆದರೆ ಕ್ರಮೇಣ ಗುಂಪಿನ, ಅನಂತರ ಸಮುದಾಯದ ಸತ್ವ ಸಮಸ್ಯೆಗಳು ಹೇಗೆ ಕ್ರಿಯಾತ್ಮಕವಾಗಿ ಬೆಸೆದುಕೊಂಡಿರುವುದರ ಅರಿವಾಗಿ ವ್ಯಕ್ತಿಯ ಜೊತೆಗೆ ಗುಂಪು ಮತ್ತು ಸಮುದಾಯಗಳ ಅಭಿವೃದ್ಧಿಯ ಬಗೆಗೂ ಕಾಳಜಿಯನ್ನು ತೋರಿಸತೊಡಗಿತು. ಅದರಲ್ಲೂ ಪ್ರಾಚ್ಯ ಸಮಾಜ-ಸಂಸ್ಕೃತಿಗಳ ಸಂಪರ್ಕ ಬಂದು ಇಲ್ಲಿಯೂ ತನ್ನ ಕಾರ್ಯಾಚರಣೆಗೆ ತೊಡಗಿದ ಸಮಾಜಕಾರ್ಯವು ಸಮುದಾಯದ ಅಭ್ಯುದಯಕ್ಕೆ ಹೆಚ್ಚಿನ ಆಸ್ಥೆ-ಆಸಕ್ತಿಯನ್ನು ತಳೆಯತೊಡಗಿತು. ಆರಂಭದಲ್ಲಿ ಪ್ರಜಾಪ್ರಭುತ್ವ ತತ್ತ್ವವನ್ನು ನೆಲೆಯಾಗಿರಿಸಿಕೊಂಡಿದ್ದ ಸಮಾಜಕಾರ್ಯವು ಸಮಾಜವಾದವನ್ನು ತನ್ನ ತಾತ್ವಿಕ ತಳಹದಿಯಲ್ಲಿ

ಸೇರಿಸಿಕೊಂಡಿತು. ಪ್ರಾಚ್ಯ ಸಂಸ್ಕೃತಿಯಲ್ಲಿ ವ್ಯಕ್ತಿಗಿಂತಲೂ ಸಮುದಾಯಕ್ಕೇ ಮಾನ್ಯ ಇರುವುದರಿಂದ, ವ್ಯಕ್ತಿಯ ಬಾಳು ಬೆಳಗುವುದಾಗಲಿ ಅಳಿಯುವುದಾಗಲಿ ಸಮುದಾಯದಲ್ಲಿಯೆ ಎಂಬ ವಾಸ್ತವತೆಯ ಅರಿವಿನಿಂದ ಸಮಾಜಕಾರ್ಯವು ಸಮಾಜಕಲ್ಯಾಣಕ್ಕೆ, ಸಮುದಾಯ ಅಭ್ಯುದಯಕ್ಕೆ ಆದ್ಯತೆಯನ್ನು ನೀಡುತ್ತದೆ. ಆಧ್ಯಾತ್ಮಕ್ಕೆ, ಪರದ ಚಿಂತನೆಗೆ ಪ್ರಾಮುಖ್ಯತೆಯನ್ ನೀಡಿದಾಗ ವ್ಯಕ್ತಿಯು ಕೇಂದ್ರದಲ್ಲಿರುತ್ತಾನೆ. ಆದರೆ, ಇಹದ ಬದುಕು ಸಹ್ಯವಾಗಲು ಗುಂಪಿ ಸಮುದಾಯಕ್ಕೆ ಕೇಂದ್ರಸ್ಥಾನವು ದೊರೆಯುತ್ತದೆ. ಆದುದರಿಂದಲೇ ಪ್ರಾಚ್ಯರಾಷ್ಟ್ರಗಳ ಸಮಾಜಕಾರ್ಯವು ತನ್ನ ಕಾರ್ಯವೈಖರಿಯಲ್ಲಿ ಸಮುದಾಯವನ್ನು ಮೇಲ್‌ಸ್ತರದಲ್ಲಿರಿಸುತ್ತ ಸಾಕ್ಷರತೆಯ ಮಹತ್ವವನ್ನು ಮತ್ತು ಕೂಡಿಬಾಳುವ ಅಗತ್ಯವನ್ನು ಕಂಡುಕೊಂಡ ಪ್ರಾಚ್ಯ ಜಗತ್ ಶಿಕ್ಷಣವನ್ನು `ಆಲಯದಿಂದ ಬಯಲಿಗೆ' ಬರಮಾಡಿಕೊಂಡಿದೆ. ಮನುಷ್ಯನು ಪ್ರಾಣಿಯಿಂ ಭಿನ್ನವಾಗಿರುವನೆಂದು ಸಾಬೀತುಪಡಿಸಲು ಸಂಸ್ಕೃತಿ ಮತ್ತು ಶಿಕ್ಷಣಗಳ ಸಾಕ್ಷ್ಯಾಧಾರಗಳಾಗಿರುತ್ತವೆ. ಹೀಗಾಗಿ ಶಿಕ್ಷಣ ಮತ್ತು ಸಮಾಜಕಾರ್ಯಗಳೆರಡೂ ವ್ಯಕ್ತಿ-ಗುಂಪ ಸಮುದಾಯಗಳ ಸಂಕೀರ್ಣ ವಿನ್ಯಾಸದಲ್ಲಿ ಸಾಪೇಕ್ಷ, ಆದರೆ ಇತ್ಯಾತ್ಮಕ ಸ್ಥಾನವನ್ನು ಮತ ಪಾತ್ರವನ್ನು ಪಡೆದಿವೆ ಎಂಬುದನ್ನು ನಾವು ಅರಿತುಕೊಳ್ಳುವುದು ಅಗತ್ಯ.

ಸಹಯೋಗ-ಸಂಯೋಜನೆ

ಮನುಷ್ಯನ ಇಹದ ಬಾಳುವೆಯು ಆಹ್ಲಾದಕರವಾಗಿರಬೇಕು ಎಂದು ಬಯಸುವವ ಮನುಷ್ಯನಿಗೆ ಬೇಕಾದ ಅತ್ಯಾವಶ್ಯಕ ಸೌಲಭ್ಯಗಳು ಸಾಕಷ್ಟು ಪ್ರಮಾಣದಲ್ಲಿ, ಸೂ ಗುಣಮಟ್ಟದಲ್ಲಿ ಮತ್ತು ಕ್ಲುಪ್ತಕಾಲದಲ್ಲಿ ಲಭ್ಯವಾಗಿರಬೇಕು. ಅವನಲ್ಲಿರುವ ಆಂತರ ಸಂಪನ್ಮೂಲಗಳು ಕ್ರೋಢೀಕರಣಗೊಂಡು ಅವನ ಆರೋಗ್ಯಕರವಾದ ವ್ಯಕ್ತಿತ್ವದಲ್ಲಿ ಅರಳಬೇಕ ಅವನು ಇತರರೊಡನೆ ಹೊಂದಿರುವ ಸಂಬಂಧಗಳು ಮಧುರವೂ ಸದೃಢವೂ ಆಗಿರಬೇಕ ವ್ಯಕ್ತಿಯಲ್ಲಾಗಲಿ, ಗುಂಪಿನಲ್ಲಾಗಲಿ, ಸಮುದಾಯದಲ್ಲಾಗಲಿ ಸಮಸ್ಯೆಗಳು ಉದ್ಭವಿಸಿದಾ ಅವುಗಳ ಪರಿಹಾರವಾಗಬೇಕು. ಇದಕ್ಕಿಂತಲೂ ಮುಖ್ಯವಾದುದೆಂದರೆ ಸಮಸ್ಯೆಗಳು ಹುಟ್ಟದಂ ಪ್ರತಿಬಂಧಕ ಕ್ರಿಯೆಯು ನಡೆಯುವುದು. ಇವುಗಳ ಜೊತೆಗೆ, ಇನ್ನೂ ಅತ್ಯವಸರವಾ ಇತ್ಯಾತ್ಮಕವಾದ ಬೆಳವಣಿಗೆಯ ಕ್ರಮಗಳನ್ನು ಕೈಗೊಳ್ಳಬೇಕು. ಅಂದರೆ, ಪ್ರತಿಬಂಧಕ ಪರಿಹಾರಾತ್ಮಕ-ಪ್ರಾಗತಿಕ ಕ್ರಮಗಳು ಸಂಯೋಜಿತ ಕ್ರಿಯಾವಿನ್ಯಾಸದ ಮೂಲಕ ಮನುಷ್ಯ ಜೀವನವು ಆನಂದದಾಯಕ ಮತ್ತು ಸಾರ್ಥಕ ಆಗಿರುವಂತೆ ನೋಡಿಕೊಳ್ಳಬೇಕು. ಇದ ಸಾಧ್ಯವಾಗುವುದು ವಿಜ್ಞಾನ ಮತ್ತು ವೃತ್ತಿಗಳೆರಡೂ ಸಂಯೋಜಿತಗೊಂಡಾಗ.

ವಸ್ತುಗಳ ಜ್ಞಾನವನ್ನು ವಸ್ತುನಿಷ್ಠವಾಗಿ ಪಡೆದಾಗ ಅದು ವೈಜ್ಞಾನಿಕ ಜ್ಞಾನವಾಗುತ್ತ ಇಂಥ ಜ್ಞಾನದ ಬೆಳಕಿನಲ್ಲಿ ಸಮಸ್ಯೆಗಳನ್ನು, ಅವುಗಳ ಕಾರಣಗಳನ್ನು, ಅಪೇಕ್ಷೆ-ಆಕಾಂಕ್ಷೆಗಳನ ಸಂಪನ್ಮೂಲಗಳನ್ನು, ಅವುಗಳ ಕ್ರೋಢೀಕರಣದ ಮಾರ್ಗಗಳನ್ನು, ಮಾರ್ಗಪ್ರಯೋಗದಿಂ ಉಂಟಾಗುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹೀ ಅರ್ಥಮಾಡಿಕೊಳ್ಳುವುದು ಅಗತ್ಯವೂ ಹೌದು. ವೈಜ್ಞಾನಿಕ ಜ್ಞಾನದಿಂದ ನಿರ್ದಿಷ್ಟ ವೃತ್ತಿಯ ಕ್ರಮಗಳಿಗೆ ಅನುಗುಣವಾಗಿ ಅಪೇಕ್ಷಿತ ಉದ್ದೇಶಗಳನ್ನು ಸಾಧಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿಯೇ ಶಿಕ್ಷಣ ಮತ್ತು ಸಮಾಜಕಾರ್ಯಗಳ ಕಾರ್ಯಾಚರಣೆಯನ ಕೈಗೊಳ್ಳಬೇಕಾಗುತ್ತದೆ. ಈ ಕಾರ್ಯಾಚರಣೆಯು ಸಂಯೋಜಿತವಾಗಿ, ಸಹಯೋಗದಿಂ ನಡೆಯಬೇಕಾಗುತ್ತದೆ.

ಪ್ರಯೋಗ ಪ್ರಸಂಗ: ಸಮಾಜ ಕಾರ್ಯಶಿಕ್ಷಣಾಭಿವೃದ್ಧಿ ಶಿಬಿರ

ಶಿಕ್ಷಣದ ಮೂಲಕವೇ ಸಮುದಾಯದ ಅಭ್ಯುದಯ ಆಗಬೇಕಾದುದು ಸಾಧು ಮತ್ತು ಆಗುವುದು ಸಾಧ್ಯ ಎಂದು ಅನುಭವಿಗಳ, ಪ್ರಾಜ್ಞರ, ಶಿಕ್ಷಣವೇತ್ತರ ಮತ್ತು ಸಮಾಜ ಕಾರ್ಯಕರ್ತರ ಸಾಧಾರ ಅಭಿಪ್ರಾಯವಾಗಿದೆ. ಅರ್ಥೈಸುವ ಮತ್ತು ಕೆಲವು ವಿಶಿಷ್ಟ ಪರಿಸ್ಥಿತಿಯಲ್ಲಿ ವಿಭಿನ್ನವಾಗಿ ಕಾರ್ಯ ತೊಡಗುವುದಕ್ಕಾಗಿ ಶಿಕ್ಷಣವನ್ನು ಸಮಾಜಕಾರ್ಯದಿಂದ ಪ್ರತ್ಯೇಕಿಸಲಾಗುತ್ತದೆಯೇ ಹೊರತು ಅನ್ಯಕಾರಣಗಳಿಂದ ಅಲ್ಲ. ವಾಸ್ತವದಲ್ಲಿ ಸಮಾಜಕಾರ್ಯಕರ್ತನು ತನ್ನ ಕಾರ್ಯಾಚರಣೆಯಲ್ಲಿ ಶೈಕ್ಷಣಿಕ ಕ್ರಮಗಳನ್ನು ಪ್ರಜ್ಞಾಪೂರ್ವಕವಾಗಿಯೊ, ಅಪ್ರಜ್ಞಾಪೂರ್ವಕವಾಗಿಯಾದರೂ ಅಳವಡಿಸಿಕೊಳ್ಳಲೇ ಬೇಕಾಗುತ್ತದೆ. ಇದೇ ರೀತಿಯಲ್ಲಿ ಶಿಕ್ಷಕನು ಸಮಾಜಕಾರ್ಯದ ಸೂತ್ರಗಳನ್ನು ತನ್ನ ಕಾರ್ಯದಲ್ಲಿ ಅನುಸರಿಸಲೇ ಬೇಕಾಗುತ್ತದೆ. ಹೀಗೆ ಈ ಎರಡೂ ವೃತ್ತಿಗಳು ಪೂರಕ ವೃತ್ತಿಗಳಾಗಿ ಅನುಷ್ಠಾನಗೊಂಡಾಗ ಉದ್ದೇಶಿತ ಗುರಿಗಳು ಸಾಧಿಸಲ್ಪಡುತ್ತವೆ.

ಈ ಸತ್ಯವನ್ನು ಕಂಡುಕೊಂಡು ಒಂದು ಪ್ರಯೋಗವನ್ನು ಬಳ್ಳಾರಿಜಿಲ್ಲೆಯ ಹೂವಿನಹಡಗಲಿ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಮಾಡಲಾಯಿತು. ಅದು ಸಮಾಜಕಾರ್ಯ ಶಿಕ್ಷಣಾಭಿವೃದ್ಧಿ ಶಿಬಿರಗಳ ಮೂಲಕ ಪ್ರಕಟಗೊಂಡಿತು. ಸಾಮಾಜಿಕ ಪರಿವರ್ತನೆಯ ಮೂಲಕ ಸಾಮಾಜಿಕ ಅಭ್ಯುದಯವನ್ನು ಸಾಧಿಸುವ ಮೂಲ ಉದ್ದೇಶವನ್ನು ಹೊಂದಿ ಸ್ಥಾಪನೆಗೊಂಡ ಸ್ವಸ್ತಿ ಸ್ವಯಂ ಸೇವಾ ಸಂಘಟನೆಯು ಈ ಶಿಬಿರಗಳನ್ನು ವ್ಯವಸ್ಥೆಗೊಳಿಸಿತು. ಶಿಬಿರಗಳನ್ನು ಸಾಮಾನ್ಯವಾಗಿ ತಿಂಗಳಿಗೆ ಒಂದರಂತೆ, ಬೇರೆ ಬೇರೆ ಗ್ರಾಮಗಳಲ್ಲಿ ನಡೆಸಲಾಗುತ್ತಿತ್ತು. ಶಿಬಿರವು ಒಂದು ದಿನದ ಕಾಲಾವಧಿಯದಾಗಿದ್ದು ಶಿಕ್ಷಕರೂ, ಶಾಲಾ ವಿದ್ಯಾರ್ಥಿಗಳೂ, ಸಮಾಜ ಕಾರ್ಯಕರ್ತರೂ, ಯುವಕರೂ, ಊರ ಪ್ರಮುಖರೂ, ಸಾಮಾನ್ಯ ಜನರೂ, ಅಧಿಕಾರಿಗಳೂ, ಬ್ಯಾಂಕಿನ ಆಡಳಿತಗಾರರೂ, ಕಲಾವಿದರೂ, ಸಾಹಿತಿಗಳೂ, ಹೀಗೆಯೇ ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದವರೂ ಅದರಲ್ಲಿ ಭಾಗವಹಿಸುತ್ತಿದ್ದರು.

ಈ ಪ್ರಯೋಗ ನಡೆಯುತ್ತಿದ್ದ ಕಾಲದಲ್ಲಿ ಕರ್ನಾಟಕ ಶಿಕ್ಷಣ ಇಲಾಖೆಯ ನಿರ್ದೇಶನದ ಪ್ರಕಾರ ಮಂಡಲಪಂಚಾಯತಿಯ ವ್ಯಾಪ್ತಿಯೊಳಗೆ ಬರುವ ಎಲ್ಲ ಪ್ರಾಥಮಿಕ ಶಾಲೆಗಳ ಎಲ್ಲ ಶಿಕ್ಷಕರು ಕೇಂದ್ರ ಗ್ರಾಮದಲ್ಲಿ ತಿಂಗಳಿಗೆ ಒಮ್ಮೆ ನಿರ್ದಿಷ್ಟ ದಿನದಂದು/ತಾರೀಖಿನಂದು ಸಮಾವೇಶಗೊಂಡು ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದರು. ಆ ಸಮಾವೇಶವು ನಡೆಯುತ್ತಿದ್ದ ತಾರೀಖಿನಂದು ಆ ಎಲ್ಲ ಶಾಲೆಗಳಿಗೆ ಬಿಡುವು ನೀಡಲಾಗುತ್ತಿತ್ತು. ಆದುದರಿಂದ ಶಿಕ್ಷಕರಿಗೆ ಸಭೆಯಲ್ಲಿ ಭಾಗವಹಿಸಲು ತೊಂದರೆ ಇರುತ್ತಿರಲಿಲ್ಲ. ರಜೆ ಕೊಡುತ್ತಿದ್ದುದರಿಂದಲೂ ಸಭೆಯಲ್ಲಿ ಮಹತ್ವದ ಕಾರ್ಯಕಲಾಪಗಳಲ್ಲಿ ಭಾಗವಹಿಸಲೇ ಬೇಕಾಗಿದ್ದುದರಿಂದಲೂ ಶಿಕ್ಷಕರ ಹಾಜರಾತಿಯು ಕಡ್ಡಾಯವಾಗಿತ್ತು. ಆ ಸಭೆಯಲ್ಲಿ ಮುಖ್ಯವಾಗಿ ಎರಡು ಕಾರ್ಯಗಳನ್ನು ಶಿಕ್ಷಕರು ನಡೆಸಬೇಕಾಗಿತ್ತು. ಶಿಕ್ಷಕರಲ್ಲಿ ನೇಮಕಗೊಂಡ ಶಿಕ್ಷಕನು ಸೂಚಿತವಾದ/ಒಪ್ಪಿಕೊಂಡ ವಿಷಯದ ಬಗ್ಗೆ ಹೇಗೆ ಪಾಠ ಮಾಡಬೇಕು ಎಂಬುದನ್ನು ಕುರಿತು ಭಾಷಣ ಮಾಡಬೇಕಾಗಿತ್ತು. ಆ ಭಾಷಣದಲ್ಲಿ ಪ್ರಸ್ತಾಪವಾದ ಅಂಶಗಳ ಮೇಲೆ ಚರ್ಚೆಯಾಗುತ್ತಿತ್ತು. ಇದರಿಂದ ಇತರ ಶಿಕ್ಷಕರಿಗೆ ಮಾದರಿ ಪಾಠದ ಕ್ರಮದ ಪರಿಚಯವಾಗುತ್ತಿತ್ತು. ಅವರು ಮಾಡುವ ಎರಡನೆಯ ಕಾರ್ಯವೆಂದರೆ ಸರಕಾರದಿಂದ ಬಂದ ವಿವಿಧ ಸೂಚನೆಗಳ, ನಿರ್ದೇಶನಗಳ ಕಾರ್ಯಕ್ರಮಗಳ

ಪರಿಚಯ ಮಾಡಿಕೊಳ್ಳುವುದು. ಈ ಎರಡು ಕಾರ್ಯಗಳಾದ ಮೇಲೆ ಅಂದಿನ ಕಾರ್ಯಕ್ರಮ ಮುಕ್ತಾಯವಾಗುತ್ತಿತ್ತು.

ಸ್ವಸ್ತಿ ಸಂಘಟನೆಯ ಕಾರ್ಯಕರ್ತರು ಆ ಸಂದರ್ಭವನ್ನು ಉಪಯೋಗಿಸಿಕೊಳ್ಳ ಶಿಕ್ಷಕರನ್ನು ಕಂಡು, ಶಿಕ್ಷಣ ಮತ್ತು ಸಮಾಜಕಾರ್ಯಗಳೆರಡನ್ನೂ ಪೂರಕ ಹಾಗೂ ಸಾರ್ಥ ವೃತ್ತಿಗಳನ್ನಾಗಿ ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದನ್ನು ಚರ್ಚಿಸಿದರು. ಆ ಪ್ರದೇಶ ಮುಖ್ಯ ಊರುಗಳ ಪ್ರಮುಖರನ್ನು ಕಂಡು, ಶಾಲಾ ಅಭಿವೃದ್ಧಿ ಸಮಿತಿಗಳ ಸದಸ್ಯರನ ಭೇಟಿಯಾಗಿ, ಯುವಜನರ ಸಂಘಗಳ ಪದಾಧಿಕಾರಿಗಳನ್ನು ಸಂದರ್ಶಿಸಿ ಸಮಾಜಕಾಯ ಶಿಕ್ಷಣಾಭಿವೃದ್ಧಿಯ ಶಿಬಿರಗಳ ರೂಪುರೇಷೆಗಳನ್ನು ಚರ್ಚಿಸಿದರು. ಅವರೆಲ್ಲರ ಸಕ್ರಿಯ ಪಾಲುದಾರಿಕೆಯ ಅಗತ್ಯವನ್ನು ತೋರಿಸಿ, ಅವರ ಮನವೊಲಿಸಲಾಯಿತು. ಒಂದು ದಿನ ಶಿಬಿರದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು ಎಂಬುದನ್ನು ಅವರೆಲ್ಲರೊಡ ಚರ್ಚಿಸಿ, ನಿರ್ಧರಿಸಲಾಯಿತು. ಆ ನಿರ್ಧಾರದ ಪ್ರಕಾರ, ನಿರ್ದಿಷ್ಟ ದಿನದಂದು ನಿರ್ದಿಷ್ಟ ಊರಿನಲ್ಲಿ ಆ ಪ್ರದೇಶದ ಪ್ರಾಥಮಿಕ ಶಾಲೆಯ ಶಿಕ್ಷಕರೂ, ಆ ಊರಿನ ಶಾಲಾ ಮಕ್ಕಳೂ ಯುವಜನರೂ, ಪುರಪ್ರಮುಖರೂ, ಪಂಚಾಯತಿ ಮತ್ತಿತರ ಸಂಸ್ಥೆಗಳ ಸದಸ್ಯರೂ ಅಧಿಕಾರಿಗಳೂ ಸೇರಿ ಊರಿನ ಬೀದಿಬೀದಿಗಳಲ್ಲಿ ಪಾದಯಾತ್ರೆ ಹೋಗುವುದು; ಹಾಡುಗಳಿಂದ ಘೋಷಣೆಗಳಿಂದ ಶಿಕ್ಷಣದ ಮತ್ತು ಸಮುದಾಯದ ಅಭ್ಯುದಯದ ಮಹತ್ವವನ್ನು ತಿಳಿಸುವುದು ಸೂಕ್ತವಾದ ಸ್ಥಳದಲ್ಲಿ ಸಭೆ ಸೇರಿ ಪ್ರಾಜ್ಞರಿಂದ ನಾನಾ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಮಾಡಿಸುವುದು; ಸಭೆಯಲ್ಲಿ ಪಾಲ್ಗೊಂಡವರನ್ನು ಗುಂಪುಗಳಾಗಿ ವಿಂಗಡಿಸಿ, ಕೆಲವು ಆಯ್ದ ವಿಷಯಗಳ ಮೇಲೆ ಚರ್ಚೆಯನ್ನು ನಡೆಸುವುದು; ಆಯ್ದ ವಿಷಯಗಳು ಸಾಮಾನ್ಯವಾಗಿ ಹೀಗಿರುತ್ತಿದ್ದವು: ಶಾಲೆಯು ಅಭ್ಯುದಯದ ಕೇಂದ್ರಬಿಂದು, ಈ ಊರಿನ ಸಮಸ್ಯೆಗಳು ಮತ್ತು ಸಂಪನ್ಮೂಲಗಳು, ನಿರುದ್ಯೋಗಕ್ಕೆ ಇರುವ ಕಾರಣಗಳು, ಪರಿಸರ ಮಾಲಿನ್ಯದ ಕಾರಣಗಳು ಮತ್ತು ನಿವಾರಣೋಪಾಯಗಳು, ಇತ್ಯಾದಿ. ಚಿಕ್ಕಗುಂಪುಗಳ ಚರ್ಚೆಯನ್ನು ನಿರ್ದೇಶಿಸಲು ಅದೇ ಊರಿನ ಪ್ರಾಜ್ಞರೊಬ್ಬರನ್ನು, ಚರ್ಚೆಯ ವಿವರಗಳನ್ನು ದಾಖಲಿಸಿ ವರದಿಯನ್ನು ತಯಾರಿಸಲು ಸೂಕ್ತರಾದವರನ್ನು ನೇಮಿಸಲಾಗುತ್ತಿತ್ತು. ಅಪರಾಹ್ನ ಸೇರಿದ ಸಭೆಯಲ್ಲಿ ಗುಂಪು ಚರ್ಚೆಯ ವರದಿಗಳನ್ನು ಮಂಡಿಸಿ ಅವುಗಳ ಮೇಲೆ ಚರ್ಚೆಯನ್ನು ನಡೆಸಲಾಗುತ್ತಿತ್ತು; ನಿರ್ದಿಷ್ಟವಾದ ಒಂದು ಗಂಟೆಯ ಸಮಯದಲ್ಲಿ ಊರಿನ ಚರಂಡಿಗಳನ್ನು ಸ್ವಚ್ಛ ಮಾಡುವುದೊ, ಶಾಲೆಯ ಆಟದ ಬಯಲನ್ನು ಸಿದ್ಧಗೊಳಿಸುವುದೊ, ಶಾಲೆಯ ಗೋಡೆಗಳಿಗೆ ಸುಣ್ಣವನ್ನು ಹಚ್ಚುವುದೊ, ಇಂತಹ ಶ್ರಮದ ಕೆಲಸವನ್ನು ಮಾಡಲಾಗುತ್ತಿತ್ತು. ಸಾಧ್ಯವಾದರೆ ದಿನದ ಕೊನೆಗೆ ಮನರಂಜನೆಯ ಕಾರ್ಯಕ್ರಮವೂ ಇರುತ್ತಿತ್ತು. ಬೆಳಗಿನಿಂದ ರಾತ್ರಿಯವರೆಗೂ ನಡೆಯುತ್ತಿದ್ದ ಈ ಶಿಬಿರದಲ್ಲಿ ಪಾಲ್ಗೊಳ್ಳಲು ಬಂದ ಪರ ಊರಿನವರಿಗೆ ಮತ್ತು ಸತತವಾಗಿ ಕಾರ್ಯದಲ್ಲಿ ನೆರವಾಗುವ ಸ್ವಯಂ ಸೇವಕರಿಗೆ ಊರಿನವರೇ ಉಪಾಹಾರ ಮತ್ತು ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದರು.

ಈ ಶಿಬಿರವು ಉತ್ಸಾಹದ ವಾತಾವರಣವನ್ನು ಉಂಟುಮಾಡಿ ಶಿಕ್ಷಣದಲ್ಲಿ ಮತ್ತು ಅಭ್ಯುದಯದ ಕಾರ್ಯದಲ್ಲಿ ನಿರತರಾಗಿರುವ ಎಲ್ಲರಿಗೂ ಸಾರ್ಥಕ ಕಾರ್ಯದಲ್ಲಿ ಭಾಗವಹಿಸಿದ ಭಾವನೆಯು ಮೂಡುತ್ತಿತ್ತು. ಅದೇ ಪ್ರದೇಶದ ಮತ್ತೊಂದು ಹಳ್ಳಿಯಲ್ಲಿ ಮುಂದಿನ ತಿಂಗಳು

ನಡೆಯಲಿರುವ ಶಿಬಿರಕ್ಕೆ ಆಹ್ವಾನ ಬಂದು. ಅದರ ರೂಪುರೇಷೆಗಳು ಒಂದು ತಿಂಗಳ ಮೊದಲೇ ಸಿದ್ಧಗೊಳಿಸಲು ಸೂಕ್ತಕ್ರಮವನ್ನು ತೆಗೆದುಕೊಳ್ಳಲಾಗುತ್ತಿತ್ತು. ಹಿಂದಿನ ಶಿಬಿರದಲ್ಲಿ ಭಾಗವಹಿಸಿದ್ದ ಎಲ್ಲ ಶಿಕ್ಷಕರೂ ಮುಂದಿನ ಶಿಬಿರಕ್ಕೆ ಹಾಜರಾಗಿ ಅಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳಲ್ಲೂ ಪಾಲ್ಗೊಳ್ಳುವುದರ ಜೊತೆಗೆ ಆ ಊರಿನ ಶಾಲೆಯ ಪರಿಸ್ಥಿತಿಯನ್ನು, ಆ ಊರಿನ ಸ್ಥಿತಿಗತಿಗಳನ್ನು ಅವಲೋಕಿಸುವ ಅವಕಾಶವನ್ನು ಪಡೆಯುತ್ತಿದ್ದರು. ಆ ಊರಿನ ಜನರಿಗೂ ತಮ್ಮ ಸಮಸ್ಯೆಗಳನ್ನು, ತಮ್ಮಲ್ಲಿರುವ ಸಂಪನ್ಮೂಲಗಳನ್ನು ಸರಿಯಾಗಿ ತಿಳಿದುಕೊಳ್ಳುವ ಅವಕಾಶವು ದೊರೆಯುತ್ತಿತ್ತು.'

ಹೀಗೆ ಹಳ್ಳಿಹಳ್ಳಿಗಳಲ್ಲಿ ನಡೆಯುತ್ತಿದ್ದ ಶಿಬಿರಗಳಿಂದ ಎರಡು ರೀತಿಯ ಪರಿಣಾಮಗಳು ಉಂಟಾದವು. ಶಿಕ್ಷಣ ಮತ್ತು ಸಮುದಾಯದ ಅಭಿವೃದ್ಧಿಯ ಬಗ್ಗೆ ಜನರಲ್ಲಿ ಜಾಗ್ರತೆ ಮೂಡಿದ ಸೂಚನೆಗಳು ಕಂಡುಬಂದವು. ಕೆಲವು ಶಿಕ್ಷಕರಲ್ಲಿ, ಅದರಲ್ಲೂ ತಮ್ಮ ವೃತ್ತಿಯಲ್ಲಿ ಆಸಕ್ತಿಯಿಲ್ಲದವರಲ್ಲಿ, ಈ ಶಿಬಿರಗಳ ಬಗ್ಗೆ ವಿರೋಧ ಕಂಡುಬಂತು. ಯಾಕೆಂದರೆ, ಜನರೂ, ಶಾಲಾಮಕ್ಕಳೂ ಶಿಕ್ಷಕರು ಸಮಯಕ್ಕೆ ಸರಿಯಾಗಿ ಶಾಲೆಗೆ ಬರುವಂತೆ, ಸರಿಯಾಗಿ ಪಾಠಗಳನ್ನು ಮಾಡುವಂತೆ ಒತ್ತಾಯ ಮಾಡತೊಡಗಿದರು. ಇಂಥ ಜಾಗ್ರತೆಯು ಅವರಿಗೆ ಬೇಡವಾಗಿತ್ತು.

ಈ ಪ್ರಯೋಗದಿಂದ ಸಮುದಾಯದಲ್ಲಿನ ಪರಿಸರ ನೈರ್ಮಲ್ಯದ ಬಗ್ಗೆ ಮತ್ತು ಗುಂಪುಗಳ ನಡುವಿನ ದ್ವೇಷಾಸೂಯೆಗಳ ಶಮನದ ಬಗ್ಗೆ ಜನರಲ್ಲಿ ಆಸಕ್ತಿ ಮೂಡತೊಡಗಿದ್ದುದನ್ನು ದಾಖಲಿಸಲೇ ಬೇಕಾಗಿದೆ. ಶಿಕ್ಷಣದ ಮೂಲಕ ಸಾಮಾಜಿಕ ಅಭ್ಯುದಯವನ್ನು ಸಾಧಿಸುವ ಸಾಧ್ಯತೆಯು ಈ ಪ್ರಯೋಗದಿಂದ ಕಂಡುಕೊಳ್ಳಲಾಯಿತು.

ಒಟ್ಟಿನಲ್ಲಿ ಮಾನವ ಕಲ್ಯಾಣ ಮತ್ತು ಅಭ್ಯುದಯಗಳ ಗುರಿಯನ್ನು ಹೊಂದಿರುವ ಶಿಕ್ಷಣ ಮತ್ತು ಸಮಾಜಕಾರ್ಯಗಳು ಒಗ್ಗೂಡಿ ಕಾರ್ಯಪ್ರವೃತ್ತವಾದರೆ ತಮ್ಮ ತಮ್ಮ ವೃತ್ತಿಗಳ ಅನನ್ಯತೆಯನ್ನು ಕಾಪಾಡಿಕೊಳ್ಳಬಹುದು; ಸಮೃದ್ಧವಾಗಿ ಬೆಳೆಯಲೂ ಬಹುದು, ಸಾರ್ಥಕ್ಯಭಾವವನ್ನು ವೃತ್ತಿಕಾರರು ಪಡೆಯಲೂಬಹುದು; ಗುರಿಯನ್ನು ಸಾಧಿಸಲೂ ಬಹುದು.

○

ಪ್ರಾಥಮಿಕ ಶಿಕ್ಷಣ

ಕೆ. ಶಾಂತಯ

ಇಪ್ಪತ್ತೊಂದನೆ ಶತಮಾನದಲ್ಲಿ ಪಾದಾರ್ಪಣೆ ಮಾಡುತ್ತಿರುವ ನಮಗೆ ಶಿಕ್ಷಣ ಜೀವನದ ಒಂದು ಅವಿಭಾಜ್ಯ ಅಂಗವೆಂದು ಬೇರೆ ಹೇಳಬೇಕಾಗಿಲ್ಲ. ಯಾವುದೇ ದೇಶ ಸರ್ವಾಂಗೀಣ ಅಭಿವೃದ್ಧಿ ಆ ದೇಶದ ಜನತೆಯ ಶಿಕ್ಷಣದ ಗುಣಮಟ್ಟವನ್ನವಲಂಬಿಸಿದ ಶಿಕ್ಷಣದ ವ್ಯಾಪ್ತಿ ಅನಂತ ಮತ್ತು ನಿರಂತರ. ತೊಟ್ಟಿಲಿನಿಂದ ಚಟ್ಟದ ವರೆಗೆ ವ್ಯಕ್ತಿಯ ಜೀವನದ ಮೇಲೆ ಹಲವಾರು ರೀತಿಯಿಂದ ಮತ್ತು ಅನೇಕ ಮೂಲಗಳಿಂದ ನಿರಂತರವಾ ಬೀಳುವ ಪ್ರಭಾವವೇ ಒಂದು ರೀತಿಯ ಶಿಕ್ಷಣವಾಗಿದ್ದು ಅದರಂತೆಯೇ ವ್ಯಕ್ತಿಯ ಜೀವ ರೂಪುಗೊಳ್ಳುತ್ತಿರುತ್ತೆ. ಮಾನವನ ಸುಪ್ತಚೇತನವನ್ನು ಬಡಿದೆಬ್ಬಿಸಲು, ಅವನಲ್ಲಿ ಹುದುಗಿರುವ ವಿಚಾರಶಕ್ತಿಯನ್ನು, ಭಾವನೆಗಳನ್ನು ಹಾಗೂ ಮನೋವೃತ್ತಿಯನ್ನು ಸರಿಯಾದ ರೀತಿಯಲ್ಲಿ ವಿಕಸನಗೊಳಿಸಲು ಶಿಕ್ಷಣವೊಂದು ಪ್ರಬಲವಾದ ಸಾಧನವಾಗಿದೆ. ಆದ್ದರಿಂದಲೆ ಶಿಕ್ಷಣವನ್ನು ಸಾಮಾಜಿಕ ಪರಿವರ್ತನೆಯ ಅಸ್ತ್ರವೆಂತಲೂ, ಅಭಿವೃದ್ಧಿಯ ಮಾಧ್ಯಮವೆಂತಲ ಕರೆಯುವುದುಂಟು. ಇದನ್ನು ಗಮನಿಸಿಯೇ, "ದೇಶದ ಭವಿಷ್ಯ ಶಾಲಾಕೊಠಡಿಯ ನಾಲ್ಕುಗೋಡೆಗಳ ಮಧ್ಯ ರೂಪುಗೊಳ್ಳುತ್ತಿದೆ" ಎಂದು ಅಭಿಪ್ರಾಯ ಪಡಲಾಗಿದೆ.

ಶಿಕ್ಷಣದ ಪರಿಕಲ್ಪನೆಯಲ್ಲಿ ಪ್ರಾಥಮಿಕಶಿಕ್ಷಣಕ್ಕೆ ಮಹತ್ವದ ಸ್ಥಾನವುಂಟು. ದೇಶದ ಅಭಿವೃದ್ಧಿಯ ಭದ್ರಬುನಾದಿಯೇ ಪ್ರಾಥಮಿಕ ಶಿಕ್ಷಣವೆಂದರೆ ತಪ್ಪಾಗಲಿಕ್ಕಿಲ್ಲ. ಶಿಕ್ಷಣದ ವ್ಯವಸ್ಥೆಯ ಯೋಜನೆಗಳಿಗಾಗಿ ರಾಷ್ಟ್ರೀಯ ಶಿಕ್ಷಣನೀತಿಯು "ರಾಷ್ಟ್ರೀಯ ಅಭಿವೃದ್ಧಿ ಸಾಮಾನ್ಯ ಪೌರತ್ವದ ಪರಿಜ್ಞಾನ ಹಾಗೂ ಸಂಸ್ಕೃತಿ ಮತ್ತು ರಾಷ್ಟ್ರೀಯ ಏಕತೆಯನ್ನು ಬಲಪಡಿಸುವ ಗುರಿಯನ್ನು ಹೊಂದಿತ್ತು. ಶಿಕ್ಷಣವ್ಯವಸ್ಥೆಯ ಆಮೂಲಾಗ್ರ ಪುನರ್‌ರಚನೆಯ ಅವಶ್ಯಕತೆಯ ಬಗ್ಗೆ ಹಾಗೂ ಶಿಕ್ಷಣದ ಗುಣಮಟ್ಟವನ್ನು ಎಲ್ಲಾಹಂತಗಳಲ್ಲೂ ಸುಧಾರಿಸುವ ಕಡೆ ಹೆಚ್ಚು ಒತ್ತು ನೀಡಿತ್ತು. ವಿಜ್ಞಾನ ಹಾಗೂ ತಾಂತ್ರಿಕತೆಗೆ ಹೆಚ್ಚು ಗಮನ ನೀಡಿ ಶಿಕ್ಷಣ ಮತ್ತು ಜನರ ಜೀವನದ ಬಗ್ಗೆ ನಿಕಟ ಸಂಬಂಧವನ್ನು ರೂಢಿಸಿ, ಜನರಲ್ಲಿ ನೈತಿಕಮೌಲ್ಯಗಳನ್ನು ಬೆಳೆಸುವ ಕಡೆಗೆ ಹೆಚ್ಚು ಗಮನ ನೀಡಿತ್ತು." ಆದರೆ ಆರ್ಥಿಕ ಹಾಗೂ ವ್ಯವಸ್ಥಾಪಕ ಬೆಂಬಲವಿಲ್ಲದ್ದರಿಂದ ಹಾಗೂ ನಿರ್ದಿಷ್ಟವಾದ ಜವಾಬ್ದಾರಿಯನ್ನು ಸೂಚಿಸದೆ ಹೋಗಿದ್ದರಿಂದ ಮೇಲಿನ ನೀತಿಯನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯು "ಈಗಾಗಲೇ ಸೃಷ್ಟಿಯಾಗಿರುವ ಸಂಪನ್ಮೂಲಗಳ ಗರಿಷ್ಠ ಲಾಭ ಪಡೆಯುವುದರ ಜೊತೆಗೆ, ಇಂತಹ ಲಾಭಗಳು ಸಮಾಜದ ಎಲ್ಲಾ ವರ್ಗಗಳಿಗೂ ದೊರೆಯುವಂತೆ ಖಾತ್ರಿ ಪಡಿಸಿಕೊಳ್ಳುವುದನ್ನು, ಮತ್ತು ಆರ್ಥಿಕ ಮತ್ತು ವ್ಯವಸ್ಥಾಪಕ ಬೆಂಬಲ ದೊರಕಿಸುವುದನ್ನು ಹಾಗೂ ನಿರ್ದಿಷ್ಟ ಜವಾಬ್ದಾರಿಯನ್ನು ಸೂಚಿಸುವುದನ್ನು ಗುರಿಯಾಗಿಟ್ಟುಕೊಂಡು" ಜಾರಿಯಲ್ಲಿ ಬಂದಿದೆ. ಶಿಕ್ಷಣವು ಸಂವಿಧಾನದ

ಸಮವರ್ತಿಪಟ್ಟಿಯಲ್ಲಿ ಬಂದಿರುವುದರಿಂದ (1976) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಂಚವಾರ್ಷಿಕ ಯೋಜನೆಗಳ ಮೂಲಕ ಶಿಕ್ಷಣದ ಸುಧಾರಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಯಲ್ಲಿ ತರುತ್ತಿವೆ. ಆದರೂ ಶಿಕ್ಷಣಕ್ಕಾಗಿ ಆಯವ್ಯಯದಲ್ಲಿ ಒದಗಿಸಬೇಕಾಗಿರುವ ಹಣ ಅಗತ್ಯಕ್ಕಿಂತ ಕಡಿಮೆಯಾಗಿದೆ. ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರ ಅಭಿಪ್ರಾಯದ ಪ್ರಕಾರ ಶಿಕ್ಷಣಕ್ಕಾಗಿ ತೊಡಗಿಸುವ ಹಣದಿಂದ ಭೌತಿಕಸಂಪತ್ತಿಗಾಗಿ ತೊಡಗಿಸುವ ಹಣಕ್ಕಿಂತ ಹೆಚ್ಚಿನ ಪ್ರತಿಫಲ ಲಭಿಸುತ್ತದೆ. ಜಾಗತಿಕ ಅಭಿವೃದ್ಧಿಯ ಒಂದು ವರದಿಯೂ ಇದೇ ಅಭಿಪ್ರಾಯವನ್ನು ಹೊಂದಿದೆ. ಆದ್ದರಿಂದ ಶಿಕ್ಷಣಕ್ಕೆ ಆಯವ್ಯಯದಲ್ಲಿ ಆದ್ಯತೆ ನೀಡುವ ಬಗ್ಗೆ ದೃಢನಿರ್ಧಾರ ತಾಳಬೇಕಾಗಿದೆ.

ಪ್ರಾಥಮಿಕ ಶಿಕ್ಷಣಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ಸಾಧನೆ ಗಮನಾರ್ಹವಾಗಿದೆ. 1997-98ರ ವಾರ್ಷಿಕ ವರದಿಯ ಪ್ರಕಾರ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ 46,975 ಆಗಿದ್ದು, ಇದರಲ್ಲಿ 82.25 ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರು ದಾಖಲಾಗಿದ್ದರೆ 2,24,404 ಶಿಕ್ಷಕರು ಕಾರ್ಯನಿರತರಾಗಿದ್ದಾರೆ. ಆದರೆ 1997-98ನೇ ಸಾಲಿನ ಆಯವ್ಯಯದಲ್ಲಿ ಶಿಕ್ಷಣಕ್ಕಾಗಿ ಒದಗಿಸಿರುವ ಹಣ ಯೋಜನೆ ಮತ್ತು ಯೋಜನೇತರ ಬಾಬುಗಳಿಗೆ ಸೇರಿ ಒಟ್ಟು ರೂ. 2,11,268.15 ಲಕ್ಷವಾಗಿದೆ. ಇದು ರಾಜ್ಯದ ಒಟ್ಟು ಆಯವ್ಯಯದ ಶೇಕಡಾ 16.04 ರಷ್ಟಿದೆ. ಇದು ಸಾಲದು. ಶಿಕ್ಷಣಕ್ಕೆ ಒದಗಿಸಿರುವ ಹಣದಲ್ಲಿ ಪ್ರಾಥಮಿಕ ಶಿಕ್ಷಣದ ಪಾಲು ಶೇಕಡಾ 53.16ರಷ್ಟಿದೆ. ಈ ಹಣದ ಬೆಂಬಲದಿಂದ "ಎಲ್ಲರಿಗೂ ಶಾಲೆಗಳು ನಿಲುಕುವಂತಿರಬೇಕು; ಎಲ್ಲರೂ ಶಾಲೆಗೆ ಸೇರಬೇಕು ಮತ್ತು ಎಲ್ಲರೂ ಕನಿಷ್ಠ ಕಲಿಕಾಮಟ್ಟವನ್ನು ತಲುಪಬೇಕೆಂಬ ಗುರಿಯನ್ನು ಹೊಂದಿ" ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದಿದೆ:-

1. ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯುವುದು.
2. ಶಿಕ್ಷಕರನ್ನು ನೇಮಿಸುವುದು.
3. ಶಾಲಾಕೊಠಡಿಗಳ ನಿರ್ಮಾಣ.
4. ಶಾಲಾಕೊಠಡಿಗಳ ದುರಸ್ತಿ.
5. ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ಪೂರೈಕೆ.
6. ಪ್ರೋತ್ಸಾಹಕ ಯೋಜನೆಗಳು:
   (i) ಉಚಿತ ಸಮವಸ್ತ್ರಗಳ ವಿತರಣೆ
   (ii) ಉಚಿತ ಪಠ್ಯಪುಸ್ತಕಗಳ ವಿತರಣೆ
   (ಸರ್ಕಾರಿ ಶಾಲೆಗಳ ಒಂದರಿಂದ ನಾಲ್ಕನೇ ತರಗತಿಯಲ್ಲಿರುವ ಎಲ್ಲ ಮಕ್ಕಳಿಗೆ ಹಾಗೂ ಐದರಿಂದ ಏಳನೇ ತರಗತಿಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಮಾತ್ರ ಈ ಎರಡು ಕಾರ್ಯಕ್ರಮಗಳು ಜಾರಿಯಲ್ಲಿವೆ.)
   (iii) ಕೇಂದ್ರ ಸರ್ಕಾರದ ಮಧ್ಯಾಹ್ನದ ಉಪಾಹಾರ ಯೋಜನೆ.
7. ವಿಶ್ವಬ್ಯಾಂಕ್ ನೆರವಿನ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ. ಇಷ್ಟೆಲ್ಲ

ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದರೂ ಶಿಕ್ಷಣಕ್ಷೇತ್ರದ ನೈಜಸ್ಥಿತಿ ಚಿಂತಾಜನಕವಾಗಿದೆ.

ಎಂಟು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಾನ್ವಿತಗೊಳಿಸಿದ್ದರೂ ಸ್ವಾತಂತ್ರ್ಯ ಲಭಿಸಿ ಐವತ್ತು ವರ್ಷಗಳು ಸಂದಿದ್ದರೂ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು ಸಂಪೂರ್ಣವಾಗಿ ಪರಿಹಾರಗೊಂಡಿಲ್ಲ. ಆರುವರ್ಷದಿಂದ ಹದಿನಾಲ್ಕುವರ್ಷಗಳ ವರೆಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯಶಿಕ್ಷಣ ನೀಡಲು ಸಾಧ್ಯವಾಗಿಲ್ಲ. (ಭಾರತದ ಸಂವಿಧಾನದಲ್ಲಿ ನಮೂದಿಸಿದ್ದರೂ) ಒಂದರಿಂದ ಏಳನೇ ತರಗತಿಯ ವರೆಗಿನ ಮಕ್ಕಳಲ್ಲಿ ಶಾಲೆಯನ್ನು ಮಧ್ಯದಲ್ಲಿಯೇ ಬಿಡುವವರ ಶೇಕಡಾ ಪ್ರಮಾಣ 43.71 ರಷ್ಟಿದೆ. ಬಾಲಕಾರ್ಮಿಕರ ಸಂಖ್ಯೆ ಕಡಿಮೆಯಾಗಿಲ್ಲ. ಅಲ್ಲದೆ ರಾಜ್ಯದ ಶೇಕಡಾ 43.96ರಷ್ಟು ಜನ ನಿರಕ್ಷರರುಗಳಾಗಿದ್ದಾರೆ. ಪಬ್ಲಿಕ್‌ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಏಪ್ರಿಲ್ 1998ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ 55.45ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಪ್ರತಿವರ್ಷ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆಲ್ಲ ಮುಖ್ಯಕಾರಣ ಶಿಕ್ಷಣಕ್ಕಾಗಿ ಅಗತ್ಯವಿರುವ ಅರ್ಥಿಕ ನೆರವು ಮತ್ತು ಸಮಾನ ಅವಕಾಶಗಳ ಕೊರತೆ ಹಾಗೂ ಯೋಜನೆಗಳ ಅಸಮರ್ಪಕ ಅನುಷ್ಠಾನ.

ಶಿಕ್ಷಣಕ್ಷೇತ್ರದಲ್ಲಿ ಶಿಕ್ಷಕ, ಪ್ರಶಿಕ್ಷಕ ಹಾಗೂ ಶಿಕ್ಷಣಾಧಿಕಾರಿಗಳ ಪಾತ್ರ ಬಹುಮುಖ್ಯವಾಗಿದೆ. ಬಹುತೇಕ ಶಿಕ್ಷಕರಲ್ಲಿ ತಮ್ಮ ಕೆಲಸದ ಬಗ್ಗೆ ಆಸಕ್ತಿ, ಕಾಳಜಿ ಮತ್ತು ಶ್ರದ್ಧೆಯಿಲ್ಲ. ಶಿಕ್ಷಕರ ನೇಮಕ ಮತ್ತು ಆಯ್ಕೆ ಪ್ರಕ್ರಿಯೆಯನ್ನು ಇನ್ನಷ್ಟು ಉತ್ತಮ ಪಡಿಸಬೇಕಾಗಿದೆ. ಇನ್ನು ಮುಂದೆ ನೇಮಕಗಳನ್ನು ಒಪ್ಪಂದದ ಆಧಾರದ ಮೇಲೆ ಮಾಡುವ ಬಗ್ಗೆ ಪರಿಶೀಲಿಸಬಹುದಾಗಿದೆ. ಶಿಕ್ಷಕರಲ್ಲಿ ಸರಿಯಾದ ಪ್ರೇರಣೆ ಮತ್ತು ಭರವಸೆಯನ್ನುಂಟುಮಾಡುವ ಸಲುವಾಗಿ ಕೇಂದ್ರಸರ್ಕಾರದ ನೆರವಿನಿಂದ ಅನೇಕ ತರಬೇತಿಸಂಸ್ಥೆಗಳನ್ನು ಬಲಪಡಿಸಿದೆ. ದುರ್ದೈವದ ಸಂಗತಿಯೆಂದರೆ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಶಿಕ್ಷಕರು (ಕೆಲವರನ್ನು ಹೊರತುಪಡಿಸಿ) ನಿರಾಸಕ್ತರು ಮತ್ತು ಬೇಜವಾಬ್ದಾರಿಯಿಂದ ಕೂಡಿದವರಾಗಿದ್ದಾರೆ. ಇದನ್ನು ಮೂಕಪ್ರೇಕ್ಷಕರಾಗಿ ನೋಡುವಂತಿಲ್ಲ. ಅರ್ಹ ಮತ್ತು ಯೋಗ್ಯವ್ಯಕ್ತಿಗಳನ್ನು ನೇರ ನೇಮಕಾತಿ ಅಥವಾ ಒಪ್ಪಂದದ ಆಧಾರದ ಮೇಲೆ ನೇಮಿಸಬೇಕಾದ ಅಗತ್ಯವಿದೆ. ಜೇಷ್ಠತೆಯನ್ನು ಕೈಬಿಡಬೇಕಾಗುತ್ತದೆ. ಶಿಕ್ಷಣಕ್ಷೇತ್ರದ ಸುಧಾರಣೆಯಲ್ಲಿ 'ಹೊಂದಾಣಿಕೆಗೆ ಅಥವಾ ಹೇಗಾದರೂ ನಡೆಯಲಿ' ಎಂಬ ಮನೋಭಾವಕ್ಕೆ ಅವಕಾಶವಿರಕೂಡದು. ಯೋಗ್ಯ ಪ್ರಶಿಕ್ಷಕರನ್ನು ನೇಮಿಸಿದಲ್ಲಿ ಶಿಕ್ಷಕರ ಸೇವಾನಿರತ ತರಬೇತಿ ಪರಿಣಾಮಕಾರಿಯಾಗಿ ಜರುಗಬಹುದು. ಶಾಲೆಗಳ ತಪಾಸಣೆ ಮತ್ತು ಮೇಲ್ವಿಚಾರಣೆ ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಶಾಲೆಗಳ ಸಂದರ್ಶನ, ತಪಾಸಣೆ ಮತ್ತು ವರದಿಗಳ ಕಾರ್ಯಾನುಸರಣೆ ಪರಿಣಾಮಕಾರಿಯೂ ಅರ್ಥಪೂರ್ಣವೂ ಆಗಬೇಕಾಗಿದೆ. ಇದುವೇ ಶಿಕ್ಷಣಾಧಿಕಾರಿಗಳ ಮುಖ್ಯ ಕೆಲಸವಾಗಬೇಕು. (ಈಗ ಇದು ಗೌಣವಾಗಿದೆ.) ಇದಕ್ಕಾಗಿ ಸಮಯವನ್ನು ಕೊಟ್ಟು ಶಿಕ್ಷಕರ ಕುಂದುಕೊರತೆಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಬೇಕು. ಶಿಕ್ಷಕರಿಗಿಂತ ಶಿಕ್ಷಣಾಧಿಕಾರಿಗಳಿಂದ ಹೆಚ್ಚಿನ ಜವಾಬ್ದಾರಿಯನ್ನು ಈಗ ನಿರೀಕ್ಷಿಸುವುದು ಅತ್ಯಗತ್ಯವಾಗಿದೆ. ಉತ್ತಮ ಶಿಕ್ಷಕರು ಎಷ್ಟು

ಅವಶ್ಯಕವೋ ಉತ್ತಮ ಆಡಳಿತಾಧಿಕಾರಿಗಳೂ ಅಷ್ಟೇ ಆವಶ್ಯಕ. ಆಡಳಿತದ ಚುಕ್ಕಾಣಿ ಹಿಡಿದವರು ಈ ಲೋಪವನ್ನು ಸರಿಪಡಿಸಲು ಪ್ರಯತ್ನಸಬೇಕಾಗಿದೆ. ಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ, ಬೋಧನಾ ಮತ್ತು ಕಲಿಕಾ ಸಾಮಾಗ್ರಿಗಳ ಖರೀದಿ ಹಾಗೂ ಪ್ರೋತ್ಸಾಹಕರ ಯೋಜನೆಗಳ ಅನುಷ್ಠಾನದಲ್ಲಿ ಲಂಚಕ್ಕೆ ಆಸ್ಪದವಿರಕೂಡದು. ಇದನ್ನು ಸರಿಪಡಿಸದಿದ್ದಲ್ಲಿ ಸೋರುವ ಶಾಲಾಕೊಠಡಿಗಳನ್ನು, ಕಳಪೆ ಗುಣಮಟ್ಟದ ಸಾಮಗ್ರಿಗಳನ್ನು, ಅತೃಪ್ತ ಫಲಾನುಭವಿಗಳನ್ನು ನೋಡಬೇಕಾಗುತ್ತದೆ. ಗ್ರಾಮ ಶಿಕ್ಷಣಸಮಿತಿಗಳು ಮತ್ತು ಸಾರ್ವಜನಿಕರು ಎಚ್ಚತ್ತು ಇಂಥ ಲೋಪಗಳನ್ನು ತಡೆಗಟ್ಟಲು ಮುಂದಾಗಬೇಕಾಗಿದೆ. ಯೋಜಕರು ಇರುವವರೆಗೆ ಯೋಜನೆಗಳಿಗೆ ಕೊರತೆಯಿಲ್ಲ. ಆದರೆ ಇವುಗಳನ್ನು ಅನುಷ್ಠಾನಗೊಳಿಸುವ ಪ್ರಮಾಣಿಕ ವ್ಯಕ್ತಿಗಳು ಬೇಕು. ಇಲ್ಲವಾದರೆ ಅನಕ್ಷರತೆಯನ್ನು ತೊಡೆದು ಹಾಕಲು ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಧಿಸಲು ಇನ್ನೆಷ್ಟು ವರ್ಷಗಳು ಬೇಕೋ!

ರಾಷ್ಟ್ರದ ಅಭಿವೃದ್ಧಿಯ ಬಗ್ಗೆ ಅಭಿಮಾನ ಮತ್ತು ಕಾಳಜಿಯುಳ್ಳ ನಾಗರಿಕ, ಶಿಕ್ಷಕ, ಅಧಿಕಾರಿ ಮತ್ತು ಪ್ರಜಾಪ್ರತಿನಿಧಿಗಳ ಒಮ್ಮನದ ಪ್ರಾಮಾಣಿಕಪ್ರಯತ್ನದಿಂದ ಮಾತ್ರ ಶಿಕ್ಷಣ ಕ್ಷೇತ್ರದಲ್ಲಿ ಹಾಸುಹೊಕ್ಕಾಗಿರುವ ಲೋಪದೋಷಗಳನ್ನು ನಿರ್ಮೂಲನ ಮಾಡಬಹುದಾಗಿದೆ.

○

ಮಹಿಳಾ ಶಿಕ್ಷಣ

ಡಾ. ಹೆಚ್. ಎಂ. ಶೈಲಜ

"ಕಡಿಮೆ ತಿಳಿದುಕೊಂಡು ಹೆಚ್ಚು ಅರ್ಥಮಾಡಿಕೊಳ್ಳುವುದರಿಂದ ಗಂಡಸರಿಗಿಂತ ಹೆಂಗಸರೇ ಇನ್ನೂ ಬುದ್ಧಿವಂತರು." - ಜೇಮ್ಸ್ ಸ್ಟೀಫನ್ಸ್

ಶಿಕ್ಷಣ ವ್ಯವಸ್ಥೆಯ ಪುನಾರಚನೆ ಇಂದಿನ ದಿನಗಳಲ್ಲಿ ವ್ಯಾಪಕವಾಗಿ ಚರ್ಚಿಸಲ್ಪಡುತ್ತಿರುವ ವಿಷಯಗಳಲ್ಲಿ ಒಂದಾಗಿದೆ. ಜ್ಞಾನಪ್ರಸಾರ ಹಾಗೂ ಸಾಮೂಹಿಕ ನಿರಕ್ಷರತೆಯನ್ನು ಎದುರಿಸುವಲ್ಲಿ ಸದ್ಯದ ವ್ಯವಸ್ಥೆಯ ವಿಫಲತೆಯ ಸಾಕಷ್ಟು ಸಂದೇಹಕ್ಕೆ ಕಾರಣವಾಗಿದ್ದು ಕೆಲ ಪ್ರಮುಖ ನ್ಯೂನತೆಗಳ ಬಗ್ಗೆ ಸಾರ್ವಜನಿಕ ಅರಿವನ್ನು ಮೂಡಿಸಿದೆ.

ಹೆಣ್ಣುಮಕ್ಕಳ ಶಿಕ್ಷಣದ ಅತೃಪ್ತಿಕರ ಸ್ಥಿತಿ ಅತ್ಯಂತ ನಿರುತ್ಸಾಹಕರ ಚಿತ್ರವಾಗಿದೆ. ಮಹಿಳೆಯರ ಆರ್ಥಿಕ ಮತ್ತು ರಾಜಕೀಯ ಸ್ಥಿತಿಯಲ್ಲಿ ಇತ್ತೀಚಿನ ಬದಲಾವಣೆಗಳು ಇದರ ಮಹತ್ವವನ್ನು ಗಣನೀಯವಾಗಿ ಹೆಚ್ಚಿಸಿವೆ. ಮಹಿಳೆಯರ ಈ ಹೊಸ ಅಧಿಕಾರಗಳು ಹೊಸ ಅವಕಾಶಗಳನ್ನು ತಂದಿದೆಯಲ್ಲದೆ ಅಜ್ಞಾನ ಮತ್ತು ಹಳೆಯ ದುರಾಗ್ರಹಗಳ ಬಗ್ಗೆ ಹೊಸ ಪ್ರವೃತ್ತಿ ಮೂಡಿಸಿದೆ. ಮಹಿಳೆಯ ಕಾರ್ಯಕ್ಷೇತ್ರ ಈಗ ವಿಸ್ತಾರಗೊಂಡಿದೆ. ನಾಗರಿಕ ಜೀವನ ಈಗ ಹಳ್ಳಿಯ ಬಾವಿಯ ಸುತ್ತಮುತ್ತಲಿನ ಚರ್ಚೆಗೆ ಸೀಮಿತವಾಗಿಲ್ಲ.

ಸೇವೆ ಮಾಡಬೇಕೆಂಬ ಸ್ಫೂರ್ತಿ ಹಾಗೂ ರಾಷ್ಟ್ರೀಯ ಪ್ರಗತಿಯ ಆಕಾಂಕ್ಷೆ ಭಾರತೀಯ ಮಹಿಳೆಯ ಹೆಣ್ಣುತನಕ್ಕೆ ಚೇತನ ನೀಡಿದೆ. ಭಾರತೀಯ ಜನತೆಯ ವಿಶೇಷ ಗುಣಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣಕ್ಷೇತ್ರದಲ್ಲಿ ಸುಧಾರಣೆಗೆ ಹಾಗೂ ಅಧ್ಯಯನ ಕಾರ್ಯಕ್ರಮಗಳನ್ನು ರೂಪಿಸಬೇಕೆಂಬ ಒತ್ತಾಯದ ಬೇಡಿಕೆಯಲ್ಲಿ ಇದು ಪ್ರತಿಬಿಂಬಿಸಿದೆ.

ಪ್ರಸಕ್ತ ಶಿಕ್ಷಣವ್ಯವಸ್ಥೆಯ ಪುನರ್ವಿಮರ್ಶೆಯು ಅದರ ಪುನಾರಚನೆ ಅಥವಾ ಹೊಸ ಪರಿಸ್ಥಿತಿಗಳಿಗೆ ಸರಿ ಹೊಂದುವಂತೆ ಪುನಾರೂಪಿಸುವ ಯಾವುದೇ ಕ್ರಮಬದ್ಧ ಪ್ರಯತ್ನದ ಮೇಲೆ ಬೆಳಕು ಚೆಲ್ಲಬಹುದಾಗಿದೆ.

ಮಹಿಳೆಯರ ಶಿಕ್ಷಣ ಅನೇಕ ಮಜಲುಗಳನ್ನು ದಾಟಿ ಬಂದಿದೆ. ಪುರಾತನ ಭಾರತದಲ್ಲಿ ಮಹಿಳೆಯರು ಉಚ್ಚಮಟ್ಟದ ಸಂಸ್ಕೃತಿ, ಸಾಮಾಜಿಕ ಸ್ಥಾನಮಾನ ಹೊಂದಿದ್ದು ಅದರ ಹೆಚ್ಚುಗಾರಿಕೆಯಲ್ಲಿ ಒಂದಾಗಿದೆ ಎಂದು ವೈದಿಕಸಾಹಿತ್ಯದ ಪಂಡಿತರು ಪ್ರತಿಪಾದಿಸುತ್ತಾರೆ. ವೇದಕಾಲೀನ ಮಹಿಳೆಯರಿಗೆ ಜ್ಞಾನದ ಎಲ್ಲಾ ವಿಧದ ಶಾಖೆಗಳ ಅಧ್ಯಯನಕ್ಕೆ ಹಾಗೂ ಧಾರ್ಮಿಕ ಮತ್ತು ತತ್ವಜ್ಞಾನದ ಚರ್ಚೆಯಲ್ಲಿ ಭಾಗವಹಿಸುವ ಸಂಪೂರ್ಣ ಸ್ವಾತಂತ್ರ್ಯ ಇತ್ತು. ದುರದೃಷ್ಟದಿಂದ ಮಹಿಳೆಯರ ಶಿಕ್ಷಣಕ್ಷೇತ್ರದಲ್ಲಿ ಹಿಂದಿನ ಮರ್ಯಾದೆಯನ್ನು ಉಳಿಸಿಕೊಂಡು ಬರುವಲ್ಲಿ ನಂತರದ ಇತಿಹಾಸ ವಿಫಲವಾಗಿದೆ.

ಕಳೆದ ಶತಮಾನದಲ್ಲಿ ಭಾರತೀಯ ಮಹಿಳೆಯರ ಶಿಕ್ಷಣದ ಬಗ್ಗೆ ಬ್ರಿಟಿಷರ ನಿರ್ಲಕ್ಷ್ಯ, ಭಾರತೀಯರ ಸಂಪ್ರದಾಯಶೀಲ ಶಾಲೆಗಳು ಮತ್ತು ತರಬೇತಿ ಪಡೆದ ಶಿಕ್ಷಕಿಯರ ಕೊರತೆ

ಮೊದಲಾದ ಮೂಲಭೂತ ಸೌಕರ್ಯಗಳ ಅಭಾವವು ಮಹಿಳೆಯ ಶಿಕ್ಷಣಕ್ಕೆ .ಅಡ್ಡಿಯಾಗಿದ್ದವು. ಬಾಲ್ಯವಿವಾಹ, ಪರದಾಪದ್ಧತಿ, ಸತೀಪದ್ಧತಿಗಳಂಥ ಸಾಮಾಜಿಕ ಅನಿಷ್ಟಗಳಿಂದಾಗಿ ಮಹಿಳೆಯರಿಗೆ ಔಪಚಾರಿಕ ಶಿಕ್ಷಣದ ಅವಕಾಶಗಳು ಹೆಚ್ಚುಕಡಿಮೆ ಕಾಣೆಯಾಗಿದ್ದವು.

ಸ್ವಾತಂತ್ರ್ಯ ಪೂರ್ವದಲ್ಲಿ

ಬ್ರಿಟಿಷ್ ಆಡಳಿತ ಕಾಲದಲ್ಲಿ ಶಿಕ್ಷಣ ಸಂಸ್ಥೆಗಳು ತೆರೆಯಲ್ಪಟ್ಟವು; ಪುರುಷರ ಶಿಕ್ಷಣ ಆಧುನೀಕರಣಗೊಳಿಸಲ್ಪಟ್ಟಿತು. ಆದರೆ ಮಹಿಳೆಯರ ಶಿಕ್ಷಣವನ್ನು ಪ್ರೋತ್ಸಾಹಿಸಲು ಏನೂ ಮಾಡಲಿಲ್ಲ. 1870ರಲ್ಲಿ ಪುರಸಭೆಗಳು, ಸ್ಥಳೀಯ ಸಮಿತಿಗಳು ಸ್ಥಾಪನೆಯೊಂದಿಗೆ ಹುಡುಗಿಯರ ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿತು. ಜನತೆಯಲ್ಲಿ ಸಾಮಾಜಿಕ ಜಾಗೃತಿ ಹಾಗೂ ಮಹಿಳೆಯರಿಗೆ ಶಿಕ್ಷಣ ನೀಡದ ಹೊರತು ಸಾಮಾಜಿಕ ಮತ್ತು ರಾಜಕೀಯ ಪ್ರಗತಿ ಸಾಧ್ಯವಿಲ್ಲವೆಂದು ಶಿಕ್ಷಿತರಲ್ಲಿ ಜ್ಞಾನೋದಯವಾಗಿದ್ದು ಮಹಿಳೆಯರ ಶಿಕ್ಷಣಕ್ಕೆ ಪ್ರೋತ್ಸಾಹಿಸಲು ಇನ್ನಷ್ಟು ಪ್ರಯತ್ನಗಳನ್ನು ನಡೆಸುವುದಕ್ಕೆ ಕಾರಣವಾಯಿತು.

ಖಾಸಗಿ ಪ್ರಯತ್ನದ ಮೂಲಕ ಶಾಲೆಗಳು ತೆರೆಯಲ್ಪಟ್ಟವು. ಕೆಲ ಪ್ರಾಂತಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕಾಲೇಜುಗಳು ಪ್ರಾರಂಭವಾದವು. ಮಹಿಳೆಯರಿಗೆ ಒಪ್ಪುವ ಉಚ್ಚಶಿಕ್ಷಣ ಒದಗಿಸಲು ಮಹರ್ಷಿ ಕರ್ವೆಯವರ ಪ್ರಯತ್ನದಿಂದ 1915ರಲ್ಲಿ ಏಕೈಕ ಮಹಿಳಾ ವಿಶ್ವವಿದ್ಯಾಲಯವಾದ ಎಸ್.ಎನ್.ಡಿ.ಟಿ. (SNDT) ವಿಶ್ವವಿದ್ಯಾಲಯ ಕೂಡಾ ಅಸ್ತಿತ್ವಕ್ಕೆ ಬಂದಿತು. ದೇಶದಲ್ಲಿ ರಾಜಕೀಯ ಜಾಗೃತಿ ಹಾಗೂ ಮಹಿಳಾ ಆಂದೋಲನಕ್ಕೆ ಮಹಾತ್ಮ ಗಾಂಧಿಯವರು ನೀಡಿದ ಪ್ರೋತ್ಸಾಹದೊಂದಿಗೆ ಮಹಿಳೆಯ ಶಿಕ್ಷಣಕ್ಕೆ ನಿಜವಾದ ಚಾಲನೆ ಸಿಕ್ಕಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಹುಡುಗಿಯರು ಮತ್ತು ಮಹಿಳೆಯರ ಶಿಕ್ಷಣದ ಅಂಕಿ ಸಂಖ್ಯೆಗಳು

ವರ್ಷ	ಶೇಕಡಾವಾರು ಮಹಿಳಾ ಸಾಕ್ಷರತೆ	ಶಾಲೆಗಳಲ್ಲಿ ಹುಡುಗಿಯರ ದಾಖಲಾತಿ				
		ಪ್ರಾಥಮಿಕ ಶಾಲೆ	ಮಾಧ್ಯಮಿಕ ಶಾಲೆ	ಕಾಲೇಜು ವಿಶ್ವವಿದ್ಯಾಲಯ	ಇತರೆ	
1881-82	0.2	124,291	2,054	6	515	1,27,066
1901-02	0.7	344,712	9,075	256	2370	3,65,413
1921-22	1.8	1186,224	26,163	905	10,836	1224.128
1946-47	6.0	3475,165	602,280	23,207	56,090	4156,742
ಪ್ರತಿ 100 ಹುಡುಗರಿಗೆ ಹುಡುಗಿಯರ ದಾಖಲಾತಿ ಪ್ರಮಾಣ		36	24 ಮಾಧ್ಯಮಿಕ 14 ಉಚ್ಚ ಮಾಧ್ಯಮಿಕ	12 ಸಾಮಾನ್ಯ ಶಿಕ್ಷಣ 7 ವೃತ್ತಿಶಿಕ್ಷಣ	12	30

* ಇದರಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ದಾಖಲಾದ 321,508 ಹುಡುಗಿಯರ ಸಂಖ್ಯೆ

ಸೇರಿದೆ. ಆದ್ದರಿಂದ ಉಚ್ಚ ಮಾಧ್ಯಮಿಕ ಶಾಲೆಗಳಲ್ಲಿ ದಾಖಲಾದ ಒಟ್ಟು ಹುಡುಗಿಯರ ಸಂಖ್ಯೆ ಕೇವಲ 280772 (ಭಾರತ ಸರಕಾರದ ಶಿಕ್ಷಣ ಸಚಿವಾಲಯದ ಮೂಲದಿಂದ)

ಪ್ರಾಥಮಿಕ ಹಂತದಲ್ಲಿ ವಿಸ್ತರಣೆ ಪ್ರಾರಂಭವಾದ ಮಹಿಳೆಯರ ಶಿಕ್ಷಣ ಕೆಲ ವರ್ಷಗಳಲ್ಲಿ ಇಷ್ಟಕ್ಕೆ ಸೀಮಿತವಾಗಿತ್ತು. 1947ರಲ್ಲಿ ದಾಖಲಾದ ಶೇ. 83ರಷ್ಟು ಹುಡುಗಿಯರು ಪ್ರಾಥಮಿಕ ಶಾಲೆಗಳಲ್ಲಿ ದಾಖಲಾಗಿದ್ದರು (ಇದರಲ್ಲಿ ಅರ್ಧದಷ್ಟು ಮೊದಲ ವರ್ಗದಲ್ಲಿ) ಮಾಧ್ಯಮಿಕ ಹಂತದಲ್ಲಿ ವಿಸ್ತರಣೆಯ ಪ್ರಾರಂಭ ಮತ್ತು ಪ್ರಸಾರ ನಿಧಾನವಾಗಿತ್ತು. 1947ರಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಕೇವಲ ಶೇ. 7ರಷ್ಟು ಹುಡುಗಿಯರು ದಾಖಲಾಗಿದ್ದರು.

ಸ್ವಾತಂತ್ರ್ಯಾನಂತರ

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ವಿವಿಧ ಮಟ್ಟಗಳಲ್ಲಿ ಮಹಿಳೆಯರ ಶಿಕ್ಷಣ ತ್ವರಿತವಾಗಿ ವಿಸ್ತರಣೆಯಾಗಿದೆ. ಆದರೆ ಅದಿನ್ನೂ ತೃಪ್ತಿಕರವಾಗಿಲ್ಲ. ಶಿಕ್ಷಣ ವ್ಯವಸ್ಥೆಯ ಈ ವಿಸ್ತರಣೆ ಪರಿಮಾಣಾತ್ಮಕವಾಗಿದ್ದರೂ, ಗುಣಾತ್ಮಕದಿಂದ ಅದಿನ್ನೂ ದೂರವಿದೆ. ಶಿಕ್ಷಣ ಹೊಂದುವುದು ಸೀಮಿತವಾಗಿದೆ.

ಈ ಕೆಳಗಿನ ಕೋಷ್ಟಕ 1946-47 ರಿಂದ 1978-79ರ ವರೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಹುಡುಗಿಯರ ದಾಖಲಾತಿಯನ್ನು ತೋರಿಸುತ್ತದೆ:

ವರ್ಷ	ಹುಡುಗಿಯರ ದಾಖಲಾತಿ			
	ಪ್ರಾಥಮಿಕ ಶಾಲೆಯ ವರ್ಗಗಳು 1-5	ಮಿಡ್ಲ್‌ಸ್ಕೂಲ ವರ್ಗಗಳು 5-8	ಮಾಧ್ಯಮಿಕ ಶಾಲೆಯ ವರ್ಗಗಳು 9-11	ಕಾಲೇಜು - ವಿಶ್ವವಿದ್ಯಾಲಯ (ಸಾಮಾನ್ಯ ಶಿಕ್ಷಣ)
1946-47	34.75 (36)	3.22 (22)	2.81 (14)	0.20 (12)
1950-51	53.85 (39)	5.34 (20)	1.61 (15)	0.40 (14)
1955-56	76.39 (44)	8.67 (25)	3.18 (21)	0.84 (17)
1960-61	113.47 (48)	16.70 (32)	5.41 (23)	1.50 (22)
1965-66	182.93 (57)	28.46 (37)	11.72 (30)	3.24 (28)
1968-69	199.36 (59)	34.93 (39)	15.60 (32)	4.32 (30)
1973-74	244.01 (62)	45.37(43)--	23.40 (36)	9.00 (31)
1978-79	318.90 (69)	72.50 (91)	31.70 (39)	16.00 (34)

ಸೂಚನೆ:- (1) 1946-47ರಲ್ಲಿ ಪ್ರಾಥಮಿಕ ಮಿಡ್ಲ್ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ದಾಖಲಾತಿ 1 ರಿಂದ 4, 5 ರಿಂದ 8 ಮತ್ತು 9 ರಿಂದ 11ನೇ ವರ್ಗಗಳಲ್ಲಿ ಅಲ್ಲವಾದ್ದರಿಂದ ಕಟ್ಟುನಿಟ್ಟಾಗಿ ಹೋಲಿಸಲಾಗದು.

(2) ಕಂಸಿನಲ್ಲಿ ಕೊಟ್ಟ ಸಂಖ್ಯೆ ಪ್ರತಿ 100 ಹುಡುಗರಿಗೆ ಹುಡುಗಿಯರ ಸಂಖ್ಯೆಯನ್ನು ತೋರಿಸುತ್ತದೆ.

(3) ಕೋಷ್ಟಕದ ಕೊನೆಯ ಸಾಲಿನ ಸಂಖ್ಯೆಗಳು ಸಾಮಾನ್ಯ ಶಿಕ್ಷಣ (ಕಲೆ, ವಾಣಿಜ್ಯ ಮತ್ತು ವಿಜ್ಞಾನ)ದಲ್ಲಿ ಪದವಿಪೂರ್ವ ಹಂತ, ಸ್ನಾತಕೋತ್ತರ ಹಂತ ಮತ್ತು ಸಂಶೋಧನೆಗಳಲ್ಲಿ ದಾಖಲಾತಿಗೆ ಸಂಬಂಧಿಸಿದೆ.

ಮೂಲ:- (ಅ) ಶಿಕ್ಷಣ ಸಚಿವಾಲಯ.

(ಬ) ಐದನೇ ಪಂಚವಾರ್ಷಿಕ ಯೋಜನೆ ಕರಡು 1974-79, ಸಂಪುಟ 2 ಪುಟ 197.

ಮುಂದಿನ ಕೋಷ್ಟಕದ 3ರ ಪ್ರಕಾರ 1971 ಮತ್ತು 1981ರಲ್ಲಿ ಶಿಕ್ಷಣ ಮಟ್ಟಗಳಿಂದ ಮಹಿಳಾ ಸಾಕ್ಷರತೆಯ ಶೇಕಡಾವಾರು ವಿತರಣೆಯನ್ನು ತೋರಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಮಟ್ಟದ ಶಿಕ್ಷಣವನ್ನು ಪೂರೈಸಿದವರ ಪ್ರಮಾಣ ಕಳೆದ ದಶಕಗಳಲ್ಲಿ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಮಾಣ ಸ್ವಲ್ಪ ಇಳಿಮುಖವಾಗಿದೆ. ಎಸ್.ಎಸ್.ಎಲ್.ಸಿ ಮತ್ತು ಮೇಲ್ಪಟ್ಟು ಶಿಕ್ಷಣ ಪೂರೈಸಿದ ನೌಕರರ ಪ್ರಮಾಣ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಗಣನೀಯವಾಗಿ ಹೆಚ್ಚಿದೆ.

1971 ಮತ್ತು 1981ರಲ್ಲಿ ಭಾರತದಲ್ಲಿ ಶಿಕ್ಷಣ ಮಟ್ಟದಿಂದ ಮಹಿಳಾ ಸಾಕ್ಷರತೆಯ ಶೇಕಡಾವಾರು ವಿತರಣೆ:-

ಶಿಕ್ಷಣಮಟ್ಟ	1971			1981		
ಅ.ಸಂ.	ಒಟ್ಟು	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ
1) ಸಾಕ್ಷರರು (ಶಿಕ್ಷಣ ಮಟ್ಟವಿಲ್ಲದೆ)	36.55	39.66	32.53	33.42	39.37	25.91
2) ಪ್ರಾಥಮಿಕ	38.22	43.92	30.83	33.98	37.47	29.59
3) ಮಾಧ್ಯಮಿಕ	15.58	12.32	19.79	16.78	15.04	18.98
4) ಮಾಟ್ರಿಕ್/ಉಚ್ಚ ಮಾಧ್ಯಮಿಕ	7.93	3.47	13.70	12.48	7.05	19.31
5) ಪದವಿಗೆ ಸಮಾನ ವಲ್ಲದ ತಾಂತ್ರಿಕೇತರ ಡಿಪ್ಲೋಮಾ/ ಸರ್ಟಿಫಿಕೇಟ್	0.21	0.28	0.13	0.09	0.08	0.12
6) ಪದವಿಗೆ ಸಮಾನ ವಲ್ಲದ ತಾಂತ್ರಿಕ ಡಿಪ್ಲೋಮಾ/ ಸರ್ಟಿಫಿಕೇಟ್	0.16	0.08	0.27	0.29	0.25	0.35
7) ಪದವಿ ಮತ್ತು ಮೇಲ್ಪಟ್ಟು	1.35	0.27	2.75	2.96	0.75	5.75
ಒಟ್ಟು ಸಾಕ್ಷರತೆ	100.00	100.00	100.00	100.00	100.00	100.00

ಮೂಲ:- (1) 1971ರ ಭಾರತದ ಜನಗಣತಿ
(2) 1981ರ ಭಾರತದ ಜನಗಣತಿ.

ಮೂವತ್ತೈದು ಮತ್ತು ಮೇಲ್ಪಟ್ಟು ವಯೋಮಿತಿಯಲ್ಲಿ ಪದವಿ ಮತ್ತು ಅದನ್ನು ಮೇಲ್ಪಟ್ಟು ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹಿಳೆಯರಲ್ಲಿ ದೊಡ್ಡಹೆಚ್ಚಳ ಕಂಡುಬಂದಿದೆ. ತಾಂತ್ರಿಕ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಪಡೆದವರ ಪ್ರಮಾಣ ಕೇವಲ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗಿದ್ದರೆ ತಾಂತ್ರಿಕೇತರ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಪಡೆದವರ ಸಂಖ್ಯೆ ಇದಕ್ಕಿಂತ ಹೆಚ್ಚಾಗಿದೆ. ಮಹಿಳೆಯರ ಶಿಕ್ಷಣದಲ್ಲಿ ಗಣನೀಯ ಅಭಿವೃದ್ಧಿ ಆಧುನಿಕ ಭಾರತದ ಜೀವನದ ವೈಶಿಷ್ಟ್ಯವಾಗಿದೆ.

ಮಹಿಳಾ ಶಿಕ್ಷಣದ ಆವಶ್ಯಕತೆ

ಸಂತೋಷ ಮತ್ತು ಆರೋಗ್ಯಕರ ಮನೆಯ ವಾತಾವರಣ, ಸಮಾಜ ಸುಧಾರಣೆ ಮತ್ತು ರಾಷ್ಟ್ರೀಯ ಏಕತೆಗಾಗಿ ಮಹಿಳೆಯರ ಶಿಕ್ಷಣ ಅತ್ಯಂತ ಅವಶ್ಯಕವಾಗಿದೆ. ಅಭಿವೃದ್ಧಿ ಹೊಂದಿದ ಇತರ ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತದಲ್ಲಿ ಮಹಿಳಾಶಿಕ್ಷಣ ಹಿಂದೆ ಬಿದ್ದಿದೆ ಎಂಬುದರಲ್ಲಿ ಸಂಶಯವಿಲ್ಲ. ಲಕ್ಷಗಟ್ಟಲೆ ಮಹಿಳೆಯರು ಇನ್ನೂ ಈ ಮೂಲಭೂತ ಹಕ್ಕಿನಿಂದ ವಂಚಿತರಾಗಿದ್ದಾರೆ. ಮಹಿಳೆ ಮತ್ತು ಪುರುಷ ಇಬ್ಬರಿಗೂ ಈ ಜಗತ್ತಿನಲ್ಲಿ ತಮ್ಮದೇ ಆದ ಕ್ಷೇತ್ರ ಕಾರ್ಯ, ಕರ್ತವ್ಯಗಳಿವೆ. ನಮ್ಮ ದೇಶದಲ್ಲಿ ಮಹಿಳೆ ಮತ್ತು ಪುರುಷರ ಶಿಕ್ಷಣದಲ್ಲಿ ವ್ಯಾಪಕ ಅಂತರವಿದೆ. ಈ ಅಂತರವನ್ನು ನಿವಾರಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು.

"ಸುಶಿಕ್ಷಿತ ಮಹಿಳೆಯರು ಇರದೆ ಸುಶಿಕ್ಷಿತ ಜನ ಇರಲು ಸಾಧ್ಯವಿಲ್ಲ" ಎಂದು ಕೋಠಾರಿ ಆಯೋಗವು ಸರಿಯಾಗಿಯೇ ಹೇಳಿದೆ. ಶಿಕ್ಷಣವನ್ನು ಮಹಿಳೆಯರಿಗೆ ಅಥವಾ ಪುರುಷರಿಗೆ ಸೀಮಿತಗೊಳಿಸಲಾಗದು. ಮಹಿಳೆಯರಿಗೂ ಸಮಾನ ಅವಕಾಶ ನೀಡಬೇಕು. ಆಗ ಮಾತ್ರ ಇದು ಮುಂದಿನ ಪೀಳಿಗೆಗೂ ಮುಂದುವರೆಯುವುದು.

"ಹುಡುಗನ ಶಿಕ್ಷಣ ಒಬ್ಬ ವ್ಯಕ್ತಿಯ ಶಿಕ್ಷಣವಾದರೆ, ಒಬ್ಬ ಹುಡುಗಿಯ ಶಿಕ್ಷಣದಿಂದ ಇಡೀ ಕುಟುಂಬವೇ ಶಿಕ್ಷಣ ಪಡೆಯುವಂತಾಗುತ್ತದೆ" ಎಂದು ಜವಾಹರಲಾಲ್‌ನೆಹರು ಸ್ಪಷ್ಟವಾಗಿ ಹೇಳಿದ್ದಾರೆ.

"ಮಾನವ ಸಂಪನ್ಮೂಲದ ಸಂಪೂರ್ಣ ಅಭಿವೃದ್ಧಿ, ಮನೆತನ ಸುಧಾರಣೆ ಹಾಗೂ ಮಕ್ಕಳ ಬಾಲ್ಯಾವ್ಯಸ್ಥೆಯಲ್ಲಿ ಅವರ ಚಾರಿತ್ರ್ಯ ರೂಪಿಸುವಲ್ಲಿ ಮಹಿಳೆಯರ ಶಿಕ್ಷಣ ಪುರುಷರ ಶಿಕ್ಷಣಕ್ಕಿಂತ ಅತ್ಯಂತ ಮಹತ್ವದಾಗಿದೆ" ಎಂದು ಭಾರತದ ಶಿಕ್ಷಣ ಆಯೋಗವು ಸರಿಯಾಗಿಯೇ ಹೇಳಿದೆ.

"ಸಾಮಾಜಿಕ ನ್ಯಾಯದ ಆಧಾರದ ಮೇಲೆ ಮಹಿಳೆಯರ ಶಿಕ್ಷಣಕ್ಕೆ ಒತ್ತು ಸಿಗಬೇಕು. ಇದು ಸಾಮಾಜಿಕ ಪರಿವರ್ತನೆಯನ್ನು ಚುರುಕುಗೊಳಿಸುತ್ತದೆ. ಆದ್ದರಿಂದ ಮಹಿಳೆಯರ ಶಿಕ್ಷಣ ತುಂಬಾ ಅವಶ್ಯವಾಗಿದೆ" ಎಂದು ರಾಷ್ಟ್ರೀಯ ನೀತಿ ಹೇಳುತ್ತದೆ.

ಮಹಿಳಾ ಶಿಕ್ಷಣದ ಸಮಸ್ಯೆಗಳು

ಕೇಂದ್ರ ಶಿಕ್ಷಣ ಸಚಿವಾಲಯವು 1959ರಲ್ಲಿ ರಚಿಸಿದ ಮಹಿಳಾ ಶಿಕ್ಷಣದ ಬಗೆಗಿನ ರಾಷ್ಟ್ರೀಯ ಸಮಿತಿ ಎನ್.ಸಿ.ಡಬ್ಲ್ಯೂ, 1962ರಲ್ಲಿ ನೇಮಿಸಿದ ಹಂಸಾ ಮೆಹತಾ ಸಮಿತಿ ಮತ್ತು

1963ರಲ್ಲಿ ನೇಮಿಸಿದ ಭಕ್ತವತ್ಸಲ ಸಮಿತಿಗಳಂಥ ಅನೇಕ ವಿಶೇಷ ಸಮಿತಿಗಳ ಮೂಲಕ ಕೇಂದ್ರ ಸರಕಾರ ಮಹಿಳಾ ಶಿಕ್ಷಣದ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿದೆ.

ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ಹಿನ್ನಲೆಯಾಗಿರುವ ಕೆಲವೊಂದು ಸಮಸ್ಯೆಗಳು ಇಂತಿವೆ:

1) ಸಂಪ್ರದಾಯಶೀಲತೆ
2) ಬಡತನ
3) ಶಾಲೆಗಳ ಕೊರತೆ
4) ಶಿಕ್ಷಕಿಯರ ಅಭಾವ
5) ಸರಕಾರದ ಉಪೇಕ್ಷೆ
6) ಅಪಪ್ರವ ಮತ್ತು ಧಾರಣೆ
7) ಸೂಕ್ತವಲ್ಲದ ಪಠ್ಯಕ್ರಮ.

ಶಿಫಾರಸ್ಸುಗಳು

ಮಹಿಳೆಯರ ಶಿಕ್ಷಣಕ್ಕೆ ಉತ್ತೇಜನ ನೀಡಲು ವಿವಿಧ ಸಮಿತಿಗಳು ಈ ಕೆಳಗಿನ ಕ್ರಮಗಳನ್ನು ಸಲಹೆ ಮಾಡಿವೆ:

1 ಹುಡುಗರಿಗೆ ಮತ್ತು ಹುಡುಗಿಯರಿಗೆ ಕೆಲ ಶಿಕ್ಷಣ ಸೌಲಭ್ಯಗಳನ್ನು ನೂರಕ್ಕೆ ನೂರರಷ್ಟು ಒದಗಿಸುವ ಗುರಿ ಇರಿಸಿಕೊಳ್ಳುವುದು.
   1) ಖಾಸಗೀ ಶಾಲೆಗಳ ಸ್ಥಾಪನೆ
   2) ಶಾಲಾ ಕಟ್ಟಡ ನಿರ್ಮಾಣ
   3) ಸ್ವಯಂಸೇವೆ
   4) ಬೋಧನೆ ನೀಡಲು ವಿವಾಹಿತ ಮಹಿಳೆಯರಿಗೆ ಪ್ರೋತ್ಸಾಹಿಸುವದು ಹಾಗೂ ಮಧ್ಯಾಹ್ನದ ಊಟ, ಪುಸ್ತಕಗಳು ಮತ್ತು ಸಮವಸ್ತ್ರ ರೂಪದಲ್ಲಿ ವಿಶೇಷ ನೆರವು ನೀಡುವಲ್ಲಿ ಸ್ಥಳೀಯ ಜನತೆಯ ಸಹಕಾರ ಪಡೆಯುವ ಮೂಲಕ ನೂರರಷ್ಟು ಹುಡುಗಿಯರ ದಾಖಲಾತಿ ಸಾಧಿಸಬಹುದು.

2. ಮಹಿಳಾ ಶಿಕ್ಷಣದ ಬಗ್ಗೆ ಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳನ್ನು ತಯಾರಿಸುವ ಮೂಲಕ ಪ್ರಚಾರಕಾರ್ಯಗಳನ್ನು ಬಲಪಡಿಸುವದು.

3. ಮಹಿಳಾ ಶಿಕ್ಷಕಿಯರ ಕೊರತೆಯನ್ನು ಎದುರಿಸಲು ಅರೆಕಾಲಿಕ ಮಹಿಳಾ ಶಿಕ್ಷಕಿಯರ ಉದ್ಯೋಗ ಯೋಜನೆ ಪ್ರಾರಂಭಿಸುವದು.

4) ಹುಡುಗಿಯರಿಗಾಗಿ ವಿಶೇಷ ತಾಂತ್ರಿಕ ಶಿಕ್ಷಣಸಂಸ್ಥೆಗಳನ್ನು ಪ್ರಾರಂಭಿಸಬೇಕು ಮತ್ತು ಸರಕಾರ ಐದು ವರ್ಷಗಳವರೆಗೆ ಶೇ. 100ರಷ್ಟು ಸಹಾಯಧನ ನೀಡಬೇಕು.

5) ದೊಡ್ಡ ಪ್ರಮಾಣದ ಸ್ಕಾಲರ್‌ಶಿಪ್‌ಗಳಿಗೆ ವಿಶೇಷ ಒತ್ತು ನೀಡಬೇಕು. ವಿವಿಧ ಶಾಲಾಮಟ್ಟಗಳಲ್ಲಿ ಹುಡುಗಿಯರಿಗೆ ಉಚಿತ ಶಿಕ್ಷಣದ ಪ್ರಾವಿಧಾನ ನೀಡಬೇಕು. ವಿಶ್ವವಿದ್ಯಾಲಯ ಮಟ್ಟದಲ್ಲಿ ಕನಿಷ್ಠ ಶೇ. 20 ಹುಡುಗಿಯರಿಗೆ ಉಚಿತ ಶಿಕ್ಷಣ

ದೊರೆಯಬೇಕು.

6) ಹಿಂದುಳಿದ ಪ್ರದೇಶಗಳಲ್ಲಿ ವಿದ್ಯಾರ್ಥಿನಿಯರಿಗೆ ಉಚಿತ ವಸತಿ ಮತ್ತು ಸಾರಿ ವ್ಯವಸ್ಥೆ ಹಾಗೂ ಶಿಕ್ಷಕಿಯವರಿಗೆ ವಿಶೇಷ ಭತ್ತೆ ಮೊದಲಾದ ಸೌಲಭ್ಯಗಳನ್ನು ಒದಗಿಸಬೇಕು. ಹಿಂದುಳಿದ ಗ್ರಾಮೀಣ ಪ್ರದೇಶ, ಗುಡ್ಡಗಾಡು ಮತ್ತು ದೂರದ ಪ್ರದೇಶಗಳಿಗೆ ಇದರಿಂದ ಪ್ರಯೋಜನವಾಗುತ್ತದೆ.

7) ಶಾಲಾ ಅವಧಿಯಲ್ಲಿ ಸಡಿಲುತನದ ವಿಧಾನ ಇರಬೇಕು.

8) ವಯೋಮಿತಿಯಲ್ಲಿ ವಿನಾಯತಿ, ಅರೆಕಾಲಿಕ ಉದ್ಯೋಗದ ಅವಕಾಶ, ವಿಶೇಷ ಭತ್ತೆ ಮೂಲಕ ಹಣಕಾಸಿನ ಪ್ರೋತ್ಸಾಹ, ಶಾಲೆಗಳ ಸಮೀಪದಲ್ಲಿ ವಸತಿ ಸೌಕರ್ಯ ಮೊದಲಾದವುಗಳ ಮೂಲಕ ಮಹಿಳಾಶಿಕ್ಷಕಿಯರಿಗೆ ಪ್ರೋತ್ಸಾಹ ನೀಡಬಹುದು.

9) ಪ್ರಾಥಮಿಕ ಮಟ್ಟದಲ್ಲಿ ಕರ ಕುಶಲ ಶಿಕ್ಷಣವನ್ನು, ಮಾಧ್ಯಮಿಕ ಮಟ್ಟದಲ್ಲಿ ಹುಡುಗಿಯ ಅವಶ್ಯಕತೆಗಳಿಗೆ ತಕ್ಕಂತೆ ಲಲಿತಕಲೆ, ಸಂಗೀತ, ಗೃಹ ಹಣಕಾಸು ವ್ಯವಹಾರ, ಕರಕುಶಲ ಶಿಕ್ಷಣವನ್ನು ಹಾಗೂ ಮಾಧ್ಯಮಿಕ ಮತ್ತು ಹೆಚ್ಚಿನ ಮಟ್ಟದಲ್ಲಿ ವೃತ್ತಿತರಬೇತಿಗಳನ್ನು ಸಾಮಾನ್ಯ ಪಠ್ಯಕ್ರಮದೊಂದಿಗೇ ಒದಗಿಸುವ ಮೂಲಕ ಶಿಕ್ಷಣದಲ್ಲಿ ಸುಧಾರಣೆ ತರಬಹುದು.

ಭಾರತದ ಪ್ರಗತಿಯ ಮುಖ್ಯತೆ ಮಹಿಳೆಯರ ಶಿಕ್ಷಣದಲ್ಲಿ ಅಡಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮಹಿಳೆಯರನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬುದರ ಮೇಲೆ ನಾವು ಯಾವುದೇ ಒಂದು ರಾಷ್ಟ್ರದ ಬಗ್ಗೆ ನಿರ್ಣಯಿಸುತ್ತೇವೆ ಎಂದು ಹೇಳಿರುವುದು ಸತ್ಯವಾಗಿಯೇ ಇದೆ.

ಜಾತಿಭೇದ, ಬಾಲ್ಯವಿವಾಹ, ವಿಧವಾವಿವಾಹ ನಿಷೇಧ ಮೊದಲಾದ ಸಾಮಾಜಿಕ ಅನಿಷ್ಟಗಳು ಹಾಗೂ ಇನ್ನಿತರ ಅನೇಕ ಸಂಪ್ರದಾಯಗಳು ಪ್ರಗತಿಯ ಹಾದಿಯಲ್ಲಿ ಅಡ್ಡಿಗಳಾಗಿವೆ. ಆರೋಗ್ಯ ಮಹತ್ವ, ಶಿಶುಗಳ ಶುಶ್ರೂಷೆ ಮತ್ತು ಜನನ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಭಾರತೀಯ ಮಹಿಳೆಯರ ಅಜ್ಞಾನವು ಶಿಶುಗಳ ಸಾವಿನ ಪ್ರಮಾಣ ಹೆಚ್ಚಳಕ್ಕೆ ಕಾರಣವಾಗಿದೆಯಲ್ಲದೆ ಮಹಿಳೆ ಮತ್ತು ಮಕ್ಕಳು ಆರೋಗ್ಯಹಾನಿಗೂ ಕಾರಣವಾಗಿದೆ. ಮೂಢನಂಬಿಕೆಗಳಿಗೆ ಹೊಂದಿಕೊಂಡಿರುವ ಧಾರ್ಮಿಕ ವಿಷಯಗಳಲ್ಲಿ ಮಹಿಳೆಯರ ಸಂಪ್ರದಾಯಶೀಲತೆ ಭಾರಿ ಆರ್ಥಿಕ ನಿರುಪಯೋಗತನಕ್ಕೆ ಹೊಣೆಯಾಗಿದೆ.

ಈ ಎಲ್ಲ ಸಾಮಾಜಿಕ ಅನಿಷ್ಟಗಳು ಅನಾರೋಗ್ಯಕರ ಜೀವನ ಮತ್ತು ಧಾರ್ಮಿಕ ಮೂಢನಂಬಿಕೆಗಳಿಗೆ ಅಜ್ಞಾನವೇ ಕಾರಣವಾಗಿದೆ. ಪ್ರಗತಿಯ ಏಕೈಕ ಮಾರ್ಗ ಮಹಿಳೆಯರ ಶಿಕ್ಷಣದಲ್ಲಿದೆ. ಮಹಿಳೆಯರು ಸುಶಿಕ್ಷಿತರಾಗುವವರೆಗೆ ದೇಶದಲ್ಲಿ ಸಾಮಾಜಿಕ ಮತ್ತು ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ನಮಗೆ ಸಾಧ್ಯವಾಗುವುದಿಲ್ಲ.

"ಭಾರತದ ಶೈಕ್ಷಣಿಕ ಪ್ರಗತಿಯ ಹಿತಾಸಕ್ತಿ ದೃಷ್ಟಿಯಿಂದ ಶಿಕ್ಷಣದ ಪ್ರತಿಯೊಂದು ಯೋಜನೆಯಲ್ಲಿ ಹುಡುಗಿಯರ ಶಿಕ್ಷಣದ ನಿಶ್ಚಿತ ಬೇಡಿಕೆಗಳಿಗೆ ಇಡಿಯಾಗಿ ಈಗ ಆದ್ಯತೆ ನೀಡಬೇಕೆಂದು ನಾವು ಖಚಿತ ಅಭಿಪ್ರಾಯಪಡುತ್ತೇವೆ ಎಂದು ಹೊರಟಾಗ ಸಮಿತಿ ಹೇಳಿದ್ದನ್ನು ನಾವೆಲ್ಲ ಒಪ್ಪುತ್ತೇವೆ.

ಸ್ತ್ರೀಯನ್ನು ಜಿ.ಎಸ್. ಶಿವರುದ್ರಪ್ಪನವರು ಈ ರೀತಿ ಹೊಗಳುತ್ತಾರೆ:

ಮನೆ ಮನೆಯಲ್ಲಿ ದೀಪ ಮುಡಿಸಿ
ಹೊತ್ತು ಹೊತ್ತಿಗನ್ನವುಣಿಸಿ
ತಂದೆ-ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ ?
ಸ್ತ್ರೀ ಎಂದರೆ ಅಷ್ಟೆ ಸಾಕೇ ?

ಸ್ತ್ರೀ ಮಹತ್ವ ಅರಿಯಲು ಕವನದ ಈ ಸಾಲುಗಳೇ ಸಾಕು. ಅದಕ್ಕಾಗಿ ಸ್ತ್ರೀಯ ವ್ಯಕ್ತಿತ್ವ ಇನ್ನೂ ವಿಕಾಸವಾಗಲು, ಆ ವ್ಯಕ್ತಿತ್ವದ ಸದುಪಯೋಗವಾಗಲು ಸ್ತ್ರೀ ಶಿಕ್ಷಣವು ಇನ್ನೂ ಹೆಚ್ಚು ಹೆಚ್ಚು ಪ್ರಗತಿ ಸಾಧಿಸಬೇಕಾಗಿದೆ. ಮಾನವ ಸಂಪನ್ಮೂಲಗಳ ಪೂರ್ಣಾಭಿವೃದ್ಧಿ ಕುಟುಂಬ ಸುಧಾರಣೆ ಮತ್ತು ಮಕ್ಕಳ ನಡವಳಿಕೆ ತಿದ್ದುವಲ್ಲಿ ಪುರುಷಶಿಕ್ಷಣಕ್ಕಿಂತ ಮಹಿಳಾ ಶಿಕ್ಷಣವು ಹೆಚ್ಚು ಉಪಯುಕ್ತವಾಗಬಲ್ಲದು. ಕೊನೆಯದಾಗಿ ಡಾ: ಕೊಠಾರಿಯವರು ಹೇಳಿರುವ ಹಾಗೆ "ತಾತ್ಸಾರಿತ ಈ ಹೆಣ್ಣು ಈಗ ಜಗತ್ತಿನ ಸರ್ವತೋಮುಖ ಅಭಿವೃದ್ಧಿಗೆ ಮಹತ್ವದ ಆಶ್ರಯವಾಗುವದರಲ್ಲಿ ಯಾವ ಸಂದೇಹವೂ ಇಲ್ಲ."

○

ನೀತಿಶಿಕ್ಷಣ ಮತ್ತು ಮೌಲ್ಯಗಳು

ಪ್ರೊ. ಸಿ. ಹೆಚ್. ಮರಿದೇವ

'ನಿಯತಿ-ನೀತಿ' ಒಳ್ಳೆಯ ನಡವಳಿಕೆ. ನಮ್ಮ ನಡವಳಿಕೆಗಳು ಕ್ಷಣಕ್ಷಣವೂ ಶಿವತ್ವ ಕಡೆಗೆ ಹೋಗುವಂತೆ ಯಾವುದು ಮಾಡುತ್ತದೋ ಅದಕ್ಕೆ ನೀತಿಶಿಕ್ಷಣ ಎಂದು ಹೆಸರು ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ಆಡಬೇಡ, ಕೆಟ್ಟದ್ದನ ಮಾಡಬೇಡ, ಕೆಟ್ಟದ್ದನ್ನು ಎಣಿಸಬೇಡ ಎನ್ನುವುದು ನೀತಿಶಿಕ್ಷಣದ ಸಿದ್ಧಾಂತ.

ಮಕ್ಕಳಿಗೆ ನೀತಿಶಿಕ್ಷಣದ ಮಾರ್ಗದರ್ಶನವೀಯಲು ಎರಡು ಮಾರ್ಗಗಳಿವೆ: 1 ನೇರಮಾರ್ಗ ಅಥವಾ ಪ್ರತ್ಯಕ್ಷ ಮಾರ್ಗ. 2. ಪರೋಕ್ಷ ಮಾರ್ಗ. ಮಕ್ಕಳಿಗೆ ಶುಚಿತ್ವವನ್ನು ಅಚ್ಚುಕಟ್ಟುತನವನ್ನು ಕಲಿಸಬೇಕು. ಇದನ್ನು ನೇರವಾಗಿ ಹೇಳಿಕೊಡಬಹುದು. ಇದು ನೇ ಹಾಗೂ ಪ್ರತ್ಯಕ್ಷಮಾರ್ಗ. ಮಕ್ಕಳಿರುವ ವಾತಾವರಣವೇ ಶುಭ್ರವಾಗಿ ಶುಚಿತ್ವದಿಂದ ಕೂ ಮಕ್ಕಳಲ್ಲಿ ತಾನೂ ಹೀಗಿರಬೇಕು ಎಂಬ ಭಾವನೆ ಬರುವಂತೆ ಮಾಡತಕ್ಕದು ಪರೋಕ್ಷವಿಧಾನ. ಇನ್ನೊಂದು ಉದಾಹರಣೆ ತೆಗೆದುಕೊಳ್ಳೋಣ. ವಿದ್ಯಾರ್ಥಿಗಳು ಸಕಾಲ ಬರಬೇಕು, ವಿನಯಶೀಲರಾಗಿರಬೇಕು, ನಮ್ರಭಾವದಿಂದ ಕೂಡಿರಬೇಕು ಮತ್ತು ಸದ್ವರ್ತನೆಯಿಂದ ನಡೆದುಕೊಳ್ಳಬೇಕು. ಒಳ್ಳೆಯ ಮಾತನಾಡಬೇಕು. ಆ ಕೆಲ ಮಾಡಬೇಕು. ಈ ಕೆಲಸ ಮಾಡಬಾರದು ಎಂದು ಆಜ್ಞಾಪಿಸುತ್ತಾನೆ ಶಿಕ್ಷಕ. ಇದು ನೇರಮಾರ್ಗ. ಪರೋಕ್ಷಮಾರ್ಗದಲ್ಲೂ ಅದನ್ನು ಕಲಿಸಲು ಸಾಧ್ಯ. ಅದೆಂದರೆ ಅಧ್ಯಾಪಕನ ಕಾಲಕ್ಕೆ ಸರಿಯಾಗಿ ಬರುವುದು. ಒಳ್ಳೆಯ ನಡವಳಿಕೆಯಿಂದಿರುವುದು, ಶುಭ್ರತೆ ಇನ್ನೊಂದು ಹೆಸರು ಈ ಶಿಕ್ಷಕರು ಎಂಬಂತಿರುವುದು. ಮಕ್ಕಳನ್ನು ಸದ್ಭಾವನೆಯಿಂದ ನೋಡಿಕೊಳ್ಳುವುದು ಇತ್ಯಾದಿ ಸದ್ಗುಣಗಳು,-ಅಧ್ಯಾಪಕನಿಗಿದ್ದರೆ ಇವುಗಳನ್ನು ವಿದ್ಯಾರ್ಥಿಗಳ ತಾವಾಗಿಯೇ ಆರಿಸಿಕೊಳ್ಳುತ್ತಾರೆ. ಮೊದಲನೆಯದು ನಿಯಮ ಪರಿಪಾಲಿಸಲು ಆಜ್ಞಾಪಿಸುವಂತಹುದು. ಎರಡನೆಯದು ಉದಾಹರಣೆಯಿಂದ ಅನುಕರಣೆ ಮಾಡುವುದು ತನ್ನೊಂದು ಉದಾಹರಣೆಯಿಂದಾಗುವ ಪರಿಣಾಮ ನಿಯಮ ಪರಿಪಾಲನೆಯಿಂದಾಗುವ ಪರಿಣಾಮಕ್ಕಿಂತ ಹೆಚ್ಚು ಪ್ರಭಾವಪೂರ್ಣ. ನಡೆದಂತೆ ನುಡಿದು, ನುಡಿದಂತೆ ನಡೆಯುವ ಶಕ್ತಿ ಉಳ್ಳವರು ಮಾದರಿವ್ಯಕ್ತಿಗಳಾಗುತ್ತಾರೆ; ಅವರೇ ಜಗತ್ತಿಗೆ ಉದಾಹರಣೆಯಾಗಿ ನಿಲ್ಲುತ್ತಾರೆ. ಉದಾ.- ಗಾಂಧೀಜಿ, ಬಸವಣ್ಣ, ಬುದ್ಧ, ಏಸುಕ್ರಿಸ್ತ. ಅವರೆಲ್ಲರ ಜೀವನವೇ ನೀತಿಶಿಕ್ಷಣಕ್ಕೆ ಹಾಕಿದ ಭದ್ರಬುನಾದಿ ಎಂದೆನ್ನಬಹುದು.

ನೈತಿಕಶಿಕ್ಷಣವನ್ನು ನೀಡಲು ಪ್ರತ್ಯೇಕವಾಗಿ ಕೆಲವು ಪೀರಿಯಡ್‌ಗಳನ್ನು ಒದಗಿಸಬೇಕೆಂಬುದು ಇತ್ತೀಚಿನ ಒಂದು ವಾದ. ನೈತಿಕಶಿಕ್ಷಣದ ಯಾವುದೇ ವಿಷಯ ಬೋಧಿಸುವಾಗ ಸಂದರ್ಭೋಚಿತವಾಗಿ ಬೋಧನೆಗೊಳ್ಳಬೇಕೆಂಬುದು ಇನ್ನೊಂದು ವಾದ ನೀತಿಶಿಕ್ಷಣವನ್ನು ಬೋಧಿಸಲು ಪಂಚತಂತ್ರದ ಕಥೆಗಳು, ಮತ್ತಿತರ ಕಾವ್ಯಕಥೆಗಳಲ್ಲಿನ

ತತ್ವಗಳನ್ನು ಹೇಳುವುದರ ಮೂಲಕ ನೀತಿಶಿಕ್ಷಣವನ್ನು ಪರಿಣಾಮಕಾರಿಯಾಗಿ ಬೋಧಿಸಬಹುದಾಗಿದೆ. ಆದಕ್ಕಾಗಿ ಪ್ರತ್ಯೇಕವಾಗಿ ಪೀರಿಯಡ್‌ಗಳನ್ನು ಒದಗಿಸಿ ಪಂಪನಿಂದ ಕುವೆಂಪು ವರೆಗಿನ ಸಾಹಿತ್ಯಕೃತಿರತ್ನಗಳಲ್ಲಿ ಹಾಸುಹೊಕ್ಕಾಗಿ ಬಂದಿರುವ ನೀತಿಯುಕ್ತ ವಿಚಾರಗಳನ್ನು ಕಾವ್ಯಸನ್ನಿವೇಶಗಳಿಂದಾಯ್ದು ಹೇಳುವಂತಾದರೆ ಅವು ಹೆಚ್ಚು ಪರಿಣಾಮಕಾರಿಯಾಗಬಲ್ಲವು. ಅವು ಮಕ್ಕಳ ಅನ್ನಮಯ ಪ್ರಾಣಮಯ ಮನೋಮಯ ಕೋಶಗಳಲ್ಲಿ ಸ್ಥಿರವಾಗಿ ನಿಂತು ಗಾಂಧಿಯಂತಹ, ಬಸವ, ಬುದ್ಧರಂತಹ ವ್ಯಕ್ತಿತ್ವ ನಿರ್ಮಾಣಕ್ಕೆ ಕಾರಣವಾಗಬಲ್ಲುವು. ನೀತಿಶಿಕ್ಷಣವನ್ನು ನೀಡಲು ಸಾಹಿತ್ಯಕ್ಷೇತ್ರದಲ್ಲಿ ವಿಹರಿಸಿ ಅಲ್ಲಿರುವ ಅನರ್ಘ್ಯ ಮುತ್ತುರತ್ನಗಳನ್ನಾಯ್ದು ಬಳಸಿ ಮಕ್ಕಳ ಮನಸ್ಸಿಗೆ ನಾಟುವಂತೆ ಮಾಡಬಹುದು.

ಹರಿಶ್ಚಂದ್ರ ನಾಟಕ ಬಾಲಕ ಗಾಂಧಿಯ ಮೇಲೆ ಮೂಡಿಸಿದ ಛಾಪನ್ನು ಅಂತಹ ಸದ್ಗುಣ ಮನಸ್ಸುಳ್ಳ ಮಕ್ಕಳ ಮೇಲೆ ಇಂದಿಗೂ ಮೂಡಿಸ ಬಲ್ಲುದಾಗಿದೆ. ಆದ್ದರಿಂದ ನೀತಿಶಿಕ್ಷಣದ ಬೋಧನೆಗೆ ಸಾಹಿತ್ಯಕ್ಷೇತ್ರವೇ ಸೊಗಸಾದ ಹುಲ್ಲುಗಾವಲು.

ನೀತಿಶಿಕ್ಷಣವನ್ನು ತರಗತಿಗಳಲ್ಲಿ ವಿಧ್ಯುಕ್ತವಾಗಿ ಬೋಧಿಸುವಾಗ ಪಾಠಹೇಳುವ ಬೋಧಕರೂ ನೀತಿವಂತರಾಗಿರಬೇಕು. ಏಕೆಂದರೆ ಉಪಾಧ್ಯಾಯ ತನ್ನ ತಪ್ಪನ್ನು ಮುಚ್ಚಿಕೊಳ್ಳಲು "ನಾನು ಹೇಳಿದಂತೆ ಮಾಡು, ನಾನು ಮಾಡಿದಂತೆ ಮಾಡಬೇಡ" ಎಂದು ಹೇಳಬೇಕಾಗುತ್ತದೆ. ನೀತಿಶಿಕ್ಷಣದಿಂದ ಕೆಲವೊಮ್ಮೆ ಅಪಾಯವೂ ಉಂಟಾಗಬಹುದು. ಅದೆಂದರೆ ಭಾವೋದ್ವೇಗಗಳಿಗೆ ಬಲಿಯಾಗುವ ಅಪಾಯವಿದೆ. ಅದರಿಂದ ತೂಕ ತಪ್ಪಿದ ನಡುವಳಿಕೆಗೆ ದಾರಿಯಾಗುತ್ತದೆಂದೂ ತೋರುತ್ತದೆ ಎಂಬುದು ಕೆಲವರ ಅಭಿಪ್ರಾಯ.

ಕೆಲವು ಶಿಕ್ಷಣತಜ್ಞರ ಆಲೋಚನೆಯಂತೆ ಧಾರ್ಮಿಕ ಸಂಸರ್ಗವಿಲ್ಲದ ನೀತಿಶಿಕ್ಷಣ ಆತ್ಮವಿಲ್ಲದ ದೇಹದಂತೆ! ಜನರು ನೀತಿವಂತರಾಗಿ ನಡೆದುಕೊಳ್ಳುತ್ತಿದ್ದರೆ ಅದಕ್ಕೆ ಭಗವಂತನ ಭಯವೆ ಕಾರಣ. ಏಕೆಂದರೆ ಅನೀತಿವಂತನನ್ನು ಭಗವಂತ ಶಿಕ್ಷಿಸುತ್ತಾನೆ ಎನ್ನುವ ಭೀತಿಯೇ ಜನರ ನೀತಿಯುತ ನಡವಳಿಕೆಗೆ ಕಾರಣ! ಪಾಪಭೀತಿ ಇಲ್ಲದವನು ಏನನ್ನು ಬೇಕಾದರೂ ಮಾಡಬಲ್ಲ. ಅವನಿಗೆ ನೀತಿಶಿಕ್ಷಣದ ಅಗತ್ಯತೆ ಇಲ್ಲ.....! ಶಾಲೆಗಳಲ್ಲಿ ವಿದ್ಯಾರ್ಥಿಗಳು ಶಾಲಾನಿಯಮಗಳನ್ನು ಅನುಸರಿಸಿ ನಡೆಯುತ್ತಾರೆ. ಕಾರಣ ನಿಯಮೋಲ್ಲಂಘನೆ ಶಿಕ್ಷೆಗೆ ಗುರಿಮಾಡುತ್ತದೆ ಎಂಬ ಭಯವೆ ಆಗಿದೆ. ಆದರೆ ಶಿಕ್ಷೆಯ ಭಯದಿಂದಾವಿರ್ಭೂತವಾದ ನೀತಿಯುತ ನಡುವಳಿಕೆಯಷ್ಟು ಪ್ರಭಾವಶಾಲಿಯಾದುದಲ್ಲ. ಅಂತೆಯೆ ಭಗವಂತನ ಭಯದಿಂದ ಆವಿರ್ಭವಿಸುವ ನೀತಿಯುತ ನಡವಳಿಕೆ ಅಷ್ಟೊಂದು ಪ್ರಭಾವಯುಕ್ತವಾದ ನೀತಿಶಿಕ್ಷಣ ಎನಿಸಿಕೊಳ್ಳಲಾರದು. ಇಲ್ಲಿ ಅಬೂಬೆನ್ ಆಡಂನ ಕಥೆಯನ್ನು ಜ್ಞಾಪಿಸಿಕೊಳ್ಳಬಹುದು. ದೇವರೇ ಒಂದು ಪುಣ್ಯಮಾಡಿದವರ ಪಟ್ಟಿಯಲ್ಲಿ ನಿನ್ನ ಹೆಸರನ್ನು ಮೊದಲು ಬರೆಯಲೇ ಎಂದು ಕೇಳಿದಾಗ ಆತ ಒಪ್ಪಲಿಲ್ಲ. ಇಲ್ಲೇ ಅವನ ನಡವಳಿಕೆ ಆತ್ಮಾವಲೋಕನದಿಂದಾ ವಿರ್ಭೂತವಾದದ್ದು. ನೀತಿಶಿಕ್ಷಣ ಅಬೂಬೆನ್ ಆಡಂನಂಥ ವ್ಯಕ್ತಿಗಳನ್ನು ಸೃಷ್ಟಿಮಾಡುವಂತಿರಬೇಕು!

ಮನುಷ್ಯ ನೀತಿವಂತನಾಗಿ ನಡೆದುಕೊಳ್ಳುತ್ತಾನೆ ಎಂದರೆ ಅದು ಅವನ ಸ್ವಭಾವದಲ್ಲಿ ಮಹೋನ್ನತವಾದುದನ್ನು ಕಂಡುಕೊಡುವಂತಹುದಾಗಿದೆ. ನೀತಿಯುತ ನಡವಳಿಕೆಯ ಸುಭದ್ರ ತಳಹದಿಯ ಮೇಲೆಯೇ ಸಮಾಜದ ಕಟ್ಟಡ ನಿಂತಿರುವಂತಹುದು!

ನೀತಿಶಿಕ್ಷಣ ಮತ್ತು ಮೌಲ್ಯಗಳು

ನೀತಿಶಿಕ್ಷಣದ ಇನ್ನೊಂದು ಮುಖ ಮೌಲ್ಯಗಳು. ಮೌಲ್ಯ ಎಂದರೆ ಬೆಲೆಯುಳ್ಳದ್ದು ಎಂದರ್ಥ. ಇನ್ನೊಬ್ಬರ ಬಗ್ಗೆ ಒಳ್ಳೆಯ ರೀತಿಯಲ್ಲಿ ಬೆಲೆಯುಳ್ಳ ರೀತಿಯಲ್ಲಿ ವರ್ತಿಸಲು ಯಾವುದು ಸಹಾಯ ಮಾಡುತ್ತದೋ ಅದು ನೈತಿಕಮೌಲ್ಯ ಮತ್ತು ಅದು ಒಬ್ಬನು ಪಡೆ ನೈತಿಕಶಿಕ್ಷಣ.

ಮೌಲ್ಯದ ಪರಿಕಲ್ಪನೆ

"ಮೌಲ್ಯ" ಎಂಬ ಶಬ್ದ ಇಂತಿಷ್ಟೆ ಸರಿ ಎಂದು ವ್ಯಾಖ್ಯಾನಿಸುವುದು ಕಷ್ಟ ಸಾಧ್ಯ. ಆದರೆ ಮೌಲ್ಯದ ಪರಿಕಲ್ಪನೆ ಮಾನವನ ಕಾರ್ಯಚಟುವಟಿಕೆಗಳಲ್ಲಿ ಮತ್ತು ಅವನ ಆಲೋಚನೆಗಳಲ್ಲಿ ಹಾಸುಹೊಕ್ಕಾಗಿರುವಂತಹುದಾಗಿದೆ. ವ್ಯಕ್ತಿಯ ಆಲೋಚನೆಗಳನ್ನು ನಿರ್ದೇಶಿಸುವ ಹಾಗೂ ನಿಯಂತ್ರಿಸುವ ತತ್ವವಿಚಾರಗಳನ್ನು ಮೌಲ್ಯಗಳು ಎಂದು ಹೇಳಬಹುದು.

ಮೊದಲು ವಸ್ತುಸ್ಥಿತಿ ಮತ್ತು ಮೌಲ್ಯಗಳಿಗಿರುವ ವ್ಯತ್ಯಾಸವನ್ನು ಅರ್ಥೈಸಿಕೊಳ್ಳಬೇಕು. ಅಣುಬಾಂಬು ಕೋಟ್ಯಾಂತರ ಜನರನ್ನು ಆಹುತಿ ತೆಗೆದುಕೊಳ್ಳುತ್ತದೆಂಬ ಹೇಳಿಕೆ ವಸ್ತುಸ್ಥಿತಿ. ಅಣುಬಾಂಬನ್ನು ಉಪಯೋಗಿಸುವುದೇ ತಪ್ಪು ಎಂದು ಹೇಳುವುದು ನಿರ್ಣಾಯಕವಾದ ನೈತಿಕಮೌಲ್ಯ. ನಿರ್ಣಾಯಕವಾದ ಮೌಲ್ಯಗಳನ್ನು ನಿರ್ಧರಿಸಲು ಒಳ್ಳೆಯದು - ಕೆಟ್ಟದ್ದು; ಸರಿ-ತಪ್ಪು; ಸುಂದರ-ಕುರೂಪಿ, ಇತ್ಯಾದಿ ಶಬ್ದಗಳನ್ನು ಬಳಸುತ್ತೇವೆ. ಅವುಗಳೇ ನಮ್ಮ ಮೌಲ್ಯಗಳ ಮೂಲ ಶಬ್ದಗಳು.

ಮೌಲ್ಯಗಳನ್ನು ಅಪೇಕ್ಷಿತ ಮೌಲ್ಯಗಳು ಮತ್ತು ಅನಪೇಕ್ಷಿತ ಮೌಲ್ಯಗಳು ಎಂದು ಎರಡು ವರ್ಗವಾಗಿ ವಿಂಗಡಿಸಬಹುದು. ಅಪೇಕ್ಷಿತ ಮೌಲ್ಯಗಳಾವುವೆಂದರೆ ವಿದ್ಯೆ, ಹಣ, ಅಧಿಕಾರ, ಆಹಾರ, ಸುಖ, ರಕ್ಷಣೆ, ಆರೋಗ್ಯ, ಐಶ್ವರ್ಯ, ಸಾಹಸಪ್ರವೃತ್ತಿ, ಸತ್ಯ, ಅಹಿಂಸೆ, ಶಾಂತಿ ಇತ್ಯಾದಿ. ಅನಪೇಕ್ಷಿತ ಮೌಲ್ಯಗಳಾವುವೆಂದರೆ ದುಃಖ, ದುಮ್ಮಾನ, ನೋವು, ಹಸಿವು, ಬಡತನ, ಅಜ್ಞಾನ, ಕೋಪ, ತಾಪ, ಶಾಪಾಶಯ, ದ್ವೇಷ, ಅಸೂಯೆ, ಈರ್ಷ್ಯೆ ಇತ್ಯಾದಿ. ಹೀಗೆ ಮಾನವರು ಅಪೇಕ್ಷಿಸುವ ಮತ್ತು ಅಪೇಕ್ಷಿಸದೆ ಇರುವ ವಿಷಯಗಳ ಅಂತರ ನಿಜಕ್ಕೂ ವಿಲಕ್ಷಣವಾದದ್ದು. ಅವು ಉನ್ನತವಾದ ಮೂರ್ತ ಸ್ವರೂಪದ ಐಹಿಕ ಮತ್ತು ಸಾಂಸಾರಿಕವಾದ, ಲಘುವಾದ ಮತ್ತು ತತ್ಕ್ಷಣದ ಅಪೇಕ್ಷೆಗಳಿಂದ ಉನ್ನತೋನ್ನತ ಅಪೇಕ್ಷೆಗಳವರೆಗೆ ಸಾಮಾನ್ಯವಾದ ಅಂತಿಮವಾದ ಮತ್ತು ಗಹನ ವಿಚಾರಗಳ ವರೆಗೆ ವ್ಯಾಪ್ತಿ ಉಳ್ಳವುಗಳು. ಅವು ಮದುವೆ, ವೃತ್ತಿ, ಮನೆ, ಸಾಮಾಜಿಕ ನ್ಯಾಯ, ಶಾಂತಿ, ಜಾತ್ಯಾತೀತತೆ, ಸಮಾನತೆ, ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ನಂಬಿಕೆ, ಇತ್ಯಾದಿ ಎಲ್ಲಾ ವಿಷಯಗಳನ್ನೊಳಗೊಂಡವುಗಳಾಗಿವೆ. ಒಳ್ಳೆಯದು ಕೆಟ್ಟದ್ದು ಎಂಬುದರ ತೀರ್ಪು ಅಸ್ತಿತ್ವದಲ್ಲಿರುವುದಕ್ಕೆ ಕಾರಣ ಜನ ಅವುಗಳಿಗೆ ಬೆಲೆ ಕಟ್ಟುತ್ತಾರೆ. ಅವುಗಳನ್ನು ಮೌಲ್ಯಗಳೆಂದು ಪರಿಗಣಿಸುತ್ತಾರೆ. ಮೌಲ್ಯಗಳು ಕೆಲವೊಮ್ಮೆ ಪ್ರಜ್ಞಾಪೂರ್ವಕವಾಗಿ ನಿರ್ಧಾರಿತವಾದವುಗಳಾಗಿರುತ್ತವೆ. ಅವು ಅವರ ಅಪೇಕ್ಷೆಗಳನ್ನು ಅನಪೇಕ್ಷೆಗಳನ್ನು, ಆದ್ಯತೆಯನ್ನು ಮತ್ತು ಪೂರ್ವಗ್ರಹ ಪೀಡನೆಗಳನ್ನು ಆಧಾರ ವಾಗಿಟ್ಟುಕೊಂಡವುಗಳಾಗಿರುತ್ತವೆ. ಆದರೆ ಮಾನವರು ಅಪೇಕ್ಷಿಸುವ ಎಲ್ಲವೂ

ಅಪೇಕ್ಷಣೀಯವಾದವುಗಳಲ್ಲ. ಇದು ಮೌಲ್ಯದ ದ್ವಿತೀಯ ಮತ್ತು ಬಹುಮುಖ್ಯವಾದ ಪ್ರಶ್ನೆ. ಹಿಟ್ಲರನು ಯಹೂದಿಗಳನ್ನು ಸಂಪೂರ್ಣವಾಗಿ ನಿರ್ನಾಮಮಾಡಲು ನಿರ್ಧರಿಸಿದ. ಆದರೆ ಅವನ ಅಪೇಕ್ಷೆ ಆಪೇಕ್ಷಣೀಯವಾದುದೆ? ಅಲ್ಲ. ಅಂತೆಯೆ ಜನರು ಹೇಗಾದರೂ ಸರಿ, ಎಂತಾದರೂ ಸರಿ ಧಿಡೀರನೆ ಶ್ರೀಮಂತರಾಗಲು ಅಪೇಕ್ಷಿಸುತ್ತಾರೆ. ಈ ಅಪೇಕ್ಷೆ ಸಾಧುವಾದುದೆ? ಎಂದಿಗೂ ಇಲ್ಲ. ನಾವು ನಮ್ಮ ಸ್ವಾತಂತ್ರ್ಯವಾದ ಆಲೋಚನೆಗಳಿಗೆ ಕಸರತ್ತು ಕೊಡುವುದೇ ಇಲ್ಲ. ಆದರೆ ನಾವು ನಮ್ಮ ಲಘುವಾದ ಪೂರ್ವಗ್ರಹಗಳಿಗೆ ಅಂಟಿಕೊಂಡು ಬಿಡುತ್ತೇವೆ. ಇದು ಅಪೇಕ್ಷಣೀಯವಾದುದಲ್ಲ.

ವಿವಿಧ ರೀತಿಯ ಮೌಲ್ಯಗಳು ಮತ್ತು ಅವುಗಳ ವರ್ಗೀಕರಣ

ಮೌಲ್ಯಗಳಲ್ಲಿ ನಾನಾ ವಿಧವಾದ ಮೌಲ್ಯಗಳಿವೆ. ಅವುಗಳನ್ನು ಕೆಳಕಂಡಂತೆ ವರ್ಗೀಕರಿಸಬಹುದು :

1. ಸಹಜವಾದ ಅಥವಾ ನೈಜವಾದ ಮೌಲ್ಯಗಳು 2. ಸಾಧಕ ಮೌಲ್ಯಗಳು 3. ಬೌದ್ಧಿಕ ಮೌಲ್ಯಗಳು 4. ಆಧ್ಯಾತ್ಮಿಕ ಮೌಲ್ಯಗಳು 5. ಸೌಂದರ್ಯೋಪಾಸಕ ಮೌಲ್ಯಗಳು 6. ಪವಿತ್ರತಮ ಮೌಲ್ಯಗಳು 7. ಆರ್ಥಿಕ ಮೌಲ್ಯಗಳು 8. ಆರೋಗ್ಯ ಮೌಲ್ಯಗಳು 9. ಶಾರೀರಿಕ ಮತ್ತು ಮನೋರಂಜನೆಯ ಮೌಲ್ಯಗಳು 10. ಸಾಮಾಜಿಕ ಮೌಲ್ಯಗಳು 11. ಧಾರ್ಮಿಕ ಮೌಲ್ಯಗಳು 12. ಸಕಾರಾತ್ಮಕ (Positive) ಮೌಲ್ಯಗಳು. 13. ನಕಾರಾತ್ಮಕ (Negative) ಮೌಲ್ಯಗಳು 14. ಅತ್ಯುನ್ನತ ಮೌಲ್ಯಗಳು 15. ಕೆಳದರ್ಜೆಯ ಮೌಲ್ಯಗಳು. 16. ನೈಸರ್ಗಿಕ ಮೌಲ್ಯಗಳು.

ಇವೆಲ್ಲವುಗಳನ್ನು ಒಟ್ಟಾಗಿ ಸೇರಿಸಿ ಸಹಜ ಅಥವಾ ನೈಜ ಮೌಲ್ಯಗಳು (Intrinsic Values) ಮತ್ತು ಸಾಧಕ ಮೌಲ್ಯಗಳು (Instrumental Values) ಎಂದು ಎರಡು ಪ್ರಧಾನ ವರ್ಗಗಳಾಗಿ ವಿಂಗಡಿಸಬಹುದು.

ಹಣ, ವಸ್ತು, ವಾಹನ, ಭೂಮಿ, ಭವನ, ಇವೆಲ್ಲವೂ ಸಾಧಕ ಮೌಲ್ಯಗಳು. ಜ್ಞಾನ, ಸತ್ಯ, ಶಿವ,. ಸುಂದರ, ಅಹಿಂಸೆ, ಶಾಂತಿ, ಆಧ್ಯಾತ್ಮಿಕ ಅನುಭೂತಿ ಇತ್ಯಾದಿ ಎಲ್ಲವೂ ನೈಜಮೌಲ್ಯಗಳು ಈ ಎರಡೂ ರೀತಿಯ ಮೌಲ್ಯಗಳನ್ನು ಮಾನವ ಸಾಧಿಸಬಹುದಾಗಿದೆ. ನೈಜಮೌಲ್ಯಗಳನ್ನು ಸಾಧಿಸ ಹೊರಟವರು ಭಗವತ್‌ಸಾಕ್ಷಾತ್ಕಾರ ಪಡೆದು ಈ ಲೋಕದಲ್ಲಿ ಅಮರರಾಗುತ್ತಾರೆ; ಅಮರರಾಗಿದ್ದಾರೆ.

ಮೌಲ್ಯಗಳನ್ನು ನೈತಿಕಮೌಲ್ಯಗಳೆಂದೂ ಸಹ ವರ್ಗೀಕರಿಸಲಾಗಿದೆ. ಮಾನವರಾದ ನಮ್ಮ ಭಾವನೆಗಳಲ್ಲಿ ಒಳ್ಳೆಯದು-ಕೆಟ್ಟದು, ಸರಿ-ತಪ್ಪು ಎಂಬ ಕಲ್ಪನೆಗಳಿವೆ. ಇವುಗಳನ್ನೆ ನೈತಿಕಮೌಲ್ಯಗಳು ಎಂದು ಕರೆದಿರುವುದು. ನಾವು ಸುರೂಪಿ, ಕುರೂಪಿ ಎಂಬ ವ್ಯತ್ಯಾಸಗಳನ್ನು ಕಾಣುತ್ತೇವೆ. ಅವುಗಳನ್ನು ಗುಣಗ್ರಾಹಕತೆಯ ಮೌಲ್ಯಗಳೆನ್ನುತ್ತೇವೆ. ಸತ್ಯವೂ ಶಿವವೂ ಸುಂದರವೂ ಆದುದರ ಕಡೆ ಯಾವುದು ನಮ್ಮನ್ನು ಕೊಂಡೊಯ್ಯ ಬಲ್ಲುದೋ ಅದನ್ನು ಆಧ್ಯಾತ್ಮಿಕಮೌಲ್ಯವೆನ್ನುತ್ತೇವೆ.

ಇವೆಲ್ಲವುಗಳ ಜತೆಗೆ ಬೇರೆ ಬೇರೆ ಹಂತಗಳಲ್ಲಿ ನಾವು ಆರ್ಥಿಕ ಮೌಲ್ಯಗಳನ್ನು, ಆರೋಗ್ಯ ಮತ್ತು ಶಾರೀರಿಕ ಮೌಲ್ಯಗಳನ್ನು, ಸಾಮಾಜಿಕ ಮೌಲ್ಯಗಳನ್ನು ಮತ್ತು ಧಾರ್ಮಿಕ ಮೌಲ್ಯಗಳನ್ನು ಸೇರಿಸುತ್ತೇವೆ.

ಇವಿಷ್ಟೇ ಅಲ್ಲದೆ ನಮ್ಮೆಲ್ಲರ ಸುಖಸಂತೋಷಗಳು, ಆನಂದಾನುಭೂತಿಗಳು ಇತ್ಯಾ ಸಕಾರಾತ್ಮಕ ಮೌಲ್ಯಗಳು ಇವೆ. ನಮ್ಮೆಲ್ಲ ದುಃಖ ದುಮ್ಮಾನಗಳು, ನೋವುಗ ಅಪಮಾನಗಳು, ಸೋಲುಗಳು ಇತ್ಯಾದಿ ನಕಾರಾತ್ಮಕ ಮೌಲ್ಯಗಳೂ ಇವೆ. ಬೌದ್ಧಿ ಸೌಂದರ್ಯೋಪಾಸಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳೆಲ್ಲವೂ ಸಹ ಅತ್ಯುನ್ನ ಮೌಲ್ಯಗಳು ಮತ್ತು ಸಹಜ-ನೈಜ ಮೌಲ್ಯಗಳು, ನೈಜಮೌಲ್ಯಗಳ ಸಾಧನೆ ಶಾಶ್ವ ಸುಖವನ್ನು ಕಂಡುಕೊಳ್ಳುತ್ತವೆ. ಸಾಧಕಮೌಲ್ಯಗಳು ಕ್ಷಣಿಕಸುಖವನ್ನು ತಂದು ಕೊಡುತ್ತವೆ.

ಮೌಲ್ಯಗಳು ಕರ್ತೃ ಸಂಬಂಧವಾದವುಗಳು

ಮೌಲ್ಯಗಳು ಯಾವಾಗಲೂ ಕರ್ತೃ ಸಂಬಂಧವಾದವುಗಳೇ ವಿನಾ ವಾಸ್ತ ಮೌಲ್ಯಗಳೆಂಬವು ಯಾವುವೂ ಇಲ್ಲ. ಆದ ಕಾರಣದಿಂದಲೇ ಮೌಲ್ಯಗಳು ಕಾಲ, ದೇ ಸಮಾಜ, ಸನ್ನಿವೇಶಗಳಿಗೆ ತಕ್ಕಂತೆ ನಿರಂತರವಾಗಿ ಬದಲಾವಣೆ ಹೊಂದುತ್ತ ಹೋಗುತ್ತಿರುತ್ತವೆ. ಶಾಶ್ವತವಾದ ಮೌಲ್ಯಗಳು ಇಲ್ಲವೇ ಇಲ್ಲ; ಮೌಲ್ಯಗಳಿಗೆ ವಾಸ್ತ ನೆಲೆಗಟ್ಟೆಂಬುದಿಲ್ಲ. ಅವು ಕರ್ತೃವೊಬ್ಬನ ಅಪೇಕ್ಷೆ, ನಿರಪೇಕ್ಷೆ ಮತ್ತು ಅವನ ಇಂದ್ರಿಯ ಗ್ರಾಹ್ಯ ವಿಷಯಗಳೇ ವಿನಾ ನೈಜತೆಯ ಬುನಾದಿಯಿಲ್ಲ. ಯಾವುದು ಒಳ್ಳೆಯದು ಮತ್ತ ಯಾವುದು ಅಪೇಕ್ಷಿತವಾದುದು ಎಂಬುದು ವ್ಯಕ್ತಿಯೊಬ್ಬನ ವೈಯಕ್ತಿಕ ಇಂದ್ರಿಯ ಗ್ರಾ ವಿಷಯಕ್ಕೆ ಸಂಬಂಧಿಸಿದ್ದು ಸಮಾಜ - ಸಮಾಜಗಳ ನಡುವೆಯೂ ಮೌಲ್ಯಗಳ ಬ ತಮ್ಮದೇ ಆದ ನಿಲುವುಗಳಿವೆ. ಏಕೆಂದರೆ ಒಂದೊಂದು ಸಮಾಜದ ನಡವಳಿಕೆ, ಜಾನಪ ವಿಧಾನಗಳು, ರೀತಿರಿವಾಜುಗಳು, ಕಟ್ಟುಕಟ್ಟಳೆಗಳು, ನಡೆನುಡಿ, ವೇಶಭೂಷಣಗಳು, ಒಂದ ಇನ್ನೊಂದಕ್ಕಿಂತ ಭಿನ್ನವಾದವುಗಳಾಗಿವೆ. ಒಳ್ಳೆಯ ಜೀವನ, ಒಳ್ಳೆಯ ವ್ಯಕ್ತಿ ಎಂಬುದು ಆಯಾ ಸಮಾಜದ ನಿರ್ಧಾರಗಳೇ ಬೇರೆ ಇರುತ್ತವೆ. ಶೈಕ್ಷಣಿಕ ಸಮಾಜಶಾಸ್ತ್ರ ಈ ಒಂದ ಅಂಶವನ್ನೇ ಒತ್ತಿ ಹೇಳಿದೆ. ವ್ಯಕ್ತಿಯೊಬ್ಬನ ವ್ಯಕ್ತಿತ್ವ ಆಯಾ ಸಮಾಜದ ನಂಬಿಕೆಗಳಿ ಭಾವನೆಗಳಿಗೆ, ಧ್ಯೇಯಗಳಿಗೆ ತಕ್ಕಂತೆ ನಿರ್ಮಾಣಗೊಳ್ಳಬೇಕೇ ವಿನಾ ಬೇರಾವುದೇ ಮೌ ಅಂಥಲ್ಲಿ ಅಪ್ರಸ್ತುತವಾಗುತ್ತದೆ. ಈ ಅರ್ಥದಲ್ಲಿಯೇ ಮೌಲ್ಯಗಳು ಕರ್ತೃಸಂಬಂಧವಾದ ಗಳಾಗಿದ್ದು ಅವುಗಳನ್ನು ನಿರ್ಧರಿಸುವ ಕರ್ತೃ, ಕಾಲ ಮತ್ತು ಸ್ಥಳದ ಮೇ ಅವಲಂಬಿತವಾದವುಗಳಾಗಿವೆ.

ವ್ಯವಹಾರವಾದಿಗಳ ಪ್ರಕಾರ ಮೌಲ್ಯಗಳು ಜೀವನದ ಗುರಿಗಳನ್ನು ಸಾಧಿಸು ಸಾಧನಗಳು. ಮನುಷ್ಯನು ಮೂಲತಃ ಜೈವಿಕ ಮತ್ತು ಸಾಮಾಜಿಕ ಜೀವಿ. ಅವನು ಈಗಿ ವರ್ತಮಾನವನ್ನು ಕುರಿತು ಚಿಂತಿಸಬೇಕೇ ವಿನಾ ಆಗಿಹೋದ ಭೂತಕಾಲವನ್ನಾಗಲಿ ಗೊತ್ತಿಲ್ಲದಿರುವ ಭವಿಷ್ಯತ್ತನ್ನಾಗಲೀ ಕುರಿತು ಚಿಂತಿಸುವ ಅಗತ್ಯವಿಲ್ಲ. ಏಕೆಂದ ಭೂತಕಾಲದ ಸ್ಮರಣೆ ವೃಥಾ ಕಾಲಹರಣ. ಭವಿಷ್ಯ ಏನೆಂಬುದು ಗೊತ್ತಿಲ್ಲ. ಆದ ಕಾರ ಅದನ್ನು ಕುರಿತು ಚಿಂತಿಸುವುದು ವ್ಯರ್ಥ ಕಾಲಹರಣ. ಆದ್ದರಿಂದ ಇಂದಿನ ಬದುಕ ಸಂಪದ್ಭರಿತವಾಗಬೇಕು ಮತ್ತು ಆರೋಗ್ಯಪೂರ್ಣವಾದುದಾಗಿರಬೇಕು. ಮೌಲ್ಯಗಳೆಲ್ಲವ ಅದಕ್ಕೆ ಪೂರಕ-ಪೋಷಕವಾದವುಗಳಾಗಿರಬೇಕು. ಅವನು ಪ್ರಾಪಂಚಿಕ ಜೀವನದ ಕೊಳ ಕೊಡೆಗಳೊಂದಿಗೆ ವ್ಯವಹರಿಸುತ್ತಾನೆ. ತನ್ನೊಂದಿಗಿನ ವಾತಾವರಣದೊಂದಿಗೆ ಸ್ಪಂದಿಸುತ್ತಾನ ಪ್ರತಿಕ್ರಿಯಿಸುತ್ತಾನೆ. ಅವನ ವ್ಯವಹಾರವೆಲ್ಲವೂ ಪಂಚೇಂದ್ರಿಯ ಗ್ರಾಹ್ಯವಾದವುಗಳ

ಸಾಮಾಜಿಕ ಸಂಬಂಧದಿಂದ ಕೂಡಿದವುಗಳು; ಸಮಸ್ಯಾತ್ಮಕ ಸನ್ನಿವೇಶಗಳುಳ್ಳವುಗಳು. ಆದ್ದರಿಂದ ಬಾಳಿನ ಗುರಿ ನಾವು ಸದಾ ಉತ್ತಮಿಕೆಯುಕ್ತವಾಗುವಂತೆ ಮಾಡುವುದು ಅನುಭವ ಗಳಿಸುತ್ತಾ ಹೋದಂತೆ ಸುಧಾರಿತ ವ್ಯಕ್ತಿಗಳಾಗುತ್ತಾ ಹೋಗುವುದು. ಅಂತಹ ಪ್ರಪಂಚದಲ್ಲಿ ಶಾಶ್ವತವಾದ ಮೌಲ್ಯಗಳಿರಲು ಹೇಗೆ ಸಾಧ್ಯ? ಎಲ್ಲಾ ಮೌಲ್ಯಗಳೂ ಆಯಾ ಕಾಲ, ದೇಶ ಮತ್ತು ಸನ್ನಿವೇಶಗಳಿಂದ ನಿರ್ಧಾರಿತವಾಗತಕ್ಕಂತಹವುಗಳು. ಇಂದು ಯಾವುದು ಒಳ್ಳೆಯದೋ ನಾಳೆ ಅದು ಅದೇ ರೀತಿ ಒಳ್ಳೆಯದಾಗಿರಲಾರದು. ಇಲ್ಲಿ ಯಾವುದು ಒಳ್ಳೆಯದಾಗಿರುತ್ತದೋ ಇನ್ನೊಂದು ಕಡೆ ಅದೇ ಒಳ್ಳೆಯದಾಗಿರಲಾರದು. ಒಳ್ಳೆಯ ನಡವಳಿಕೆ, ನೈತಿಕ ನಡವಳಿಕೆಗಳೆಂಬುವು ಅವು ಯಾವ ಫಲಿತಾಂಶಗಳನ್ನು ನೀಡುತ್ತವೆ ಎನ್ನುವುದರ ಮೇಲೆ ನಿಂತಿದೆ. ಒಳ್ಳೆಯವು ಎನ್ನುವ ಅಂಶಗಳೂ ಸಹ ಅವು ಎಷ್ಟರಮಟ್ಟಿಗೆ ಕಾರ್ಯಯೋಗ್ಯವಾದವುಗಳೆಂಬುದರ ಮೇಲೆ ನಿರ್ಧಾರಿತವಾಗತಕ್ಕವುಗಳು. ಆದರೆ ಅವು ಏನು ಕಾರ್ಯ ಮಾಡುತ್ತವೆಂಬುದು ನನಗಾಗಿಯಾಗಲೀ ಅಥವಾ ನಿನಗಾಗಿಯಾಗಲೀ ಅಲ್ಲ, ಅವು ಒಟ್ಟಾರೆಯಾಗಿ ಎಲ್ಲರಿಗಾಗಿ ಎಂಬುದು ಮುಖ್ಯ. ವ್ಯಕ್ತಿಯೊಬ್ಬನ ಕಾರ್ಯ ಚಟುವಟಿಕೆ ವಿಸ್ತಾರಗೊಳ್ಳುತ್ತಾ ಅದು ಸಮಾಜದ ಮೇಲೆ ಏನು ಪರಿಣಾಮವನ್ನುಂಟು ಮಾಡುತ್ತದೆ ಎಂಬುದು ಮುಖ್ಯ. 'ಒಳ್ಳೆಯದು' ಎಂದು ನಿರ್ಧಾರವಾಗಬೇಕಾದರೆ ಅದು ಅಂತಿಮವಾಗಿ ಸಾರ್ವತ್ರಿಕವಾಗಿ ಎಷ್ಟು ಉಪಯುಕ್ತ ಎಂಬುದು ಗಣನೀಯ.

ಶೈಕ್ಷಣಿಕ ಮೌಲ್ಯಗಳು

ಸಾರ್ವಜನಿಕ ಶಾಲೆಯೊಂದರಲ್ಲಿ ಓದುತ್ತಿರುವ ಎಲ್ಲ ಯುವ ವಿದ್ಯಾರ್ಥಿಗಳನ್ನು ಒಂದು ವಿಧವಾದ ವ್ಯವಸ್ಥಿತವಾದ ಶಿಸ್ತಿನಿಂದ ಕೂಡಿದ ಒಂದು ತತ್ವಬದ್ಧವಾದ ಜೀವನಕ್ಕೆ ಅಣಿಗೊಳಿಸುವುದೇ ಮುಖ್ಯವಾದ ಧ್ಯೇಯವಾಗಿರುತ್ತದೆ. ಅದು ವ್ಯಕ್ತಿಗೆ ವೈಯುಕ್ತಿಕವಾಗಿಯೂ ಮತ್ತು ಸಾಮೂಹಿಕವಾಗಿಯೂ ಒಳಿತನ್ನುಂಟು ಮಾಡುವಂತಿರಬೇಕು. ಆದರೆ ಎಂತಹ ಜೀವನಕ್ಕಾಗಿ ಒಬ್ಬನನ್ನು ಸಿದ್ಧಗೊಳಿಸಬೇಕು? ಯಾವುದು ವ್ಯಕ್ತಿಗೆ ಮತ್ತು ಸಮಾಜಕ್ಕೆ ಒಳ್ಳೆಯ ಜೀವನವನ್ನೊದಗಿಸುತ್ತದೆ? ವಾಸ್ತವವಾಗಿ ಒಬ್ಬ ವ್ಯಕ್ತಿಯನ್ನು ಒಳ್ಳೆಯ ಜೀವನಕ್ಕಾಗಿ ಸಿದ್ಧಗೊಳಿಸುವುದೆಂದರೇನು? ಈ ತರಹದ ಎಲ್ಲ ಪ್ರಶ್ನೆಗಳೂ ವಾಸ್ತವವಾಗಿ ಶಿಕ್ಷಣದ ಧ್ಯೇಯ ಮತ್ತು ಗುರಿಗಳನ್ನು ಕುರಿತವುಗಳಾಗಿವೆ ಮತ್ತು ಅವುಗಳನ್ನು ಜೀವನದಲ್ಲಿ ಅನುಷ್ಠಾನದಲ್ಲಿ ತಂದುಕೊಳ್ಳುವ ಬಗೆ ಹೇಗೆ ಎಂಬುದನ್ನು ಕುರಿತವುಗಳಾಗಿವೆ. ಮನುಕುಲದ ಇತಿಹಾಸದುದ್ದಕ್ಕೂ ತತ್ವಜ್ಞಾನಿಗಳು, ಶಿಕ್ಷಣತಜ್ಞರು ಮತ್ತು ಸಮಾಜ ಸುಧಾರಕರು ಎಲ್ಲರೂ ಶಿಕ್ಷಣದ ಗುರಿಗಳನ್ನು ಕುರಿತು ಚರ್ಚಿಸುತ್ತಲೇ ಬಂದಿದ್ದಾರೆ. ಇಂದಿಗೂ ಆ ಚರ್ಚೆ ಮುಂದುವರಿದಿದೆ. ಅವರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಶಿಕ್ಷಣದ ಗುರಿ ಏನಿರಬೇಕು? ಅದು ಜ್ಞಾನವೆ ಅಥವಾ ಸಂಸ್ಕೃತಿಯೆ? ಅಥವಾ ಸದ್ಗುಣಗಳ ತರಬೇತಿಯೆ? ಅದು ಧಾರ್ಮಿಕವಾದುದೆ? ಜಾತ್ಯಾತೀತವಾದುದೆ? ಅದು ಉದಾರವಾದುದೆ ಅಥವಾ ವೃತ್ತಿಪರವಾದುದೆ? ಶಿಕ್ಷಣದ ಗುರಿಗಳು ಕೇವಲ ಕೆಲವು ದೇಶಕ್ಕನುಗುಣ ವಾದುವುಗಳಾಗಿರಬೇಕೊ? ಅಥವಾ ಅವು ವರ್ಗಾವಣೆಯನ್ನು ಒಳಗೊಳ್ಳತಕ್ಕವು ಗಳಾಗಿರಬೇಕೊ? ಶಾಶ್ವತವಾದ ಅಂತಿಮವಾದ ಶಿಕ್ಷಣದ ಗುರಿಗಳೇನಾದರೂ ಇವೆಯೆ?

ಶಿಕ್ಷಣದ ಗುರಿಗಳು ಅನುಭವಕ್ಕನುಗುಣವಾಗಿವೆಯೊ ಅಥವಾ ಅವು ಬಾಹ್ಯಲೋಕದಿಂದ ಸಿದ್ಧಗೊಳ್ಳುತ್ತವೆಯೋ, ಇತ್ಯಾದಿ.

ಹೀಗೆ ಶಿಕ್ಷಣದ ಗುರಿಗಳ ಬಗ್ಗೆ ಆನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಇತ್ಯಾದಿ ಗುರಿಗಳನ್ನು ನಿರ್ಧರಿಸುವಲ್ಲಿ ಅವು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ಬದಲಾವಣೆ ಹೊಂದುತ್ತಿರತಕ್ಕವುಗಳಾಗಿವೆ. ಆದರೆ ಮೌಲ್ಯಗಳು ಶಿಕ್ಷಣದ ಗುರಿಗಳೇನಿರಬೇಕೆಂಬುದನ್ನು ನಿರ್ಧರಿಸುತ್ತವೆ.

ಒಳ್ಳೆಯ ಜೀವನ ನಡೆಸಲು ಸಿದ್ಧಗೊಳಿಸುವ ವಿಧಾನವೇ ಶಿಕ್ಷಣ. ನಾವು ಯಾವುದನ್ನು ಒಳ್ಳೆಯದು ಮತ್ತು ಅಪೇಕ್ಷಣೀಯವಾದುದು ಎಂದು ಪರಿಗಣಿಸಿದ್ದೇವೆಯೊ ಅದನ್ನು ಕಲಿಯುವವರಿಗೆ ವರ್ಗಾವಣೆ ಮಾಡುವ ಒಂದು ವ್ಯವಸ್ಥಿತ ವಿಧಾನಕ್ಕೆ ಶಿಕ್ಷಣ ಎಂದು ಹೆಸರು. ನಾಗರೀಕ ಸಮಾಜಗಳು ಈ ಯಾವ ಒಂದನ್ನು ಗರ್ಭೀಕರಿಸಿ ಕೊಂಡಿವೆಯೋ ಅದನ್ನು ಅಂದರೆ ಜ್ಞಾನ, ಚಾತುರ್ಯಗಳು, ಪ್ರವೃತ್ತಿಗಳು, ಮೌಲ್ಯಗಳು ಮತ್ತಿತರ ವರ್ತನೆಯ ಸ್ವರೂಪಗಳು ಇವೆಲ್ಲವುಗಳಲ್ಲಿ ಯಾವುವು ಅವನ ಒಳ್ಳೆಯ ಜೀವನಕ್ಕೆ ಅವಶ್ಯಕವೆಂದು ಪರಿಗಣಿಸಲ್ಪಟ್ಟಿವೆಯೋ ಅವೆಲ್ಲವು ಶಿಕ್ಷಣದ ಗುರಿಗಳೆ ನಿಸಿಕೊಳ್ಳುತ್ತವೆ. ಆದರೆ ಸಮಾಜದಿಂದ ಸಮಾಜಕ್ಕೆ ಈ ಒಳ್ಳೆಯ ಜೀವನದ ಪರಿಕಲ್ಪನೆಯಲ್ಲಿ ವ್ಯತ್ಯಾಸಗಳಿವೆ. ಇದು ಆಯಾ ಸಮಾಜಗಳು ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ತೋರುವ ಜ್ಞಾನ, ಪ್ರವೃತ್ತಿಗಳು, ಚಾತುರ್ಯಗಳು, ಮೌಲ್ಯಗಳು ಇತ್ಯಾದಿಗಳಲ್ಲಿರುವ ವ್ಯತ್ಯಾಸಗಳಲ್ಲಿ ಪ್ರತಿಫಲನವಾಗಿರುವುದು ಕಂಡು ಬರುತ್ತದೆ. ಶಿಕ್ಷಣದ ಇತಿಹಾಸವನ್ನೊಮ್ಮೆ ಸಿಂಹಾವಲೋಕನ ಮಾಡಿ ನೋಡಿದರೆ ಸಾಕು ಒಬ್ಬ ಆದರ್ಶ ಶಿಕ್ಷಕನು ಕಾಲದಿಂದ ಕಾಲಕ್ಕೆ ಹೇಗೆ ಬದಲಾಗುತ್ತಾ ಬಂದಿದ್ದಾನೆಂಬುದು ಸ್ವಯಂ ವೇದ್ಯವಾಗುತ್ತದೆ.

ಬದಲಾವಣೆಯ ಓಘಕ್ಕೊಳಗಾಗುತ್ತಿರುವ ಶೈಕ್ಷಣಿಕ ಗುರಿಗಳನ್ನು ಗಮನದಲ್ಲಿಟ್ಟು ಕೊಂಡು ಮನುಕುಲವು ಸ್ಪಷ್ಟವಾದ ಜಾಗತಿಕ ಮೌಲ್ಯಗಳನ್ನು ದೃಷ್ಟಿಯಲ್ಲಿರಿಸಿ ಶಿಕ್ಷಣದ ಗುರಿಗಳನ್ನು ನಿರ್ಧರಿಸುತ್ತಾ ಬಂದಿದೆ. ವಿಶ್ವಸಂಸ್ಥೆಯು ತನ್ನೊಂದು ಪ್ರಣಾಳಿಕೆಯಲ್ಲಿ ಉದ್ಘೋಷಿಸಿರುವಂತೆ ಶಿಕ್ಷಣವು ಪ್ರತಿಯೊಬ್ಬ ಮಾನವನ ಆಜನ್ಮಸಿದ್ಧ ಹಕ್ಕು. ಈ ಒಂದು ಆಲೋಚನೆ ಶೈಕ್ಷಣಿಕಕ್ಷೇತ್ರದಲ್ಲಾದ ಒಂದು ಮಹತ್ಕ್ರಾಂತಿ.

ಮೌಲ್ಯಶಿಕ್ಷಣದ ಮುಖ್ಯ ತಿರುಳು

ಮೌಲ್ಯಶಿಕ್ಷಣದ ಮುಖ್ಯ ತಿರುಳೇನೆಂದರೆ ಮನುಷ್ಯನ ವ್ಯಕ್ತಿತ್ವವನ್ನು ಸರ್ವಾಂಗ ಸುಂದರವನ್ನಾಗಿಸುವುದು. ಅಂದರೆ ಬೌದ್ಧಿಕ, ಭೌತಿಕ, ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕವಾಗಿ ಸರ್ವತೋಮುಖವಾದ ಬೆಳವಣಿಗೆಗಾಗಿ ಶಿಕ್ಷಣವೀಯಬೇಕು. ಅದು ಸಮಾಜೋ-ಸಾಂಸ್ಕೃತಿಕ ಬೆಳವಣಿಗೆಯ ದೃಷ್ಟಿಯಿಂದಲೂ ಅತ್ಯವಶ್ಯಕ. ಶಿಕ್ಷಣದ ಮುಖ್ಯ ಉದ್ದೇಶವೆಂದರೆ ಅದು ವ್ಯಕ್ತಿಗಳನ್ನು ಬೆಳೆಸುವುದು. ಆದರೆ ಇಂದು ಶಿಕ್ಷಣವು ಕೇವಲ ವಿಷಯಗಳನ್ನು ವರ್ಗಾವಣೆ ಮಾಡುವ ಹಂತಕ್ಕೆ ಇಳಿದುಬಿಟ್ಟಿದೆ ಮತ್ತು ಪರೀಕ್ಷಾ ಫಲಿತಾಂಶಗಳಿಗೆ ಮಾತ್ರ ಸೀಮಿತವಾಗಿರುವಂತಹುದಾಗಿದೆ.

ನಾವು ಮೌಲ್ಯಶಿಕ್ಷಣವನ್ನು ಕುರಿತು ಮಾತನಾಡುವಾಗ ಇತ್ತೀಚೆಗೆ ತೀರಾ ನಿರ್ಲಕ್ಷಿ ಸಲ್ಪಟ್ಟಿರುವ ಸಾಮಾಜಿಕ, ನೈತಿಕ, ಸೌಂದರ್ಯೋಪಾಸಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಕಡೆ ಗಮನ ನೀಡಬೇಕಾಗುತ್ತದೆ.

ಎರಡನೆಯದಾಗಿ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಶೈಕ್ಷಣಿಕ ಮೌಲ್ಯಗಳ ಸ್ಥಾನವೇನೆಂಬುದನ್ನು ಕಲಿತು ಆಲೋಚಿಸಬೇಕಾಗಿದೆ. ಸ್ವತಂತ್ರ ಭಾರತದಲ್ಲಿ ಪ್ರಾಮಾಣಿಕತೆ ಎನ್ನುವುದು ಮರೀಚಿಕೆಯಾಗಿದೆ. ತಾಳ್ಮೆ ಹಾಗೂ ಸತ್ಯಸಂಧತೆಗಳು ಸಾರ್ವಜನಿಕ ಜೀವನ ಮತ್ತು ವೈಯಕ್ತಿಕ ಜೀವನಗಳೆರಡಲ್ಲೂ ಶಿಥಿಲವಾಗ ತೊಡಗಿವೆ. ಎಲ್ಲೆಲ್ಲೂ ಲೂಟಿ, ದಂಗೆ, ಕ್ರೂರತನ, ಸಿನಿಕತನ, ದುರಾಶೆ, ಸ್ವಹಿತಾಸಕ್ತಿ, ನಿರ್ಲಕ್ಷ್ಯ ಮನೋಭಾವ ಮತ್ತು ದುಃಖ ಇವು ಮನುಕುಲದ ಶಾಪವಾಗಿ ಹರಡ ತೊಡಗಿವೆ. ರಾಜಕೀಯ ಜೀವನವಂತೂ ತೀರಾ ಕಲುಷಿತಗೊಂಡಿದೆ. ನಿರ್ಲಜ್ಜ ರಾಜಕಾರಣಿಗಳು ಸಾಮಾಜಿಕ ಪರಿಸರವನ್ನೇ ಕುಲಗೆಡಿಸಿ ಬಿಟ್ಟಿದ್ದಾರೆ. ದೇಶದೆಲ್ಲೆಡೆಯಲ್ಲಿ ಒಂದು ವಿಧವಾದ ಅರಾಜಕತೆ ಮೂಡ ತೊಡಗಿದೆ. ಲಂಚಕೋರತನ ಅಡಿಯಿಂದ ಮುಡಿಯವರೆಗೆ ಹರಡ ತೊಡಗಿದೆ. ಸಮಾಜದಲ್ಲಿ ಶೀತಲಯುದ್ಧದ ವಾತಾವರಣ ಮೂಡಿದೆ. ಐಹಿಕ ಭೋಗ ಭಾಗ್ಯಗಳಿಗಾಗಿ ಮಾನವ ಏನೆಲ್ಲ ಮಾಡತೊಡಗಿದ್ದಾನೆ. ಭೌತಿಕಸಂಪತ್ತನ್ನು ಪಡೆಯುತ್ತಾ ಹೋಗುವುದೇ ಮಾನವನ ಪರಮಗಂತವ್ಯವಾಗಿ ಹೋಗಿದೆ. ನಿಸ್ವಾರ್ಥ ಮನೋಭಾವ ಮತ್ತು ತನ್ನ ನೆರೆಹೊರೆಯವರಿಗೆ ಸಹಾಯ ಮಾಡಬೇಕೆಂಬ ಬುದ್ಧಿ ಯುವ ಜನಾಂಗದಿಂದ ದೂರವಾಗುತ್ತಲಿದೆ. ದುಶ್ಚಟಗಳಾದ ಕುಡಿತ, ಮೋಜು, ಬೀಡಿ, ಚುಟ್ಟ, ಭಂಗಿಸೇದುವುದು ಇತ್ಯಾದಿಗಳ ದಾಸಾನುದಾಸರಾಗುತ್ತಲಿದ್ದಾರೆ. ಯುವಕರಲ್ಲಿ ವಿದ್ಯಾರ್ಥಿಗಳಲ್ಲಿ ಅಶಾಂತಿ, ಅಶಿಸ್ತು, ಅರಾಜಕತೆಗಳುಂಟಾಗುತ್ತಲಿವೆ. ವಿದ್ಯಾರ್ಥಿನಿಲಯಗಳಲ್ಲಿ ರ್‍ಯಾಗಿಂಗ್ ಪೀಡೆ ಮತ್ತು ಹೊಡೆದಾಟಗಳು ಸರ್ವೇಸಾಮಾನ್ಯವಾಗುತ್ತಲಿವೆ. ಮೌಲ್ಯಗಳ ಬಗ್ಗೆ ಅಸಡ್ಡೆ ತಿರಸ್ಕಾರಗಳು ಯುವಕರಲ್ಲಿ ಕಂಡುಬರುತ್ತಲಿವೆ. ಯುವಜನಾಂಗದಲ್ಲಿ ಸೌಂದರ್ಯಪ್ರಜ್ಞೆಯಾಗಲೀ, ಸಾಹಿತ್ಯ ಮತ್ತು ಕಲೆಗಳಲ್ಲಿ ಆಸಕ್ತಿಯಾಗಲೀ ಇತ್ತೀಚಿನ ದಿನಗಳಲ್ಲಿ ಇಳಿಮುಖ ವಾಗುತ್ತಿರುವುದು ಕಂಡು ಬರುತ್ತಿದೆ.

ಇಂದಿನ ಪರಿಸ್ಥಿತಿಯಲ್ಲಿ ನಮ್ಮ ದೃಷ್ಟಿಕೋನದಲ್ಲಿ ಬದಲಾವಣೆಗಳಾಗಿ ನಮ್ಮ ಜೀವನದ ಮೌಲ್ಯಗಳನ್ನು ಆ ದೃಷ್ಟಿಕೋನಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕಾಗಿದೆ.

ಶಿಕ್ಷಣಸಂಸ್ಥೆ ಅದರ ವಿಶಾಲಾರ್ಥದಲ್ಲಿ ಒಂದು ಸಾಮಾಜಿಕಸಂಸ್ಥೆ. ಅದು ವ್ಯಕ್ತಿಯ ಪುರೋಭಿವೃದ್ಧಿಗೂ ಇರುವಂತಹುದು. ಸಮಾಜ ಕ್ರೋಢೀಕರಿಸಿಕೊಂಡು ಪೋಷಿಸಿ ಬೆಳೆಸಿಕೊಂಡು ಬರುತ್ತಿರುವ ಮೌಲ್ಯಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗ ಬೇಕಾದುದು ಶಿಕ್ಷಣಸಂಸ್ಥೆಗಳ ಜವಾಬ್ದಾರಿಯಾಗಿದೆ.

ಮೌಲ್ಯಶಿಕ್ಷಣದ ಅರ್ಥ

ಕಲಿವವರಲ್ಲಿ ಒಳ್ಳೆಯ ಪ್ರವೃತ್ತಿಗಳನ್ನು, ಒಳ್ಳೆಯ ಭಾವನೆಗಳನ್ನು ಮತ್ತು ಒಳ್ಳೆಯ ಮೌಲ್ಯಗಳನ್ನು ಯೋಜಿತ ರೀತಿಯಲ್ಲಿ ಬೆಳೆಸಬೇಕೆಂಬುದೇ ಮೌಲ್ಯಶಿಕ್ಷಣದ ಅರ್ಥ.

ಮೌಲ್ಯಶಿಕ್ಷಣವು ಸಮಾಜಶಿಕ್ಷಣ ಮತ್ತು ಮೌಲ್ಯಗಳೊಂದಿಗೆ ಸಾಮಾನ್ಯ ಸಂಬಂಧ ವುಳ್ಳುದಾಗಿರಬೇಕು. ಮೌಲ್ಯಶಿಕ್ಷಣದ ಉದ್ದೇಶಗಳು ಮತ್ತು ಅವುಗಳನ್ನು ಈಡೇರಿಸಲು ಶೈಕ್ಷಣಿಕಸಂಸ್ಥೆಗಳಲ್ಲಿ ಮತ್ತು ತರಬೇತಿಸಂಸ್ಥೆಗಳಲ್ಲಿ ಇರುವ ವ್ಯವಸ್ಥೆ, ಮೌಲ್ಯಶಿಕ್ಷಣದ ವಸ್ತು ಮತ್ತು ಸಾರಾಂಶ (ಅಂದರೆ ಕಲಿಯುವವರಿಗೆ ವರ್ಗಾವಣೆ ಮಾಡಬೇಕಾಗಿರುವ ವಾಸ್ತವಿಕ ಮೌಲ್ಯಗಳು) ಮೌಲ್ಯಗಳು ಒದಗಿಸುವ ಸಂಪನ್ಮೂಲಗಳು, ವಿಧಾನಗಳು,

ಮೌಲ್ಯದ ಬೆಳವಣಿಗೆಯ ಗುರಿ ಮತ್ತು ಮೌಲ್ಯಶಿಕ್ಷಣ ನೀಡುವ ಶಿಕ್ಷಕ - ಇವೆಲ್ಲವೂ ಮುಖ್ಯ.

ಮೌಲ್ಯಶಿಕ್ಷಣವು ಶಿಕ್ಷಣದ ಒಂದು ವಿಧಾನ

ಕಲಿಯುವವರಿಗೆ ಮೌಲ್ಯಗಳನ್ನು ನೇರವಾಗಿ ಇಂಜೆಕ್ಟ್ ಮಾಡಲು ಬರುವುದಿಲ್ಲ. ಬಲವಂತವಾಗಿ ಅವುಗಳನ್ನು ಕಲಿಯುವವರ ಮನಸ್ಸಿನಲ್ಲಿ ತುರುಕಲು ಬರುವುದಿಲ್ಲ. ಅದಕ್ಕೆ ಬದಲಾಗಿ ಮೌಲ್ಯಶಿಕ್ಷಣವು ಕಲಿಯುವವರನ್ನು ಸ್ವತಂತ್ರವಾಗಿ ಆಲೋಚಿಸುವಂತೆ ಮಾಡಿ ಅವರು ಭಾವನಾತ್ಮಕವಾಗಿ ಮೌಲ್ಯಗಳ ಪರಿಕಲ್ಪನೆಯನ್ನು ಬೆಳೆಸಿಕೊಳ್ಳುವಂತೆ ಮಾಡಬೇಕು. ಅವರು ಸ್ವತಂತ್ರವಾಗಿ ಮತ್ತು ವಿಮರ್ಶಾತ್ಮಕವಾಗಿ ಆಲೋಚಿಸಲು ಸಹಾಯ ನೀಡಬೇಕು. ಜವಾಬ್ದಾರಿಯುತವಾಗಿ ಮಕ್ಕಳು ಕಾರ್ಯವೆಸಗುವಂತೆ ಮಾಡಬೇಕು. ಮೌಲ್ಯಶಿಕ್ಷಣದ ಮುಖ್ಯವಾದ ಆತ್ಮಾವಲೋಕನ. ಮೌಲ್ಯವೊಂದಕ್ಕೆ ಕುರುಡು ನಂಬಿಕೆಯಿಂದ ಅಂಟಿಕೊಳ್ಳುವುದು ಮತ್ತು ಅಧಿಕಾರಕ್ಕೆ ಹೆದರಿಕೊಂಡು ಕೆಲವು ಸಂಪ್ರದಾಯಗಳನ್ನು ಅನುಸರಿಸುವುದು ಉತ್ತಮ ಮೌಲ್ಯದ ಲಕ್ಷಣಗಳಲ್ಲ, ಆದರೆ ಅನಂತರ ಆ ಎಲ್ಲ ಮೌಲ್ಯಗಳ ಬಗ್ಗೆ ಸ್ವಯಂ ವಿಮರ್ಶಿಸುವ ಬೆಲೆಕಟ್ಟುವ ಅರಿವಿನ ಪರಿಧಿಯಲ್ಲಿಟ್ಟು, ತುಲನಾತ್ಮಕವಾಗಿ ನೋಡುವ ಕಲೆಯನ್ನು ಬೆಳಸಿಕೊಳ್ಳುವಂತೆ ಮಾಡುವುದೇ ಮೌಲ್ಯಶಿಕ್ಷಣದ ಗುರಿ.

ಶಾಲೆಗಳಲ್ಲಿ ಮೌಲ್ಯಶಿಕ್ಷಣದ ವ್ಯಾಪ್ತಿ

ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಭಾರತೀಯ ಶಾಲಾವ್ಯವಸ್ಥೆ ಇರಬೇಕು. ಶಾಲಾಜೀವನ ಮೌಲ್ಯಗಳ ತರಬೇತಿಗೆ ಉತ್ತಮ ಭೂಮಿಕೆಯನ್ನೊದಗಿಸುತ್ತದೆ. ಮೌಲ್ಯಗಳ ಬೆಳವಣಿಗೆಯಲ್ಲಿ ಶಾಲೆ ಒಂದು ಏಜಂಟ್ ಆಗಿ ಕೆಲಸ ಮಾಡುತ್ತದೆ. ಆದ್ದರಿಂದ ಶಾಲೆ ಮತ್ತು ಉಪಾಧ್ಯಾಯರು ಒಳ್ಳೆಯ ಮೌಲ್ಯಗಳನ್ನು ಬೆಳೆಸಬಲ್ಲವರಾಗಿದ್ದಾರೆ ಎಂಬುದರಲ್ಲಿ ಗಾಢವಾದ ನಂಬಿಕೆಯನ್ನಿಟ್ಟುಕೊಂಡಿರುವಂತಹುದಾಗಿದೆ. ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಶಾಲೆ ಅಂತಹ ಗುರುತರ ಜವಾಬ್ದಾರಿಯನ್ನು ಹೊರುವುದು ತಂಬ ಕಷ್ಟಕರವಾದ ವಿಚಾರ. ಏಕೆಂದರೆ ಹಳೆಯ ಮೌಲ್ಯಗಳು ಶಿಕ್ಷಣವನ್ನು ಹೊಸ ಮೌಲ್ಯಗಳೊಂದಿಗೆ ಹೊಂದಾಣಿಕೆ ಮಾಡಲಾರವು. ಶಾಲೆಗಳು ಎಷ್ಟು ಪರಿಣಾಮಕಾರಿಯಾಗಿ ಮೌಲ್ಯಶಿಕ್ಷಣವನ್ನೊದಗಿಸಬಲ್ಲವು ಮತ್ತು ಅದರ ಸ್ವಭಾವ ಮತ್ತು ವ್ಯಾಪ್ತಿ ಎಷ್ಟು ಎಂಬುದನ್ನು ಅರಿಯಬೇಕು.

ಮೌಲ್ಯಶಿಕ್ಷಣವು ಅದರ ಸಂಪೂರ್ಣಾರ್ಥದಲ್ಲಿ ಯುಕ್ತವಾದ ಪ್ರಜ್ಞೆಯನ್ನು ಬೆಳಸಿಕೊಳ್ಳುವಂತೆ ಮಾಡುವುದು. ಅವುಗಳೆಂದರೆ ನೈತಿಕ, ಸೌಂದರ್ಯೋಪಾಸಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳನ್ನು ಬೆಳಸಿಕೊಂಡು ನ್ಯಾಯಸಮ್ಮತಿ ಉಳ್ಳ ಮೌಲ್ಯಯುಕ್ತ ತೀರ್ಮಾನಗಳನ್ನು ಕೈಗೊಳ್ಳಲು ನೆರವಾಗುವುದು. ಸ್ಪರ್ಧಾತ್ಮಕ ಮೌಲ್ಯಗಳಲ್ಲಿ ಆಯ್ಕೆಮಾಡಿಕೊಂಡ ಮೌಲ್ಯಗಳನ್ನು ಅಂತರ್ಗತಗೊಳಿಸುವುದು ಮತ್ತು ಅವುಗಳನ್ನು ಜೀವನಾನುಷ್ಠಾನದಲ್ಲಿಟ್ಟುಕೊಳ್ಳುವುದು. ಮೌಲ್ಯಗಳ ಕಲಿವಿನ ಸಂಪೂರ್ಣ ಚಿತ್ರ ಕಲಿಕೆಯ ಸಾಮ್ರಾಜ್ಯವನ್ನೇ ಆವರಿಸಿಕೊಂಡು ಬಿಡುತ್ತದೆ.

ಮೌಲ್ಯ ಶಿಕ್ಷಣದ ಉದ್ದೇಶಗಳು

1. ಮಕ್ಕಳ ನೈತಿಕ ಮತ್ತು ಸೌಂದರ್ಯೋಪಾಸಕ ಪ್ರಜ್ಞೇಂದ್ರಿಯಗಳನ್ನು ಜಾಗೃತಗೊಳಿಸುವುದು

2. ಆಧುನಿಕಜೀವನಕ್ಕೆ ಸಂಬಂಧಿಸಿದ ಪ್ರಮುಖವಾದ ನೀತಿಯುತ ದೃಶ್ಯಗಳಿಗೆ ಸಂಬಂಧಿಸಿದ ಬಡತನ, ಅನಕ್ಷರತೆ, ಮಾನವಹಕ್ಕುಗಳು, ಪರಿಸರ, ಜನಸಂಖ್ಯೆಯ ಹೆಚ್ಚಳ ಮತ್ತು ಶಾಂತಿ ಇತ್ಯಾದಿ ವಿಷಯಗಳನ್ನು ಶೀಘ್ರವಾಗಿ ಗ್ರಹಿಸಿ ಅವುಗಳ ಬಗೆಗಿನ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವಂತೆ ಮಾಡುವುದು.

3. ಜೀವನದಲ್ಲಿ ನಿತ್ಯವೂ ಘಟಿಸುವ ಸಾಮಾಜಿಕ ಘಟನೆಗಳಿಗೆ ಮತ್ತು ವೃತ್ತಾಂತ ಅಥವಾ ಸಂಗತಿಗಳಿಗೆ ನೀತಿಯುತ ವ್ಯಾಪ್ತಿಯಲ್ಲಿ ತೆರೆದ ಮನಸ್ಸಿನಿಂದ ಸ್ಪಂದಿಸುವ ಸಾಮರ್ಥ್ಯವನ್ನು ಬೆಳೆಸುವುದು.

4. ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಾಮಾಜಿಕ ನ್ಯಾಯ, ವೈಜ್ಞಾನಿಕ ದೃಷ್ಟಿಕೋನ ಮತ್ತಿತರ ಸಾಮಾಜಿಕ ಬೆಸುಗೆಗೆ ಮತ್ತು ರಾಷ್ಟ್ರದ ಐಕ್ಯತೆಗೆ ಸಹಾಯಕವಾಗುವ ಮೌಲ್ಯಗಳ ಬಗ್ಗೆ ತಿಳುವಳಿಕೆ ಕೊಟ್ಟು, ಅವುಗಳನ್ನು ಮೆಚ್ಚುವಂತೆ ಮಾಡುವುದು. ಮತ್ತು ಈ ಎಲ್ಲ ಮೌಲ್ಯಗಳಿಗೆ ಬದ್ಧರಾಗಿ ನಡೆದುಕೊಳ್ಳುವ ಸಂಕಲ್ಪವನ್ನು ಕೈಗೊಳ್ಳುವಂತೆ ಮಾಡುವುದು.

5. ವಿದ್ಯಾರ್ಥಿಗಳು ಅಂತಹ ಮೌಲ್ಯಗಳಿಗೆ ಬದ್ಧರಾಗಿ ನಡೆದುಕೊಳ್ಳುವಂತಹ ಸುವರ್ಣಾವಕಾಶಗಳನ್ನು ಕಲ್ಪಿಸಿಕೊಟ್ಟು, ಅವರು ಅವುಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳಲು ಸಹಾಯಕವಾಗುವಂತೆ ಮಾಡುವುದು.

ಮೌಲ್ಯ ಶಿಕ್ಷಣದ ಪಠ್ಯವಿಷಯ

ಮೌಲ್ಯಶಿಕ್ಷಣವನ್ನು ನೀಡಲು ಯಾವ ಪಠ್ಯವಿಷಯ ವಸ್ತುಬೋಧನೆಗೆ ಅಥವಾ ವರ್ಗಾವಣೆಗೆ ಅಳವಟ್ಟಿರಬೇಕು ಎಂಬುದನ್ನು ಎರಡು ದೃಷ್ಟಿಕೋನಗಳಿಂದ ನಿರ್ಧರಿಸಬೇಕಾಗಿದೆ. ಒಂದು ವೈಯುಕ್ತಿಕ ದೃಷ್ಟಿಕೋನ, ಇನ್ನೊಂದು ಸಾಮಾಜಿಕ ದೃಷ್ಟಿಕೋನ. ವ್ಯಕ್ತಿಯೊಬ್ಬನನ್ನು ಕೇಂದ್ರವಾಗಿಟ್ಟುಕೊಂಡು ಅವನ ಸುತ್ತ ಎಲ್ಲ ಮೌಲ್ಯಗಳನ್ನು ಪ್ರಸಾದನಗೊಳಿಸಿ ಅವನನ್ನು ಒಳ್ಳೆಯ ಮನುಷ್ಯ ಎನ್ನುವಂತೆ ಮಾಡತಕ್ಕದ್ದು.

ಈ ದೃಷ್ಟಿಕೋನದ ಬೆಳಕಿನಲ್ಲಿ ಸಾರ್ವತ್ರಿಕ ಶಿಕ್ಷಣದ ಮೂಲಕ ವಾಸ್ತವಿಕ ಮೌಲ್ಯಗಳಾದ ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾಜವಾದ, ಸಮಾನತೆ, ಭ್ರಾತೃತ್ವ, ವಿಶ್ವಸಹಕಾರ ಎಂಬ ಮೌಲ್ಯಗಳ ಅಂಗೀಕಾರ ಮತ್ತು ಅನುಷ್ಠಾನ ಹಾಗೂ ಜಾತ್ಯಾತೀತತೆಯ ಕಟ್ಟುಕಟ್ಟಳೆಗಳನ್ನು ಕಡಿದೊಗೆದು ಸಾಂಸ್ಕೃತಿಕ ಭಿನ್ನತೆಯನ್ನು ದೂರಮಾಡಿ ಪರಸ್ಪರ ಹೊಂದಾಣಿಕೆಯಿಂದ ಜೀವನ ನಡೆಸಲು ವಿದ್ಯಾರ್ಥಿಗಳನ್ನು ಅಣಿಗೊಳಿಸಬೇಕು.

ಮೌಲ್ಯಶಿಕ್ಷಣದ ಸಂಪನ್ಮೂಲಗಳು ಮತ್ತು ವಿಧಾನಗಳು ಹಾಗೂ ಶಿಕ್ಷಕರ ಪಾತ್ರ

ಮೌಲ್ಯಶಿಕ್ಷಣವೆನ್ನುವುದು ಚರಿತ್ರೆ, ಭೂಗೋಳ, ಗಣಿತ, ಸಮಾಜಶಾಸ್ತ್ರ ಇತ್ಯಾದಿ ವಿಷಯಗಳನ್ನು ವಿಧ್ಯುಕ್ತವಾಗಿ ಬೋಧಿಸಿದ ಹಾಗೆ ಬೋಧಿಸಬಹುದಾದ ಒಂದು ವಿಷಯವಲ್ಲ. ಮೌಲ್ಯಶಿಕ್ಷಣವೆನ್ನುವುದು ಬೋಧನೆಯ ಎಲ್ಲ ವಿಷಯಗಳಲ್ಲೂ ಹಾಸು ಹೊಕ್ಕಾಗಿರುವಂತಹುದು. ಕೊಡುವ ಶಿಕ್ಷಣವೆಲ್ಲವೂ ಮೌಲ್ಯಯುತ ಶಿಕ್ಷಣವೇ ಆಗಿದೆ. ನಾವು ಮೌಲ್ಯಶಿಕ್ಷಣಕ್ಕೂ ಮತ್ತು ಸಾಮಾನ್ಯಶಿಕ್ಷಣಕ್ಕೂ ಬೆಸುಗೆ ಹಾಕಿದಾಗ ಮೌಲ್ಯಶಿಕ್ಷಣದ ಸಂಪನ್ಮೂಲಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ ಪಠ್ಯವಿಷಯಗಳು,

ಉಪಾಧ್ಯಾಯರುಗಳು ಮತ್ತು ಒಟ್ಟಾರೆಯಾಗಿ ಶಾಲಾಪರಿಸರ ಒದಗಿಸಿಕೊಡಬಹುದಾದ ಸನ್ನಿವೇಶ ಹಾಗೂ ಅಂತರ್ಗತ ಪಠ್ಯಕ್ರಮ ಇವೆ. ಮೌಲ್ಯಶಿಕ್ಷಣದ ಸಂಪನ್ಮೂಲ ಗಳೆನಿಸುತ್ತವೆ. ಈ ಎಲ್ಲಾ ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಮೌಲ್ಯ ಶಿಕ್ಷಣ ನೀಡುವಲ್ಲಿ ವಿವೇಚನಾಯುಕ್ತವಾಗಿ ಚತುರತೆಯಿಂದ ದುಡಿಸಿಕೊಳ್ಳಬೇಕಾಗಿದೆ.

ಸಾರಾಂಶ

ಮೇಲಿನ ಎಲ್ಲ ಅಂಶಗಳನ್ನು ಕ್ರೋಢೀಕರಿಸಿ ಮೌಲ್ಯಶಿಕ್ಷಣದ ಕಲ್ಪನೆಯನ್ನು ಕೆಳಕಂಡಂತೆ ಸಂಕ್ಷೇಪಿಸಿಡಲಾಗಿದೆ:-

1. ಎಲ್ಲ ಶಿಕ್ಷಣವೂ ನೀತಿ ಶಿಕ್ಷಣವೆ. ಯಾವುದನ್ನು ನೀತಿಶಿಕ್ಷಣವೆಂದು ಪರಿಗಣಿಸುತ್ತೇವೆಯೋ ಅದೆಲ್ಲವೂ ಮೌಲ್ಯಶಿಕ್ಷಣವೆ. ಅವುಗಳ ವಿವರಣೆ ಮತ್ತು ವ್ಯಾಖ್ಯಾನಗಳ ದೃಷ್ಟಿಯಿಂದ ಆದಾಗ್ಯೂ ವಿಧ್ಯುಕ್ತವಾಗಿ ಮೌಲ್ಯಶಿಕ್ಷಣವನ್ನು ಬೋಧಿಸಲೇ ಬೇಕೆಂಬ ಉದ್ದೇಶ ಮೂಡಿದ್ದು. ಏಕೆಂದರೆ ಸಮಾಜದಲ್ಲಿ ಬೆಳೆಯುತ್ತಿರುವ ಮೌಲ್ಯಕ್ಷೋಭೆ. ಆದ ಕಾರಣ ಮೌಲ್ಯಶಿಕ್ಷಣದ ಬೆಳವಣಿಗೆಯು ಉತ್ಕಟಾಂಕ್ಷೆಮೂಡಿಸಿರುವಂತಹುದಾಗಿದೆ. ಸಮಾಜ ಜೀವನದಲ್ಲಿ ಕಂಡು ಬರುತ್ತಿರುವ ನೈತಿಕ ಅಧಃಪತನವೇ ಮೌಲ್ಯಶಿಕ್ಷಣದ ಅವಶ್ಯಕತೆಯನ್ನು ಎತ್ತಿ ಹೇಳುತ್ತಿರುವಂತಹುದಾಗಿದೆ.
2. ಮೌಲ್ಯಶಿಕ್ಷಣವು ಒಂದು ಯೋಜಿತ ಶೈಕ್ಷಣಿಕ ಕಾರ್ಯಕ್ರಮವಾಗಿದ್ದು ವಿದ್ಯಾರ್ಥಿಗಳಲ್ಲಿ ಸನ್ನಡತೆ ಸದ್ಗುಣಗಳ ಮೌಲ್ಯಗಳನ್ನು ಬೆಳೆಸುವಂತಹುದಾಗಿದೆ.
3. ಮೌಲ್ಯಶಿಕ್ಷಣವು ಒಂದು ಶೈಕ್ಷಣಿಕ ವಿಧಾನ. ಆದ್ದರಿಂದ ಅದು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಆಲೋಚನೆ, ಚಿಂತನಮಂಥನದಿಂದ ಉಂಟಾಗುವ ವಿವೇಚನೆ. ಅದು 'ಇದನ್ನು ಮಾಡು' ಮತ್ತು 'ಇದನ್ನು ಮಾಡಬೇಡ' ಎಂದು ಅಧಿಕಾರವಾಣಿಯಿಂದ ಹೇಳುವಂತಹುದಲ್ಲ.
4. ಮೌಲ್ಯಶಿಕ್ಷಣವು ನೈತಿಕ ಮತ್ತು ಸೌಂದರ್ಯೋಪಾಸಕ ವಸ್ತು ವಿನ್ಯಾಸಗಳನ್ನು ಶೀಘ್ರವಾಗಿ ಗ್ರಹಿಸುವ ಎಚ್ಚರಿಕೆಯನ್ನು ಒಳಗೊಂಡುದಾಗಿದೆ ಮತ್ತು ಭಾವನಾತ್ಮಕವಾದ ಶಿಕ್ಷಣ ಮತ್ತು ಇಚ್ಛಾಶಕ್ತಿ ಹಾಗೂ ಸದ್ಗುಣಗಳ ಬೆಳವಣಿಗೆಯನ್ನು ಒಳಗೊಂಡಿದೆ. ಅದು ಸಮಗ್ರ ವ್ಯಕ್ತಿತ್ವವನ್ನು ಬೆಳೆಸುವುದಕ್ಕೆ ಸಂಬಂಧಿಸಿದುದಾಗಿದೆ.
5. ಪಠ್ಯಕ್ರಮ, ಉಪ ಪಠ್ಯಕ್ರಮ, ಅಗೋಚರ ಪಠ್ಯಕ್ರಮ, ಶಾಲೆಯ ವಾತಾವರಣ ಮತ್ತು ಉಪಾಧ್ಯಾಯ ಇವೆಲ್ಲವೂ ಮೌಲ್ಯಶಿಕ್ಷಣವನ್ನು ನೀಡಲಿಕ್ಕಾಗಿಯೆ ಮೌಲ್ಯಶಿಕ್ಷಣದ ಪಠ್ಯವಿಷಯವೊಂದು ಇರಬೇಕಾದ ಅವಶ್ಯಕತೆ ಇಲ್ಲ. ಮೌಲ್ಯ ಶಿಕ್ಷಣವನ್ನು ಇರುವ ಪಠ್ಯಕ್ರಮದೊಂದಿಗೆ ಹೆಚ್ಚು ಪರಿಣಾಮಕಾರಿಯಾಗಿ ನೀಡಬಹುದು. ಮೌಲ್ಯಗಳನ್ನು ಶಿಕ್ಷಣದೊಂದಿಗೆ ಸಮಗ್ರಗೊಳಿಸಬಹುದು; ಸೇರ್ಪಡೆ ಮಾಡಬಹುದು ಮತ್ತು ಶ್ರೀಮಂತಗೊಳಿಸಲೂ ಬಹುದು.
6. ಮೌಲ್ಯಶಿಕ್ಷಣದ ವ್ಯಾಪ್ತಿಯು ಶಾಲಾಶಿಕ್ಷಣದ ಪರಿಧಿಗಷ್ಟೇ ಸೀಮಿತವಾದುದಲ್ಲ. ಅದು ಶಾಲೆಯ ಹೊರಗಿನ ಇನ್ನಿತರ ಮಾಧ್ಯಮಗಳಾದ ಸಿನಿಮಾ,

ದೂರದರ್ಶನ, ರೇಡಿಯೋ, ಓರಗೆಯ ಹುಡುಗರು, ಕುಟುಂಬ, ಸಾಮಾಜಿಕ ಸನ್ನಿವೇಶಗಳ ಪ್ರಭಾವ - ಇತ್ಯಾದಿಗಳಿಂದ ನಿರ್ಧರಿಸುವಂತಹುದು. ಶಾಲೆಗಳಲ್ಲಿ ಮೌಲ್ಯಶಿಕ್ಷಣದ ಪ್ರಮುಖ ಉದ್ದೇಶಗಳೆಂದರೆ ಯುಕ್ತ, ನೈತಿಕ, ಸೌಂದರ್ಯೋಪಾಸಕ ಮತ್ತು ಸಾಂಸ್ಕೃತಿ ಸೂಕ್ಷ್ಮಮನಸ್ಸಿನ ಸೂಕ್ಷ್ಮಗ್ರಾಹಿತ್ವವನ್ನು ಹೆಚ್ಚಿಸುವುದು ಮತ್ತು ವಿದ್ಯಾರ್ಥಿಗಳು ತೆರೆದ ಮನಸ್ಸಿನಿಂದ ಪ್ರಚಲಿತ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ನಿರ್ಭೀತ ಮನಸ್ಸಿಂದ ತಿಳಿಸುವ ಸಾಮರ್ಥ್ಯವನ್ನುಂಟುಮಾಡುವುದು ಹಾಗೂ ಯುಕ್ತಮೌಲ್ಯಗಳಿಗೆ ಕಟಿಬದ್ಧರಾಗಿ ಜೀವನ ಸಾಗಿಸುವಂತೆ ಮಾಡುವುದು.

7. ಶಾಲೆಗಳು ವರ್ಗಾವಣೆ ಮಾಡಬೇಕಾಗಿರುವ ನಿರ್ದಿಷ್ಟ ಮೌಲ್ಯಗಳು ವಿಶ್ವದೃಷ್ಟಿಕೋನದಿಂದ ಪಡೆದುಕೊಂಡವುಗಳು ಮತ್ತು ಸಮಕಾಲೀನ ಸಮಾಜ ಮತ್ತು ರಾಷ್ಟ್ರೀಯ ದೃಷ್ಟಿಕೋನಗಳಿಗೆ ಸಂಬಂಧಿಸಿದವುಗಳು. ಈ ರೀತಿಯ ಮೌಲ್ಯಗಳಿಗೆ ಉದಾಹರಣೆಗಳೆಂದರೆ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಸಾಮಾಜಿಕ ಬೆಸುಗೆ ಮತ್ತು ರಾಷ್ಟ್ರೀಯ ಐಕ್ಯತೆ, ವೈಜ್ಞಾನಿಕ ದೃಷ್ಟಿ, ನಮ್ಮ ಸಾಂಸ್ಕೃತಿಕ ಪರಂಪರೆ, ಸ್ತ್ರೀಪುರುಷ ಸಮಾನತೆ, ಪರಿಸರ ಶುದ್ಧತೆಯನ್ನು ಕಾಪಾಡುವಿಕೆ, ಜನಸಂಖ್ಯಾ ನಿಯಂತ್ರಣ ಜೀವನದ ಗುಣಮಟ್ಟ, ಮತ್ತು ಶಾಂತಿ.

ಮೌಲ್ಯಶಿಕ್ಷಣದ ಸಮಗ್ರ ಸ್ವಭಾವವನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಶಿಕ್ಷಣವು ವ್ಯಾಪಕವಾದ ವಿಧಾನಗಳನ್ನು ಮತ್ತು ವ್ಯೂಹರಚನೆಯನ್ನು ಹೊಂದಿದ್ದು ತನ್ಮೂಲಕ ಜ್ಞಾನ ಸಂಪಾದನೆ, ಭಾವನೆಗಳ ಮತ್ತು ಉದ್ದೇಶಗಳ ಬೆಳವಣಿಗೆ, ಇಚ್ಛಾಶಕ್ತಿಯ ತರಬೇತಿ ಮತ್ತು ಕಲಿಯುವವರ ಗುಣಮಟ್ಟವನ್ನು ಹೆಚ್ಚಿಸುವುದು ಇತ್ಯಾದಿಗಳನ್ನು ಒಳಗೊಂಡಿದ್ದು ಈ ಕೆಳಕಂಡ ಅಂಶಗಳಿಂದ ಕೂಡಿದೆ:-

(ಅ) ಮೌಲ್ಯಗಳ ಸಂದಿಗ್ಧತೆ ಮತ್ತು ಮೌಲ್ಯಗಳನ್ನು ವಿಶದೀಕರಿಸುವುದು.

(ಆ) ದೃಶ್ಯ ಮತ್ತು ವಿವಿಧ ಪ್ರಜ್ಞೇಂದ್ರಿಯಗಳ ಅನುಭವಕ್ಕೊಳಪಡುವಂತೆ ಮಾಡುವುದು.

(ಇ) ಓದುವುದು, ಕೇಳುವುದು ಮತ್ತು ಚರ್ಚಿಸುವುದು ಇತ್ಯಾದಿ ಚಟುವಟಿಕೆಗಳು.

(ಈ) ಅಭಿನಯ, ಆದರ್ಶಪಾತ್ರ ನಿರ್ವಹಣೆ ಮುಂತಾದ ಚಟುವಟಿಕೆಗಳು.

(ಉ) ಜೀವನದಲ್ಲಿ ಅನುಷ್ಠಾನ ಯೋಗ್ಯವಾದ ಚಟುವಟಿಕೆಗಳು.

ಮೌಲ್ಯಶಿಕ್ಷಣವು ಇತರ ಪಠ್ಯ, ಉಪಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಂದ ಬೇರ್ಪಟ್ಟಿದ್ದಲ್ಲ. ಉಪಾಧ್ಯಾಯನ ವೃತ್ತಿಚಟುವಟಿಕೆಗಳೊಂದಿಗೆ ಅದು ಬೆರೆತು ಹೋಗಿರುವ ಅಥವಾ ಹೊಯ್ಕೈಯಾಗಿ ಹೊಂದಿಕೊಂಡಿರುವಂತಹುದು. ಪ್ರತಿಯೊಬ್ಬ ಶಿಕ್ಷಕನೂ ಒಬ್ಬ ಮೌಲ್ಯಶಿಕ್ಷಕನೇ ಆಗಿರುತ್ತಾನೆ.

○

ಪರಿಸರ ಶಿಕ್ಷಣ

ಡಾ. ಹೆಚ್. ವಿ. ಶಿವಶಂಕರ್

ಐನೂರು ಕೋಟಿ ವರ್ಷಗಳ ಹಿಂದೆ ಹುಟ್ಟಿದ ಭೂಮಿ ಒಂದು ಸುಂದರ ಗ್ರಹ. 20ಲಕ್ಷ ವರ್ಷಗಳ ಹಿಂದೆ ಜನಿಸಿದ ಮಾನವ, ಪ್ರಾಣಿ ಮತ್ತು ಸಸ್ಯಗಳ ನೆಲವೀಡಿನ ಮೇಲೆ ಹಾಗೂ ಜೀವಾಶ್ರಯದ ಮೇಲೆ ಅಜ್ಞಾನದಿಂದ ಅತ್ಯಾಚಾರವೆಸಗುತ್ತಿದ್ದಾನೆ. ಜೀವಿಗಳ ಜೀವನದ ಪರಿಣಾಮ, ಅಭಿವೃದ್ಧಿ ಮತ್ತು ಜೀವನದ ಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬೀರುವ ವಿಶಿಷ್ಟಪ್ರಭಾವದ ವಿದ್ಯಮಾನಗಳೇ ಪರಿಸರ. ನಮ್ಮ ಸುತ್ತಮುತ್ತಲಿನ ಜಗತ್ತೇ ಪರಿಸರ. ಇಂತಹ ಪರಿಸರದ ಮೇಲೆ ಜನಸಂಖ್ಯಾಸ್ಫೋಟವು ದುಷ್ಪರಿಣಾಮಗಳನ್ನು ಬೀರುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ನೈಸರ್ಗಿಕ ಸಂಪನ್ಮೂಲಗಳ ಲೂಟಿ ನಡೆದಿದೆ. ನೈಸರ್ಗಿಕ ಪರಿಸರ, ವಸ್ತುಪರಿಸರ ಮತ್ತು ಭಾವನೆ ಪರಿಸರಗಳೆಲ್ಲಾ ಮನುಷ್ಯನ ದುರಾಸೆ, ಮಾನವನ ನಾಶಕ್ಕೆ ಮಾತ್ರವಲ್ಲದೆ ಪರಿಸರದ ಮಾಲಿನ್ಯಕ್ಕೆ ಕಾರಣವಾಗಿದೆ. ಮನುಕುಲದ ಕಲ್ಯಾಣದ ದೃಷ್ಟಿಯಿಂದ ಪರಿಸರಕ್ಕೆ ಹೆಚ್ಚಿನ ಗಮನ ಕೊಡಬೇಕಾಗಿದೆ.

ಜಲ, ವಾಯು, ಶಬ್ದ, ಮಣ್ಣು ಮತ್ತು ಮನಸ್ಸಿನ ಮಾಲಿನ್ಯಗಳಿಂದ ಪ್ರಾರಂಭವಾದದ್ದು, ಇಂದು ಅರಣ್ಯನಾಶ, ಅಣು ವಿಕಿರಣ ಹಾಗೂ ವನ್ಯಜೀವಿಗಳ ನಿರಂತರ ನಾಶಕ್ಕೆ ಕಾರಣವಾಗಿದೆ. ಸ್ಥಳೀಯವಾಗಿ ಮತ್ತು ವಿಶ್ವದಲ್ಲಿ ಇವುಗಳನ್ನು ಗಮನಿಸಿದಾಗ ಪರಿಸರ ನಾಶವಾಗುತ್ತಿರುವುದರಲ್ಲಿ ಎರಡು ಮಾತಿಲ್ಲ. ಪರಿಸರದ ನಾಶಕ್ಕೆ ಮನುಷ್ಯನ ದುರಾಸೆ, ಅಜ್ಞಾನ, ಭೋಗಜೀವನಕ್ಕಾಗಿ ವ್ಯವಸ್ಥಿತವಾಗಿ ಸಂಪನ್ಮೂಲಗಳು ಬಳಕೆಯಾಗದಿರುವುದರ ಜೊತೆಗೆ ಸೌಂದರ್ಯದ ಪ್ರಜ್ಞೆಯು ಕೊರತೆ ಸಹ ಎದ್ದು ಕಾಣುತ್ತಿದೆ. ಪರಿಸರದ ಸಂಪನ್ಮೂಲಗಳ ಶೋಷಣೆ ಪ್ರವೃತ್ತಿ ಮತ್ತು ದ್ವೇಷದ ಮನೋವೃತ್ತಿಗಳು ಸಹ ಸೇರಿವೆ. ಪ್ರಕೃತ್ತಿದತ್ತವಾದ ಸಂಪನ್ಮೂಲಗಳ ಅತಿಯಾದ ಬಳಕೆ, ದುರ್ಬಳಕೆ ಮತ್ತು ಬಳಕೆಯಲ್ಲಿ ಜಾಣ್ಮೆ, ತಾಳ್ಮೆ ಹಾಗೂ ತಾಂತ್ರಿಕತೆ ಇಲ್ಲದಿರುವುದು ಕೈಗಾರಿಕೆಗಳ ಬೆಳವಣಿಗೆಗಳ ಮೇಲೆ ಕಡಿವಾಣ ಹಾಕದಿರುವುದು ಮತ್ತು ತ್ಯಾಜ್ಯವಸ್ತುಗಳ ವಿಸರ್ಜನೆಯಲ್ಲಿ ಸೂಕ್ತವ್ಯವಸ್ಥೆ ಇಲ್ಲದಿರುವುದು ಎಂದು ಮುಂತಾದ ಹಲವು ಕಾರ್ಯಗಳಿಂದ ಸಾರ್ವತ್ರಿಕವಾಗಿ ಪರಿಸರವನ್ನು ಹಾಳುಮಾಡುತ್ತಿದ್ದೇವೆ. ಮಾನವನಿಗೆ ಸ್ವಯಂ ನಿಯಂತ್ರಣ ಕಾನೂನು ಮತ್ತು ಪರಿಸರ ಶಿಕ್ಷಣದಿಂದ ಮಾತ್ರವಲ್ಲದೆ ನೈತಿಕಪ್ರಜ್ಞೆ ಸಹ ಈಗ ಮೂಡಬೇಕಾಗಿದೆ.

ಆಮ್ಲದ ಮಳೆ, ಓಝೋನ್ ಪದರದಲ್ಲಿ ರಂಧ್ರ, ಮಣ್ಣಿನ ಸವೆತ, ಅಂತರ್‌ಜಲದ ಕೊರತೆ, ರಸಾಯನಿಕ ವಸ್ತು ಮತ್ತು ಗೊಬ್ಬರಗಳ ಅತಿಯಾದ ಬಳಕೆ ಮತ್ತು ವನ್ಯಜೀವಿಗಳ ಬೇಟೆ, ಬೃಹತ್ ನೀರಾವರಿ ಯೋಜನೆಗಳ ನಿರ್ಮಾಣದಂತಹ ಭೀಕರ ಸಮಸ್ಯೆ ಅಭಿವೃದ್ಧಿ ಮತ್ತು ಅಭಿವೃದ್ಧಿಹೊಂದುತ್ತಿರುವ ದೇಶಗಳ ಮಧ್ಯದಲ್ಲಿ ನಡೆಯುತ್ತಿದೆ.

ನಾಲ್ಕು ಅಂಶಗಳ ಪಾತ್ರ

ಪರಿಸರದ ಸಂರಕ್ಷಣೆ ಎಲ್ಲರ ಹೊಣೆ ಮಾತ್ರವಲ್ಲದೆ ಕರ್ತವ್ಯವೂ ಹೌದು.

(1) ತಿರಸ್ಕರಿಸುವುದು (Refuse) (2) ಅತ್ಯಲ್ಪ ಬಳಕೆ (Reduce) (3) ಪುನರ್‌ಬಳಕೆ (Reuse) ಮತ್ತು (4) ಮರು ಪರಿವರ್ತನೆ (Recycling) ಎಂಬ ನಾಲ್ಕು ಮುಖ್ಯ ಅಂಶಗಳನ್ನು ಪ್ರತಿಯೊಬ್ಬರೂ ಪಾಲಿಸುವುದರ ಮೂಲಕ ಪರಿಸರದ ರಕ್ಷಣೆಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಮುಂದಾಗಬೇಕಾಗಿದೆ. ಕಸದಿಂದ ರಸ ಎನ್ನುವುದನ್ನು ಮಾಡಿತೋರಿಸಬೇಕಾಗಿದೆ. ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುವ ಮರವನ್ನು ನೆಡುವುದು ಅಗತ್ಯ.

(1) ತಿರಸ್ಕರಿಸುವುದು : ವಿದ್ಯುಚ್ಛಕ್ತಿಯ ಬಳಕೆಯಲ್ಲಿ ಜಾಣ್ಮೆ ಬೇಕಾಗಿದೆ. 48,000 ಮಕ್ಕಳಿಗೆ ಶಾಲಾ ಸೌಲಭ್ಯ ಕಲ್ಪಿಸುವುದು ಎಲ್ಲಿಂದ? ಇವರೆಲ್ಲಾ ದೊಡ್ಡವರಾದ ಮೇಲೆ ಬಳಕೆಗೆ ಸೌಲಭ್ಯ ಕೊಡುವುದಾದರೂ ಹೇಗೆ? ಕಲ್ಯಾಣಮಂದಿರಗಳಲ್ಲಿ ಅಲಂಕಾರಕ್ಕೆ ಬಳಸುವ ವಿದ್ಯುಚ್ಛಕ್ತಿಯನ್ನು ನಾವು ಉಳಿಸುವುದು ಅವಶ್ಯಕ. ವಿದ್ಯುಚ್ಛಕ್ತಿಗಾಗಿ ಅರಣ್ಯನಾಶ ನಿರಂತರವಾಗಿ ನಡೆಯುತ್ತಿದೆ. ಈ ದಿಸೆಯಲ್ಲಿ ಪ್ರತಿ ನಿಮಿಷ ವಿಶ್ವದಲ್ಲಿ 24 ಹೆಕ್ಟೇರ್ ಅರಣ್ಯ ನಾಶವಾಗುತ್ತಿದೆ. ಭಾರತದಲ್ಲಿ ನಿಮಿಷಕ್ಕೆ 2 ಹೆಕ್ಟೇರ್ ಅರಣ್ಯ ನಾಶವಾಗುತ್ತಿದೆ.

ಅನಗತ್ಯವಾಗಿ ಸೇದುವ ಬೀಡಿ, ಸಿಗರೇಟ್‌ನಿಂದ ಸುತ್ತಮುತ್ತಲಿನ ಜನರನ್ನು ಎರಡನೇ ಧೂಮಪಾನಿಗಳನ್ನಾಗಿ ಮಾಡುತ್ತಿದ್ದೇವೆ. ಹಸಿಸೌದೆಯಿಂದ ಅಡಿಗೆ ಮಾಡುವ ಗ್ರಾಮೀಣ ಮಹಿಳೆಯೊಬ್ಬಳು ಹೊಗೆಗೂಡಿನ ಕೊರತೆಯಿಂದ ಉಂಟಾಗುವ ಕೇಡು; ಗಂಡಸು ದಿನಕ್ಕೆ 20 ಪ್ಯಾಕ್ ಸೀಗರೇಟು ಸೇದುವುದರಿಂದ ಆಗುವ ಅನಾಹುತಕ್ಕೆ ಸಮವೆಂದು ಹೇಳಲಾಗಿದೆ. ಈ ದಿಸೆಯಲ್ಲಿ ಪರಿಸರದ ನಾಶಕ್ಕೆ ಕಾರಣವಾಗುವ ಧೂಮಪಾನವನ್ನು ನಾವು ಸ್ವತಃ ಬಿಡುವುದಲ್ಲದೆ ಉಳಿದವರನ್ನು ಬಿಡಿಸುವುದು ಅಗತ್ಯ. ಆಸ್ಪತ್ರೆ, ಕಚೇರಿ ಮೊದಲಾದ ಕಡೆ ಸರ್ಕಾರಿ ಕಚೇರಿಗಳಲ್ಲಿ ಧೂಮಪಾನಮಾಡುವುದನ್ನು ನಿಯಂತ್ರಿಸುವಲ್ಲಿ ನಾವುಗಳೆಲ್ಲಾ ಮುಂದಾಗಬೇಕು.

ಅಂಗಡಿಯವರು ನಾವು ತೆಗೆದುಕೊಳ್ಳುವ ಸಾಮಾನುಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಪ್ಯಾಕ್ ಮಾಡಿಕೊಡುವುದನ್ನು ತಿರಸ್ಕರಿಸಬೇಕು. ಇದರ ಬದಲು ಸಾಮಾನು ತರಲು ಹೋಗುವ ನಾವು ಸ್ವತಃ ಕೈಚೀಲ ತೆಗೆದುಕೊಂಡು ಹೋಗುವುದು ಸೂಕ್ತ. 1 ಟನ್ ಕಾಗದದ ತಯಾರಿಕೆಗೆ 250 ಟನ್ ನೀರು ಮಲಿನಗೊಳ್ಳುವುದನ್ನು ಮರೆಯದೆ ನೆನಪು ಇಟ್ಟುಕೊಳ್ಳಬೇಕು. ಇದರಿಂದ ಅನಗತ್ಯವಾಗಿ ಮಾಡುವ ಪತ್ರ ವ್ಯವಹಾರ, ಶುಭಾಶಯ ಪತ್ರಗಳ ವಿನಿಮಯದ ಮೇಲೆ ತಡೆ ಅಗತ್ಯ. ಹಬ್ಬ-ಹರಿದಿನಗಳಲ್ಲಿ ಬಳಸುವ ಮಾವಿನ ಎಲೆಯಿಂದ ಎಷ್ಟು ಪರಿಸರ ನಾಶವಾಗುತ್ತದೆಯೆಂದು ಯೋಚಿಸಿ. ದೀಪಾವಳಿಯಲ್ಲಿ ಹಾರಿಸುವ ಪಟಾಕಿ ಎಷ್ಟು ಶಬ್ಧಮಾಲಿನ್ಯಕ್ಕೆ ಕಾರಣವಾಗುತ್ತವೆ. ವಾಹನಗಳಲ್ಲಿ ಹಾಕಿಕೊಳ್ಳುವ ಹಾರನ್ ಜನರಿಗೆ ಎಚ್ಚರಿಕೆ ನೀಡುವುದಕ್ಕೆ ಮಾತ್ರವೇ ವಿನಃ ಜನರ ಮಾನಸಿಕ ನೆಮ್ಮದಿಯನ್ನು ಹಾಳುಮಾಡಲು ಆಗಬಾರದು.

ಸ್ನೇಹಿತರ ಮನೆಗೆ ಹೋದಾಗ ಇಲ್ಲವೆ ನಮ್ಮ ಮನೆಗೆ ಒಬ್ಬರು ಸ್ನೇಹಿತರು / ನೆಂಟರು ಬಂದಾಗ ಅನಗತ್ಯವಾಗಿ ಒತ್ತಾಯ ಮಾಡಿ ಟೀ / ಕಾಫಿ ಕುಡಿಯುವುದು ಆರೋಗ್ಯದ ದೃಷ್ಟಿಯಿಂದ ಅಪಾಯಕಾರಿ. ಆ ಕಾಫಿ / ಟೀ ಮಾಡಲು ಬಳಸುವ ಕಾಫಿ /

ಟೀ ಪುಡಿ ಹಾಲು ಸಕ್ಕರೆಯ ಜೊತೆಗೆ ಅದನ್ನು ಮಾಡಲು ಬಳಸುವ ವಿದ್ಯುತ್ತು ಸೀಮೆಎಣ್ಣೆ ಸಹ ವ್ಯರ್ಥ. ಅದನ್ನು ಮಾಡಲು ಬಳಸಲು ಪಾತ್ರೆ ಮತ್ತು ಕಾಫಿ / ಲೋಟಗಳನ್ನು ತೊಳೆಯಲು ಉಪಯೋಗಿಸುವ ನೀರೂ ಸಹ ಮಲಿನಗೊಳ್ಳ ಉಳಿಯುವುದಿಲ್ಲ. ಜನಸಂಖ್ಯೆಯ ಸ್ಫೋಟದ ಹಿನ್ನೆಲೆಯಲ್ಲಿ 2ನೇ ಮಗು ಬೇಡವೆನ್ನುವು ಸಹ ಅವಶ್ಯಕ. ಈಗ ಹುಟ್ಟುವ ಮಕ್ಕಳಿಗೆ ಹೋಲಿಸಿದಾಗ ದಿನಕ್ಕೆ 1330 ತರಗತಿಗ (275 ಶಾಲೆಗಳು) ಬೇಕಾಗುವುದು. ವರ್ಷಕ್ಕೆ 90400 ಶಾಲೆಗಳ ಕೊರತೆಯುಂಟಾಗುತ್ತಿ ಎಂದರೆ 2ನೇ ಮಗುವನ್ನು ತಡೆಯುವ ಅವಶ್ಯಕತೆ ನಮ್ಮ ಸುತ್ತಮುತ್ತಲಿನ ಜನರಿ ಆಗಲೇಬೇಕಾಗಿದೆ.

ಸಂಜೆಯ ವೇಳೆಯಲ್ಲಿ ಅನಗತ್ಯವಾಗಿ ತಿನ್ನುವ ತಿಂಡಿ, ತಟ್ಟೆಯಲ್ಲಿ ತಿನ್ನ ಉಳಿಸುವ ಆಹಾರ ವ್ಯರ್ಥವಾಗಬಾರದು. ಹಸಿವಿಲ್ಲದಿದ್ದ ದಿನ ಮನೆಯಲ್ಲಿ ಹಾಸ್ಟಲ್‌ನಲ್ಲಿ ತಮಗಾಗಿ ಊಟ / ಆಹಾರ ತಯಾರು ಮಾಡದಂತೆ ನೋಡಿಕೊಂಡ ಅಷ್ಟು ಆಹಾರ ಬೆಳೆಯಲು ಕಾಡು ಕಡಿಯುವುದು ಉಳಿಯುವುದು. ಅಗತ್ಯಕ್ಕಿಂ ಅತಿಯಾದ ಬಟ್ಟೆಗಳು, ಹವಾ ನಿಯಂತ್ರಣ ಸಾಧನಗಳನ್ನು ದೂರವಿಡುವುದನ್ನು, ವಾ ಒಂದು ದಿನದಲ್ಲಿ ಒಂದು ಊಟವನ್ನು ಬಿಡುವುದು ಅಗತ್ಯ, ಸುಗಂಧದ್ರವ್ಯಗಳ ಬ ಅತಿಯಾಗಿ ರಸಾಯನಿಕ ಗೊಬ್ಬರದ ಬಳಕೆಯನ್ನು ದೂರ ಮಾಡುವುದು ಇತ್ಯಾದಿಗಳ ನಾವು ರೂಢಿ ಮಾಡಿಕೊಂಡು ಉಳಿದವರ ಮೇಲೆ ಪ್ರಭಾವ ಬೀರಬೇಕಾಗಿದೆ.

ಮಿತವ್ಯಯ

ಅತಿಯಾದ ಬಿಸಿನೀರಿಯಲ್ಲಿ ಸ್ಥಾನ ಮಾಡುವ ಬದಲು ತಣ್ಣನೆಯ ನೀರಿನ ಇಲ್ಲವೆ ತಣ್ಣೀರಿನಲ್ಲಿ ಸ್ನಾನ ಮಾಡುವುದರಿಂದ ವಿದ್ಯುಚ್ಛಕ್ತಿಯ ಉಳಿತಾಯವಾಗುವುದ ಅತಿಯಾಗಿ ನೀರನ್ನು ಸ್ನಾನಕ್ಕೆ ಬಳಸುವುದೂ ಸಹ ಸಲ್ಲದು. ಅಷ್ಟರ ಮಟ್ಟಿಗೆ ಪರಿಸ ಸಂರಕ್ಷಣೆ ನಡೆಯುವುದು.

ಸಣ್ಣಪುಟ್ಟ ಕಾರ್ಯಗಳಿಗೆ / ದೂರಗಳಿಗೆ ವಾಹನಗಳ ಬಳಕೆ ಕಡಿಮೆ ಮಾಡಿದ ಇಂಧನ ಉಳಿತಾಯವಾಗುವುದು. ಶವಸಂಸ್ಕಾರ ಮಾಡುವಾಗ ಸುಡುವ ಮೂಲಕ ಪರಿಸ ಮಾಲಿನ್ಯಮಾಡುವುದರ ಬದಲು ನೆಲದಲ್ಲಿ ಹೂಳುವ ಕ್ರಮವನ್ನು ಜಾರಿಗೆ ತರಬೇಕಾಗಿ ಅತಿಯಾಗಿ ಬೇಯಿಸಿದ ತರಕಾರಿಯಿಂದ ಜೀವಸತ್ವ ಹಾಳಾಗುವುದಲ್ಲದೆ ಇಂಧನ ಸ ವ್ಯಯವಾಗುವುದು ಮತ್ತು ವಾಯುಮಾಲಿನ್ಯ ಉಂಟಾಗುವುದು. ದೊಡ್ಡಸ್ಥಿಕೆಗೆ ಹಲ ದಿನಪತ್ರಿಕೆಯನ್ನು ತರಿಸಿಕೊಂಡರೆ ಕಾಗದದ ತಯಾರಿಕೆಗಾಗಿ ವ್ಯಯವಾಗುವ ಮರ, ನೀ ಉಳಿಯುವುದು. ಕಡಿಮೆ ದುಡ್ಡಿಗೆ ಹೆಚ್ಚು ಪುಟಗಳು ದೊರೆಯುತ್ತದೆಯೆಂದು ಇಂಗ್ಲೀ ದಿನಪತ್ರಿಕೆಯ ವ್ಯಾಮೋಹ ಸಹ ಸಲ್ಲದು. ಅನಗತ್ಯವಾಗಿ ಬಸ್ಸು / ರೈಲಿಯ ಓಡಾಡುವುದು. ಕಡಿಮೆಯಾದರೆ ಪ್ರಯಾಣದ ಸಾಂದ್ರತೆ ಕಡಿಮೆಯಾಗುವುದು, ಪ್ರಯಾಣಿ ವವರಾದರೂ ಸುಖವಾಗಿ ಹೋಗಿ ಬರಬಹುದು. ಇಂದಿನ ದಿನಗಳಲ್ಲಿ ಬಸ್‌ನ ಟಾ ಮೇಲೆಲ್ಲಾ ಕುಳಿತು ಜನ ಪ್ರಯಾಣಿಸುವುದು ಆರೋಗ್ಯಕರವಾದ ಬೆಳವಣಿಗೆಯಾಗುವುದಿ ಮನೆ ಮಂದಿ ಎಲ್ಲ ಒಟ್ಟಿಗೆ ಕುಳಿತು ಊಟ ಮಾಡಿದರೆ ಆಹಾರವನ್ನು ಮತ್ತೆ ಮತ್ತೆ ಬಿ ಮಾಡುವುದನ್ನು ತಡೆಯಬಹುದು.

ರೈತರು ಗದ್ದೆಯಲ್ಲಿರುವ ಬದುಗಳನ್ನು ಸರಿಯಾಗಿ ನೋಡಿಕೊಂಡರೆ ನೀರು ಹರಿ

ಹೋಗುವುದನ್ನು ಮಿತವ್ಯಯ ಮಾಡಬಹುದು. ಬದುಗಳ ಮೇಲೆ ಹುಲ್ಲು ಬೆಳೆಸುವುದು; ಈ ದಿಸೆಯಲ್ಲಿ ಸಹಾಯಕ. ಸಹಜವಾದ ಬೆಳಕು ಇದ್ದಾಗ ಮನೆಯಲ್ಲಿ ಹಗಲಿನ ವೇಳೆಯಲ್ಲಿ ಮತ್ತು ಸಂಜೆಗೆ ಮೊದಲೇ ವಿದ್ಯುಚ್ಛಕ್ತಿ ಬಳಕೆ ಬೇಡ. ಎಷ್ಟೋ ನಗರಗಳಲ್ಲಿ ಬೆಳಕು ಹರಿದ ಮೇಲೂ ರಸ್ತೆದೀಪಗಳು ಉರಿಯುತ್ತಿರುತ್ತವೆ. ಇದು ಎಂದಿಗೂ ಕ್ಷಮಿಸುವ ಕಾರ್ಯವಾಗುವುದಿಲ್ಲ. ಕೇಬಿಯವರು ಮರ ಕಡಿಯುವದನ್ನು ವಿರೋಧಿಸಿ ನೆಲದ ಒಳಗೆ ಕೇಬಲ್ ಮೂಲಕ ವಿದ್ಯುಚ್ಛಕ್ತಿ ಸಾಗಿಸುವಂತೆ ಸರ್ಕಾರದ ಮೇಲೆ ಒತ್ತಡ ತರುವುದು ಒಳ್ಳೆಯದು. ಅತಿಯಾದ ಔಷಧಿಬಳಕೆ ಸಹ ಸಲ್ಲದು. ಪದೇ ಪದೇ ಚುನಾವಣೆ ಬರದಂತೆ ಸುಭದ್ರ ಸರ್ಕಾರದ ರಚನೆಯಾಗುವಂತೆ ನಾಯಕರುಗಳನ್ನು ನಾವು ಆಯ್ಕೆ ಮಾಡದಿದ್ದರೆ ಪ್ರತಿಯೊಂದು ಚುನಾವಣೆಯಿಂದ ಆಗುವ ಪರಿಸರ ಮಾಲಿನ್ಯ ಎಷ್ಟು? ರೈತನೊಬ್ಬ ಉತ್ತಮವಾದ ಉಗ್ರಾಣ ಹೊಂದಿದರೆ ಇಲಿಗಳಿಂದ ಹಾಳಾಗುವ ಆಹಾರದ ಧಾನ್ಯಗಳು ಉಳಿಯುವುದು. ಅಷ್ಟು ಆಹಾರದ ಧಾನ್ಯಗಳನ್ನು ಉಳಿಸಿದರೆ ಅಷ್ಟನ್ನು ಬೆಳೆಯಲು ಕಡಿಯುವ ಕಾಡು ಉಳಿತಾಯವಾಗುವುದು. ಬಟ್ಟೆಯನ್ನು ಹೆಚ್ಚು ಕೊಳೆಯಾಗದಂತೆ ಎಚ್ಚರ ವಹಿಸಿದರೆ ಅದನ್ನು ತೊಳೆಯಲು ಬಳಸುವ ಸೋಪು ಮತ್ತು ನೀರು ಮಾತ್ರವಲ್ಲದೆ, ವೇಳೆ ಸಹ ಉಳಿತಾಯವಾಗುವುದು. ಅತಿಯಾದ ಹವಾ ನಿಯಂತ್ರಿತ ಯಂತ್ರ, ರಿಫ್ರಿಜರೇಟರ್ ಬಳಕೆ ಮತ್ತು ಬಣ್ಣದ ಕೈಗಾರಿಕೆ, ಕಂಪ್ಯೂಟರ್‌ಗಳ ಸ್ವಚ್ಛತೆಯಿಂದ ಪರಿಸರಕ್ಕೆ ಕ್ಲೋರೋ-ಪ್ಲೋರೋ ಕಾರ್ಬನ್ ಸೇರುತ್ತಿರುವುದರಿಂದ ಓಝೋನ್ ಪದರದಲ್ಲಿ ರಂಧ್ರ ಉಂಟಾಗುತ್ತವೆ. ಆದ್ದರಿಂದ ಇವುಗಳ ಬಳಕೆ ಕಡಿಮೆಯಾಗಬೇಕು.

ಪುನರ್ ಬಳಕೆ

ಭತ್ತದ, ಕಬ್ಬಿನ ಕೂಳೆಯಿಂದ ಮತ್ತೆ ಬೆಳೆ ಬೆಳೆಯುವುದು ಹೊಸ ಪದ್ಧತಿಯೇನೂ ಅಲ್ಲ. ಆದರೆ ಅದನ್ನು ಜಾರಿಗೆ ತರುತ್ತಿಲ್ಲ. ಹಾಗೆ ಮಾಡಿದರೆ ಎಷ್ಟು ಶ್ರಮ ಬೀಜ ಇತ್ಯಾದಿಗಳ ಉಳಿತಾಯವಾಗುವುದು. ಭತ್ತದ ಗದ್ದೆಯಲ್ಲಿ ಮೀನು ಬೆಳೆಯುವ ವಿಧಾನವನ್ನು ಸಹ ಜಾರಿಗೆ ತಂದುಕೊಂಡರೆ ಲಾಭವಾಗುವುದು. ಹಾಳುಬಿದ್ದ ಜಮೀನುಗಳ ಬಳಕೆಯನ್ನು ಮಾಡಿಕೊಳ್ಳಲು ಮುಂದಾಗಬೇಕು. ರಸ್ತೆಯನ್ನು ನೆಟ್ಟಗೆ ಮಾಡಲು ಕಾಡು ಕಡಿಯುವುದರಿಂದ ಪರಿಸರ ನಾಶವಾಗುವುದಿಲ್ಲವೇ? ವಾಹನದ ರಬ್ಬರ್‌ಟೈರ್‌ಗಳನ್ನು ಪುನಃ ಬಳಕೆಗೆ ಯೋಗ್ಯ ಮಾಡಿಕೊಳ್ಳುವ ತಂತ್ರ ಬಳಸುವುದು ನಡೆಯಬೇಕು. ಹೊಸದನ್ನು ತೆಗೆದುಕೊಳ್ಳುವ ಹಣಕ್ಕೆ ಸಮವಾಗಿಯೇ ಇದು ಆಗಬಾರದು. ನಮ್ಮ ಕೂದಲನ್ನು ಕತ್ತರಿಸಿ ಹಾಕಿ ನಂತರ ಅದನ್ನು ವಿಗ್ ಮಾಡಲು ಬಳಸುವುದರಿಂದ ರಸಾಯನಿಕ ವಸ್ತುಗಳಿಂದ ನೂಲು ಮಾಡುವುದು ತಪ್ಪುತ್ತದೆ. ಕಪ್ಪೆಚಿಪ್ಪಿನಿಂದ ಸುಣ್ಣವನ್ನು ಮಾಡಿದರೆ ಸುಣ್ಣದ ಕಲ್ಲಿನ ತಯಾರಿಕೆಯಿಂದ ಆಗುವ ಪರಿಸರ ಮಾಲಿನ್ಯವನ್ನು ತಡೆಯಬಹುದು. ಟ್ರ್ಯಾಕ್ಟರ್‌ನಿಂದ ತೆಗೆದ ಇಂಜಿನ್‌ಆಯಿಲ್‌ಅನ್ನು ಎತ್ತಿನ ಗಾಡಿಗಳಿಗೆ ಕೀಲುಎಣ್ಣೆಯನ್ನಾಗಿ ಬಳಸುವುದನ್ನು ರೂಢಿ ಮಾಡಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಪ್ರತಿಯೊಂದು ಬಾರಿಯೂ ಪ್ರಾಣಿಗಳನ್ನು ಕೊಂದು ವಿದ್ಯಾರ್ಥಿಗಳಿಗೆ ಪಾಠ ಮಾಡುವ ಬದಲು ಅವುಗಳನ್ನು ಸಂರಕ್ಷಣಾ ಕೋಶದಲ್ಲಿ ಇಟ್ಟರೆ ಹಲವು ಬಾರಿ ಬಳಸಬಹುದು. ಅಷ್ಟು ಪ್ರಾಣಿಗಳ ನಾಶವನ್ನು ಪರಿಸರದಲ್ಲಿ ತಡೆಯಬಹುದು. ಪ್ರಾಣಿಗಳ ಮೇಲೆ ನಡೆಯುತ್ತಿರುವ ಪ್ರಯೋಗಗಳೂ ಸಹ ಈ ದಿಸೆಯಲ್ಲಿ ಚಿಂತನೆಗೆ

ಒಳಗಾಗಬೇಕಾಗಿದೆ. ಬಳಕೆಯಾದ ಶುಭಾಶಯಗಳ ಪತ್ರದ ಮೇಲಿನ ಚಿತ್ರಗಳನ್ನು ಬಳ ಮಾಡಿಕೊಂಡು ಹೊಸದನ್ನು ನಿರ್ಮಿಸಬಹುದಾಗಿದೆ. ತೆಂಗಿನ ಗರಿಯಿಂದ ಕಸಬರಿಗೆಯನ ಮಾಡಿಕೊಳ್ಳಬಹುದಾಗಿದೆ. ಖಾಲಿಡಬ್ಬಿಗಳನ್ನು ಪಲವು ಕಾರ್ಯಗಳಿಗೆ ಬಳಸಬಹುದಲ್ಲ ಗಿಡಗಳನ್ನು ಬೆಳೆಸಲು ಸಹ ಬಳಸಬಹುದಾಗಿದೆ.

ಕಬ್ಬಿನ ಸಿಪ್ಪೆಯಿಂದ ಕಾಗದ ತಯಾರಿಸಬಹುದು. ಸಗಣಿಯನ್ನು ಗೊಬ್ಬರವಾ ಉಪಯೋಗಿಸುವ ಮೊದಲು ಗೋಬರ್‌ಗ್ಯಾಸ್‌ನ ತಯಾರಿಕೆಗೆ ಬಳಕೆ ಮಾಡಿಕೊ ಬೇಕಾಗಿದೆ. ಪಾತ್ರೆ ತೊಳೆದ ಮತ್ತು ಸ್ನಾನದ ನೀರು ಚರಂಡಿ ಸೇರುವಂತೆ ಮಾಡು ಬದಲು ಗಿಡಗಳಿಗೆ ನೀರಾಗಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಕೈ ಪಂಪುಗಳ ಸು ನೀರು ಹರಿದು ಹೋಗದೆ ಉಳಿದು ಒಂದು ಗುಂಡಿಯಾಗಿ ಉಳಿದಿರುವುದು ನಾಗರೀಕತೆಯ ಲಕ್ಷಣವಲ್ಲ. ಬಳಕೆಯಾದ ಟೀ / ಕಾಫಿಪುಡಿಯು ಕರಿಬೇವಿನ ಗಿಡಗಳಿಗೆ ಉತ್ತಮ ಗೊಬ್ಬರವೆನ್ನುವುದನ್ನು ಗಮನಿಸಬೇಕಾಗಿದೆ. ಕಟ್ಟಿಗೆಯನ್ನು ಬಳಸುವಾಗ ಕೆಂಡ ಬೂದಿಯಾಗದಂತೆ ನೋಡಿಕೊಂಡು ಇದ್ದಿಲನ್ನಾಗಿ ಮಾರ್ಪಡಿಸಿದರೆ ಮತ್ತೆ ಬಳಕೆ ಉಪಯೋಗವಾಗುವುದು.

ವರ್ಷದ ಕೊನೆಯಲ್ಲಿ ಬಳಕೆಯಾದ ಎಕ್ಸೈಸ್ ಪುಸ್ತಕಗಳಲ್ಲಿ ಉಳಿದ ಬಿಳಿಯ ಹಾಳೆಯನ್ನು ಬೇರ್ಪಡಿಸಿಕೊಂಡು ಪುಸ್ತಕಗಳನ್ನಾಗಿ ಮಾಡಿಕೊಂಡು ಬಳಸಬಹುದಾಗಿ ಎನ್ನುವುದನ್ನು ಮಕ್ಕಳಿಗೆ ತಿಳಿಸಿಕೊಡಬೇಕಾಗಿದೆ. ವರ್ಷದ ಎಲ್ಲ ದಿನಗಳಲ್ಲಿ ಪ ಪುಸ್ತಕಗಳನ್ನು ಹಾಳಾಗದಂತೆ ಬಳಕೆಮಾಡಿಕೊಂಡು ಮುಂದಿನ ವರ್ಷ ಪಠ್ಯ ಪುಸ್ತಕಗಳನ ಮುದ್ರಿಸುವುದು ತಪ್ಪುತ್ತದೆ. ಕಡಿಮೆಬೆಲೆಗೆ ಪಠ್ಯಪುಸ್ತಕಗಳನ್ನು ಸಹ ತೆಗೆದುಕೊ ಬಹುದಾಗಿದೆ. ಹಳೆಯ ಬಟ್ಟೆಯಿಂದ ಕಾಲು ಒರೆಸುವ ವಸ್ತು ತಯಾರಿಕೆ ಸಹ ಅವಶ್ಯ ಭತ್ತದ ಹೊಟ್ಟನ್ನು ಇಟ್ಟಿಗೆ ಸುಡಲು ಬಳಸುವುದು ಇಲ್ಲವೆ ಅದರಿಂದ ಎ ತೆಗೆಯುವುದು ಮತ್ತು ಕಡಲೆಕಾಯಿಯ ಬೀಜದಿಂದ ಎಣ್ಣೆ ತೆಗೆದದ್ದನ್ನು ದನಗಳಿ ಮೇವಾಗಿ ಬಳಸುವುದು ನಡೆದಿದೆಯಾದರೂ ಅದರಿಂದ ಪೂರ್ಣಪ್ರಮಾಣದಲ್ಲಿ ಎ ತೆಗೆಯಲು ಇನ್ನೂ ಆಗುತ್ತಿಲ್ಲವೆನ್ನುವುದೇ ವ್ಯಥೆ. ಕಲ್ಲಿದ್ದಲಿನ ಪುಡಿಯನ್ನು ಇಟ್ಟಿ ತಯಾರಿಕೆಯಲ್ಲಿ ಬಳಸುವುದು ನಡೆಯಬೇಕಾಗಿದೆ.

ಮರು ಪರಿವರ್ತನೆ

ಕೈಗಾರಿಕೆಗಳಿಂದ ಮತ್ತು ಹೊಲದಲ್ಲಿ ಸುಡುವ ಕಬ್ಬಿನ ಸಿಪ್ಪೆಯಿಂದ ಹಾಗ ವಾಹನಗಳಿಂದ ಆಗುವ ವಾಯುಮಾಲಿನ್ಯವನ್ನು ಪುನರ್‌ವ್ಯವಸ್ಥೆ ಮಾಡುವಲ್ಲಿ ಸಹಾಯಕವಾಗುವ ಕಾಡು / ಹಸಿರು ದೇಶದ ಉಸಿರು. ಇದು ಇಂಗಾಲದ ಡೈ ಆಕ್ಸೈಡ ಅನ್ನು ಪಡೆದು ಆಮ್ಲಜನಕ ಹೊರಬಿಡುವುದು. ಇದಕ್ಕೆ ಸಹಾಯವಾಗುವಂತೆ ಕಾಡನ ಬೆಳೆಸಬೇಕಾಗಿದೆ. ಭಾರತದಲ್ಲಿ 23% ರಷ್ಟಿರುವ ಕಾಡು ಶೇ.33 ರಷ್ಟು ಆಗಬೇಕಾಗಿದ ವಿಶ್ವದ ಕಾಡಿನಲ್ಲಿ ಭಾರತದ ಅರಣ್ಯ ಪ್ರಮಾಣ ಶೇ 0.5ರಷ್ಟು. ಕರ್ನಾಟಕದ ಅರಣ್ಯ ಶೇ 20.2 ರಷ್ಟಿದೆ. ಈ ದಿಸೆಯಲ್ಲಿ ಮನೆಗೊಂದು ಮರ ನೆಡಬೇಕಾಗಿದೆ. ಪ್ರತಿವರ್ಷ ಶೇ 1ರಷ್ಟು ಭೂಮಿಯ ಮೇಲಿನ ಭಾಗ ನಾಶವಾಗುತ್ತಿದೆ.

ಕೈಗಾರಿಕೆಗಳು ಹೊರಬಿಡುವ ನೀರು ನದಿ ಸೇರದೆ ವ್ಯವಸಾಯಕ್ಕೆ ಉಪಯೋ ವಾಗುವಂತೆ ಮರು ಪರಿವರ್ತನೆಯಾಗಬೇಕು. ಚರಂಡಿಯ ನೀರು ಸಹ ಪುನ

ಶುದ್ಧಿಗೊಂಡು ವ್ಯವಸಾಯಕ್ಕೆ ಯೋಗ್ಯವಾಗಬೇಕು. ಇಲ್ಲದಿದ್ದರೆ ನೀರಿನ ಕೊರತೆ ಒಂದು ಕಡೆಯಾದರೆ ಮಲಿನಗೊಂಡ ನೀರು ನದಿಯ ಜೀವಿಗಳನ್ನು ಸಹ ಹಾಳುಮಾಡುತ್ತವೆ. ಮರದ ಎಲೆಗಳಿಂದ ಹಸಿರುಗೊಬ್ಬರದ ತಯಾರಿಕೆ ನಡೆಯಬೇಕಾಗಿದೆ. ಇದು ರಸಾಯನಿಕ ವಸ್ತುಗಳ ಬಳಕೆಯನ್ನು ಸಹ ಕಡಿಮೆ ಮಾಡುವುದು. ಹಳೆಯ ಕಬ್ಬಿಣದ ತಯಾರಿಕೆ ನಡೆಯುತ್ತಿದೆ. ರೀರೋಲಿಂಗ್ ಕಬ್ಬಿಣದ ತಯಾರಿಕೆಯ ತಂತ್ರಜ್ಞಾನ ಸಹ ಉತ್ತಮ ಗೊಳ್ಳಬೇಕಾಗಿದೆ. ಬಳಕೆಯಾದ ಮತ್ತು ಹಾಳಾದ ಗಾಜು ಮತ್ತು ಪ್ಲಾಸ್ಟಿಕ್‌ಗಳನ್ನು ಮರುಪರಿವರ್ತನೆಗೆ ಒಳಪಡಿಸಬೇಕಾಗಿದೆ. ವಾರ್ತಾಪೇಪರ್‌ಗಳನ್ನು ಸಹ ಈ ದಿಸೆಯಲ್ಲಿ ಬಳಸಬಹುದಾಗಿದೆ. ಆದ್ದರಿಂದ ಅವುಗಳನ್ನು ಸುಡುವುದು ಸಲ್ಲದು. ಹೀಗೆ ಪರಿಸರದ ರಕ್ಷಣೆಯಲ್ಲಿ ಹಲವನ್ನು ಅನಗತ್ಯವಾಗಿ ಬಳಕೆ ಮಾಡದೆ ತಿರಸ್ಕರಿಸುವುದು. ಮಿತವಾಗಿ ಬಳಸುವುದು ಪರಿಸರದ ರಕ್ಷಣೆಯಲ್ಲಿ ಸಹಾಯಕವಾಗುವುದು. ಪ್ರತಿಯೊಂದು ಬಾರಿಯೂ ಪ್ರತಿಯೊಬ್ಬರೂ ಮರುಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಮರುಪರಿವರ್ತನೆಗೆ ಯೋಗ್ಯವಾಗುವ ರೀತಿಯಲ್ಲಿ ಬಳಸಿಕೊಂಡು ಬಿಡುವುದು ಒಳ್ಳೆಯದು.

1ಟನ್ ಕಾಗದದ ತಯಾರಿಕೆಯಲ್ಲಿ 277 ಮರಗಳು ಹಾಳಾಗುವುದು ಸಲ್ಲದು. ಗೃಹಬಳಕೆಯಿಂದ ಶೇ. 90 ರಷ್ಟು ನೀರು ಮಲಿನಗೊಳ್ಳುತ್ತದೆ. ಪ್ರತಿವರ್ಷ 5 ರಷ್ಟು ಗಣಿ ಉದ್ಯಮಗಳು ವಿಸ್ತಾರಗೊಳ್ಳುತ್ತಿವೆ. 30 ರಿಂದ 80 ರಷ್ಟು ನೀರಾವರಿ ಭೂಮಿ ಲವಣಾಂಶಗಳ ಹೆಚ್ಚಳದಿಂದ ವ್ಯವಸಾಯಕ್ಕೆ ಪೂರ್ಣ ಪ್ರಮಾಣದಲ್ಲಿ ಉಪಯುಕ್ತವಾಗುತ್ತಿಲ್ಲ. ಭಾರತ ಎಂ.ಪಿ.ಕೆ. ಯಂತಹ ರಸಾಯನಿಕ ಗೊಬ್ಬರದ ಉತ್ಪಾದನೆಯಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಈ ಶತಮಾನದಲ್ಲೇ 10 ದಶಲಕ್ಷ ಹೊಸ ರಸಾಯನಿಕ ವಸ್ತುಗಳು ಸೃಷ್ಟಿಯಾಗಲಿವೆ. ಭೂಪಾಲ್‌ನ ಯೂನಿಯನ್ ಕಾರ್ಬೈಡ್ ದುರಂತ ಇನ್ನು ಮುಗಿದಿಲ್ಲ. ಭೂಮಿಯ ಮೇಲಿನ ಉಷ್ಣಾಂಶ 2000ನೇ ಇಸವಿಗೆ 2-3 ಡಿಗ್ರಿ ಸೆಲ್ಸಿಯಸ್ ಏರುವುದು ಸ್ಪಷ್ಟವಾಗಿದೆ. ಕುಡಿಯುವ ನೀರಿನಲ್ಲಿ ಒಂದು ಲೀಟರ್‌ಗೆ 500 ಮೈಕ್ರೋಗ್ರಾಂ ಸೀಸ ಇದ್ದರೂ ದೇಹ ನಿಭಾಯಿಸಬಲ್ಲದು. ಆದರೆ ಈಗ ಇರುವುದು 5000 ಮೈಕ್ರೋಗ್ರಾಂ. ಹೀಗಾದರೆ ಮನುಷ್ಯ ಬದುಕಿ ಉಳಿಯುವುದಾದರೂ ಹೇಗೆ ? ವಿಶ್ವಸಂಸ್ಥೆಯ ಪರಿಸರ ಯೋಜನೆ ಸಂಶೋಧನೆಗಳಿಂದ ತಿಳಿದು ಬಂದಿರುವಂತೆ ಶೇ. 85ರಷ್ಟು ಕ್ಯಾನ್ಸರ್ ರೋಗಗಳಿಗೆ ಪರಿಸರದ ವಿಷವಸ್ತುಗಳು ಕಾರಣವಾಗಿವೆ. ಭಾರತದ ಪವಿತ್ರ ಗಂಗಾನದಿ 114 ನಗರಗಳ ಕೋಟ್ಯಾಂತರ ಜನರ ಮಲ-ಮೂತ್ರದಿಂದ ಮಲಿನಗೊಂಡದೆ. ಎಣ್ಣೆ ಸಾಗಿಸುವ ಹಡಗುಗಳು ಅಪಘಾತಕ್ಕೆ ಒಳಗಾಗುವುದು ಮತ್ತು ಎಣ್ಣೆಬಾವಿಗಳಿಗೆ ಯುದ್ಧದ ಸಂದರ್ಭದಲ್ಲಿ ಬೆಂಕಿ ಬೀಳುವುದು. ಹಾಗಾಗಿ ಎಲ್ಲ ಕಡೆ ಸೀಸ ರಹಿತವಾದ ಪೆಟ್ರೋಲ್ ದೊರೆಯಬೇಕಾಗಿದೆ. ಸಹಜವಾಗಿ ದೊರೆಯುವ ವಾಯು ಮತ್ತು ಸೂರ್ಯನ ಬಳಕೆ ಇನ್ನು ಮೇಲಾದರೂ ಉಪಯುಕ್ತವಾಗಿ ಬಳಕೆಯಾಗಲಿ. ಈ ದಿಸೆಯಲ್ಲಿ ಪರಿಸರ ರಕ್ಷಣೆಯಲ್ಲಿ ನಾಲ್ಕು ಅಂಶಗಳ ಪಾತ್ರ ಮಹತ್ವದ್ದಾಗಿದೆ. ಇದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಬೇಕಾಗಿದೆ. ಪರಿಸರಶಿಕ್ಷಣ ಎಂದಿಗಿಂತಲೂ ಇಂದು ಅತ್ಯಗತ್ಯವಾಗಿದೆ.

○

ಮಗುವಿನ ವ್ಯಕ್ತಿತ್ವ ವಿಕಾಸದಲ್ಲಿ ಕುಟುಂಬದ ಪಾತ್ರ

ಡಾ. ಡಿ. ಶಿವ

ವ್ಯಕ್ತಿತ್ವ ಎಂಬುದು ಒಂದು ಸಂಕೀರ್ಣವಾದ ಹಾಗೂ ಅಸಾಧಾರಣ ವಿಚಾ ವ್ಯಕ್ತಿತ್ವವು ವ್ಯಕ್ತಿಯ ವಿಶೇಷ ಗುಣಲಕ್ಷಣಗಳು, ಸಾಮರ್ಥ್ಯಗಳು, ಭಾವನಾತ್ಮಕ ಹಾಗ ಸಾಮಾಜಿಕ ವಿಶಿಷ್ಟಗುಣಗಳು, ಆಸಕ್ತಿ, ಮನೋವೃತ್ತಿಗಳು ಇವುಗಳ ಮೇಲೆ ಗಮ ಸೆಳೆಯುತ್ತದೆ. ವ್ಯಕ್ತಿಯ ಜೈವಿಕಅಂಶಗಳು ಆತನ ಸಾಮಾಜಿಕ ಹಾಗೂ ಬೌದ್ಧಿ ಜಗತ್ತಿನೊಂದಿಗೆ ಸಂಘರ್ಷಣೆಯಾದಾಗ ಹೊರಹೊಮ್ಮುವ ಅಂಶವೇ ವ್ಯಕ್ತಿಯ ವ್ಯಕ್ತಿ ಎಂದು ಮನಃಶಾಸ್ತ್ರಜ್ಞರು ಪರಿಗಣಿಸಿದ್ದಾರೆ. ಎಂದರೆ ವ್ಯಕ್ತಿಯ ದೈಹಿಕ ಭಾವನಾತ್ಮ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಅಂಶಗಳನ್ನು ಒಳಗೊಂಡ ಸಮತೂಕದ ಅಂಶವೇ ವ್ಯಕ್ತಿಯ ವ್ಯಕ್ತಿತ್ವ.

ವ್ಯಕ್ತಿತ್ವ ವಿಕಾಸವಾಗಲು, ವ್ಯಕ್ತಿಯ ದೈಹಿಕಸ್ಥಿತಿಗಳಿಗೆ ಸಂಬಂಧಿಸಿದ ಅಂಶಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಹೇಗೆ ಮತ್ತು ಎಷ್ಟರಮಟ್ಟಿಗೆ ಕಾರ ಎಂಬುದನ್ನು ತಿಳಿಯಲು ಮನೋವಿಜ್ಞಾನಿಗಳು ಪ್ರಯತ್ನ ನಡೆಸಿದ್ದಾರೆ. ವ್ಯಕ್ತಿತ್ವವು ಹದವಾ ಮುದಗೊಳ್ಳುವಲ್ಲಿ ವ್ಯಕ್ತಿಯ ಬಾಲ್ಯದ ಪ್ರಾಮುಖ್ಯತೆಯನ್ನು ಹಲವಾ ಮನೋವಿಜ್ಞಾನಿಗಳು ಒತ್ತುಕೊಟ್ಟು ಹೇಳುತ್ತಾರೆ. ಸಿಗ್ಮಂಡ್ ಫ್ರಾಯ್ಡ್ ಎಂ ಮನೋವಿಶ್ಲೇಷಣಕಾರನ ಪ್ರಕಾರ ವ್ಯಕ್ತಿಯು ಪ್ರಥಮತಃ ತನ್ನ ಬಾಲ್ಯದ ಮೊದಲ ಐದ ವರ್ಷ ಕಳೆಯುವಷ್ಟರಲ್ಲಿಯೇ ವ್ಯಕ್ತಿತ್ವವಿಕಾಸದ ಅಸ್ತಿಭಾರ ನಡೆದೇ ಹೋಗಿರುತ್ತ ವ್ಯಕ್ತಿತ್ವ ವಿಕಾಸದಲ್ಲಿ ಹಲವಾರು ಅಂಶಗಳು ತಮ್ಮ ಪ್ರಭಾವವನ್ನು ಬೀರುತ್ತ ಅವುಗಳಲ್ಲಿ ಸಾಮಾಜಿಕ ನಿರ್ಣಾಯಕಗಳೂ ವ್ಯಕ್ತಿತ್ವ ರೂಪಿಸುವಲ್ಲಿ ತಮ್ಮ ಪಾತ್ರವನ ವಹಿಸುತ್ತವೆ. ಸಾಮಾಜಿಕ ಅಂಶಗಳು ಎರಡು ಬಗೆಯಲ್ಲಿ ಕಾಣುತ್ತವೆ. ಒಂದು ಕುಟುಂಬ ಪ್ರಭಾವ ಮತ್ತೊಂದು ಶಾಲೆಯ ಪ್ರಭಾವ. ಈಗ ಕುಟುಂಬದ ಪ್ರಭಾವದ ಬಗ ತಿಳಿಯೋಣ.

ಕುಟುಂಬದ ಪ್ರಭಾವ

ವ್ಯಕ್ತಿತ್ವ ವಿಕಾಸದಲ್ಲಿ ಕುಟುಂಬವು ಮಗುವಿನ ಬಾಲ್ಯದಲ್ಲಿ ಕೊಡುವ ಅನುಭವಗಳ ಮಹತ್ತರ ಪಾತ್ರವನ್ನು ವಹಿಸುತ್ತವೆ. ಮಗುವು ಪಡೆಯುವ ಮೊದಲ ಪರಿಸರ ಎಂದ ಮನೆ. ಇಲ್ಲಿ ತನ್ನ ತಂದೆ-ತಾಯಿಗಳ ಮತ್ತು ಕುಟುಂಬದ ಇತರ ಸದಸ್ಯರ ನಿಕ ಸಂಪರ್ಕವನ್ನು ಮಗುವು ಪಡೆಯುತ್ತದೆ. ಮಗುವಿನ ಆಶೋತ್ತರಗಳು, ನಿರೀಕ್ಷೆಗಳು ಮತ್ತ ಭಾವನಾತ್ಮಕ ಅನಿಸಿಕೆಗಳು, ಬಾಲ್ಯದಲ್ಲೇ ರೂಪುಗೊಳ್ಳುತ್ತವೆ. ಬಾಲ್ಯದ ಅನುಭವಗಳ ಮಗುವಿನ ವ್ಯಕ್ತಿತ್ವ ನಿರೂಪಣೆಯ ನಿರ್ಣಾಯಕ ಅಂಶಗಳಾಗಿರುತ್ತವೆ. ಮಗುವಿ ತಂದೆತಾಯಿಯರು ಕೊಡುವ ತರಬೇತಿಯ ರೀತಿ-ನೀತಿಗಳು ವ್ಯಕ್ತಿತ್ವ ವಿಕಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಬ್ರಾಡಿ ಎಂಬ ಮನೋವಿಜ್ಞಾನಿಯು 32 ಯುವ ತಾಯಂದಿರನ್ನು ಪರೀಕ್ಷೆಗೊಳಪಡಿಸಿದರು. ತಾಯಂದಿರು ತಮ್ಮ ಮಕ್ಕಳಿಗೆ ಹಾಲು ಕೊಡುವ ವಿಧಾನಗಳು, ಮಕ್ಕಳು ಲಾಲನೆ - ಪಾಲನೆ ಮಾಡುವ ಬಗೆಗಳು ಮತ್ತು ಮಕ್ಕಳೊಂದಿಗೆ ತಾಯಂದಿರು ಮಾತನಾಡುವ ರೀತಿನೀತಿಗಳನ್ನು ಆಳವಾಗಿ ಬ್ರಾಡಿಯವರು ಅಭ್ಯಾಸ ಮಾಡಿದರು. ತಾಯಿಯು ಮಕ್ಕಳನ್ನು ಪೋಷಿಸುವ ರೀತಿ-ನೀತಿಗಳು ಮಗುವಿನ ಭವಿಷ್ಯದ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಹಳ ಮುಖ್ಯವಾದವು ಎಂದು ತೀರ್ಮಾನಕ್ಕೆ ಬಂದರು.

ಕುಟುಂಬದ ರಚನೆಯೂ ಸಹ ಮಗುವಿನ ವ್ಯಕ್ತಿತ್ವದ ಮೇಲೆ ಮಹತ್ವರ ಪ್ರಭಾವವನ್ನು ಬೀರಬಲ್ಲದು. ಗಂಡ-ಹೆಂಡತಿ ಮತ್ತು ಮಕ್ಕಳು ಮಾತ್ರ ಇರುವ ಚಿಕ್ಕ ಕುಟುಂಬದಲ್ಲಿ ಮಗು ಮತ್ತು ತಂದೆ-ತಾಯಿಗಳ ನಡುವೆ ಆಳವಾದ ಹಾಗೂ ನಿಕಟವಾದ ಭಾವನಾತ್ಮಕ ಸಂಬಂಧವಿರುತ್ತದೆ. ಆದರೆ ಅಂತಹ ಕುಟುಂಬದಲ್ಲಿ ತಂದೆ ತಾಯಿಗಳ ಗೈರುಹಾಜರಿಯಲ್ಲಿ, ಮಗುವು ಭಾವೋದ್ವೇಗಗಳ ಸುಳಿಯಲ್ಲಿ ಸಿಕ್ಕು ವಿಲಿವಿಲಿ ಒದ್ದಾಡುವ ಸ್ಥಿತಿಯಲ್ಲಿರಲೂ ಸಾಧ್ಯವಿದೆ.

ಆದರೆ ಸಮಷ್ಟಿಕುಟುಂಬದಲ್ಲಿ, ಮಗುವು ತನ್ನ ತಂದೆತಾಯಿಗಳೊಂದಿಗೇ ಇರುವುದಲ್ಲದೆ. ಕುಟುಂಬದ ಇತರ ಸದಸ್ಯರುಗಳಾದ ಅಜ್ಜ-ಅಜ್ಜಿ, ಚಿಕ್ಕಪ್ಪ-ದೊಡ್ಡಪ್ಪ, ಚಿಕ್ಕಮ್ಮ-ದೊಡ್ಡಮ್ಮ ಮತ್ತು ಇತರ ಸದಸ್ಯರೊಂದಿಗೂ ಇರುತ್ತದೆ. ಮಗುವು ಆಗ ಕುಟುಂಬದ ಬಗ್ಗೆ ವಿಸ್ತಾರವಾದ ಅನುಭವಗಳನ್ನು ಪಡೆಯುತ್ತದೆ. ತನ್ಮೂಲಕ ಸಮಾಜೀಕರಣದ ಉತ್ತಮ ಅವಕಾಶಗಳನ್ನು ಹೊಂದುತ್ತದೆ. ಹೀಗಾಗಿ ಮಗುವು, ಜಂಟೀ ಕುಟುಂಬದಲ್ಲಿ, ತನ್ನದೇ ಆದ ಕೌಟುಂಬಿಕ ಸಂಸ್ಕೃತಿಯನ್ನು ಪಡೆಯುತ್ತದೆ.

ಬಾಲ್ಯದಲ್ಲಿ ಮಕ್ಕಳು ತಂದೆ-ತಾಯಿಗಳಿಂದ ಅಗಲುವಿಕೆಯ ನೋವನ್ನುಂಟು ಅತಿಯಾದ ಭಾವೋದ್ವೇಗಕ್ಕೆ ಒಳಗಾದಾಗ ಅಥವಾ ಅವರಿಂದ ಉಪೇಕ್ಷಿಸಲ್ಪಟ್ಟಾಗ, ಇಂತಹ ಸನ್ನಿವೇಶವು ಮಗುವಿನ ವ್ಯಕ್ತಿವಿಕಾಸದ ಮೇಲೆ ಪ್ರಬಲವಾದ ಪ್ರತಿಕೂಲಗಳನ್ನು ಹೊಂದುತ್ತದೆ. ಅಂತಹ ಮಕ್ಕಳು ಬೆಳೆದು ದೊಡ್ಡವರಾದಾಗ, ಹತ್ತಾರು ರೀತಿಯಲ್ಲಿ ಭಾವೋದ್ವೇಗ ನಡವಳಿಕೆಗಳಿಗೆ ಒಳಗಾಗುತ್ತಾರೆ.

ಮಗುವನ್ನು ಪೋಷಿಸುವ ವಿಧಾನಗಳು ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಇರುವ ಸಂಬಂಧವನ್ನು ಹೆಚ್ಚುಹೆಚ್ಚು ಸಂಶೋಧನಾ ಅಧ್ಯಯನಗಳು ಸಾರಿಸಾರಿ ಹೇಳುತ್ತವೆ. ಮಕ್ಕಳಿಗೆ ಹಾಲುಣಿಸುವ ರೀತಿ, ಅವರನ್ನು ಶುಭ್ರತೆಗೊಳಿಸುವ ವಿಧಾನಗಳು, ಮಕ್ಕಳ ಎದುರು ನಿಲ್ಲುವ ಪ್ರವೃತ್ತಿಯ ಮೇಲೆ ತಂದೆ-ತಾಯಿಯರು ಬಲವಂತವಾಗಿ ಹೇರುವ ದಮನಪದ್ಧತಿಗಳು, ಅವರು ಮಕ್ಕಳಿಗೆ ಕೊಡುವ ದೈಹಿಕಶಿಕ್ಷೆಯ ರೀತಿ ಮತ್ತು ಹುಚ್ಚಾಪಟ್ಟೆ ಮಕ್ಕಳನ್ನು ಹೆದರಿಸುವ ವಿಧಾನಗಳು ಇವೇ ಮುಂತಾದ ತಂದೆ-ತಾಯಂದಿರ ಕ್ರೂರ ಹಾಗೂ ಅಮಾನವೀಯ ನಡೆವಳಿಕೆಗಳು ಬಹುಮಟ್ಟಿಗೆ ಮಕ್ಕಳ ವ್ಯಕ್ತಿತ್ವ ವಿಕಾಸದಲ್ಲಿ ಧಕ್ಕೆಯನ್ನುಂಟುಮಾಡುತ್ತವೆ.

ಆಕ್ಷೇಪಣೆ ಇಲ್ಲದೆ ಕೆಲಸಮಾಡಲು ಅವಕಾಶವೀಯುವ ಪರಿಸರವು ಮಗುವಿನಲ್ಲಿ, ಇತರೆಯವರೊಂದಿಗೆ ಹೊಂದಿಕೊಂಡು ಹೋಗುವ ಸ್ನೇಹಪೂರ್ವಕ ಭಾವನೆಗಳನ್ನು ಮೂಡಿಸುತ್ತವೆ. ಅಷ್ಟೇ ಅಲ್ಲದೆ, ಅಂತಹ ಮಗುವು ಸೃಜನಾತ್ಮಕವಾದ ಸುಪ್ತಪ್ರತಿಭೆಗಳನ್ನು ವ್ಯಕ್ತಪಡಿಸುತ್ತದೆ.

ಮಗುವಿನ ಆಕ್ರಮಣಕಾರಿ ಮನೋವೃತ್ತಿಯನ್ನು ತಂದೆತಾಯಿಗಳು ಶಿಕ್ಷೆಯ ಮೂಲಕ

ಹತೋಟಿಗೆ ತರಲು ಪ್ರಯತ್ನಿಸಿದಲ್ಲಿ ಅಂತಹ ಆಕ್ರಮಣಕಾರಿ ವರ್ತನೆಯು ಇ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಏಕೆಂದರೆ ಆಕ್ರಮಣಕಾರಿ ವರ್ತನೆ ಹತಾಶೆಯ ಹೊಗೆಯನ್ನು ಕಾರುತ್ತಿದೆ. ಇದನ್ನು ಶಿಕ್ಷೆಯ ಮೂಲಕ ಹತೋಟಿಗೆ ತರ ಯತ್ನಿಸಿದರೆ, ಆ ಶಿಕ್ಷೆಯೇ ಮಗುವಿನ ಉಗ್ರಮನಸ್ಸಿಗೆ ಪ್ರೇರಕವಾಗಿ, ಮತ್ತ ಆಕ್ರಮಣಾಕಾರಿ ಪ್ರವೃತ್ತಿ ಹೆಚ್ಚುತ್ತದೆ. ಹೀಗಾಗಿ ಅಂತಹ ಮಗುವು ತಿವ್ರಲಾ ಮಹಾಮೊಂಡನಾಗುತ್ತಾನೆ; ಜಗಭಂಡನಾಗುತ್ತಾನೆ. ಆದ್ದರಿಂದ ಮಗು ಮತ್ತು ತಂ ತಾಯಿಗಳ ನಡುವಿನ ಮಧುರ ಬಾಂಧವ್ಯವು ವ್ಯಕ್ತಿತ್ವ ವಿಕಾಸದಲ್ಲಿ ಬ ಮುಖ್ಯವಾದುದು. ಪರಸ್ಪರ ಪ್ರೇಮ-ವಿಶ್ವಾಸ, ಆದರ-ಅಭಿಮಾನ ಮತ್ತು ಮಗು-ತಂ ತಾಯಿಯರ ನಡುವೆ ಪ್ರೇಮಸಂಚಿತ ಬಾಂಧವ್ಯ ಇರುವಂತಹ ಕುಟುಂಬದಿಂದ ಬ ಮಕ್ಕಳು ಇತರರೊಂದಿಗೆ ಹೊಂದಿಕೊಂಡು ಬಾಳುವಂತವರಾಗಿದ್ದು, ಸ್ವಾವಲಂಬಿಗ ಮತ್ತು ಆತ್ಮವಿಶ್ವಾಸಿಗಳೂ ಆಗಿರುತ್ತಾರೆಂದು ಮತ್ತು ಯಾವ ಮಕ್ಕಳು ಬಿರುಕುಬಿ (ಒಡೆದು ಚೂರುಚೂರಾದ) ಕುಟುಂಬದಿಂದ ಬಂದಿರುತ್ತಾರೋ ಅಂತಹವ ಮನೋಭಗ್ನತೆ, ಹತಾಶೆ, ಸಿಡುಕಿನ ಸ್ವಭಾವ ಹಾಗೂ ಆಕ್ರಮಣಕಾರಿ ಪ್ರವೃತ್ತಿಯ ಪಡೆಯುತ್ತಾರೆಂದು ಮನೋವಿಜ್ಞಾನದಲ್ಲಿ ನಡೆದ ಹಲವಾರು ಸಂಶೋಧನೆಗಳು ಸ ಹೇಳುತ್ತವೆ. ಇದೂ ಅಲ್ಲದೆ, ತಂದೆ ಮತ್ತು ತಾಯಿ ಇವರ ನಡುವೆ ಭಾವನಾತ ಹಾಗೂ ಮಧುರ ಸಂಬಂಧವಿದ್ದಲ್ಲಿ, ಅಂತಹ ವಾತಾವರಣದಲ್ಲಿ ಬೆಳೆವ ಮಗುವಿನ ಭದ್ರತೆ, ನೆಮ್ಮದಿಯ ನೆರಳು, ಪ್ರೀತಿ ಮತ್ತು ವಿಶ್ವಾಸಗಳು ಬೆಳೆದುಬರುತ್ತವೆ.

ತಾಯಿ- ತಂದೆಯರಿಂದ ತಿರಸ್ಕರಿಸಲ್ಪಟ್ಟ ಮಕ್ಕಳೂ ಇವೆ. ಅವರ ತಿರಸ್ಕಾ ಮಗುವಿನ ಮನಸ್ಸಿನಲ್ಲಿ ಭೀತಿಯ ಬೀಜವನ್ನು ಹುಟ್ಟಿ ಹಾಕುತ್ತದೆ. ಆ ಮಗುವು ಅವರ ಹತ್ತಿರ ಹತ್ತಿರ ಸರಿಯಲು ಯತ್ನಿಸಿ, ವಿಫಲವಾಗಿ, ಭದ್ರತೆಯ ನೆಲೆಯ ಕಳೆದುಕೊಳ್ಳುತ್ತದೆ. ಹೀಗೆ ಮಾನಸಿಕ ಭದ್ರತೆ ಇಲ್ಲದ ಮಕ್ಕಳು ತಾಯಿ-ತಂದೆಯ ತಿರಸ್ಕಾರದಿಂದಾಗಿ ಬಾಲಾಪರಾಧಿಗಳಾಗುವ ಸಾಧ್ಯತೆಗಳೇ ಹೆಚ್ಚು. ತಾಯಿಯು ಮಗುವ ತಿರಸ್ಕರಿಸಿದರೆ, ಮಗುವೂ ರೊಚ್ಚಿಗೆದ್ದು, ತಾಯಿಯನ್ನು ದ್ವೇಷಿಸಲು ಆರಂಭಿಸುತ್ತ ಅಂತಹ ಮಗು ಬೆಳೆದು ದೊಡ್ಡವನಾದಾಗ ಬಂಡಾಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತ ಅಷ್ಟೇ ಏಕೆ, ಆ ಮಗುವು ಕುಟುಂಬದ ಹಾಗೂ ಸಮಾಜದ ಕಟ್ಟುಪಾಡುಗಳನ್ನು ಜಾರಿ ಒದೆಯುತ್ತದೆ. ತನ್ಮೂಲಕ ತನ್ನ ತಂದೆ-ತಾಯಿಯರ ಮೇಲೆ ಸೇಡು ತೀರಿಸಿಕೊಂ ಸಮಾಧಾನವನ್ನು ಪಡೆಯುತ್ತದೆ.

ಕುಟುಂಬದಲ್ಲಿ ವ್ಯಕ್ತಿತ್ವ ರೂಪಿಸುವಲ್ಲಿ ಪರಿಣಾಮ ಬೀರುವ ಮತ್ತೊಂ ಅಂಶವೆಂದರೆ ಸೋದರ/ಸೋದರಿ ಸ್ಪರ್ಧೆ. ಮಗು ತಾನು ಹುಟ್ಟಿದ ನಂತರ ಹುಟ್ಟಿ ಬರು ತನ್ನ ಸೋದರ ಅಥವಾ ಸಹೋದರಿಯನ್ನು ತನ್ನ ಪ್ರತಿಸ್ಪರ್ಧಿಯಂತೆ ನೋಡುತ್ತದೆ. ತ ನಂತರ ಹುಟ್ಟಿಬರುವ ಮತ್ತೊಂದು ಮಗುವು ಮೊದಲನೆಯ ಮಗುವಿಗೆ ನುಂಗಬಾರ ಕಹಿಗುಳಿಗೆ; ಸಹಿಸಲಾರದ ಬಲವಾದ ಚಾಟಿ ಏಟು. ಈಗ ಬಂದ ಮಗು ತನ್ನ ತಾಯಿ ಎದೆಹಾಲಿಗೆ ಸ್ಪರ್ಧೆ ನಡೆಸುತ್ತದೆ. ಅದಕ್ಕೂ ಹೆಚ್ಚಾಗಿ, ಹೊಸದಾಗಿ ಹುಟ್ಟಿದ ಮಗು ಎಲ್ಲ ಗಮನ ಸೆಳೆಯುತ್ತದೆ. ಇಲ್ಲಿಯ ತನಕ ತನ್ನ ಮೇಲೆ ಬೀಳುತ್ತಿದ್ದ ಗಮನ, ತಾನು ಪಡೆ ಸವಿಯುತ್ತಿದ್ದ ಪ್ರೀತಿ-ಪ್ರೇಮ ವಿಶ್ವಾಸಗಳೆಲ್ಲಾ ತನ್ನ ನಂತರ ಬಂದ ಮಗುವಿನ ಕಡ ಕೇಂದ್ರೀಕೃತವಾಗುತ್ತವೆ. ಹೀಗಾಗಿ ತಾನು ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟವನು, ತನ್ನ

ಯಾರೂ ಪ್ರೀತಿಸುವುದಿಲ್ಲ ಎಂಬ ಭಾವನೆ ಅತಿಯಾಗಿ, ಆ ಮಗುವು ತನ್ನ ತಂಗಿ ಅಥವಾ ತಮ್ಮನನ್ನು ದ್ವೇಷಿಸಲು ಆರಂಭಿಸುತ್ತದೆ. ಹೇಗಾದರೂ ಮಾಡಿ ತಾಯಿ-ತಂದೆಯವರ ಗಮನ ಸೆಳೆಯಲು ಪ್ರಯತ್ನಿಸಿ, ಸೋತಾಗ ಹತಾಶೆಗೊಳ್ಳುತ್ತದೆ ಮಗು. ಈ ಹತಾಶೆ ಆ ಇನ್ನೊಂದು ಮಗುವಿನ ಮೇಲಿನ ದ್ವೇಷವನ್ನು ದ್ವಿಗುಣಗೊಳಿಸುತ್ತದೆ. ಆದ್ದರಿಂದ ತಾಯಿ ತಂದೆಯರು ಇಂತಹ ಸಂದರ್ಭದಲ್ಲಿ, ಮೊದಲಿನ ಮಗುವಿನ ಆತ್ಮವಿಶ್ವಾಸಕ್ಕೆ ಧಕ್ಕೆಬಾರದಂತೆ, ಪ್ರೀತಿ-ವಿಶ್ವಾಸಗಳನ್ನು ಅದರ ಮೇಲೂ ಧಾರೆ ಎರೆಯಲೇ ಬೇಕು. ಆಗ ಮಗುವು ಚೇತರಿಸಿಕೊಳ್ಳುತ್ತದೆ; ತನ್ಮೂಲಕ ಅದರ ವ್ಯಕ್ತಿತ್ವವೂ ಹದಗೊಳ್ಳುತ್ತದೆ.

ವ್ಯಕ್ತಿತ್ವವಿಕಾಸದಲ್ಲಿ ಮಹತ್ತರ ಪಾತ್ರ ವಹಿಸುವ ಮತ್ತೊಂದು ಅಂಶವೆಂದರೆ ಕುಟುಂಬದ ನೀತಿ, ಧರ್ಮ ಹಾಗೂ ಸದಾಚಾರ. ಸದಾಚಾರ ಇಲ್ಲದ ಕುಟುಂಬವು ಮಗುವಿನ ಬದುಕಿಗೆ ಮಾರಕವಾಗುತ್ತದೆ; ಯಾವ ಆದರ್ಶವನ್ನು ಕೊಡುವುದಿಲ್ಲ. ಹೀಗಾಗಿ ಆದರ್ಶ ಕೊಡದ ಕುಟುಂಬವು ಮಗುವಿನ ಭವಿಷ್ಯದ ಬದುಕಿಗೆ, ಚುಕ್ಕಾಣಿ ಇಲ್ಲದ ನಾವೆಯಂತಾಗುತ್ತದೆ. ಯಾವ ಕುಟುಂಬದಲ್ಲಿ ಸಚ್ಚಾರಿತ್ರ, ಸದಾಚಾರ, ಮೌಲ್ಯಗಳು, ಉತ್ತಮ ನಡೆನುಡಿಗಳು ಕಂಡುಬರುತ್ತವೆಯೋ ಅಂತಹ ಕುಟುಂಬದಿಂದ ಬಂದ ಮಕ್ಕಳು, ಉತ್ತಮ ಹೊಂದಾಣಿಕೆ, ಹೆಚ್ಚು ಸ್ವಾವಲಂಬಿಯಾಗುವಿಕೆ ಮತ್ತು ತಮ್ಮ ತಾಯಿ-ತಂದೆಯವರೊಂದಿಗೆ ಪ್ರೇಮಪೂರ್ಣ ಮೈತ್ರಿಯನ್ನು ಪಡೆದವರಾಗಿರುತ್ತಾರೆ. ಯಾವ ಕುಟುಂಬದಲ್ಲಿ ಸಂಶಯ ಪ್ರವೃತ್ತಿ, ಹಗೆತನ, ದ್ವೇಷ ಮತ್ತು ಅಸೂಯೆಗಳು ಹೊಗೆಯಾಡುತ್ತವೆಯೋ ಅಂತಹ ಕುಟುಂಬದಿಂದ ಬಂದ ಮಕ್ಕಳು, ಕ್ರೌರ್ಯ, ದಬ್ಬಾಳಿಕೆ ಹಾಗೂ ಬಾಲಾಪರಾಧಿಯ ಗುಣಗಳನ್ನು ಪಡೆಯುತ್ತಾರೆ; ಸಮಾಜ ಕಂಟಕರಾಗುತ್ತಾರೆ. ಆದ್ದರಿಂದ ಕುಟುಂಬದ ಆದರ್ಶ ಹಾಗೂ ಸ್ವಚ್ಛ ಪರಿಸರವು ಮಗುವಿನ ವ್ಯಕ್ತಿತ್ವ ವಿಕಾಸದಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ.

ಕುಟುಂಬದ ಆರ್ಥಿಕ ಹಿನ್ನೆಲೆಯು ವ್ಯಕ್ತಿಯ ವಿಕಾಸದಲ್ಲಿ ಮತ್ತೊಂದು ಮೈಲಿಗಲ್ಲು. ಕಿತ್ತು ತಿನ್ನುವ ಬಡತನವು ಮಗುವಿನ ಮೂಲಅಗತ್ಯಗಳನ್ನು ಪೂರೈಸಲಾರದ ಸ್ಥಿತಿಗೆ ತಳ್ಳಿ, ಮಗುವಿನಲ್ಲಿ ಹತಾಶೆಯನ್ನು ಮೂಡಿಸಬಲ್ಲದು. ಯಾವ ಕುಟುಂಬದಲ್ಲಿ, ತಾಯಿ-ತಂದೆಯರು ತಮ್ಮ ಮಕ್ಕಳ ಮೂಲಅಗತ್ಯಗಳನ್ನು ಈಡೇರಿಸುತ್ತಾರೋ, ಅಂತಹ ಮಕ್ಕಳು ಹಾದಿ ತಪ್ಪಿಹೋಗುವ ಅವಕಾಶಗಳು ಕಡಿಮೆ ಇರುತ್ತವೆ. ಮಕ್ಕಳ ಆಶೆ-ಆಕಾಂಕ್ಷೆಗಳು ಹತ್ತಾರು-ಹಲವಾರು. ಅವನ್ನೆಲ್ಲಾ ಈಡೇರಿಸಬೇಕೆಂದಲ್ಲ. ಕುಟುಂಬದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಕ್ಕಳನ್ನು ತಾಯಿ-ತಂದೆಯ ನಂಬಿಕೆಗೆ ತೆಗೆದುಕೊಂಡು, ಅವರಲ್ಲಿ ಅರಿವು ಮೂಡಿಸಿ, ನೊಂದ ಜೀವಕ್ಕೆ ಭರವಸೆ ಕೊಡಬಲ್ಲ ಪರಿಸರವನ್ನು ಕುಟುಂಬದಲ್ಲಿ ನಿರ್ಮಿಸಿದರೆ, ಅಂತಹ ಮಕ್ಕಳಲ್ಲಿ ಆತ್ಮವಿಶ್ವಾಸವು ಬೆಳೆದು, ವ್ಯಕ್ತಿತ್ವ ವಿಕಾಸವಾಗಲು ಅನುವು ಮಾಡಿಕೊಟ್ಟಂತಾಗುತ್ತದೆ.

ಒಟ್ಟಾರೆ ಹೇಳುವುದಾದರೆ, ಮಗುವಿನ ವ್ಯಕ್ತಿತ್ವವು ಕುಟುಂಬದ ಒಂದು ಕೊಡುಗೆ. ಮಕ್ಕಳು ಮತ್ತು ತಾಯಿ-ತಂದೆಯರ ನಡುವೆ ಇರುವ ಮಧುರ ಬಾಂಧವ್ಯವು ಮಕ್ಕಳ ವ್ಯಕ್ತಿತ್ವ ಅರಳಲು ಪೋಷಕವಾಗುತ್ತದೆ.

ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಶಿಕ್ಷಕನ ಪಾತ್ರ

ಎಂ. ಎಚ್. ವಿಜಯೇಂದ್ರ

"ಯಾವುದೇ ರಾಷ್ಟ್ರದ ಭವಿಷ್ಯ, ಆ ರಾಷ್ಟ್ರದ ಶಾಲಾ ಕೊಠಡಿಗಳ ನಾಲ್ಕು ಗೋಡೆಗಳ ಮಧ್ಯೆ ರೂಪಿತವಾಗುತ್ತದೆ" ಎಂಬ ಮಾತು ನಿತ್ಯಸತ್ಯ. ಅತ್ಯುತ್ತಮ ವ್ಯಕ್ತಿತ್ವವನ್ನು ರೂಪಿಸುವುದೇ ಶಿಕ್ಷಣದ ಗುರಿ ಎಂಬುದನ್ನು ನಾವು ಮರೆಯುವಂತಿಲ್ಲ. ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಆ ರಾಷ್ಟ್ರದ ಶಿಕ್ಷಣನೀತಿ ಬಹುದೊಡ್ಡ ಪಾತ್ರವಹಿಸುತ್ತವೆ. ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಡುತ್ತಿರುವ ಈ ಪರ್ವ ಸಮಯದಲ್ಲಿ ಶಿಕ್ಷಕರ ಜವಾಬ್ದಾರಿ ಬಹಳ ಮಹತ್ವದ ವಿಚಾರವಾಗುತ್ತದೆ.

ಇಪ್ಪತ್ತೊಂದನೇ ಶತಮಾನದ ಸಂದರ್ಭದಲ್ಲಿ, ಅದು ಒಡ್ಡಲಿರುವ ಸವಾಲುಗಳಿಗೆ, ಮುಂದಿನ ಪೀಳಿಗೆ ಸಮರ್ಥವಾಗಿ ಸ್ಪಂದಿಸಬೇಕಾಗಿದೆ. ಅದಕ್ಕೆ ಎಂತಹ ಪೂರ್ವಸಿದ್ಧತೆ ಮಾಡಿಕೊಳ್ಳಬೇಕೆಂಬ ಮುಂಗಾಣ್ಕೆಯುಳ್ಳ ಸಮರ್ಥ ಶೈಕ್ಷಣಿಕ ಯೋಜನೆಯನ್ನು ಈಗಲಾದರೂ ಹಾಕಬೇಕಾಗಿದೆ. ಮುಂದಿನ ಪೀಳಿಗೆಗೆ ಬೇಕಾದ ಈ ಪೂರ್ವಸಿದ್ಧತೆ ಸಮರ್ಪಕವಾಗಿಲ್ಲದಿದ್ದರೆ, ಅದಕ್ಕೆ ಇಂದಿನ ನಾವು ಜವಾಬ್ದಾರರಾಗುತ್ತೇವೆ. ಶಿಕ್ಷಣವು ಒಂದು ರಾಷ್ಟ್ರೀಯ ಜವಾಬ್ದಾರಿ ಎಂಬುದನ್ನು ಎಲ್ಲರೂ - ಆಡಳಿತ ಸೂತ್ರ ಹಿಡಿದಿರುವ ರಾಜಕಾರಣಿಗಳು, ಅಧಿಕಾರಿಗಳು, ಶಿಕ್ಷಣವನ್ನು ವಾಣಿಜ್ಯೀಕರಿಸಿರುವ ಸಮಾಜಪೀಡಕರು, ಹಾಗೂ ಶಿಕ್ಷಕರು - ಮನಗಾಣಬೇಕಾಗಿದೆ. ನಾವು ರೂಪಿಸಬೇಕಾಗಿರುವ ಶಿಕ್ಷಣನೀತಿ, ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವಂತಿರಬೇಕು. ಯಾವುದೇ ಶಿಕ್ಷಣನೀತಿ ಸಫಲವಾಗಬೇಕಾದರೆ, ಅದನ್ನು ಅನುಷ್ಠಾನಕ್ಕೆ ತಂದು ಕಾರ್ಯಗತ ಮಾಡುವವರ ನಿಷ್ಠೆ, ಪ್ರಾಮಾಣಿಕತೆ, ಸಮರ್ಪಣಾ ಮನೋಭಾವ ಹಾಗೂ ಅವುಗಳಿಗೆ ದೊರೆಯುವ ಸಮಾಜದ ಬೆಂಬಲ ಮುಂತಾದವು ಅಂತಿಮ, ನಿರ್ಣಾಯಕ ಅಂಶಗಳಾಗುತ್ತವೆ. ಯಾವುದೇ ವಿದ್ಯಾಭ್ಯಾಸ ಕ್ರಮದ ನೀತಿಯ ಸೋಲು-ಗೆಲುವು ಶಿಕ್ಷಕರ ಗುಣಮಟ್ಟ ಮತ್ತು ಮನೋಭಾವದ ಮೇಲೆ ಅವಲಂಬಿತವಾಗಿರುತ್ತದೆ.

ನಮ್ಮ ಸಮಾಜ ಸತತವಾಗಿ ಬದಲಾಗುತ್ತಿರುವ ಚಲನಶೀಲ ಸಮಾಜ. ನಿರಂತರವಾಗಿ ಜ್ಞಾನಸ್ಫೋಟವಾಗುತ್ತಿದೆ. ಓದುವುದು, ಬರೆಯುವುದು ಮತ್ತು ಲೆಕ್ಕಾಚಾರ (ಓ.ಬ.ಲೆ.) ಜ್ಞಾನವನ್ನು ಪರಿಚಯಿಸುವುದರ ಜೊತೆಗೆ ಮುಂದಿನ ಭವಿಷ್ಯದ ಇಪ್ಪತ್ತೊಂದನೇ ಶತಮಾನದ ಸವಾಲುಗಳನ್ನು ಎದುರಿಸಲು ಶಕ್ತರಾಗುವಂತೆ ಇಂದಿನ ಮಕ್ಕಳನ್ನು, ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಬೇಕಾದ ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯವುಳ್ಳ ಶಿಕ್ಷಕರು ನಮಗೆ ಬೇಕಾಗಿದೆ.

ಸಮಾಜವನ್ನು, ರಾಷ್ಟ್ರವನ್ನು ಭವ್ಯವಾಗಿ ರೂಪಿಸುವ ಶಿಕ್ಷಣದ ಜವಾಬ್ದಾರಿ ಉಳ್ಳ ಶಿಕ್ಷಕರ ಪಾತ್ರ ಬಹಳ ಮಹತ್ತರವಾದದ್ದು. ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ "ಶಿಕ್ಷಣ-ಶಿಶು-ಶಿಕ್ಷಕ" - ಇವು ಮೂರು ಅವಿನಾಭಾವ ಸಂಬಂಧ ಉಳ್ಳಂತಹವು. ಶಿಕ್ಷಣದ ಪ್ರಕ್ರಿಯೆ

ಯಲ್ಲಿ "ಶಿಶು-ಶಿಕ್ಷಕ", "ಕಲಿಯುವವನು - ಕಲಿಸುವವನು" ಇಬ್ಬರೂ ಮುಖ್ಯವಾದರೂ ಹೆಚ್ಚಿನ ಜವಾಬ್ದಾರಿ ಶಿಕ್ಷಕನದು. ಎಲ್ಲ ಭೌತಿಕಸೌಲಭ್ಯಗಳು ಲಭ್ಯವಿದ್ದರೂ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಸೃಜನಶೀಲ ಶಿಕ್ಷಕ ಇಂದಿನ ಅಗತ್ಯ. ಶಿಕ್ಷಕರಾದವರು ಇಂದಿನ ವಿದ್ಯಾಭ್ಯಾಸಕ್ರಮದಲ್ಲಿ ವಹಿಸಬೇಕಾದ ಪಾತ್ರ ಹಾಗೂ ನಿರ್ವಹಿಸಬೇಕಾದ ಕೆಲಸಗಳು ಹಲವಾರು. ಅವುಗಳಲ್ಲಿ ಮುಖ್ಯವಾಗಿ ಅಧ್ಯಾಪನ, ಅಧ್ಯಯನ, ಕಲಿಕಾ ಸಾಮಗ್ರಿಯ ಅಭಿವೃದ್ಧಿ, ಶೈಕ್ಷಣಿಕ ವಿಸ್ತರಣೆ ಕಾರ್ಯ, ಸಂಶೋಧನೆ ಮತ್ತು ಶಿಕ್ಷಣ ವ್ಯವಸ್ಥೆಯ ಆಡಳಿತ ಮುಂತಾದವುಗಳನ್ನು ಗುರುತಿಸಬಹುದು. ಶಿಕ್ಷಕರು ಸಮಾಜದಿಂದ ದೂರ ಉಳಿಯಲು ಸಾಧ್ಯವಿಲ್ಲ. ಮುಂಬರುವ ಸಮಾಜ ವ್ಯವಸ್ಥೆಯ ವಿವಿಧ ಒತ್ತಡಗಳಿಗೆ, ಅಗತ್ಯಗಳಿಗೆ ಪ್ರತಿಕ್ರಿಯೆ ತೋರಬೇಕಾಗುತ್ತದೆ, ಸ್ಪಂದಿಸಬೇಕಾಗುತ್ತದೆ. ಭವಿಷ್ಯದ ಶಿಕ್ಷಕರು ಸಮಾಜದ ಮುಂದಾಳುಗಳಾಗಿ ಮತ್ತು ಪ್ರಗತಿಗೆ ನೆರವಿಗರಾಗಿ ಪಾತ್ರವಹಿಸಬೇಕಾಗಿದೆ. ಇಪ್ಪತ್ತೊಂದನೇ ಶತಮಾನದ ಸಮಾಜ ವ್ಯವಸ್ಥೆಯ ಆವಶ್ಯಕತೆಗಳನ್ನು ಗಮನಿಸಿದರೆ, ಮುಂಬರುವ ದಿನಗಳಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಜಟಿಲವಾದ ಸವಾಲುಗಳಿಂದ ಕೂಡಿರುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ.

ಮುಂದಿನ ಸಮಾಜದ ಆಗುಹೋಗುಗಳಿಗೆ, ವಿದ್ಯಾರ್ಥಿಗಳಿಗೆ, ಹೆತ್ತವರಿಗೆ, ಪೋಷಕರಿಗೆ ಹಾಗೂ ತಮ್ಮ ವೃತ್ತಿಗೆ ಇಂದಿನ ಶಿಕ್ಷಕರು ಉತ್ತರದಾಯಿಗಳಾಗಬೇಕಾಗುತ್ತದೆ. ಸಮಾಜದ ಪ್ರಗತಿಯ ಸಂಪೂರ್ಣ ಹೊಣೆಗಾರಿಕೆ ಶಿಕ್ಷಕನದೇ ಆಗುತ್ತದೆ. ಇಂತಹ ಗುರುತರವಾದ ಜವಾಬ್ದಾರಿಯನ್ನು ಹೊರಲು ಶಿಕ್ಷಕರು ಸಮರ್ಥರಾಗಿರಬೇಕು. ಇಂದಿನ ವಿದ್ಯಾಭ್ಯಾಸಕ್ರಮದಲ್ಲಿ ಶಿಕ್ಷಕರು ನಿರ್ವಹಿಸಬೇಕಾದ ಕರ್ತವ್ಯಗಳು ಬಹುಮುಖವಾದವುಗಳು. ಶಿಕ್ಷಕ ತನ್ನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾದರೆ ಅವನಲ್ಲಿ ಅನೇಕ ಸಾಮರ್ಥ್ಯಗಳಿರಬೇಕು. ಅಂತಹ ಸಾಮರ್ಥ್ಯಗಳೇ ಶಿಕ್ಷಣದಲ್ಲಿ ನಿರ್ಣಾಯಕ ಅಂಶಗಳು. ಇಂದಿನ ವಿದ್ಯಾಭ್ಯಾಸಕ್ರಮವು ಮುಂಬರುವ ಶತಮಾನದ ಆವಶ್ಯಕತೆಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಭವಿಷ್ಯದ ಸಮಾಜದ ಬಗ್ಗೆ ಮುಂಗಾಣ್ಕೆ ಇರುವಂತಹ ಶಿಕ್ಷಕರು ಮಾತ್ರ ಇಂದಿನ ವಿದ್ಯಾಭ್ಯಾಸಕ್ರಮದಲ್ಲಿ ಮಹತ್ತರ ಪಾತ್ರ ನಿರ್ವಹಿಸಬಲ್ಲರು. ಅವರು ನಿರ್ವಹಿಸುವ ಪಾತ್ರ ಪರಿಣಾಮಕಾರಿಯಾಗಬೇಕಾದರೆ ಅವರಲ್ಲಿ ಈ ಕೆಳಗಿನ ಕೆಲವು ಸಾಮರ್ಥ್ಯಗಳು, ಗುಣಗಳು ಇರಬೇಕೆಂದು ತಜ್ಞರು ಅಭಿಪ್ರಾಯಪಡುತ್ತಾರೆ:

1. ಶೈಕ್ಷಣಿಕ ಮುಖಂಡತ್ವ
2. ಶಾಲಾ ಆಡಳಿತದ ಅರಿವು ಮತ್ತು ತರಗತಿಯ ಸಮರ್ಥ ನಿರ್ವಹಣೆ
3. ಪಠ್ಯವಸ್ತುವಿನ ಸಮರ್ಥ ನಿರ್ವಹಣೆ
4. ಶೈಕ್ಷಣಿಕ ಅಗತ್ಯಗಳಿಗೆ ಸ್ಪಂದಿಸುವ ಗುಣ
5. ಸಂಶೋಧಕ ಪ್ರವೃತ್ತಿ
6. ನಾಯಕತ್ವದ ಗುಣ
7. ಪರಾಮರ್ಶಕ ಪಾತ್ರ/ಮಾರ್ಗದರ್ಶಕ ಪಾತ್ರ
8. ನಂಬುಗೆಯ ವಿಶ್ವಾಸಪೂರ್ವಕ ಸಹವರ್ತಿ ಪಾತ್ರ.

ಮೇಲಿನ ಅಂಶಗಳನ್ನು ವಿದ್ಯಾಭ್ಯಾಸದಲ್ಲಿ/ಶಿಕ್ಷಣದಲ್ಲಿ "ಶಿಕ್ಷಕರ ಪರಿಣಾಮಕಾರಿ ಪಾತ್ರ"ದ ದೃಷ್ಟಿಯಿಂದ ಪರಿಶೀಲಿಸಬೇಕು.

1. ಶೈಕ್ಷಣಿಕ ಮುಖಂಡತ್ವ

ಶಿಕ್ಷಕನ ಮುಖ್ಯವಾದ ಕೆಲಸ "ಅಧ್ಯಾಪನ". ಇದು ಪರಿಣಾಮಕಾರಿಯಾಗಬೇಕಾದರೆ "ಅಧ್ಯಯನ" ಪೂರಕವಾಗಿರಬೇಕು. "ಅಧ್ಯಾಪನ-ಅಧ್ಯಯನ" ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಳ್ಳೆಯ ಅಧ್ಯಾಪನವು ಕಲಿವನ್ನು ಸುಲಭಗೊಳಿಸುತ್ತದೆ. ಕಲಿವು ಸುಲಭವಾದರೆ ಶಾಲೆ ಹಾಗೂ ತರಗತಿಗಳು ಮಕ್ಕಳಿಗೆ ಆಕರ್ಷಕ ಕೇಂದ್ರಗಳಾಗುತ್ತವೆ. ಅಧ್ಯಾಪನ/ಬೋಧನೆ ಪರಿಣಾಮಕಾರಿಯಾಗಬೇಕಾದರೆ ಬೋಧನಾತಂತ್ರಗಳಲ್ಲಿ ಉಂಟಾಗುತ್ತಿರುವ ಪರಿಣಾಮಕಾರಿ ಬದಲಾವಣೆಗಳನ್ನು ಪರಿಚಯಿಸಿಕೊಳ್ಳಬೇಕು. ಆದರಿಂದ ಶಿಕ್ಷಕರ ಅಧ್ಯಾಪನ ಸಾಮರ್ಥ್ಯ ವೃದ್ಧಿಯಾಗುತ್ತವೆ. ಹೊಸದನ್ನು ಕಲಿಯುವ ಉತ್ಸಾಹವಿರುವ ಶಿಕ್ಷಕ ಮಕ್ಕಳಿಗೆ ಸಮರ್ಥವಾಗಿ, ಆಕರ್ಷಕವಾಗಿ ಕಲಿಸಬಲ್ಲ, ತನ್ಮೂಲಕ ಶಿಕ್ಷಕ ತನ್ನ ಬೋಧನಾ ಸಾಮರ್ಥ್ಯವನ್ನು ರೂಢಿಸಿಕೊಂಡು ಮಕ್ಕಳಿಗೆ ಶೈಕ್ಷಣಿಕ ಮುಖಂಡತ್ವ ವಹಿಸಬಲ್ಲ, ಕಲಿಸಬಲ್ಲ.

2. ಶಾಲಾ ಆಡಳಿತದ ಅರಿವು ಮತ್ತು ತರಗತಿಯ ನಿರ್ವಹಣೆ

ಶಿಕ್ಷಕರಿಗೆ ಶಾಲಾ ಆಡಳಿತದ ಸೂಕ್ಷ್ಮತೆಯ ಅರಿವು ಇರಬೇಕಾದುದು ಅಗತ್ಯ. ಜೊತೆಗೆ ಬೋಧನೆ ಯಶಸ್ವಿಯಾಗಬೇಕಾದರೆ, ತರಗತಿನಿರ್ವಹಣೆಯ ಗುಟ್ಟೂ ಗೊತ್ತಿರಬೇಕು. ಶಾಲೆಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲೂ ಅಚ್ಚುಕಟ್ಟುತನ, ಕ್ರಮಬದ್ಧತೆ ಇರಬೇಕಾದುದು ಅನಿವಾರ್ಯ. ಶಾಲೆ/ವಿದ್ಯಾಸಂಸ್ಥೆಯ ಆಡಳಿತದಲ್ಲಿ ಶಾಲಾ ಕೆಲಸದ ವೇಳಾಪಟ್ಟಿ, ಸಹಪಠ್ಯ ಚಟುವಟಿಕೆಗಳ ವಿವರ, ಶಾಲಾ ಮಕ್ಕಳ ಆರೋಗ್ಯ, ಮಕ್ಕಳ ಶೈಕ್ಷಣಿಕ ಪ್ರಗತಿಯ ಮೌಲ್ಯಮಾಪನ ಮುಂತಾದವು ಸೇರಿಕೊಂಡಿವೆ. ಇವುಗಳ ಸಮರ್ಥ ನಿರ್ವಹಣೆ, ಶಿಕ್ಷಣದ ಪ್ರಗತಿಗೆ ಪೂರಕವಾಗುತ್ತದೆ. ಬೋಧಿಸುವಾಗ, ತರಗತಿಯ ವಿವೇಚನಾಯುಕ್ತ ಮಕ್ಕಳ ಕಲಿವಿನಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಈ ಬಗ್ಗೆ ಶಿಕ್ಷಕರಿಗೆ ಸಂಪೂರ್ಣ ಅರಿವು ಇರಬೇಕಾದುದು ಅಗತ್ಯ.

3. ಪಠ್ಯವಸ್ತುವಿನ ಸಮರ್ಥ ನಿರ್ವಹಣೆ

ಪ್ರಪಂಚದಲ್ಲಿ ಸತತವಾಗಿ ಜ್ಞಾನ ಸ್ಫೋಟವಾಗುತ್ತಿದೆ. ಅನೇಕ ಹೊಸ ವಿಷಯಗಳು ಪಠ್ಯವಸ್ತುವಿನಲ್ಲಿ ಸೇರಿರುತ್ತವೆ. ವಿಷಯಗಳನ್ನು ಸಕಾರಾತ್ಮಕವಾಗಿ ತಿಳಿದು ಅರ್ಥ ಮಾಡಿಕೊಂಡು ಪರಿಣಾಮಕಾರಿಯಾಗಿ ಬೋಧನೆ ಮಾಡಬೇಕಾಗುತ್ತದೆ. ಪಠ್ಯವಸ್ತುವನ್ನು ವಿಶ್ಲೇಷಿಸಿ, ಅದಕ್ಕೆ ತಕ್ಕ ಪಾಠೋಪಕರಣಗಳನ್ನು ತಯಾರಿಸಿಕೊಂಡು/ಒದಗಿಸಿಕೊಂಡು ಬೋಧಿಸಲು ಪ್ರಯತ್ನಿಸಬೇಕು. ಕಲಿಯುವುದು ವಿದ್ಯಾರ್ಥಿಗಳಿಗೆ ಸಂತೋಷಕೊಡುವ ಚಟುವಟಿಕೆಯಾಗಿರುವಂತೆ ಬೋಧನಾವಿಧಾನವನ್ನು ರೂಪಿಸಬೇಕು. ಮಹಿಳಾ ಸಮಾನತೆಯನ್ನು ಬಿಂಬಿಸುವಂತೆ ಪಠ್ಯವಸ್ತು ಇರಬೇಕು. ಪಠ್ಯವಸ್ತುವಿನ ಸಮರ್ಥ ನಿರ್ವಹಣೆ ಮೂಲಕ ಮಕ್ಕಳಲ್ಲಿರುವ ಸಂಕೋಚತನವನ್ನು ಹೋಗಲಾಡಿಸಿ, ಸಮಾನತೆಯನ್ನು ಬೆಳೆಸುವಂತಿರಬೇಕು. ಪಠ್ಯವಸ್ತುವನ್ನು ಆಧರಿಸಿ ಪಠ್ಯಪುಸ್ತಕಗಳು ರಚನೆಯಾಗಿರುತ್ತವೆ. ಪಠ್ಯ ಪುಸ್ತಕಗಳ ಸಮರ್ಪಕ ಬಳಕೆಯನ್ನು ಶಿಕ್ಷಕರು ಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿ ಕೊಳ್ಳಬೇಕು. ಪಠ್ಯಗಳಲ್ಲಿ ಹೊಸವಿಚಾರಗಳಿದ್ದರೆ ಅವುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಶಿಕ್ಷಕರು ಮಾಡಬೇಕು. ಆಗ ಮಾತ್ರ ಬೋಧನೆ ಪರಿಣಾಮಕಾರಿಯಾಗಲು ಸಾಧ್ಯವಾಗುತ್ತದೆ. ಶಿಕ್ಷಣ ಪ್ರಕ್ರಿಯೆಯಲ್ಲಿ ಇದು ಬಹಳ ಮುಖ್ಯಘಟ್ಟ ಎಂಬುದನ್ನು ಮರೆಯಬಾರದು.

4. ಶೈಕ್ಷಣಿಕ ಅಗತ್ಯಗಳಿಗೆ ಸ್ಪಂದಿಸುವ ಗುಣ

ಸಮಾಜದ ಎಲ್ಲ ವರ್ಗಗಳ ಮಕ್ಕಳು ಶಾಲಾಕಾಲೇಜುಗಳಿಗೆ ಬರುತ್ತಾರೆ. ಗಂಡು ಮಕ್ಕಳು, ಹೆಣ್ಣುಮಕ್ಕಳು, ಹಿಂದುಳಿದವರು ಅಲ್ಪಸಂಖ್ಯಾತರು, ವಿಕಲಾಂಗರು, ನಿಧಾನವಾಗಿ ಕಲಿಯುವವರು ವಿದ್ಯಾರ್ಥಿಗಳಾಗಿ ಬಂದಿರುತ್ತಾರೆ. ಇವರಿಗೆ ಅವರವರದೇ ಆದ ಸಮಸ್ಯೆಗಳಿರುತ್ತವೆ. ಈ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಎಲ್ಲರನ್ನು ಸಮಾನವಾಗಿ ಕಾಣುತ್ತಾ, ಅವರೊಡನೆ ಸ್ಪಂದಿಸುವ ಕೌಶಲವನ್ನು ಶಿಕ್ಷಕರು ಹೊಂದಿರಬೇಕು. ವಿದ್ಯಾರ್ಥಿಗಳಲ್ಲಿ ಹೊಂದಾಣಿಕೆ ಸಮಸ್ಯೆ ಇರುತ್ತದೆ. ಕಲಿಯುವ ಸಾಮರ್ಥ್ಯದಲ್ಲಿ ಭಿನ್ನತೆ ಇರುತ್ತದೆ. ಇವೆಲ್ಲವುಗಳನ್ನು ಅರ್ಥ ಮಾಡಿಕೊಂಡು ಎಲ್ಲರಿಗೂ ಹೊಂದಿಕೊಳ್ಳುವ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಎಲ್ಲರಲ್ಲಿ ಸಮಾನತೆಯ ಮನೋಭಾವವನ್ನು ಬೆಳೆಸಲು ನಾವು ಶಿಕ್ಷಣ ನೀಡಬೇಕಾಗಿದೆ. ವಿದ್ಯಾರ್ಥಿಗಳ ಒಲವುಗಳನ್ನು, ಬೇಕು ಬೇಡಗಳನ್ನು ಅರ್ಥಮಾಡಿಕೊಂಡು, ಅವರ ಸಮಸ್ಯೆಗಳನ್ನು ತಿಳಿದುಕೊಂಡು, ಅವರೊಡನೆ ಸೌಹಾರ್ದಯುತವಾಗಿ ಸ್ಪಂದಿಸುವ ಗುಣವನ್ನು ಶಿಕ್ಷಣದ ಎಲ್ಲ ಹಂತಗಳ ಶಿಕ್ಷಕರು ಬೆಳೆಸಿಕೊಳ್ಳಬೇಕು. ಇದರಿಂದ ನಾವು ನೀಡುವ ಶಿಕ್ಷಣ ಫಲಪ್ರದವಾಗುತ್ತದೆ. ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಳ್ಳುವ ಕಲೆ, ಅವರೊಡನೆ ಸ್ಪಂದಿಸುವ ರೀತಿಯ ಮೇಲೆ ಅವಲಂಬಿತವಾಗಿದೆ. ಈ ರೀತಿಯ "ಪರಸ್ಪರ ಸ್ಪಂದನ"ವು ಕಲಿಯುವವರ ಮತ್ತು ಕಲಿಸುವವರ ನಡುವೆ ನಂಬುಗೆಯ ಸೌಹಾರ್ದ ವಾತಾವರಣವನ್ನು ಉಂಟುಮಾಡಿ, ಶಿಕ್ಷಣದ ಉದ್ದೇಶ ಸಫಲವಾಗುತ್ತದೆ. ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಈ ರೀತಿಯ ವಾತಾವರಣದ ನಿರ್ಮಾಣ ಅಗತ್ಯವಾಗಿದೆ. ಇಂತಹ ವಾತಾವರಣ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಪ್ರಮುಖವಾದದ್ದು.

5. ಸಂಶೋಧಕ ಪ್ರವೃತ್ತಿ

ಸಮರ್ಥಶಿಕ್ಷಕರು ಒಳ್ಳೆಯ ಸಂಶೋಧಕರೂ ಆಗಿರಬೇಕು. ಬೋಧನೆ ಮಾಡುವಾಗ, ಆಡಳಿತ ನಡೆಸುವಾಗ ಎದುರಾಗುವ ಅನೇಕ ಸಮಸ್ಯೆಗಳಿಗೆ ಶೈಕ್ಷಣಿಕ ಉತ್ತರಗಳನ್ನು ಶಿಕ್ಷಕರೇ ಕಂಡುಕೊಳ್ಳಬೇಕು. ಸಂಶೋಧಕ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಈಗ ನಾವು ಅನುಸರಿಸುತ್ತಿರುವ ಶಿಕ್ಷಣಕ್ರಮ - ಬೋಧನಾಕ್ರಮ - ಏಕಮುಖವಾಗಿದೆ ಎಂದೇ ಹೇಳಬೇಕು. ಶಿಕ್ಷಕರು ಶಿಷ್ಯರಿಗೆ ಹೇಳುತ್ತಾ ಹೋಗುತ್ತಾರೆ. ಶಿಷ್ಯರ ಪ್ರತಿಕ್ರಿಯೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಶಿಕ್ಷಕರು ಅನುಸರಿಸುವ ಏಕಮುಖವಾದ ಮಾರ್ಗದರ್ಶನ ಪದ್ಧತಿ ಕಡಿಮೆಯಾಗಿ ವಿದ್ಯಾರ್ಥಿ-ವಿದ್ಯಾರ್ಥಿಗಳು ಪರಸ್ಪರ ಸಹಾಯದಿಂದ, ಕಲಿಯುವ, ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವ, ಸ್ಪಂದಿಸುವ ಸಾಮರ್ಥ್ಯ ಶಿಷ್ಯರಲ್ಲಿ ಬೆಳೆಯುವುದನ್ನು ಪ್ರೋತ್ಸಾಹಿಸಬೇಕು. ಸ್ವಕಲಿಕೆಗೂ ಪ್ರೋತ್ಸಾಹಿಸಬೇಕು. ತರಗತಿಗಳಲ್ಲಿನ ಬೋಧನೆ ಪರಿಣಾಮಕಾರಿಯಾಗಿ, ಕಲಿವು ಸುಲಭವಾಗಿ ಎಲ್ಲ ವಿದ್ಯಾರ್ಥಿಗಳು ಕಲಿಯುವುದಕ್ಕೆ ಸಹಾಯಕವಾಗಿರಬೇಕು. ಇದು ಸಾಧ್ಯವಾಗಬೇಕಾದರೆ ವಿದ್ಯಾರ್ಥಿಗಳ ಸಾಮಾಜಿಕ ಹಿನ್ನೆಲೆ, ವೈಯಕ್ತಿಕ ಸಮಸ್ಯೆಗಳು ಮತ್ತು ಅವರ ಕಲಿಯುವ ಸಾಮರ್ಥ್ಯ ಮುಂತಾದವುಗಳ ಬಗ್ಗೆ ಶಿಕ್ಷಕರಿಗೆ ತಿಳಿದಿರಬೇಕು. ಇದು ಸಾಧ್ಯವಾಗಬೇಕಾದರೆ ಶಿಕ್ಷಕರು ಸಂಶೋಧನಾ ಪ್ರವೃತ್ತಿ ಉಳ್ಳವರಾಗಿರಬೇಕು. ಕ್ರಿಯಾತ್ಮಕ ಸಂಶೋಧನೆ ಬಗ್ಗೆ, ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾದ ಬೋಧನಾ ವಿಧಾನಗಳ ಅಳವಡಿಕೆ ಬಗ್ಗೆ ಶಿಕ್ಷಕರು ಆಸಕ್ತಿ ಬೆಳೆಸಿಕೊಳ್ಳಬೇಕು.

6. ಶಿಕ್ಷಕರಲ್ಲಿ ನಾಯಕತ್ವದ ಗುಣ

ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ, ಶಿಕ್ಷಣಪದ್ಧತಿಯಲ್ಲಿ ಶಿಕ್ಷಕರ ಪಾತ್ರ ಹೆಚ್ಚು ಪರಿಣಾಮಕಾರಿಯಾಗಬೇಕಾದರೆ, ಅವರಲ್ಲಿ ಸಮರ್ಥ ನಾಯಕತ್ವದ ಗುಣ ಇರಬೇಕು ಅಂತಹ ಗುಣವನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣದಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸ ಗೊಳ್ಳಬೇಕು ಎಂಬುದಕ್ಕೆ ಎರಡನೇ ಮಾತಿಲ್ಲ. ಈ ಗುರಿ ಸಾಧಿತವಾಗಬೇಕಾದರೆ ಶಿಕ್ಷಕರ ಮಾರ್ಗದರ್ಶನ ಅಗತ್ಯ. ಎಲ್ಲ ವಿಚಾರಗಳಲ್ಲಿ ಶಿಕ್ಷಕರು ಮಾದರಿಯಾಗಬೇಕು. ವಿದ್ಯಾರ್ಥಿ ಗಳಲ್ಲಿ ಕಲಿಯುವ ದಾಹವನ್ನು ಹುಟ್ಟಿಸುವಂತಹ ವಾತಾವರಣ ನಿರ್ಮಾಣ ಮಾಡಲು ಶಿಕ್ಷಕರು ಶ್ರಮಿಸಬೇಕು. ಇದು ಸಾಧ್ಯವಾಗಬೇಕಾದರೆ ಶಿಕ್ಷಕರು ನಿರಂತರ ವಿದ್ಯಾರ್ಥಿಗಳಾಗಿರ ಬೇಕು. ಯಾವುದೇ ವಿಷಯದಲ್ಲಿ ಲಭ್ಯವಿರುವ ಇತ್ತೀಚಿನ ಜ್ಞಾನವನ್ನು ತಿಳಿಯಲು ಸಂಶೋಧನಾ ಪ್ರವೃತ್ತಿ ಬೆಳೆಸಿಕೊಳ್ಳಲು ಶಿಕ್ಷಕರು ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕು ಸೂಕ್ತ ಸಲಹೆಗಳನ್ನು ನೀಡಬೇಕು. ತಮ್ಮ ವ್ಯಕ್ತಿತ್ವದಿಂದ, ನಡತೆಯಿಂದ, ಶಿಕ್ಷಕರು ಸಮಾಜದಲ್ಲಿ ಗೌರವವನ್ನು ಗಳಿಸಬೇಕು. ಶಿಕ್ಷಕರು ಉನ್ನತವಾದ ವೃತ್ತಿ ಸಂಹಿತೆಯನ್ನು ಆಚರಣೆಯಲ್ಲಿ ತರಬೇಕು. ತನ್ಮೂಲಕ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಅನುಕಂಪ ಕಲಿಯುವ ಉತ್ಸಾಹ, ವಿಶಾಲಮನೋಭಾವ ಮುಂತಾದ ಗುಣಗಳು ಬೆಳೆಯಲು ಅವಕಾಶ ಮಾಡಿಕೊಟ್ಟು, ಉತ್ತಮ ನಾಯಕರು ಎಂಬ ಹೆಸರನ್ನು ಶಿಕ್ಷಕರು ಗಳಿಸಬೇಕು. ಈ ರೀತಿ ಆದಾಗ ವಿದ್ಯಾರ್ಥಿಗಳು ಅತ್ಯುತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ.

7. ಪರಾಮರ್ಶಕ/ಮಾರ್ಗದರ್ಶಕರ ಪಾತ್ರ

ಶಿಕ್ಷಕರು ಶಾಲೆಯಲ್ಲಿ ಬೋಧನೆ ಮಾಡುವಾಗ ಹಾಗೂ ಶಾಲೆಯ ಹೊರಗಡೆ ಕೂಡ ಮಾರ್ಗದರ್ಶಕರಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ತರಗತಿಗಳಲ್ಲಿ ಪಾಠ ಹೇಳಿದರೆ ಸಾಲದು. ಶಾಲೆಯ ಹೊರಗಡೆಯೂ ಕೂಡ ಶಿಕ್ಷಕರ ಮಾರ್ಗದರ್ಶನ ವಿದ್ಯಾರ್ಥಿಗಳಿಗೆ ಬೇಕಾಗುತ್ತದೆ. ಅನುಕೂಲವಂಚಿತ ವರ್ಗದ ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಪ್ರಗತಿಗೆ ಶಿಕ್ಷಕರನ್ನೇ ಹೆಚ್ಚಾಗಿ ಅವಲಂಬಿಸಿರುತ್ತಾರೆ. ಜೊತೆಗೆ ಇತರ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರಗತಿ ಕೂಡ ಶಿಕ್ಷಕರ ಸಕಾಲಿಕ ಮಾರ್ಗದರ್ಶನದ ಕೊರತೆಯಿಂದ ಕುಂಠಿತವಾಗಿದೆ ಸಕಾಲಿಕ ಮಾರ್ಗದರ್ಶನ ಮತ್ತು ಪರಾಮರ್ಶೆ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಸರಿಯಾದ ದಾರಿಯಲ್ಲಿರಲು ಸಹಾಯ ಮಾಡುತ್ತವೆ. ವಿದ್ಯಾರ್ಥಿಗಳ ಪ್ರಗತಿಯ ನಿರಂತರ ವ್ಯಾಪಕ ಮೌಲ್ಯಮಾಪನ ಶಿಕ್ಷಣದ ಎಲ್ಲ ಹಂತಗಳಲ್ಲಿ ಅಗತ್ಯವಿದೆ. ಮೌಲ್ಯಮಾಪನದ ಫಲಿತಾಂಶದ ಆಧಾರದ ಮೇಲೆ ಸೂಕ್ತ ಮಾರ್ಗದರ್ಶನ ಮಾಡಿ, ವಿದ್ಯಾರ್ಥಿಗಳ ಕಲಿವಿನ ಮಟ್ಟ ಹೆಚ್ಚಿಸಲು ಸಾಧ್ಯವಿದೆ. ಶಿಕ್ಷಕರು ತಮ್ಮ ಬೋಧನಾ ಸಾಮರ್ಥ್ಯದ ಬಗ್ಗೆಯೂ ಚಿಂತಿಸಲು ಅವಕಾಶವಾಗುತ್ತೆ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ, ಶಿಕ್ಷಕರ ನಿರಂತರ ಮಾರ್ಗದರ್ಶನ ಹಾಗೂ ಪರಾಮರ್ಶೆ ಅತ್ಯಂತ ಅಗತ್ಯ. ಈ ನಿಟ್ಟಿನಲ್ಲಿ ಯೋಚಿಸಿದರೆ ಮಾರ್ಗದರ್ಶನ ಮತ್ತು ಪರಾಮರ್ಶೆ ಶಿಕ್ಷಣವ್ಯವಸ್ಥೆಯ ಅವಿಭಾಜ್ಯ ಅಂಗಗಳೆಂದೆ ಪರಿಗಣಿಸಬೇಕು. ಇಂದಿನ ಶಿಕ್ಷಣಕ್ರಮದಲ್ಲಿ ಶಿಕ್ಷಕರು ಸಮರ್ಥ ಮಾರ್ಗದರ್ಶಕರಾಗಿ ಪರಾಮರ್ಶಕರಾಗಿ ಕೆಲಸ ನಿರ್ವಹಿಸಿದರೆ, ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಸಹಾಯವಾಗುತ್ತದೆ.

8. ಶಿಕ್ಷಕರ ಸಹವರ್ತಿ ಪಾತ್ರ

ಈಗಾಗಲೆ ತಿಳಿದಿರುವಂತೆ ಶಿಕ್ಷಕರು ಸಮಾಜದಿಂದ ದೂರವಾಗಿ, ಶಿಕ್ಷಣ ಸಂಸ್ಥೆಯೊಡನೆ ಮಾತ್ರ ಬಾಳಲು ಸಾಧ್ಯವಿಲ್ಲ. ಶಿಕ್ಷಕರು ವಿದ್ಯಾರ್ಥಿಗಳ ಜೊತೆ ಮಾತ್ರವಲ್ಲದೆ, ಹೆತ್ತವರ, ಪಾಲಕರ, ಪೋಷಕರ ಜೊತೆ, ಆಡಳಿತಗಾರರ ಜೊತೆ ಮತ್ತು ಸಮುದಾಯದ ಜೊತೆ ವ್ಯವಹರಿಸಬೇಕಾಗುತ್ತದೆ. ಎಲ್ಲರ ಸಹಾಯ ಸಹಕಾರ ಪಡೆದು ತಮ್ಮ ಕಾರ್ಯ ನಿರ್ವಹಿಸಬೇಕಾಗುತ್ತದೆ. ಶಿಕ್ಷಣಕ್ಕೆ ಸಂಬಂಧ ಪಟ್ಟ ಎಲ್ಲರೊಡನೆ ಸಮನ್ವಯವಾಗಿ ಬೆರೆತು, ಉತ್ತಮ ಸಹವರ್ತಿಗಳಾಗಿ ಕರ್ತವ್ಯ ಮಾಡಬೇಕಾಗುತ್ತದೆ. ಪರಿಣಾಮಕಾರಿಯಾದ ಕಲಿವಿಗೆ ಒತ್ತಾಸೆ ನೀಡುವ, ಉತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಸಹಾಯಮಾಡುವ ಎಲ್ಲರೊಡನೆ, ಎಲ್ಲ ಸಂದರ್ಭಗಳೊಡನೆ ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ಹೊಂದಾಣಿಕೆ ಮಾಡಿಕೊಂಡು ಕರ್ತವ್ಯ ಪಾಲನೆ ಮಾಡುವ ಶಿಕ್ಷಕರು ಉತ್ತಮ ಸಹವರ್ತಿಗಳಾಗಲು ಸಾಧ್ಯ. ಇಂತಹ ಶಿಕ್ಷಕರ ಅಗತ್ಯ ನಮಗೆ ಅಪಾರವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೆರವಾಗುವ ಎಲ್ಲ ಅಂಶಗಳನ್ನು "ಉತ್ತಮ ಸಹವರ್ತಿ ಶಿಕ್ಷಕರು" ಹೊಂದಿರುತ್ತಾರೆ. ಶಿಕ್ಷಕರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಈ ಅಂಶಗಳನ್ನು ಗಮನಿಸಿ, ಅಳವಡಿಸಿಕೊಳ್ಳಬೇಕು.

ಉತ್ತಮ ಸಹವರ್ತಿಗಳಾಗಿ ವ್ಯವಹರಿಸುವ ಶಿಕ್ಷಕರು

1) ಎಲ್ಲ ವಿದ್ಯಾರ್ಥಿಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ, ಪ್ರೀತಿ, ವಿಶ್ವಾಸದಿಂದ ಕಾಣುತ್ತಾರೆ.
2) ವಿದ್ಯಾರ್ಥಿಗಳ ಸರ್ವಾಂಗೀಣ ಬೌದ್ಧಿಕ, ದೈಹಿಕ, ಸಾಮಾಜಿಕ, ಭಾವನಾತ್ಮಕ ಹಾಗೂ ನೈತಿಕ - ಬೆಳವಣಿಗೆಗೆ ಸಹಾಯ ಮಾಡುತ್ತಾರೆ.
3) ನಮ್ಮ ದೇಶದ ಬಗ್ಗೆ, ಸಂಸ್ಕೃತಿಯ ಬಗ್ಗೆ ಗೌರವ, ಅಭಿಮಾನ ಮೂಡುವಂತೆ ಮಾಡಿ ಅಂತರರಾಷ್ಟ್ರೀಯ ಸಹೋದರತ್ವ ಭಾವನೆ ಬೆಳೆಸಲು ಶ್ರಮಿಸುತ್ತಾರೆ.
4) ವಿದ್ಯಾರ್ಥಿಗಳಲ್ಲಿ ಶ್ರಮಗೌರವ ಹಾಗೂ ವೈಜ್ಞಾನಿಕ ಮನೋಭಾವನೆಗಳನ್ನು ಬೆಳೆಸಲು ಪ್ರಯತ್ನಿಸುತ್ತಾರೆ.
5) ತಮ್ಮ ವೇಷಭೂಷಣ, ನಡೆನುಡಿಯಲ್ಲಿ ಅನುಕರಣೀಯ ಮಾದರಿಯಾಗಿರುತ್ತಾರೆ.
6) ಹೆತ್ತವರು, ಪಾಲಕರು, ಸಹೋದ್ಯೋಗಿಗಳು ಮತ್ತು ಆಡಳಿತಗಾರರೊಡನೆ ಸೌಹಾರ್ದಸಂಬಂಧ ಹೊಂದಿರುತ್ತಾರೆ.
7) ವಿದ್ಯಾರ್ಥಿಗಳ ಪ್ರಗತಿ ಬಗ್ಗೆ ಪಾಲಕರಿಗೆ ಮಾಹಿತಿ ನೀಡುವುದರ ಜೊತೆಗೆ ಆ ಬಗ್ಗೆ ಪಾಲಕರ ಅಭಿಪ್ರಾಯಗಳನ್ನು ತಿಳಿದು ಮನ್ನಿಸುತ್ತಾರೆ.
8) ಪಾಲಕರ - ಶಿಕ್ಷಕರ ಪರಿಣಾಮಕಾರಿ ಸಂಘಟನೆಗಾಗಿ ಶ್ರಮಿಸಿ ತನ್ಮೂಲಕ ಶಾಲೆಯ ಕೆಲಸಗಳಲ್ಲಿ ಪಾಲಕರೂ ಪಾಲುಗೊಳ್ಳಲು ಅವಕಾಶ ಒದಗಿಸುತ್ತಾರೆ.
9) ಸಮುದಾಯದಲ್ಲಿ ಮನೆಮಾಡಿರುವ ಜಾತಿ, ಭಾಷೆ ಹಾಗೂ ಪ್ರಾದೇಶಿಕತೆಗೆ ಸಂಬಂಧಪಟ್ಟ ಸಂಕುಚಿತ ಭಾವನೆಗಳನ್ನು ಹೋಗಲಾಡಿಸಿ, ಸೌಹಾರ್ದಯುತ ವಾತಾವರಣವನ್ನು ರೂಪಿಸಲು ಪ್ರಯತ್ನಿಸುತ್ತಾರೆ.
10) ಮಹಿಳಾ ಶಿಕ್ಷಣ, ವಿಕಲಾಂಗರ ಶಿಕ್ಷಣ, ಸಮಾನತೆ ಮುಂತಾದವನ್ನು ಜನಪರಗೊಳಿಸಲು ಪ್ರಯತ್ನ ಮಾಡುವುದರ ಜೊತೆಗೆ ರಾಷ್ಟ್ರೀಯ ಐಕ್ಯತೆ,

ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತತೆಯಂಥ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದರ ಕಡೆಗೆ ಗಮನ ನೀಡುತ್ತಾರೆ.

ಈ ರೀತಿ ಶಿಕ್ಷಕರು ಶಿಕ್ಷಣವ್ಯವಸ್ಥೆಗೆ ಸಂಬಂಧ ಪಟ್ಟ ಎಲ್ಲರೊಡನೆ ಸಹಕರಿಸುತ್ತಾ, ಎಲ್ಲರ ಸಹಾಯ ಸಹಕಾರವನ್ನು ಪಡೆದು ತಮ್ಮ ಕರ್ತವ್ಯವನ್ನು ನಿರ್ವಹಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಮೇಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು. ಶಿಕ್ಷಕರು ಉತ್ತಮ ಸಹವರ್ತಿಗಳಾಗಿ ಪಾತ್ರ ನಿರ್ವಹಿಸಿದರೆ ಶಿಕ್ಷಣಕ್ಷೇತ್ರದಲ್ಲಿ ಉತ್ತಮ ಪ್ರಗತಿ ಸಾಧಿಸಬಹುದು.

ನಮ್ಮ ಇಡೀ ಶಿಕ್ಷಣವ್ಯವಸ್ಥೆಯ ಏಳುಬೀಳು ಶಿಕ್ಷಕರನ್ನು ಅವಲಂಬಿಸಿದೆ. ಶಿಕ್ಷಕರು ಮನಸ್ಸು ಮಾಡಿದರೆ ಅತ್ಯುತ್ತಮ ರೀತಿಯ ಸಮಾಜವನ್ನು, ರಾಷ್ಟ್ರವನ್ನು ನಿರ್ಮಾಣ ಮಾಡಬಹುದು, ಇಲ್ಲವೇ ನಿರ್ನಾಮ ಮಾಡಬಹುದು. ರಾಷ್ಟ್ರವನ್ನು, ಸಮಾಜವನ್ನು ಶ್ರೇಷ್ಠತೆಗೆ ಒಯ್ಯಬೇಕಾದರೆ ಶಿಕ್ಷಕರ ಪಾತ್ರವೇ ಬಹಳ ಮುಖ್ಯ ಹಾಗೂ ನಿರ್ಣಾಯಕ. ಪ್ರಪಂಚದ ಯಾವುದೇ ರಾಷ್ಟ್ರದ ಪ್ರಗತಿಯನ್ನು ರೂಪಿಸುವುದರಲ್ಲಿ ಶಿಕ್ಷಕರ ಪಾತ್ರ ಮಹತ್ತರವಾದದ್ದು ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು.

ನಾವು ನೀಡುವ ಶಿಕ್ಷಣ, ನಾಳಿನ ಉತ್ತಮ ನಾಗರಿಕರನ್ನು ರೂಪಿಸಿ, ಸಿದ್ಧಮಾಡುವ ಧ್ಯೇಯವನ್ನು ಹೊಂದಿದೆ. ಅದು ರಾಷ್ಟ್ರೀಯ ಪುನರ್ ನಿರ್ಮಾಣಕ್ಕೆ ಆಧಾರಶಿಲೆಯಂತೆ. ಸಾಮಾಜಿಕ ಬದಲಾವಣೆಗೆ ಒಂದು ಮಾಧ್ಯಮ. ಈ ಎಲ್ಲ ಅನಿಸಿಕೆಗಳು ನನಸಾಗಬೇಕಾದರೆ ಶಿಕ್ಷಕರ ಕಾರ್ಯನಿರ್ವಹಣೆ ಮೇಲ್ಮಟ್ಟದ್ದಾಗಿರಬೇಕು. ಮುಂದಿನ ಶತಮಾನದಲ್ಲಿ ಎದುರಾಗುವ ಶೈಕ್ಷಣಿಕ ಸವಾಲುಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಶಿಕ್ಷಣದ ಎಲ್ಲ ಹಂತಗಳ ಶಿಕ್ಷಕರಿಗೆ ಒದಗಿಸಬಲ್ಲ ಪ್ರಶಿಕ್ಷಣ ಇಂದಿನ ಅಗತ್ಯಗಳಲ್ಲಿ ಒಂದು. ಇಂದಿನ ಶಿಕ್ಷಣವ್ಯವಸ್ಥೆಯಲ್ಲಿ ಶಿಕ್ಷಕರು ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಬೇಕಾದರೆ ಅವರು ಅಧ್ಯಯನಶೀಲರಾಗಿರಬೇಕು; ಮುಂಗಾಣ್ಕೆಯುಳ್ಳ ಚಿಂತಕರಾಗಬೇಕು; ಸಾಧಕರಾಗಬೇಕು. "ಕಲಿಯಲು ಉತ್ಸಾಹವುಳ್ಳವರು ಮಾತ್ರ ಕಲಿಸಲು ಯೋಗ್ಯರು" ಎಂಬ ಸ್ವಾಮಿ ಪುರುಷೋತ್ತಮಾನಂದಜಿಯವರ ಮಾತುಗಳನ್ನು ಪ್ರತಿಯೊಬ್ಬರೂ ಮನನ ಮಾಡಿಕೊಳ್ಳಬೇಕು. ಶಿಕ್ಷಣಕ್ಷೇತ್ರದಲ್ಲಿ ಕಾಣುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ಕಾಣಬೇಕಾದರೆ ನಮಗೆ ಉತ್ತಮಶಿಕ್ಷಕ ಬೇಕು. ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು, ನಿಸ್ವಾರ್ಥತೆಯಿಂದ, ಕರ್ತವ್ಯನಿಷ್ಠೆಯಿಂದ, ಸಮರ್ಪಣಾ ಮನೋಭಾವದಿಂದ ಶಿಕ್ಷಕರು ತಮ್ಮ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಶಿಕ್ಷಕವೃತ್ತಿಯನ್ನು ಆರಿಸಿಕೊಳ್ಳುವವರು ಶಿಕ್ಷಕರ ಜವಾಬ್ದಾರಿಯನ್ನು ಅರಿತು, ಕರ್ತವ್ಯ ನಿರ್ವಹಿಸುವ ಮನೋಭಾವವುಳ್ಳವರಾಗಿರಬೇಕು. ಸಮಾಜದ ದಾರಿದೀಪಗಳಂತೆ ಬೆಳೆಯಬೇಕು. ಅಧ್ಯಾಪನ, ಅಧ್ಯಯನ ಜೊತೆಗೂಡಿದರೆ ಶಿಕ್ಷಕರು ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬಹುದು ಎಂಬುದನ್ನು ಮನಗಾಣಬೇಕು.

ಕರ್ನಾಟಕದಲ್ಲಿ ಸಾಕ್ಷರತಾ ಆಂದೋಲನ

ಡಾ. ಟಿ. ಕೆ. ಜಯಲಕ್ಷ್ಮಿ

ಅನಕ್ಷರಸ್ಥರು ದೇಶಕ್ಕೆ ತೊಡಕಾಗುವರು ಹಾಗೂ ವೈಯಕ್ತಿಕ ಪ್ರಗತಿ / ಬೆಳವಣಿಗೆ ಕುಂಠಿತವಾಗಲು ಕಾರಣರಾಗುವರು ಎಂಬುದು ತಿಳಿದ ವಿಷಯ. ಸ್ವಾತಂತ್ರ್ಯಾನಂತರ ದೇಶದಲ್ಲಿ ಅನೇಕ ರೀತಿ ಯೋಜನೆಗಳನ್ನು ಹಾಕಿಕೊಂಡು ಸಾಕ್ಷರತಾ ಪ್ರಯತ್ನಗಳು ಸಾಕಷ್ಟು ನಡೆದಿವೆ. ಬೇರೆ ಬೇರೆ ಹೆಸರಿನಲ್ಲಿ ಈ ಯೋಜನೆಗಳನ್ನು ಮುಂದುವರಿಸಿದ್ದಾರೆ. ಇವುಗಳಲ್ಲಿ ಕೇಂದ್ರ-ರಾಜ್ಯಗಳ ಪರಸ್ಪರ ಒಡಂಬಡಿಕೆಯಿಂದ, ಓ.ಬಿ.ಬಿ ಅಥವಾ ಆಪರೇಷನ್ ಬ್ಲಾಕ್ ಬೋರ್ಡ್, ವಯಸ್ಕರ ಶಿಕ್ಷಣ, ಸಾಕ್ಷರತಾ ತರಗತಿಗಳು, ಅನೌಪಚಾರಿಕ ಶಿಕ್ಷಣ ಇತ್ಯಾದಿ ಮೊದಲಿಗೆ ಜಾರಿಗೆ ಬಂದವು. ಇತ್ತೀಚೆಗೆ ವಿಶ್ವಬ್ಯಾಂಕ್ ಹಣದ ನೆರವಿನಿಂದ ಡಿ.ಪಿ.ಇ.ಪಿ. ಯೋಜನೆಯು ತೀವ್ರ ಹೆಜ್ಜೆಯಿಡುತ್ತಿದೆ. ಸಾಕ್ಷರತೆಯನ್ನು ಪಡೆದ ಹೊರತು ನಮ್ಮ ದೇಶ ಮುಂದುವರಿಯುವುದಿಲ್ಲ. ಅದರಲ್ಲೂ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಕೊಡಬೇಕಾಗಿರುವುದು ಅನಿವಾರ್ಯ ಮತ್ತು ಕಡ್ಡಾಯವಾಗಲೇಬೇಕು. ಕರ್ನಾಟಕ ಉಳಿದೆಲ್ಲ ರಾಜ್ಯಗಳಿಗಿಂತ ಮಧ್ಯವರ್ತಿಯಾಗಿದೆ. ಕೇರಳ, ತಮಿಳುನಾಡು, ಮಹಾರಾಷ್ಟ್ರಗಳು ಸಾಕ್ಷರತೆಯಲ್ಲಿ ಮುಂದಿದ್ದರೆ, ಕರ್ನಾಟಕದಲ್ಲಿ ಶೇ.44.4 ರಷ್ಟು ಮಾತ್ರ ಮಹಿಳಾ ಸಾಕ್ಷರರು 7-8ನೇ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿದ್ದರು, ಹಾಗಾಗಿ 8ನೇ ಪಂಚವಾರ್ಷಿಕ ಯೋಜನೆಯಲ್ಲಿಂದ ಮೊದಲಾಗಿ, ಕರ್ನಾಟಕದಲ್ಲಿ ಹಿಂದೆಂದೂ ಇಲ್ಲದಷ್ಟು ಜಾಗ್ರತೆ ಸಾಕ್ಷರತೆಯ ಬಗ್ಗೆ ಮೂಡಿ ಬಂದಿತು. ಬೀದರ್, ಗುಲ್ಬರ್ಗ, ಬಿಜಾಪುರ ಮತ್ತು ಬೆಳಗಾಂ, ಮಂಡ್ಯ ಜಿಲ್ಲೆಗಳಲ್ಲಿ ಸಾಕ್ಷರತೆ ರಾಜ್ಯದ ಸರಾಸರಿಗೂ ಕಮ್ಮಿ ಇದ್ದು, ಈ ಪ್ರದೇಶಗಳಲ್ಲಿ ಹಾಗೂ ಎಲ್ಲ ಜಿಲ್ಲೆಗಳಲ್ಲೂ ಕ್ರಮವಾಗಿ ಸಾಕ್ಷರತಾ ಆಂದೋಲನವನ್ನು ಸರ್ಕಾರ ನಡೆಸುತ್ತಿದೆ.

1987-88 ರಿಂದ ಆರಂಭವಾದ ಈ ಕಾರ್ಯಕ್ರಮ ಈ ದಶಕದಲ್ಲಿ ಸಾಕಷ್ಟು ಜಾಗ್ರತೆಯನ್ನು ತಂದಿದೆ ಎಂದರೆ ತಪ್ಪಾಗಲಾರದು. ಕೆಳಕಂಡ ಪಟ್ಟಿ, ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿನ ಶೇಕಡ ಸಾಕ್ಷರತಾ ಅಂಕಿ-ಅಂಶಗಳನ್ನು (1991) ಗಮನಕ್ಕೆ ತರುವುದು :

ಶೇಕಡಾವಾರು ಕರ್ನಾಟಕ ಪ್ರಾಂತಗಳಲ್ಲಿನ ಸಾಕ್ಷರತಾ ಮಾಹಿತಿ ಪಟ್ಟಿ: (1991)

ಜಿಲ್ಲೆಗಳು	ಒಟ್ಟು	ಗಂಡಸರು	ಹೆಂಗಸರು
ಬೆಂಗಳೂರು ನಗರ ಪ್ರದೇಶ	76.27	82.91	68.81
ಬೆಂಗಳೂರು ಗ್ರಾಮಾಂತರ ಪ್ರದೇಶ	50.17	61.51	38.15
ಬೆಳಗಾವಿ	53.00	66.65	31.97
ಬಳ್ಳಾರಿ	47.57	58.71	31.97

ಬೀದರ್	45.11	58.97	30.53
ಬಿಜಾಪುರ	55.13	69.69	40.06
ಚಿತ್ರದುರ್ಗ	55.48	66.88	43.36
ಚಿಕ್ಕಮಗಳೂರು	61.05	70.56	51.31
ದಕ್ಷಿಣ ಕನ್ನಡ	75.86	84.40	67.96
ಧಾರವಾಡ	58.68	71.37	45.20
ಗುಲ್ಬರ್ಗ	38.54	52.08	24.49
ಹಾಸನ	56.85	68.87	44.90
ಕೊಡಗು	68.35	73.35	61.22
ಕೋಲಾರ	50.45	62.69	37.75
ಮಂಡ್ಯ	48.15	59.18	36.70
ಮೈಸೂರು	47.32	56.23	37.95
ರಾಯಚೂರು	35.96	49.53	22.15
ಶಿವಮೊಗ್ಗ	61.53	71.24	51.42
ತುಮಕೂರು	54.48	66.49	41.93
ಉತ್ತರ ಕನ್ನಡ	66.73	76.39	56.77

1991ರ ಆಚೆ ತೆಗೆದಿರುವ ಮಾಹಿತಿ ಸಂಗ್ರಹಣೆಗಳ ಪ್ರಕಾರ 8-10 ಪ್ರಾಂತಗಳಲ್ ಸಾಕ್ಷರತಾ ಅಂಕಿ-ಅಂಶಗಳು ಬಹಳಷ್ಟು ಸುಧಾರಿಸಿವೆ. ದಕ್ಷಿಣ ಕನ್ನಡ, ಬೆಂಗಳೂರು, ಧಾರವಾ ಬೆಳಗಾಂ, ಶಿವಮೊಗ್ಗ, ಚಿತ್ರದುರ್ಗ, ಮೈಸೂರುಗಳಲ್ಲಿ ಬಹಳಷ್ಟು ಮುಂದುವರಿದು ನ ಸಾಕ್ಷರರ ಕಲಿವೂ ಮುಂದುವರಿದಿದೆ. ಉಳಿದ ಜಿಲ್ಲೆಗಳಲ್ಲೂ 1991 ಮಾಹಿತಿಗಿಂತ ಸುಮಾರ ಪ್ರಗತಿ ಸಾಧಿಸಿದೆ. ಇದೀಗ ಸರ್ಕಾರ ಶೇಕಡಾವಾರು ಮಾಹಿತಿಗಳನ್ನು ಹೊರಡಿಸಲಿದ್ದಾರೆ.

ಅಂತೆಯೇ ಸಾಕ್ಷರತಾ ಆಂದೋಲನವನ್ನು ಕ್ರಮವಾಗಿ ನಿಯೋಜಿಸಿ, ನಿಯಂತ್ರಿಸಿ ಸಾಗುವಂತೆ ಮಾಡಲು ಕರ್ನಾಟಕ ಸರ್ಕಾರ ಅದಕ್ಕೆ ಪ್ರತ್ಯೇಕವಾದ ಡೈರೆಕ್ಟರೇಟನ್ ನಿರ್ಮಿಸಿದ್ದಾರೆ. ಈ ಅಧೀಕ್ಷಕರು ಮತ್ತು ಅಲ್ಲಿನ ಬಳಗ ನಿರಂತರವಾಗಿ ಮಾಹಿತಿ ಸಂಗ್ರಹಣ ಪಟ್ಟಿಗಳನ್ನು ತಯಾರಿಸಿ, ಒದಗಿಸುವುದು. ಪ್ರಾಂತೀಯವಾಗಿ ಪೋಸ್ಟರ್ಸ್‌ಗಳನ್ನು ತಯಾರಿ ಹರಡುವುದು. ಹಳ್ಳಿ, ಹಳ್ಳಿಯ ಜನತೆಗೆ ಹುರಿದುಂಬಿಸಿ ಜಾಗ್ರತೆಯನ್ನು ಮೂಡಿಸಲು ಜಾಥಾ ಮೆರವಣಿಗೆಗಳಿಂದಲೂ, ಬಯಲಾಟ, ರಸ್ತೆ ನಾಟಕಗಳು, ಹಾಡಿನ ತಂಡಗಳನ್ನು ವ್ಯವಸ್ಥಿ ರೀತಿಯಲ್ಲಿ ತಯಾರಿಸಿ ಆಯಾಯ ಪ್ರಾಂತ್ಯಗಳಲ್ಲಿ ಸಾಕ್ಷರತೆಯ ಕಡೆ ಜನತೆಯನ ಎಚ್ಚರಿಸುತ್ತಾರೆ. ನಂತರ ಪಾಠೋಪಕರಣಗಳ ಬಳಕೆ, ಸ್ವಯಂಸೇವಕರುಗಳು, ಮಾಸ್ಟರ ಟ್ರೈನರ್ಸ್‌ಗಳ ಹೊಂದಿಸುವಿಕೆ ಮತ್ತು ಅವರುಗಳಿಗೆ ಸೂಕ್ತ ತರಬೇತಿ-ಇವೆಲ್ಲವನ್ನು ಏಕಕಾಲದಲ್ ಮಾಡುತ್ತಾ ಅವನ್ನು ಅನುಷ್ಠಾನಕ್ಕೆ ತಂದು ಸಾಕ್ಷರರನ್ನು ಹೆಚ್ಚಿಸುತ್ತಾ ಬರುತ್ತಿದ್ದಾರೆ. ಸಾಕ್ಷರತಾ ಕಾರ್ಯಕ್ರಮವನ್ನು ಸೂಕ್ತವಾದ 4-5 ಹಂತಗಳಲ್ಲಿ ಜೋಡಿಸಿದ್ದಾರೆ. ಮೊದಲಿಗೆ ವಾತಾವರಣ

ರ್ಮಾಣ, ಮಾಸ್ಟರ್ ಟ್ರೈನರ್ ಮತ್ತು ಆರ್.ಪಿ. (ಮಾರ್ಗದರ್ಶಕರು)ಗಳಿಗೆ ಟ್ರೈನಿಂಗ್, ಂತರ ಸ್ವಯಂಸೇವಕ ಶಿಕ್ಷಕರ ಆಯ್ಕೆ ತರಬೇತಿ, ಒಂದು ದಿನದ ಮಾಹಿತಿ ಸಂಗ್ರಹಣೆ, ಕಲಿಕೆ ೇಂದ್ರಗಳ ವ್ಯವಸ್ಥೆ ಮತ್ತು ಕಲಿಸುವಿಕೆ.

ಆರುವರ್ಷದಿಂದ ೬೫ ವರ್ಷಗಳೊಳಗಿನ ಎಲ್ಲ ವ್ಯಕ್ತಿಗಳೂ, ಅದರಲ್ಲೂ ಹೆಣ್ಣು ಮಕ್ಕಳು ಾಲ್ಗೊಳ್ಳುವಂತೆ ಹುರಿದುಂಬಿಸುವ ಯೋಜನೆ ಸರ್ಕಾರದ್ದಾಗಿದೆ. ಈ ಕಾರ್ಯಗಳನ್ನು ಬಹಳಷ್ಟು ೈಜ್ಞಾನಿಕವಾಗಿ ಜೋಡಿಸಿದ್ದಾರೆ. ಆದರೂ ಈ ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗಿರುವ ಈ ೋಜನೆಯಲ್ಲಿ ಕುಂದುಕೊರತೆಗಳು, ಸಮಸ್ಯೆಗಳು ಇಲ್ಲದಿಲ್ಲ. ಆದರೂ ದೃಢಸಂಕಲ್ಪದಿಂದ ಲಸ ಸಾಗಿದೆ, ಸಾಗುತ್ತಿದೆ; ಪ್ರತಿ ಮೌಲ್ಯಮಾಪನದಿಂದ ದೊರೆತ ಹಿಮ್ಮಾಹಿತಿ (Feed ack)ನಿಂದ, ಕಾರ್ಯವನ್ನು ಉತ್ತಮಪಡಿಸುವ ನಿರಂತರ ಪ್ರಯತ್ನವೂ ನಡೆಯುತ್ತಿದೆ. ಎಲ್ಲೆಲ್ಲಿ ರೀಕ್ಷಿತ ಪ್ರಮಾಣದಲ್ಲಿ ಸಾಕ್ಷರತೆ ಉಂಟಾಗಲಿಲ್ಲವೋ ಅಲ್ಲೆಲ್ಲಾ ಅದಕ್ಕೆ ಮುಖ್ಯ ಕಾರಣ, ಲವು ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಕರು ತಳೆದಿರುವ ಮನೋಭಾವ ಎಂದು ಸಮೀಕ್ಷೆಗಳ ಮೂಲಕ ತಿಳಿದು ಬಂದಾಗ ಸಾಕಷ್ಟು ಮನಸ್ಸಿಗೆ ನೋವಾಗುತ್ತದೆ. ದೇಶದ ಶಿಕ್ಷಣದಲ್ಲಿ ಾಧನೆಯಾಗಬೇಕಾದರೆ ಪ್ರತಿ ಪ್ರಜೆಯೂ ಜಾಗೃತರಾಗಿ ಶಿಕ್ಷಕರನ್ನು, ಶಿಕ್ಷಣಾಧಿಕಾರಿಗಳನ್ನು ಪ್ರಶ್ನಿಸುವಾವಂತಾಗಬೇಕು ಹಾಗೂ ಅವರಿಗೆ ಸರಿಯಾದ ರೀತಿ ಸಹಕಾರ ಕೊಟ್ಟಾಗ ಮಾತ್ರ ದು ಸಾಧ್ಯ. ಇದರ ಕಡೆ ಸರ್ಕಾರದ ಗಮನ ಹರಿದಿದೆ. ಕೇವಲ ಸರ್ಕಾರವೇ ಮಾಡಲು ಲವೊಂದು ಸಲ ಸಾಧ್ಯವಿಲ್ಲ. ಜನಗಳಲ್ಲಿ ಸ್ಪಂದನವಾಗ ಬೇಕು. ದಿಕ್ಕು ತಪ್ಪದಂತೆ ಡಂಬಡಿಸಬೇಕು. ಈ ದೃಷ್ಟಿಯಲ್ಲಿ ಅನೇಕ ಸಮುದಾಯಗಳು, ಸಂಘಗಳು ಮುಂದೆ ಬಂದಿವೆ. ನೇಕ ಖಾಸಗಿ ಸಂಸ್ಥೆಗಳು ಸಾಕ್ಷರತೆಯನ್ನು ಹೆಚ್ಚಿಸುವಲ್ಲಿ ಕೆಲಸ ಮಾಡುತ್ತಿವೆ. ಆದರಲ್ಲಿ ಮುಖ್ಯವಾಗಿ ಅವೇಕ್ (Awake), ಮೈರಾಡಾ (Myrada), ಮತ್ತು ಏಕ್ಯ (Aika)ಹೆಚ್ಚು ್ರಮಪಟ್ಟಿವೆ. ಇದು ಸಂತೋಷದ ಸಮಾಚಾರ. ಶ್ರಮ ಫಲವನ್ನು ತಂದುಕೊಟ್ಟಿದೆ. 1993-4 ರಲ್ಲಿ ಸಾಕ್ಷರತಾ ಕಾರ್ಯಕ್ರಮಗಳ ಒಂದು ಮೌಲ್ಯಮಾಪನ ಕಾರ್ಯವನ್ನು ಕೆಲವು ಆಯ್ದ ಿಲ್ಲೆಗಳಲ್ಲಿ ಮಾಡಲಾಗಿದೆ. ಅದರ ಆಧಾರದ ಮೇಲೆ ಹೇಳುವುದಾದರೆ ಕೆಲವೊಂದು ಅಂಶಗಳು ಪ್ರಭಾವ ಬೀರಿವೆ. ಅಂತಹ ಮುಖ್ಯಾಂಶಗಳೆಂದರೆ, ವಾತಾವರಣ ನಿರ್ಮಾಣ, ಮನಮುಟ್ಟುವ ಳ್ಳೆಯ ಪ್ರಚಾರ ಕಾರ್ಯಗಳು, ಪೋಸ್ಟರ್‌ಗಳ ತಯಾರಿಕೆ, ಸಾಕ್ಷರತಾ ಕಾರ್ಯಗಳನ್ನು ೋಡಿಸಿರುವಂತೆ ಸಾಕ್ಷರತಾ ಕಾರ್ಯಕ್ರಮದ ಹೆಸರುಗಳು. ಉದಾ: ಅಕ್ಷರ-ಆರೋಗ್ಯ, ಅಕ್ಷರ-್ಯೋತಿ ಇತ್ಯಾದಿ. ಸಾಕ್ಷರರಾಗಲು ಕನ್ನಡ-ಗಣಿತ ವಿಷಯಾಂಶಗಳನ್ನು ಸುಲಭವಾಗಿ ೋಡಿಸಿರುವ ಪಠ್ಯಪುಸ್ತಕಗಳ ತಯಾರಿಕೆ. ತರಬೇತಿ ಕಾರ್ಯಕ್ರಮ ಮೂರು ಹಂತಗಳಲ್ಲಿ ಡೆಯುವುದು.

ಸಾಕ್ಷರತಾ ಆಂದೋಲನಕ್ಕಾಗಿ ಪಾಡುಪಟ್ಟು ಶ್ರಮಿಸುತ್ತಿರುವವರಿಗೆ ನಿಜಕ್ಕು ನಾವೆಲ್ಲ ುಣಿಗಳಾಗಬೇಕು. ಇದರಿಂದ ಉತ್ತಮ ಜಾಗೃತೆಯನ್ನು ಸಾಕ್ಷರತೆಯ ಬಗ್ಗೆ ಒಂದು ಂಬಿಕೆಯನ್ನು ತಂದುಕೊಟ್ಟಿದೆ. ಈ ಮನೋಭಾವ ಬದಲಾವಣೆ ಕೇವಲ ಮೊದಲ ಂತವಾದರೂ ಇದು ಬಹಳ ಅಗತ್ಯ. ಇನ್ನು ಸಾಕ್ಷರತೆಗಾಗಿ ಹಮ್ಮಿಕೊಂಡಿರುವ .ಪಿ.ಸಿ.ಯಲ್. ಕ್ರಮ ಬಹಳ ಫಲಕಾರಿಯಾಗಿದೆ. ಆದರೆ ಇದಕ್ಕೆ ಕೊಡುತ್ತಿರುವ ತರಬೇತಿ

ಸಾಲದು. ಶಿಕ್ಷಕರು ಸೇವಾ ಮನೋಭಾವ ಹೊಂದಿದ್ದೇ ಆದರೆ ಅವರು ಸ್ವಲ್ಪ ಮನ
ಮಾಡಿದರೆ ನಮ್ಮ ರಾಜ್ಯವು ಕೇರಳವನ್ನು ಮೀರಿಸುವುದರಲ್ಲಿ ಸಂದೇಹವೇ ಇಲ್ಲ. ಹೀಗೆ
ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ಬೆಳೆಯಲು ಸಾಧ್ಯ.

ಸೇವಾ ಮನೋಭಾವದಿಂದ ಕೆಲಸಮಾಡುವ ಸಂಸ್ಕೃತಿಗಳನ್ನು ನಾವು ಕಲಿತದ್ದೇ ಆ
ರಾಜ್ಯದಲ್ಲಿಸಾಕ್ಷರತೆ ಲಭಿಸುವುದರಲ್ಲಿ ಸಂದೇಹವೇ ಇಲ್ಲ. ನಾವು ಸರಿಯಾದ ರೀತಿ ಬದಲಾ
ಹೊಂದಲು ಕಲಿಯಬೇಕೆಂಬುದು ಈಗಿನ ಅಗತ್ಯ ಜನತೆಗೆ ಉದಾತ್ತ ಮನೋಭಾವ
ಬೆಳೆಯುವಂತಾಗಲಿ. ಸರ್ಕಾರದ ಒಳ್ಳೆಯ ಯೋಜನೆಗಳು ಫಲಪ್ರದವಾಗಲಿ. ಅದರಲ್ಲಿ ನಾ
ತೊಡಗಿಸಿಕೊಳ್ಳೋಣ. ಪ್ರತಿ ಒಬ್ಬರೂ ಮನಸ್ಸು ಮಾಡಿದರೆ ಅಸಾಧ್ಯವಾದದ್ದೇ ಇರುವುದಿ
ಚಿಂತಿಸಿ, ದುಡಿದು, ಹೆಮ್ಮೆ ತರುವಂತಹ ಶಿಕ್ಷಕರಿಗೆ ಬದಲಾಗಿ ಕಾರ್ಯನಿರ್ವಹಿಸುವಿಕೆಯ
ಉದಾಸೀನ, ಅಸಹಕಾರ ಮತ್ತು ಯಾವುದೇ ಸರ್ಕಾರದ ಯೋಜನೆಯನ್ನು ಟೀಕಿಸ
ಮನೋಭಾವ ತಳೆದಿರುವ ಶಿಕ್ಷಕರು ಅಲ್ಲಲ್ಲೇ ಹೆಚ್ಚಾಗುತ್ತಿರುವುದು ಅನಪೇಕ್ಷಿತ. ಇದ
ಖಂಡಿಸಿ ಮನೋಭಾವನೆಗಳನ್ನು ಶಿಕ್ಷಕರಲ್ಲಿ ಮೂಡಿಸುವ ಜವಾಬ್ದಾರಿ ಈಗಿನ ಅಧಿ
ವರ್ಗದವರಿಗೂ ಪ್ರಜೆಗಳಿಗೂ ಸೇರಿದೆ. ದಕ್ಷತೆಯಿಂದ, ಹೆಮ್ಮೆಯಿಂದ ದುಡಿಯುವ ಶಿಕ್ಷ
ಹೆಚ್ಚಾಗಲಿ, ಚಿರಂಜೀವಿಗಳಾಗಲಿ ಎಂದು ಹಾರೈಕೆ.

ಶಿಕ್ಷಣದಲ್ಲಿ ತರಬೇತಿಯ ಮಹತ್ವ

ಎಸ್. ಎಲ್. ಮಂಜಪ್ಪ

ಒಂದು ದೇಶದ ಅಭಿವೃದ್ಧಿ ಹಾಗೂ ಭವಿಷ್ಯವು ಆ ದೇಶದಲ್ಲಿನ ಶಿಕ್ಷಣಕ್ರಮವನ್ನು ಅವಲಂಬಿಸಿರುತ್ತದೆ. ಅಂತೆಯೆ ವ್ಯಕ್ತಿಗಳ ನೈತಿಕ ಚಾರಿತ್ರ್ಯ ನಿರ್ಮಾಣ ಮಾಡುವುದು ಶಿಕ್ಷಣದ ಒಂದು ಕ್ರಮ. ವ್ಯಕ್ತಿಗಳಲ್ಲಿನ ಅಮೂರ್ತರೂಪವನ್ನು ಶಿಕ್ಷಣದ ಮೂಲಕ ಆ ವ್ಯಕ್ತಿಯನ್ನು ಮೂರ್ತರೂಪಕ್ಕೆ ತರುವುದೇ ಶಿಕ್ಷಣ. ಈ ಶಿಕ್ಷಣಕ್ರಮದಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾದದ್ದು. ತಿಳಿದ ವಿಷಯದ ಮೂಲಕ ತಿಳಿಯದೆ ಇರುವ ವಿಷಯ ದತ್ತ ಕಲಿಯುವವರನ್ನು ಕೊಂಡೊಯ್ದು ಕಲಿಕೆಗೆ ಪ್ರೇರಣೆ ನೀಡಿ, ಕಲಿಯುವವರನ್ನು ಅನ್ವೇಷಣೆ ಯತ್ತ ಸಾಗಿಸಿ ಅವರಲ್ಲಿನ ಪ್ರತಿಭೆಗೆ ಸೂಕ್ತಚಾಲನೆ ನೀಡುವುದು ಶಿಕ್ಷಕರ ಕರ್ತವ್ಯ.

ಶಿಕ್ಷಣದ ಗುರಿ, ಉದ್ದೇಶಗಳು

ಭಾರತೀಯ ಸಮಾಜಕ್ಕೆ ಎಂತಹ ಶಿಕ್ಷಣ ಬೇಕು ಎಂಬುವ ಬಗ್ಗೆ ವಿಶಾಲವಾದ ಅರ್ಥದಲ್ಲಿ ಸಂವಿಧಾನದಲ್ಲಿ ನಿರೂಪಿಸಲ್ಪಟ್ಟ ಅಂಶಗಳನ್ನು ಗಮನದಲ್ಲಿಟ್ಟುಕೊಂಡೆ ಹಲವಾರು ಶಿಕ್ಷಣಆಯೋಗಗಳು ವಿವಿಧ ವಿಷಯಗಳಿಗೆ ಒತ್ತುನೀಡಿದ್ದನ್ನು ನೋಡಬಹುದು. 1964-66 ಶಿಕ್ಷಣಆಯೋಗವು ಬಹಳಮುಖ್ಯವಾಗಿ "ಶಿಕ್ಷಣವು ಉತ್ಪಾದನೆಯನ್ನು ಹೆಚ್ಚಿಸುವುದು." ಅಲ್ಲದೆ ಈ ರೀತಿ ಶಿಕ್ಷಣಕ್ರಮದಿಂದ "ಸಾಮಾಜಿಕ ಮತ್ತು ರಾಷ್ಟ್ರೀಯ ಐಕ್ಯತೆಯನ್ನು, ಸಾಮಾಜಿಕ ಮತ್ತು ನೈತಿಕಮೌಲ್ಯಗಳನ್ನು" ಹೆಚ್ಚಿಸುವುದೆಂದು; "ರಾಷ್ಟ್ರೀಯ ಪ್ರಗತಿ, ಸಮಾನ ನಾಗರಿಕ ಪೌರತ್ವ ಮತ್ತು ಸಂಸ್ಕೃತಿಯನ್ನು ಬಲಗೊಳಿಸಿ ರಾಷ್ಟ್ರೀಯ ಐಕ್ಯತೆಯನ್ನು ಬೆಳೆಸುವಲ್ಲಿ ಶಿಕ್ಷಣವು ಪ್ರಧಾನ ಪಾತ್ರ ವಹಿಸಬೇಕೆಂಬ ಬಗ್ಗೆ ವಿಜ್ಞಾನ ಮತ್ತು ತಂತ್ರಜ್ಞಾನ ಜನರ ಜೀವನ ವಿಧಾನದೊಂದಿಗೆ ಶಿಕ್ಷಣವನ್ನು ಸಮ್ಮಿಳಿನಗೊಳಿಸಿ ಆ ಮೂಲಕ ಶಿಕ್ಷಣದ ಗುಣಮಟ್ಟವನ್ನು ಎಲ್ಲಾ ಹಂತದಲ್ಲೂ ಸುಧಾರಿಸಿ ರಾಷ್ಟ್ರೀಯ ಐಕ್ಯತೆ ಮತ್ತು ಅಭ್ಯುದಯದತ್ತ ತೆಗೆದುಕೊಂಡು ಹೋಗುವ ಗುರಿಯನ್ನು ಇಟ್ಟುಕೊಂಡಿತ್ತು. ಅನಂತರ 1986ರ ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ "ಸಮಾಜವಾದ, ಜಾತ್ಯಾತೀತತೆ, ಪ್ರಜಾಪ್ರಭುತ್ವ" ಇವುಗಳು ಸಾಕಾರಗೊಳ್ಳುವ ಗುರಿಯನ್ನು ಹೊಂದಿದ್ದು ಆ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸಿ ಆ ಸಂಪನ್ಮೂಲವನ್ನು ರಾಷ್ಟ್ರದ ಕ್ರಿಯಾತ್ಮಕ ಕೆಲಸದಲ್ಲಿ ತೊಡಗುವಂತೆ ಮಾಡುವುದು. ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಹಿನ್ನಲೆಯಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ದೃಷ್ಟಿಯಿಂದ ವಿದ್ಯಾರ್ಥಿಗಳ ಜಾತಿ, ಮತ, ಸ್ಥಳ ಅಥವಾ ಲಿಂಗಭೇದಗಳನ್ನು ಮರೆತು ಉತ್ತಮಶಿಕ್ಷಣ ನೀಡುವುದು. ಈ ಶಿಕ್ಷಣದ ಮೂಲಕ ಭಾರತೀಯ ಸಂಸ್ಕೃತಿಯ ಪರಂಪರೆ ಮತ್ತು ಮೌಲ್ಯಗಳನ್ನು ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆ, ಲಿಂಗ ಸಮಾನತೆ, ಪರಿಸರ

ಸಂರಕ್ಷಣೆ, ಸಾಮಾಜಿಕ ಮೂಢನಂಬಿಕೆ ಕಂದಾಚಾರಗಳನ್ನು ತೊಡೆದು ಹಾಕುವುದು. ಕುಟುಂಬದ ಪರಿಕಲ್ಪನೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಗುರಿಗಳ ಹಿನ್ನೆಲೆ ಪಠ್ಯಕ್ರಮಗಳನ್ನು ರೂಪಿಸಿ ಉತ್ತಮಶಿಕ್ಷಣ ನೀಡಿ ರಾಷ್ಟ್ರದ ಅಭಿವೃದ್ಧಿಗೆ ಮ ಸಂಪನ್ಮೂಲವನ್ನು ಬಳಸಿಕೊಳ್ಳುವುದು ರಾಷ್ಟ್ರೀಯ ಶಿಕ್ಷಣನೀತಿಯಲ್ಲಿ ಪ್ರತಿಪಾದಿತ ಪ್ರಧಾನವಾದ ಅಂಶ.

ಶಿಕ್ಷಣದಲ್ಲಿ ಶಿಕ್ಷಕನ ಪಾತ್ರ

"ಮಕ್ಕಳು ದೇವರಲೋಕದ ತೋಟದ ಸಂದರ ಪುಷ್ಪಗಳು"- ಈ ಮಾತನ್ನು ಶಿಕ್ಷಣತಜ್ಞನಾದ ಫ್ರೋಬೆಲ್ ಹೇಳುತ್ತಾನೆ. ಎಳೆಯ ಮಕ್ಕಳು ದೇವರಿಗೆ ಸಮಾನ. ಮನಸ್ಸಿನಲ್ಲಿ ಯಾವುದೇ ರೀತಿಯ ದ್ವೇಷ, ಅಸೂಯೆಗಳಿಗೆ ಅವಕಾಶವಿರುವುದಿಲ್ಲ. ಎ ಮಕ್ಕಳು ಚೈತನ್ಯಶೀಲರಾಗಿ ಕಲಿಯಲು ಮುಕ್ತ ಅವಕಾಶವಿರಬೇಕು. ಶಿಕ್ಷಕರಾದವರು ತನ್ನ ಕಾಯಕನಿಷ್ಠೆಯೊಂದಿಗೆ ಮಕ್ಕಳ ಮನಸ್ಸನ್ನು ಅರಿತು ಬೋಧಿಸುವ ಕೌ ಪಡೆದಿರಬೇಕು.

`ಬೋಧನೆ' ಎನ್ನುವುದು ಒಂದು ಸಂಕೀರ್ಣ ಕೌಶಲ. ಬೋಧನೆ ಒಂದು ಕಲೆ. ಕಲೆಯನ್ನು ಕರಗತ ಮಾಡಿಕೊಳ್ಳಬೇಕಾದರೆ ಪೂರ್ವಪರಿಶ್ರಮ ಬೇಕಾಗುತ್ತದೆ. ಬೋಧನೆ ಒಂದು ನಿರ್ದಿಷ್ಟ, ಉದ್ದೇಶಪೂರ್ವಕ ಹಾಗೂ ಪ್ರಜ್ಞಾಪೂರ್ವಕ ಕ್ರಿಯೆ. ಮಾಹಿತಿಗ ಯಾಂತ್ರಿಕವಾಗಿ ರವಾನಿಸುವುದು ಬೋಧನೆಯಲ್ಲ; ವಿಷಯಗಳನ್ನು ಯಾಂತ್ರಿಕ ಸಂಗ್ರಹಿಸುವುದು ಕಲಿಕೆಯೂ ಅಲ್ಲ. ಬೋಧನೆ ಒಂದು ಮನೋವೈಜ್ಞಾನಿಕ ಕ್ರಿಯೆ. ಮ ಅಭಿರುಚಿಯನ್ನು ಅರಿತು ಬೋಧಿಸಬೇಕಾದರೆ, ಬೋಧಿಸುವ ವ್ಯಕ್ತಿಗೆ ಶಿಕ್ಷಣದ ತತ್ವಗ ಕಲಿಕೆಯ ನಿಯಮಗಳ ಅರಿವಿರಬೇಕು. ಈ ಅರಿವು ಬರಬೇಕಾದರೆ ಶಿಕ್ಷಕರಾದ ಶಿಕ್ಷಣಮನೋವಿಜ್ಞಾನ ಹಾಗೂ ಶಿಕ್ಷಣತತ್ವಗಳನ್ನು ಅಧ್ಯಯನ ಮಾಡಬೇಕು. ಕೇ ಅಧ್ಯಯನದಿಂದ ಬೋಧನಾ ಕೌಶಲಗಳು ಲಭಿಸುವುದಿಲ್ಲ. ಶಿಕ್ಷಕರಾಗುವವರು ಶಿ ಮತ್ತು ಬೋಧನೆಯ ಎಲ್ಲಾ ಹಂತಗಳನ್ನು ಪರಿಚಯಿಸಿಕೊಳ್ಳುವ ತರಬೇತಿ ಪಡೆಯಬೇ ನಿರ್ದಿಷ್ಟವಾದ ತರಬೇತಿ ಪಡೆದಾಗ ಮಾತ್ರ ಬೋಧನಾ ಕಾರ್ಯವನ್ನು ನಿರ್ವಹಿಸಬೇಕೆಂಬ ಅರಿವು ಬರುತ್ತದೆ. ಹೇಗೆಂದರೆ ಬೋಧನೆ ಎಂಬುದು ಒ ಮನೋವೈಜ್ಞಾನಿಕ ಕ್ರಿಯೆ. ಮನೋವೈಜ್ಞಾನಿಕ ತತ್ವಗಳು ಮತ್ತು ಕಲಿಕೆಯ ನಿಯಮಗ ಆಧರಿಸಿ ಬೋಧನಾಕಾರ್ಯವನ್ನು ಮಾಡಬೇಕು. ಆಗ ನಾವು ಏನು ಬೋಧಿಸಿದ್ದೆ ಮಕ್ಕಳು ಏನನ್ನು ಕಲಿತಿದ್ದಾರೆ ಎಂಬುದು ತಿಳಿಯುತ್ತದೆ. ನಿರ್ದಿಷ್ಟ ಉದ್ದೇಶಗಳಿ ಗುಣವಾಗಿ ನಿರೀಕ್ಷಿತ ಕಲಿವಿನ ಫಲ ಬಂದಿದೆಯೆ ಎಂಬುದು ಮುಖ್ಯ. ಮಕ್ಕಳ ಜ್ಞಾನವಲಯ, ಭಾವನಾವಲಯ ಹಾಗೂ ಮನೋಚಾಲಕವಲಯಗಳಲ್ಲಿ ನಿದಿ ಬದಲಾವಣೆ ಮತ್ತು ಪ್ರಗತಿಯನ್ನು ಸಾಧಿಸಲು ಜ್ಞಾನ, ಕೌಶಲ್ಯ, ಮನೋಭಾವ ಹಾ ಮೌಲ್ಯಗಳ ಬೆಳವಣಿಗೆಗಳನ್ನು ನಿರೀಕ್ಷಿಸಿ ಬೋಧಿಸಬೇಕು. ಆಗ ನಿಜವಾದ ಬೋ ಯಾಗುತ್ತದೆ. ಬೋಧನೆಯ ಮೂಲಕ ಪ್ರಗತಿ ಹಾಗೂ ಬದಲಾವಣೆ ಕಾಣದಿದ್ದರೆ ಅ ನಿಷ್ಪ್ರಯೋಜಕ ಬೋಧನೆಯಾಗುತ್ತದೆ.

ಬೋಧನೆಗೆ ಮುನ್ನ ಶಿಕ್ಷಕರಿಗೆ ನಾನು ಏನನ್ನು ಕಲಿಸಬೇಕು, ಎಷ್ಟು ಕಲಿಸಬೇ

ಯಾವ ಹಂತಕ್ಕೆ ಕಲಿಸಬೇಕು ಎಂಬ ಬಗ್ಗೆ ಸ್ಪಷ್ಟ ಆಲೋಚನೆ ಇರಬೇಕು. ತರಗತಿಯಲ್ಲಿ ಪಾಠ ಬೋಧನೆ ಮಾಡುವ ಮುನ್ನ ತಾನು ಕಲಿಸುವ ವಿಷಯದ ಪೂರ್ಣ ಅರಿವು, ಸಮಯ ಜ್ಞಾನ ಮತ್ತು ಪೂರ್ವಸಿದ್ಧತೆ ಇರಬೇಕು. ಮಕ್ಕಳಲ್ಲಿ ಕಲಿಕೆಯ ಕೌಶಲ, ಆಲೋಚನಾ ಶಕ್ತಿ, ಸೃಜನಶೀಲತೆಯನ್ನು ಬೆಳಸಬೇಕು. ಉದ್ದೇಶಗಳಿಗೆ ಅನುಗುಣವಾಗಿ ಬೋಧನಾಕಾರ್ಯ ನಡೆಯಬೇಕು. ಬೋಧಿಸುವ ಉದ್ದೇಶ, ವಿಷಯದ ಸ್ವರೂಪ, ಮಕ್ಕಳ ಮಟ್ಟ - ಇವುಗಳನ್ನು ಆಧರಿಸಿ ಬೋಧನಾ ತಂತ್ರ ಮತ್ತು ನಿಯಮಗಳನ್ನು ಅಳವಡಿಸಿಕೊಂಡು ಬೋಧಿಸಬೇಕು.

ಶಿಕ್ಷಕರಾದವರಿಗೆ ವಿಷಯ ಪರಿಣಿತಿಯಿದ್ದರಷ್ಟೇ ಸಾಲದು. ಬೋಧನಾ ಕ್ರಿಯೆ ಮತ್ತು ಬೋಧನಾ ಪದ್ಧತಿಗಳ ಸಂಪೂರ್ಣಜ್ಞಾನ ಇರಬೇಕು. ಶಿಕ್ಷಣಕ್ಷೇತ್ರದಲ್ಲಿ ಬಂದಿರುವ ಹೊಸ ಹೊಸ ಆವಿಷ್ಕಾರಗಳ ಪರಿಚಯ ಹಾಗೂ ಕಲಿಕೆಯ ಮನೋವೈಜ್ಞಾನಿಕ ನಿಯಮಗಳು, ಕಲಿಕೆಯ ಸೂತ್ರಗಳು ಹಾಗೂ ವಿವಿಧ ಬೋಧನಾಪದ್ಧತಿಗಳ ಸ್ಪಷ್ಟ ಅರಿವಿರಬೇಕು. ವಿಷಯ ಹಾಗೂ ಉದ್ದೇಶಗಳಿಗೆ ಅನುಗುಣವಾಗಿ ಸಾಂದರ್ಭಿಕವಾಗಿ ಸೂಕ್ತವಾದ ಪದ್ಧತಿಗಳನ್ನು ಅಳವಡಿಸಿಕೊಂಡು ಬೋಧಿಸುವ ಸಾಮರ್ಥ್ಯವನ್ನು ಹೊಂದಿರಬೇಕು.

ಬೋಧನೆ ಮತ್ತು ಆಲಿಸುವಿಕೆ ಕ್ರಿಯೆಗಳು ಸಾಮಾನ್ಯವಾಗಿ ಉತ್ಪಾದಕ ಮತ್ತು ಸ್ವೀಕೃತ ಕೌಶಲಗಳಾಗಿದ್ದು ಇವೆರಡೂ ಪರಸ್ಪರ ಪುನರ್ಬಲಗೊಳ್ಳುತ್ತಾ ಸಾಗುವ ಕ್ರಿಯೆಗಳು. ಬೋಧನೆಯಲ್ಲಿ ಗಮನದಲ್ಲಿಡಬೇಕಾದ ಅಂಶಗಳು:

- ❑ ಮಕ್ಕಳನ್ನು ದೈಹಿಕವಾಗಿ, ಮಾನಸಿಕವಾಗಿ ಸಿದ್ಧಗೊಳಿಸಿ ಪ್ರಚೋದಿಸಿ ಅವರಲ್ಲಿ ಕೇಳಬೇಕೆಂಬ ಆಸಕ್ತಿ ಮೂಡಿಸುವುದು.
- ❑ ವಿಷಯ ಕ್ಲಿಷ್ಟತೆ ಮತ್ತು ಬಳಸುವ ಭಾಷೆ ಮಕ್ಕಳ ಮಟ್ಟಕ್ಕೆ ಅನುಗುಣವಾಗಿರಬೇಕು.
- ❑ ಕಲಿಕೆಯ ಮನೋವೈಜ್ಞಾನಿಕ ಸೂತ್ರಗಳನ್ನು ಅಳವಡಿಸಿಕೊಂಡು ವಿಷಯವನ್ನು ನಿರೂಪಿಸಬೇಕು.
- ❑ ಸರಳವಾಗಿ, ಸ್ಪಷ್ಟವಾಗಿ ಮತ್ತು ಅರ್ಥಪೂರ್ಣವಾಗಿ ಹೇಳಬೇಕು.
- ❑ ಹೇಳುವ ವಿಷಯವನ್ನು ಕ್ರಮಬದ್ಧವಾಗಿ ಅರ್ಥಪೂರ್ಣವಾಗಿ ಜೋಡಿಸಿಕೊಂಡು ಹೇಳಬೇಕು.
- ❑ ಕಪ್ಪುಹಲಗೆಯ ಮೇಲೆ ಮುಖ್ಯಾಂಶಗಳನ್ನು ಬರೆಯುತ್ತ ಸೂಕ್ತವಾದ ದೃಕ್ ಶ್ರವಣೋಪಕರಣಗಳನ್ನು ಬಳಸಿಕೊಂಡು ಬೋಧಿಸಬೇಕು.
- ❑ ಹೆಚ್ಚು ಪುನರಾವರ್ತನೆಗೆ ಅವಕಾಶ ಇರಬಾರದು.
- ❑ ತರಗತಿಯ ಪ್ರಶಾಂತತೆಯನ್ನು ಕಾಯ್ದುಕೊಳ್ಳಬೇಕು.
- ❑ ಬೋಧಿಸುವ ವಿಷಯವನ್ನು ಗ್ರಹಿಸುತ್ತಾರೋ ಇಲ್ಲವೋ ಎಂಬುದನ್ನು ನಿರಂತರವಾಗಿ ಗಮನಿಸಬೇಕು.
- ❑ ಮಕ್ಕಳಿಗೆ ಶ್ರೋತೃವರ್ಗದ ಶಿಷ್ಟಾಚಾರವನ್ನು ಪಾಲಿಸುವಂತೆ ಕಲಿಸಬೇಕು.

ಈ ರೀತಿ ಮಕ್ಕಳಿಗೆ ವಿಷಯಗಳನ್ನು ಹೇಳುವ ಮುನ್ನ ಏನು ಹೇಳಬೇಕು? ಎಷ್ಟು ಹೇಳಬೇಕು? ಹೇಗೆ ಹೇಳಬೇಕು ಎಂಬ ಬಗ್ಗೆ ಯೋಚಿಸಿ ಯೋಜಿಸಬೇಕು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಶಿಕ್ಷಕರಾಗುವವರಿಗೆ ತರಬೇತಿ ಬೇಕು ಎಂಬ ಅಂಶ ಪ್ರಧಾನವಾಗುತ್ತದೆ.

ಪದವಿಗಳನ್ನು ಪಡೆದವರೆಲ್ಲ ಶಿಕ್ಷಕರಾಗಲು ಯೋಗ್ಯವೆ ಎಂಬ ಪ್ರಶ್ನೆ ಇತ್ತೀಚಿನ ದಿನಗಳಲ್ಲಿ ಕೇಳಬರುತ್ತಿವೆ. ಏಕೆಂದರೆ ಶಿಕ್ಷಣ ಇಲಾಖೆಯಲ್ಲಿ ನೇಮಕಾತಿಗಳು ಆದಷ್ಟು ಬೇರೆ ಇಲಾಖೆಗಳಲ್ಲಿ ಆಗುತ್ತಿಲ್ಲ ಎಂಬುದು ಸರ್ವೇಸಾಮಾನ್ಯ. ಉದ್ಯೋಗಗಳನ್ನು ಅರಸುವ ಮನದಲ್ಲೂ ಒಂದು ತರಬೇತಿಯನ್ನು ಪಡೆದರೆ ನೌಕರಿ ಸಿಕ್ಕೀತು ಎಂಬ ಭಾವನೆ ಮೂಡ ತೊಡಗಿದೆ. ಹೀಗಾಗಿ ಶಿಕ್ಷಣ ತರಬೇತಿ ಸಂಸ್ಥೆಗಳಲ್ಲಿ ನೂಕು ನುಗ್ಗಲು. ಇದರಿಂದ ಶಿಕ್ಷಣ ತರಬೇತಿ ಸಂಸ್ಥೆಗಳವರೆಗೆ ಎಲ್ಲಿಲ್ಲದ ಬೇಡಿಕೆ. ಇದನ್ನು ಅರಿತ ಸರ್ಕಾರ ಟಿ.ಸಿ.ಹೆಚ್. ಮತ್ತು ಬಿ.ಇಡಿ. ತರಬೇತಿಗೆ ದಾಖಲಾಗುವವರಿಗೆ ಕೇಂದ್ರೀಕೃತ ದಾಖಲಾತಿ ಘಟಕದ ಮೂಲಕ ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಕ್ರಿಯೆಯನ್ನು ಪ್ರಾರಂಭಿಸಿತು.

ಶಿಕ್ಷಕರಾಗ ಬಯಸುವವರು ತರಬೇತಿಯ ಸಂದರ್ಭದಲ್ಲಿ ಸೈದ್ಧಾಂತಿಕ ವಿಷಯಗಳನ್ನು ಕಲಿಯುವುದರ ಜೊತೆಗೆ ಪ್ರಾತ್ಯಕ್ಷಿತ ಪಾಠಗಳನ್ನು ನೀಡಬೇಕಾಗುತ್ತದೆ. ಮನೋವೈಜ್ಞಾನಿಕ ಸೂತ್ರಗಳ ಆಧಾರದ ಮೇಲೆ ಕಲಿಕೆಯ ಸೂತ್ರಗಳನ್ನು ಆಧರಿಸಿ ಉದ್ದೇಶ ಹಾಗೂ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಪಾಠಬೋಧನೆ ಮಾಡಬೇಕು. ಈ ರೀತಿ ಹಂತ ಹಂತವಾಗಿ ಪ್ರಾತ್ಯಕ್ಷಿಕ ಬೋಧನೆಯಲ್ಲಿ ತೊಡಗಿದಾಗ ವೃತ್ತಿಪರಿಣತೆ ಬರಲು ಸಾಧ್ಯ.

ಶಿಕ್ಷಕರಾಗುವವರಿಗೆ ಇರಬೇಕಾದ ಲಕ್ಷಣಗಳು

- ಒಳ್ಳೆಯ ದೇಹದಾರ್ಢ್ಯತೆ.
- ಭಾಷಾ ಸಾಮರ್ಥ್ಯ ಮತ್ತು ಸಂಪರ್ಕ ಕೌಶಲ
- ಅತ್ಯುತ್ತಮ ಮಾನಸಿಕ ಸಾಮರ್ಥ್ಯ
- ಪ್ರಾಪಂಚಿಕ ಜ್ಞಾನ
- ಜೀವನದ ಬಗ್ಗೆ ಧನಾತ್ಮಕ ದೃಷ್ಟಿಕೋನ
- ಒಳ್ಳೆಯ ಮಾನವೀಯ ಸಂಬಂಧಗಳನ್ನು ಬೆಳೆಸುವ ಸಾಮರ್ಥ್ಯ.

ಶಿಕ್ಷಕರಾಗುವವರಿಗೆ ಈ ಮೇಲಿನ ಸಾಮಾನ್ಯಲಕ್ಷಣಗಳ ಜೊತೆಗೆ ಭಾರತೀಯ ಸಂಸ್ಕೃತಿ ಮತ್ತು ರಾಷ್ಟ್ರೀಯ ಗುರಿಗಳ ಬಗ್ಗೆ ಸ್ಪಷ್ಟಅರಿವು. ಪ್ರಜಾಪ್ರಭುತ್ವ. ಜಾತ್ಯಾತೀತತೆ. ರಾಷ್ಟ್ರೀಯ ಐಕ್ಯತೆ. ಜೀವನದ ಮೌಲ್ಯಗಳು ಮತ್ತು ಶೈಕ್ಷಣಿಕ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಸಾಮರ್ಥ್ಯ ಮತ್ತು ಒಲವು ಇರಬೇಕು.

ಶಿಕ್ಷಕರಾಗುವವರಿಗೆ ತರಬೇತಿ ಬೇಕೆ?

ಇತರ ವೃತ್ತಿಗಳಂತೆ ಶಿಕ್ಷಕವೃತ್ತಿಯೂ ತನ್ನದೇ ಆದ ಸೈದ್ಧಾಂತಿಕ ಬುನಾದಿಯನ್ನು ಹೊಂದಿದೆ. ಉದಾಹರಣೆಗೆ ವೈದ್ಯರಾಗುವವರು ಹೇಗೆ ಐದು ವರ್ಷಗಳ ಕಾಲ ಥಿಯರಿ ಮತ್ತ ಪ್ರಾತ್ಯಕ್ಷಿಕ ತರಗತಿಗಳಲ್ಲಿ ಕಲಿಯಬೇಕೋ ಹಾಗೆಯೇ ಶಿಕ್ಷಕರಾಗುವವರು ಸಹ ವೈಜ್ಞಾನಿಕ ವಿಷಯ ಬೋಧನೆಗೆ ಅನುಗುಣವಾಗಿ. ಶೈಕ್ಷಣಿಕ ಮನೋವಿಜ್ಞಾನ. ಬೋಧನಾ ಸಿದ್ಧಾಂತಗಳು. ಶೈಕ್ಷಣಿಕ ತಂತ್ರಗಳು. ಶೈಕ್ಷಣಿಕ ಮೌಲ್ಯಮಾಪನದ ತಂತ್ರಗಳನ್ನು ಕಲಿಯುವುದರ ಜೊತೆಗೆ ತಾನು ಕಲಿತ ಶೈಕ್ಷಣಿಕ ತಂತ್ರಗಳನ್ನು ಸಂದರ್ಭೋಚಿತವಾಗಿ.

ವಿಷಯ ಹಾಗೂ ವಿದ್ಯಾರ್ಥಿಗಳ ಅರಿವಿನ ಮಟ್ಟಕ್ಕೆ ಅನುಗುಣವಾಗಿ ಬೋಧಿಸುವ ತಂತ್ರಗಾರಿಕೆಯನ್ನು ತರಬೇತಿಯ ಅವಧಿಯಲ್ಲಿ ಕಲಿಯಬೇಕಾಗುತ್ತದೆ. ಮಕ್ಕಳನ್ನು ಕಲಿತ ವಿಷಯದ ಮೂಲಕ, ಕಲಿಯದೆ ಇರುವ ವಿಷಯದ ಕಡೆ ಬೋಧನೆಯಲ್ಲಿ ತೆಗೆದುಕೊಂಡು ಹೋಗಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ದೋಷನಿದಾನಿಕ ಪರೀಕ್ಷೆಗಳನ್ನು ನಡೆಸಿ ಅವರನ್ನು ಇತರ ಮಕ್ಕಳ ಕಲಿಕೆಯ ಮಟ್ಟಕ್ಕೆ ಒಯ್ಯುವುದು. ಪಾಠಬೋಧನೆಗೆ ಮುನ್ನ ಹೇಗೆ ಬೋಧಿಸಬೇಕು, ಏನನ್ನು ಬೋಧಿಸಬೇಕೆಂಬ ಸ್ಪಷ್ಟಕಲ್ಪನೆಗೆ ಅನುಗುಣವಾಗಿ ಬೋಧನೆಯ ಉದ್ದೇಶ ಹಾಗೂ ಗುರಿಗಳಿಗೆ ಅನುಗುಣವಾಗಿ ಪಾಠ ಯೋಜನೆಯನ್ನು ಘಟಕಗಳನ್ನು ಗುರ್ತಿಸಿಕೊಂಡು ಏನನ್ನು ಕಲಿಸಬೇಕು ಹಾಗೂ ಮಗು ಎಷ್ಟು ಕಲಿತಿದೆ ಎಂಬುದನ್ನು ಪರೀಕ್ಷಿಸುವ ಸಲುವಾಗಿ ಸಂದರ್ಭೋಚಿತವಾಗಿ - ಪ್ರಶ್ನೆ ಕೇಳುವುದು. ನಿರೀಕ್ಷಿತ ವರ್ತನಾ ಫಲಗಳು ಬಾರದೆ ಇದ್ದಲ್ಲಿ ದೋಷನಿದಾನಿಕ ಪರೀಕ್ಷೆಗಳನ್ನು ನಡೆಸಿ, ಕಲಿಕೆಗೆ ಪ್ರೇರಣೆ ನೀಡುವುದು - ಇವು ತರಬೇತಿಯಲ್ಲಿ ದೊರಕುವ ಮೂಲ ಪರಿಕರಗಳು.

ಬೋಧನೆಯ ಸೂತ್ರಗಳ ಅರಿವಿಲ್ಲದೆ ಬೋಧನೆ ಮಾಡಿದರೆ ಅದು ನಿರರ್ಥಕ ಬೋಧನೆಯಾಗುತ್ತದೆ. ಆದುದರಿಂದ ಶಿಕ್ಷಕರಾಗುವರಿಗೆ ತರಬೇತಿ ಅತಿಮುಖ್ಯ. ಶಿಕ್ಷಣದಲ್ಲಿ ತರಬೇತಿ ಇಲ್ಲದಿದ್ದರೆ ಬೋಧನೆ ಕುರುಡನೊಬ್ಬ ಆನೆಯನ್ನು ವರ್ಣಿಸಿದ ಹಾಗೆಯೆ ಸರಿ. ಆದುದರಿಂದ ಶಿಕ್ಷಣದಲ್ಲಿ ತರಬೇತಿಯನ್ನು ಕಾಲಕಾಲಕ್ಕೆ ನೀಡಿದರೆ ಮಾತ್ರ ಸಾಣೆಹಿಡಿದ ಕತ್ತರಿ ಹೇಗೆ ಇರುತ್ತದೆಯೋ ಹಾಗೆಯೇ ಶಿಕ್ಷಕರ ವರ್ತನೆ, ಬೋಧನೆಯಲ್ಲೂ ಬದಲಾವಣೆಗಳನ್ನು ಗುರ್ತಿಸಬಹುದಾಗಿದೆ.

"ಶಿಕ್ಷಕರು ಯಾವಾಗಲೂ ಕಲಿಯುತ್ತಲೇ ಇರಬೇಕು. ದೀಪವು ತಾನು ನಿರಂತರ ಉರಿಯುತ್ತಿದ್ದರೆ ಮಾತ್ರ ಮತ್ತೊಂದು ದೀಪವನ್ನು ಹೊತ್ತಿಸಲು ಸಾಧ್ಯ" ಎಂದು ವಿಶ್ವ ಕವಿ ರವೀಂದ್ರನಾಥ್ ಠಾಕೂರ್‌ರವರು ಹೇಳುತ್ತಾರೆ. ಅಂದರೆ ಶಿಕ್ಷಕನಾದವನು ಸದಾ ಕಾಲವೂ ಅಧ್ಯಯನ ಮತ್ತು ಬೋಧನೆಯಲ್ಲಿ ನಿರತವಾಗುವುದರ ಜೊತೆಗೆ ಹೊಸ-ಹೊಸ ಅನ್ವೇಷಣೆಯ ಬಗ್ಗೆ, ಬೋಧನೆಯ ಹೊಸಹೊಸ ತಂತ್ರಗಳ ಬಗ್ಗೆ ತರಬೇತಿಯನ್ನು ನಿರಂತರವಾಗಿ ಪಡೆಯುತ್ತಿರಬೇಕು. ಹೀಗೆ ಆಗಾಗ್ಗೆ ತರಬೇತಿ ಪಡೆಯುತ್ತಿದ್ದರೆ ಶಿಕ್ಷಕನಿಗೆ ತನ್ನ ಸ್ಥಾನ ಏನು, ತಾನು ಏನನ್ನು, ಹೇಗೆ ಬೋಧಿಸಬೇಕೆಂಬ ಪರಿಪೂರ್ಣ ಪರಿಕಲ್ಪನೆ ಬರುತ್ತದೆ.

ತರಬೇತಿಯ ವಿಧಗಳು

ಸಾಮಾನ್ಯವಾಗಿ ತರಬೇತಿಯಲ್ಲಿ ಎರಡು ವಿಧ. ಒಂದು ಸೇವಾಪೂರ್ವ ತರಬೇತಿ ಮತ್ತೊಂದು ಸೇವಾನಿರತ ತರಬೇತಿ. ಸೇವಾಪೂರ್ವ ತರಬೇತಿ ಎಂದರೆ ಶಿಕ್ಷಕನಾಗ ಬಯಸುವವರು ವೃತ್ತಿ ಪ್ರಾವೀಣ್ಯತೆ ಮತ್ತು ತರಬೇತಿಗೆ ಸೇರಿಕೊಂಡು ತರಬೇತಿಯನ್ನು ಪಡೆಯುವುದು. ಈ ತರಬೇತಿಯಲ್ಲಿ ಸಮಂಜಸ ಬೋಧನಾತಂತ್ರಗಳನ್ನು ಅಳವಡಿಸಿ ಕೊಳ್ಳುವುದು. ಶೈಕ್ಷಣಿಕ ತತ್ವಗಳ ಪೂರ್ಣ ಪರಿಕಲ್ಪನೆ ಹಾಗೂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೋಷಕವಾದ ಸಮಗ್ರ ತರಬೇತಿ. ಇವುಗಳು ಸೇವಾಪೂರ್ವ ತರಬೇತಿಯ ಲಕ್ಷಣಗಳು.

ಸೇವಾನಿರತ ತರಬೇತಿಯಲ್ಲಿ ವಿಷಯ ಜ್ಞಾನ ಮತ್ತು ಕೌಶಲಗಳನ್ನು ಅಭಿವೃದ್ಧಿ

ಪಡಿಸುವುದು. ಅಗತ್ಯಕ್ಕೆ ಅನುಗುಣವಾದ ತರಬೇತಿ ನೀಡುವುದು ಇವು ಸೇವಾನಿರ
ತರಬೇತಿಯ ಲಕ್ಷಣಗಳು. ತರಬೇತಿಯಲ್ಲಿ ಮುಖಾಮುಖಿ ವಿಧಾನದಿಂದ ಉತ್ತ
ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಶಿಕ್ಷಕರು ತಮ್ಮ ಅನಿಸಿಕೆಗಳನ್ನು, ಕುಂ
ಕೊರತೆಗಳನ್ನು, ಬೋಧನಾ ವಿಧಾನಗಳ ಬಗ್ಗೆ ಇರುವ ಕ್ಲಿಷ್ಟತೆಗಳನ್ನು ತರಬೇತಿಯ
ನೇರಸಂಪರ್ಕ ಮೂಲಕ ಪರಿಹರಿಸಿಕೊಂಡು ಮಾರ್ಗದರ್ಶನ ಪಡೆದುಕೊಳ್ಳಬಹುದು.

ಇಂದಿನ ಶಿಕ್ಷಣದಲ್ಲಿ "ಶಿಶುಕೇಂದ್ರೀಕೃತ"ವಾದುದರಿಂದ ಅಲ್ಲಿ ಮಗುವೇ ಪ್ರಧಾ
ಶಿಕ್ಷಣ ಏನಿದ್ದರೂ ಮಗು ಹಾಗೂ ವಿಷಯದ ನಿರ್ವಹಣೆಯಲ್ಲಿ ಮಧ್ಯವರ್ತಿಯಾ
ಕಾರ್ಯನಿರ್ವಹಿಸಬೇಕು ಶಿಕ್ಷಕನು ಕಲಿಯುವರಿಗೆ ಕಲಿಸುವ ಕೊಂಡಿ, ಅಷ್ಟೆ.

"Interaction is a must in the process of Teaching - Learning
ಎಂಬುದಾಗಿ ಫ್ಲಂಡರ್ ಹೇಳುತ್ತಾನೆ. ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಕ್ರಿಯೆ-ಪ್ರತಿಕ್ರಿ
ಇದ್ದರೆ ಮಾತ್ರ ಬೋಧನೆ ಮತ್ತು ಕಲಿಕೆಯಲ್ಲಿ ಗಣನೀಯವಾದ ಸುಧಾರಣೆಯನ
ನಿರೀಕ್ಷಿಸಬಹುದು.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಶಿಕ್ಷಕರಾಗುವವರಿಗೆ ಹಾಗ
ಶಿಕ್ಷಕರಾದವರಿಗೆ ನಿರಂತರವಾದ ತರಬೇತಿಯನ್ನು ನೀಡಿದರೆ ಮಾತ್ರ ಬೋಧ
ವಿಧಾನದಲ್ಲಿ ಗಣನೀಯವಾದ ಸುಧಾರಣೆಯನ್ನು ನಿರೀಕ್ಷಿಸಬಹುದು.

ಒಟ್ಟಿನಲ್ಲಿ ಹೇಳುವುದಾದರೆ ಇತರ ವೃತ್ತಿಗಿಂತ ಶಿಕ್ಷಕವೃತ್ತಿ ಬಹಳ ಪವಿತ್ರವಾದದ
ಇಡೀ ಒಂದು ದೇಶದ ಭವಿತವ್ಯ ನಾವು ನೀಡುವ ಶಿಕ್ಷಣವನ್ನು ಅವಲಂಬಿಸಿ
ಹೀಗಿರುವಾಗ ಶಿಕ್ಷಣ ನೀಡುವ ಪ್ರತಿಯೊಬ್ಬ ಶಿಕ್ಷಕನಿಗೂ ಪ್ರತಿ ಹಂತದಲ
ನಿರಂತರವಾದ ತರಬೇತಿಯನ್ನು ನೀಡಲೇಬೇಕು. ಆಗ ಮಾತ್ರ ಶಿಕ್ಷಣದಲ್ಲಿ ನಿರೀಕ್ಷ
ಬದಲಾವಣೆಗಳನ್ನು ತರಲು ಸಾಧ್ಯ. ಉದಾಹರಣೆಗೆ ಒಂದು ಒರಟಾದ ಕಲ್ಲು ಸುಂದರವಾ
ಶಿಲ್ಪವಾಗಿ ಮೂಡಬೇಕಾದರೆ ಶಿಲ್ಪಿಗೆ ಕೆತ್ತನೆಯ ಕೌಶಲಗಳಿದ್ದರೆ ಮಾತ್ರ ಸುಂದ
ಮೂರ್ತಿಯನ್ನು ರೂಪಿಸಲು ಸಾಧ್ಯ. ಅಂತೆಯೇ ಶಿಕ್ಷಕರಾದವರಿಗೆ ಸತತ ಅಧ್ಯಯನ
ಪರಿಶ್ರಮದ ಜೊತೆಗೆ ಬೋಧನಾ ವಿಧಾನಗಳು, ತಂತ್ರಗಳು ಹೊಸ ಆವಿಷ್ಕಾರಗ
ಪರಿಕಲ್ಪನೆ ಹಾಗೂ ಮನೋವೈಜ್ಞಾನಿಕ ತಿಳುವಳಿಕೆಯನ್ನು ಆಗಾಗ್ಗೆ ನೀಡುವುದು ಅತಿಅಗ
ಹೀಗೆ ವಿವಿಧ ವಿಷಯಗಳ ಮೇಲೆ ನಿರಂತರವಾದ ತರಬೇತಿಯನ್ನು ನೀಡುತ್ತಿದ್ದರೆ ಶಿಕ್ಷಕ
ಶೈಕ್ಷಣಿಕಮಟ್ಟ, ಗಣನೀಯವಾಗಿ ಸುಧಾರಿಸಿ ಒಳ್ಳೆಯ ಶಿಕ್ಷಕನಾಗುವುದಕ್ಕೆ ಅಡಿಪಾ
ಹಾಕಿದಂತೆ ಆಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಶಿಕ್ಷಣದಲ್ಲಿ ತರಬೇತಿಗೆ ಅತ್ಯ
ಮಹತ್ವದ ಸ್ಥಾನ. ಆದುದರಿಂದ ಪ್ರತಿಯೊಬ್ಬ ಶಿಕ್ಷಕರಿಗೂ ಸೇವಾನಿರತ ಹಾಗ
ಸೇವಾಪೂರ್ವ ತರಬೇತಿ ನೀಡಿದರೆ ಮಾತ್ರ ಬೋಧನಾ ವಿಧಾನದಲ್ಲಿ ಗಣನೀಯವಾ
ಸುಧಾರಣೆಯನ್ನು ತರಲು ಸಾಧ್ಯ. ಒಟ್ಟಿನಲ್ಲಿ ವೃತ್ತಿಕೌಶಲ ಬರಬೇಕಾದರೆ ನಿರಂತರವಾ
ತರಬೇತಿ ಅತಿಮುಖ್ಯ.

(

ಶಿಕ್ಷಕರ ಶಿಕ್ಷಣ (ಪ್ರಶಿಕ್ಷಣ) - ಸೇವಾಪೂರ್ವ ಹಾಗೂ ಸೇವಾನಿರತ

ಪ್ರೊ. ಕೆ. ಹೆಚ್. ಉದ್ದಂಡಪ್ಪ

ಯಾವುದೇ ಒಂದು ದೇಶದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪ್ರಗತಿಯು ಆಗಬೇಕಾದರೆ ಅಲ್ಲಿನ ಉತ್ತಮಮಟ್ಟದ ಶೈಕ್ಷಣಿಕ ವ್ಯವಸ್ಥೆಯೇ ಮೂಲಭೂತ ಅಂಶ ಎಂಬುದು ಶಿಕ್ಷಣತಜ್ಞರೆಲ್ಲರ ಅಭಿಮತ. ಅಂತಹ ಶಿಕ್ಷಣವ್ಯವಸ್ಥೆಯ ರೂವಾರಿಗಳೆಂದರೆ ಅಲ್ಲಿನ ಶಿಕ್ಷಕರು. ಇವರು ಮಕ್ಕಳಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸುವುದು ಮಾತ್ರವಲ್ಲ, ದಕ್ಷ, ಸೃಜನಶೀಲ ಹಾಗೂ ಕಾರ್ಯನಿಷ್ಠೆಯುಳ್ಳ ಹೊಸಪೀಳಿಗೆಯೊಂದನ್ನು ಸೃಷ್ಟಿಸುವ ದ್ವಾರರು; ಒಂದು ಹೊಸ ಸಮಾಜವನ್ನು, ಪ್ರಗತಿಪರ ರಾಷ್ಟ್ರವನ್ನು ನಿರ್ಮಿಸಬಲ್ಲ ಕುಶಲಿಗಳು. ಆದ್ದರಿಂದಲೇ ಎಲ್ಲಾ ಶಿಕ್ಷಣಆಯೋಗಗಳು ಶಿಕ್ಷಕರ ಈ ಕಾರ್ಯವನ್ನು ಮನಗಂಡು ಅವರ ಮೇಲೆ ಅಚಲ ವಿಶ್ವಾಸ ಹಾಗೂ ಗುರುತರ ಜವಾಬ್ದಾರಿಗಳನ್ನು ವ್ಯಕ್ತಪಡಿಸಿವೆ. ಭಾರತದ ಕೊಠಾರಿ ಶಿಕ್ಷಣ ಆಯೋಗವು (1964-66) "ಭಾರತದ ಭವಿಷ್ಯವು ತರಗತಿಗಳಲ್ಲಿ ರೂಪಿತವಾಗುತ್ತಿದೆ" ಎಂದು ಉಲ್ಲೇಖಿಸಿದೆ. ಇತ್ತೀಚಿನ ರಾಷ್ಟ್ರೀಯ ಶಿಕ್ಷಣನೀತಿಯೂ ಸಹ (1986) ಇದೇ ಅಭಿಪ್ರಾಯವನ್ನು ದೃಢೀಕರಿಸುತ್ತಾ "ಒಂದು ದೇಶವು ಅಲ್ಲಿನ ಶಿಕ್ಷಕರ ಗುಣಮಟ್ಟಕ್ಕಿಂತ ಹೆಚ್ಚು ಮೇಲೇಳಲು ಸಾಧ್ಯವಾಗುವುದಿಲ್ಲ" ಎಂದು ಘೋಷಿಸಿದೆ. ಇಂತಹ ಸಮರ್ಥ ಶಿಕ್ಷಕರನ್ನು ತಯಾರುಮಾಡಿಸುವ ಶಿಕ್ಷಕರ ಶಿಕ್ಷಣಪದ್ಧತಿ (ಪ್ರಶಿಕ್ಷಣ) ಅದೆಷ್ಟು ಪ್ರಧಾನವಾದುದು, ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಏನೆಲ್ಲ ತರಬೇತಿಯನ್ನು ಕೊಡಬೇಕು, ಈ ವ್ಯವಸ್ಥೆಯು ನಮ್ಮ ದೇಶದಲ್ಲಿ ಹೇಗೆ ಬೆಳೆದು ಬಂದಿದೆ ಮುಂತಾದ ಅಂಶಗಳತ್ತ ಓದುಗರ ಗಮನ ಸೆಳೆಯುವುದೇ ಈ ಲೇಖನದ ಉದ್ದೇಶ.

ಶಿಕ್ಷಕರ ಶಿಕ್ಷಣದ ಐತಿಹಾಸಿಕ ಹಿನ್ನೋಟ

ಗುರು ಬ್ರಹ್ಮಾ ಗುರು ವಿಷ್ಣು
ಗುರುದೇವ್ರೋ ಮಹೇಶ್ವರಃ
ಗುರು ಸಾಕ್ಷಾತ್ ಪರಬ್ರಹ್ಮ
ತಸ್ಮೈ ಶ್ರೀ ಗುರವೇ ನಮಃ

ಇದು ಪ್ರಾಚೀನ ಭಾರತದ ಗುರು(ಶಿಕ್ಷಕ)ವಿನ ಸ್ಥಾನಮಾನವನ್ನು, ಶ್ರೇಷ್ಠತೆ ಹಾಗೂ ಪಾವಿತ್ರ್ಯತೆಯನ್ನು ಅಭಿವ್ಯಕ್ತಿಸುವ ಒಂದು ಆರ್ಯೋಕ್ತಿ. ಗುರುವನ್ನು ದೈವೀಕರಿಸಿ, ಬ್ರಹ್ಮ, ವಿಷ್ಣು, ಮಹೇಶ್ವರ ತ್ರಿಮೂರ್ತಿಗಳಿಗೆ ಸರಿಸಮಾನಿಸಿ, ಅಂತಹ ಗುರುವಿಗೆ ಅನನ್ಯ ಭಕ್ತಿಭಾವದಿಂದ ನಮಸ್ಕರಿಸುವ ಒಂದು ಸಾಂಸ್ಕೃತಿಕ ಪದ್ಧತಿ. ಅಂದಿನ ಗುರುವು ದೈವಾಂಶ

ಸಂಭೂತನಾಗಿದ್ದ. ಅವನ ಅಪಾರ ಜ್ಞಾನ, ಉನ್ನತ ಚಿಂತನೆ, ಕಾರ್ಯತತ್ಪರತೆ, ಸಾಮಾಜಿಕ ಹೊಣೆಗಾರಿಕೆ, ನೈತಿಕ ಸ್ಥೈರ್ಯ ಹಾಗೂ ಪರಿಶುದ್ಧ ಜೀವನ ಅವನನ್ನು ಅಂತಹ ದೈವತ್ವಕ್ಕೆ ಏರಿಸಿದ್ದವು. ಅಧ್ಯಾಪನ ಕಾರ್ಯ ಅವನ ದೈವದತ್ತ ಹೊಣೆಗಾರಿಕೆಯಾಗಿದ್ದು, ಅದನ್ನು ಸ್ವಯಂ ಪ್ರೇರಣೆಯಿಂದ, ನಿಷ್ಠೆಯಿಂದ, ಸ್ನಾತಕನ ಹಾಗೂ ಸಮಾಜದ ಒಳಿತಿಗಾಗಿ ಸಮರ್ಪಣಾ ಭಾವದಿಂದ ಮಾಡುತ್ತಿದ್ದ. ಇದಕ್ಕಾಗಿ ಯಾವುದೇ ರೀತಿಯ ಪ್ರತಿಫಲ ನಿರೀಕ್ಷೆಯಾಗಲೀ ಪ್ರಶಾಸನದ ನಿರ್ಬಂಧಗಳಾಗಲೀ ಇರಲಿಲ್ಲ. ಇಂದಿನ ರೀತಿಯ ಔಪಚಾರಿಕ ತರಬೇತಿ ಕ್ರಮದ ವ್ಯವಸ್ಥೆ ಹಾಗೂ ನಿಗದಿತ ಪಠ್ಯಕ್ರಮವಂತೂ ಇರಲೇ ಇಲ್ಲ. ಗುರುಕುಲಗಳಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದ ಹಿರಿಯ ವಿದ್ಯಾರ್ಥಿಗಳು, ತಮ್ಮ ಗುರುವಿನ ಗೈರುಹಾಜರಿಯಲ್ಲಿ ಅಥವಾ ಕೆಲವು ಬಾರಿ ಗುರುವಿನ ಮೇಲ್ವಿಚಾರಣೆಯಲ್ಲಿ, ಕಿರಿಯ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದರು. ಹೀಗೆ ಮಾಡುವಾಗ ತಮ್ಮ ಗುರುವಿನ ಬೋಧನಾ ವಿಧಾನವನ್ನು ಅನುಕರಣೆ ಮಾಡುವುದರ ಮೂಲಕ, ಭವಿಷ್ಯದ ಗುರುಗಳಾಗಿ ಮಾಡುತ್ತಿದ್ದರು; ಆಜನ್ಮ ಶಿಕ್ಷಕರಾಗುತ್ತಿದ್ದರು. ಇಂತಹ ಅನೌಪಚಾರಿಕ ಪ್ರಶಿಕ್ಷಣ ಪದ್ಧತಿ ಅತ್ಯಂತ ದಕ್ಷತೆಯಿಂದ ಪರಿಣಾಮಕಾರಿಯಾಗಿ ನೂರಾರು ವರ್ಷಕಾಲ ನಡೆದುಬಂತು.

ನಂತರದ ಬೌದ್ಧರ ಶಿಕ್ಷಣವ್ಯವಸ್ಥೆಯಲ್ಲಿಯೂ ಸಹ ಶಿಕ್ಷಕರ ಶಿಕ್ಷಣವು ಗುರುಕುಲ ಮಾದರಿಯಲ್ಲಿಯೇ ನಡೆಯುತ್ತಿತ್ತು. ಬೌದ್ಧವಿಹಾರಗಳು ಬೋಧಕರು ಹಾಗೂ ವಿದ್ಯಾರ್ಥಿಗಳು ಒಟ್ಟಿಗೇ ಜೀವಿಸುವ ಸಾಂಘಿಕ, ಸನಿವಾಸ ತಾಣಗಳಾಗಿದ್ದುದರಿಂದ, ಹಿರಿಯ ವಿದ್ಯಾರ್ಥಿಗಳು ತಮ್ಮ ಗುರುಗಳ ಬೋಧನಾ ವಿಧಾನ ಮತ್ತು ಕಾರ್ಯವೈಖರಿಯ ಮಾದರಿಗಳನ್ನು ಅನುಕರಿಸಿ ಮೈಗೂಡಿಸಿಕೊಳ್ಳಲು ಒಳ್ಳೆಯ ಅವಕಾಶವನ್ನು ಒದಗಿಸುತ್ತಿದ್ದವು. ಈ ಪದ್ಧತಿ ಭವಿಷ್ಯದ ಶಿಕ್ಷಕರನ್ನು ತಯಾರಿಸುವಲ್ಲಿ ಹೆಚ್ಚು ನೆರವಾಗಿತ್ತು. ತದನಂತರದ ಇಸ್ಲಾಮಿಕ್ ಶಿಕ್ಷಣ ವ್ಯವಸ್ಥೆಯಲ್ಲಿಯೂ ಸಹ ಶಿಕ್ಷಕರ ಶಿಕ್ಷಣವು ಗಮನಾರ್ಹ ಬದಲಾವಣೆಗಳನ್ನು ಕಾಣದೆ, ಅನೌಪಚಾರಿಕವಾಗಿಯೇ ಮುಂದುವರೆಯಿತು.

ಶಿಕ್ಷಕರ ಶಿಕ್ಷಣದಲ್ಲಿ ಒಂದು ಮಹತ್ವಪೂರ್ಣ ಬದಲಾವಣೆಯಾದುದು ಬ್ರಿಟಿಷರ ಆಳ್ವಿಕೆಯಲ್ಲಿ ಜಾರಿಗೆ ಬಂದ ಆಂಗ್ಲಮಾದರಿಯ ಶಿಕ್ಷಣಕ್ರಮದಿಂದ ಇದು ಭಾರತದಲ್ಲಿ ಒಂದು ಹೊಸ ಶಿಕ್ಷಣಪದ್ಧತಿಯನ್ನು ಜಾರಿಗೊಳಿಸಿದ್ದೇ ಅಲ್ಲದೆ, ಒಂದು ನೂತನ ಕ್ರಮಬದ್ಧ ವ್ಯವಸ್ಥೆಯಲ್ಲಿ ಶಿಕ್ಷಕರನ್ನು ತರಬೇತಿ ಮಾಡುವ ಔಪಚಾರಿಕ ಪ್ರಶಿಕ್ಷಣ ಪದ್ಧತಿಯನ್ನು ರೂಢಿಗೆ ತಂದಿತು. ಇದು ಬಹುತೇಕ ಆಂಗ್ಲಮಾದರಿಯ ಪ್ರಶಿಕ್ಷಣ ಪದ್ಧತಿಯ ಅನುಕರಣೆಯಾಗಿತ್ತು. ಇಂತಹ ತರಬೇತಿಯನ್ನು ಕೊಡುವ ಸಲುವಾಗಿ ನೂತನಸಂಸ್ಥೆಗಳು ಆರಂಭವಾದವು. ನಿಗದಿತ ಪಠ್ಯಕ್ರಮ, ತರಬೇತಿ ವಿಧಾನ, ಪರೀಕ್ಷಾಪದ್ಧತಿ ಹಾಗೂ ಪ್ರಮಾಣಪತ್ರ ಕೊಡುವ ಕಾರ್ಯಕ್ರಮಗಳೂ ಬಂದವು. ಜೊತೆಗೆ ಸರ್ಕಾರದ ಶಾಸನೀಯ ರೀತಿನೀತಿಗಳು, ನಿರ್ಬಂಧಗಳು, ಆರ್ಥಿಕ ಬೆಂಬಲ, ಶಿಕ್ಷಕರಾಗಲು ಕಡ್ಡಾಯ ತರಬೇತಿ ಇತ್ಯಾದಿಗಳು ಕ್ರಮೇಣವಾಗಿ ಆಚರಣೆಗೆ ಬಂದವು. ಹೀಗೆ ಭಾರತದ ಪ್ರಶಿಕ್ಷಣ ಪದ್ಧತಿಯು ತನ್ನ ಅನೌಪಚಾರಿಕತೆಯನ್ನು ಕ್ರಮೇಣ ಕಳೆದುಕೊಂಡು, ಒಂದು ಔಪಚಾರಿಕ ಪದ್ಧತಿಯಾಗಿ ಪರಿವರ್ತಿತವಾಯಿತು. "ಆಜನ್ಮಶಿಕ್ಷಕ" ಪರಿಕಲ್ಪನೆ ನಶಿಸಿ ಇಂದಿನ "ತರಬೇತಿ ಪಡೆದ ಶಿಕ್ಷಕ" ಪರಿಕಲ್ಪನೆಗೆ ಎಡೆಮಾಡಿತು.

ಇಂದಿನ ಪ್ರಶಿಕ್ಷಣ ಪದ್ಧತಿಯ ರೂಪುರೇಷೆಗಳು

ಸ್ವಾತಂತ್ರ್ಯೋತ್ತರ ಭಾರತವು ಶಿಕ್ಷಣಕ್ಕೆ ಅತಿಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿರುವುದು ಒಂದು ಗಮನಾರ್ಹ ಸಂಗತಿ. ಇದಕ್ಕೆ ಮೂಲಕಾರಣ ನಾವು ಇಂದು ಪ್ರಜಾಸತ್ತಾತ್ಮಕ ಪದ್ಧತಿಯ ಆಳ್ವಿಕೆಯನ್ನು ಒಪ್ಪಿಕೊಂಡಿರುವುದು; ಪ್ರಜಾಸತ್ತೆಯ ಯಶಸ್ಸಿಗೆ ಶಿಕ್ಷಣವೇ ಮೂಲಭೂತ ಅಂಶವೆಂದು ಪರಿಗಣಿಸಿರುವುದು; ಅನಕ್ಷರತೆ ದೇಶದ ಒಂದು ಘೋರ ಕಳಂಕ ಎಂದು ಮನಗಂಡಿರುವುದು. ಇದಕ್ಕಾಗಿಯೇ ನಮ್ಮ ಸಂವಿಧಾನದಲ್ಲಿ 45ನೇ ವಿಧಿಯನ್ನು ಸೇರಿಸಿ ಶೈಕ್ಷಣಿಕ ಕಾರ್ಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಹೊಣೆಗಾರರನ್ನಾಗಿ ಮಾಡಿರುವುದು. ಈ ವಿಧಿಯ ಪ್ರಕಾರ ನಮ್ಮ ದೇಶದ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಸಾರ್ವತ್ರಿಕ, ಕಡ್ಡಾಯ ಹಾಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆನ್ನುವ ಪ್ರಶಾಸನವಾಗಿದೆ. ಆಡಳಿತಾತ್ಮಕವಾಗಿ ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸೇರಿಸಿ ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡನ್ನೂ ಶಿಕ್ಷಣದ ಪ್ರಗತಿಗಾಗಿ ಜಂಟೀ ಹೊಣೆಗಾರರನ್ನಾಗಿ ಮಾಡಲಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡುವ ಬೆಳವಣಿಗೆಯೂ ನಡೆದಿದೆ. ಇದಕ್ಕಾಗಿ ರಾಷ್ಟ್ರೀಯ ವರಮಾನದ ಶೇಕಡಾ 6ರಷ್ಟು ಹಣವನ್ನು ಶಿಕ್ಷಣಕ್ಕೆ ವಿನಿಯೋಗಿಸುವ ಘೋಷಣೆಯೂ ಸಹ ಆಗಿದೆ.

ಈ ಎಲ್ಲಾ ಬೆಳವಣಿಗೆಗಳಿಗನುಸಾರವಾಗಿ ದೇಶಾದ್ಯಂತ ಲಕ್ಷಾಂತರ ಪ್ರಾಥಮಿಕ ಶಾಲೆಗಳನ್ನು, ಸಹಸ್ರಾರು ಪ್ರೌಢಶಾಲೆಗಳನ್ನು ತೆರೆಯಲಾಗಿದೆ. ಈ ಸಂಖ್ಯೆ ವರ್ಷಾನುವರ್ಷ ಬೆಳೆಯುತ್ತಲೇ ಇದೆ. ಇಷ್ಟೊಂದು ಬೃಹತ್ ಸಂಖ್ಯೆಯ ಶಾಲೆಗಳನ್ನು ನಿರ್ವಹಿಸುವ, ಅಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡುವ ಸಮರ್ಥ ಹಾಗೂ ಕುಶಲಿಗಳಾದ ಶಿಕ್ಷಕರನ್ನು ಅಧಿಕ ಸಂಖ್ಯೆಯಲ್ಲಿ ತರಬೇತಿಗೊಳಿಸುವ ವ್ಯವಸ್ಥೆಯೂ ಇಂದು ವಿಸ್ತಾರವಾಗಿ ಬೆಳೆದಿದೆ. ಎಲ್ಲಾ ರಾಜ್ಯಗಳಲ್ಲಿಯೂ ವಿವಿಧ ಹಂತಗಳಲ್ಲಿ, ಶಿಕ್ಷಕರನ್ನು ತರಬೇತಿ ಮಾಡುವ ಪ್ರಶಿಕ್ಷಣ ಸಂಸ್ಥೆಗಳು, ಪ್ರಶಿಕ್ಷಣ ಪದ್ಧತಿ ಜಾರಿಗೆ ಬಂದಿವೆ. ಇದರ ನಿರ್ವಹಣೆಗಾಗಿ ಸರಕಾರವು ಒಂದು ವ್ಯಾಪಕವಾದ ಆಡಳಿತಾತ್ಮಕ ವ್ಯವಸ್ಥೆಯನ್ನೇ ರೂಪಿಸಿಕೊಂಡಿದೆ.

ಪೂರ್ವಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಣ

ಪೂರ್ವಪ್ರಾಥಮಿಕ ಶಿಕ್ಷಣವನ್ನು ಔಪಚಾರಿಕ ಶಿಕ್ಷಣದ ಚೌಕಟ್ಟಿನಲ್ಲಿ ಸೇರಿಸದಿದ್ದರೂ ಸಹ, ಈ ಶಿಕ್ಷಣದ ಪ್ರಾಮುಖ್ಯತೆಯನ್ನು ಎಲ್ಲಾ ಶಿಕ್ಷಣತಜ್ಞರೂ ಒತ್ತಿ ಹೇಳಿದ್ದಾರೆ. ಈ ಹಂತದಲ್ಲಿ 3 ರಿಂದ 5ನೇ ವಯಸ್ಸಿನ ಶಿಶುಗಳಿಗೆ ಶಿಕ್ಷಣ ನೀಡಲು ಸಾವಿರಾರು ಪೂರ್ವಪ್ರಾಥಮಿಕ ಶಾಲೆಗಳು ಬಹುತೇಕ ಪಟ್ಟಣಪ್ರದೇಶಗಳಿಗೆ ಆರಂಭವಾಗಿವೆ. ಈ ಶಾಲೆಗಳನ್ನು ನಿಭಾಯಿಸುವ ಶಿಕ್ಷಕಿಯರನ್ನು ತರಬೇತಿ ಮಾಡಲು "ಪೂರ್ವಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆ"ಗಳು (Pre-primary Teacher Training Institution) ಇವೆ. ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಹೆಣ್ಣುಮಕ್ಕಳಿಗೆ ಒಂದು ವರ್ಷದ ತರಬೇತಿ ನೀಡಲಾಗುತ್ತದೆ. ಈ ಅವಧಿಯಲ್ಲಿ ಶಿಶುಬೋಧನೆಗೆ ಅಗತ್ಯವಾದ ಜ್ಞಾನ, ಬೋಧನಾ ಕೌಶಲ್ಯಗಳು, ಶಿಶುಮನೋವಿಜ್ಞಾನ, ವಿವಿಧ ರೀತಿಯ ಶಿಶುಗೀತೆಗಳ ಗಾಯನ, ಆಟೋಟಗಳು, ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಪ್ರಾಯೋಗಿಕ ಬೋಧನಾ ಕಾರ್ಯವು ಕಡ್ಡಾಯ. ತರಬೇತಿಯ ಕೊನೆಯಲ್ಲಿ ಪೂರ್ವಪ್ರಾಥಮಿಕ ಶಿಕ್ಷಕರಿಗೆ ತರಬೇತಿ ಪ್ರಮಾಣ ಪತ್ರವನ್ನು ಕೊಡಲಾಗುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಣ

ಲಕ್ಷಾಂತರ ಪ್ರಾಥಮಿಕ ಶಾಲೆಗಳಿಗೆ ಬೇಕಾಗುವ ಶಿಕ್ಷಕರನ್ನು ತರಬೇತಿಗೊಳಿಸಲು ಶಿಕ್ಷಕ ತರಬೇತಿ ಸಂಸ್ಥೆ (Teacher Training Institutes)ಗಳಿವೆ. ಈ ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ಪಿ.ಯು.ಸಿ. ತೇರ್ಗಡೆ ಕನಿಷ್ಠ ವಿದ್ಯಾರ್ಹತೆ. ಗಂಡು ಹಾಗೂ ಹೆಣ್ಣು ಮಕ್ಕಳಿರ್ವರಿಗೂ ಸಮಾನ ಅವಕಾಶ. ತರಬೇತಿಯ ಅವಧಿ ಎರಡು ವರ್ಷಗಳು. ಈ ಅವಧಿಯಲ್ಲಿ ಪ್ರಾಥಮಿಕ ಶಾಲಾ ವಿಷಯಗಳನ್ನೇ ಅಲ್ಲದೆ ಶೈಕ್ಷಣಿಕ ತತ್ವಶಾಸ್ತ್ರ, ಮಕ್ಕಳ ಮನೋವಿಜ್ಞಾನ, ಶಾಲಾ ನಿರ್ವಹಣೆ, ಬೋಧನಾ ಕೌಶಲ್ಯಗಳು, ಚಿತ್ರಕಲೆ ಮತ್ತು ಕುಶಲಕಲೆಗಳು ಹಾಗೂ ಖಡ್ಡಾಯ ಪ್ರಾಯೋಗಿಕ ಬೋಧನಾ ಅನುಭವ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅವಧಿಯ ಕೊನೆಯಲ್ಲಿ ಟಿ.ಸಿ.ಎಚ್. (Teachers certificate higher) ಪ್ರಮಾಣ ಪತ್ರವನ್ನು ಕೊಡಲಾಗುತ್ತದೆ.

ಪ್ರೌಢಶಾಲೆಗಳ ಶಿಕ್ಷಕರ ಶಿಕ್ಷಣ

ಪ್ರೌಢಶಾಲಾ ಹಂತದಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರ ತರಬೇತಿಯನ್ನು ಶಿಕ್ಷಣ ಮಹಾವಿದ್ಯಾಲಯಗಳಲ್ಲಿ (Colleges of Education or Teachers Colleges) ಕೊಡಲಾಗುತ್ತಿದೆ. ಈ ಸಂಸ್ಥೆಗಳು ಆಡಳಿತಾತ್ಮಕವಾಗಿ ಶಿಕ್ಷಣ ಇಲಾಖೆ, ಶೈಕ್ಷಣಿಕವಾಗಿ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ. ವಿಶ್ವವಿದ್ಯಾಲಯಗಳ ಸಂಯೋಜನೆ ಇವುಗಳಿಗೆ ಅತ್ಯಗತ್ಯ. ಏಕೆಂದರೆ ತರಬೇತಿ ನಂತರದ ಪದವಿ ಪ್ರಮಾಣ ಪತ್ರಗಳನ್ನು ವಿಶ್ವವಿದ್ಯಾಲಯಗಳೇ ಕೊಡುವುದು.

ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ವಿಶ್ವವಿದ್ಯಾಲಯದ ಪದವೀಧರರಾದವರಿಗೆ, ಒಂದು ವರ್ಷ ಅವಧಿಯ ತರಬೇತಿಯನ್ನು ಕೊಡಲಾಗುತ್ತದೆ. ಈ ಅವಧಿಯಲ್ಲಿ ಶಿಕ್ಷಕ ವಿದ್ಯಾರ್ಥಿಗಳು ಶೈಕ್ಷಣಿಕ ತತ್ವಶಾಸ್ತ್ರ, ಶೈಕ್ಷಣಿಕ ಮನೋವಿಜ್ಞಾನ, ಶಾಲಾ ಆಡಳಿತ ಮತ್ತು ವ್ಯವಸ್ಥೆ ವಿಷಯಗಳ ಜೊತೆಗೆ ಎರಡು ಪ್ರೌಢಶಾಲಾ ವಿಷಯಗಳನ್ನು ಬೋಧಿಸುವ ವಿಧಾನಗಳಲ್ಲಿ ಪರಿಣತಿಯನ್ನು ಪಡೆಯುತ್ತಾರೆ. ಶಾಲೆಗಳಲ್ಲಿ ಪ್ರಾಯೋಗಿಕ ಬೋಧನಾ ಅನುಭವ ಬಹಳ ಮುಖ್ಯ ಅಂಶ ಹಾಗೂ ಕಡ್ಡಾಯ. ಇವುಗಳ ಜೊತೆಗೆ ಬೋಧನಾ ಸಾಮಗ್ರಿಗಳ ತಯಾರಿಕೆ, ಪ್ರಶ್ನೆಪತ್ರಿಕೆಗಳ ತಯಾರಿಕೆ, ಕಾರ್ಯಾನುಭವ, ಸಮುದಾಯ ಅಧ್ಯಯನ, ನೈತಿಕಶಿಕ್ಷಣ, ಜನಸಂಖ್ಯಾ ಶಿಕ್ಷಣ, ಶೈಕ್ಷಣಿಕ ಸಲಹೆ ಹಾಗೂ ಮಾರ್ಗದರ್ಶನ, ಕ್ರಿಯಾತ್ಮಕ ಸಂಶೋಧನೆ ಮುಂತಾದ ವಿಷಯಗಳಲ್ಲಿಯೂ ತರಬೇತಿ ಕೊಡಲಾಗುತ್ತದೆ. ತರಬೇತಿಯ ಕೊನೆಯಲ್ಲಿ ಬಿ.ಇಡಿ. ಪದವಿಗೆ (Bachelor of Education) ಅರ್ಹರಾಗುತ್ತಾರೆ.

ಮೇಲೆ ಹೇಳಿದ ಪದ್ಧತಿಯ ಜೊತೆಗೆ, NCERT ಸಂಸ್ಥೆಯು ನಿರ್ವಹಿಸುತ್ತಿರುವ ಪ್ರಾಂತೀಯ ಶಿಕ್ಷಣ ಸಂಸ್ಥೆ (Regional Institute of Education)ಗಳಲ್ಲಿ ನಾಲ್ಕು ವರ್ಷ ಅವಧಿಯ ಪ್ರೌಢಶಾಲಾ ಶಿಕ್ಷಕರ ತರಬೇತಿಯೂ ನಡೆಯುತ್ತಿದೆ. ಪಿ.ಯು.ಸಿ. ತೇರ್ಗಡೆಯಾದವರಿಗೆ, ಈ ಅವಧಿಯಲ್ಲಿ, ಪದವಿ ತರಗತಿಗಳಲ್ಲಿ ಅಭ್ಯಾಸ ಮಾಡುವ ವಿಷಯಗಳ ಜೊತೆಗೆ, ಶಿಕ್ಷಣ ಪದವಿಗೆ ಬೇಕಾದ ವಿಷಯಗಳನ್ನು ಸಹ ಸಂಯೋಜನೆಗೊಳಿಸಿಕೊಂಡು ತರಬೇತಿ ಕೊಡುವುದು ಒಂದು ವಿಶಿಷ್ಟ ರೀತಿಯದಾಗಿದೆ. ಇಂತಹ ಸಂಸ್ಥೆಗಳು ಭಾರತದಲ್ಲಿ ಮೈಸೂರು, ಭುವನೇಶ್ವರ, ಭೂಪಾಲ್ ಮತ್ತು ಅಜ್ಮೀರ್

ಪಟ್ಟಣಗಳಲ್ಲಿವೆ. ಈ ಸಂಸ್ಥೆಗಳು ಇತ್ತೀಚೆಗೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿವೆ.

ಬಿ.ಇಡಿ. ಪದವಿಯ ನಂತರ, ಶಿಕ್ಷಣಶಾಸ್ತ್ರದಲ್ಲಿ ಉನ್ನತ ಅಧ್ಯಯನ ಮಾಡಲು ಅವಕಾಶಗಳಿವೆ. ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿಭಾಗಗಳಲ್ಲಿ ಎಂ.ಇಡಿ., ಎಂ.ಫಿಲ್. ಹಾಗೂ ಪಿಎಚ್.ಡಿ ಪದವಿಗಳಿಗಾಗಿ ಅಧ್ಯಯನ ಮಾಡಬಹುದು. ಈ ಹಂತದಲ್ಲಿ ಶೈಕ್ಷಣಿಕ ಸಂಶೋಧನೆಗೆ ಅತಿ ಹೆಚ್ಚು ಮಹತ್ವ. ಅಲ್ಲದೆ ಶಿಕ್ಷಣಕ್ಷೇತ್ರಕ್ಕೆ ಬೇಕಾಗುವ ವೃತ್ತಿಪರ ಕಾರ್ಯಕರ್ತರನ್ನು ತರಬೇತಿಗೊಳಿಸುವುದು ಈ ಹಂತದ ಇನ್ನೊಂದು ಮುಖ್ಯ ಉದ್ದೇಶ.

ಪ್ರೌಢಶಾಲಾ ಹಂತದ ಪದವೀಧರ ಶಿಕ್ಷಕರ ಶಿಕ್ಷಣದ ಜೊತೆಗೆ, ದೈಹಿಕಶಿಕ್ಷಕರನ್ನು ತಯಾರು ಮಾಡಲು ಸಿ.ಪಿ.ಇಡಿ. ಮತ್ತು ಬಿ.ಪಿ.ಇಡಿ. ತರಬೇತಿ ನೀಡಲು ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿವೆ. ಅಲ್ಲದೆ ಕನ್ನಡ, ಹಿಂದಿ, ಸಂಸ್ಕೃತ, ಉರ್ದು ಭಾಷಾಶಿಕ್ಷಕರನ್ನು ತರಬೇತಿ ಮಾಡಲು ಪಂಡಿತ, ವಿದ್ವಾನ್ ಹಾಗೂ ಮೌಲ್ವಿ ಕಾರ್ಯಕ್ರಮಗಳಿವೆ. ಇತ್ತೀಚೆಗೆ ಹಿಂದಿ ಮಾಧ್ಯಮದಲ್ಲಿ ಬಿ.ಇಡಿ.ಗೆ ಸಮನಾದ ತರಬೇತಿ ಕ್ರಮವೂ ಜಾರಿಗೆ ಬಂದಿದೆ.

ಕಾಲೇಜು/ವಿಶ್ವವಿದ್ಯಾಲಯ ಶಿಕ್ಷಕರ ಶಿಕ್ಷಣ

ಸದ್ಯದ ಪರಿಸ್ಥಿತಿಯಲ್ಲಿ, ಶಾಲಾ ಹಂತದಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ಮಾತ್ರ ಶಿಕ್ಷಕ ತರಬೇತಿಯನ್ನು ಕಡ್ಡಾಯಗೊಳಿಸಲಾಗಿದೆ. ಕಾಲೇಜು/ವಿಶ್ವವಿದ್ಯಾಲಯ ಹಂತದ ಶಿಕ್ಷಕರಿಗೆ ಯಾವುದೇ ರೀತಿಯ ಔಪಚಾರಿಕ ಶಿಕ್ಷಕ ತರಬೇತಿಯನ್ನು ನಿಗದಿಗೊಳಿಸಿಲ್ಲ. ಹಾಗಿದ್ದರೆ, ಈ ಹಂತದ ಶಿಕ್ಷಕರಿಗೆ ತರಬೇತಿಯ ಅವಶ್ಯಕತೆ ಇಲ್ಲ ಎಂದರ್ಥವಲ್ಲ. ಇದುವರೆಗೆ ಈ ದಿಶೆಯಲ್ಲಿ ತಜ್ಞರ ಅಭಿಪ್ರಾಯ ಮತ್ತು ನಿಗದಿತ ತರಬೇತಿ ಕಾರ್ಯಕ್ರಮಗಳು ರೂಪುಗೊಳ್ಳದಿರುವುದು ಹಾಗೂ ಬೋಧನಾ ವಿಷಯದ ವಿಶೇಷಜ್ಞಾನಕ್ಕೆ ಮಾತ್ರವೇ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿರುವುದು ಈ ಹಂತದ ಶಿಕ್ಷಕರ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಈ ದಿಶೆಯಲ್ಲಿ ಬದಲಾವಣೆಯಾಗುತ್ತಿದೆ ಹಾಗೂ ತರಬೇತಿಯ ಅವಶ್ಯಕತೆಯನ್ನು ಮನಗಾಣಿಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ಈ ಹಂತಕ್ಕೂ ಸಹ ಒಂದು ಪ್ರಶಿಕ್ಷಣ ಪದ್ಧತಿ ರೂಪಿತವಾಗಬಹುದು.

ಶಿಕ್ಷಕರ ಶಿಕ್ಷಣದ (ಪ್ರಶಿಕ್ಷಣ) ವಿಧಗಳು

ಶಿಕ್ಷಕರ ಶಿಕ್ಷಣ ಒಂದು ದೀರ್ಘವಾದ ಹಾಗೂ ನಿರಂತರ ಪ್ರಕ್ರಿಯೆ. ಒಬ್ಬನಿಗೆ ಔಪಚಾರಿಕ ರೀತಿಯ ತರಬೇತಿಯನ್ನು ಕೊಟ್ಟು ಶಿಕ್ಷಕನನ್ನಾಗಿ ಮಾಡಿದ ಮಾತ್ರಕ್ಕೇ ಈ ಪ್ರಕ್ರಿಯೆ ಮುಗಿಯುವುದಿಲ್ಲ. ಪ್ರತಿಯೊಬ್ಬ ಕಾರ್ಯನಿರತ ಶಿಕ್ಷಕನು ತನ್ನ ಪೂರ್ಣ ಸೇವಾ ಅವಧಿಯಲ್ಲಿಯೂ ಆಗಾಗ್ಗೆ ವಿಶೇಷ ತರಬೇತಿಯನ್ನು ಪಡೆಯಬೇಕಾದುದು ಅವಶ್ಯ ಹಾಗೂ ಅನಿವಾರ್ಯ. ಆದ್ದರಿಂದ ಶಿಕ್ಷಕರ ಶಿಕ್ಷಣವನ್ನು ಎರಡು ಭಾಗಗಳನ್ನಾಗಿ ಗುರ್ತಿಸಬಹುದು. ಅವು ಯಾವುವೆಂದರೆ ಸೇವಾಪೂರ್ವ ತರಬೇತಿ ಮತ್ತು ಸೇವಾವಧಿ ಅಥವಾ ಸೇವಾನಿರತ ತರಬೇತಿ ಕ್ರಮಗಳು. ಇವೆರಡೂ ಬೇರೆಯಲ್ಲ. ಒಂದೇ ಪ್ರಕ್ರಿಯೆಯ ಎರಡು ಭಾಗಗಳು ಮಾತ್ರ ಅವು ಪರಸ್ಪರ ಪೂರಕವಾಗಿರುತ್ತವೆ.

ಸೇವಾಪೂರ್ವ ತರಬೇತಿ (Pre-service training)

ಇದು ಶಿಕ್ಷಕನು ವೃತ್ತಿಗೆ ಸೇರುವುದಕ್ಕೆ ಮುಂಚೆ ಪಡೆಯುವ ಔಪಚಾರಿಕ ಹಾಗೂ ನಿಗದಿತ

ತರಬೇತಿ. ಇದು ಒಬ್ಬನನ್ನು ಶಿಕ್ಷಕನಾಗುವುದಕ್ಕೆ ಅರ್ಹನನ್ನಾಗಿಸುವ ಕ್ರಮ ಮಾತ್ರ. ಟಿ.ಸಿ.ಎಚ್ ಮತ್ತು ಬಿ.ಇಡಿ. ತರಬೇತಿ ಕ್ರಮಗಳು ಇದಕ್ಕೆ ಉದಾಹರಣೆಗಳು. ಈ ತರಬೇತಿಗೆ ಹಲವು ಇತಿಮಿತಿಗಳಿವೆ. ತರಬೇತಿ ಸಮಯದ ಅವಧಿ ಕಡಿಮೆ. ಕೆಲವು ನಿಗಧಿತ ವಿಷಯಗಳನ್ನು ಮಾತ್ರ ಅಭ್ಯಾಸ ಮಾಡುವುದು. ಆದ್ದರಿಂದ ಉತ್ತಮ ಶಿಕ್ಷಕನಾಗಲು ಬೇಕಾಗುವ ಎಲ್ಲಾ ರೀತಿಯ ಜ್ಞಾನ, ಕೌಶಲ್ಯಗಳು ಮತ್ತು ಮನೋಭಾವನೆಗಳ ಪರಿವರ್ತನೆಗೆ ಬೇಕಾದ ಎಲ್ಲಾ ರೀತಿಯ ತರಬೇತಿಯನ್ನು ಈ ಅಲ್ಪ ಅವಧಿಯಲ್ಲಿ ಕೊಡಲು ಸಾಧ್ಯವಾಗುವುದಿಲ್ಲ. ಅಲ್ಲದ ಶಿಕ್ಷಣಕ್ಷೇತ್ರದಲ್ಲಿ ಮುಂದೆ ಆಗಬಹುದಾದ ಎಲ್ಲಾ ಬದಲಾವಣೆಗಳನ್ನು, ಸಂಶೋಧನಾ ಬೆಳವಣಿಗೆಗಳನ್ನು ಅವಧಿಯಲ್ಲೇ ಊಹಿಸಿಕೊಂಡು ತರಬೇತಿ ಕೊಡುವುದು ಸಾಧ್ಯವೇ ಇಲ್ಲ. ಜೊತೆಗೆ ಜ್ಞಾನಸ್ಫೋಟ, ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ, ಬೋಧನಾ ವಿಧಾನಗಳಲ್ಲಿ ಬದಲಾವಣೆಗಳು ಮುಂತಾದ ಅಂಶಗಳು ರಭಸವಾಗಿ ಹಾಗೂ ನಿರಂತರವಾ ನಡೆಯುವುದರಿಂದ, ಇವೆಲ್ಲವನ್ನು ಇಂದಿನ ಸೇವಾಪೂರ್ವ ಅವಧಿಯಲ್ಲೇ ಅಳವಡಿಸಿಕೊಳ್ಳುವುದ ಅಸಾಧ್ಯ. ಆದ್ದರಿಂದ ಮುಂದಿನ ಬೆಳವಣಿಗೆಗಳಿಗನುಸಾರವಾಗಿ, ಆಯಾ ಸಮಯ ಹಾಗ ಅಗತ್ಯತೆಗಳಿಗೆ ತಕ್ಕಂತೆ ವಿಶೇಷ ತರಬೇತಿಯನ್ನು ಕೊಡುವುದು ಸೇವೆಗೆ ಸೇರಿದ ನಂತ ಮಾತ್ರವೇ ಸಾಧ್ಯ. ಇದು ಪ್ರಶಿಕ್ಷಣದ ಮುಂದಿನ ಭಾಗದ ತರಬೇತಿ ಕ್ರಮ.

ಸೇವಾನಿರತ ಶಿಕ್ಷಕರ ತರಬೇತಿ (In-service Training)

ಇದು ಒಬ್ಬ ಕಾರ್ಯನಿರತ ಶಿಕ್ಷಕನು ತನ್ನ ಸೇವಾ ಅವಧಿಯ ಪೂರಾ ಆಗಿಂದಾ ಪಡೆಯುವ ವಿಶೇಷ ರೀತಿಯ ತರಬೇತಿ ಕಾರ್ಯಕ್ರಮ. ಇದರ ಮುಖ್ಯ ಉದ್ದೇಶವೆಂದ ಕಾರ್ಯನಿರತ ಶಿಕ್ಷಕರ ಕಾರ್ಯವೈಖರಿಯಲ್ಲಿ ದಕ್ಷತೆ ಮತ್ತು ಪರಿಣಾಮಕತೆಯನ್ನುಂಟುಮಾ ಬೋಧನಾ - ಕಲಿಕಾ ಪ್ರಕ್ರಿಯೆಯ ಗುಣಮಟ್ಟವನ್ನು ಉತ್ತಮಗೊಳಿಸುವುದು ಹಾಗೂ ಶಿಕ್ಷಣ ಶ್ರೇಷ್ಠತೆಯನ್ನು ವೃದ್ಧಿಸುವುದು. ಜೊತೆಗೆ ಈ ವಿಶೇಷ ತರಬೇತಿ ಕಾರ್ಯಕ್ರಮಗಳಲ್ಲಿ ಶಿಕ್ಷಕ ಭಾಗವಹಿಸುವುದರಿಂದ ಅವರ ವಿಷಯ ಜ್ಞಾನ, ಬೋಧನಾ ಕೌಶಲ್ಯಗಳು, ವೃತ್ತಿ ಮನೋಭಾವ ಇತ್ಯಾದಿಗಳನ್ನು ಅಗತ್ಯತೆಗೆ ತಕ್ಕಂತೆ ನವೀಕರಿಸಿಕೊಂಡು ಅವರ ವೃತ್ತಿ ಬೆಳವಣಿಗೆಯನ್ನುಂಟ ಮಾಡಲಾಗುತ್ತದೆ. ಆದ್ದರಿಂದ ಇಂದು ಸೇವಾನಿರತ ತರಬೇತಿ ಕಾರ್ಯಕ್ರಮಗಳಿಗೆ ಹೆಚ್ಚ ಮಹತ್ವ ನೀಡಲಾಗಿದೆ. ಈ ಕಾರ್ಯವನ್ನು ನಿರ್ವಹಿಸಲು ಹಲವಾರು ಸಂಸ್ಥೆಗಳನ್ನು ವಿವಿ ಹಂತಗಳಲ್ಲಿ ಆರಂಭಿಸಲಾಗಿದೆ. ಇವುಗಳಲ್ಲಿ ಸರಕಾರಿ ಸಂಸ್ಥೆಗಳೇ ಅಲ್ಲದೆ, ಅನೇ ಸ್ವಯಂಸೇವಾ ಸಂಸ್ಥೆಗಳೂ, ವೃತ್ತಿಪರ ಸಂಘಸಂಸ್ಥೆಗಳೂ ಸೇರಿವೆ. ಕೆಲವನ್ನು ಮಾತ್ರ ಇ ಪರಿಚಯಿಸಲಾಗಿದೆ.

ಪ್ರಾಥಮಿಕ ಶಾಲಾ ಸೇವಾನಿರತ ಶಿಕ್ಷಕರ ತರಬೇತಿಗಾಗಿ ಜಿಲ್ಲಾಮಟ್ಟದಲ್ಲಿ 'ಜಿಲ ಶಿಕ್ಷಣ ತರಬೇತಿ ಸಂಸ್ಥೆ' (District Institutes of Education and Training)ಗಳ ಇವು ಜಿಲ್ಲೆಯ ಎಲ್ಲಾ ಪ್ರಾಥಮಿಕ ಶಿಕ್ಷಕರಿಗೆ ವಿಶೇಷ ರೀತಿಯ ಕಾರ್ಯಕ್ರಮಗಳನ ಹಮ್ಮಿಕೊಳ್ಳುತ್ತವೆ. ಇವಕ್ಕೆ ಪೂರಕವಾಗಿ ಕ್ಷೇತ್ರ ಸಂಪನ್ಮೂಲ ಕೇಂದ್ರಗಳು (Bloc Resource Centres) ಮತ್ತು ವಿಶ್ವಬ್ಯಾಂಕಿನ ನೆರವಿನಿಂದ ಜಾರಿಗೆ ಬಂದಿರುವ ಜಿಲ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (District Primary Education Programme)ಗ ಕಾರ್ಯೋನ್ಮುಖವಾಗಿವೆ. ಇವುಗಳ ಜೊತೆಗೆ ರಾಜ್ಯಶಿಕ್ಷಣ ಸಂಶೋಧನೆ ಮತ್ತು ತರಬೆ

ವಿಭಾಗ (Department of State Educational Research and Training)ದ ವಿವಿಧ ಘಟಕಗಳು. ಪ್ರಾಂತೀಯ ಶಿಕ್ಷಣ ಸಂಸ್ಥೆಗಳು (Regional Institutes of Education), ಪ್ರಾಂತೀಯ ಆಂಗ್ಲಭಾಷಾ ಬೋಧನಾ ಸಂಸ್ಥೆ (Regional Institute of English) ಮತ್ತು ಕ್ಷೇತ್ರ ಹಾಗೂ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳೂ ಸಹ ಅನೇಕ ಬಗೆಯ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುತ್ತದೆ.

ಇನ್ನು ಪ್ರೌಢಶಾಲಾ ಸೇವಾನಿರತ ಶಿಕ್ಷಕರ ತರಬೇತಿಗಾಗಿ ಅನೇಕ ಸಂಘ ಸಂಸ್ಥೆಗಳಿವೆ. ಅವುಗಳಲ್ಲಿ ಮುಖ್ಯವಾದುವೆಂದರೆ, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು (Colleges of Teacher Education), ಶಿಕ್ಷಣ ಉನ್ನತ ಅಧ್ಯಯನ ಸಂಸ್ಥೆಗಳು (Institutes of Advanced Studies in Education), DSERT ಸಂಸ್ಥೆಯ ವಿವಿಧ ಘಟಕಗಳು, NCERT ಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳು, ಪ್ರಾಂತೀಯ ಆಂಗ್ಲಭಾಷಾ ಬೋಧನಾ ಸಂಸ್ಥೆ, (Regional Institute of English) ಶಿಕ್ಷಣ ಮಹಾವಿದ್ಯಾಲಯಗಳ ವಿಸ್ತರಣಾ ಶಾಖೆಗಳು (Departments of Extension Services) ಹಾಗೂ ಪ್ರೌಢಶಾಲಾ ಶಿಕ್ಷಕರ ವೃತ್ತಿಸಂಘಗಳು. ಈ ಸಂಸ್ಥೆಗಳು ಭಾಷಾ ಬೋಧನೆ, ವಿಜ್ಞಾನ, ಗಣಿತ, ಸಮಾಜವಿಜ್ಞಾನ, ಕಾರ್ಯಾನುಭವ, ಜನಸಂಖ್ಯಾ ಶಿಕ್ಷಣ, ಪರಿಸರ ಶಿಕ್ಷಣ, ಶೈಕ್ಷಣಿಕ ತಂತ್ರಜ್ಞಾನ, ಮೌಲ್ಯಮಾಪನ ವಿಧಾನ ಇವುಗಳಿಗೆ ಸಂಬಂಧಿಸಿದಂತೆ ಹಲವಾರು ಅಲ್ಪಾವಧಿಯ ಸೇವಾನಿರತ ತರಬೇತಿ ಕಾರ್ಯಕ್ರಮಗಳನ್ನು ಆಗಿಂದಾಗ್ಗೆ ನಡೆಸುತ್ತವೆ.

ಸೇವಾನಿರತ ತರಬೇತಿ ಕಾರ್ಯಕ್ರಮಗಳು ಅಲ್ಪಾವಧಿಯವು. ಆದರೂ ಇವು ವಿಷಯ ನಿಖರತೆ, ನಿರ್ದಿಷ್ಟ ಉದ್ದಿಷ್ಟಗಳು ಹಾಗೂ ಶಿಕ್ಷಕರ ಅವಶ್ಯಕತೆಗಳ ಆಧಾರದ ಮೇಲೆ ಯೋಜಿಸಲ್ಪಟ್ಟು, ಪರಿಣಿತರಾದ ವಿಷಯತಜ್ಞರು ಅಥವಾ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯರೂಪಗೊಳ್ಳುತ್ತವೆಯಾದ್ದರಿಂದ ಹೆಚ್ಚು ಪರಿಣಾಮಕಾರಿಯಾಗಿವೆ. ಇವುಗಳ ಮುಖ್ಯ ರೂಪಗಳೆಂದರೆ ಕಾರ್ಯಾಗಾರ ಅಥವಾ ಕಮ್ಮಟಗಳು, ಪುನಶ್ಚೇತನ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು, ಅಧ್ಯಯನ ಗೋಷ್ಠಿಗಳು, ಶೈಕ್ಷಣಿಕ ಸಮ್ಮೇಳನಗಳು ಮೊದಲಾದವು.

ಶಿಕ್ಷಕರ ಶಿಕ್ಷಣದ ಮುನ್ನೋಟ

ಈಗಾಗಲೇ ಹೇಳಿರುವಂತೆ, ಶಿಕ್ಷಣವು ನಿಂತ ನೀರಲ್ಲ; ನಿರಂತರವಾಗಿ ಸಾಗಿ ಹರಿಯುವ ಮಹಾಪೂರ. ಶಿಕ್ಷಣಕ್ಷೇತ್ರದಲ್ಲಿ ಬದಲಾವಣೆಗಳು, ಬೆಳವಣಿಗೆಗಳು, ಪ್ರಯೋಗಗಳು, ಸಂಶೋಧನೆಗಳು ನಿರಂತರವಾಗಿ ನಡೆಯುವುದು ಸಹಜ ಹಾಗೂ ಅವಶ್ಯಕ. ಬದಲಾಗುತ್ತಿರುವ ಸಮಾಜದಲ್ಲಿ ಶಿಕ್ಷಣವು ಹೊಸಹೊಸ ಮಜಲುಗಳ ಸ್ಪರ್ಧೆಯಿಂದ ವಿನೂತನ ಸವಾಲುಗಳನ್ನೆದುರಿಸಬೇಕಾಗುತ್ತದೆ. ಅದರಲ್ಲೂ, 21ನೇ ಶತಮಾನಕ್ಕೆ ದಾಪುಗಾಲಿಡುತ್ತಿರುವ ಈ ಸಮಯದಲ್ಲಿ ಮುಂದಿನ ಶತಮಾನದ ಅಗತ್ಯತೆಗಳಿಗನುಸಾರವಾಗಿ ಶಿಕ್ಷಣವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ವಿಜ್ಞಾನ ತಂತ್ರಜ್ಞಾನಗಳ ಬೆಳಕೆ, ಸಾಮಾಜಿಕ ಸಮಸ್ಯೆಗಳು, ಅಂತಾರಾಷ್ಟ್ರೀಯ ವಿದ್ಯಮಾನಗಳು, ಜೀವನ ಮೌಲ್ಯಗಳು ಇತ್ಯಾದಿಗಳು ಕ್ರಮೇಣ ಬದಲಾವಣೆ ಹೊಂದುತ್ತಿರುವ ಹೊಸ ಸಮಾಜದಲ್ಲಿ ಜೀವಿಸಲು, ನಮ್ಮ ಮಕ್ಕಳಿಗೆ ನೆರವಾಗುವ ಶಿಕ್ಷಣಪದ್ಧತಿ ರೂಪುಗೊಳ್ಳಬೇಕಾಗಿದೆ. ಇಂತಹ ಭವಿಷ್ಯದ ಶಿಕ್ಷಣಕ್ರಮಕ್ಕೆ ತ್ವರಿತವಾಗಿ ಸ್ಪಂದಿಸುವ ಶಿಕ್ಷಕರ ಶಿಕ್ಷಣಕ್ರಮದಲ್ಲಿಯೂ ಅನೇಕ ಬದಲಾವಣೆಗಳಾಗಬೇಕಾದುದು

ಅನಿವಾರ್ಯ. ಈ ಬದಲಾವಣೆಗಳು ಸೇವಾಪೂರ್ವ ಹಾಗೂ ಸೇವಾನಿರತ ತರಬೇ
ಕ್ರಮಗಳೆರಡರಲ್ಲಿಯೂ ಆಗಬೇಕು. ಪ್ರಸ್ತುತ ಸಾಂಪ್ರದಾಯಿಕ ಹಾಗೂ ಔಪಚಾರಿಕ ತರಬೇ
ಕ್ರಮದಿಂದ ಮಾತ್ರವೇ ಇದು ಸಾಧ್ಯವಾಗಲಾರದು. ಪ್ರಶಿಕ್ಷಣ ಕ್ಷೇತ್ರದಲ್ಲಿ ಇನ್ನು ಮುಂ
ಹೆಚ್ಚು ಪ್ರಾಧಾನ್ಯತೆಯನ್ನು ತಂತ್ರಜ್ಞಾನದ ಬಳಕೆ, ಅದರಲ್ಲೂ ಗಣಕಯಂತ್ರಗಳ ಬಳಕೆ, ಪರಿಸ
ಸಂರಕ್ಷಣೆ, ಜನಸಂಖ್ಯಾ ನಿಯಂತ್ರಣ, ರಾಷ್ಟ್ರೀಯ ಮೌಲ್ಯಗಳ ಬೆಳವಣಿಗೆ ಮತ್ತು ಅಗತ್ಯ
ಆಧಾರಿತ ಶೈಕ್ಷಣಿಕ ಸಂಶೋಧನೆ ಇವೇ ಮೊದಲಾದವುಗಳಿಗೆ ಮೀಸಲಿಡಬೇಕು. ಸೇವಾನಿ
ತರಬೇತಿಗಂತೂ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. ಶಿಕ್ಷಣವನ್ನು ಸಮಾಜದ ಎಲ್ಲ
ವರ್ಗಗಳಿಗೂ ಮುಟ್ಟಿಸುವಲ್ಲಿ ನೆರವಾಗಬಹುದಾದ ತಂತ್ರಜ್ಞಾನವನ್ನು ಪ್ರಶಿಕ್ಷಣ ಕ್ರಮ
ಅಳವಡಿಸಿಕೊಳ್ಳಬೇಕು. ಶೈಕ್ಷಣಿಕ ವಿಷಯಗಳ ಬಗ್ಗೆ ಆಮೂಲಾಗ್ರ ಚಿಂತನೆ ಮತ್ತ
ಕಾರ್ಯಕ್ರಮಗಳು ರೂಪುಗೊಳ್ಳಬೇಕು ಹಾಗೂ ರೂಪಿತ ಕಾರ್ಯಕ್ರಮಗಳನ್ನು ನಿಷ್ಠೆಯಿಂ
ಅನುಷ್ಠಾನಗೊಳಿಸುವ ಶೈಕ್ಷಣಿಕ ಕಾರ್ಯಕರ್ತರನ್ನು ಸಜ್ಜುಗೊಳಿಸುವಲ್ಲಿ ಭವಿಷ್ಯದ ಪ್ರಶಿಕ್ಷ
ಪದ್ಧತಿಯು ಕಾರ್ಯೋನ್ಮುಖವಾಗಬೇಕು. ಇಂತಹ ಮಹತ್ಕಾರ್ಯವನ್ನು ದಕ್ಷತೆಯಿಂ
ನಿರ್ವಹಿಸುವ ಹೊಣೆಗಾರಿಕೆ ಪ್ರಶಿಕ್ಷಣ ಕ್ಷೇತ್ರದ ಎಲ್ಲಾ ಚಿಂತಕರು, ಆಡಳಿತಗಾರರ
ಪ್ರಶಿಕ್ಷಕರು, ಸರಕಾರೀ ಹಾಗೂ ಖಾಸಗಿ ಕ್ಷೇತ್ರದ ಎಲ್ಲಾ ಪ್ರಶಿಕ್ಷಣ ಸಂಘ ಸಂಸ್ಥೆಗಳಿಗ
ಸೇರಿದೆ.

ಶೈಕ್ಷಣಿಕ ಮೇಲ್ವಿಚಾರಣೆ

ಸಿ. ಹನುಮೇಗೌಡ

ಪೀಠಿಕೆ : ಶಿಕ್ಷಣ ಮೇಲ್ವಿಚಾರಣೆ ಬಹಳ ಮಹತ್ವದ್ದು. ನಾವಿಕನಿಲ್ಲದ ನಾವೆ ಯಾವ ಬಂಡೆಗಾದರೂ ಬಡಿಯಬಹುದು. ಹಾಗೆಯೇ ಗುರಿಯಿಲ್ಲದ ಶಿಕ್ಷಣ ರಾಷ್ಟ್ರವನ್ನು ಯಾವ ದುರಂತಕ್ಕಾದರೂ ಈಡುಮಾಡುಬಹುದು. ಅಂತೆಯೇ ಕಡಿವಾಣವಿಲ್ಲದ ಕುದುರೆ ಎಲ್ಲಿಗಾದರೂ ಹೊತ್ತೊಯ್ಯಬಹುದು. ಹಾಗೆಯೇ ಮೇಲ್ವಿಚಾರಣೆ ಇಲ್ಲದ ಶಿಕ್ಷಣ ಯಾವ ದಿಕ್ಕಿಗಾದರೂ ನಮ್ಮನ್ನು ಕರೆದೊಯ್ಯಬಹುದು. ಆದ್ದರಿಂದ ಇವುಗಳ ಬಗ್ಗೆ ಅರಿಯುವುದು ಶಿಕ್ಷಣತಜ್ಞರ ಆದ್ಯಕರ್ತವ್ಯವೆಂಬುದನ್ನು ಅರಿಯಬೇಕು. ಆಗಲೇ ಸಮಾಜ ನಿರ್ದಿಷ್ಟವಾದ ಗುರಿಯತ್ತ ಸಾಗಲು ಸಾಧ್ಯ. ಗುರಿಯಿಲ್ಲದ ಶಿಕ್ಷಣ ಮೇಲ್ವಿಚಾರಣೆಯಿಲ್ಲದ ಆಡಳಿತ ಸಮಾಜಕ್ಕೆ ಮಾರಕ.

ಮಗು ಶಾಲೆಯಲ್ಲಿ ಏನನ್ನು ಕಲಿಯಬೇಕು ಎನ್ನುವುದರ ಬಗ್ಗೆ ಒಂದೊಂದು ಕಲ್ಪನಾ ಭಾವನೆ ಇರುತ್ತದೆ. ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಇರುವವರು ನೈತಿಕತೆ, ಸಭ್ಯತೆ ಹಾಗೂ ಪ್ರಮಾಣಿಕತೆಗಳ ಕಡೆ ಹೆಚ್ಚು ಗಮನ ಹರಿಸಿದರೆ, ಪ್ರಗತಿಪರರು ವಿಷಯಜ್ಞಾನಕ್ಕೆ ಹೆಚ್ಚು ಆದ್ಯತೆ ನೀಡುತ್ತಾರೆ. ಸನ್ನಿವೇಶ, ದೇಶ, ಕಾಲ ಇವುಗಳೂ ಶಿಕ್ಷಣದ ಗುರಿಗಳನ್ನು ನಿರ್ಧರಿಸುತ್ತವೆ. ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಉತ್ತಮ ನಾಗರೀಕರನ್ನು ಹಾಗೂ ರಾಷ್ಟ್ರಭಕ್ತರನ್ನು ತಯಾರಿಸಲು ರಾಷ್ಟ್ರ ಇಚ್ಛಿಸಿದರೆ, ಸಮಾಜವಾದದ ರಾಷ್ಟ್ರದಲ್ಲಿ ಸಮಾಜದ ಶ್ರೇಯೋಭಿವೃದ್ಧಿಗೆ ತಮ್ಮ ಸ್ವಾರ್ಥತೆಯನ್ನು ತ್ಯಾಗಮಾಡಿ ಸಮಾಜಕ್ಕೆ ದುಡಿಯಬೇಕಾಗುತ್ತದೆ. ಸ್ವಭಾವತಃ ಮನುಷ್ಯ ಸಂಘಜೀವಿ. ಸಮಾಜದಿಂದ ಅವನನ್ನು ಬೇರ್ಪಡಿಸುವಂತಿಲ್ಲ. ಸಮಾಜ ಹಾಗೂ ರಾಷ್ಟ್ರದ ಭವಿಷ್ಯ ಶಾಲಾ ಕಾಲೇಜುಗಳ ತರಗತಿಗಳಲ್ಲಿ ರೂಪಿತವಾಗುತ್ತದೆಯೇ ಹೊರತು ವಾಗ್ಮಿಯ ಕಲೆಯಿಂದಲ್ಲ. ಶಾಲಾ ಕಾಲೇಜುಗಳಿಂದ ಹೊರಬರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಅವರಿಗೆ ಕೊಡುವ ಶಿಕ್ಷಣದ ಆಧಾರದ ಮೇಲೆ ದೇಶದ ಭವಿಷ್ಯ ನಿರ್ಧರಿತವಾಗುತ್ತದೆ. ಆದ್ದರಿಂದ ಶಿಕ್ಷಣದ ಗುರಿ, ಅದರ ಸತ್ವ ಹಾಗೂ ಅದು ಅನುಷ್ಠಾನಕ್ಕೆ ಬಂದಿದೆಯೆ ಎನ್ನುವುದರ ಬಗ್ಗೆ ಮಾಡುವ ಮೇಲ್ವಿಚಾರಣೆ ರಾಷ್ಟ್ರದ ಸರ್ವತೋಮುಖದ ಏಳಿಗೆಗೆ ಅತ್ಯವಶ್ಯವೆಂಬುದನ್ನು ಮರೆಯಬಾರದು. ಶಿಕ್ಷಣದ ಗುರಿಗಳನ್ನು ರೂಪಿಸುವಾಗ ಶಿಕ್ಷಣತಜ್ಞರ ಮೇಲ್ವಿಚಾರಣೆ ಔಚಿತ್ಯ ಹಾಗೂ ಶಾಲೆಗಳಲ್ಲಿ ಅವುಗಳನ್ನು ಅನುಷ್ಠಾನಕ್ಕೆ ತರುವಾಗ ಶಿಕ್ಷಕರ ಹಾಗೂ ಶಾಲಾ ಮುಖ್ಯಸ್ಥರ ಮತ್ತು ವ್ಯವಸ್ಥಾಪಕರ ಮೇಲ್ವಿಚಾರಣೆ ಅವಶ್ಯಕ.

1. ಕುಟುಂಬ : ಮನೆ ಮಗುವಿನ ಮೊದಲ ಪಾಠಶಾಲೆ, ತಾಯಿಯೇ ಪ್ರಥಮ

ಗುರು. ಇಲ್ಲಿ ಕಲಿತ ವಿದ್ಯೆ ಮಗುವಿನಲ್ಲಿ ಜೀವನಾದ್ಯಂತ ಉಳಿಯುತ್ತದೆ. ಶಾಲೆ ಸಾಂಪ್ರದಾಯಕ ಶಿಕ್ಷಣವನ್ನು ಕೊಟ್ಟರೆ ಮನೆ ಸಾಂಪ್ರದಾಯರಹಿತ ಶಿಕ್ಷಣವ ಕೊಡುತ್ತದೆ. ಆದ್ದರಿಂದ ಇಲ್ಲಿ ತಾಯಿಯ ಪಾತ್ರ ಹಿರಿದಾದದ್ದು. ಮಕ್ಕಳ ಪ್ರಗತಿ ಮೇಲ್ವಿಚಾರಣೆಯೂ ಅವಳದೇ ಆಗಿರುತ್ತದೆ.

2. ಶಾಲೆ : ಶಾಲೆಯು ಸಾಂಪ್ರದಾಯಿಕ ಶಿಕ್ಷಣದ ಕೇಂದ್ರಬಿಂದು. ಶಾಲೆ ನಿರ್ದಿಷ್ಟವಾದ ಯೋಜನೆಗಳ ಪರಂಪರಾ ಕ್ರಮದ ಅನುಭವದ ಮಂದಿರವದು. ಶಾಲೆ ಸಮಾಜದ ಅನುಭವದ ಪ್ರತಿಭಾನ್ವಿತ ಅನರ್ಘ್ಯರತ್ನಗಳ ಕಣಜ. ಸಾಮಾ ಬದಲಾವಣೆಗಳು ಶಾಲೆಗಳಿಂದ ಹೊರಹೊಮ್ಮುತ್ತವೆ. ಶಾಲೆ ವಿವೇಚನಾತ್ಮಕ ವ್ಯಕ್ತಿಗಳ ತನ್ನ ಅನುಭವದ ಮೂಸೆಯಿಂದ ಎರಕಹೊಯ್ದು ಹೊರತರುತ್ತದೆ. ಮಕ್ಕಳಿಗೆ ಶಿಕ್ಷ ಕೊಡುವುದು ಸಮಾಜದ ಅಭಿವೃದ್ಧಿಗೆ ಶ್ರಮಿಸುವುದು. ಸ್ವಾತಂತ್ರ್ಯ, ಸಮಾನ ವಿಶ್ವಭ್ರಾತೃತ್ವವನ್ನು ಬೆಳೆಸುವುದು; ನೈತಿಕತೆ ಮತ್ತು ಶಿಸ್ತನ್ನು ಬೆಳೆಸುವುದು ಶಾಲೆಗಳ ಆ ಕರ್ತವ್ಯವಾಗಿದೆ. ಇವುಗಳನ್ನು ಮಕ್ಕಳು ತಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ ಅಥವಾ ಇಲ್ಲವೆ ಎಂಬುದನ್ನು ಶಾಲಾಶಿಕ್ಷಕರು ಹಾಗೂ ಮುಖ್ಯಸ್ಥರು ಮೇಲ್ವಿಚಾ ಮಾಡಿ ದೃಢಪಡಿಸಿಕೊಳ್ಳಬೇಕು.

3. ಸಮಾಜ : ಇದು ಪ್ರಜಾಪ್ರಭುತ್ವ ಹಾಗೂ ಸಮತಾವಾದದ ಕಾಲ; ಕೇ ಕೆಲವೇ ವ್ಯಕ್ತಿಗಳ ಕಾಲವಲ್ಲ. ವ್ಯಕ್ತಿ ಬೆಳೆಯಲು ಸಮಾಜ ಸಹಕಾರಿ. ಶಿಕ್ಷಣವಿಲ್ಲ ವ್ಯಕ್ತಿಗಳ ಸಮಾಜ ಅಂಧಸಮಾಜ. ಒಂದು ಕಡೆ ಸಮಾಜವು ವ್ಯಕ್ತಿಯಿಂ ಪ್ರಭಾವಿತನಾದರೆ ಮತ್ತೊಂದು ಕಡೆ ಸಮಾಜದಿಂದ ವ್ಯಕ್ತಿಯು ಪ್ರಭಾವಿತನಾಗುತ್ತಾ ಆದ್ದರಿಂದ ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಗೂ ಅತ್ಯಾವಶ್ಯಕ.

4. ಧರ್ಮ : ಧರ್ಮದ ಅವಿಭಾಜ್ಯ ಅಂಗಗಳಾದ ಸೌಂದರ್ಯ ಮತ್ತು ಶೀಲ ಮೌಲ್ಯಗಳನ್ನು ಮಕ್ಕಳು ಮೈಗೂಡಿಸಿಕೊಳ್ಳಬೇಕು. ಧರ್ಮಪಾಲನೆಯಿಂದ ಮಾತ್ರ ನ ನಮ್ಮ ಗುರಿಯನ್ನು ಮುಟ್ಟಬಲ್ಲೆವು. ಧರ್ಮದ ಆಧಾರದ ಮೇಲೆ ಯಾವ ಯುದ್ಧ ನಡೆಸಬಾರದೆಂದು ಮಕ್ಕಳಿಗೆ ತಿಳಿಸಬೇಕು. ಎಲ್ಲಾ ಧರ್ಮಗಳ, ಧರ್ಮಗ್ರಂಥಗ ಧರ್ಮತತ್ವಗಳ, ಧರ್ಮಸಂಸ್ಥಾಪಕರ, ಧರ್ಮಕ್ಕೆ ಸಂಬಂಧಿಸಿದ ಸ್ಥಳಗಳ ಹಾಗೂ ಪೂ ವಸ್ತುಗಳ ಬಗ್ಗೆ ಮಕ್ಕಳಲ್ಲಿ ಗೌರವ, ತಾಳ್ಮೆ ಹಾಗೂ ಪೂಜ್ಯಭಾವನೆ ಬೆಳೆಯುವ ಮಾಡಬೇಕು. ಎಲ್ಲ ಧರ್ಮಗಳಲ್ಲಿ ಅನಂತಶಕ್ತಿಯ ಆರಾಧನೆ ಇರುವುದರಿಂದ ಅವು ಬಗ್ಗೆ ಮಕ್ಕಳಲ್ಲ ಭೇದಭಾವ ಮೂಡದಂತೆ ಶಿಕ್ಷಕರು ನೋಡಿಕೊಳ್ಳಬೇಕು. ಮುಖ್ ಪಾಧ್ಯಾಯರಿಂದ ಇದರ ಮೇಲ್ವಿಚಾರಣೆಯೂ ಅಗತ್ಯವಾಗಿ ಬೇಕಾಗಿದೆ.

ದಿನಕ್ಕೊಂದು ಒಳ್ಳೆಯ ಕೆಲಸ: ನಾವು ವಿಜ್ಞಾನದ ಯುಗದಲ್ಲಿದ್ದೇವೆ, ಮೇ ಹಿಮಗಿರಿಯನ್ನೇರಿದ್ದೇವೆ; ಸಾಗರೋಲ್ಲಂಘನೆ ಮಾಡಿದ್ದೇವೆ. ನಭೋಮಂಡಲವನ್ನು ಭೇ ಚಂದ್ರನನ್ನು ಮಾನವ ತನ್ನ ಪುಟ್ಟಪಾದದಿಂದ ಮೆಟ್ಟಿ ಮಂಗಳ ಶುಕ್ರ ಗ್ರಹಗಳ ಧಾವಿಸುತ್ತಿದ್ದಾನೆ. ಆದರೂ ಭೂಮಿಯ ಮೇಲೆ ಮಾನವನಂತೆ ಬಾಳುವುದನ್ನು ಕಲಿತಿ ಆದ್ದರಿಂದ ಸಮಾಜಕ್ಕೆ, ರಾಷ್ಟ್ರಕ್ಕೆ ಅಣುಸೇವೆಯನ್ನು ಸಲ್ಲಿಸಬೇಕಾದರೆ ಮಾ ಪರೋಪಕಾರ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕಾದರೆ, ಬಾಲ್ಯದಲ್ಲಿಂ

ಪರೋಪಕಾರ ಮಾಡಬೇಕು. ಆದ್ದರಿಂದ ದಿನಕ್ಕೊಂದು ಒಳ್ಳೆಯ ಕೆಲಸವನ್ನು ಮಕ್ಕಳು ಮಾಡುವಂತೆ ಪ್ರೇರೇಪಿಸಬೇಕು. ಉದಾಹರಣೆಗೆ ಬಾಯಾರಿದವರಿಗೆ ನೀರು ಕೊಡುವುದು, ಬಸ್ಸಿನಲ್ಲಿ ಪ್ರಯಾಣಮಾಡುವಾಗ ಹೆಂಗಸರಿಗೆ, ವಯಸ್ಸಾದವರಿಗೆ ಸ್ಥಳ ಕೊಡುವುದು, ತಂದೆ ತಾಯಿಗಳಿಗೆ ಸಹಾಯ ಮಾಡುವುದು ಇತ್ಯಾದಿಗಳನ್ನು ಮಾಡಿ ಮಕ್ಕಳು ತಮ್ಮ ದಿನಚರಿಯಲ್ಲಿ ಬರೆಯಬೇಕು. ಶಿಕ್ಷಕರು ಅದನ್ನು ನೋಡಿ ಸಹಿ ಹಾಕಬೇಕು. ಮಕ್ಕಳು ಮಾಡುವ ಕೆಲಸದ ಪ್ರಮಾಣ ಮುಖ್ಯವಲ್ಲ. ಒಳ್ಳೆಯದನ್ನೇ ಆಲೋಚಿಸಿ, ಅದನ್ನೇ ಮೈಗೂಡಿಸಿಕೊಂಡು ಅದನ್ನು ಅನುಷ್ಠಾನಕ್ಕೆ ತರುವ ಪ್ರವೃತ್ತಿಯನ್ನು ಮಕ್ಕಳು ಬೆಳೆಸಿಕೊಳ್ಳಬೇಕು. ಇದರಿಂದ ಸೇವಾ ಮನೋಭಾವನೆ ಅವರಲ್ಲಿ ಬೆಳೆಯುತ್ತದೆ. ಇದರ ಮೇಲ್ವಿಚಾರಣೆಯನ್ನು ಶಾಲಾ ಶಿಕ್ಷಕರು ಹಾಗೂ ಮುಖ್ಯಸ್ಥರು ಮಾಡಬೇಕು.

ನಿಸರ್ಗ ಮತ್ತು ಪರಿಸರ : ಪ್ರಕೃತಿಯನ್ನು ಮಗುವು ಪ್ರತಿನಿತ್ಯ ನೋಡಿದರೂ ಅದರ ಅಧ್ಯಯನ ಮಾಡಿಲ್ಲ. ನಿಬಿಡವಾಗಿ ಬೆಳೆದಿರುವ ಸಸ್ಯರಾಸಿ, ಆಕಾಶವನ್ನು ಭೇದಿಸುವಂತೆ ಶಿರವನ್ನು ಚಾಚಿ ನಿಂತಿರುವ ಪರ್ವತಶ್ರೇಣಿಗಳು, ನಿರಂತರವಾಗಿ ಹರಿಯುವ ನದಿಗಳು, ದೈವನಿರ್ಮಿತ ಪರಿಸರ. "ಇದನ್ನು ಮಾನವ ಸೂರೆಮಾಡಿದರೆ ಮಾನವನಿಗೆ ತಪ್ಪದು ವಿಪತ್ತು" ಎನ್ನುವುದನ್ನು ಮಕ್ಕಳಿಗೆ ತಿಳಿಸಬೇಕು. ಶಾಲೆಗಳ ಆವರಣದಲ್ಲಿ ಹಾಗೂ ಅವರ ಮನೆಗಳ ಮುಂಭಾಗದಲ್ಲಿ ತೆಂಗು ಮುಂತಾದ ಸಸಿಗಳನ್ನು ನೆಟ್ಟು ಬೆಳೆಸಬೇಕು. ಶಾಲೆಗಳನ್ನು ಶಿಕ್ಷಕರು ಹಾಗೂ ಮನೆಗಳಲ್ಲಿ ತಂದೆ ತಾಯಿಗಳು ಮಕ್ಕಳು ಮಾಡುವ ಕೆಲಸದ ಬಗ್ಗೆ ಗಮನ ಹರಿಸಿ ಮೇಲ್ವಿಚಾರಣೆ ಮಾಡಿ ಅವರು ಸಸಿಗಳನ್ನು ನೆಡುವಂತೆ ಮಾಡಬೇಕು. ಇದರಿಂದ ಪ್ರಕೃತಿಯ ಆರಾಧನಾ ಪ್ರವೃತ್ತಿ ಮಕ್ಕಳಲ್ಲಿ ಬೆಳೆದು ವನಸಂಪತ್ತನ್ನು ಬೆಳೆಸಿ ಪರಿಸರದ ಮಾಲಿನ್ಯವನ್ನು ತಡೆಗಟ್ಟಿದಂತಾಗುತ್ತದೆ. ಆದ್ದರಿಂದ ಸಸ್ಯಗಳನ್ನು ಬೆಳೆಸುವ ಪ್ರವೃತ್ತಿ ಮಕ್ಕಳಲ್ಲಿ ಬೆಳೆಯುವಂತೆ ಮಾಡಬೇಕು. ಇದರ ಮೇಲ್ವಿಚಾರಣೆಯನ್ನು ಶಿಕ್ಷಕರು ಹಾಗೂ ತಂದೆ ತಾಯಿಗಳು ಮಾಡಬೇಕು.

ಪ್ರಜಾಪ್ರಭುತ್ವ, ಪೌರತ್ವ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಭಾವೈಕ್ಯತೆ : ಪ್ರಜಾಪ್ರಭುತ್ವ ಪ್ರಜೆಗಳಿಂದ ಪ್ರಜೆಗಳಿಗಾಗಿ ನಿರ್ಮಿತವಾದ ಸರ್ಕಾರವಾಗಿದೆ. ಪ್ರಜೆಗಳೆಲ್ಲ ವಿದ್ಯಾವಂತರಾದರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ನ್ಯಾಯವನ್ನು ಪ್ರಜೆಗಳಿಗೆ ದೊರಕಿಸುವುದೇ ಪ್ರಜಾಪ್ರಭುತ್ವದ ಉದ್ದೇಶ. ಆಧುನಿಕ ಇತಿಹಾಸದ ಸಾಮಾಜಿಕ ಬದಲಾವಣೆಯ ಈ ಶತಕದಲ್ಲಿ ನಾವು ವಾಸಿಸುತ್ತಿದ್ದೇವೆ. ನಾವು ಗಮನಿಸಲಿ, ಗಮನಿಸದೇ ಇರಲಿ, ನಾವು ಸ್ವಾಗತಿಸಲಿ ಅಥವಾ ಸ್ವಾಗತಿಸದೆ ಇರಲಿ, ಇದು ಗಮನಾರ್ಹವಾದ ಪರ್ವಕಾಲವಾಗಿದೆ. ಭಾರತದ ಪ್ರಜಾಪ್ರಭುತ್ವ ಸಾಮಾನ್ಯ ವ್ಯಕ್ತಿಯ ಕೈಯಲ್ಲಿದೆ. ಅವನಿಗೆ ರಾಷ್ಟ್ರದ ಆಡಳಿತವನ್ನು ನಡೆಸುವ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಅರಿಯುವ ಜ್ಞಾನ ಹಾಗೂ ಆಡಳಿತಾತ್ಮಕ ಕೌಶಲಬೇಕು. ತನ್ನ ಹಿತವನ್ನು ತ್ಯಾಗಮಾಡಿ ನಾಗರೀಕತೆಯ ಬೆಳವಣಿಗೆ ಹಾಗೂ ರಾಷ್ಟ್ರದ ಕಲ್ಯಾಣಕ್ಕೆ ತನ್ನನ್ನು ತಾನೆ ಸಮರ್ಪಿಸಿಕೊಳ್ಳಬೇಕು. ಪ್ರಜಾಪ್ರಭುತ್ವದ ಶೀಲ ಹಾಗೂ ಘನತೆಯನ್ನು ಮಕ್ಕಳು ಅರಿಯುವಂತೆ ಶಿಕ್ಷಕರು ಮಾಡಬೇಕು. ಶಾಲಾ ಸರ್ಕಾರದ ರಚನೆ ಹಾಗೂ ಅದರ

ಧ್ಯೇಯೋದ್ದೇಶಗಳನ್ನು ರೂಪಿಸುವಲ್ಲಿ ಶಿಕ್ಷಕರ ಕೊಡಿಗೆ ಮಹತ್ವದ್ದು ಹಾಗೂ ಅವುಗಳ ಅನುಷ್ಠಾನಕ್ಕೆ ತರುವ ಬಗ್ಗೆ ಮೇಲ್ವಿಚಾರಣೆ ಮಾಡುವುದು ಶಿಕ್ಷಕರ ಹಾಗೂ ಶಾ ಮುಖ್ಯಸ್ಥರ ಕರ್ತವ್ಯ.

ಪೌರತ್ವ : ನಾಗರೀಕರಿಗೆ ದೊರೆತ ಶಿಕ್ಷಣದ ಆಧಾರದ ಮೇಲೆ ಪೌರತ್ವ ನಿಂತಿ ಇದರ ಆಧಾರದ ಮೇಲೆ ಪ್ರಜಾಪ್ರಭುತ್ವ ನಿಂತಿದೆ. ಪೌರತ್ವ ಪ್ರಜಾಪ್ರಭುತ್ವದ ಅವಿಭಾ ಅಂಗ. ಆದ್ದರಿಂದ ಇದನ್ನು ಮಕ್ಕಳು ಅರಿಯುವಂತೆ ಮಾಡಬೇಕು. ಇದರ ಕಡೆ ಶಿಕ್ಷಕ ಗಮನ ಹರಿಸಬೇಕು.

ರಾಷ್ಟ್ರೀಯ ಭಾವೈಕ್ಯತೆ : ರಾಷ್ಟ್ರೀಯ ಭಾವೈಕ್ಯತೆ ಪ್ರಜಾಪ್ರಭುತ್ವದಲ್ಲಿ ಬಹ ಪ್ರಮುಖವಾದದ್ದು. ಕ್ಷುಲ್ಲಕ ವಿಷಯಗಳಿಗಾಗಿ ಹೋರಾಟ ನಡೆಯುತ್ತಿರುವುದ ನೋಡುತ್ತಿದ್ದೇವೆ. ಪ್ರಾಂತೀಯ ಭಾವನೆಗಳು ರಾಷ್ಟ್ರೀಯ ಭಾವನೆಗಳಿಗೆ ಅಡ್ಡಿಯಾ ಬಾರದು. ದೇಶಾಭಿಮಾನ ಬೆಳೆಯುವಂತೆ ಮಾಡಲು ಶಾಲೆಗಳಲ್ಲಿ ರಾಷ್ಟ್ರೀಯ ಧಮ ಸ್ವಾತಂತ್ರ್ಯಕ್ಕೆ ಹೋರಾಡಿದ ಹೋರಾಟಗಾರರ ಕಥೆಗಳನ್ನು ಹೇಳಬೇಕು. ಶಿಕ್ಷಕರು ಎಚ್ಚ ವಹಿಸಬೇಕು. ಮುಖ್ಯೋಪಾಧ್ಯಾಯರು ಎಚ್ಚರಿಕೆ ವಹಿಸಿ ರಾಷ್ಟ್ರೀಯ ಭಾವನೆ ಮಕ್ಕಳ ಪುಂಖಾನುಪುಂಖವಾಗಿ ವೃದ್ಧಿಗೊಳ್ಳುವಂತೆ ನೋಡಿಕೊಳ್ಳಬೇಕು. ರಾಜಕೀಯ, ಆರ್ಥಿ ಭಾಷಿಕ, ಪ್ರಾಂತೀಯ, ಧಾರ್ಮಿಕ ಹಾಗೂ ಸಾಮಾಜಿಕ ಭಿನ್ನತೆಗಳನ್ನು ಮರೆತು ನಾವೆಲ್ಲ ಭಾರತೀಯರೆಂದು ಮಕ್ಕಳು ಭಾವಿಸುವಂತೆ ಮಾಡಬೇಕು. ರಾಷ್ಟ್ರಗೀತೆ, ರಾಷ್ಟ್ರಧ್ವಜ ಬಗ್ಗೆ ಮಕ್ಕಳು ಗೌರವಹೊಂದುವಂತೆ ಹಾಗೂ ರಾಷ್ಟ್ರಭಾಷೆಯನ್ನು ಮಕ್ಕಳು ಕಲಿಯುವ ಮಾಡಬೇಕು. ಶಾಲಾ ಶಿಕ್ಷಕರಿಂದ ಅವುಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆಯ ಅತ್ಯಾವಶ್ಯಕ.

ಹಾಗೆಯೇ ಅಂತರರಾಷ್ಟ್ರೀಯ ಭಾವನೆ ಬೆಳೆಯಬೇಕು. ವೈಜ್ಞಾನಿಕ ಸಂಶೋಧ ಯಿಂದ ಭೌಗೋಳಿಕ ಸೀಮೋಲ್ಲಂಘನೆ ಮಾಡಿ ಇಡೀ ಪೃಥ್ವಿಯನ್ನೇ ಒಂ ಕುಟುಂಬವನ್ನಾಗಿ ಪರಿವರ್ತಿಸಿರುವಾಗ, ಒಂದು ರಾಷ್ಟ್ರದ ನೆರವಿನಿಂದ ಮತ್ತೊಂದು ರಾ ತನ್ನ ಪ್ರಗತಿಯನ್ನು ಸಾಧಿಸುತ್ತಿರುವಾಗ, ನಾವು ಪಡೆಯುವ ಜ್ಞಾನ ಅಂತ ರಾಷ್ಟ್ರೀಯವಾಗಿರುವಾಗ, ಪೃಥ್ವಿಯ ಒಂದು ಭಾಗದ ಮೇಲೆ ಯುದ್ಧ ನಡೆದರೆ ಅಥ ಕ್ಷಾಮ ಬಂದರೆ ಅಥವಾ ಯಾವುದಾದರೂ ಸಂಶೋಧನೆ ನಡೆದಾಗ ಅದರ ಫಲವ ಇಡೀ ಪೃಥ್ವಿಯೇ ಅನುಭವಿಸುವಾಗ, ರಾಷ್ಟ್ರೀಯ ಭಾವನೆಗೆ ಅಡ್ಡಿಯಾಗದಂತೆ ಅಂತ ರಾಷ್ಟ್ರೀಯ ಭಾವನೆಯನ್ನು ಮಕ್ಕಳು ಬೆಳೆಸಿಕೊಂಡು ವಿಶ್ವಮಾನವರುಗುವಂತೆ ಶಾ ಮಾಡಬೇಕು. ಶಿಕ್ಷಕರು ಹಾಗೂ ತಂದೆತಾಯಿಗಳ ಹೊಣೆ ಇದು ಎನ್ನುವುದನ್ನು ಮರೆ ಬಾರದು. ಆಗಾಗ್ಗೆ ಮಕ್ಕಳಲ್ಲಿ ಈ ಭಾವನೆಗಳು ಬೆಳೆದಿವೆಯೆ ಅಥವಾ ಇಲ್ಲವ ಇಲ್ಲದಿದ್ದರೆ ಕಾರಣವೇನು ಎಂಬುದನ್ನು ಸಮೀಕ್ಷೆ ಮಾಡಿ ಶಿಕ್ಷಕರು ಈ ಭಾವನೆಗ ಅವರಲ್ಲಿ ಬೆಳೆಯುವಂತೆ ಮಾಡಬೇಕು ಹಾಗೂ ಅದರ ಮೇಲ್ವಿಚಾರಣೆಯನ್ನು ಮಾಡಬೇಕು

ಪ್ರಸಾರ ಮಾಧ್ಯಮಗಳು : ಸಮಾಚಾರ ಕ್ಷೇತ್ರದಲ್ಲಿ ಅದರ್ಶಸ್ವರೂಪದ ಬೆಳವಣಿ ಅಧುನಿಕಯುಗದಲ್ಲಿ ಬೆಳೆದಿದೆ. ಪತ್ರಿಕೆಗಳು, ಚಲನಚಿತ್ರಗಳು, ಆಕಾಶವಾಣಿ, ದೂರದರ್ಶ ಜನತೆಯ ಮೇಲೆ ಹೆಚ್ಚಿನ ಪ್ರಭಾವಬೀರುವ ಸಾಧನಗಳಾಗಿವೆ. ಆದ್ದರಿಂದ ಶಿಕ್ಷಣಕ್ಷೇ

ಹಾಗೂ ಸಮಾಚಾರ ಕ್ಷೇತ್ರ ಇವುಗಳಲ್ಲಿ ನಿಕಟವಾದ ಸಂಬಂಧ ಬೆಳೆಯಬೇಕು. ಅಹಿತಕರ ಸನ್ನಿವೇಶದಲ್ಲಿ ಬೆಳೆಯುವ ಮಕ್ಕಳಿಗೆ ಪ್ರಸಾರಮಾಧ್ಯಮಗಳ ಮೂಲಕ ಶಿಕ್ಷಣ ಪ್ರಸಾರವಾಗ ಬೇಕು.

ಚಲನಚಿತ್ರಗಳು ಶಿಕ್ಷಣ ಪ್ರಸಾರದ ಪ್ರಬಲವಾದ ಹಾಗೂ ಫಲಕಾರೀ ಮಾಧ್ಯಮ. ಚಲನಚಿತ್ರಗಳು ದೃಶ್ಯ ಹಾಗೂ ಧ್ವನಿಗಳು ಜ್ಞಾನೇಂದ್ರಿಯಗಳ ಮೂಲಕ ಮನಸ್ಸಿನ ಮೇಲೆ ಪ್ರಬಲ ಪರಿಣಾಮವನ್ನು ಉಂಟುಮಾಡುತ್ತವೆ. ಶಿಕ್ಷಣ, ಆರೋಗ್ಯ, ವಿನೋದ, ಹರ್ಷೋಲ್ಲಾಸ, ಹಾಸ್ಯಗಳ ಜೊತೆಯಲ್ಲಿ ಶಿಕ್ಷಣ ಪ್ರಸಾರವಾಗುವುದನ್ನು ಮಗು ಗಮನಿಸುವುದರಿಂದ ಅದಕ್ಕೆ ಶಿಕ್ಷಣ ದೊರಕಿದಂತಾಗುತ್ತದೆ. ಇದೊಂದು ಪ್ರಬಲವಾದ ಮಾಧ್ಯಮ.

ಆದರೆ ದುಷ್ಕೃತ್ಯ, ದೌರ್ಜನ್ಯ, ಹಿಂಸೆ, ಲೈಂಗಿಕ ಹಾಗೂ ಭಯೋತ್ಪಾದಕ ದೃಶ್ಯಗಳನ್ನು ಮಕ್ಕಳಿಗೆ ತೋರಿಸಬಾರದು. ತಾಯಿಯಂದಿರು, ಶಿಕ್ಷಕರು ಇದರ ಬಗ್ಗೆ ಗಮನ ಹರಿಸಿ ಮಕ್ಕಳು ಇಂತಹ ಚಿತ್ರಗಳಿಂದ ದೂರವಿರುವಂತೆ ಮುನ್ನೆಚ್ಚರಿಕೆ ವಹಿಸಬೇಕು ಹಾಗೂ ತೆಗೆದುಕೊಂಡ ಎಚ್ಚರಿಕೆ ಬಗ್ಗೆ ಮೇಲ್ವಿಚಾರಣೆಯೂ ಅವಶ್ಯಕ.

ಆಟ : ಮನಶಾಸ್ತ್ರದ ಪ್ರಕಾರ ಆಟ ಮಗುವಿನ ವ್ಯಕ್ತಿತ್ವದ ಅವಿಭಾಜ್ಯ ಅಂಗ. ಒಬ್ಬ ಕವಿ ಕವನ ಬರೆಯದೆ ಹೇಗೆ ಇರಲು ಸಾಧ್ಯವಿಲ್ಲವೋ, ಒಬ್ಬ ಸಂಗೀತಗಾರ ಹಾಡನ್ನು ಹಾಡದೆ ಹೇಗೆ ಇರಲು ಸಾಧ್ಯವಿಲ್ಲವೋ ಹಾಗೆಯೇ ಮಗುವೂ ಆಟವಿಲ್ಲದೆ ಇರಲು ಸಾಧ್ಯವಿಲ್ಲ. ಆಧುನಿಕ ಯುಗದಲ್ಲಿ ಆಟಕ್ಕೆ ಪ್ರಧಾನಸ್ಥಾನ ಕೊಡಲಾಗಿದೆ. ಆಟವು ಮಗುವಿನ ಸೃಜನಾತ್ಮಕ ಚಟುವಟಿಕೆಗಳ ಸಂಕೇತ, ಮಗುವು ಸಂತೋಷದಿಂದ ಆಟವಾಡುತ್ತದೆ. ಜಾತಿ, ಪಂಗಡ, ಅಂತಸ್ತು, ವಯಸ್ಸು, ಬಡವ, ಬಲ್ಲಿದ, ಬಣ್ಣ, ಅಧಿಕಾರ, ಸಂಪ್ರದಾಯ-ಇವುಗಳನ್ನೆಲ್ಲ ಮರೆತು ಮಕ್ಕಳು ಸಂತೋಷದಿಂದ ಆಡುತ್ತವೆ. ಬೌದ್ಧಿಕ ಹಾಗೂ ಭಾವನಾತ್ಮಕ ಬುದ್ಧಿ ಬೆಳೆಯುತ್ತದೆ. ಇದರಿಂದ ಜಾತ್ಯಾತೀತ ಮನೋಭಾವನೆ, ರಾಷ್ಟ್ರೀಯ ಭಾವೈಕ್ಯತೆ, ಸಮಾನತೆ, ಸ್ವಾತಂತ್ರ್ಯ - ಇವುಗಳು ಬೆಳೆದಂತಾಗುತ್ತದೆ. ಆದ್ದರಿಂದ ಶಿಕ್ಷಕರು ಹಾಗೂ ತಂದೆ ತಾಯಿಗಳು ಎಚ್ಚರಿಕೆ ವಹಿಸಿ ನಿಗದಿತ ವೇಳೆಯಲ್ಲಿ ಮಕ್ಕಳಿಗೆ ಆಟವಾಡಲು ಅವಕಾಶ ಕೊಡಬೇಕು. ಆಟವಾಡುವುದರಿಂದ ದುಷ್ಕೃತ್ಯಗಳ ಕಡೆ ಅವರ ಮನಸ್ಸು ಹರಿಯುವುದಿಲ್ಲ ಹಾಗೂ ಅವರು ರೋಗರುಜಿನಗಳಿಗೆ ತುತ್ತಾಗದೆ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡಂತಾಗುತ್ತದೆ.

ಅಷ್ಟೇ ಅಲ್ಲದೆ ಆಟದ ಮೂಲಕ ಸಣ್ಣಮಕ್ಕಳಿಗೆ ಪಾಠ ಹೇಳಿಕೊಡುವುದರಿಂದ ಮಕ್ಕಳು ಸುಲಭವಾಗಿ ಪಾಠ ಕಲಿಯುತ್ತವೆ. ಆದ್ದರಿಂದ ಆಟದ ಮೂಲಕ ಪಾಠ ಹೇಳಿಕೊಡುವುದನ್ನು ಶಿಕ್ಷಕ, ಶಿಕ್ಷಕಿಯರು ಅನುಷ್ಠಾನಕ್ಕೆ ತರಲು ಮುನ್ನೆಚ್ಚರಿಕೆ ವಹಿಸಿ ಅದರ ಪರಿಣಾಮವನ್ನು ಅರಿಯಬೇಕು. ಎಲ್ಲಾ ಮಕ್ಕಳು ಆಟಗಳಲ್ಲಿ ಭಾಗವಹಿ ಸುತ್ತಿದ್ದಾರೆಯೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಶಿಕ್ಷಕರು ಮೇಲ್ವಿಚಾರಣೆ ನಡೆಸಬೇಕು. ಶಿಕ್ಷಣವಿಲ್ಲದ ವ್ಯಕ್ತಿಗೆ ಕಣ್ಣಿದ್ದು ಕುರುಡನಾಗಿ, ಕಿವಿಯಿದ್ದು ಕಿವುಡನಾಗಿ, ನಾಲಿಗೆ ಇದ್ದು ಮೂಕನಾಗಿ, ಹೃದಯವಿದ್ದೂ ಭಾವಶೂನ್ಯತೆಯಿಂದ ಬರಡಾದ ಜೀವನವನ್ನು ನಡೆಸ ಬೇಕಾಗುತ್ತದೆ. ಚೀನೀಯರ ಒಂದು ಗಾದೆಯ ಪ್ರಕಾರ ಒಂದು ವರ್ಷದ ಬೆಳೆ ಬೇಕಾದರೆ

ಧಾನ್ಯ ಬೀಜಗಳನ್ನು ಬಿತ್ತಬೇಕು, ನೂರು ವರ್ಷದ ಬೆಳೆ ಬೇಕಾದರೆ ಹಣ್ಣಿನ ಬೀಜ ಬಿತ್ತಬೇಕು. ಸಾವಿರ ವರ್ಷದ ಬೆಳೆ ಬೇಕಾದರೆ ವಿದ್ಯೆಯ ಬೀಜವ ಬಿತ್ತಬೇಕು. ಆದ್ದರಿಂ ಮಗುವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ನೈತಿಕವಾ ರಾಜಕೀಯವಾಗಿ ಬೆಳೆಯಬೇಕಾದರೆ, ಪೂರ್ವಪ್ರಾಥಮಿಕ ಹಾಗೂ ಪ್ರಾಥಮಿಕ ಶಿಕ್ಷ ಅತ್ಯಾವಶ್ಯಕವಾಗಿ ಮಕ್ಕಳಿಗೆ ದೊರಕುವಂತೆ ಮಾಡುವುದು ತಂದೆ ತಾಯಿಗಳ ಹಾಗ ಶಿಕ್ಷಕರ ಆದ್ಯಕರ್ತವ್ಯ. ಮಕ್ಕಳು ಶಿಕ್ಷಣ ಪಡೆಯುವ ಬಗ್ಗೆ ಮುನ್ನೆಚ್ಚರಿಕೆ ಹಾಗ ಮೇಲ್ವಿಚಾರಣೆ ಅವರಿಂದ ನಡೆಯಬೇಕು. ಅಷ್ಟೇ ಅಲ್ಲದೆ ಶಾಲೆಯಲ್ಲಿ ಶಿಕ್ಷಕರು ಸಾಕಷ ಜನರಿದ್ದಾರೆಯೆ ಅಥವಾ ಇಲ್ಲವೆ, ಪಠ್ಯಪುಸ್ತಕಗಳು ಒದಗಿವೆಯೆ, ಕಟ್ಟಡ, ಆಟ ಮೈದಾನ, ಪಾಠೋಪಕರಣ ಹಾಗೂ ಪೀಠೋಪಕರಣಗಳಿವೆಯೆ? ಇಲ್ಲದಿದ್ದರೆ ಅವುಗಳನ ಒದಗಿಸುವ ಬಗ್ಗೆ ಯಾವ ವ್ಯವಸ್ಥೆ ಮಾಡಬೇಕಾಗಿದೆ ಎಂಬುದರ ಬಗ್ಗೆ ಎಚ್ಚರಿಕೆ ವಹಿ ಅವುಗಳನ್ನು ಇಲಾಖೆಯಿಂದ ಅಥವ ದಾನಿಗಳಿಂದ ಪಡೆಯಬೇಕು. ಶಿಕ್ಷಕರು ತಂದೆ ತಾಯಿ ಗಳು ಹಾಗೂ ಶಾಲಾಭಿವೃದ್ಧಿ ಸಮಿತಿಯವರು ಇವಕ್ಕೆ ವ್ಯವಸ್ಥೆ ಮಾಡಬೇಕು ಹಾಗ ಅವರು ಮಾಡಿದ ವ್ಯವಸ್ಥೆಯ ಬಗ್ಗೆ ಶಾಲಾಮುಖ್ಯಸ್ಥರಿಂದ ಮೇಲ್ವಿಚಾರಣೆ ಅತ್ಯಾವಶ್ಯಕ.

ಶಿಸ್ತು : ಆದರ್ಶಭಾವನೆಗಳು ಬೆಳೆದಾಗ ಮಕ್ಕಳಲ್ಲಿ ನಿರೀಕ್ಷಿತ ನಡತೆ ಕಾಣುವುದು ತನ್ನ ಆದರ್ಶತೆಯಿಂದ ಮಗುವು ಶಾಲೆಯನ್ನು ಬೆಳಗಬೇಕು. ಆದ್ದರಿಂದ ರಾಷ್ಟ್ರ ಅಭ್ಯುದಯಕ್ಕೆ, ಸಮಾಜದ ಪರಿಪಕ್ವತೆಗೆ, ಮಕ್ಕಳಲ್ಲಿ ಶಿಸ್ತು ಬೆಳೆಯಬೇಕು. ಆ ಶಿಸ್ತಿನಿಂ ಕೂಡಿರುವ ರಾಷ್ಟ್ರ ಅನಾಗರೀಕ ರಾಷ್ಟ್ರವಾಗುತ್ತದೆ. ಕ್ರೂರ ದೇಹದಂಡನೆ ಮಗುವಿ ವ್ಯಕ್ತಿತ್ವವನ್ನು ಹಾಳುಮಾಡುತ್ತದೆ. ಮಕ್ಕಳು ಕ್ರಮೇಣ ಎದುರಾಗುತ್ತವೆ; ಅವರು ಸಮಾಜ ಕಂಟಕಪ್ರಾಯರಾಗುತ್ತಾರೆ. ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ಸ್ವಾತಂತ್ರ್ಯವನ್ನು ಕೊಡಬೇಕ ಇಲ್ಲದಿದ್ದರೆ ಅವರು ಸಮಸ್ಯೆಯ ಮಕ್ಕಳಾಗುತ್ತಾರೆ. ಅವರಲ್ಲಿ ಶಿಸ್ತನ್ನು ಬೆಳೆಸಬೇಕ ಅವರನ್ನು ಬದಲಿಸಲು ಪ್ರೀತಿ ವಿಶ್ವಾಸ ಹಾಗೂ ಮಾರ್ಗದರ್ಶನ ಅವಶ್ಯಕ. ದೇಹದಂಡನೆ ಈಗ ಅವಕಾಶವಿಲ್ಲ. ಆದರೂ ಪೂರ್ಣಸ್ವಾತಂತ್ರ್ಯ ಕೊಟ್ಟಲ್ಲಿ ಹುಚ್ಚು ಪ್ರವಾಹದಂ ಅವರು ದಮನಕಾರಿಗಳಾಗುತ್ತಾರೆ. ಆದ್ದರಿಂದ ಮಕ್ಕಳಿಗೆ ತಪ್ಪು ಮಾಡಿದಲ್ಲಿ ಸೌಮ್ಯಶಿ ಹಾಗೂ ವಾತ್ಸಲ್ಯ ಇವೆರಡನ್ನು ಶಿಕ್ಷಕರು ಹಾಗೂ ತಂದೆ ತಾಯಿಗಳು ಮುನ್ನೆಚ್ಚರಿಕೆ ವಹಿ ಆಚರಣೆಗೆ ತರುವುದು ಉತ್ತಮ. ಅವನ್ನು ಅನುಷ್ಠಾನಕ್ಕೆ ತಂದ ಬಗ್ಗೆ ಮೇಲ್ವಿಚಾರಣೆಯು ಅತ್ಯಾವಶ್ಯಕ.

ಶಿಕ್ಷಕರಿಗೆ ತರಬೇತಿ : ಸೇವಾಪೂರ್ವ ತರಬೇತಿಯಷ್ಟೆ, ಸೇವಾವಧಿ ತರಬೇತಿಯು ಬಹಳ ಪ್ರಧಾನವಾದದ್ದು. ಸೇವಾಕಾಲದಲ್ಲಿ ಪಡೆದ ಅನುಭವದ ವೃದ್ಧಿಗೆ ಹಾಗೂ ತನ ಕಂಡು ಬಂದ ಅನುಮಾನಗಳ ನಿವಾರಣೆಗೆ ಹಾಗೂ ಪರಿಹಾರಕ್ಕೆ ಸೇವಾವಧಿ ತರಬೇ ಅತ್ಯಾವಶ್ಯಕವಾಗಿದೆ. ಅಷ್ಟೇ ಅಲ್ಲದೆ ಹೊಸ ಬೋಧನಾವಿಧಾನ, ಪಾಠೋಪಕರಣಗ ಸಮಯೋಚಿತ ಉಪಯೋಗದ ಅವಶ್ಯಕತೆ ಹೊಸ ಹೊಸ ಬೋಧನಾ ವಿಧಾನಗ ದೃಢೀಕರಣ ಮುಂತಾದವುಗಳ ಅನುಭವ ಶಿಕ್ಷಕರ ವರ್ಗಕ್ಕೆ ಆಗಬೇಕಾಗಿದೆ. ಆದ್ದರಿಂ ಶಿಕ್ಷಣ ಇಲಾಖೆ ತರಬೇತಿಗೆ ವ್ಯವಸ್ಥೆ ಮಾಡಬೇಕು. ಶಾಲಾ ಸಮುದಾಯದ ಮೂಲಕವ

ಶಿಕ್ಷಣದ ವ್ಯವಸ್ಥೆಯಾಗಬೇಕು. ಇದರ ಮೇಲ್ವಿಚಾರಣೆಯನ್ನು ಶಾಲಾಮುಖ್ಯಸ್ಥರು ಹಾಗೂ ಇಲಾಖೆಯ ಅಧಿಕಾರಿಗಳು ಮಾಡಬೇಕು ಹಾಗೂ ಯಶಸ್ವಿಗೊಳಿಸಬೇಕು.

ಮುಖ್ಯೋಪಾಧ್ಯಾಯರ ಕರ್ತವ್ಯ ಮತ್ತು ಮೇಲ್ವಿಚಾರಣೆ : ಶಾಲೆಯ ಮುಖ್ಯೋಪಾಧ್ಯಾಯರು ಶಾಲೆಯ ಶಿಸ್ತನ್ನು ಕಾಪಾಡುವವರೂ ಶಾಲೆಯ ಪಾಲಕರೂ ಹಾಗೂ ಶಾಲೆಯ ಮಾರ್ಗದರ್ಶಕರೂ ಆಗಿರಬೇಕು. ಪಠ್ಯಕ್ರಮ, ಪಾಠಗಳ ಹಾಗೂ ಸಹಪಠ್ಯ ಚಟುವಟಿಕೆಗಳ ಪ್ರಗತಿಯನ್ನು ವೀಕ್ಷಿಸಬೇಕು. ಪ್ರತಿ ಮಗುವಿಗೂ ಕನಿಕರ, ಪ್ರೀತಿ, ವಿಶ್ವಾಸ ಹಾಗೂ ಶಿಸ್ತಿನ ಅಮೃತವನ್ನು ಕುಡಿಸಬೇಕು. ಅವರು ಶಾಲಾ ನಾವೆಯ ಚಾಲಕರು ಹಾಗೂ ಆದರ್ಶವಾದಿಗಳು ಆಗಿರಬೇಕು. ಅವರು ತಮ್ಮ ಆದರ್ಶಕತೆಯಿಂದ ಬೇರೆಯವರನ್ನು ಆಕರ್ಶಿಸುವಂತಿರಬೇಕು. ಶಾಲೆಯ ಎಲ್ಲಾ ಕಾರ್ಯಕ್ರಮಗಳು ಇವರ ನೇತೃತ್ವದಲ್ಲಿಯೇ ನಡೆಯಬೇಕು. ಮುಖ್ಯೋಪಾಧ್ಯಾಯರು ಸೌರವ್ಯೂಹದ ಸೂರ್ಯನಂತೆ. ಇತರೇ ಶಿಕ್ಷಕರು ಸೂರ್ಯನ ಸುತ್ತಲೂ ಸುತ್ತುವ ಗ್ರಹಗಳಂತೆ ಇರುವರು. ಇವರು ಶಾಲಾ ಆಡಳಿತದ ಅಡಿಗಲ್ಲು. ಮುಖ್ಯೋಪಾಧ್ಯಾಯರು, ಶಾಲೆಯ ಆಡಳಿತಾಧಿಕಾರಿಗಳು, ಶೈಕ್ಷಣಿಕ ತಜ್ಞರು, ಶಾಲಾ ಚಟುವಟಿಕೆಗಳ, ಮಕ್ಕಳ ಕಲಿಕೆಯ ಮೇಲ್ವಿಚಾರಕರು ಹಾಗೂ ಸಮಾಜದ ಸಮನ್ವಯಾಧಿಕಾರಗಳು ಆಗಿರಬೇಕು.

ಶಾಲಾ ಶಿಕ್ಷಕರ ವ್ಯಕ್ತಿತ್ವ, ಕರ್ತವ್ಯ, ಮೇಲ್ವಿಚಾರಣೆ : ಶಿಕ್ಷಕನು ಇತಿಹಾಸವನ್ನು ಸೃಷ್ಟಿಸುವ, ಮುಂದಿನ ಜನಾಂಗದ ಪ್ರಪಂಚವನ್ನು ನಿರ್ಮಿಸಿ ಹಾಗೂ ಮರುನಿರ್ಮಿಸಿ ಆಕಾರ ಕೊಡುವ ಶಿಲ್ಪಿ. ಅವನು ರಾಷ್ಟ್ರದ ನಿರ್ಮಾಪಕ. ಸಮಾಜವನ್ನು ಸೃಜಿಸುವ ಶಿಲ್ಪಿ. ಸಮಾಜದ ಆದರ್ಶಮೌಲ್ಯಗಳನ್ನು, ಸಾಂಸ್ಕೃತಿಕ ಪರಂಪರೆಯನ್ನು ಉಳಿಸಬಲ್ಲ ಮಾನವ ಪ್ರತಿನಿಧಿ ಶಿಕ್ಷಕ. ಆದ್ದರಿಂದ ಶಿಕ್ಷಕ ಆದರ್ಶವ್ಯಕ್ತಿಯಾಗಿರ ಬೇಕು.

ನಡತೆ ಹೋದರೆ ಸರ್ವಸ್ವವೂ ಹೋದಂತೆ. ನಡೆತಗೆಟ್ಟವರು ಶಿಕ್ಷಕರಾದರೆ, ಮಕ್ಕಳಿಂದ, ಸಂಗಾತಿಗಳಿಂದ, ಸಾರ್ವಜನಿಕರಿಂದ ತಿರಸ್ಕೃತರಾಗುತ್ತಾರೆ. ಶಿಕ್ಷಕ ಒಂದು ಪ್ರದರ್ಶನವಿದ್ದಂತೆ. ಸಹಸ್ರಾರು ಕಣ್ಣುಗಳು ಅವರನ್ನು ನೋಡುತ್ತವೆ. ಆದ್ದರಿಂದ ಅವರು ಆದರ್ಶವ್ಯಕ್ತಿಗಳಾಗಬೇಕು. ಮಕ್ಕಳಿಗೆ ಶಿಕ್ಷಣ ಕೊಡುವುದರ ಜೊತೆಗೆ ಮಕ್ಕಳಲ್ಲಿ ಆದರ್ಶತೆಯನ್ನು ತುಂಬಬೇಕು. ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗೂ ಆದರ್ಶತೆಗಳನ್ನು ವೀಕ್ಷಿಸಬೇಕು, ಸೂಕ್ತ ಸಲಹೆ ಕೊಡಬೇಕು, ಅವುಗಳನ್ನು ಅನುಷ್ಠಾನಕ್ಕೆ ತರಬೇಕು ಹಾಗೂ ಅದರ ಪ್ರಗತಿಯ ಬಗ್ಗೆ ಮೇಲ್ವಿಚಾರಣೆಯನ್ನು ಶಿಕ್ಷಕರು ಹಾಗೂ ಆಗಾಗ್ಗೆ ಮುಖ್ಯೋಪಾಧ್ಯಾಯರು ಮಾಡಬೇಕು.

ಪಠ್ಯ ಪುಸ್ತಕಗಳು : ಶಿಕ್ಷಕರ ಲೇಖನ ಹಾಗೂ ವಿವರಣೆಗಳಿಗೆ ಪಠ್ಯಪುಸ್ತಕ ಪೂರಕವಾಗಿರುತ್ತವೆ. ಜ್ಞಾನಾರ್ಜನೆಗೆ, ಪುನರಾವರ್ತನೆಗೆ ಹಾಗೂ ಶಿಸ್ತಿಗೆ ಪಠ್ಯಪುಸ್ತಕ ಅತ್ಯಾವಶ್ಯಕ. ವಯ್ಯಕ್ತಿಕ ಬೋಧನೆಗೆ, ಯೋಜನೆಯ ತಯಾರಿಕೆಗೆ ಪಠ್ಯಪುಸ್ತಕಗಳು ಸುಲಭವಾಗಿ ಮಕ್ಕಳಿಗೆ ದೊರಕುವಂತಿರಬೇಕು. ಅವು ಹತ್ತಾರು ವರ್ಷಗಳು ಚೇತೋಹಾರಿ ಗಳಾಗಿ, ಪ್ರಚೋದನಕಾರಿಗಳಾಗಿ ಇರಬೇಕು. ಸಹಸ್ರಾರು ವ್ಯಕ್ತಿಗಳಿಗೆ ಏಕಕಾಲದಲ್ಲಿ ಜ್ಞಾನ ದೊರಕುವಂತೆ ಮಾಡುವಂತವುಗಳಾಗಿರಬೇಕು. ಶಾಲೆಗಳಲ್ಲಿ ಉತ್ತಮವಾದ ಲೈಬ್ರರಿ

ಇರಬೇಕು.

ಪಠ್ಯಪುಸ್ತಕಗಳಲ್ಲಿ ತಪ್ಪುಗಳಿರಬಾರದು. ಒಂದು ವೇಳೆ ತಪ್ಪುಗಳಿದ್ದರೆ ಅ ತಪ್ಪುಗಳನ್ನೇ ಮಕ್ಕಳು ಗ್ರಹಿಸುವರು. ಆದ್ದರಿಂದ ಪಠ್ಯಪುಸ್ತಕಗಳನ್ನು ಅಚ್ಚುಹಾಕಿಸುವುದಕ್ಕೆ ಮೊದಲು ಪುನರ್‌ವಿಮರ್ಶೆ ಅತ್ಯಾವಶ್ಯಕ. ಪಠ್ಯಪುಸ್ತಕಗಳ ಮುದ್ರಣ ಕಾಲದಲ್ಲಿ ಕಂಡುಬರುವ ತಪ್ಪುಗಳನ್ನು ತಿದ್ದಬೇಕು ಹಾಗೂ ಪಠ್ಯಪುಸ್ತಕಗಳು ಸಕಾಲದಲ್ಲಿ ಮಕ್ಕಳಿಗೆ ತಲುಪುವಂತೆ ಮಾಡುವ ವ್ಯವಸ್ಥೆಯಾಗಬೇಕು. ಅದರ ಮೇಲ್ವಿಚಾರಣೆಯನ್ನು ಇಲಾಖೆ ಮಾಡಬೇಕು.

ಬೋಧನಾ ಸಾಮಗ್ರಿಗಳು : ಬೋಧನಾ ವೇಳೆಯನ್ನು ದೃಷ್ಟಾಂತಗಳಿಂದ ಹಾಗೂ ಬೋಧನಾ ಸಾಮಗ್ರಿಗಳಿಂದ ಮಕ್ಕಳ ಕಲಿಕೆಯನ್ನು ಯಶಸ್ವಿಗೊಳಿಸಬೇಕು. ಆಗ ಬೋಧನೆ ಮಕ್ಕಳ ಮನಸ್ಸಿನ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತದೆ. ಕಲಿಕೆ ಶಾಶ್ವತವಾಗಿ ಮಕ್ಕಳ ಮನಸ್ಸಿನಲ್ಲಿ ಉಳಿಯುತ್ತವೆ. ಹೋಲಿಕೆಗಳು, ನಿದರ್ಶನಗಳು, ಫೋಟೋಗಳು, ಬೇಡಿಕೆ ಚೀಟಿಗಳು, ಬುಲೆಟಿನ್ ಬೋರ್ಡ್‌ಗಳು, ಮಾಡಲ್‌ಗಳು, ಚಾರ್ಟ್‌ಗಳು, ನಕ್ಷೆಗಳು, ಗ್ರಾಫ್‌ಗಳು, ಮ್ಯಾಪ್‌ಗಳು - ಇವುಗಳನ್ನು ಉಪಯೋಗಿಸಿಕೊಂಡು ಬೋಧನೆಯನ್ನು ಯಶಸ್ವಿಗೊಳಿಸಬೇಕು. ಈ ಬೋಧನಾಸಾಮಗ್ರಿಗಳನ್ನು ಒದಗಿಸುವ ವ್ಯವಸ್ಥೆಯನ್ನು ಮುಖ್ಯೋಪಾಧ್ಯಾಯರು ಮಾಡಬೇಕು. ಅವುಗಳನ್ನು ಅವಶ್ಯಕತೆ ಒದಗಿದಾಗ ಶಿಕ್ಷಕರು ಉಪಯೋಗಿಸಬೇಕು. ಅವುಗಳ ಬಳಕೆಯ ಬಗ್ಗೆ ಮೇಲ್ವಿಚಾರಣೆಯನ್ನು ಮುಖ್ಯೋಪಾಧ್ಯಾಯರು ಮಾಡಬೇಕು.

ವೇಳಾಪಟ್ಟಿ : ಶಾಲೆಯ ಕೆಲಸದ ವಿಭಜನೆ ಹಾಗೂ ವೇಳೆಯನ್ನು ವೇಳಾಪಟ್ಟಿಯೆಂದು ಕರೆಯುತ್ತಾರೆ. ಇದು ವಿಷಯ, ಗಂಟೆ, ಪಾಠ ನಡೆಯುವ ಕೊಠಡಿ, ವಿರಾಮದ ವೇಳೆ ವಿಷಯವನ್ನು ಬೋಧಿಸುವ ಶಿಕ್ಷಕರು, ಡ್ರಿಲ್, ಆಟಗಳು, ಇತ್ಯಾದಿಗಳನ್ನು ತಿಳಿಸುತ್ತದೆ.

ಕಠಿಣವಿಷಯಗಳನ್ನು ಬೆಳಗಿನ ಎರಡನೆಯ ಅಥವಾ ಮೂರನೆಯ ಪೀರಿಯಡ್‌ಗಳಲ್ಲಿ ಬೋಧಿಸಬೇಕು ಹಾಗೂ ಮಧ್ಯಾಹ್ನದ ಎರಡನೆಯ ಅವಧಿಯಲ್ಲಿ ಬೋಧಿಸಬಹುದು. ಮೊದಲ ಮತ್ತು ಕಡೆಯ ಪೀರಿಯಡ್‌ಗಳಲ್ಲಿ ಕಠಿಣ ವಿಷಯಗಳನ್ನು ಬೋಧಿಸಬಾರದು. ಇವರ ಮೇಲ್ವಿಚಾರಣೆಯನ್ನು ಮುಖ್ಯೋಪಾಧ್ಯಾಯರು ಮಾಡಬೇಕು.

ಪಾಠದ ಯೋಜನೆ : ಪಾಠದ ಯೋಜನೆಯ ಪ್ರಕಾರ ವೇಳೆಯನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ವಯಸ್ಸು ಹಾಗೂ ಸಾಮರ್ಥ್ಯಕ್ಕನುಸಾರವಾಗಿ, ಪಾಠದ ಸ್ವರೂಪಕ್ಕನುಗುಣವಾಗಿ ಅದನ್ನು ಪರಿಚಯಿಸಿ, ಬೋಧಿಸಿ ಅಂತ್ಯದಲ್ಲಿ ಪುನರಾವರ್ತನೆ ಮಾಡಿ, ಕಡೆಯಲ್ಲಿ ಮನೆಗೆಲಸ ಕೊಡಬೇಕು. ತಯಾರಿಯಿಲ್ಲದ ಬೋಧನೆ ಮಾಡುವವರಷ್ಟು ವಿನಾಶಕಾರಿ ಮತ್ತೊಂದಿಲ್ಲ ಎನ್ನುತ್ತಾರೆ ಪ್ರಖ್ಯಾತ ಶಿಕ್ಷಣತಜ್ಞರು. ತಯಾರಿಯಿಲ್ಲದ ಪಾಠ ಬೋಧಿಸಿದರೆ ವಿಷಯಗಳ ಹೊಂದಾಣಿಕೆ, ವಾಕ್ಯಗಳ ಜೋಡಣೆ ಹಾಗೂ ಬೋಧನೆ ಅಸ್ತವ್ಯಸ್ತವಾಗುತ್ತವೆ. ವಿಷಯ ಪ್ರತಿಪಾದನೆ ದೋಷಪೂರಿತವಾಗುವುದು. ಆದ್ದರಿಂದ ಮಕ್ಕಳಿಗೆ ವಂಚನೆ ಮಾಡಿದಂತಾಗುವುದು. ನಿರ್ದಿಷ್ಟತೆಯಲ್ಲಿ ಅಭಾವವಿರುತ್ತದೆ. ಶಿಕ್ಷಕರಿಗೆ ದಿಕ್ಕು ತೋಚದಂತಾಗಿ ಪಾಠದ ಬೋಧನೆ ನಿರರ್ಥಕವಾಗುತ್ತದೆ. ಮಕ್ಕಳು ಜ್ಞಾನ

ಪಡೆಯಲು ವಿಫಲರಾಗುತ್ತಾರೆ. ಶಿಕ್ಷಕರ ಪ್ರತಿಭಾಸ್ಫಿತ ಶಕ್ತಿಯ ದರ್ಪಣ ಪಾಠದ ಯೋಜನೆ. ಆದ್ದರಿಂದ ಪ್ರತಿಯೊಬ್ಬ ಶಿಕ್ಷಕರು ಪಾಠದ ಯೋಜನೆಯನ್ನು ಆಯಾಯ ದಿವಸದ ಬೋಧನೆಗೆ ಸಂಬಂಧಿಸಿದಂತೆ ತಯಾರಿಸಿ ಪಾಠಮಾಡಬೇಕು. ಇದನ್ನು ಮುಖ್ಯೋಪಾಧ್ಯಾಯರು ಪ್ರತಿಯೊಬ್ಬ ಶಿಕ್ಷಕರೂ ಪಾಠದ ಯೋಜನೆಯನ್ನು ಪ್ರತಿದಿನವೂ ತಯಾರಿಸಿಕೊಂಡು ಬಂದಿದ್ದಾರೆಯೆ ಅಥವ ಇಲ್ಲವೆ ಎಂಬುದರ ಮೇಲ್ವಿಚಾರಣೆ ಮಾಡಬೇಕು.

ಕಪ್ಪುಹಲಗೆ : ಕಪ್ಪುಹಲಗೆ (ದೃಕ್ ಪಾಠೋಪಕರಣ) ಶಿಕ್ಷಕರಿಗೆ ಬಹಳ ಉಪಯುಕ್ತವಾದ ಬೋಧನಾ ಸಾಮಗ್ರಿ. ಕಪ್ಪುಹಲಗೆ ಇಲ್ಲದೆ ಬೋಧನೆ ಯಶಸ್ವಿಯಾಗುವುದಿಲ್ಲ. ಕಪ್ಪುಹಲಗೆ ಶಿಕ್ಷಕರ ಆಸ್ತಿ. ಕಡಿಮೆ ಖರ್ಚಿನ ಉಪಕರಣ. ಇದು ಶಿಕ್ಷಕನ ಸ್ನೇಹಿತ. ಇದನ್ನು ಉಪಯೋಗಿಸದೆ ಇದ್ದರೆ ಬೋಧನೆ ಫಲಕಾರಿಯಾಗುವುದಿಲ್ಲ.

ಆದ್ದರಿಂದ ವಿಶಾಲವಾದ ಕಪ್ಪುಹಲಗೆಯಿರಬೇಕು. ಬೆಳಕಿನ ಪ್ರತಿಬಿಂಬವಿರಬಾರದು. ಸೀಮೆಸುಣ್ಣ ಅಥವಾ ಬಣ್ಣದ ಸೀಮೆಸುಣ್ಣಗಳಿಂದ ಬರೆದರೆ ಕಾಣುವಂತಿರಬೇಕು. ಸಿಮೆಂಟ್ ಕಪ್ಪುಹಲಗೆ ಅಥವಾ ರೆಡ್‌ಆಕ್ಸೈಡ್‌ನ ಬೋರ್ಡ್‌ನ್ನು ಎಲ್ಲಾ ತರಗತಿಗಳಿಗೆ ಒದಗಿಸಿದೆಯೆ ಅಥವಾ ಇಲ್ಲವೆ. ಕಪ್ಪುಹಲಗೆಯ ಪ್ರಯೋಜನವನ್ನು ಶಿಕ್ಷಕರು ಪಡೆಯುತ್ತಿದ್ದಾರೆಯೆ ಅಥವ ಇಲ್ಲವೆ. ಎಂಬುದರ ಮೇಲ್ವಿಚಾರಣೆಯನ್ನು ಮುಖ್ಯೋಪಾಧ್ಯಾಯರು ಮಾಡಬೇಕು.

ಇತಿಹಾಸದ ಬೋಧನೆ : ಇತಿಹಾಸ ಮಾನವಕುಲದಷ್ಟೇ ಪುರಾತನವಾದದ್ದು. ಮಾನವನ ಸಂಸ್ಕೃತಿಯಷ್ಟೇ ವಿಶಾಲವಾದದ್ದು; ನಾಗರೀಕತೆಯಷ್ಟೇ ಫಲಪ್ರದವಾದದ್ದು. ಅನೇಕ ಯುದ್ಧ, ಶಾಂತಿ, ಸಂಪ್ರದಾಯ, ಸುಧಾರಣೆ, ಪೂರ್ವಾಚಾರ ಕ್ರಾಂತಿಕಾರಕ ಗುಣಾಂಶಗಳಿಂದ ಸಂಮಿಶ್ರವಾದದ್ದು ಇತಿಹಾಸ. ಭೂತಕಾಲವೇ ಅದರ ಬೇರು, ವರ್ತಮಾನವೇ ಅದರ ಕಾಂಡ, ಭವಿಷ್ಯವೇ ಅದರ ಪತ್ರ, ಪುಷ್ಪ ಹಾಗೂ ಫಲಗಳು. ಇತಿಹಾಸಕ್ಕಿಂತ ದೊಡ್ಡ ಶಿಕ್ಷಕ ಮತ್ತೊಬ್ಬಿಲ್ಲ. ಇತಿಹಾಸ ಮಕ್ಕಳ ಜ್ಞಾನವನ್ನು ವೃದ್ಧಿಗೊಳಿಸುತ್ತದೆ; ಆತ್ಮವಿಶ್ವಾಸವನ್ನು ಬೆಳೆಸುತ್ತದೆ; ಮಗುವಿನ ಬೌದ್ಧಿಕಶಕ್ತಿಯನ್ನು ಬೆಳೆಸುತ್ತದೆ.

ಇತಿಹಾಸವನ್ನು ಬೋಧಿಸಲು ಸಂಬಂಧಿಸಿದ ಆಕೃತಿಗೆ ಅನುಗುಣವಾದ ಭೂಪಟ, ಚಿತ್ರಪಟ, ರೇಖಾಕೃತಿಗಳು, ಫಿಲಂಪ್ರೊಜೆಕ್ಟರ್, ಫಿಲಂ ಸ್ಟ್ರಿಪ್ಸ್, ರೇಡಿಯೊ ಟ್ರಾನ್ಸಿಸ್ಟರ್ಸ್, ದೂರದರ್ಶನ, ಕಥೆಯ ರೂಪದ ಚಿತ್ರ, ಚಾರ್ಟ್ ಇತ್ಯಾದಿಗಳನ್ನು ಸಂದರ್ಭಕ್ಕನುಗುಣವಾಗಿ ಉಪಯೋಗಿಸಲು ಶಾಲೆಗೆ ಒದಗಿಸಬೇಕು. ಇವುಗಳ ಬಳಕೆಯ ಬಗ್ಗೆ ಮುಖ್ಯೋಪಾಧ್ಯಾಯರಿಂದ ಮೇಲ್ವಿಚಾರಣೆ ಬೇಕು.

ಭೂಗೋಳ : ಪರಿಸರ ಮಾನವನ ಮೇಲೆ ಬೀರುವ ಪ್ರಭಾವವನ್ನು ಮಕ್ಕಳಿಗೆ ತಿಳಿಸಬೇಕು. ಇದರಿಂದ ಮಕ್ಕಳ ದೃಷ್ಟಿ ವಿಶಾಲವಾಗುತ್ತದೆ. ಭೌಗೋಳಿಕ ಸೀಮೆಗಳ ಆಧಾರದ ಮೇಲೆ ರಾಷ್ಟ್ರಗಳ ಎಲ್ಲೆಕಟ್ಟುಗಳು ನಿರ್ಮಾಣವಾಗುತ್ತವೆ.

ಭೂಗೋಳದ ಪಾಠವನ್ನು ಬೋಧಿಸಲು ಭೂಪಟಗಳ, ಚಾರ್ಟ್‌ಗಳ, ಗ್ಲೋಬ್‌ಗಳ, ಮಾಡಲ್‌ಗಳ ಮೂಲಕ ಅಗ್ನಿಪರ್ವತಗಳು ಸಮುದ್ರದಲ್ಲಾಗುವ ಶೀತೋದಕ ಉಷ್ಣೋದಕ ಪ್ರವಾಹಗಳು, ಅಕ್ಷಾಂಶ ರೇಖಾಂಶಗಳು, ಸೂರ್ಯಗ್ರಹಣ, ಚಂದ್ರಗ್ರಹಣಗಳು, ನದಿಗಳು,

ಬೆಟ್ಟಗಳು. ಪರ್ವತಶ್ರೇಣಿಗಳು. ನಿತ್ಯಹರಿದ್ವರ್ಣದ ಕಾಡುಗಳು ಇವುಗಳನ್ನು ತಿಳಿಸಬೇಕು. ಆದ್ದರಿಂದ ಭೂಪಟಗಳನ್ನು ಶಾಲೆಗಳಿಗೆ ಒದಗಿಸಬೇಕು. ಅವುಗಳ ಬಳಕೆ ಹಾಗೂ ಅವುಗಳನ್ನು ಒದಗಿಸುವ ಬಗ್ಗೆ ವ್ಯವಸ್ಥೆಯಾಗಬೇಕು. ಅದರ ಮೇಲ್ವಿಚಾರಣೆ ಶಾಲಾ ಮುಖ್ಯಸ್ಥರಿಂದ ಆಗಬೇಕು.

ಪೌರನೀತಿ : ಪೌರನೀತಿಯ ಪಾಠ ಬೋಧಿಸಲು ಪಾಠೋಪಕರಣಗಳನ್ನು ಒದಗಿಸಬೇಕು.

ವಿಜ್ಞಾನ : ಪ್ರಕೃತಿಯ ಮೇಲೆ ಪ್ರಭುತ್ವವನ್ನು ಸ್ಥಾಪಿಸಲು ಮನುಷ್ಯ ಪ್ರಯತ್ನಿಸುತ್ತಿದ್ದಾನೆ. ವಿಜ್ಞಾನ ಬೋಧನೆ ಇಲ್ಲದ ಶಿಕ್ಷಣ ಅಪೂರ್ಣ. ಇದು ಜ್ಞಾನದ ಕಣಜ. ವಿಜ್ಞಾನದ ಬೋಧನೆ ಮಕ್ಕಳ ಆಲೋಚನಾಶಕ್ತಿಯನ್ನು ಹೆಚ್ಚಿಸುತ್ತದೆ. ಅದರ ಸಾಂಸ್ಕೃತಿಕ ಮೌಲ್ಯ ಹಾಗೂ ವಿವೇಚನಾಶಕ್ತಿಗಳನ್ನು ಹೆಚ್ಚಿಸುತ್ತದೆ. ಪ್ರಯೋಗಗಳ ಮೂಲಕ. ಚಾರ್ಟ್‌ಗಳ ಮೂಲಕ. ಮಾಡಲ್‌ಗಳ ಮೂಲಕ ವಿಜ್ಞಾನದ ಬೋಧನೆಯನ್ನು ಯಶಸ್ವಿಗೊಳಿಸಬಹುದು. ಪ್ರಯೋಗಗಳಿಗೆ ಬೇಕಾದ ಉಪಕರಣಗಳನ್ನು ಒದಗಿಸುವುದು ಅವುಗಳ ಮೇಲ್ವಿಚಾರಣೆಯನ್ನು ಮಾಡುವುದು ಮುಖ್ಯೋಪಾಧ್ಯಾಯರ ಕರ್ತವ್ಯ.

ಗಣಿತ : ಇದು ವಿದ್ಯಾರ್ಥಿಗಳ ಆಲೋಚನಾಶಕ್ತಿಯನ್ನು ಹೆಚ್ಚಿಸಿ. ಅವರನ್ನು ಸುಸಂಸ್ಕೃತರನ್ನಾಗಿ ಮಾಡುತ್ತದೆ. ಜ್ಞಾನವನ್ನು ಕೊಡುವುದರ ಜೊತೆಗೆ ಮಕ್ಕಳ ವಿಮರ್ಶನಾ ಶಕ್ತಿಯನ್ನೂ ಹೆಚ್ಚಿಸುತ್ತದೆ. ಆದ್ದರಿಂದ ಗಣಿತವನ್ನು ಯಶಸ್ವಿಯಾಗಿ ಬೋಧಿಸಲು. ಫಿಲಂಸ್ಟ್ರಿಪ್ಸ್. ಪ್ರಕ್ಷೇಪಣ ಯಂತ್ರ. ಗಣಕಯಂತ್ರ. ಸೆಟ್‌ಸ್ಕ್ವೇರ್ಸ್. ಪ್ರೊಜೆಕ್ಟರ್ ಇತ್ಯಾದಿಗಳನ್ನು ಶಿಕ್ಷಣ ಇಲಾಖೆಯಿಂದ ಅಥವಾ ದಾನಿಗಳಿಂದ ಪಡೆದು ಅವುಗಳನ್ನು ಉಪಯೋಗಿಸುವಂತೆ ಮಾಡುವುದು ಸಂಬಂಧಿಸಿದ ಮುಖ್ಯೋಪಾಧ್ಯಾಯರ ಕರ್ತವ್ಯ ಹಾಗೂ ಅವುಗಳ ಬಳಕೆಯ ಬಗ್ಗೆ ಮೇಲ್ವಿಚಾರಣೆ ಅತ್ಯಗತ್ಯ.

ಭಾಷಾಬೋಧನೆ : ಮನುಷ್ಯ ತನ್ನ ಹೃದಯದ ಅಂತರಾಳದಲ್ಲಿರುವ ಭಾವನೆಗಳನ್ನು. ಅನಿಸಿಕೆಗಳನ್ನು. ಆಕಾಂಕ್ಷೆಗಳನ್ನು ವ್ಯಕ್ತಪಡಿಸಲು ಭಾಷೆ ಅತಿಮುಖ್ಯವಾದ ಸಾಧನೆ. ಅಷ್ಟೇ ಅಲ್ಲದೆ ಪೂರ್ವಜರ ಸಾಧನೆಗಳನ್ನು. ವಿಚಾರಗಳನ್ನು. ಚಿಂತನೆಗಳನ್ನು ಲಿಖಿತ ಭಾಷೆಗಳ ಮೂಲಕ ಅರಿಯುತ್ತೇವೆ. ಆದ್ದರಿಂದ ಪ್ರತಿಯೊಬ್ಬರಿಗೂ ಮೊದಲು ಮಾತೃಭಾಷೆಯನ್ನು. ನಂತರ ರಾಷ್ಟ್ರಭಾಷೆಯನ್ನು ಹಾಗೂ ಅಂತರ ರಾಷ್ಟ್ರೀಯ ಭಾಷೆಯನ್ನು ಕಲಿಯಲು ಶಾಲೆಗಳಲ್ಲಿ ವ್ಯವಸ್ಥೆ ಮಾಡಬೇಕು. ವ್ಯವಸ್ಥೆಯ ಬಗ್ಗೆ ಮುಖ್ಯೋಪಾಧ್ಯಾಯರಿಂದ ಮೇಲ್ವಿಚಾರಣೆ ಅಗತ್ಯ.

ಮನೆಗೆಲಸ : ಮನೆಗೆಲಸದಿಂದ ಸ್ವಾವಲಂಬನೆ ಬೆಳೆಯುತ್ತದೆ. ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸ ಮಾಡಲು ಅವಕಾಶ ದೊರಕುತ್ತದೆ. ಮನೆಗೆಲಸವನ್ನು ಹೆಚ್ಚಿಗೆ ಕೊಡದ ಹಾಗೆ ಶಿಕ್ಷಕರುಗಳಿಗೆ ತಿಳಿಸಬೇಕು. ವಿದ್ಯಾರ್ಥಿಗಳು ಮಾಡಿಕೊಂಡು ಬಂದ ಮನೆಗೆಲಸವನ್ನು ಶಿಕ್ಷಕರು ನೋಡಬೇಕು. ಮುಖ್ಯೋಪಾಧ್ಯಾಯರು ಆಗಾಗ್ಗೆ ಮೇಲ್ವಿಚಾರಣೆ ಮಾಡಬೇಕು.

ಮೌಲ್ಯಮಾಪನ ಮತ್ತು ಪರೀಕ್ಷೆ : ಸಾಮಾನ್ಯವಾಗಿ ಮೌಲ್ಯಮಾಪನವನ್ನೇ ಪರೀಕ್ಷೆ

ಎಂದು ಕರೆಯಲಾಗುವುದು. ಆದರೆ ಪರೀಕ್ಷೆಯು ಶೈಕ್ಷಣಿಕ ವಿಷಯಗಳಿಗೆ ಮಾತ್ರ ಅನ್ವಯವಾಗುತ್ತದೆ. ಪರೀಕ್ಷೆಯೆ ಜೀವ. ಮೌಲ್ಯವಿಲ್ಲದ ಅಪೂರ್ಣವಾದ ಪರೀಕ್ಷಾಪದ್ಧತಿ ಮಕ್ಕಳ ತೇಜೋವಧೆಗೆ ಕಾರಣವಾಗಿದೆ. ಪರೀಕ್ಷೆಗಳು, ಪಠ್ಯಕ್ರಮವನ್ನು ಸಂಕುಚಿತಗೊಳಿಸಿ ಶಿಕ್ಷಣಪದ್ಧತಿಯ ಮೇಲೆ ಸರ್ವಾಧಿಕಾರವನ್ನು ಬೆಳೆಸಿಕೊಂಡಿವೆ. ನಿಜವಾದ ಮೌಲ್ಯಮಾಪನವು ಮಕ್ಕಳ ಸತ್ವವನ್ನು ವೃದ್ಧಿಗೊಳಿಸುವಂತಿರುತ್ತದೆ. ಇದರ ಬಗ್ಗೆ ಹಾಗೂ ಪರೀಕ್ಷೆಗಳಲ್ಲಿ ಅವ್ಯವಹಾರಗಳಿಗೆ ಅವಕಾಶ ಕೊಡದಂತೆ ಮೇಲ್ವಿಚಾರಣೆಯನ್ನು ಶಿಕ್ಷಕರು ಮಾಡಬೇಕು.

ಪುಸ್ತಕ ಭಂಡಾರ : ಪ್ರಪಂಚವು ಪ್ರತಿಕ್ಷಣದಲ್ಲೂ ಬದಲಾವಣೆಯನ್ನು ಹೊಂದುತ್ತಿದೆ. ಇದಕ್ಕೆ ಹೊಂದಿಕೊಳ್ಳುವಂತಹ ಶಿಕ್ಷಣವನ್ನು ಶಾಲೆ ಕೊಡಬೇಕಾದರೆ, ಜೀವಂತ ಕಾರ್ಯಾಗಾರವಾದ ಪುಸ್ತಕಭಂಡಾರ ಶಾಲೆಯಲ್ಲಿರಬೇಕು. ಪ್ರಗತಿದಾಯಕ ಬೋಧನೆಗೆ, ಸ್ವಯಂ ಅಧ್ಯಯನಕ್ಕೆ, ಮಕ್ಕಳ ಮನೋದೃಷ್ಟಿಯ ವಿಕಾಸಕ್ಕೆ, ಹೆಚ್ಚು ವಿಷಯಗಳ ಅಧ್ಯಯನಕ್ಕೆ ಮಕ್ಕಳ ವಿರಾಮದ ವೇಳೆಯ ಸ್ನೇಹಿತನಾದ ಪುಸ್ತಕಭಂಡಾರ ನೆರವನ್ನು ನೀಡುತ್ತದೆ. ಆದ್ದರಿಂದ ಉತ್ತಮವಾದ ಹೆಚ್ಚು ಹೆಚ್ಚು ಪುಸ್ತಕಗಳನ್ನು ಅವರು ಓದುವಂತೆ ಮಾಡಿ ಅದರ ಮೇಲ್ವಿಚಾರಣೆಯನ್ನು ಶಿಕ್ಷಕರು ಮಾಡಬೇಕು.

ಶಾಲಾ ಸಂಕಿರಣ : ಶಾಲಾ ಸಂಕೀರ್ಣ, ಶಿಕ್ಷಕರಿಗೆ ಒಂದು ವರಪ್ರಸಾದ. ಶಿಕ್ಷಕರಾಗಿ ತಾವು ಕಲಿಸುವ ಸಾಮರ್ಥ್ಯವನ್ನು ವೃದ್ಧಿಗೊಳಿಸಿಕೊಳ್ಳಲು ಹೆಚ್ಚು ಅಧ್ಯಯನ ಮಾಡಿದವರ ಸಂಪರ್ಕ ಅತಿ ಮುಖ್ಯವಾಗಿ ಬೇಕು. ಪ್ರತಿಮಾಹೆಯಲ್ಲಿ ಪ್ರತಿವಿಷಯದ ಬಗ್ಗೆ ಒಂದು ಬಾರಿಯಾದರೂ ಶಾಲಾಸಂಕಿರಣದ ಆಶ್ರಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಶಿಕ್ಷಕರು, ಪ್ರೌಢಶಾಲಾ ಶಿಕ್ಷಕರಿಗೆ ಪದವಿಪೂರ್ವ ಕಾಲೇಜಿನ ಶಿಕ್ಷಕರು ಹೆಚ್ಚಿನ ವಿಷಯ ಜ್ಞಾನಬೋಧನೆ ಮಾಡಬೇಕು. ಆದ್ದರಿಂದ ಶಾಲಾ ಸಂಕಿರಣದ ವ್ಯವಸ್ಥೆಯನ್ನು ಶಿಕ್ಷಣ ಇಲಾಖೆ ಮಾಡಬೇಕು. ಅದರ ಯಶಸ್ಸಿಗೆ ಮೇಲ್ವಿಚಾರಣೆಯನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾಡಬೇಕು.

ಶಾಲಾ ಸೌಲಭ್ಯಗಳು : ಬೋಧನೆ ಯಶಸ್ವಿಯಾಗಬೇಕಾದರೆ ಶಾಲಾಸೌಲಭ್ಯಗಳು ಅತ್ಯಾವಶ್ಯಕ. ಶಾಲಾ ಕಟ್ಟಡಗಳು, ಪೀಠೋಪಕರಣಗಳು, ಪಾಠೋಪಕರಣಗಳು, ಆಟೋಪಕರಣಗಳು ವಿಜ್ಞಾನದ ಉಪಕರಣಗಳು, ಪುಸ್ತಕಭಂಡಾರ, ಮಕ್ಕಳಿಗೆ ಮಧ್ಯಾಹ್ನದ ಉಪಹಾರ, ಉಚಿತ ಪಠ್ಯಪುಸ್ತಕಗಳು, ಸ್ಲೇಟುಗಳು, ಬಳಪಗಳು, ಸಮವಸ್ತ್ರ, ಇತ್ಯಾದಿಗಳು ಪ್ರಾಥಮಿಕ ಶಿಕ್ಷಣದ ಯಶಸ್ಸಿಗೆ ಕಾರಣವಾಗಿವೆ. ಇವುಗಳಿಲ್ಲದಿದ್ದರೆ ಶಾಲಾಶಿಕ್ಷಣ ಶೂನ್ಯವಾಗುತ್ತದೆ. ಮೇಲ್ಕಂಡ ವಸ್ತುಗಳಲ್ಲಿ ಕೆಲವನ್ನು ಶಾಲಾ ಅಭಿವೃದ್ಧಿ ಸಮಿತಿಯಿಂದ, ತಂದೆ ತಾಯಿಗಳಿಂದ ಹಾಗೂ ಇತರೆ ಸಂಸ್ಥೆಗಳಿಂದ ಶಾಲೆ ಪಡೆಯಬಹುದು. ಶಾಲಾ ಕಟ್ಟಡ, ಸಮವಸ್ತ್ರ, ಉಚಿತ ಪಠ್ಯಪುಸ್ತಕ ಇಂತಹವುಗಳನ್ನು ಸರ್ಕಾರದಿಂದ ಪಡೆದು ಉಳಿದವುಗಳನ್ನು ಮೇಲೆ ತಿಳಿಸಿದಂತೆ ದಾನಿಗಳಿಂದ ಪಡೆಯಬೇಕು. ದಾನಿಗಳಿಂದ ಅವು ದೊರಕದಿದ್ದರೆ ಸರ್ಕಾರವೇ ಕೊಡಬೇಕು. ಇವುಗಳ ಜೊತೆಗೆ, ನೀರಿನ ವ್ಯವಸ್ಥೆ, ಶೌಚಾಲಯ ಇತ್ಯಾದಿಗಳನ್ನು ಸರ್ಕಾರ ಹಾಗೂ ದಾನಿಗಳಿಂದ ಪಡೆದ ವಸ್ತುಗಳ ಬಳಕೆಯ ಬಗ್ಗೆ ಮೇಲ್ವಿಚಾರಣೆಯನ್ನು ಶಾಲೆಯ ಮುಖ್ಯೋಪಾಧ್ಯಾಯರು ಮಾಡಬೇಕು.

ಶಾಲೆಯ ರಿಜಿಸ್ಟರುಗಳು, ಪರಾಮರ್ಶೆಯ ಪುಸ್ತಕಗಳು : ಶಾಲೆಯಲ್ಲಿ ಇಡಬೇಕಾದ ಮುಖ್ಯ ರಿಜಿಸ್ಟರುಗಳು ಯಾವುವೆಂದರೆ:

1) **ದಾಖಲಾತಿ ರಿಜಿಸ್ಟರು**: ಮಗುವಿನ ಹೆಸರು. ಹುಟ್ಟಿದ ದಿನಾಂಕ. ಜಾತಿ. ತಂದೆಯ ಹೆಸರು. ವಯಸ್ಸು. ದಾಖಲಾದ ತರಗತಿ ಇತ್ಯಾದಿಗಳನ್ನು ತಪ್ಪಿಲ್ಲದೆ ಬರೆಯಬೇಕು.
2) **ನಗದು ಪುಸ್ತಕ**: ಶಾಲೆಯ ಆದಾಯ ಹಾಗೂ ಖರ್ಚುಗಳನ್ನು ಇದರಲ್ಲಿ ಬರೆಯಬೇಕು.
3) **ಫಲಿತಾಂಶದ ರಿಜಿಸ್ಟರ್**: ಇದರಲ್ಲಿ ಮಕ್ಕಳು ಬೇರೆ ಬೇರೆ ವಿಷಯಗಳಲ್ಲಿ ತೆಗೆದುಕೊಂಡ ಅಂಕಗಳು. ಫಲಿತಾಂಶ ಇತ್ಯಾದಿಗಳಿರುತ್ತವೆ. ಹಾಗೆಯೇ ಫಂಡುಗಳ. ಪಾಠೋಪಕರಣಗಳ. ಲೈಬ್ರರಿ ಪುಸ್ತಕಗಳ ಪೀಠೋಪಕರಣಗಳ. ವೈಜ್ಞಾನಿಕ ಉಪಕರಣಗಳ. ಪ್ರಾವಿಡೆಂಟ್ ಫಂಡ್. ಇನ್‌ಷೂರೆನ್ಸ್ ಫಂಡ್. ಮಿಸಲೇನಿಯಸ್‌ಗಳ ರಿಜಿಸ್ಟರುಗಳನ್ನು ಶಾಲೆಯಲ್ಲಿ ಇಡಬೇಕು. ಇವುಗಳ ಜೊತೆಗೆ ಶಿಕ್ಷಕರ ಹಾಜರಾತಿ ರಿಜಿಸ್ಟರ್. ರಜೆಯ ರಿಜಿಸ್ಟರ್. ಮಕ್ಕಳ ತರಗತಿವಾರು ದಾಖಲಾತಿ ರಿಜಿಸ್ಟರ್. ಮೆಡಿಕಲ್ ರಜೆ ರಿಜಿಸ್ಟರ್. ಸ್ಟಾಕ್ ರಿಜಿಸ್ಟರ್ ಇತ್ಯಾದಿಗಳನ್ನು ಕ್ರಮವಾಗಿ ಭರ್ತಿಮಾಡಿ ಇಡಬೇಕು. ಇವುಗಳನ್ನು ಕ್ರಮಬದ್ಧವಾಗಿ ಬರೆದಿದ್ದಾರೆಯೆ? ಹಾಗೂ ಎಲ್ಲಾ ರಿಜಿಸ್ಟರುಗಳನ್ನು ಇಟ್ಟಿದ್ದಾರೆಯೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಮುಖ್ಯೋಪಾಧ್ಯಾಯರಿಂದ ತನಿಖೆ ಹಾಗೂ ಮೇಲ್ವಿಚಾರಣೆಯಾಗಬೇಕು.

ವೈಯಕ್ತಿಕ ಆರೋಗ್ಯ : ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸು ಇರುತ್ತದೆ. ಶರೀರದ ಆರೋಗ್ಯ ಮನುಷ್ಯನ ಪ್ರಗತಿಗೆ ಬಹು ಮುಖ್ಯ. ಪ್ರತಿನಿತ್ಯವೂ ಹಲ್ಲು. ಬಾಯಿ. ಕಣ್ಣು. ಕಿವಿ. ಮೂಗು ಹಾಗೂ ಶರೀರವನ್ನು ತೊಳೆದುಕೊಳ್ಳಬೇಕು. ಚರ್ಮವನ್ನು ಮಕ್ಕಳು ಶುದ್ಧವಾಗಿ ಇಟ್ಟುಕೊಳ್ಳಬೇಕು. ಶುದ್ಧವಾದ ಬಟ್ಟೆಗಳನ್ನು ಧರಿಸಬೇಕು. ಮಕ್ಕಳು ಯಾವ ದುರಭ್ಯಾಸಕ್ಕೂ ಒಳಗಾಗದಂತೆ ಬೀಡಿ. ಸಿಗರೇಟು. ಮಾದಕ ವಸ್ತುಗಳು - ಇವುಗಳನ್ನು ಸೇವಿಸದಂತೆ ತಂದೆ-ತಾಯಿಗಳು ಹಾಗೂ ಶಿಕ್ಷಕರು ನೋಡಿಕೊಳ್ಳಬೇಕು. ಒಳ್ಳೆಯ ಗಾಳಿಯನ್ನು ಮಕ್ಕಳು ಸೇವಿಸಬೇಕು. ಒಳ್ಳೆಯ ನೀರು ಹಾಗೂ ಆಹಾರವನ್ನು ಉಪಯೋಗಿಸಬೇಕು. ಕ್ರೀಡೆಗಳಲ್ಲಿ ಮಕ್ಕಳು ಭಾಗವಹಿಸಬೇಕು. ಬೀದಿಯಲ್ಲಿ ಮಾರುವ ತಿಂಡಿಗಳನ್ನು ಮಕ್ಕಳು ತಿನ್ನಬಾರದು. ಇವುಗಳ ಮೇಲ್ವಿಚಾರಣೆಯನ್ನು ತರಗತಿಗಳ ಶಿಕ್ಷಕರು ಶಾಲಾ ಮುಖ್ಯಸ್ಥರು ಹಾಗೂ ತಂದೆ-ತಾಯಿಗಳು ಮಾಡಬೇಕು.

ಪ್ರಥಮ ಚಿಕಿತ್ಸೆ : ಮಕ್ಕಳು ಆಟವಾಡುವಾಗ ಬೀಳುತ್ತವೆ; ಗಾಯ ಮಾಡಿಕೊಳ್ಳುತ್ತವೆ. ಪರೀಕ್ಷೆಯ ವೇಳೆಯಲ್ಲಿ ಕುಸಿದು ಬೀಳುತ್ತವೆ ಹಾಗೂ ಇತರೆ ರೋಗಗಳಿಗೆ ತುತ್ತಾಗುತ್ತವೆ. ಅಂತಹ ಸಂದರ್ಭಗಳಲ್ಲಿ ತುರ್ತಾಗಿ ಮೊದಲು ಶಿಕ್ಷಕರು ಪ್ರಥಮ ಚಿಕಿತ್ಸೆ ಕೊಡಬೇಕು ಹಾಗೂ ತಕ್ಷಣವೇ ಅವರ ತಂದೆ-ತಾಯಿಗಳಿಗೆ ತಿಳಿಸಿ

ರೋಗಿಯನ್ನು ಆಸ್ಪತ್ರೆಗೆ ಸಾಗಿಸುವ ಮೇಲ್ವಿಚಾರಣೆಯನ್ನು ಶಾಲೆಯ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರು ಮಾಡಬೇಕು. ಪ್ರತಿ ಶಾಲೆಯಲ್ಲೂ ಪ್ರಥಮ ಚಿಕಿತ್ಸೆಯ ಪೆಟ್ಟಿಗೆಯನ್ನು ಇಟ್ಟುಕೊಳ್ಳಬೇಕು.

ಶಾಲೆಯಲ್ಲಿ ವೈದ್ಯಕೀಯ ತಪಾಸಣೆ : ಆರೋಗ್ಯ, ಪ್ರಕೃತಿ ಕೊಟ್ಟಿರುವ ಬೆಲೆಕಟ್ಟಲಾಗದ ವರ. ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಶಾಲೆಯಲ್ಲಿ ಎಲ್ಲಾ ಮಕ್ಕಳ ವೈದ್ಯಕೀಯ ತಪಾಸಣೆಯನ್ನು ವೈದ್ಯರಿಂದ ಮಾಡಿಸಬೇಕು. ತಂದೆ ತಾಯಿಗಳಿಗೆ ಹಾಗೂ ಶಿಕ್ಷಕರಿಗೆ ಗೊತ್ತಾಗದ ಖಾಯಿಲೆಗಳನ್ನು ವೈದ್ಯರು ಪತ್ತೆ ಹಚ್ಚಬಲ್ಲರು. ಆದ್ದರಿಂದ ಪ್ರತಿವರ್ಷವೂ ವೈದ್ಯರಿಂದ ಮಕ್ಕಳ ವೈದ್ಯಕೀಯ ತಪಾಸಣೆ ಮಾಡಿಸುವ ಹೊಣೆ ಮುಖ್ಯೋಪಾಧ್ಯಾಯರದು ಹಾಗೂ ಪ್ರತಿ ಮಗುವೂ ವೈದ್ಯರ ತಪಾಸಣೆಗೆ ಒಳಗಾಗುವಂತೆ ಮೇಲ್ವಿಚಾರಣೆಯನ್ನು ಶಾಲಾ ಮುಖ್ಯಸ್ಥರು ಮಾಡಬೇಕು.

ಮೇಲ್ವಿಚಾರಣೆ ಹಾಗೂ ತನಿಖೆ : ಮೇಲ್ವಿಚಾರಣೆಗಳು ಹಾಗೂ ತನಿಖೆಗಳು ಶಿಕ್ಷಕರಿಗೆ ಮಾರ್ಗದರ್ಶಿಗಳಾಗಬೇಕು. ಶಿಕ್ಷಕರು ಹೆಚ್ಚು ಮಾರ್ಗದರ್ಶನ ಪಡೆದು ತಮ್ಮ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಉತ್ತಮ ನಾಯಕತ್ವ ನೀಡಲು ಹಾಗೂ ಮಾರ್ಗದರ್ಶನ ನೀಡಲು ಶಿಕ್ಷಣಸಂಸ್ಥೆಗಳು ತಪ್ಪುಹೆಜ್ಜೆ ಇಟ್ಟರೆ, ಅವುಗಳನ್ನು ಸರಿಪಡಿಸಲು ಮೇಲ್ವಿಚಾರಣೆ ಹಾಗೂ ತನಿಖೆಗಳು ಅತ್ಯಾವಶ್ಯಕ. ಶಿಕ್ಷಣತಜ್ಞರ ಪ್ರಕಾರ ಇವು ಶಿಕ್ಷಕರನ್ನು ದಂಡಿಸುವುದಕ್ಕಲ್ಲ, ಹೆದರಿಸುವುದಕ್ಕಲ್ಲ, ದುರ್ಬಲಗೊಳಿಸುವುದಕ್ಕಲ್ಲ ಅಥವಾ ಪರೀಕ್ಷಿಸುವುದಕ್ಕಲ್ಲ. ಅವರಿಗೆ ತರಬೇತಿ ಕೊಡುವುದಕ್ಕೆ; ಅವರಿಗೆ ಮಾರ್ಗದರ್ಶನ ನೀಡುವುದಕ್ಕೆ, ಅವರಿಗೆ ಸ್ಫೂರ್ತಿ ಕೊಡುವುದಕ್ಕೆ ಹಾಗೂ ಮೇಲ್ವಿಚಾರಣೆ ಮಾಡುವುದಕ್ಕೆ ತನಿಖೆ ಮುಖ್ಯವಾಗಿ ಬೇಕಾಗಿದೆ. ಸಾಮೂಹಿಕ ತನಿಖೆ ಇರುವುದು ಅವರನ್ನು ಹೊಗಳುವುದಕ್ಕೂ ಅಲ್ಲ, ನಿಂದಿಸುವುದಕ್ಕೂ ಅಲ್ಲ. ಅವರನ್ನು ಖಂಡಿಸಿ, ನಿಂದಿಸುವುದರಿಂದ ದ್ವೇಷ ಹಾಗೂ ಅಸೂಯೆ ಶಿಕ್ಷಣಾಧಿಕಾರಿಗಳ ಅಥವಾ ಸಂಬಂಧಿಸಿದ ಮುಖ್ಯೋಪಾಧ್ಯಾಯರ ಬಗ್ಗೆ ಬೆಳೆಯುತ್ತದೆ. ತನಿಖೆ ಹಾಗೂ ಮೇಲ್ವಿಚಾರಣೆಗಳು ಸೃಜನಾತ್ಮಕ, ಉತ್ತೇಜಿತ ಹಾಗೂ ಚೈತನ್ಯದಾಯಕವಾಗಿರಬೇಕು. ಇದರಿಂದ ಶಿಕ್ಷಕರು ಉತ್ತೇಜಿತರಾಗುತ್ತಾರೆ; ಸ್ಫೂರ್ತಿದಾಯಕರಾಗುತ್ತಾರೆ. ಶಾಲಾ ಮೇಲ್ವಿಚಾರಕರು ಬೋಧನಾ ವಿಧಾನ, ದೃಕ್‌ಶ್ರವಣ ಬೋಧನಾ ಸಾಮಗ್ರಿಗಳನ್ನು ಪರಿಶೀಲಿಸಿ ಬೋಧನೆಯನ್ನು ಉತ್ತಮಗೊಳಿಸಬೇಕು; ಬರವಣಿಗೆ, ಕಾರ್ಯವಿಭಜನೆ, ಬೋಧನೆ, ಮಕ್ಕಳ ಮನೆಗೆಲಸ, ವೇಳಾಪಟ್ಟಿ, ಸನ್ನಿವೇಶ, ಮಕ್ಕಳ ಶಿಸ್ತು, ಅವರ ನಡತೆ, ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ, ಆಟಗಳು, ಕ್ರೀಡಾ ಚಟುವಟಿಕೆಗಳು, ಶಾಲಾ ಸರ್ಕಾರ, ಶಾಲಾ ಸಂಕೀರ್ಣ, ಓದುವ ಪತ್ರಿಕೆ, ಪುಸ್ತಕಭಂಡಾರ, ಪ್ರಯೋಗಶಾಲೆ, ರಿಜಿಸ್ಟರು ಇತ್ಯಾದಿಗಳ ಮೇಲ್ವಿಚಾರಣೆಯನ್ನು ಅಧಿಕಾರಿಗಳು ಮಾಡಬೇಕು.

ಶೈಕ್ಷಣಿಕ ಮಾರ್ಗದರ್ಶನ

ಕೆ. ಎಸ್. ಸಮೀರಸಿಂ

ಮನುಷ್ಯನ ಅವಶ್ಯಕತೆಗಳು ಅನೇಕ. ಬೇರೆಲ್ಲಾ ಪ್ರಾಣಿಗಳಿಗಿಂತ ಮನುಷ್ಯಪ್ರಾಣಿಯ
ಅವಶ್ಯಕತೆಯು ಅವುಗಳ ಪೂರೈಕೆಯೊಂದಿಗೆ ಹೆಚ್ಚುತ್ತಾ ಹೋಗುತ್ತದೆ. ಮಾನವನ
ವಿಭಿನ್ನವಾದ ವರ್ತನೆಗೆ ಅವನ ಅವಶ್ಯಕತೆಗಳು ಮತ್ತು ಅವುಗಳಿಂದ ಬೋಧನೆಯಾದ
ಅಭಿಪ್ರೇರಣೆಗಳೇ (motive) ಕಾರಣ. ಬೇರೆ ಪ್ರಾಣಿಗಳಿಗಿರುವಂತೆ ಹಸಿವು, ಬಾಯಾರಿ
ನಿದ್ರೆ, ವಿಶ್ರಾಂತಿಗಳನ್ನು ಅಪೇಕ್ಷಿಸುವ ಮೂಲಪ್ರವೃತ್ತಿಯಲ್ಲದೆ ಮಾನವನಿಗೆ ಅವನದೇ ಆ
ಕೆಲವು ಪ್ರವೃತ್ತಿಗಳಿವೆ. ಅವು ಕೇವಲ ಮಾನವನಿಗೆ ತನ್ನಲ್ಲಿರುವ ಚಿಂತಿಸುವ ಸಾಮ
ತಂದ ಕೊಡುಗೆ ಎಂದೇ ಹೇಳಿ ಮುಗಿಸಬಹುದೆ ಎಂಬ ಸಂದೇಹ ಬರುತ್ತದೆ. ಒಟ್ಟಿ
ಆಡುತ್ತಾ ಬೆಳೆಯುತ್ತಿರುವ ಒಂದು ಗುಂಪಿನಲ್ಲಿರುವ ಶಾಲಾಮಕ್ಕಳನ್ನು ಸೂಕ್ಷ್ಮವಾ
ಗಮನಿಸಿದರೆ ಅವರಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ಸ್ವಭಾವಗಳಿರುವುದನ್ನು ನಾ
ಕಾಣಬಹುದು. ಅವರ ಆಸೆ ಆಕಾಂಕ್ಷೆಗಳು, ಸಾಮರ್ಥ್ಯಗಳು ವಿಭಿನ್ನವಾಗಿದ್ದರೂ ಒಟ್ಟಿ
ಕುಣಿದು ಕುಪ್ಪಳಿಸುವುದನ್ನು ಕಂಡಿದ್ದೇವೆ. ತಮ್ಮ ತಮ್ಮಲ್ಲೇ ಜಗಳ, ಕದನಗಳಾದರೂ
ಕೆಲವೇ ಗಳಿಗೆಗಳಲ್ಲಿ ಪುನಃ ಒಂದಾಗುವ ಪ್ರವೃತ್ತಿಯನ್ನು ಸಹಾ ನೋಡಿದ್ದೇವೆ. ಮಕ್ಕಳ
ಸೋಲು ಗೆಲುವುಗಳನ್ನು ಅನುಭವಿಸಿದರೂ, ಚಂಡಿ ಪ್ರವೃತ್ತಿಯನ್ನು ಹೊಂದಿದ್ದರೂ, ಇತರ
ಸ್ನೇಹ ಅಪೇಕ್ಷಿಸುವರು. ತನ್ನ ಸ್ನೇಹಿತ ಹೆಚ್ಚು ಅಂಕಗಳನ್ನು ಪಡೆದರೂ ತಾನು ಪಡೆಯಲ
ಸಾಧ್ಯವಾಗದಿದ್ದರೂ ಅವನ ಸ್ನೇಹವನ್ನು ಮಾತ್ರ ಬಿಟ್ಟುಕೊಡದ ಪುಟಾಣಿಮಕ್ಕಳನ
ಶಾಲೆಗಳಲ್ಲಿ ನೋಡಿದ್ದೇವೆ. ಒಬ್ಬನು ಪಾಟಾಳಿಯಾದರೆ ಮತ್ತೊಬ್ಬನು ಮುದ್ದಾ
ಬರೆಯುವುದನ್ನು, ಮಗದೊಬ್ಬನು ಆಟದಲ್ಲಿ ಮೊದಲಿಗನಾಗುವ ಸಂದರ್ಭಗಳ
ಪ್ರತಿಶಾಲೆಯಲ್ಲೂ ಸರ್ವೇಸಾಮಾನ್ಯ. ಈ ಎಲ್ಲಾ ಅಂಶಗಳೂ ಪ್ರತಿ `ಮಗುವು ತನ್ನದ
ಆದ ವಿಶೇಷತೆಯನ್ನು ಹೊಂದಿರುವ ವ್ಯಕ್ತಿತ್ವ' ಎನ್ನುವುದನ್ನು ಸಾರುತ್ತವೆ. ಮಕ್ಕಳಲ
ಅನೇಕ ಸಾಮಾನ್ಯಗುಣಗಳನ್ನು ಕಂಡರೂ ವಿಭಿನ್ನವಾದ ಲಕ್ಷಣಗಳೇ ಹೆಚ್ಚು. ಹೀ
ವಿಭಿನ್ನತೆಗಳನ್ನು ಪರಿಗಣಿಸಿದರೆ ಸಾಮಾನ್ಯ ಸಾಮರ್ಥ್ಯಗಳಿಗೆ ಮಾತ್ರ ಪೋಷಣೆ ಕೊಡು
ಯೋಜನೆಯೇ ಶಾಲಾ ಕಾಲೇಜುಗಳ ಕಾರ್ಯಕ್ರಮ ಎಂದು ಹೇಳುವುದು ತಪ್ಪು ಎಂದ
ನನಗನಿಸುತ್ತದೆ.

ಇಂತಹ ಶೈಕ್ಷಣಿಕ ಪರಿಸ್ಥಿತಿಯಲ್ಲಿ ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯೂ ಒಂದ
ಅನನ್ಯವಾದ ವ್ಯಕ್ತಿತ್ವ ಎನ್ನುವುದನ್ನು ಅರಿಯದೇ ಸಂಘಟಿಸಲ್ಪಟ್ಟಿರುವ ಶೈಕ್ಷಣಿ
ಕಾರ್ಯಕ್ರಮವು ವಿದ್ಯಾಭಿಲಾಷಿಗಳು ತಮ್ಮ ಮೇಲೆ ತಾವೆ ಇಡಬೇಕಾದ ನಂಬಿಕೆಯನ
ಹಾಳು ಮಾಡುತ್ತವೆ. ಪ್ರತಿ ವಿದ್ಯಾಭಿಲಾಷಿಗೂ ತನ್ನ ಗುರಿಯತ್ತ ಸಾಗುವ ಅಭಿಲಾ
ಇರುವುದು ಸಹಜ. ಆದರೆ ತಾನೆ ನಿರೂಪಿಸಿಕೊಂಡ ಗುರಿಯು ನೈಜವಾಗಿರಬೇಕು. ತ

ಸಾಮರ್ಥ್ಯವನ್ನು ಅರಿತು ಅದಕ್ಕನುಗುಣವಾಗಿ ನಿರೂಪಿಸಲ್ಪಟ್ಟ ಗುರಿಯೇ ನೈಜವಾದುದು. ಅಂತಹ ಗುರಿ ಸಾಧನೆಯೇ 'ಜಯ'. ನಿರೂಪಿಸಲ್ಪಟ್ಟ ಗುರಿಯನ್ನು ತಲುಪಲು ಬೇಕಾಗಿರುವ ಸಾಮರ್ಥ್ಯದ ಅರಿವು ಆತನಿಗೆ ಇರಬೇಕು. ಆ ಸಾಮರ್ಥ್ಯದ ಬೆಳವಣಿಗೆಗಾಗಿ ಆರಿಸಿಕೊಂಡ ಸಾಧನೆಯ ಹಾದಿಯೇ ವಿದ್ಯಾಭ್ಯಾಸ ಕ್ರಮ. ಹೀಗೆ ಪರಿಶ್ರಮಿಸಿದ ವಿದ್ಯಾಭಿಲಾಷಿ ತನ್ನ ಗುರಿಯತ್ತ ಸಾಗಿ ವಿಜಯಿಯಾಗಬಲ್ಲ. ಇಂತಹ ವಿದ್ಯಾರ್ಥಿ(ನಿ)ಗೆ ಜೀವನ ಸ್ವರ್ಗವಾಗ ಬಲ್ಲದು. ಆದರೆ, ತನ್ನ ಸಾಮರ್ಥ್ಯವನ್ನು ಅರಿಯದೆ ಮಿಥ್ಯವಾದ ಒಂದು ಗುರಿಯನ್ನು ಮರೀಚಿಕೆಗೊಳಿಸುವ ಯುವಕ/ಯುವತಿಯರ ಸಂಖ್ಯೆ ಅತಿ ಹೆಚ್ಚು ಎಂದು ಹೇಳಬೇಕಾಗಿಲ್ಲ.

ಸಾಮರ್ಥ್ಯಕ್ಕನುಗುಣವಾದ ಗುರಿಯನ್ನು ನಿರೂಪಿಸಿರುವುದು ಅಥವಾ ಗುರಿಗೆ ತಕ್ಕುದಾದ ಸಾಮರ್ಥ್ಯವನ್ನು ತಮ್ಮ ವಿದ್ಯಾರ್ಥಿಗಳಲ್ಲಿ ಬೆಳೆಸಬಲ್ಲ ಕಾರ್ಯಕ್ರಮವು ವಿದ್ಯಾರ್ಥಿಜೀವನವನ್ನು ಸುಖಮಯ ಮಾಡಬಲ್ಲದು. ಗೆಲುವು ಗೆಲುವಿನತ್ತ ನುಗ್ಗಿಸುತ್ತದೆ. ಆದರೆ ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದಾಗ ಕಂಡು ಬರುವುದಾದರೂ ಏನು? ಮಿಥ್ಯವಾದ ಗುರಿ, ಸಾಮರ್ಥ್ಯದ ಕೊರತೆ, ಗುರಿ-ಸಾಮರ್ಥ್ಯಗಳ ನಡುವೆ ಸಂಬಂಧವಿಲ್ಲದೆ ರೂಪಿಸಲ್ಪಟ್ಟ ವಿದ್ಯಾಭ್ಯಾಸಕ್ರಮ. ಇದರಿಂದ ಆಗಬಹುದಾದರೂ ಏನು?

ಹೀಗಾಗದ ಪರಿಸ್ಥಿತಿಯನ್ನು ಊಹಿಸುವುದು ಒಳ್ಳೆಯದು. ನೈಜವಾದ, ತನಗೆ ತಕ್ಕುದಾದ ಗುರಿ ನಿರೂಪಿಸಿಕೊಳ್ಳುವ ಪ್ರವೃತ್ತಿಯನ್ನು ಮಕ್ಕಳಲ್ಲಿ ಬೆಳೆಸಬೇಕು. ಸಾಮರ್ಥ್ಯದ ಬೆಳವಣಿಗೆ ಕುಂಠಿತವಾದಾಗ ಗುರಿಯನ್ನೇ ಅದಕ್ಕನುಗುಣವಾಗಿ ಬದಲಾಯಿಸಿಕೊಳ್ಳುವ ಪ್ರವೃತ್ತಿಯನ್ನು ಹೊಂದಿರುವ ವ್ಯಕ್ತಿಯೇ ಸದಾ ಜಯವನ್ನು ಅನುಭವಿಸುವ ಪ್ರತಿಭಾವಂತ. ಈ ಒಂದು ಪ್ರಕ್ರಿಯೆಯು ಮಗುವಿನ ಬೆಳವಣಿಗೆಯಲ್ಲಿ ನಿರಂತರವಾಗಿ ನಡೆಯುತ್ತಿರಬೇಕು. ಇದನ್ನೇ ಹೊಂದಾಣಿಕೆ ಎನ್ನುವುದು ಹೊಂದಾಣಿಕೆಯ ಮಂತ್ರವನ್ನು ಅರಿತಿರುವವನೇ(ಳೇ) ಸದಾ ಜಯಶಾಲಿ. ಹೊಂದಾಣಿಕೆಯ ಸೂತ್ರವನ್ನು ಯಾರು ಕಲಿತಿದ್ದಾರೋ ಅವರ ಮಾನಸಿಕ ಸ್ಥೈರ್ಯ ಹೆಚ್ಚು. ವಿಜಯಶಾಲಿಗಳಾದ ಅನೇಕ ಪ್ರತಿಭಾವಂತರ ಜೀವನವನ್ನು ಗಮನಿಸಿದ್ದೇ ಆದರೆ ಇವರ ಸತ್ಯಾಸತ್ಯತೆಯ ಅರಿವಾಗುತ್ತದೆ.

ತಂಡೂಲ್ಕರ್‌ನಂತಹ ವಿಜಯಶಾಲಿ ಯುವಕನ ವಿಜಯದ ಹಾದಿಯನ್ನು ಗಮನಿಸಿ. ಆತನು "ನಾನು ನೂರು ಹೊಡೆಯುತ್ತೇನೆ" ಎಂಬ ಗುರಿಯನ್ನು ನೈಜವಾಗಿ ತನ್ನ ಸಾಮರ್ಥ್ಯದ ಮೇಲಿನ ನಂಬಿಕೆಯಿಂದಷ್ಟೆ ನಿರೂಪಿಸಿಕೊಳ್ಳುವ ಪ್ರವೃತ್ತಿಯನ್ನು ಹೊಂದಿದ್ದಾನೆ. ತನಗೆ ಶತಕವನ್ನು ಹೊಡೆಯಲು ಬೇಕಾದ ಅವಧಾನ, ಶಕ್ತಿ, ತಾಂತ್ರಿಕತೆ, ಮನೋದಾರ್ಢ್ಯ, ಆರೋಗ್ಯ ಹಾಗೂ ಚಾಕಚಕ್ಯತೆಗಳನ್ನು ನಿರಂತರವಾದ ಅಭ್ಯಾಸದಿಂದ ಬೆಳೆಸಿಟ್ಟುಕೊಂಡಿರುತ್ತಾನೆ. ಇದೇ ವಿಜಯದ ಹಾದಿ. ಇದರ ಸಾಧನೆಯೇ ವಿಜಯ. ಎಂದರೆ ನಿರಂತರವಾದ ಶ್ರಮ ಸಾಮರ್ಥ್ಯದ ಬೆಳವಣಿಗೆಗೆ ದಾರಿ.

ಅನೇಕ ಮಕ್ಕಳು ಮತ್ತು ಯುವಕ-ಯುವತಿಯರು ತಮ್ಮ ಶಾಲಾ-ಕಾಲೇಜುಗಳ ಕೆಲಸದಲ್ಲಿ ಜಯಶೀಲರಾಗಬೇಕೆಂದೇ ಇಚ್ಛಿಸುತ್ತಾರೆ. ತಮ್ಮ ಇಚ್ಛೆಯಂತೆ ಕೆಲಸ ಮಾಡುವಂತಹ ಶಕ್ತಿಯುತರಾದಾಗ ಅವರು ಸಂತುಷ್ಟರಾಗುತ್ತಾರೆ. ತಾವು ಜಯಶಾಲಿ ಗಳಾಗದಿರುವ ಕೆಲಸಗಳನ್ನು ಅಪಜಯ ಮತ್ತು ನಿರಾಶೆಗಳ ಭಯದಿಂದ ಕೈಗೆತ್ತಿಕೊಳ್ಳುವುದಿಲ್ಲ. ಕೆಲಸದ ಅನುಭವ ಮತ್ತು ಜಯದ ರುಚಿ ತಿಳಿದಿರುವ ಮಕ್ಕಳು ತಾವೇ ತಾವಾಗಿ ತಮ್ಮ ಕೈಲಾಗುವಷ್ಟು ಉತ್ತಮಕೆಲಸಗಳನ್ನು ಮಾಡುವರು. ಪ್ರತಿಯೊಂದು ಮಗುವಿನ

ಆವಶ್ಯಕತೆಗಳನ್ನು ಪೂರೈಸುವಂತೆ ಶಾಲೆ ಮತ್ತು ಕಾಲೇಜುಗಳು ಮಾರ್ಗದರ್ಶನ ನೀಡಬೇಕ
ಶಾಲಾ ಕಾಲೇಜುಗಳು ಈ ರೀತಿ ಮಾಡಲು ಹಲವು ದಾರಿಗಳಿವೆ.

ಸಾಮರ್ಥ್ಯಗಳನ್ನು ತಾವು ಮುಟ್ಟಬೇಕಾದ ಗುರಿಗನುಗುಣವಾಗಿ ಬೆಳೆಸಿಕೊಂ ತಂಡೂಲ್ಕರನಂತೆ ಜಯಶಾಲಿಗಳಾಗಿ ಮತ್ತೆ ಗುರಿಯನ್ನು ಉನ್ನತಗೊಳಿಸಿ ಅದಕ್ಕೆ ತಕ್ಕುದಾ ಸಾಮರ್ಥ್ಯಗಳನ್ನು ಮತ್ತೆ ಬೆಳೆಸಿಕೊಳ್ಳುವ ಪ್ರತಿಭಾವಂತ ಮಕ್ಕಳು ಅನೇಕರು. ಆದರೆ ಕ್ರಿಯೆಯಲ್ಲಿ, ಎಂದರೆ ತಮ್ಮ ಸಾಮರ್ಥ್ಯವನ್ನು ತಾವೇ ಅರಿಯುವ ಮಕ್ಕಳು ಅಪಜಯ ಒಳಗಾಗುವ ಸಂದರ್ಭಗಳು ಅನೇಕ, ಸಾವಿರಗಟ್ಟಲೆ ಎಂದರೆ ತಪ್ಪಾಗಲಾರದು. ಇಂತ ಮಕ್ಕಳಿಗೆ ಬೇಕಾದುದು ಒಂದೇ ಸಹಾಯ. ಇದನ್ನೇ ನಾವು 'ಮಾರ್ಗದರ್ಶನ' ಎನ್ನುವುದ ಮಾರ್ಗದರ್ಶನ ಎಂದರೆ ಒಬ್ಬ ವ್ಯಕ್ತಿಗೆ ಜಯವನ್ನು ತಂದುಕೊಡುವುದಲ್ಲ. ಅವ ಮಾಡಬೇಕಾದ ಕೆಲಸವನ್ನು ನಾವು ಮಾಡಿ ಮುಗಿಸಿ ಸುಗಮಗೊಳಿಸುವುದ ಉತ್ತೀರ್ಣನಾಗಲೆಂದು ಪ್ರಶ್ನೆಪತ್ರಿಕೆಯ ಮಟ್ಟವನ್ನು ಮೊಟಕು ಮಾಡುವುದ ಸ್ಪರ್ಧೆಯಲ್ಲಿ ಇತರ ಸ್ಪರ್ಧಿಗಳು ಪಾಲುಗೊಳ್ಳುವಿಕೆಯನ್ನು ತಡೆಗಟ್ಟುವುದಲ್ಲ. ಆದ ವ್ಯಕ್ತಿಯಲ್ಲಿ ಆಂತರಿಕವಾಗಿ ಹುದುಗಿರುವ ಸಾಮರ್ಥ್ಯವನ್ನು ಹೊರಹೊಮ್ಮಿಸಿ ಅ ಕ್ರಿಯಾಶೀಲವಾಗುವಂತೆ ಮಾಡುವುದು. ಮಾರ್ಗದರ್ಶನ ಎಂಬ ಪದವು ಒಂದು ಪರಿಕಲ್ಪ "ಮಾರ್ಗದರ್ಶನ ಎಂದರೆ ನಿರ್ದೇಶನವಲ್ಲ. ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬ ಮೇಲೆ ಹೇರುವುದಲ್ಲ. ಬದಲಿಗೆ ಯಾವುದೇ ವಯಸ್ಸಿನ ಒಬ್ಬ ವ್ಯಕ್ತಿಗೆ ತನ್ನ ಜೀವನ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸಿಕೊಳ್ಳಲು, ತನ್ನ ಆಸೆ ಆಕಾಂಕ್ಷೆಗಳನ್ನು ಅಭಿವೃ ಗೊಳಿಸಿಕೊಳ್ಳಲು, ತಾನೇ ತೀರ್ಮಾನಗಳನ್ನು ಕೈಗೊಳ್ಳಲು ಮತ್ತು ತನ್ನ ಹೊರೆಯನ ತಾನೇ ನಿರ್ವಹಿಸುವಂತೆ ಮಾಡಲು, ಅರ್ಹತೆ ಮತ್ತು ತರಬೇತಿ ಪಡೆದಿರುವ ವ್ಯಕ್ತಿಗ ನೀಡುವ ಸಹಾಯವೇ ಮಾರ್ಗದರ್ಶನ." (ಕ್ರೊ ಮತ್ತು ಕ್ರೊ).

ಮಾರ್ಗದರ್ಶನದ ಆವಶ್ಯಕತೆ ಕಂಡುಬರುವುದು ಸಮಸ್ಯೆ ಕಂಡು ಬಂದರೆ ಮಾತ ಅನೇಕ ಮಕ್ಕಳಿಗೆ ತಮ್ಮ ಸಮಸ್ಯೆಯ ಅರಿವೇ ಇರುವುದಿಲ್ಲ. ಸಮಸ್ಯೆಯನ್ನು ಅರಿತ ವ್ಯ ಅರ್ಧಕ್ಕರ್ಧ ಸಮಸ್ಯೆಯ ಪರಿಹಾರವನ್ನು ತಿಳಿದಂತೆಯೇ ಶೈಕ್ಷಣಿಕವಾಗಿ ಯೋಚಿಸಿದಾ ಶೈಕ್ಷಣಿಕ ಸಮಸ್ಯೆಗಳನ್ನು ಎರಡು ಭಾಗಗಳಾಗಿ ನೋಡಬಹುದು. ವ್ಯವಸ್ಥೆಯಿಂ ಉದ್ಭವವಾದ ಸಮಸ್ಯೆಗಳ ಪರಿಹಾರ ಅತಿಕ್ಲಿಷ್ಟವಾದುದು. ಅಂತಹ ಸಮಸ್ಯೆಗಳ ಕಾರಣವನ ಕಂಡುಹಿಡಿದು, ಬಿಡಿಸಿ ವ್ಯವಸ್ಥೆಯನ್ನು ಸರಿಪಡಿಸುವುದು ಪಂಡಿತರ, ತಜ್ಞರ ಹಾಗು ವ್ಯವಸ್ಥಾಪಕರ ಕರ್ತವ್ಯವಾಗಿರುತ್ತದೆ. ಇಂತಹ ಸಮಸ್ಯೆಗಳ ಜಟಿಲತೆಯನ್ನು ವಿಶ್ಲೇಷಿ ಪರಿಹಾರಗಳನ್ನು ಕಂಡುಹಿಡಿಯಬಲ್ಲ ಅನೇಕ ಮೇಧಾವಿಗಳಿದ್ದಾರೆ. ಅನುಸಂಧಾನಗ ಮೂಲಕ ಪರಿಹರಿಸುವ ಸಾಮರ್ಥ್ಯ ನಮ್ಮ ನಾಗರೀಕತೆಯಲ್ಲಿ ಬೆಳೆದುಬಂದಿವೆ. ರಾಜಕೀ ಸಂಕಲ್ಪ (Political will), ಆಡಳಿತಾತ್ಮಕ ಸಂಕಲ್ಪ (Administrative will) ಮತ ಕಳಕಳಿಗಳು ಈ ಒಂದು ಆಯಾಮದ ಸಮಸ್ಯೆಗಳನ್ನು ಪರಿಹರಿಸಬಲ್ಲವು. ಸಮಸ್ಯೆ ಉದ್ಭವವಾಗದಂಥ ಸಮಾಜವನ್ನು ಕಾಣಲಾಗುವುದಿಲ್ಲ. ನಾಗರೀಕತೆಯೊಂದಿಗೆ ಸಮಸ್ಯೆ ಆಯಾಮಗಳು ಬದಲಾಗುವುದು ಬೆಳವಣಿಗೆಯ ಲಕ್ಷಣ.

ನಾವು ಅತಿಮುಖ್ಯವಾಗಿ ಚಿಂತಿಸಬೇಕಾಗಿರುವುದು ಪ್ರತಿವ್ಯಕ್ತಿಯ ಶೈಕ್ಷಣಿಕ ಸಮಸ್ಯೆಗ

ಬಗ್ಗೆ. ಪ್ರತಿಯುವಕ ಯುವತಿಯರು ತಮ್ಮ ಸಮಸ್ಯೆಯನ್ನು ತಾವೇ ಪತ್ತೆ ಮಾಡಿ ಅದನ್ನು ಬಿಡಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರಬೇಕು. ಹೀಗಾಗದಿದ್ದರೆ ವ್ಯಕ್ತಿಯ ಸಮಸ್ಯೆಗಳು ಸಿಡಿದೆದ್ದು ಸಾಮಾಜಿಕ ಸಮಸ್ಯೆಯಾಗುವ ಭಯವಿದೆ. ಶಾಲಾ ಕಾಲೇಜುಗಳ ವಿದ್ಯಾಭ್ಯಾಸ ಕಾಲದಲ್ಲೇ ಚಿಕ್ಕಪುಟ್ಟ ಶೈಕ್ಷಣಿಕ ಸಮಸ್ಯೆಗಳನ್ನು ಬಿಡಿಸಿಕೊಳ್ಳುವ ಸಾಮರ್ಥ್ಯ ಪಡೆದುಕೊಂಡರೆ, ಮುಂದೆ ಯುವಜನಾಂಗವು ಸಮಾಜದ ಸಮಸ್ಯೆಗಳನ್ನು ಬಿಡಿಸಲು ಸಾಧ್ಯವಾಗುವುದೇ ಅಲ್ಲದೆ ಬುನಾದಿಯನ್ನೇ ಸರಿಯಾಗಿ ನಿರ್ಮಿಸಿ (ಸರಿಪಡಿಸಿ) ಸಮಸ್ಯೆಗಳ ಉದ್ಭವವನ್ನು ಕಡಿಮೆಮಾಡಬಲ್ಲ ಚಾಕಚಕ್ಯತೆಯನ್ನು ಪಡೆಯಬಲ್ಲರು. ಆದ್ದರಿಂದಲೇ ಶೈಕ್ಷಣಿಕ ಮಾರ್ಗದರ್ಶನವು ಶಾಲೆಯ ಒಂದು ಮುಖ್ಯ ಕಾರ್ಯಕ್ರಮವಾಗಬೇಕು. ವಿದ್ಯಾರ್ಥಿ, ವಿದ್ಯಾರ್ಥಿನಿಯರ ಶಾಲಾ ವಿಷಯ, ಪಠ್ಯಕ್ರಮ, ಅಭ್ಯಾಸಕ್ರಮ ಹಾಗೂ ಶಾಲಾಜೀವನದ ಬಗ್ಗೆ ಆಯ್ಕೆ ಹಾಗೂ ಹೊಂದಾಣಿಕೆಗೆ ನೀಡುವ ಸಹಾಯವೇ ಶೈಕ್ಷಣಿಕಮಾರ್ಗದರ್ಶನ. ಶೈಕ್ಷಣಿಕ ಮಾರ್ಗದರ್ಶನದ ಕಾರ್ಯಕ್ರಮಗಳು ಕೆಲವು ನಂಬಿಕೆಗಳ ಮೇಲೆ ಸಂರಚಿಸಲ್ಪಡಬೇಕು:

- ಪ್ರತಿ ವ್ಯಕ್ತಿಯ ಘನತೆ ಮುಖ್ಯವಾದುದು.
- ಪ್ರತಿವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿರುವುದಲ್ಲದೆ ಇತರರಿಗಿಂತ ವಿಭಿನ್ನವಾದ ಲಕ್ಷಣಗಳನ್ನು ಹೊಂದಿರುತ್ತಾರೆ.
- ಇಂದಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮುಂದಿನ ಸಮಾಜದ ಅವಿಭಾಜ್ಯ ಅಂಗಗಳು.
- ತಮ್ಮ ಮನೋಧೋರಣೆಯಂತೆ ವ್ಯಕ್ತಿಗಳು ಸಮಾಜದಲ್ಲಿ ವರ್ತಿಸುತ್ತಾರೆ.
- ಪ್ರತಿಯೊಬ್ಬರಲ್ಲೂ ಕಲಿಕೆಯ ಸಾಮರ್ಥ್ಯಗಳಿರುತ್ತದೆ.
- ಪ್ರತಿವಿದ್ಯಾರ್ಥಿ ವಿದ್ಯಾರ್ಥಿನಿಯೂ ತಮ್ಮ ಬೆಳವಣಿಗೆಯ ಹಂತದಲ್ಲಿ ಮಾರ್ಗದರ್ಶನವನ್ನು ಅಪೇಕ್ಷಿಸುತ್ತಾರೆ.
- ಪ್ರತಿವ್ಯಕ್ತಿಗೂ ಸೋಲು-ಗೆಲುವುಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಆಂತರಿಕವಾದ ಲಕ್ಷಣವಿದ್ದು ಇದು ಗೆಲುವಿನ ಅರ್ಥವನ್ನು ನಿರೂಪಿಸಬಲ್ಲದು.
- ಶಾಲೆಯು ಸಮಾಜದ ನೀತಿ-ನಿಲುವನ್ನು ಪ್ರತಿಬಿಂಬಿಸುವುದಲ್ಲದೆ, ಸಮಾಜದ ನೀತಿ-ನಿರೂಪಣೆಗೆ ಕಾರಣವಾಗಬಲ್ಲದು.

ಒಬ್ಬ ವಿದ್ಯಾರ್ಥಿ ತನ್ನ ಶೈಕ್ಷಣಿಕ ಪರಿಸರಕ್ಕೆ ಹೊಂದಿಕೊಳ್ಳಲು ಮಾಡುವ ಸಹಾಯವೇ ಶೈಕ್ಷಣಿಕ ಮಾರ್ಗದರ್ಶನ. ಈ ಜವಾಬ್ದಾರಿಯನ್ನು ಅನೇಕ ಶಾಲೆಗಳು ತಮ್ಮ ತಲೆಯ ಮೇಲಿನ ಜವಾಬ್ದಾರಿಯೆಂದು ತಿಳಿಯದೆ, ಪೋಷಕರ ಜವಾಬ್ದಾರಿಯೆಂದು ತಿಳಿದು, ಕೇವಲ ಅಕ್ಷರವನ್ನು ಕಲಿಸುವ ಕಾರ್ಖಾನೆಗಳಾಗಿವೆ.

ಶೈಕ್ಷಣಿಕ ಮಾರ್ಗದರ್ಶನವನ್ನು ಮೂರು ಮುಖ್ಯವಿಧಗಳಾಗಿ ವಿಂಗಡಿಸಬಹುದು. ಅವುಗಳು :- ಸಲಹೆ, ಸಮೂಹ ಮಾರ್ಗದರ್ಶನ ಮತ್ತು ವೈದ್ಯಕೀಯ ಸಲಹೆ. ಸುಮಾರು ಶೇ. 5 ಮಂದಿ ಒಂದಲ್ಲ ಒಂದು ಸಮಯ ತೀವ್ರ ಸಂವೇಗಾತ್ಮಕ ರೋಗಗ್ರಸ್ಥರಾಗುವ ಸಂಭವವಿದೆ. ಅಂತಹವರಿಗೆ ಮನೋಚಿಕಿತ್ಸಕನಿಂದ ಚಿಕಿತ್ಸೆ ಕೊಡಿಸಬೇಕಾಗುತ್ತದೆ. ಶಾಲಾ ಶಿಕ್ಷಕರಿಗೆ ಇಂತಹ ಮಕ್ಕಳಿಗೆ ಮಾರ್ಗದರ್ಶನ ಕೊಡುವುದು ಸಾಧ್ಯವಿಲ್ಲ. ಉಳಿದಂತೆ

ಮಿಕ್ಕೆಲ್ಲ ಮಕ್ಕಳಿಗೂ ಸಲಹೆ ಅಥವಾ ಸಮೂಹ ಮಾರ್ಗದರ್ಶನ ವಿಧಾನದಿಂ ಮಾರ್ಗದರ್ಶನ ನೀಡಬಹುದು.

ಶಿಕ್ಷಣದಲ್ಲಿ ನಮ್ಮ ಮುಖ್ಯಗುರಿ ಮಾರ್ಗದರ್ಶನ. ಆದರೆ ನಾವು ಉಪಯೋಗಿಸು ತಂತ್ರ 'ಸಲಹೆಯ ವಿಧಾನ'. ಇದನ್ನು ಇಂಗ್ಲೀಷ್‌ನಲ್ಲಿ ಕೌನ್ಸೆಲಿಂಗ್ (counselling ಎನ್ನುತ್ತೇವೆ. ಸಲಹೆಯು ನಮ್ಮ ನಾಗರೀಕತೆಯಷ್ಟೆ ಪುರಾತನವಾದ ಮಾರ್ಗದರ್ಶನ ವಿಧಾನ. ಔಪಚಾರಿಕವಾಗಿ ಸಲಹೆಯು ಒಂದು ವೃತ್ತಿಯಾದುದು ಮಹಾಯುದ್ಧಗಳ ನಂತ ಹೆಚ್ಚು ಅನುಭವವಿರುವ, ಹೆಚ್ಚುಬುದ್ಧಿವಂತನಾದ ಹಿರಿಯ ವ್ಯಕ್ತಿಯು ಕಡಿಮ ಅನುಭವವುಳ್ಳ ವ್ಯಕ್ತಿಗೆ ತನ್ನ ಸಮಸ್ಯೆಯನ್ನು ಬಿಡಿಸಿಕೊಳ್ಳಲು ಕೊಡುವ ವೈಯಕ್ತಿ ಮಾರ್ಗದರ್ಶನವೇ ಸಲಹೆ. ಸಲಹೆಯು ಸಹಾಯ ಪಡೆಯಲು ಆಕಾಂಕ್ಷಿಸುವ ಮತ್ತ ಸಲಹೆ ಕೊಡಲು ಸಿದ್ಧವಿರುವ ಇಬ್ಬರು ವ್ಯಕ್ತಿಗಳು ಸೇರಿ ಸಮಸ್ಯೆಯನ್ನು ಬಿಡಿಸುವ ಒಂದ ಪ್ರಕ್ರಿಯೆ.

ಅನೇಕ ಸಂದರ್ಶನಗಳ ಮೂಲಕ ಸಲಹೆಯನ್ನು ಫಲಪ್ರದ ಮಾಡಲಾಗುವುದ ಶಿಕ್ಷಕರು ಸಾಮಾನ್ಯವಾಗಿ ನಂಬಿಕೆಗೆ ಪಾತ್ರನಾದ ಸಲಹೆಗಾರನಾಗುವ ಸಾಧ್ಯತೆ ಇ ತರಬೇತಿ ಪಡೆದ ಶಿಕ್ಷಕರು ಉತ್ತಮ ಸಲಹೆಗಾರರಾಗುವುದರಲ್ಲಿ ಸಂದೇಹವಿಲ್ಲ. ಈ ತಂತ್ರದಲ್ಲಿ ಸಲಹೆಗಾರನು ಸಲಹೆ ಪಡೆಯುವವನೊಂದಿಗೆ ಸಂಪರ್ಕ ಕಲ್ಪಿಸಿಕೊಂಡ ಆತ್ಮೀಯತೆಯನ್ನು ಬೆಳೆಸಿಕೊಳ್ಳುತ್ತಾನೆ. ನಂತರ ಅವರಿಬ್ಬರು ವಿಚಾರ ವಿನಿಮಯಗ ಮೂಲಕ ಸಮಸ್ಯೆಯನ್ನು ಪರಿಹರಿಸುವ ವಿಧಾನವನ್ನು ಹುಡುಕುತ್ತಾರೆ. ಸಮಸ್ಯೆ ಪರಿಹಾರ ಬೇಕಾದ ಸಾಮರ್ಥ್ಯವನ್ನು ವ್ಯಕ್ತಿಯಲ್ಲಿ ಬೆಳೆಸಿ ತಾನೇ ಸಮಸ್ಯೆಯನ್ನು ಬಿಡಿಸಿಕೊಳ್ಳುವಂ ಮಾಡುತ್ತಾನೆ. ಸಲಹಾ ವಿಧಾನವು ಮಾನಸಿಕ ಆರೋಗ್ಯ ಮತ್ತು ಅನಾರೋಗ್ಯಗಳ ನಡುವಿ ಹಂತದಲ್ಲಿರುವವನನ್ನು ಮಾನಸಿಕ ಆರೋಗ್ಯವನ್ನು ಪಡೆದು ಉತ್ತಮ ಹೊಂದಾಣಿಕೆಯು ವ್ಯಕ್ತಿಯನ್ನಾಗಿ ಮಾಡಬಲ್ಲದು. ಸಲಹಾ ವಿಧಾನವನ್ನು ಮೂರು ರೀತಿಗಳಲ ಉಪಯೋಗಿಸಬಹುದು. ವಿದ್ಯಾರ್ಥಿಗೆ ತನ್ನ ಸಮಸ್ಯೆಯನ್ನು ತಾನೇ ವಿಶ್ಲೇಷಿಸು ಸಾಮರ್ಥ್ಯವಿಲ್ಲದಿದ್ದಾಗ, ಸಲಹೆಗಾರನು ಮುಖ್ಯಪಾತ್ರವನ್ನು ವಹಿಸಿ ದಾರಿ ತೋರಿಸು ವಿಧಾನವನ್ನು ನಿರ್ದೇಶನ ಸಲಹೆ ಎನ್ನುತ್ತೇವೆ. ಸಲಹೆಗಾರನು ಒಬ್ಬ ವೈದ್ಯನ ರೀತಿಯ ಪರಿಹಾರದ ವಿಧಾನವನ್ನು ರೂಪಿಸುತ್ತಾನೆ. ಸಲಹೆ ಪಡೆಯುವವನು ನಿರ್ದೇಶನ ಪಾಲಿ ತನ್ನ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಾನೆ. ಈ ವಿಧದಲ್ಲಿ ಸಲಹೆಗಾರನಿಗೆ ಹೆಚ ಪ್ರಾಮುಖ್ಯತೆ ಇದೆ. ಆದರೆ ತನ್ನ ಸಮಸ್ಯೆಯನ್ನು ತಾನೇ ವಿಶ್ಲೇಷಣೆ ಮಾಡಿಕೊಳ್ಳುವಂ ಮಾಡುವುದು ಕಷ್ಟಕರವಾದುದು. ತಾನು ಸಂವೇಗಗಳಿಗೆ ಬಲಿಯಾಗಿರುವೆನೆಂ ಒಪ್ಪಿಕೊಳ್ಳುವ ವ್ಯಕ್ತಿ ತನ್ನ ಸಂವೇಗಗಳ ಮೇಲೆ ಒಳ್ಳೆ ನಿಯಂತ್ರಣವನ್ನಿಡಬಲ್ಲನು. "ಹೌ ನಾನು ಸುಮ್ಮನೆ ಅವನ ಮೇಲೆ ಉರಿದು ಬಿದ್ದೆ", "ಕೋಪದಿಂದ ತಪ್ಪು ಮಾಡಿದ ಎಂಬ ಪರಿವೆ ಬಂದಲ್ಲಿ ಮುಂದೆ ಉದ್ರೇಕಿಸುವ ಭಗ್ನ ಮನೋರಥಗಳು ಮತ ಭೀತಿಗಳೊಂದಿಗೆ ವ್ಯವಹರಿಸುವಲ್ಲಿ ಅವನು ಹೆಚ್ಚು ಅರಿವನ್ನು ಪ್ರದರ್ಶಿಸುತ್ತಾನೆ. ಇಂದಿ ಪರಿಸ್ಥಿತಿಯಲ್ಲಿ, ಶಿಕ್ಷಕರಿಗೆ ಸಲಹೆಯ ತತ್ವವನ್ನು ಮನವರಿಕೆ ಮಾಡಿಕೊಡಬೇಕಾಗುತ್ತದೆ.

ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಾಮಾನ್ಯವಾದ ಸಮಸ್ಯೆಗಳನ್ನು ಪತ್ತೆಮಾಡಿ ಅವರ

ಮಾರ್ಗದರ್ಶನವನ್ನು ನೀಡುವ ಕಾರ್ಯಕ್ರಮ ಸಮೂಹ ಮಾರ್ಗದರ್ಶನ. ಗುಂಪಿನಲ್ಲಿ ಸುಲಭವಾಗಿ ಅರ್ಥಮಾಡಿಕೊಳ್ಳುವ ಲಕ್ಷಣ ಮಕ್ಕಳಲ್ಲಿರುತ್ತದೆ. ಶೈಕ್ಷಣಿಕ ವಿಚಾರಗಳ ಚರ್ಚೆ, ವೃತ್ತಿಯೋಜನೆ, ಶಾಲೆಯ ಸಮಸ್ಯೆಗಳು, ಸಾಮಾಜಿಕವಾಗಿ ಬರಬಹುದಾದ ಅಡ್ಡಿ ಆತಂಕಗಳು ಮತ್ತು ವೃತ್ತಿ ಆಯ್ಕೆಗಳಂತೆ ವಲಯಗಳಲ್ಲಿ ಸಾಮೂಹಿಕ ಮಾರ್ಗದರ್ಶನದ ಆವಶ್ಯಕತೆ ಇದೆ. ಭಾಷಣ, ಪ್ರದರ್ಶನ, ಜೀವನ ಗತಿ ಸಭೆಗಳು (career conference) ಮುಂತಾದ ತಂತ್ರಗಳನ್ನು ಸಾಮೂಹಿಕ ಮಾರ್ಗದರ್ಶನದಲ್ಲಿ ವ್ಯಾಪಕವಾಗಿ ಉಪಯೋಗಿಸ ಬೇಕಾಗುತ್ತದೆ.

ತಾವೇ ಕಲಿಯುವ ಸಾಮರ್ಥ್ಯವನ್ನು ಪಡೆದಿರುವ ಮತ್ತು ಸಾಮರ್ಥ್ಯವನ್ನು ಆಗಲೇ ಸ್ವಲ್ಪ ಬೆಳೆಸಿಕೊಂಡಿರುವ ಮಕ್ಕಳಿಗೆ ಕಲಿಸುವುದು ಸುಲಭ. ಕಲಿಕೆಯ ಸಂದರ್ಭವನ್ನು ತನ್ನ ಹಿಂದಿನ ಅನುಭವಗಳ ಮೇಲೆ, ಸಾಮರ್ಥ್ಯಗಳ ಆಧಾರದ ಮೇಲೆ ಅವಲೋಕಿಸಿ ಪ್ರತ್ಯಕ್ಷಗೊಳಿಸುವ ಸಾಮರ್ಥ್ಯವಿರುವ ಮಕ್ಕಳು ಸುಲಭವಾಗಿ ಕಲಿತು ಶಿಕ್ಷಕರಿಗೆ ಹೆಮ್ಮೆ ತರುವ ಸಂದರ್ಭಗಳು ಅನೇಕ. ಇಂತಹ ಮಕ್ಕಳ ಮೇಲೆ ಹೆಚ್ಚಿನ ಅಕ್ಕರೆಯನ್ನು ತೋರುವುದು ಎಲ್ಲಾ ಶಿಕ್ಷಕ ಶಿಕ್ಷಕಿಯರ ಒಂದು ಮನೋವೃತ್ತಿ. ಕಲಿಯಲೇ ಅಸಮರ್ಥರಾಗಿರುವ ಮಕ್ಕಳ ಬಗ್ಗೆ ಶಿಕ್ಷಕರು ಶಿಕ್ಷಕಿಯರು ಸಿಡಿಮಿಬೀಳುವುದು, ಕಲಿಸಲು ಹೊಡೆಯುವುದು, ಬಯ್ಯುವುದು ಒಂದು ನೀತಿಯಾಗಿ ಹೋಗಿದೆ. ಕಲಿಯುವ ಸಾಮರ್ಥ್ಯ ವೆಂದರೆ ಇಂದ್ರಿಯಗಳನ್ನು ಸರಿಯಾದ ಕಲಿಕೆಯ ಸಂದರ್ಭಕ್ಕೆ ಕ್ರೋಢೀಕರಿಸುವುದಾಗಲಿ ಕಲಿಕೆಯ ಅನುಭವದಲ್ಲಿ ಸಂರಚನೆಗಳನ್ನು ಪ್ರತ್ಯಕ್ಷೀಕರಿಸುವುದು ಈ ಮಕ್ಕಳಿಗೆ ಅಸಾಧ್ಯ. ಅವರಿಗೇ ಹೆಚ್ಚು ಮಾರ್ಗದರ್ಶನ ಬೇಕು. ಪ್ರತಿ ಕಲಿಕೆಯ ಸಂದರ್ಭವು ಅವರ ಮಾನಸಿಕ ಮಟ್ಟಕ್ಕೆ ಅನುಗುಣವಾಗಿ ಸಂರಚಿಸಲ್ಪಡಬೇಕು. ಅವರು ತಮ್ಮ ಇಂದ್ರಿಯಾನುಭವದಲ್ಲಿ ಕೆಲವು ಸಂರಚನೆಗಳನ್ನು ಕಾಣುವಂತೆ ಮಾಡಬೇಕು (ಉದಾಹರಣೆಗೆ - 1 ಮತ್ತು 2 - ಎರಡು ಸಂಖ್ಯೆಗಳು. ಅವುಗಳು ವಸ್ತುಗಳನ್ನು ಪ್ರತಿನಿಧಿಸುತ್ತವೆ. ಅವುಗಳಿಗೆ ಅಂತರವಿದೆ. ಎರಡರಲ್ಲಿ ಎರಡು ಒಂದುಗಳಿವೆ. ಎರಡು ಹೆಚ್ಚು ಒಂದು ಕಡಿಮೆ) ಇಂತಹ ಪರಿಕಲ್ಪನೆಗಳನ್ನು ಮಗುವಿನ ಆಟದ-ಮಾಧ್ಯಮದೊಡನೆ ತೋರಿಸದಿದ್ದರೆ ಕಲಿಕೆ ಸಾಧ್ಯವಿಲ್ಲ. ಕಲಿಯುವ ಮಗುವಿನ ಮಾಧ್ಯಮಕ್ಕೆ ಅನುಭವವನ್ನು ಅಳವಡಿಸಬೇಕಾಗುತ್ತದೆ.

ಹೀಗೆ ಮಾಡದಿದ್ದರೆ ಕಲಿಕೆಯೇ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಕಲಿಯಲಿಲ್ಲ ಎನ್ನುವ ಸಮಸ್ಯೆ ಮಗುವಿನ ಮನಸ್ಸಿಗೆ ಬರುವುದಿಲ್ಲ. ಆದರೆ ಅದು ಶಿಕ್ಷಕನ ಸಮಸ್ಯೆಯಾಗಿ ಹೋಗುತ್ತದೆ. ಆಗ ಸಲಹೆ ಶಿಕ್ಷಕನಿಗೆ ಕೊಡಬೇಕಾಗುತ್ತದೆ. ಮಕ್ಕಳ ಕಲಿಕೆಯ ಸಮಸ್ಯೆಗೆ ಶಿಕ್ಷಕನು ಮತ್ತು ವ್ಯವಸ್ಥೆಯು ಕಾರಣವಾಗುತ್ತವೆ. ಶೇ. 40 ಉತ್ತೀರ್ಣರಾಗುವ ವ್ಯವಸ್ಥೆಯಲ್ಲಿ ಶೇ. 60 ನಪಾಸಾಗಿರುವುದು ಶಿಕ್ಷಕ ಮತ್ತು ವ್ಯವಸ್ಥೆ. ಆದ್ದರಿಂದ ಈಗಿನ ವ್ಯವಸ್ಥೆಯಲ್ಲಿ ಕಲಿಯಲು ಅಸಮರ್ಥರಾದ ಮಕ್ಕಳಲ್ಲಿ ತಪ್ಪನ್ನು ಹುಡುಕದೆ ಅವರು ಕಲಿಯುವ ಸಾಮರ್ಥ್ಯವನ್ನು ಪಡೆಯುವಂತೆ ಮಾಡಬೇಕಾಗಿರುವುದು ಶಿಕ್ಷಕರು.

ಸಾಮಾನ್ಯವಾಗಿ ದಿನಚರಿಯಲ್ಲಿ ಎಲ್ಲರೊಂದಿಗೆ ಭಾಗವಹಿಸಿ ಆಡಿ ಕುಣಿಯುವ ಯೋಗ್ಯತೆಯನ್ನು ಹೊಂದಿರುವ ಒಂದು ಮಗು ಕಲಿಯದಿರಲು ಕಾರಣ ಮಗುವಲ್ಲ, ಅದರ ಮಾನಸಿಕ ಬೆಳವಣಿಗೆಗೆ ಅನುಗುಣವಾಗಿ ಕಲಿಕೆಯ ಸಂದರ್ಭವನ್ನು ರೂಪಿಸದಿರುವ ಶಿಕ್ಷಣದ

ವ್ಯವಸ್ಥೆಯ ಅಸಮರ್ಥತೆ. ಇದಕ್ಕೆ ಹೆಚ್ಚು ಕಾರಣ ಶಿಕ್ಷಕರು ಎಂದು ಹೇಳಿಕೊ ಬೇಕಾಗುತ್ತದೆ. ಕಾರಣ. ನಮ್ಮ ವ್ಯವಸ್ಥೆಯಲ್ಲಿ ಕಲಿಯುವ ಸಾಮರ್ಥ್ಯವನ್ನು ತೋರು ಮಕ್ಕಳು ವಿರಳ. ಅವರಿಗೆ ಸಲಹೆ ಅಗತ್ಯ. ಅವರ ಸಮಸ್ಯೆ-ಕಲಿಯಲು ಅಸಮರ್ಥರಾ ಮಕ್ಕಳನ್ನು ಕಲಿಯುವವರನ್ನಾಗಿ ಮಾಡುವುದು ಹೇಗೆ? ಎಂದು ಆಗಬೇಕು. ಈ ಸಮ ಬಿಡಿಸಬೇಕಾದರೆ ಶಿಕ್ಷಕ/ಶಿಕ್ಷಕಿಯರ ಸಾಮರ್ಥ್ಯವನ್ನು ಬೆಳೆಸಬೇಕು. ಅದಕ್ಕಾ ಮಾರ್ಗದರ್ಶನ ಮತ್ತು ಸಲಹೆ ಕಾರ್ಯಕ್ರಮಗಳು ಸಿದ್ಧವಾಗಬೇಕು.

ಇದುವರೆಗೆ ನಮ್ಮ ಚಿಂತನೆ ಮಾನಸಿಕವಾಗಿ. ದೈಹಿಕವಾಗಿ ಸರಿಯಿರುವ ಮಕ್ಕ ಬಗ್ಗೆ ಆಯಿತು. ಆದರೆ ಕೆಲವು ಮನೋವಿಜ್ಞಾನಿಗಳು ನಮ್ಮ ಮಕ್ಕಳಲ್ಲಿ ಶೇ. 20 ರಷ್ ಮಕ್ಕಳು ಮನೋವೈಜ್ಞಾನಿಕ ಸಮಸ್ಯೆಗಳಿಗೆ ಒಳಗಾಗಿದ್ದಾರೆ ಎಂಬ ಅಭಿಪ್ರಾಯಪಟ್ಟಿದ್ದಾ (Keynote address of Dr. Chandrashekar, Psychiatrist, NIMHANS Bangalore - The Hindu - 18th Aug. 1998) ಅವರ ಅಭಿಪ್ರಾಯದಂತೆ ಈ ಸಮಸ್ಯೆಗಳ ಪರಿಹಾರ ವಿದ್ಯಾಭಿಲಾಷಿಗಳಿಂದಲೇ ಸಾಧ್ಯ. ಸ್ವಪ್ರೇರಣೆ. ಅಭಿಪ್ರೇರ ಗೊಳಿಸುವಿಕೆಯಿಂದ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದೆಂದು ಮನೋವಿಜ್ಞಾನಿಗಳ ಹೇಳಿರುವುದು ಮಾರ್ಗದರ್ಶನದ ಕಾರ್ಯಕ್ರಮದ ಅವಶ್ಯಕತೆಯ ಬಗ್ಗೆ ಒತ್ತುಕೊಡುತ್ತದೆ.

ಈ ಮನೋಚಿಕಿತ್ಸಕರ ಪ್ರಕಾರ ಸಾಮಾನ್ಯ ಮಾನಸಿಕ ಸಮಸ್ಯೆಗಳೆಂದರೆ ಅಭ್ಯಾ ಸಮಯ ಮತ್ತು ಪರೀಕ್ಷಾಸಮಯಗಳ ಅಭಾವದ ಮಾನಸಿಕ ಒತ್ತಡ. ತಮ್ಮ ಸಾಮರ್ಥ್ಯಗ ಮೇಲಿನ ಅಪನಂಬಿಕೆ ಹಾಗೂ ಗುರಿ ನಿರೂಪಿಸಿಕೊಳ್ಳುವಿಕೆಯ ಅಸಮರ್ಥತೆ.

ಮಕ್ಕಳಲ್ಲಿ ಸರಿಯಾದ ಅಭ್ಯಾಸಕ್ರಮವನ್ನು ಹವ್ಯಾಸವನ್ನಾಗಿ ಮಾಡಬೇಕು 'ಯೋಜಿಸಲ್ಪಟ್ಟ ಓದುಗಾರಿಕೆ'ಯನ್ನು ಬೆಳೆಸುವುದು. ತಾವು ಅಭ್ಯಾಸ ಮಾಡಿದುದರ ಬಗ್ ತಾವೇ ಹಿಮ್ಮಾಹಿತಿಯನ್ನು ಪಡೆದುಕೊಂಡು ಮೌಲ್ಯಮಾಪನ ಮಾಡಿಕೊಳ್ಳುವುದು. ತಮ್ ಮನಸ್ಸಿಗೆ ಕೆಲವು ಕಾಲ ವಿಶ್ರಾಂತಿ ಕೊಡುವಂಥ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು ಹಾಗೂ ಓದಿನ ಮಧ್ಯೆ ಓದಿದ ಅಂಶಗಳನ್ನು ಮೆಲುಕುಹಾಕಿಕೊಳ್ಳುವ ಹವ್ಯಾಸಗಳು ಅವರ ಶೈಕ್ಷಣಿಕವಾಗಿ ಊರ್ಜಿತರಾಗುವಂತೆ ಮಾಡುತ್ತದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದ ಸಹಜವಾಗುತ್ತದೆ. ಶಿಕ್ಷಕ ಶಿಕ್ಷಕಿಯರಾದರೂ ಸಾಮಾನ್ಯವಾದ ಮಕ್ಕಳನ್ನು ಪ್ರತಿಭಾವಂತ ಮಕ್ಕಳೊಂದಿಗೆ ಹೋಲಿಸಿ ಅವರ ಮನಸ್ಥೈರ್ಯವನ್ನು ಕಡಿಮೆ ಮಾಡಬಾರದು. ತನ್ನ ಹಿಂದಿನ ಸಾಧನೆಗಿಂತ ತನ್ನ ಇಂದಿನ ಸಾಧನೆ ಉತ್ತಮವಾಗುತ್ತಿರುವುದನ್ನು ವಿದ್ಯಾರ್ಥಿಗ ತೋರಬೇಕು. ಇದನ್ನು ಹೊಗಳಿಕೆ. ಸಂತೋಷಗಳನ್ನು ಸೂಚಿಸುವುದರ ಮೂಲಕ ಪುನರ್ಬಲಗೊಳಿಸಬೇಕು. ಹದಿಹರೆಯದವರು ತಮ್ಮ ಮಾನಸಿಕ. ಸಂವೇಗಾತ್ಮಕ ಮತ್ತು ದೈಹಿಕಸಮಸ್ಯೆಗಳನ್ನು ಹಿರಿಯರೊಂದಿಗೆ ಚರ್ಚಿಸಿ ಸಲಹೆ ಪಡೆದುಕೊಳ್ಳುವಂತೆ ಸ್ವಾತಂತ್ರ್ಯ ವಿರಬೇಕು. ಅದಕ್ಕನುಗುಣವಾದ ವಾತಾವರಣವನ್ನು ಹಿರಿಯರು ಕಲ್ಪಿಸಿಕೊಡಬೇಕು. ಹದಿಹರಿಯದವರು ಹಿರಿಯನೊಬ್ಬನನ್ನು ಸ್ನೇಹಿತರಂತೆ ಕಾಣುವ ವಾತಾವರಣವು ಸೃಷ್ಟಿಯಾಗಬೇಕು. ಶಿಕ್ಷಕರು ಕೌಶಲಯುಕ್ತ ಸಲಹೆಗಾರರಾಗಿರಬೇಕು. ಪೋಷಕರೇ ಈ ಪ್ರವೃತ್ತಿಯನ್ನು ಹೊಂದಿದ್ದರೆ ಶಿಕ್ಷಕರ ಮೇಲಿನ ಭಾರವು ಕಡಿಮೆಯಾಗಬಲ್ಲದು.

ಈ ಕಾಲದ ಶಿಕ್ಷಣ ಹೆಚ್ಚು ಔಪಚಾರಿಕವಾದುದು. ನಮ್ಮ ಅಂಕಪ್ರಧಾನವಾದ ವ್ಯವಸ್ಥೆ

ಅದರ ಅವಶ್ಯಕತೆಯನ್ನು ಮನಗಂಡಂತಿಲ್ಲ. ನಿಜವಾದ ವಿಷಯವನ್ನು ಕಲಿಯುವುದರ ಬದಲು ಒಳ್ಳೆಯ ಅಥವಾ ತೇರ್ಗಡೆಗೆ ಬೇಕಾದ ಅಂಕಗಳನ್ನು ಪಡೆಯುವುದೇ ವಿದ್ಯಾರ್ಥಿಯ ಮುಖ್ಯ ಚಿಂತನೆಯಾಗುವುದು ಮತ್ತು ಅಂಶಪ್ರಧಾನದ ವ್ಯವಸ್ಥೆ ಬೆಳೆಸುವ ಮನಸ್ತಾಪ ಮುಂತಾದವುಗಳನ್ನು ಈ ಅಂಕಪ್ರಧಾನ ವ್ಯವಸ್ಥೆಯನ್ನು ತೆಗೆಯುವುದರಿಂದ ಹೋಗಲಾಡಿಸಬಹುದು.

ಶಾಲೆಗಳು ಪೋಷಕ-ಬೋಧಕ ಸಮ್ಮೇಳನಗಳನ್ನು ಹೆಚ್ಚಿಸಬೇಕು. ಶಿಕ್ಷಕರು ತಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳ ಶೈಕ್ಷಣಿಕ ಸಾಮರ್ಥ್ಯ ಮತ್ತು ಸಾಧನೆಗಳ ಬಗ್ಗೆ ಹಾಗೂ ಅವರ ಆರೋಗ್ಯ, ಅಭಿವ್ಯಕ್ತಿಗಳು ಮತ್ತು ಸಾಮಾಜಿಕ ವರ್ತನೆಗಳ ಬಗ್ಗೆ ಸದೃಢವಾದ ದತ್ತಾಂಶಗಳನ್ನು ಪಡೆದಿರಬೇಕು. ಇಂತಹ ಸಮ್ಮೇಳನಗಳು ನಿಯಮಿತವಾಗಿ ಆದರೆ ಪೋಷಕರ ವಿಶ್ವಾಸನೀಯತೆಯನ್ನು ಗಳಿಸಿ ಫಲಪ್ರದವಾಗುತ್ತವೆ.

ಶೈಕ್ಷಣಿಕ ಮಾರ್ಗದರ್ಶನದಲ್ಲಿ ಔದ್ಯೋಗಿಕ ಮಾರ್ಗದರ್ಶನವು ಒಂದು ಮುಖ್ಯವಾದ ಆಯಾಮ. ಸಾಮಾನ್ಯವಾಗಿ ಪ್ರೌಢಶಾಲಾ ಹಂತದಲ್ಲೇ ಮಗುವಿಗೆ ತಾನು ಮುಂದೆ ಏನು ಆಗಬೇಕು? ಎಂಬ ಕುತೂಹಲ ಮೂಡುತ್ತದೆ. ಯಾವ ಕೋರ್ಸ್ ಸೇರಬೇಕು? ಅದಕ್ಕೆ ಬೇಕಾದ ಸಾಮರ್ಥ್ಯವೇನು? ಅದನ್ನು ಹೇಗೆ ಬೆಳೆಸಿಕೊಳ್ಳುವುದು? ತಾನು ಸೇರಬೇಕಾದ ಉದ್ಯೋಗದ ಸಾಧಕ-ಬಾಧಕಗಳೇನು? ಮುಂತಾದ ಪ್ರಶ್ನೆಗಳು ಕಾಡುತ್ತಿರುತ್ತವೆ. ಶೈಕ್ಷಣಿಕ ಮಾರ್ಗದರ್ಶನವು ಈ ಪ್ರಶ್ನೆಗಳಿಗೆ ಉತ್ತರ ಕೊಡುವಂತಾಗಿರಬೇಕು. ಔದ್ಯೋಗಿಕ ಕ್ಷೇತ್ರದ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮ ಮತ್ತು ಮಾರ್ಗದರ್ಶನದ ತಂತ್ರಗಳನ್ನು ಸಂರಚಿಸಬೇಕು. ಎಲ್ಲಾ ಉದ್ಯೋಗದ ಕುಂದುಕೊರತೆಗಳು ಮತ್ತು ಆ ಉದ್ಯೋಗಗಳು ಅಪೇಕ್ಷಿಸುವ ಸಾಮರ್ಥ್ಯಗಳು ಮತ್ತು ಅವುಗಳು ಅಪೇಕ್ಷಿಸುವ ತ್ಯಾಗಗಳ ಬಗ್ಗೆ ಮಾಹಿತಿಗಳನ್ನು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಕೊಡುವ ತಂತ್ರಗಳು ರೂಪಿಸಲ್ಪಡಬೇಕು.

ಒಟ್ಟಿನಲ್ಲಿ ಮಾರ್ಗದರ್ಶನ ಪ್ರೀತಿ, ವಾತ್ಸಲ್ಯ, ಸಮಯಪ್ರಜ್ಞೆ ಮತ್ತು ಬೌದ್ಧಿಕ ಕುಶಲತೆಗಳನ್ನು ಬೆಳೆಸಬೇಕಾಗುತ್ತದೆ. ಮಾರ್ಗದರ್ಶನದ ಮೂಲಕ ಪಡೆದ ಜ್ಞಾನ, ಕೌಶಲ, ಅಭಿರುಚಿಗಳು ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗಬೇಕಾಗುತ್ತದೆ.

○

ಶಾಲೆಗಳಲ್ಲಿ ಗ್ರಂಥಾಲಯ ಮತ್ತು ವಾಚನಾಲಯಗಳ ಪಾತ್ರ

ಡಾ. ಆರ್. ಸಿ. ಪುಟ್ಟಬುದ್ಧಿ
ಆರ್. ರುದ್ರಾರಾಧ್ಯ

ವಿಶ್ವದ ಸಮಸ್ತ ಬೌದ್ಧಿಕವ್ಯಾಪಾರಗಳಿಗೆಲ್ಲ ಮನುಷ್ಯನೇ ಕೇಂದ್ರಬಿಂದು. ಮನುಷ್ಯನಿಗೆ ಮನುಷ್ಯತ್ವ ಬಂದುದು ಬುದ್ಧಿಯ ಬೆಂಬಲದಿಂದ. ಈ ಬುದ್ಧಿಯನ್ನು ವಿದ್ಯೆ ಪರಿಷ್ಕರಣ ಗೊಳಿಸುತ್ತದೆ. ಈ ಬುದ್ಧಿ ವಿದ್ಯೆಗಳು ಬಲಗೊಳ್ಳುವುದು ನಾಲ್ಕು ಬಗೆಯಿಂದ:

ಅ. ಸ್ವಾನುಭವ ಆ. ನಿಸರ್ಗ ಇ. ಗುರುಮುಖ ಈ. ಗ್ರಂಥ ಮುಖ

ಸ್ವಾನುಭವಜನ್ಯ ತಿಳಿವಳಿಕೆಯು ವ್ಯಕ್ತಿಗತವಾದುದು. ನಿಸರ್ಗಜನ್ಯ ತಿಳಿವಳಿಕೆಯು ಸ್ಥಳಬದ್ಧವಾದುದು. ಗುರುಮುಖದಿಂದ ಬರುವ ತಿಳಿವಳಿಕೆಯು ಕಾಲಬದ್ಧವಾದುದು. ಆದರೆ ಗ್ರಂಥಮುಖದಿಂದ ಬರುವ ಜ್ಞಾನವು ವ್ಯಕ್ತಿ, ಸ್ಥಳ, ಕಾಲಬದ್ಧ ಜ್ಞಾನಗಳನ್ನೆಲ್ಲ ಒಳಗೊಂಡ ಜ್ಞಾನಜ್ಯೋತಿ. ಗ್ರಂಥವು ಹಿಂದಿನ ಇತಿ, ಇಂದಿನ ಸ್ಥಿತಿ ಮತ್ತು ಮುಂದಿನ ಗತಿಗಳ ಬಗ್ಗೆ ತಿಳಿವಳಿಕೆ ಕೊಡುವ ತ್ರಿವೇಣೀ ಸಂಗಮ. ಗ್ರಂಥವು ಬೇಕಾದಾಗ, ಬೇಕಾದ ಹೊತ್ತಿನಲ್ಲಿ ಬೇಕಾದ ಸ್ಥಳದಲ್ಲಿ ಮತ್ತು ಬೇಕಾದ ಪರಿಸ್ಥಿತಿಯಲ್ಲಿ ತಿಳಿವಳಿಕೆ ನೀಡುವ ಸದಾ ಸಿದ್ಧ ಜ್ಞಾನನಿಧಿ. ದೇಶ ವಿದೇಶಗಳಲ್ಲಿ ಜನರ ನಡೆ-ನುಡಿ ಆಚಾರ-ವಿಚಾರಗಳನ್ನು ತಿಳಿಸಿಕೊಡುವುದು ಗ್ರಂಥಾಲಯ; ಲೌಕಿಕ ಮತ್ತು ಪಾರಲೌಕಿಕ ವಿಷಯಗಳ ಪರಿಜ್ಞಾನ ಮಾಡಿಕೊಡುವುದು ಗ್ರಂಥ. ಸೃಷ್ಟಿಯ ವಸ್ತುಗಳಲ್ಲಿ ಹುದುಗಿರುವ ಅದ್ಭುತಶಕ್ತಿಗಳ ಒಳಗುಟ್ಟು, ರಟ್ಟುಮಾಡಿ, ಮಾನವನನ್ನು ನಕ್ಕು ನಗಿಸಿ, ಸಂತೋಷಪಡಿಸಿ, ಮಾನವನ ವ್ಯಸನಗಳನ್ನು ನಿರಸನಗೊಳಿಸುವುದು ಗ್ರಂಥ.

ಒಳ್ಳೆಯ ಗ್ರಂಥಗಳೆಂದರೆ ಆತ್ಮೀಯ ಸ್ನೇಹಿತರಿದ್ದಂತೆ. ಸ್ನೇಹಿತರು ಅಂದು-ಇಂದು-ಮುಂದು ಎಂದೆಂದಿಗೂ ಅತ್ಯಂತ ಗಾಢಪ್ರೇಮದಿಂದ ನಮ್ಮೊಡನೆ ಬೆರೆಯುವರು. ಆದ್ದರಿಂದ ಗ್ರಂಥ ಮತ್ತು ವ್ಯಕ್ತಿಯ ಸ್ನೇಹವನ್ನು 'ಹಾಲು - ಜೇನಿನ' ಸಂಗಮಕ್ಕೆ ಹೋಲಿಸಬಹುದು. ಗ್ರಂಥಗಳಲ್ಲಿ ಹಿರಿತನವಿದೆ, ಹಿರಿಯರಂತೆ ನಮಗೆ ಮಾರ್ಗದರ್ಶನ ನೀಡುತ್ತವೆ. ಪೌರಾಣಿಕ ಅಂಶಗಳಿಗೆ ಸಂಬಂಧಿಸಿದಂತೆ ನಾವು ವ್ಯಾಸ, ವಾಲ್ಮೀಕಿ, ಹೋಮರ, ವರ್ಜಿಲ, ಡಾಂಟೆ ಇವರನ್ನು ಧರ್ಮ, ನೀತಿ, ವ್ಯವಹಾರಜ್ಞಾನ ಮನೋರಂಜನೆ, ರಾಜನೀತಿಗಳಿಗೆ ಸಂಬಂಧಿಸಿದಂತೆ ಗುಣಾಢ್ಯ, ವಸುಭಾಗಭಟ್ಟ, ಹರಿಷೇಣ, ಕ್ಷೇಮೇಂದ್ರ, ಸೋಮದೇವ, ಇಸೋಪ ಇವರನ್ನು; ನವರಸಭರಿತ ನಾಟಕಗಳನ್ನು ನೋಡಬೇಕೆನ್ನುವವರು ಕಾಳಿದಾಸ, ಷೇಕ್ಸ್‌ಪಿಯರ್ ಇವರನ್ನು ಪರಿಗಣಿಸಬಹುದು. ಆದ್ದರಿಂದ ಗ್ರಂಥಗಳು ಮಾಡುವ ಕಾರ್ಯವನ್ನು ನಾವು ಮೂರು ಭಾಗಗಳಾಗಿ ನೋಡಬಹುದು. ಅವುಗಳೆಂದರೆ,-

ಅ. ಗ್ರಂಥಗಳು ಗುರುವಾಗಿ ಕಾರ್ಯ ನಿರ್ವಹಿಸುತ್ತವೆ.

ಆ. ಗೆಳೆಯರಾಗಿ ಕಾರ್ಯ ನಿರ್ವಹಿಸುತ್ತವೆ.

ಇ. ಹಿರಿಯರಾಗಿ ಕಾರ್ಯ ನಿರ್ವಹಿಸುತ್ತವೆ.

ಒಟ್ಟಿನಲ್ಲಿ ಗ್ರಂಥಗಳು ಮನಸ್ಸನ್ನು ಮುಟ್ಟುತ್ತವೆ; ಹೃದಯವನ್ನು ತಟ್ಟುತ್ತವೆ; ಭಾವದಲ್ಲಿ ನಾಟುತ್ತವೆ; ರಕ್ತದಲ್ಲಿ ಪ್ರವಹಿಸುತ್ತವೆ; ನಾಡಿಯಲ್ಲಿ ಮಿಡಿಯುತ್ತವೆ. ಬುದ್ಧಿಯನ್ನು ಬೆಳಗುತ್ತವೆ. ಜೀವನವನ್ನು ಅರಳಿಸುತ್ತವೆ ಎಂದು ಹೇಳಬಹುದು.

ಅದರಿಂದ ಮಗುವಿನ ಜೀವನದಲ್ಲಿ ಗ್ರಂಥಗಳ ಪಾತ್ರ ಬಹಳ ಮುಖ್ಯವಾದುದು. ಆದ್ದರಿಂದ ಶಾಲೆಗಳಲ್ಲಿ ಮಗುವಿಗೆ ಸೂಕ್ತಗ್ರಂಥಗಳನ್ನು ಒದಗಿಸಿಕೊಡಬೇಕು. ಗುರುಗಳಿಗೆ, ಗೆಳೆಯರಿಗೆ, ಹಿರಿಯರಿಗೆ ಸಮಾನವಾದ ಈ ಪವಿತ್ರಗ್ರಂಥಗಳು ವಾಸವಾಗಿರಬೇಕಾದ ಭವನವು ಭವ್ಯವೂ, ಭದ್ರವೂ, ಮನೋಹರವೂ ಆಗಿರಬೇಕು. ದೂರದಿಂದ ನಿಂತು ನಿರೀಕ್ಷಿಸುವ ಪ್ರೇಕ್ಷಕರ ಚಿತ್ತವನ್ನು ಸೆಳೆದು ತನ್ನತ್ತ ಬರಮಾಡಿಕೊಳ್ಳಬೇಕು. ಮಕ್ಕಳ ತಿಳಿವಿಗೆ ಪರಿತವನ್ನು ಮೂಡಿಸಬೇಕು. ಅಂತಹ ಗ್ರಂಥಗಳನ್ನು ಸಂಗ್ರಹ ಮಾಡಿರುವ ನೆಲೆಯನ್ನು 'ಗ್ರಂಥಾಲಯ' ಅಥವಾ 'ಪುಸ್ತಕ ಭಂಡಾರ' ಎಂದು ಕರೆಯುತ್ತೇವೆ.

ಪುಸ್ತಕಭಂಡಾರವೊಂದು 'ಜ್ಞಾನಮಂದಿರ'. ಯಾವ ಪುಸ್ತಕಗಳನ್ನು ಬೇಕಾದರೂ ಕೈಗೆತ್ತಿಕೊಂಡು ಓದಬಹುದು. ಸಾಹಿತ್ಯದ ಗೀಳು ಇರುವ ವ್ಯಕ್ತಿ ಪ್ರಫುಲ್ಲನಾಗಿ ಈ ಜ್ಞಾನಮಂದಿರದಡಿಯಲ್ಲಿ ಬೆಳೆಯಬಹುದು. ಸಾಹಿತ್ಯಾಭಿರುಚಿ ಇಲ್ಲದವರೇನಾದರೂ ಒಮ್ಮೆ ಇದರೊಳಗೆ ಇಣಿಕಿ ನೋಡಿದರೆ ಸಾಕು ಬಿಡದ ಹಾಗೆ ರುಚಿ ಹೆಚ್ಚಿಸುತ್ತವೆ. ಆದ್ದರಿಂದ ಪ್ರತಿಯೊಂದು ಮಗುವನ್ನು ಶಾಲೆಗೆ ಬಂದಾಗ ಪುಸ್ತಕಭಂಡಾರಕ್ಕೆ ಪ್ರತಿನಿತ್ಯ ಬೇಟಿ ನೀಡಲು ಸೂಚನೆ ನೀಡಬೇಕು.

ಪುಸ್ತಕ ಭಂಡಾರದಲ್ಲಿ ಗ್ರಂಥಗಳ ರಾಶಿಯೇ ಇರುವುದರಿಂದ ಅದರಲ್ಲಿ ಮಕ್ಕಳಿಗೆ ಬೇಕಾದ ಸಾಹಿತ್ಯರತ್ನಗಳು ಮತ್ತು ಮನಸ್ಸಿಗೆ ಬೇಕಾದ ರಸದ್ವಾರಗಳು ಇರುವುದರಿಂದ ಮಕ್ಕಳು ಯಾವುದು ಬೇಕೋ ಅದನ್ನು ಆರಿಸಿಕೊಂಡು ಸವಿಯಬಹುದು. ಮಕ್ಕಳಿಗೆ ಸಾಹಿತ್ಯಾಭ್ಯಾಸ ರೂಢಿಯಾಗಬೇಕಾದರೆ ಭಾಷಾಬೋಧಕನ ಪಾತ್ರ ಹಿರಿದಾದದ್ದು; ಭಾಷಾ ಬೋಧಕ ಮೊದಲು ಸತತಾಭ್ಯಾಸಿಯಾಗಿ ಕೆಲಸ ಮುಗಿದಾಗ ಗ್ರಂಥಾಲಯದಲ್ಲಿ ಸಾಹಿತ್ಯಭ್ಯಾಸ, ಬರವಣಿಗೆಯಲ್ಲಿ ನಿರತನಾದರೆ ಇತರ ಶಿಕ್ಷಕರು ಮತ್ತು ಮಕ್ಕಳು ಈ ಹವ್ಯಾಸವನ್ನು ಪರಿಪಾಲನೆ ಮಾಡಬಹುದು.

ಶಾಲೆಯ ಪುಸ್ತಕಭಂಡಾರದಲ್ಲಿ ಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯಕ್ಕೆ ಸಂಬಂಧಪಟ್ಟ ಕತೆ, ಕವನ, ಕಾದಂಬರಿ, ಪ್ರಬಂಧ, ನಾಟಕ, ಪ್ರವಾಸಕಥನ, ಜೀವನ ಚರಿತ್ರೆ, ಆತ್ಮಚರಿತ್ರೆ, ಸಣ್ಣಕಥೆ, ಶಿಶುಗೀತೆ, ಪ್ರಾಸಗೀತೆ, ನವ್ಯ, ನವೋದಯ ಕಾವ್ಯ, ವಿಜ್ಞಾನಕ್ಕೆ ಸಂಬಂಧಪಟ್ಟ ಲೇಖನ, ನಾಡುನುಡಿಯ ಬಗ್ಗೆ ಹೇಳುವ ಚಾರಿತ್ರಿಕ ಪುಸ್ತಕಗಳು, ಇತಿಹಾಸ, ಭೂಗೋಳ, ಸಮಾಜ, ಕವಿಕಾವ್ಯಗಳ ಕಿರುಪರಿಚಯದ ಪುಸ್ತಕಗಳು ಪ್ರತಿಯೊಬ್ಬ ವಿದ್ಯಾರ್ಥಿಗೂ ಸುಲಭವಾಗಿ ದೊರೆಯುವಂತೆ ಇರಬೇಕು. ಇವೆಲ್ಲವೂ ಪುಸ್ತಕ ಭಂಡಾರದಲ್ಲಿ ಕೇವಲ ಅಲಂಕಾರಕ್ಕೆ ಇಟ್ಟುಕೊಳ್ಳದೆ ಮಕ್ಕಳು ತಮ್ಮ ನಿಜಜೀವನದಲ್ಲಿ ಬಳಸಲು ಅನುಕೂಲ ವಾಗುವಂತೆ ಇರಬೇಕು. ಜ್ಞಾನದ ಹಸಿವೆಯಿಂದ ಬಂದ ವಿದ್ಯಾರ್ಥಿಗೆ ಆನಂದವಾಗು

ವಂತಿರಬೇಕು. ಗ್ರಂಥಾಲಯವು ಸದ್ದುಗದ್ದಲವಿಲ್ಲದ. ವಾಹನಗಳ ಓಡಾಟ. ಗಲಾಟೆಗಳಿಲ್ಲದ. ಊರಿನಿಂದ ದೂರವಿರುವ ಪ್ರಶಾಂತಸ್ಥಳ. ಇಲ್ಲಿ ಓದುಗರಿಗೆ ಚಿತ್ತಚಾಂಚಲ್ಯವಾಗಬಾರದು. ಗ್ರಂಥಗಳನ್ನಿಡುವ ಕಪಾಟುಗಳು ಸಾಮಾನ್ಯನಿಗೂ ನಿಲುಕುವಂತಿದ್ದು ಓದುಗ/ವಿದ್ಯಾರ್ಥಿ ತನಗೆ ಬೇಕಾದ ಗ್ರಂಥವನ್ನು ತೆಗೆದುಕೊಂಡು ಓದಲು ಸೂಕ್ತವ್ಯವಸ್ಥೆ ಇರಬೇಕು. ಓದಲು ಮತ್ತು ಅವಶ್ಯಕವಿರುವ ವಿಷಯವನ್ನು ಬರೆದುಕೊಳ್ಳಲು ಒಳ್ಳೆ ಏರ್ಪಾಟು ಇರಬೇಕು. ಓದುವ ವಿದ್ಯಾರ್ಥಿಗೆ ಎಷ್ಟು ಹೊತ್ತು ಓದಿದರೂ ಆಯಾಸವಾಗಬಾರದು. ಅದಕ್ಕಾಗಿ ಸುಖವಾಗಿ ಕುಳಿತುಕೊಳ್ಳಲು ಅನುಕೂಲವಿರುವ ಕುರ್ಚಿ ಸಪ್ರಮಾಣದ ಮೇಜುಗಳಿರಬೇಕು. ಅವುಗಳನ್ನು ಓರಣವಾಗಿಟ್ಟಿರಬೇಕು. ಗ್ರಂಥಾಲಯದಲ್ಲಿ ವಾಚಕರ ಅಡ್ಡಾಟಕ್ಕೆ ಅಡ್ಡಿಯಾಗಬಾರದು. ಶುದ್ಧಹವೆ ಸಾಕಷ್ಟು ಬೆಳಕು, ರಾತ್ರಿಯ ಸಮಯದಲ್ಲಿ ಉಪಯೋಗಿಸುವ ವಿದ್ಯುದ್ದೀಪಗಳು ಕಣ್ಣಿಗೆ ನೋವನ್ನುಂಟು ಮಾಡಬಾರದು. ಆದ್ದರಿಂದ ಗ್ರಂಥಾಲಯ ಭವನವು ಸಕಲಸಾಧನ ಉಪಕರಣಗಳಿಂದ ಸುಸಜ್ಜಿತವಾಗಿರಬೇಕು. ಅದಕ್ಕಾಗಿ ಗ್ರಂಥಗಳನ್ನು ಆಯ್ಕೆ ಮಾಡುವಾಗ ಓದುಗರ ಅಭಿರುಚಿ, ವಿಷಯ ವೈವಿಧ್ಯ, ಭಾಷೆಯ ಶೈಲಿ. ಉಪಯುಕ್ತತೆ, ವೈವಿಧ್ಯತೆ ಮತ್ತು ಪುಸ್ತಕದ ಬೆಲೆ ಇವುಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಶಾಲೆಗಳಲ್ಲಿ ಸಾಧ್ಯವಾದಾಗ, ಕನಿಷ್ಠ ವಾರಕ್ಕೆರಡು ಬಾರಿಯಾದರೂ ವಿದ್ಯಾರ್ಥಿಗಳು ನಿಯತವಾದ ಗ್ರಂಥಾಲಯಕ್ಕೆ ಭೇಟಿ ನೀಡಬೇಕು. ಪುಸ್ತಕಭಂಡಾರದಲ್ಲಿ ಯಾವುದೇ ತರಹದ ಪುಸ್ತಕಗಳಿದ್ದರೂ ಮಕ್ಕಳಿಗೆ ಪ್ರಾರಂಭದಲ್ಲಿ ತೀರಾ ಕಠಿಣವಾದ ಪುಸ್ತಕಗಳನ್ನು ಓದುವುದಕ್ಕೆ ಕೊಡಬಾರದು. ಮಕ್ಕಳ ಆಸಕ್ತಿ, ಅಭಿರುಚಿ, ಬೌದ್ಧಿಕಮಟ್ಟಕ್ಕೆ ತಕ್ಕಂತಹ ಪುಸ್ತಕಗಳನ್ನು ಮಾತ್ರ ಕೊಡಬೇಕು. ಮೊದಮೊದಲು ಮಕ್ಕಳಿಗೆ ಕಥೆ. ಆತ್ಮಚರಿತ್ರೆ, ಜೀವನಚರಿತ್ರೆಗೆ ಸಂಬಂಧಪಟ್ಟ ಪುಸ್ತಕಗಳನ್ನು ಓದಲು ಅವಕಾಶ ಕಲ್ಪಿಸಬೇಕು. ಆಗ ಮಕ್ಕಳು ಉತ್ತಮ ಜೀವನವನ್ನು ರೂಢಿಸಿಕೊಳ್ಳಲು ಅವಕಾಶವಾಗುತ್ತದೆ. ಮಕ್ಕಳ ವಯಸ್ಸು ಬೆಳೆದಂತೆ ಉತ್ತಮ ಕಥೆ. ಕವನ. ಕಾದಂಬರಿ ಮುಂತಾದವುಗಳನ್ನು ಓದಲು ಅವಕಾಶ ಕಲ್ಪಿಸಿ. ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಓದುವಾಗ ಸೂಕ್ತ ಮಾರ್ಗದರ್ಶನ ನೀಡುವಂತೆ ವ್ಯವಸ್ಥೆ ಮಾಡಬೇಕು.

ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳಿಗೆ ಓದಲು ಅವಕಾಶ ನೀಡುವುದರಿಂದ ಮಕ್ಕಳಲ್ಲಿ ಕೆಳಗಿನ ಸಾಮರ್ಥ್ಯಗಳನ್ನು ಬೆಳೆಸಬಹುದು:-

ಅ. ಗ್ರಂಥಾಲಯದಿಂದ ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಬೆಳೆಯುತ್ತದೆ.

ಆ. ಮಕ್ಕಳಲ್ಲಿ ಅರ್ಥಗ್ರಹಣ ಸಾಮರ್ಥ್ಯ ವೃದ್ಧಿಯಾಗುತ್ತದೆ.

ಇ. ಗ್ರಂಥಾಧ್ಯಯನದಿಂದ ಮಕ್ಕಳಲ್ಲಿ ಭಾಷಾ ಮತ್ತು ವಿಷಯ ಸಂಪತ್ತು ಅಧಿಕವಾಗುತ್ತದೆ.

ಈ. ಗ್ರಂಥಾಧ್ಯಯನದಿಂದ ವಾಚನಕಲೆ ಬೆಳೆಯುತ್ತದೆ.

ಉ. ವಿದ್ಯಾರ್ಥಿಗಳಲ್ಲಿ ಸ್ವಯಂಶಿಸ್ತು ರೂಢಿಯಾಗುತ್ತದೆ.

ಊ. ಗ್ರಂಥಾಲಯದಿಂದ ವಿದ್ಯಾರ್ಥಿಗಳಲ್ಲಿ ಜ್ಞಾನ, ತಿಳುವಳಿಕೆ ಬೆಳೆಯುತ್ತದೆ.

ಋ. ವಿದ್ಯಾರ್ಥಿಗಳ ಬದುಕು ಹಸನುಗೊಳ್ಳುತ್ತದೆ.

ಎ. ವಿದ್ಯಾರ್ಥಿಗಳಲ್ಲಿ ಚಿಂತನಶೀಲತೆ ಬೆಳೆಯುತ್ತದ.

ಏ. ಕವಿ, ಕೃತಿಗಳ ಬಗ್ಗೆ ಅಭಿಮಾನ ಬೆಳೆಯುತ್ತದೆ.

ಐ. ಸೃಜನಶೀಲತೆಯು ಬೆಳೆಯುತ್ತದೆ.

ಒ. ವೈಜ್ಞಾನಿಕ ಮನೋಭಾವ ಬೆಳೆಯುತ್ತದೆ.

ಔ. ಸಾಮಾಜಿಕ ಪ್ರಜ್ಞೆ ಬೆಳೆಯುತ್ತದೆ.

ಕ. ವೈಚಾರಿಕತೆ ಬೆಳವಣಿಗೆಯಾಗುತ್ತದೆ.

ಖ. ಸಾಹಿತ್ಯಾಭಿಮಾನ ಬೆಳವಣಿಗೆಯಾಗುತ್ತದೆ.

ಗ. ಉತ್ತಮ ವ್ಯಕ್ತಿತ್ವ ಬೆಳೆವಣಿಗೆಯಾಗುತ್ತದೆ.

ಘ. ನಾಗರೀಕತೆ ಬೆಳವಣಿಗೆಯಾಗುತ್ತದೆ; ಸಂಸ್ಕೃತಿ ಬೆಳವಣಿಗೆಯಾಗುತ್ತದೆ.

ಆದ್ದರಿಂದ ಶಾಲೆಯಲ್ಲಿ ಗ್ರಂಥಾಲಯಗಳ ಪಾತ್ರ ಬಹಳ ಮುಖ್ಯವಾದುದು. ಗ್ರಂಥಾಲಯ ಕೇವಲ ಶಾಲೆಗಳಲ್ಲಿ ಅಲ್ಲದೆ ಸಮಾಜದ ವ್ಯವಸ್ಥೆಯಲ್ಲಿ ಅವಕಾಶ ಕಲ್ಪಿಸಿದರೆ ಇನ್ನೂ ಹೆಚ್ಚಿನ ಪ್ರಯೋಜನ ಪಡೆಯಬಹುದು. ಸಮಾಜದ ಸರ್ವತೋಮುಖ ಬೆಳವಣಿಗೆಗೆ ಗ್ರಂಥಾಲಯ ಮುಖ್ಯಪಾತ್ರವನ್ನು ವಹಿಸುತ್ತದೆ ಎಂದು ಹೇಳಬಹುದು. ಗ್ರಂಥಾಲಯ ಕೇವಲ ಪುಸ್ತಕಜ್ಞಾನವನ್ನು ಒದಗಿಸಿಕೊಟ್ಟರೆ ಸಾಲದು. ಅದು ಜ್ಞಾನಾಭಿವೃದ್ಧಿ ಮಾಡಬೇಕಾಗು ತ್ತದೆ; ತಿಳುವಳಿಕೆ ಬೆಳೆಸಬೇಕಾಗುತ್ತದೆ. ಮಗುವಿನ ಬೆಳವಣಿಗೆಗೆ ಪ್ರತಿನಿತ್ಯದ ವಿಷಯಜ್ಞಾನ ಅತ್ಯಗತ್ಯ. ಅದಕ್ಕಾಗಿ ಗ್ರಂಥಾಲಯಗಳಲ್ಲಿ ಓದಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು.

ವಾಚನಾಲಯ

ವಾಚನಾಲಯ ಮಕ್ಕಳ ಜ್ಞಾನಾಭಿವೃದ್ಧಿಗೆ. ತಿಳುವಳಿಕೆ ಬೆಳೆಸುವುದರೊಂದಿಗೆ ದಿನನಿತ್ಯದ ಲೋಕವ್ಯವಹಾರ ತಿಳಿದುಕೊಳ್ಳಲು ತುಂಬಾ ಉಪಯಕ್ತವಾಗಿದೆ. ಗ್ರಂಥಾಲಯ ವ್ಯಕ್ತಿಯ ಮುಂದಿನ ಜೀವನಕ್ಕೆ ಅಣಿಗೊಳಿಸಿದರೆ ವಾಚನಾಲಯ ವಿದ್ಯಾರ್ಥಿಯನ್ನು ಪ್ರಸ್ತುತ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತದೆ. ಗ್ರಂಥಾಲಯವು ಭೂತಕಾಲದ ವಿಚಾರವನ್ನು ತಿಳಿದು ಅದನ್ನು ಭವಿಷ್ಯತ್‌ನಲ್ಲಿ ಬೆಳೆಸುವ ಜ್ಞಾನವನ್ನು ತಿಳಿಸಿಕೊಟ್ಟರೆ ವಾಚನಾಲಯ ಪ್ರಸ್ತುತ ಸನ್ನಿವೇಶಕ್ಕೆ ವಿದ್ಯಾರ್ಥಿಗಳು ಹೇಗೆ ಹೊಂದಿಕೊಳ್ಳಬೇಕು ಎನ್ನುವುದನ್ನು ತಿಳಿಸುತ್ತದೆ. ವಾಚನಾಲಯದಲ್ಲಿ ಪುಸ್ತಕಗಳಿಗೆ ಅವಕಾಶವಿಲ್ಲ. ಅಲ್ಲಿ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ನಿಯತಕಾಲಿಕೆಗಳು ಇರುತ್ತವೆ.

ಗ್ರಂಥಾಲಯ ಜ್ಞಾನದ ನಿಧಿಯಾದರೆ ವಾಚನಾಲಯ ಜ್ಞಾನದ ಪ್ರತಿನಿಧಿಯಾದರಿಂದ ವಾಚನಾಲಯಕ್ಕೆ ಮಕ್ಕಳು ಪ್ರತಿನಿತ್ಯವೂ, ಬಿಡುವಿನ ಸಮಯದಲ್ಲಿ ಕಾಲಹರಣ ಮಾಡದೆ ಭೇಟಿ ನೀಡಿ ಲೋಕವ್ಯವಹಾರದ ವಾರ್ತೆಯನ್ನು ತಿಳಿದುಕೊಳ್ಳಬಹುದು. ಗ್ರಂಥಾಲಯ ಮಕ್ಕಳ ಜ್ಞಾನದಾಹವನ್ನು ತೀರಿಸಿದರೆ, ವಾಚನಾಲಯ ಸಾಮಾನ್ಯ ಜ್ಞಾನದಾಹವನ್ನು ತೀರಿಸುತ್ತದೆ. ಲೋಕದಲ್ಲಿ ಪ್ರತಿನಿತ್ಯ ನಡೆಯುವ ನೂರಾರು ಆಗುಹೋಗುಗಳು, ಸಾಧನೆಗಳು ನಡೆಯುತ್ತಿರುತ್ತವೆ. ಅವುಗಳು ಮಕ್ಕಳ ಗಮನಕ್ಕೆ ಬಂದು ಅದಕ್ಕೆ ಅನುಗುಣವಾಗಿ ಅವರು ನಡೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಮಕ್ಕಳು ತಿಳಿಯುವ ಕಾತರವನ್ನು ಹೊಂದಿರಬೇಕು. ಅಂತಹ ಕಾತರಗಳನ್ನು ದೈನಂದಿನ ದೈನಿಕಗಳು, ನಿಯತಕಾಲಿಕೆಗಳು, ಮಾಸಿಕಗಳು, ವಿಶೇಷ ಸಂಚಿಕೆಗಳು ಪರಿಚಯಿಸುತ್ತವೆ. ಅದಕ್ಕಾಗಿ

ಮಕ್ಕಳಿಗೆ ಸಂಬಂಧಿಸಿದಂತೆ ದಿನದಿನದ ಲೋಕವ್ಯವಹಾರಕ್ಕೆ ಸಂಬಂಧಿಸಿದಂತೆ ಇರುವ ಪತ್ರಿಕೆಗಳು ಮತ್ತು ಬಾಲಮಿತ್ರ, ಚಂದಮಾಮ, ಬಾಲಮಂಗಳ, ಗೊಂಬೆಮನೆ, ಪುಟಾಣಿಜ್ಞಾನ, ಜನಪ್ರಿಯ ವಿಜ್ಞಾನ, ವಿಜ್ಞಾನಜಗತ್ತು, ಭೌತಜಗತ್ತು, ಪುಟಾಣಿ ಪ್ರಪಂಚ, ದಿಕ್ಸೂಜಿ ಮುಂತಾದ ಪತ್ರಿಕೆಗಳು ಸಹಾಯಮಾಡಬಹುದು. ಪತ್ರಿಕೆಗಳಲ್ಲಿ ಬರುವ ಪದಬಂಧ, ಕೆಣಕುತಿಣಕು, ಪದರಚನೆ - ಇಂತಹ ವಿಷಯಗಳಲ್ಲಿ ಮಕ್ಕಳನ್ನು ತೊಡಗಿಸುವುದರಿಂದ ಮಕ್ಕಳ ವ್ಯವಹಾರಿಕಜ್ಞಾನ ಬೆಳವಣಿಗೆಯಾಗುತ್ತದೆ. ಇವುಗಳ ಜೊತೆಗೆ ದಿನಪತ್ರಿಕೆಗಳಲ್ಲಿ ಬರುವ ನಿಯತಕಾಲಿಕ ಕಾದಂಬರಿ, ವಿಮರ್ಶೆ, ವಿಡಂಬನೆ, ಹಾಸ್ಯ ಇವುಗಳ ಜೊತೆಗೆ ವಿಸ್ಮಯ ಮತ್ತು ವೈಜ್ಞಾನಿಕ ಅಂಶ, ವೈಚಾರಿಕ ಅಂಶಗಳು ಮಕ್ಕಳ ಬೌದ್ಧಿಕಮಟ್ಟವನ್ನು ಹೆಚ್ಚಿಸಬಹುದು.

ವಾಚನಾಲಯದಲ್ಲಿ ಮಕ್ಕಳನ್ನು ತೊಡಗಿಸುವುದರಿಂದ ಮಕ್ಕಳಲ್ಲಿ ಕಾಲಹರಣ ಕಡಿಮೆಯಾಗಿ, ಬಿಡುವಿನ ವೇಳೆಯನ್ನು ಬೋಧನೆಯಲ್ಲಿ ಸರಿಯಾಗಿ ಉಪಯೋಗಿಸಲು ಅವಕಾಶ ನೀಡಿದಂತಾಗುತ್ತದೆ. ಇದು ಕೇವಲ ಶಾಲೆಯಲ್ಲಿ ನಡೆಯದೆ, ಮನೆಯಲ್ಲಿಯೂ ನಡೆದರೆ ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದು. ಆದ್ದರಿಂದ ನಾವು ವಾಚನಾಲಯದಿಂದ ಮಕ್ಕಳು ಪಡೆಯಬಹುದಾದ ಪ್ರಯೋಜನಗಳನ್ನು ಕೆಳಗಿನಂತೆ ನೋಡಬಹುದು.

ವಾಚನಾಲಯದ ಪ್ರಯೋಜನಗಳು

ಅ. ವಾಚನಾಲಯದಿಂದ ವಿದ್ಯಾರ್ಥಿಗೆ ದಿನನಿತ್ಯದ ವಿಷಯವನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ಆ. ವಾಚನಾಲಯದಿಂದ ಮಕ್ಕಳಲ್ಲಿ ಸ್ವಯಂಶಿಸ್ತು ಬೆಳೆಯುತ್ತದೆ.

ಇ. ವಿದ್ಯಾರ್ಥಿಗಳಲ್ಲಿ ಹೆಚ್ಚು ಓದುವ ಹವ್ಯಾಸ, ಅದರಲ್ಲಿಯು ಸ್ವತಂತ್ರವಾಗಿ ಓದುವ ಹವ್ಯಾಸದ ಬೆಳವಣಿಗೆಗೆ ಅವಕಾಶ ದೊರೆಯುತ್ತದೆ.

ಈ. ತಿಳುವಳಿಕೆ ಮತ್ತು ಲೋಕಜ್ಞಾನ ಬೆಳೆಯುತ್ತದೆ.

ಉ. ಗ್ರಂಥಾಲಯದಲ್ಲಿ ಓದಲು ಅವಕಾಶ ನೀಡುತ್ತವೆ. ಪ್ರೇರೇಪಿಸುತ್ತದೆ.

ಊ. ವಿಷಯ ಜ್ಞಾನ, ವ್ಯವಹಾರ ಜ್ಞಾನ ಬೆಳೆಯುತ್ತವೆ.

ಋ. ಬದುಕಿನ ವಿವಿಧ ಜ್ಞಾನ ತಿಳಿಯುತ್ತಾ, ವಿದ್ಯಾರ್ಥಿಗಳನ್ನು ದಿನನಿತ್ಯದ ಬರವಣಿಗೆಗೆ ಹೊಂದಿಸುತ್ತದೆ.

ಎ. ಮಕ್ಕಳನ್ನು ಉತ್ತಮವ್ಯಕ್ತಿಗಳಾಗಿ, ಭವ್ಯಪ್ರಜೆಗಳನ್ನಾಗಿಸಿ ಮುಂದಿನ ಜೀವನಕ್ಕೆ ತಯಾರು ಮಾಡುತ್ತದೆ.

ವಾಚನಾಲಯ ಮತ್ತು ಗ್ರಂಥ ಭಂಡಾರಗಳು ಮಕ್ಕಳಿಗೆ ಜ್ಞಾನದ ಹೊಂಬೆಳಕಿನ ಎರಡು ಕಣ್ಣುಗಳಿದ್ದಂತೆ. ವಿದ್ಯಾರ್ಥಿಗೆ ವಾಚನಾಲಯ ಮತ್ತು ಗ್ರಂಥ ಭಂಡಾರಗಳ ಸಹವಾಸ ಹೆಚ್ಚಿದಂತೆ ಮಕ್ಕಳ ಮನಸ್ಸಿನಲ್ಲಿರುವ ಅಜ್ಞಾನ ಮಾಯವಾಗಿ ಜ್ಞಾನದ ಪರಂಜ್ಯೋತಿ ಬೆಳಗುತ್ತದೆ. ಜ್ಞಾನದ ಜ್ಯೋತಿಯ ಬೆಳಕು ವಿಶ್ವದ ಜ್ಯೋತಿಯನ್ನು ಬೆಳಗಿಸಲು ಅನುವಾಗುತ್ತದೆ ಎಂದು ಹೇಳಬಹುದು.

ಮಗುವಿನ ಬೆಳವಣಿಗೆಯಲ್ಲಿ ಮಾಧ್ಯಮಿಕ, ಪ್ರೌಢಶಾಲಾ ಹಂತ ಬಹಳ

ಮುಖ್ಯವಾದುದು. ಮಗುವಿನ ಸರ್ವತೋಮುಖ ಬೆಳವಣಿಗೆಯು ಉಂಟಾಗುವ ಕಾಲವದು. ಆದ್ದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆ ಪ್ರೌಢಶಾಲಾ ಹಂತದಲ್ಲಿ ಗ್ರಂಥಾಲಯ ಮತ್ತು ವಾಚನಾಲಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇಲ್ಲಿ ಶಾಲೆ, ಶಿಕ್ಷಕ, ಪೋಷಕ, ಸಮಾಜ, ಪ್ರತಿಯೊಬ್ಬರ ಕಾರ್ಯ ಬಹಳ ಮುಖ್ಯವಾದುದು. ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ಅರಿತು ವ್ಯವಹಾರ ಮಾಡಿದಾಗ ಮಕ್ಕಳಲ್ಲಿ ಉತ್ತಮ ಫಲಿತಾಂಶವನ್ನು ನಾವು ಕಾಣಬಹುದಾಗಿದೆ.

ಆದರೆ ಪ್ರಸ್ತುತ ಸನ್ನಿವೇಶದಲ್ಲಿ ಬಹುತೇಕ ಶಾಲೆಗಳಲ್ಲಿ ಮಕ್ಕಳು ಕೂರುವುದಕ್ಕೂ ಸ್ಥಳವಿರದೆ ಎಷ್ಟೋ ಶಾಲೆಗಳು ಮರಗಳ ಕೆಳಗೆ ನಡೆಯುತ್ತಿವೆ ಅಥವಾ ನಿಯಮಿತ ವೇಳೆಯಲ್ಲಿ ನಡೆಯುತ್ತಿವೆ. ಕೆಲವು ಶಾಲೆಗಳೂ ಸಾಕಷ್ಟು ಕೊಠಡಿಗಳನ್ನು ಹೊಂದಿಲ್ಲದ ಸನ್ನಿವೇಶದಲ್ಲಿ ಗ್ರಂಥಾಲಯ ಮತ್ತು ವಾಚನಾಲಯಗಳಿಗೆಲ್ಲಿ ಸ್ಥಳ ಎಂದು ಕೇಳುವ ಮಾತು ಮನಸ್ಸಿಗೆ ಖೇದವನ್ನುಂಟು ಮಾಡುವುದಾಗಿದೆ. ಎಷ್ಟೋ ಶಾಲೆಗಳಲ್ಲಿ ಒಂದೇ ಕೊಠಡಿಯಲ್ಲಿ ಎಲ್ಲಾ ತರಗತಿಗಳು ನಡೆಯುತ್ತವೆ. ಪ್ರಸ್ತುತ ಸನ್ನಿವೇಶದಲ್ಲಿ ಶಾಲೆಗಳು ಕೇವಲ ಹಣವನ್ನು ತರುವ ಸಾಧನಗಳಾಗಿವೆ ಎಂದರೆ ತಪ್ಪಾಗಲಾರದು. ಅನೇಕ ಶಾಲೆಗಳಲ್ಲಿ ಗ್ರಂಥಾಲಯ ಮತ್ತು ವಾಚನಾಲಯಗಳಿಗೆ ಪ್ರತ್ಯೇಕವಾದ ಅವಧಿಯನ್ನು ನಿಗದಿಗೊಳಿಸಿಲ್ಲ. ಆದ್ದರಿಂದ ಪ್ರಸ್ತುತ ಸನ್ನಿವೇಶದಲ್ಲಿ ಗ್ರಂಥಾಲಯ ಮತ್ತು ವಾಚನಾಲಯದಲ್ಲಿ ಸಾಕಷ್ಟು ಬದಲಾವಣೆ ಮತ್ತು ಅದಕ್ಕೆ ಸೂಕ್ತಪ್ರೋತ್ಸಾಹ ನೀಡಬೇಕಾಗುತ್ತದೆ ಎಂದು ಹೇಳಬಹುದು.

ಸಹಪಠ್ಯ ಚಟುವಟಿಕೆಗಳು

ಡಾ . ಎಂ. ಎಂ. ಪಟ್ಟಣ ಶೆಟ್ಟಿ

ಪೀಠಿಕೆ : ಎಲ್ಲ ಹಂತದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ವಿವಿಧ ರೀತಿಯ ಕಲಿಕೆಯ ಅನುಭವಗಳನ್ನು ಪಡೆದುಕೊಳ್ಳಲು ಸಹಾಯಕವಾಗುವಂತೆ ತಜ್ಞರ ಸಮಿತಿಯು ಪಠ್ಯಕ್ರಮವನ್ನು ರೂಪಿಸಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಮ್ಮ ನಿಯಂತ್ರಣದಲ್ಲಿರುವ ಪ್ರಾಥಮಿಕ ಶಾಲೆ, ಉನ್ನತ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ವಿಭಾಗ ಮತ್ತು ಇತರೆ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ನಿಗದಿಪಡಿಸಿವೆ. ಈ ಪಠ್ಯಕ್ರಮದಲ್ಲಿ ಸೂಚಿಸಲಾಗಿರುವ ಎಲ್ಲ ವಿಷಯಗಳನ್ನು ಎಲ್ಲ ವಿದ್ಯಾರ್ಥಿಗಳು ಕಲಿಯುವುದರ ಜೊತೆಗೆ ಅನೇಕ ಸಹಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು ಅವಶ್ಯಕವಾಗಿದೆ. ಪ್ರತಿ ತರಗತಿಯ ಪಠ್ಯಕ್ರಮಕ್ಕೆ ಸಹಪಠ್ಯ ಚಟುವಟಿಕೆಗಳು ಪೂರಕವಾಗಿವೆ. ಅವುಗಳು ಪ್ರತಿಯೊಂದು ಶಿಕ್ಷಣಸಂಸ್ಥೆಯ ಅವಿಭಾಜ್ಯಅಂಗವೆಂದು ಪರಿಗಣಿಸಲ್ಪಟ್ಟಿವೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಸಹಾಯಕವಾಗುವ ಎಲ್ಲ ಪಠ್ಯೇತರ ಚಟುವಟಿಕೆಗಳನ್ನು 'ಸಹಪಠ್ಯ ಚಟುವಟಿಕೆಗಳು' ಎಂದು ಕರೆಯುತ್ತಾರೆ.

ನಮ್ಮ ದೇಶವು ಸ್ವಾತಂತ್ರ್ಯಪಡೆದ ನಂತರ ಶಿಕ್ಷಣದ ಅಭಿವೃದ್ಧಿಗಾಗಿ ರಚಿಸಿದ 1949ರ ಡಾ: ರಾಧಾಕೃಷ್ಣನ್ ಆಯೋಗ, 1952-53ರ ಮೊದಲಿಯಾರ್ ಆಯೋಗ ಮತ್ತು 1964-66ರ ಕೊಠಾರಿ ಆಯೋಗ ತಮ್ಮ ವರದಿಗಳಲ್ಲಿ ಪಠ್ಯೇತರ ಚಟುವಟಿಕೆಗಳನ್ನು ಸಂಘಟಿಸಲು ಸಲಹೆ ನೀಡಿವೆ. ಅದೇ ರೀತಿಯಲ್ಲಿ 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯೂ ಸಹ ವಿವಿಧ ರೀತಿಯ ಸಹಪಠ್ಯ ಚಟುವಟಿಕೆಗಳನ್ನು ಸಂಘಟಿಸುವ ಬಗ್ಗೆ ಸಲಹೆ ಕೊಡಲಾಗಿದೆ.

ಸಹಪಠ್ಯ ಚಟುವಟಿಕೆಗಳನ್ನು ಪ್ರತಿಯೊಂದು ಶಾಲಾ ಕಾಲೇಜುಗಳು ಸಂಘಟಿಸುವುದರಿಂದ ಕೆಳಗೆ ಕಾಣಿಸಿದ ಪ್ರಯೋಜನಗಳನ್ನು ಆಯಾ ಶಿಕ್ಷಣಸಂಸ್ಥೆಯ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಾರೆ:

1. ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯಲ್ಲಿ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಅವರ ಬಿಡುವಿನ ವೇಳೆಯು ಸದುಪಯೋಗವಾಗುತ್ತದೆ.
2. ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಕಾರ್ಯ ಕೈಗೊಳ್ಳಲು ಪ್ರಚೋದನೆ ನೀಡುವುದರಿಂದ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕತೆ ಬೆಳೆಸಲು ಸಹಾಯಕ.
3. ಅನೇಕ ಸಹಪಠ್ಯ ಚಟುವಟಿಕೆಗಳನ್ನು ಕೈಗೊಳ್ಳುವಾಗ ಪ್ರತಿಯೊಬ್ಬ

ವಿದ್ಯಾರ್ಥಿಯು ಅನೇಕರ ಜೊತೆಗೆ ಸೇರಿಕೊಂಡು ಕಾರ್ಯ ನಿರ್ವಹಿಸ ಬೇಕಾಗುತ್ತದೆ. ತನ್ಮೂಲಕ ವಿದ್ಯಾರ್ಥಿಗಳು ಶಿಸ್ತು, ಸಂಯಮ ಹಾಗೂ ಸಹಬಾಳ್ವೆಯ ಮಹತ್ವ ಅರಿತುಕೊಳ್ಳುತ್ತಾರೆ.

4. ವಿವಿಧ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳ ಮನಸ್ಸಿಗೆ ಆನಂದವೆನಿಸುತ್ತದೆ.

5. ಪ್ರತಿಯೊಂದು ತರಗತಿಯ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಪಠ್ಯಪುಸ್ತಕದ ಬಹುತೇಕ ಪಾಠಗಳ ಕೊನೆಯಲ್ಲಿ ಆಯಾ ತರಗತಿಯ ವಿದ್ಯಾರ್ಥಿಗಳು ಶಾಲಾ/ ಕಾಲೇಜಿನ ಆವರಣದಲ್ಲಿ ಹಾಗೂ ಸಮುದಾಯದಲ್ಲಿ ಸಂಘಟಿಸಲ್ಪಡುವ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಥವಾ ಅನೇಕ ಸ್ಥಳಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ. ಇಂತಹ ಸಹಪಠ್ಯ ಚಟುವಟಿಕೆಗಳಲ್ಲಿ ಅವರು ಭಾಗವಹಿಸುವುದರಿಂದ ಲೇಖನ ಬರೆಯುವ ಹವ್ಯಾಸ, ಭಾಷಣಕಲೆ ಹಾಗೂ ವಿವಿಧ ಪಾತ್ರಗಳನ್ನು ಮಾಡುವ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತಾರೆ.

6. ವಿವಿಧ ಕ್ರೀಡೆ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶವು ವಿದ್ಯಾರ್ಥಿಗಳಿಗೆ ಸಿಗುವುದರಿಂದ ಅವರ ದೈಹಿಕ ಬೆಳವಣಿಗೆಗೆ ಈ ಚಟುವಟಿಕೆಗಳು ಸಹಾಯವಾಗುತ್ತವೆ.

7. ನಮ್ಮ ದೇಶದ ಸಂಸ್ಕೃತಿ, ಕಲೆ, ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯ ಕ್ರಮಗಳಲ್ಲಿ ನೇರವಾಗಿ ಭಾಗವಹಿಸುವ ಅವಕಾಶ ಸಿಗುವುದರಿಂದ ವಿದ್ಯಾರ್ಥಿಗಳು ವೈವಿಧ್ಯಮಯ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಜ್ಞಾನ ಭಂಡಾರ ಬೆಳೆಸಿಕೊಳ್ಳುತ್ತಾರೆ.

8. ಪ್ರತಿಯೊಂದು ಶಾಲಾ ಕಾಲೇಜುಗಳ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಹುರಿದುಂಬಿಸುವ ಮೂಲಕ ಅವರಲ್ಲಿ ದೈಹಿಕ, ಮನೋವೈಜ್ಞಾನಿಕ, ನೈತಿಕ, ಶೈಕ್ಷಣಿಕ, ಪೌರತ್ವ, ಸಾಮಾಜಿಕ, ಸೌಂದರ್ಯೋಪಾಸನೆ, ಸಾಂಸ್ಕೃತಿಕ, ಮನೋರಂಜನೆ ಹಾಗೂ ಶಿಸ್ತಿನ ಮೌಲ್ಯಗಳು ಬೆಳೆಯುತ್ತವೆ.

ಆಯೋಗಗಳ ಸಲಹೆ

ಮೊದಲಿಯಾರ್ ಆಯೋಗದವರು ಸ್ಕೌಟ್ ಮತ್ತು ಗೈಡ್ ಕಾರ್ಯಕ್ರಮ, ಪ್ರಥಮ ಚಿಕಿತ್ಸೆ, ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಗಳಲ್ಲಿ ಭಾಗವಹಿಸುವುದು ಮತ್ತು ಇತರ ಕಾರ್ಯಕ್ರಮಗಳನ್ನು ಸಹಪಠ್ಯ ಚಟುವಟಿಕೆಗಳ ಪಟ್ಟಿಯಲ್ಲಿ ಸೇರಿಸಿದ್ದಾರೆ.

1964-66ರ ಕೊಠಾರಿ ಆಯೋಗದವರು ದೈಹಿಕಶಿಕ್ಷಣ ಮತ್ತು ಸಮಾಜ ಸೇವೆಯ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದರ ಬಗ್ಗೆ ಸೂಚಿಸಿರುವುದರ ಜೊತೆಗೆ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಶಿಕ್ಷಣಸಂಸ್ಥೆಗಳಲ್ಲಿ ಸಹಪಠ್ಯ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು ಸೂಚಿಸಿದ್ದಾರೆ. ಈ ದಿಸೆಯಲ್ಲಿ ಕೈಗಾರಿಕೆ, ವಾಣಿಜ್ಯ, ಕೃಷಿ ಮತ್ತಿತರ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲು ಸಲಹೆ ಮಾಡಿದ್ದಾರೆ. 1986ರ ರಾಷ್ಟ್ರೀಯ ಶಿಕ್ಷಣ

ನೀತಿಯಲ್ಲಿ ಕಾರ್ಯಾನುಭವ, ಆಟ, ಪಾಠ, ಯೋಗ ಚಟುವಟಿಕೆಗಳು, ಮನರಂಜನೆ, ಮೌಲ್ಯಾಧಾರಿತ ಕಾರ್ಯಕ್ರಮಗಳು ಮತ್ತು ಇತರೆ ವಿಚಾರಗಳಿಗೆ ಹೆಚ್ಚಿನ ಒತ್ತು ಕೊಡಲು ಸೂಚನೆ ನೀಡಿದ್ದಾರೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಪದವಿ ಕಾಲೇಜುಗಳಲ್ಲಿ ವಿಜ್ಞಾನ ಅಥವಾ ಪ್ರಾಯೋಗಿಕ ಕಾರ್ಯಗಳನ್ನು ಒಳಗೊಂಡ ವಿಷಯ ಬೋಧಿಸುವ ಶಿಕ್ಷಕರು ಪ್ರತಿವಾರ ಎರಡು ತಾಸುಗಳನ್ನು ಹಾಗೂ ಪ್ರಾಯೋಗಿಕ ಕಾರ್ಯ ಇರಲಾರದ ವಿಷಯ ಬೋಧಿಸುವ ಪ್ರತಿಯೊಬ್ಬ ಶಿಕ್ಷಕರು ಪ್ರತಿವಾರ 4 ತಾಸುಗಳನ್ನು ಸಹಪಠ್ಯ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ಕಾಲೇಜು ಮತ್ತು ವಿಶ್ವವಿದ್ಯಾಲಯದ ಶಿಕ್ಷಕರು ಸ್ನಾತಕೋತ್ತರ ಶಿಕ್ಷಣ ತರಗತಿಗಳ ಹಾಗೂ ಇನ್ನಿತರ ಶಿಕ್ಷಣಸಂಸ್ಥೆಗಳ ವಿದ್ಯಾರ್ಥಿಗಳೂ ಸಹ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಬೇಕು ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈ ರೀತಿ ಎಲ್ಲ ಶೈಕ್ಷಣಿಕ ಹಂತಗಳಲ್ಲಿ ಪಠ್ಯೇತರ ಚಟುವಟಿಕೆಗಳು ತಮ್ಮದೇ ಆದ ಪ್ರಾಮುಖ್ಯತೆ ಪಡೆದಿವೆ.

ಶಾಲಾ ಕಾಲೇಜುಗಳಲ್ಲಿ ವ್ಯವಸ್ಥೆಗೊಳಿಸಬಹುದಾದ ವಿವಿಧ ಸಹಪಠ್ಯ ಚಟುವಟಿಕೆಗಳು

ಶಾಲಾ ಕಾಲೇಜು ಹಂತದಲ್ಲಿ ಕಲಿಸುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಡಾ.ಐ.ಎ.ಲೋಕಾಪೂರ್‌ರವರು ಈ ಕೆಳಕಂಡ ಸಹಪಠ್ಯ ಚಟುವಟಿಕೆಗಳನ್ನು ಸೂಚಿಸಿದ್ದಾರೆ. ಪ್ರತಿಯೊಂದು ವಿಭಾಗದಲ್ಲಿ ಆಯಾ ಶಿಕ್ಷಣ ಸಂಸ್ಥೆಯು ತನ್ನ ವಿದ್ಯಾರ್ಥಿಗಳ ಹಿನ್ನೆಲೆ ಹಾಗೂ ಅಭಿರುಚಿಗೆ ತಕ್ಕಂತೆ ಕಾರ್ಯಕ್ರಮಗಳನ್ನು ಸಂಘಟಿಸಲು ಅನುಕೂಲವಾಗುವ ಪಟ್ಟಿಯನ್ನು ಸಹ ಸಿದ್ಧಪಡಿಸಿದ್ದಾರೆ. ಇಂತಹ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ:-

ಎ. ಭೌತಿಕ ಚಟುವಟಿಕೆಗಳು

1. ಸಾಮೂಹಿಕ ಕವಾಯಿತು ಮತ್ತು ವ್ಯಾಯಾಮ 2. ಯೋಗಾಸನಗಳು 3. ಒಳಾಂಗಣ ಕ್ರೀಡೆಗಳು 4. ಅಂಗಸಾಧನೆ 5. ಹೊರಾಂಗಣ ಕ್ರೀಡೆಗಳು 6. ಕುಸ್ತಿ 7. ತೋಟಗಾರಿಕೆ 8. ಈಜುವುದು 9. ಸ್ಕೌಟ್ಸ್ ಮತ್ತು ಗೈಡ್ಸ್ 10. ಎನ್.ಸಿ.ಸಿ. ಎನ್.ಎಸ್.ಎಸ್ ಇತ್ಯಾದಿ.

ಬಿ. ಸಾಹಿತ್ಯಿಕ ಚಟುವಟಿಕೆಗಳು

1. ಚರ್ಚಾಕೂಟಗಳು ಹಾಗೂ ವಿಚಾರ ಸಂಕಿರಣಗಳು 2. ಕಥೆ, ಕವನ, ಹಾಸ್ಯ ಚಟಾಕಿಗಳ ರಚನೆ 3. ಪ್ರಬಂಧ ರಚನೆ 4. ವೃತ್ತಪತ್ರಿಕೆ ಓದುವುದು 5. ಕಂಠಪಾಠ ಒಪ್ಪಿಸುವುದು 6. ಗ್ರಂಥಾಲಯ ಕೆಲಸ 7. ನಾಟಕಾಭಿನಯ 8. ಶಾಲಾಪತ್ರಿಕೆ - ಪ್ರಕಟಣೆ 9. ವಿಸ್ತರಣಾ ಉಪನ್ಯಾಸಗಳನ್ನು ಏರ್ಪಡಿಸುವುದು.

ಸಿ. ಸಾಂಸ್ಕೃತಿಕ ಚಟುವಟಿಕೆಗಳು

1. ಸಂಗೀತ 2. ಜನಪದ ಗೀತೆ 3. ಜನಪದ ನೃತ್ಯ 4. ಚಿತ್ರಕಲೆ ಹಾಗೂ ವರ್ಣ ಚಿತ್ರಕಲೆ 5. ಶಾಲೆಯ ಅಲಂಕಾರ 6. ಪ್ರದರ್ಶನಗಳ ವ್ಯವಸ್ಥೆ 7. ಶಿಲ್ಪಕಲೆ 8.ಮೋಜಿನ ವೇಷಗಳು 9. ಪುಷ್ಪ ಪ್ರದರ್ಶನ 10. ಶಾಲಾ ಬ್ಯಾಂಡ್.

ಡಿ. ಪೌರ ತರಬೇತಿ ಚಟುವಟಿಕೆಗಳು

1. ಗ್ರಾಮ ಪಂಚಾಯ್ತಿ, ಪುರಸಭೆ, ಕಛೇರಿ, ವಿಧಾನಸಭೆ, ನ್ಯಾಯಾಲಯ

ಮುಂತಾದವುಗಳಿಗೆ ಭೇಟಿ 2. ಸಾಮಾಜಿಕ, ಧಾರ್ಮಿಕ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ 3. ಸ್ವಯಂ ಆಡಳಿತ ವ್ಯವಸ್ಥೆ ಉದಾ: ಶಾಲಾ ವಿದ್ಯಾರ್ಥಿಮಂತ್ರಿಮಂಡಳ 4. ಅಣಕು ಸಂಪತ್ತು, ಅಣಕು ನ್ಯಾಯಾಲಯ ಇತ್ಯಾದಿ 5. ಶಾಲೆಯಲ್ಲಿ ಸಹಕಾರಿ ಬ್ಯಾಂಕ್, ಸಹಕಾರಿ ಸೊಸೈಟಿಗಳ ಸಂಘಟನೆ ಮತ್ತು ಉಳಿತಾಯ ಭಾವನೆ ಬೆಳೆಸುವುದಕ್ಕಾಗಿ ಚಿಕ್ಕಉಳಿತಾಯ ಕೌಂಟರ್ ನಡೆಸುವುದು 6. ಪೋಷಕರ ದಿನ, ಹಳೆಯ ವಿದ್ಯಾರ್ಥಿಗಳ ಸಂಘದ ದಿನ, ಮುಂತಾದ ಶಾಲಾ ಹಬ್ಬಗಳ ಆಚರಣೆ 7. ಪೌರ ತರಬೇತಿ ಶಿಬಿರಗಳು 8. ಭಾವೈಕ್ಯತಾ ಶಿಬಿರಗಳು (ರಾಷ್ಟ್ರೀಯ ಏಕತಾ ಶಿಬಿರಗಳು)

ಈ. ಹವ್ಯಾಸಕೇಂದ್ರಿತ ಚಟುವಟಿಕೆಗಳು

1. ಅಂಚೆ ಚೀಟಿಗಳ ಸಂಗ್ರಹ 2. ನಾಣ್ಯಗಳ ಸಂಗ್ರಹ 3. ಚಿತ್ರಗಳು, ಐತಿಹಾಸಿಕ ಸ್ಮಾರಕಗಳು, ಪಳೆಯುಳಿಕೆಗಳು, ಅಪೂರ್ವ ಕಲಾವಸ್ತುಗಳು ಹಾಗೂ ಇತರ ಆಸಕ್ತಿಯುತ ವಸ್ತುಗಳ ಸಂಗ್ರಹ 4. ಚಿತ್ರ ಮುಂತಾದವುಗಳನ್ನು ಕ್ರಮಬದ್ಧವಾಗಿ ಹಾಗೂ ಅರ್ಥವತ್ತಾಗಿ ಪುಸ್ತಕದಲ್ಲಿ ಅಂಟಿಸುವುದು. 5. ಛಾಯಾಗ್ರಹಣ, ಇತ್ಯಾದಿ.

ಎಫ್. ವೃತ್ತಿಚಟುವಟಿಕೆಗಳು

1. ನೂಲುವುದು ಮತ್ತು ನೇಯುವುದು 2. ಬಣ್ಣ ಹಾಕುವುದು ಮತ್ತು ಕಸೂತಿ 3. ಹೊಲಿಗೆ 4. ಪುಸ್ತಕ ಬೈಂಡಿಂಗ್ 5. ಮಣ್ಣಿನ ಮಾದರಿ ಮಾಡುವುದು. 6. ಆಟದ ಸಾಮಾನು ತಯಾರಿಕೆ 7. ಕಾರ್ಡ್‌ಬೋರ್ಡ್ ಕಾರ್ಯ 8. ಚರ್ಮದ ಕೆಲಸ 9. ಬುಟ್ಟಿ ಹೆಣೆಯುವುದು 10. ಲೋಹದ ಕೆಲಸ 11. ಮನೆತೋಟ ಮಾಡುವುದು 12. ಹೂದೋಟ ಬೆಳೆಸುವುದು ಮತ್ತು ಸಂರಕ್ಷಣೆ.

ಜಿ. ಸಮಾಜ ಕಲ್ಯಾಣ ಹಾಗೂ ಸಾಮುದಾಯಕ ಚಟುವಟಿಕೆಗಳು

1. ಸಾಮೂಹಿಕ ಪ್ರಾರ್ಥನೆ ಮತ್ತು ಪ್ರಾತಃಕಾಲದ ಸಭೆ 2. ಸ್ಕೌಟ್ಸ್ ಮತ್ತು ಗೈಡ್ಸ್ 3. ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. 4. ಸಮಾಜ ಸೇವೆ (ಶ್ರಮದಾನ ಇತ್ಯಾದಿ) 5. ಗ್ರಾಮ ಸಮೀಕ್ಷೆ 6. ಸಮುದಾಯ ಜೀವನ ಶಿಬಿರಗಳು.

ಹೆಚ್. ಶೈಕ್ಷಣಿಕ ಪ್ರವಾಸ ಚಟುವಟಿಕೆಗಳು

1. ವನಭೋಜನ ಅಥವಾ ಬಯಲು ಸಂತೋಷ ಕೂಟ 2. ಹೊರ ಸಂಚಾರ 3. ಭೌಗೋಳಿಕ ಮತ್ತು ಐತಿಹಾಸಿಕ ಮಹತ್ವದ ಸ್ಥಳಗಳಿಗೆ ಪ್ರವಾಸ 4. ವಸ್ತು ಸಂಗ್ರಹಾಲಯ, ವಸ್ತುಪ್ರದರ್ಶನ, ವಿಜ್ಞಾನ ಪ್ರದರ್ಶನ ಮುಂತಾದವುಗಳಿಗೆ ಭೇಟಿ 5. ಧಾರ್ಮಿಕ ಸ್ಥಳಗಳಿಗೆ ಭೇಟಿ.

ಐ. ವಿವಿಧೋದ್ದೇಶ ಚಟುವಟಿಕೆಗಳು ಅಥವಾ ಯೋಜನೆಗಳು

2. ಶಾಲೆಯ ಸ್ವಚ್ಛತೆ ಹಾಗೂ ಅಲಂಕಾರ 2. ಶಾಲೆಯಲ್ಲಿ ಆಸ್ಪತ್ರೆ ನಡೆಸುವುದು. 3. ಅಂಚೆ ಕಛೇರಿ, ಸಹಕಾರಿ ಅಂಗಡಿ, ರಾಷ್ಟ್ರೀಯ ಉಳಿತಾಯ ಮಳಿಗೆ, ಇತ್ಯಾದಿಗಳ ವ್ಯವಸ್ಥೆ.

ಮೇಲ್ಕಾಣಿಸಿದ ಎಲ್ಲ ಸಹಪಠ್ಯ ಚಟುವಟಿಕೆಗಳನ್ನು ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಂಘಟಿಸುವ ಸತತ ಪ್ರಯತ್ನ ನಡೆಸಲೇ ಬೇಕಾಗಿದೆ.

ಇಂದಿನ ಪರಿಸ್ಥಿತಿ

ಪ್ರಾಥಮಿಕ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಸಹಪಠ್ಯ ಚಟುವಟಿಕೆಗಳನ್ನು ಸಂಘಟಿಸಲು ವಿದ್ಯಾರ್ಥಿಸಂಘಗಳನ್ನು ರಚಿಸಲಾಗಿದೆ. ಪ್ರತಿಯೊಂದು ವಿಷಯ ಕಲಿಸುವ ಶಿಕ್ಷಕರು ತಮ್ಮ ವಿಷಯದಲ್ಲಿರುವ ಪಠ್ಯಕ್ರಮಕ್ಕೆ ಅನುಗುಣವಾಗಿ ಕಾರ್ಯಕ್ರಮವನ್ನು ರೂಪಿಸಿ ವಿದ್ಯಾರ್ಥಿಗಳಿಗೆ ವಿವಿಧ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಬೇಕಾಗಿದೆ. ಇದಲ್ಲದೆ ಪರಿಸರ ಶಿಕ್ಷಣ, ಸಾಕ್ಷರತಾ ಕಾರ್ಯಕ್ರಮ ಹಾಗೂ ಒಳ್ಳೆಯ ಹವ್ಯಾಸಗಳನ್ನು ಬೆಳೆಸುವ ಸಂಘಗಳನ್ನು ಶಿಕ್ಷಣಸಂಸ್ಥೆಗಳಲ್ಲಿ ವಿಶೇಷವಾಗಿ ರಚಿಸಿರುವುದು ಕಂಡುಬಂದಿದೆ. ಸಮುದಾಯದ ಅನೇಕ ಸಂಘಸಂಸ್ಥೆಗಳು ಎಲ್ಲ ವರ್ಗದ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದೆ.

ಪ್ರತಿಯೊಂದು ತರಗತಿಯ ವಿದ್ಯಾರ್ಥಿಗಳು ಕಲಿಯಲು ನಿಗದಿಪಡಿಸಿದ ಪಠ್ಯಕ್ರಮ ಬಹಳ ಹೆಚ್ಚಿಗೆ ಇರುವುದರಿಂದ ತರಗತಿಯ ಪಾಠಬೋಧನೆಗಾಗಿ ಶಿಕ್ಷಕರು ಹೆಚ್ಚಿನ ವೇಳೆಯನ್ನು ಮೀಸಲಿಡಬೇಕಾಗಿದೆ. ಹೀಗಾಗಿ ಪಠ್ಯೇತರ ಚಟುವಟಿಕೆಗಳಿಗೆಂದೇ ವಿವಿಧ ತರಗತಿಗಳ ವೇಳಾಪತ್ರಿಕೆಯಲ್ಲಿ ನಿರ್ದಿಷ್ಟ ವೇಳೆಯನ್ನು ಮುಂಚಿತವಾಗಿ ನಿರ್ಧರಿಸಲಾಗಿಲ್ಲ. ಕೆಲವೊಂದು ಸಾರಿ ಇಂತಹ ಸಹಪಠ್ಯ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಿದ್ದರೂ ಸಹ ಆ ವೇಳೆಗೆ ಅನುಗುಣವಾಗಿ ಚಟುವಟಿಕೆಗಳನ್ನು ಸಂಘಟಿಸಲು ಸಾಧ್ಯವಾಗುತ್ತಿಲ್ಲ. ಅನೇಕ ಶಿಕ್ಷಕರು ಇಂತಹ ಕಾರ್ಯಕ್ರಮಗಳನ್ನು ಸಂಘಟಿಸಲು ಉತ್ಸುಕರಿದ್ದರೂ ಸಹ ಕಾರ್ಯಕ್ರಮಗಳ ಸಂಘಟನೆಗೆ ಹಣದ ಕೊರತೆ ಇದ್ದದ್ದು ಕಂಡುಬಂದಿದೆ. 'ಇಂದಿನ ವಿದ್ಯಾರ್ಥಿಗಳು ನಾಳಿನ ನಾಗರೀಕರು' ಎಂಬ ಮಾತನ್ನು ಬರಿ ಬಾಯಿಯಲ್ಲಿ ಹೇಳಲಾಗುತ್ತಿದೆಯೇ ಹೊರತು ವಿದ್ಯಾರ್ಥಿಗಳಿಗೆ ಒಳ್ಳೆಯ ಅವಕಾಶಗಳನ್ನು ಒದಗಿಸಿಕೊಡುವ ಪ್ರಯತ್ನ ನಡೆಯದಿರುವುದು ಕಂಡು ಬರುತ್ತದೆ.

ಸಮುದಾಯದ ಅನೇಕ ಸೇವಾಸಂಸ್ಥೆಗಳು ಅನೇಕ ಕಾರ್ಯಕ್ರಮಗಳನ್ನು ಸಂಘಟಿಸಿದರೂ ಸಹ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅವುಗಳಲ್ಲಿ ಭಾಗವಹಿಸುವ ಅವಕಾಶ ಸಿಗುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಬಹಳ ಪ್ರಮುಖವಾಗಿ ಎಲ್ಲಾ ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬಂದಿರುವ `ಪಂಚಾಯತ್ ರಾಜ್ಯ ವ್ಯವಸ್ಥೆ'ಯಲ್ಲಿ ಶಿಕ್ಷಣ ಸಂಸ್ಥೆಗಳು ಸಹಪಠ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ್ದು ಕಂಡು ಬಂದರೂ ಸಹ ಅವುಗಳನ್ನು ಸಂಘಟಿಸುವಲ್ಲಿ ಅನೇಕ ಅಡ್ಡಿಆತಂಕಗಳು ಕಂಡು ಬರುತ್ತವೆ. ಹೀಗಾಗಿ ಪಠ್ಯವಸ್ತುವಿನಷ್ಟೆ ಪ್ರಾಮುಖ್ಯತೆ ಪಡೆದಿರುವ ಸಹಪಠ್ಯ ಚಟುವಟಿಕೆಗಳನ್ನು ಸಂಘಟಿಸಲು ಮತ್ತು ಅದರ ಅನುಭವಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬ ವಿಚಾರ ನಮಗೆ ತಿಳಿದು ಬರುತ್ತದೆ.

